ಅಖಂಡ ಕರ್ನಾಟಕದ ಹೆಜ್ಜೆಗಳು

★ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು–೫೬೦೦೧೮

BVP-1211-27/2/17
1191- (5)

ಅಖಂಡ ಕರ್ನಾಟಕದ ಹೆಜ್ಜೆಗಳು

ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

AKHANDA KARNATAKADA HEJJEGALU
by : **Dr. Krishna kolhara kulakarni**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vi+225 Price : Rs. 70=00 : **2006**

ಪ್ರಥಮ ಮುದ್ರಣ	:	೨೦೦೬
ಪ್ರತಿಗಳು	:	೧೦೦೦
ಬೆಲೆ	:	ಎಪ್ಪತ್ತು ರೂಪಾಯಿಗಳು

ಮುಖಪುಟ ವಿನ್ಯಾಸ: ಪುಂಡಲೀಕ ಕಲ್ಲಿಗನೂರು

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

"ಕಾವೇರಿಯಿಂದಮಾ ಗೋದಾವರಿವರೆಗಮಿರ್ದ" ಎಂದು ಕವಿ ಹೇಳುವ ರೀತಿಯಲ್ಲಿ ಕನ್ನಡ ಭಾಷಿಕರ ನಾಡು ಒಂದು ಕಾಲಕ್ಕೆ ಏಕಭಾಷಾ ಭೌಗೋಲಿಕ ಪ್ರದೇಶವಾಗಿ ಇತ್ತೋ ಏನೋ. ಆದರೆ ಇತಿಹಾಸದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಾಜಕೀಯ ಕಾರಣಗಳಿಂದಾಗಿ ನಮ್ಮ ನಾಡು ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿ ಹೋಗಿದ್ದಂತೂ ವಾಸ್ತವ. ವರ್ತಮಾನದಲ್ಲಿ ಒಂದು ನೆಲೆ ಇಲ್ಲದ ಭಾಷಿಕರಿಗೆ ಅಸ್ಮಿತೆಯ ಹುಡುಕಾಟ ಅನಿವಾರ್ಯವಾಗುತ್ತದೆ. ಈ ಹುಡುಕಾಟದ ಫಲಿತಾಂಶವೇ ಕರ್ನಾಟಕ ಏಕೀಕರಣ ಚಳುವಳಿ.

ಈ ಚಳುವಳಿ ನಡೆದು ಬಂದ ಹಾದಿಯ ಹೆಜ್ಜೆ ಗುರುತುಗಳನ್ನು ಬಿಡಿ ಬಿಡಿ ಲೇಖನಗಳ ಮೂಲಕ ದಾಖಲಿಸುವ ಪ್ರಯತ್ನ ಮಾಡಿದ್ದಾರೆ ಈ ಕೃತಿಯ ಲೇಖಕರು. 'ಅಖಂಡ' ಕರ್ನಾಟಕ ಎಂಬುದು ಇನ್ನೂ ಕನಸಾಗಿಯೇ ಉಳಿದಿದೆ. ಏಕೆಂದರೆ ನ್ಯಾಯಬದ್ಧವಾಗಿ ಕರ್ನಾಟಕಕ್ಕೆ ಸೇರಬೇಕಾದ ಅಚ್ಚಗನ್ನಡ ಪ್ರದೇಶಗಳು ಇನ್ನೂ ಹೊರಗೆ ಉಳಿದಿವೆ.

ಡಿಸೆಂಬರ್ ೨೦೦೬ರಲ್ಲಿ ಶಿವಮೊಗ್ಗದಲ್ಲಿ ನಡೆಯಲಿರುವ ೭೩ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಈ ಪುಸ್ತಕ ಪ್ರಕಟವಾಗುತ್ತಿದೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ ಹೊರತಂದಿರುವ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಚಂದ್ರಶೇಖರ ಪಾಟೀಲ (ಚಂಪಾ)

ಅಧ್ಯಕ್ಷರು

ಕೃತಜ್ಞತೆಗಳು

ಸುಮಾರು ೨೦ ತಿಂಗಳಷ್ಟು ಕಾಲ, ೭೮ ವಾರ, ಅಂಕಣಗಳನ್ನು ಪ್ರಕಟಿಸಿದ ಉಷಾ-ಕಿರಣ ದಿನಪತ್ರಿಕೆಯ ಸಂಪಾದಕರಾದ ಶ್ರೀ ವೆಂಕಟನಾರಾಯಣ ಮತ್ತು ಸಿಬ್ಬಂದಿಗೆ,

ಅಂಕಣ ಪ್ರಕಟವಾಗುತ್ತಿದ್ದಂತೆ ಅದನ್ನು ಓದುತ್ತ, ತಾವೆ ಪುಸ್ತಕ ರೂಪದಲ್ಲಿ ಪ್ರಕಟಿಸುವುದಾಗಿ ಹೇಳಿ, ಪ್ರಕಟಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಚಂದ್ರಶೇಖರ ಪಾಟೀಲ ಅವರಿಗೆ,

ನಾಡಿನ ನಾಲ್ಕು ದಿಕ್ಕುಗಳಿಂದಲೂ ಪತ್ರ-ಫೋನುಗಳ ಮೂಲಕ ಮೆಚ್ಚುಗೆ ಸೂಚಿಸಿದ ಸ್ನೇಹಿತರಿಗೆ, ಓದುಗರಿಗೆ,

ಹಲವು ಸಂದರ್ಭಗಳಲ್ಲಿ ಸ್ವಯಂ-ಸ್ಫೂರ್ತಿಯಿಂದ ಮತ್ತಷ್ಟು ವಿವರಗಳನ್ನು ನೀಡಿದ ಅನೇಕರಿಗೆ

ಕೃತಜ್ಞತೆಗಳು

ಮಹೀಪತಿ
೬೩೩ ಕೀರ್ತಿನಗರ
ಬಿಜಾಪುರ-೫೮೬ ೧೦೧

ಕೃಷ್ಣ ಕೊಲ್ಹಾರ ಕುಲಕರ್ಣಿ

ಪರಿವಿಡಿ

ಅಧ್ಯಾಯ		ಪುಟ
೧	ಕಳೆದುಹೋದ ಕನ್ನಡ	೧
೨	ಕನ್ನಡಕ್ಕಾಗಿ ಹುಡುಕಾಟ	೬
೩	ಅಖಂಡ ಸೀಮೆಗಾಗಿ 'ಕನ್ನಡ ಸಮಾಚಾರ'	೯
೪	ಕನ್ನಡಕ್ಕೆ ಜೀವ ತುಂಬಿದವರು	೧೧
೫	ಕಳಚಿದ ಮರಾಠಿ ಮೋಹ	೧೩
೬	ಕನ್ನಡದಲ್ಲಿ ಪಠ್ಯಪುಸ್ತಕಗಳು	೧೬
೭	ಕನ್ನಡ ಸಾಹಿತ್ಯ ಚರಿತ್ರೆಯ ಪುನರುಜ್ಜೀವನ	೧೯
೮	ಕನ್ನಡ ನಾಡಿನ ಚರಿತ್ರೆಯ ಹೊಳಪುಗಳು	೨೨
೯	ಕರ್ನಾಟಕತ್ವ ಬೀಜ ಬಿತ್ತಿದರು	೨೬
೧೦	ಕನ್ನಡ ನೀಲಾಂಜನಗಳು, ಆರತಿ ತಟ್ಟೆ	೩೦
೧೧	ಕನ್ನಡಕ್ಕೊಂದು ಗುಡಿ	೩೪
೧೨	ಮುಳುಗಿದ ಕನ್ನಡದ ಉಜ್ವಲ ಸೂರ್ಯ !	೪೮
೧೩	ಏಕೀಕರಣದ ಮೊದಲ ಮೆಟ್ಟಿಲು	೫೯
೧೪	ಕನ್ನಡಿಗರನ್ನು ಬೆಸೆದ ಪತ್ರಿಕೆಗಳು	೭೬
೧೫	ನಾಟಕಗಳು- ಕೀರ್ತನೆಗಳು	೯೧
೧೬	ಮುಂಬಯಿ ಶಾಸನಸಭೆಯಲ್ಲಿ ಕನ್ನಡ ಧ್ವನಿ	೧೦೧
೧೭	ಕನ್ನಡಿಗರಲ್ಲಿ ಸ್ವಾಭಿಮಾನ ಜಾಗ್ರತೆ	೧೧೧
೧೮	ಮರಾಠಿಗರಿಗೆ ಕನ್ನಡದ ಚರಿತ್ರೆ	೧೨೮
೧೯	ಉರ್ದು ಶಾಲೆಗಳಲ್ಲಿ ಕನ್ನಡ ಕಲಿಕೆ	೧೪೩
೨೦	ಹೈದರಾಬಾದಿನಲ್ಲಿ ಕನ್ನಡ ಪತಾಕೆ	೧೫೨
೨೧	ಸಂಘ ಸಂಸ್ಥೆಗಳಿಂದ ಕನ್ನಡ ಸಂಘಟನೆ	೧೬೬
೨೨	ನಿಜಾಮನ ರಾಜ್ಯದಲ್ಲಿ ಕನ್ನಡ ಜಾಗೃತಿ	೧೭೪
೨೩	ಬಳ್ಳಾರಿಯಲ್ಲಿ ಕನ್ನಡ ಪರ ಹೋರಾಟ	೧೮೧

೨೪	ಏಕೀಕರಣಕ್ಕೆ ತುಳು - ಕೊಂಕಣಿಗಳ ಉತ್ಸಾಹ	[illegible]
೨೫	ಕನ್ನಡದ ಸಪ್ತರ್ಷಿಗಳು	೧೮೭
೨೬	ಬಾಗಲಕೋಟೆಯ ಜಯ-ವಿಜಯರು	೧೯೬
೨೭	ನಾಡು ಕಟ್ಟಿದ ಕವಿಗಳು	೨೦೮
೨೮	ಕನಸಿನ ಭವ್ಯ ಕರ್ನಾಟಕ	೨೧೨
	ಆಕರ ಗ್ರಂಥಗಳು / ಲೇಖನಗಳು	೨೨೪

ಅಧ್ಯಾಯ -೧

• ಕಳೆದುಹೋದ ಕನ್ನಡ

ಹೊಸದಾಗಿ ಕಟ್ಟುವುದು ಸುಲಭ. ಆದರೆ ಕಳೆದದ್ದನ್ನು ಹುಡುಕಿ ಕಟ್ಟುವುದು ಕಷ್ಟದ ಕೆಲಸ. ಕನ್ನಡ - ಕರ್ನಾಟಕದ ವಿಷಯದಲ್ಲಿ ಕಳೆದದ್ದನ್ನು ಹುಡುಕ ಬೇಕಾಯಿತು. ಅನಂತರ ಕಟ್ಟುವ ಕೆಲಸವನ್ನು ಪ್ರಾರಂಭಿಸಬೇಕಾಯಿತು. ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ಮಾಡಿದ ಚಳುವಳಿ ಸತ್ಯಾಗ್ರಹಗಳನ್ನೆ ಅಖಂಡ ಕರ್ನಾಟಕವನ್ನು ಪಡೆಯಲು ಮಾಡಬೇಕಾಯಿತು. ಹಾಗೆ ಅಖಂಡ ಕರ್ನಾಟಕವನ್ನು ಪಡೆದುಕೊಳ್ಳುವಾಗ ಕನ್ನಡಿಗರು, ಕನ್ನಡ ಪ್ರದೇಶವೆಂಬುದು ವಿಶಾಲ ಮೈಸೂರು ರಾಜ್ಯದ ಹೆಸರಿನಲ್ಲಿ ನಿರ್ಮಾಣವಾಗಿ ಐವತ್ತು ವರುಷಗಳಾದುವು. ಕರ್ನಾಟಕದ ರಾಜ್ಯೋದಯದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಹೊಸದಾಗಿ ಕಟ್ಟಿದ ಕರ್ನಾಟಕದ ಕಥೆಯನ್ನು ಕೇಳಬೇಕು. ಅದಕ್ಕಾಗಿ ಹೋರಾಡಿದವರನ್ನು ಸ್ಮರಿಸಬೇಕು.

ವಿಜಯನಗರ ಪತನಾನಂತರ (ಕ್ರಿ.ಶ. ೧೫೬೫) ಕನ್ನಡಿಗರು ಚದುರಿ ಚೆಲ್ಲಿ ಹೋದರೂ, ಕನ್ನಡ ಭಾಷೆಗೆ ಅಂಥ ಹೇಳಿಕೊಳ್ಳುವಂಥ ಕುತ್ತು ಬಂದಿರಲಿಲ್ಲ. ಬಹು ಭಾಗ ಬಿಜಾಪುರದ ಆದಿಲಶಾಹಿಗಳ ಅಧೀನವಾಗಿತ್ತು. ಅಂದಿನ ಕರ್ನಾಟಕದಲ್ಲಿ ಭಾಷಾತ್ಮಕ ಪರಾಧೀನತೆಯನ್ನು ಅನುಭವಿಸುವ ಸಂದರ್ಭಗಳು ಬರಲಿಲ್ಲ. ಚಾಂದಬೀಬಿ, ಎರಡನೆಯ ಇಬ್ರಾಹಿಮ ಆದಿಲಶಹರು ರಾಯಭಾರತ್ವದ ಸಂಭಾಷಣೆಗೆ ಬಹುತೇಕ ಕನ್ನಡವನ್ನೆ ಉಪಯೋಗಿಸಿದ ಹಾಗೂ ಆ ಕಾಲದಲ್ಲಿ ರಾಜಧಾನಿ ಬಿಜಾಪುರಕ್ಕೆ ಬರುತ್ತಿದ್ದ ಪೋರ್ತುಗೀಜ ರಾಯಭಾರಿಗಳು ಕನ್ನಡವನ್ನೆ ಕಲಿಯುತ್ತಿದ್ದರೆಂಬ ಐತಿಹಾಸಿಕ ಉಲ್ಲೇಖಗಳು ದೊರೆಯುತ್ತವೆ. ಆಡಳಿತದ ಅನುಕೂಲಕ್ಕೆ ಕನ್ನಡ ಪರ್ಶಿಯನ್ ದ್ವಿಭಾಷಾ ಫರ್ಮಾನುಗಳನ್ನು ಹೊರಡಿಸಿದ್ದನ್ನೂ ಕಾಣುತ್ತೇವೆ.

ಆದರೆ ಮುಂದೆ ೧೭-೧೮ನೆಯ ಶತಮಾನಗಳಲ್ಲಿ ಕರ್ನಾಟಕದ ಬಹು ಭಾಗವು ಪೇಶ್ವೆಗಳ ಅಧೀನತೆಗೆ ಸಿಕ್ಕಿತು. ಈಗ ಕನ್ನಡ ಭಾಷೆಯು ಮರಾಠಿ ರಾಜಭಾಷೆಯ ಹಿನ್ನೆಲೆಯಲ್ಲಿ ಮೂದಲಿಕೆಗೆ ಕಾರಣವಾಯಿತು. ವಿಶೇಷವಾಗಿ ಇಂದು ಉತ್ತರ ಕರ್ನಾಟಕ ಎಂದು ಕರೆಯಿಸಿಕೊಳ್ಳುವ ಪ್ರದೇಶದ ಮರ್ಮಸ್ಥಾನಕ್ಕೆಯೆ

ಬಲವಾದ ಹೊಡೆತ ಬಿತ್ತು. ಆದರಿಂದಾಗಿ ಆ ಪ್ರದೇಶದ ಸಾಂಸ್ಕೃತಿಕ ಅಸ್ತಿಭಾರವು ಬಿರುಕುಗೊಂಡು ಸಡಿಲವಾಯಿತು. ಕಳೆದ ಎರಡು ಎರಡೂವರೆ ಶತಮಾನಗಳಿಂದ ಅದರ ರಿಪೇರಿ ಕೆಲಸ ನಡೆದಿದ್ದರೂ ಪೂರ್ತಿ ಗಟ್ಟಿಯಾಗಿ ಕಟ್ಟಲು ಸಾಧ್ಯವಾಗಿಲ್ಲ. ಈ ಸಂದರ್ಭದಲ್ಲಿ ಕಳೆದುಕೊಂಡದ್ದು ಅಧಿಕವಾಗಿದೆ. ಪೇಶ್ವೆಗಳಿಂದ ಪ್ರಾರಂಭವಾದ ಕರ್ನಾಟಕದ ಮೇಲಿನ ಸಾಂಸ್ಕೃತಿಕ ದಾಳಿ, ಬ್ರಿಟಿಷರ ಕೈಚಳಕದಿಂದ ಅದು ಇನ್ನಷ್ಟು ಅವನತಿಗೆ ತಲುಪಲು ಕಾರಣವಾಯಿತು.

ಟಿಪ್ಪು ಸುಲ್ತಾನನ ಮರಣಾನಂತರ, ಬ್ರಿಟಿಷರು ಮೈಸೂರು ಸಂಸ್ಥಾನದ ಮೇಲಿನ ತಮ್ಮ ಸೇಡನ್ನು ಒಂದು ತೆರನಾಗಿ ತೀರಿಸಿಕೊಂಡರು. ಆದರೆ ಕನ್ನಡಿಗರ ಮೇಲಿನ ಅವರ ಸಿಟ್ಟು ಪೂರ್ತಿಯಾಗಿ ಹೋಗಿರಲಿಲ್ಲ. ಆ ಸೇಡನ್ನು ಉತ್ತರ ಕರ್ನಾಟಕದ ಮೇಲೆ . ಅಂತೆಯೇ ೧೯ನೆಯ ಶತಮಾನದ ಮೊದಲರ್ಧದಲ್ಲಿ ಬ್ರಿಟಿಷರ ವಿರುದ್ಧ ಎದ್ದ ಬಂಡಾಯಗಳು ಇಡೀ ಭಾರತದಲ್ಲೇ ಗಮನಿಸಿದರೆ, ಉತ್ತರ ಕರ್ನಾಟಕದಲ್ಲಿ ಅಧಿಕವಾಗಿದ್ದುದು ಎದ್ದು ಕಾಣುತ್ತದೆ. ಕ್ರಿ.ಶ. ೧೮೩೦ರಲ್ಲಿ ಕನ್ನಡ ಭಾಷೆಯು ಧಾರವಾಡ ಪ್ರಾಂತವನ್ನು ಮದ್ರಾಸ ಅಧಿಪತ್ಯಕ್ಕೆ ಸೇರಿಸಬೇಕು ಎಂಬ ಯೋಜನೆಯೊಂದು ಸಿದ್ಧವಾಗಿತ್ತು. ಅದನ್ನು ಸ್ಥಳೀಯ ಅಧಿಕಾರಿಗಳು ವಿರೋಧಿಸಿ 'ಕನ್ನಡ ಜನತೆ ಕೂಡಿ ಇದ್ದರೆ ಕೇಡು' ಎಂಬರ್ಥದಿಂದ ಮುಂಬಯಿ ಪ್ರಾಂತ್ಯಕ್ಕೆ ಸೇರಿಸಿದರು. ಮದ್ರಾಸಿಗೆ ಸೇರಿದ್ದರೆ ಸಾಂಸ್ಕೃತಿಕವಾಗಿ ಒಂದಾಗುತ್ತಿದ್ದ ಜನ ಮತ್ತು ಭಾಷೆ ಈಗ ಮುಂಬಯಿಗೆ ಸೇರಿದ್ದರಿಂದ ಕನ್ನಡ ಜನ ಮತ್ತು ಕನ್ನಡ ಭಾಷೆಯ ಮೇಲೆ ಏಳಲಾಗದ ಹೊಡೆತ ಬಿದ್ದಿತು. ಅಂದು ಛಿದ್ರಗೊಂಡ ಕನ್ನಡಿಗರು ಭಾವನಾತ್ಮಕವಾಗಿ ಇಂದಿಗೂ ಒಂದಾಗಲು ಸಾಧ್ಯವಾಗಿಲ್ಲ ಕೂಡಿ ಇರಲು ಕಲಿತರೆ ಇಂದಿಗೂ ಕನ್ನಡಿಗರನ್ನು ಮೀರಿಸುವವರು ಯಾರೂ ಇಲ್ಲ ಎಂಬುದನ್ನು ಬಾದಾಮಿಯ ಚಾಲುಕ್ಯರು ೬-೭ನೆಯ ಶತಮಾನಗಳಷ್ಟು ಹಿಂದೆ ಇಡೀ ವಿಶ್ವಕ್ಕೆಯೆ ತೋರಿಸಿಕೊಟ್ಟಿದ್ದಾರೆ. ಪ್ರತ್ಯೇಕ ರಾಜ್ಯಕ್ಕೆ ಬಡಿದಾಡುವವರು ಇದನ್ನು ಗಮನಿಸಬೇಕು.

ಮುಂಬಯಿ ರಾಜ್ಯದಲ್ಲಿ ಸೇರಿದ ಕರ್ನಾಟಕದಲ್ಲಿ ಕನ್ನಡಿಗರ ಮಲೆ ಮರಾಠಿಗರು ಅತ್ತೆಯಾಗಿ ಉರಿದರು. ಶತ-ಶತಮಾನಗಳಿಂದ ಸಾಮ್ರಾಜ್ಯಗಳನ್ನು ಕಟ್ಟಿ, ಚಕ್ರವರ್ತಿಯಾಗಿ ಮೆರೆದ ಕನ್ನಡಿಗರು ಇನ್ನೊಬ್ಬರ ತೊತ್ತಾಗಿ ಉಳಿಯಬೇಕಾಯಿತು. ಈ ಸಂದರ್ಭದಲ್ಲಿ ಬಲವಾದ ಹೊಡೆತ ಬಿದ್ದುದು ಕನ್ನಡ ಭಾಷೆಗೆ ಎಂಬುದನ್ನು ಮರೆಯುವಂತಿಲ್ಲ. ಭಾಷಾ ಪರಾಧೀನತೆ ಸಾಂಸ್ಕೃತಿಕ ಸಾವಿಗೆ ಮೂಲವಾಯಿತು. ಕನ್ನಡದ ಅಧಃಪತನ ಪೂರ್ತಿಗೊಂಡು ಅದು ತೊತ್ತಿಗಿಂತಲೂ ಕಡೆಯಾಯಿತು. ಅದು ಮತ್ತೆ ತಲೆ ಎತ್ತಬಾರದು ಎಂಬಷ್ಟರ ಮಟ್ಟಿಗೆ ಮರಾಠಿಗರು ಹವಣಿಸಿದರು. ಅವರು ತೋರಿದ ಆಮಿಷಕ್ಕೆ ಸಹಜವಾಗಿ ಬಲಿಯಾದ ಕನ್ನಡದ ವಿದ್ಯಾವಂತ ಸಮಾಜದವರು ಮರಾಠಿಗೆ ಮಾರುಹೋದರು. ಸಾವಿರಾರು ವರುಷಗಳಿಂದ ಅಚ್ಚ ಕನ್ನಡದ್ದೇ ಆಗಿದ್ದ ಅನೇಕಾನೇಕ ಮನೆತನಗಳು ಗುರುತಿಸಲೂ ಕೂಡ ಅಸಾಧ್ಯವಾಗುವ ರೀತಿಯಲ್ಲಿ ಮರಾಠಿಮಯವಾಗಿ ಬಿಟ್ಟವು !

ಹೀಗೆ ಭಾಷೆಗೆ ಸಂಚಕಾರ ಬಂದದ್ದರಿಂದ ಇಲ್ಲಿಯ ಜನತೆ ಒಂದು ಶತಮಾನಕ್ಕಿಂತ ಅಧಿಕ ಕಾಲ ಸ್ವ-ಪ್ರಜ್ಞಾಹೀನವಾಗಿತ್ತು. ಕೋರ್ಟು ಕಚೇರಿಗಳಲ್ಲಿ ವಿದ್ವತ್ ಪಂಡಿತರ ಸಭೆ ಸಮಾರಂಭಗಳಲ್ಲಿ ಕನ್ನಡ ತಿರಸ್ಕೃತವಾಗಿತ್ತು. ಕೆಲಮಟ್ಟಿಗೆ ಬಹಿಷ್ಕೃತವೂ ಆಗಿತ್ತು. ೧೮೨೫-೫೦ರ ಮಧ್ಯದ ಕಾಲದಲ್ಲಿ ಧಾರವಾಡ ಪ್ರಾಂತದಲ್ಲಿ ೧೧೬ ಕನ್ನಡ ಶಾಲೆಗಳಿದ್ದರೆ, ೧೪೬ ಮರಾಠಿ ಶಾಲೆಗಳಿದ್ದುವು. ೧೮೬೦ರಲ್ಲಿ ಧಾರವಾಡ ಪ್ರಾಂತ್ಯದಲ್ಲಿ ವಿದ್ಯಾಧಿಕಾರಿಯಾಗಿದ್ದ ವಿಲಿಯಮ್ ಅಲೆನ್ ರಸೆಲ್‌ನು ತನ್ನ ವಿಭಾಗದಲ್ಲಿ ಒಂದೂ ಸರಕಾರಿ ಕನ್ನಡ ಶಾಲೆಗಳಿಲ್ಲ ಎಂದು ವರದಿ ಮಾಡಿದ್ದನು. ಅಂದರೆ ಸರಕಾರಿ ಶಾಲೆಗಳೆಲ್ಲ ಮರಾಠಿ ಶಾಲೆಗಳಾಗಿದ್ದುವು. ಇದ್ದ ಬಿದ್ದ ಕನ್ನಡ ಶಾಲೆಗಳು ಖಾಸಗೀ ಅಯ್ಯನವರ ಶಾಲೆಗಳಾಗಿದ್ದವು. ಹೀಗಾಗಿ ಅಚ್ಚಕನ್ನಡದ ಅಭಿಮಾನವಿದ್ದ ಎಷ್ಟೋ ಮನೆತನಗಳು ಕೂಡಾ ತಮ್ಮ ಮಕ್ಕಳನ್ನು ಮರಾಠಿ ಶಾಲೆಗೆ ಕಳುಹಿಸುತ್ತಿದ್ದವು. ಹೆಣ್ಣು ಹುಡುಗಿಯರಂತೂ ವಿದ್ಯಾವತಿಯರೆನಿಸಿಕೊಳ್ಳಲು ಮರಾಠಿಯನ್ನು ಕಲಿಯಬೇಕಾಗುತ್ತಿತ್ತು. ಇಂಥ ಗಾಢ ಅಂಧಃಕಾರದಲ್ಲಿ ಕನ್ನಡವನ್ನು ದೀಪ ಹಚ್ಚಿಕೊಂಡು ಹುಡುಕಬೇಕಾಯಿತು.

೧೭೯೯ರಲ್ಲಿ ಮೈಸೂರು, ೧೮೧೮ರಲ್ಲಿ ಉತ್ತರ ಕರ್ನಾಟಕ ಮತ್ತು ೧೮೩೪ರಲ್ಲಿ ಕೊಡಗನ್ನು ಗೆದ್ದ ಬ್ರಿಟಿಷರ ಆಡಳಿತ ಕಾಲದಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಜನರ ಪ್ರದೇಶಗಳು ೨೦ ಆಡಳಿತಗಳಲ್ಲಿ ಹರಿದು ಹಂಚಿ ಹೋಗಿದ್ದವು. ಇವುಗಳಲ್ಲಿ ಸವಣೂರು, ಜಮಖಂಡಿ, ಮುಧೋಳ, ಜತ್ತ, ಔಂಧ, ಕುರಂಧವಾಡ, ನರಗುಂದ, ಗಜೇಂದ್ರಗಡ, ರಾಮದುರ್ಗದಂಥ ಚಿಕ್ಕ ಚಿಕ್ಕ ಸಂಸ್ಥಾನಗಳು ಸೇರಿದ್ದವು. ಸವಣೂರಿನಲ್ಲಿ ನವಾಬರಿದ್ದರೆ, ಮಂಗಳೂರು ಜಿಲ್ಲೆಗಳು ಮದ್ರಾಸ ಪ್ರಾಂತ್ಯಕ್ಕೆ ಸೇರಿದ್ದವು.

ಉತ್ತರ ಕರ್ನಾಟಕ ಎನಿಸಿದ ಇಂದಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳು ಮುಂಬಯಿ ಪ್ರಾಂತದಲ್ಲಿದ್ದವು. ಜೊತೆಗೆ ಇಂದಿನ ಕರ್ನಾಟಕದ ಐದರಲ್ಲಿಯ ಒಂದು ಭಾಗದಷ್ಟಿದ್ದ ಬೀದರ, ಕಲುಬುರ್ಗಿ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದಿನ ಅಸಫಜಾಹಿ ಮನೆತನದ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದವು. ಅಲ್ಲಿ ಉರ್ದು ಆಡಳಿತ ಭಾಷೆಯಾಗಿತ್ತು. ಜೊತೆಗೆ ಕಲಬುರ್ಗಿ ಬೀದರಗಳಲ್ಲಿ ಮರಾಠಿ ಮೆರೆಯುತ್ತಿತ್ತು. ಮೈಸೂರು ರಾಜ್ಯ ಬಿಟ್ಟರೆ, ಮೂರರಲ್ಲಿಯ ಎರಡಕ್ಕಿಂತ ಅಧಿಕ ಕನ್ನಡಿಗರು ಮರಾಠಿ ಉರ್ದು ತೆಲಗು ಮತ್ತು ತಮಿಳು ಮಲೆಯಾಳಿ ಭಾಷೆಗಳನ್ನು ಸುಮಾರು ಮೂರು ಶತಮಾನಗಳಷ್ಟು ಕಾಲ ಕಲಿಯಬೇಕಾಯಿತು. ಜೊತೆಗೆ ಆ ಭಾಷೆಗಳ ಜನರ ಸಂಸ್ಕೃತಿಗೆ ಹೊಂದಿಕೊಳ್ಳಬೇಕಾಯಿತು. ಮುಂಬಯಿ ಪ್ರಾಂತ್ಯದ ಕನ್ನಡಿಗರು ಕಚ್ಚೆ ಸೀರೆಯನುಟ್ಟು ತುಕಾರಾಮನ ಅಭಂಗಗಳಿಗೆ ತಾಳ ಹಾಕಿದರೆ,

ಹೈದರಾಬಾದಿನ ಕನ್ನಡಿಗರು ಗಾಲಿಬನ ಶಾಯರಿ - ಗಜಲುಗಳನ್ನು ಗುಣುಗುತ್ತ ಶೇರವಾನಿಯನ್ನು ತೊಟ್ಟರು. ಬಳ್ಳಾರಿಯ ಜನ ನನ್ನಯ್ಯ - ವೇಮನರ ಕಾವ್ಯ ಪದ್ಯಗಳನ್ನು ಓದಿದರು.

ಮುಂಬಯಿ ಕರ್ನಾಟಕದ ಜನರು ಹೈಸ್ಕೂಲು- ಕಾಲೇಜು ಶಿಕ್ಷಣಕ್ಕೆ ಪುಣೆ - ಮುಂಬಯಿಗಳಿಗೆ ಹೋಗಬೇಕಾಗುತ್ತಿತ್ತು. ಅಲ್ಲಿ ಹೋಗಿ ಕಲಿಯುವುದು ಮರಾಠಿಯನ್ನು. ಅದರಂತೆ ಬಳ್ಳಾರಿ-ಮಂಗಳೂರು ಜನರು ಮದ್ರಾಸಕ್ಕೆ ಹೋಗಿ ಕಲಿತರೆ, ನಿಜಾಮ ಕನ್ನಡಿಗರು ಹೈದರಾಬಾದಿಗೆ ಹೋಗುತ್ತಿದ್ದರು. ಅಲ್ಲಿ ಇಂಗ್ಲಿಷಿನ ಜೊತೆಗೆ ತಮಿಳು, ತೆಲಗು, ಉರ್ದುಗಳನ್ನು ಕಲಿಯುತ್ತಿದ್ದರು. ಕನ್ನಡವು ಮೇಲು ವರ್ಗದ ಅಡುಗೆಮನೆಯಲ್ಲಿ, ಕಲಿಯಲಾರದ ಕೆಳವರ್ಗದ ಜನರ ಸಂಪರ್ಕ ಭಾಷೆಯಾಗಿ ಜೀವ ಹಿಡಿದುಕೊಂಡಿತ್ತು.

ಪುಣೆಯಲ್ಲಿ ಕಾಲೇಜು ಪ್ರಾರಂಭವಾದ ೮೦ ವರ್ಷಗಳವರೆಗೆ ಉತ್ತರ ಕರ್ನಾಟಕದಲ್ಲಿ ಒಂದೇ ಒಂದು ಕಾಲೇಜು ಇರಲಿಲ್ಲ. ಹೀಗಾಗಿ ಕಳೆದ ಶತಮಾನದ ಮೊದಲೆರಡು ದಶಕಗಳವರೆಗೆ ಇಲ್ಲಿಯ ಜನರಿಗೆ ಉಚ್ಚ ಶಿಕ್ಷಣವನ್ನು ಪಡೆಯುವ ಆಸ್ಪದವೇ ಇರಲಿಲ್ಲ. ಸಾವಿರಾರು ವರುಷಗಳಿಂದ ಸುಸಂಸ್ಕೃತವಾದ ಸಾಹಿತ್ಯ ಕಲೆಗಳಿಂದ ಸಂಪದ್ಭರಿತವಾದ ಕರ್ನಾಟಕದ ಈ ಭಾಗವು 'ದಕ್ಷಿಣ ಮಹಾರಾಷ್ಟ್ರ' ಎನಿಸಿಕೊಂಡಿತು. ಕಲುಬುರ್ಗಿ, ರಾಯಚೂರು ಮತ್ತು ಬೀದರ ಜಿಲ್ಲೆಗಳು ಮೊಗಲಾಯಿ ಎನಿಸಿಕೊಂಡಿತು. ಬಹುಶಃ ಜಗತ್ತಿನ ಮತ್ತಾವ ಜನಾಂಗಕ್ಕೂ ಇಂಥ ವಿಪರ್ಯಾಸ ಪರಿಸ್ಥಿತಿ ಬಂದಿರಲಾರದು !

ಕತ್ತಲೆ, ಬರಿ ಕತ್ತಲೆ, ಎಲ್ಲೆಲ್ಲೂ ಗಾಢ ಅಂಧಃಕಾರ. ಅಂಥ ಕತ್ತಲೆಯನ್ನು ಸೀಳಿ ಮೊದಲು ಕನ್ನಡದ ದೀಪವನ್ನು ಹಚ್ಚಬೇಕಾಗಿತ್ತು. ಆ ಕೆಲಸವನ್ನು ಹಲವಾರು ಜನ ಮಾಡಿದರೆಂದೇ ಇಂದು ಈ ಹಂತಕ್ಕೆ ಬಂದು ಮುಟ್ಟಲು ಸಾಧ್ಯವಾಗಿದೆ. ಒಂದು ವೇಳೆ ಆಗಲೂ ಕೂಡ ಯಾರೂ ಮುಂದೆ ಬಂದಿರದಿದ್ದರೆ ಸರಕಾರಿಯಲ್ಲದ ಅಯ್ಯನವರ ಶಾಲೆಗಳೂ ಮರಾಠಿಯ ಬಲೆಗೆ ಬಿದ್ದಿದ್ದರೆ, ಉರ್ದುವಿನ ಗಜಲ-ಶಾಯರಿಗಳ ಮೋಹದಲ್ಲಿ ಹೋಗಿದ್ದರೆ, ಇಂದು ಕರ್ನಾಟಕದ ಹೆಸರು ಕೂಡ ಹೇಳಲು ಉಳಿಯುತ್ತಿರಲಿಲ್ಲ. ಆದಾಗ ಕನ್ನಡವು ಮೈಸೂರು ಅರಸರ ಊಳಿಗದಲ್ಲಿ ಮಾತ್ರ ಉಳಿದು, ಇಂದಿನ ಕರ್ನಾಟಕದ ನಾಲ್ಕರಲ್ಲಿಯ ಒಂದು ಭಾಗ ಮಾತ್ರ ಕರ್ನಾಟಕವಾಗಿ ಉಳಿಯುತ್ತಿತ್ತು. ೧೯ನೆಯ ಶತಮಾನದ ಉತ್ತರಾರ್ಧ ಮತ್ತು ೨೦ನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ನಮ್ಮ ಹಿರಿಯರು ಕನ್ನಡದ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡದೇ ಹೋಗಿದ್ದರೆ ಎಂಬುದನ್ನು ನೆನಪಿಸಿಕೊಳ್ಳಲೂ ಗಾಬರಿಯಾಗುತ್ತದೆ. ನೃಪತುಂಗ ಬಣ್ಣಿಸಿದ ಗೋದಾವರಿಯ ಕನ್ನಡ ಪ್ರದೇಶವು ಹೊಯ್ಸಳರ - ಯಾದವರ ಕಾಲದಲ್ಲಿ ಮರಾಠಿಗರ ಪಾಲು ಆದಂತೆಯೇ

ತುಂಗಭದ್ರೆಯ ಉತ್ತರದ ಭಾಗವೂ ಕನ್ನಡಕ್ಕೆ ಹೊರತಾಗುತ್ತಿತ್ತು. ಇಂದು ಗಡಿಯಾಗಿ ಬೆಳಗಾವಿಯನ್ನು ಕೇಳುವ ಬದಲು ಮರಾಠಿಗರು ದಾವಣಗೆರೆಯನ್ನು ಕೇಳುತ್ತಿದ್ದರೆ, ತೆಲುಗರು ಬಳ್ಳಾರಿ, ರಾಯಚೂರು ಕಲಬುರ್ಗಿಗಳನ್ನು ಕೇಳುತ್ತಿದ್ದರು. ಮಂಗಳೂರನ್ನು ಮಲೆಯಾಳಿಗಳು ಕೇಳುತ್ತಿದರು.

ಹಾಗೆ ನೋಡಿದರೆ, ಈ ದಿನಗಳಲ್ಲಿ ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಸಾಹಸ ಮಾಡಿದ ನಮ್ಮ ಹಿರಿಯರೆಲ್ಲ ಬಹುತೇಕ ಸಾಮಾನ್ಯ ಸ್ತರದಿಂದ ಬಂದವರಾಗಿದ್ದರು. ಗಣ್ಯತೆಯ ಗುರುತೇ ಇಲ್ಲದವರಾಗಿದ್ದರು. ಆದರೂ ಕನ್ನಡದ ಮೇಲಿನ ನಿಷ್ಠೆಯಿಂದ ಕೆಲಸ ಮಾಡಿ ಗಣ್ಯರೆನಿಸಿದರು. ಭಾಷೆಯ ಉನ್ನತಿಗಾಗಿ ಹಗಲು ರಾತ್ರಿ ದುಡಿದರು. ಕ್ರಿಯಾತ್ಮಕವಾಗಿ ಕೆಲಸ ಮಾಡಿದರು. ಪುಸ್ತಕ ಬರೆದರು. ಕಾದಂಬರಿ ನಾಟಕ ಬರೆದರು. ಬರಿಗಾಲಿನಿಂದ ನಡೆದು ಸಂಶೋಧನೆ ಮಾಡಿದರು. ಇತಿಹಾಸವನ್ನು ಬರೆದರು. ಸಂಸ್ಥೆಗಳನ್ನು ಸ್ಥಾಪಿಸಿದರು. ಪತ್ರಿಕೆಗಳನ್ನು ಪ್ರಕಟಿಸಿದರು. ಕವಿತೆಗಳನ್ನು ಬರೆದರು. ನಾಟಕಗಳನ್ನು ಆಡಿದರು, ಕೀರ್ತನೆಗಳನ್ನು ಹೇಳಿದರು. ಕನ್ನಡದ ಬಗ್ಗೆ ಅಸಡ್ಡೆಯನ್ನು ತೋರಿದವರ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದರು. ಅವರ ಭಾಷೆಗಳಲ್ಲಿ ಕನ್ನಡ, ಕನ್ನಡದವರ ಬಗ್ಗೆ ಲೇಖನಗಳನ್ನು ಬರೆದರು. ಒಂದೇ, ಎರಡೆ, ಭಾರತದ ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿದಂತೆ ನೂರಾರು ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಧ್ಯೇಯ ಒಂದೆಯೇ ಆಗಿದ್ದಿತು. ಅದು ಕನ್ನಡದ ಗುಡಿಯನ್ನು ಕಟ್ಟುವುದಾಗಿತ್ತು.

ಇಂಥವೇ ಕಾರ್ಯಕ್ರಮಗಳು ಮೈಸೂರು ಸಂಸ್ಥಾನದಲ್ಲೂ ನಡೆದುವು. ಆದರೆ ಅದು, ದಿವಂಗತ ಕೃಷ್ಣಕುಮಾರ ಕಲ್ಲೂರರು ಒಂದೆಡೆ ಹೇಳಿದಂತೆ, ಅಲ್ಲಿ ಇವುಗಳೆಲ್ಲ 'ಹತ್ತು ಹಡೆದವಳು ಇನ್ನೊಂದು ಹಡೆದಳು ಎಂಬಂತೆ ಇರುತ್ತಿತ್ತು. ಉಳಿದೆಡೆ ಬಹುದಿನದ ಬಂಜೆಯು ಚೊಚ್ಚಲು ಮಗನನ್ನು ಹಡೆದಂತೆ ಸಂಭ್ರಮಿಸುತ್ತಿತ್ತು'!

✤ ✤ ✤ ✤

ಅಧ್ಯಾಯ -೨

• ಕನ್ನಡಕ್ಕಾಗಿ ಹುಡುಕಾಟ

ಭಾಷೆಯ ಜೀವಂತತನವನ್ನು ಉಳಿಸಲು ಮತ್ತು ಅಖಂಡ ಕರ್ನಾಟಕತ್ವದ ಕಲ್ಪನೆಯನ್ನು ಉತ್ತರ ದಕ್ಷಿಣ ಮತ್ತು ಕರಾವಳಿ ಕರ್ನಾಟಕದ ಜನಸಮುದಾಯದಲ್ಲಿ ಬಿತ್ತಲು ಮೊತ್ತ ಮೊದಲು ಪ್ರಯತ್ನ ಮಾಡಿದವರು ೧೯ನೆಯ ಶತಮಾನದ ಮೊದಲ ಅರ್ಧದಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ಎಂದರೆ ಆಶ್ಚರ್ಯವಾಗುತ್ತದೆ. ಆದರೆ ಅದು ಸತ್ಯವಾಗಿದೆ. ಅವರು ಇಲ್ಲಿ ತಮ್ಮ ಮತ ಪ್ರಚಾರಕ್ಕೆ ಬಂದರಾದರೂ, ಇಲ್ಲಿ ಬಂದ ಮೇಲೆ ಇಲ್ಲಿಯ ಭಾಷಯೆನ್ನು ಕಲಿಯಬೇಕೆನಿಸಿತು. ಹಾಗೆ ಕಲಿಯುವಾಗ ಇಲ್ಲಿಯ ಭಾಷೆಯ ಶ್ರೀಮಂತಿಕೆಯನ್ನು ನೋಡಿ, ಭಾಷೆಯ ಬಗ್ಗೆ ಸಂಸ್ಕೃತಿ ಆಚಾರ ವಿಚಾರಗಳ ಬಗ್ಗೆ ಪುಸ್ತಕಗಳನ್ನು ಬರೆದರು. ಅದೇ ಆಗ ಬಂದ ಮತ್ತು ಅವರು ತಂದ ಮುದ್ರಣ ಸೌಲಭ್ಯವನ್ನು ಉಪಯೋಗಿಸಿ ಪುಸ್ತಕಗಳನ್ನು ಪ್ರಕಟಿಸಿದರು. ಸ್ಥಳೀಯರಿಗೆ ಬರೆಯಲು ಪ್ರಚೋದಿಸಿದರು. ಅಂಥ ಕ್ರಿಶ್ಚಿಯನ್ ಪಾದ್ರಿಗಳಲ್ಲಿ ರೆ. ಹರ್ಮನ್ ಮೊಗ್ಲಿಂಗ, ರೆ. ಕಿಟ್ಟೆಲ್ ಮೊದಲಾದವರು ಇದ್ದರೆ, ಅಧಿಕಾರಿಗಳಲ್ಲಿ ರೈಸ್ ತಂದೆ ಮಕ್ಕಳು, ಎಲಿಯಟ್ ರಸಲ್ ಮತ್ತು ಪ್ಲೀಟ ಮೊದಲಾದವರನ್ನು ನೆನೆಯಬೇಕು. ಆನಂತರ ಸ್ಥಳೀಯರಾದ ಡೆಪ್ಯುಟಿ ಚೆನ್ನಬಸಪ್ಪನವರು, ಗಂಗಾಧರ ಮಡಿವಾಳೇಶ್ವರ ತುರಮುರಿಯವರು ಮತ್ತು ವೆಂಕಟ ರಂಗೋ ಕಟ್ಟಿಯವರು ಮುಂತಾದವರು ಮೊದಲಿಗರಾಗಿದ್ದಾರೆ. ಅದರಂತೆ ಹೈದರಾಬಾದು ಕರ್ನಾಟಕದಲ್ಲಿ ತುಂಬ ತಡವಾಗಿ ಕಳೆದ ಶತಮಾನದ ಆದಿಯಲ್ಲಿ ಹೈದರಾಬಾದಿನಲ್ಲಿಯೆ ಕನ್ನಡದ ಧ್ವಜವನ್ನು ಹಾರಿಸಿದ ಭೀಮಾಚಾರ್ಯ ಚಿಮ್ಮಲಗಿ, ಡಿ.ಕೆ. ಭೀಮಸೇನರಾಯರು, ಕಲ್ಬುರ್ಗಿಯಲ್ಲಿ ಕಪಟರಾಳ ಕೃಷ್ಣರಾಯರು ಮತ್ತು ತವಗ ಭೀಮಸೇನರಾಯರು ಮೊದಲಿಗರಾಗಿದ್ದಾರೆ.

ನಾಡಿನ ಆಡಳಿತವನ್ನು ವಹಿಸಿಕೊಂಡ ಬ್ರಿಟೀಷರಿಗೆ ಇಲ್ಲಿಯ ಶಿಕ್ಷಣ ಪದ್ಧತಿಯಲ್ಲಿ ಹಲವಾರು ದೋಷಗಳು ಕಂಡುಬಂದವು. ಅವುಗಳನ್ನು ಸುಧಾರಿಸುವ ನಿಟ್ಟಿನಲ್ಲಿ, ಕನ್ನಡ ಪ್ರದೇಶಗಳಲ್ಲಿ ಕಾರ್ಯಪ್ರವೃತ್ತರಾದ ಮೊದಲಿಗರೆಂದರೆ, ಮದ್ರಾಸ ಇಲಾಖೆಯಲ್ಲಿ ಸರ್ ಥೊಮಸ್ ಮನ್ರೊ ಮತ್ತು ಮುಂಬಯಿ ಇಲಾಖೆಯಲ್ಲಿ ಎಲಫಿನ್ಸ್ಟನ್ ಗವರ್ನರುಗಳು. ಅವರಿಬ್ಬರೂ ಒಂದೇ ಕಾಲಾವಧಿಯಲ್ಲಿ ಕ್ರಿ.ಶ. ೧೮೧೯/೨೦-೧೮೨೭ರಲ್ಲಿ ಗವರ್ನರುಗಳಾಗಿದ್ದರು. ದೇಶ ಭಾಷೆಯಲ್ಲಿ ಶಿಕ್ಷಣವನ್ನು ನೀಡಬೇಕು ಅದಕ್ಕೆ ಪೂರಕವಾದ ಪಠ್ಯಗಳನ್ನು ಸಿದ್ಧಪಡಿಸಬೇಕು ಎಂದು ಮುಂತಾಗಿ ಪ್ರತಿಪಾದಿಸಿದರು. ಈ ಹಿನ್ನೆಲೆಯಲ್ಲಿ ಮುಂಬಯಿ ಪ್ರಾಂತದಲ್ಲಿ ಆ ಪ್ರದೇಶದ ಭಾಷೆಗಳಾಗಿದ್ದ ಮರಾಠಿ ಗುಜರಾತಿ ಪಠ್ಯ ಪುಸ್ತಕಗಳ ರಚನೆಯಾದ ಹತ್ತು ವರುಷಗಳ

ಆನಂತರ ಕನ್ನಡ ಪುಸ್ತಕಗಳ ಮುದ್ರಣಕ್ಕೆ ಪ್ರಾರಂಭವಾಯಿತು. ಆ ಕುರಿತು ನಿರ್ದಿಷ್ಟವಾದ ಸೂಚನೆಯನ್ನು ಮೊದಲಿಗೆ ಮಾಡಿದವನು ಧಾರವಾಡ ವಿಭಾಗಕ್ಕೆ ಅಸಿಸ್ಟಂಟ್ ಕಲೆಕ್ಟರನಾಗಿ ಬಂದ ವಾಲ್ಟರ್ ಎಲಿಯಟ್. ಅವನ ಕನ್ನಡ ಪ್ರಜ್ಞೆಯನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಧಾರವಾಡದಂತಹ ಸಂಪೂರ್ಣ ಕನ್ನಡ ಪ್ರದೇಶದಲ್ಲಿ ಸರಕಾರವು ಕ್ರಿ.ಶ. ೧೮೨೬ರಲ್ಲಿ ಮರಾಠಿ ಶಾಲೆಯೊಂದನ್ನು ಸ್ಥಾಪಿಸಿದ್ದಾಗ, 'ಅದು ತಪ್ಪು' ಇಲ್ಲಿಯ ಜನರ ಭಾಷೆ ಕನ್ನಡ. ಮಾತೃಭಾಷೆಯಲ್ಲಿಯೇ ಶಿಕ್ಷಣ ನಡೆಯಬೇಕಾದದ್ದು ನ್ಯಾಯವಾದುದು ಎಂದು ವರದಿ ಮಾಡಿದನಲ್ಲದೆ ಒಂದು ಕನ್ನಡ ಶಾಲೆಯನ್ನು ಆರಂಭಿಸಿ ಕ್ರಿ.ಶ. ೧೮೩೧-೩೩ ಮೂರು ವರುಷ ಒಬ್ಬನೇ ಅದರ ವೆಚ್ಚ ವಹಿಸಿದನು.

ಕ್ರಿ.ಶ. ೧೮೩೫ರಲ್ಲಿ ಸದರ್ನ ಮರಾಠಾ ಎಂದು ಕರೆಯುತ್ತಿದ್ದ ಮುಂಬಯಿ ಕರ್ನಾಟಕದ ಜನರ ಭಾಷೆಯು ಕನ್ನಡವಾಗಿದೆ. ಆದ್ದರಿಂದ ಕನ್ನಡದಲ್ಲಿಯೇ ಆಡಳಿತ ಮತ್ತು ಶಿಕ್ಷಣ ಕಾರ್ಯ ನಡೆಯಬೇಕು ಎಂಬ ಮಹತ್ವಪೂರ್ಣ ನಿರ್ಣಯವನ್ನು ಮುಂಬಯಿ ಸರಕಾರವು ಸ್ವೀಕರಿಸಿತು. ಪರಿಣಾಮವಾಗಿ ಸರಕಾರೀ ಕನ್ನಡ ಶಾಲೆಗಳ ಸಂಖ್ಯೆ ಕ್ರಮೇಣ ಏರತೊಡಗಿತು.

ಮುಂಬಯಿ ಕರ್ನಾಟಕದಲ್ಲಿನ ಶೈಕ್ಷಣಿಕ ಕಾರ್ಯವನ್ನು ಸರಕಾರದವರು ಪ್ರಾರಂಭ ಮಾಡಿದರೆ, ಮದ್ರಾಸ್ ಮತ್ತು ಮೈಸೂರು ಇಲಾಖೆಗಳಲ್ಲಿ ಈ ಕಾರ್ಯವನ್ನು ಮಿಶನರಿಗಳು ಪ್ರಾರಂಭಿಸಿದರು. ಆನಂತರ ಸರಕಾರಗಳೂ ಅವರನ್ನು ಕೂಡಿಕೊಂಡವು. ಇಲ್ಲಿ ಸರಕಾರ ಪ್ರಾರಂಭಿಸಿದ ಮೇಲೆ ಮಿಶನರಿಗಳು ಬಂದರು.

ಧಾರವಾಡವು ಜಿಲ್ಲಾ ಸ್ಥಳವಲ್ಲದೆ ಬೇರೆ ಜಿಲ್ಲೆಗಳು ಸೇರಿದ ವಿಭಾಗ ಮಟ್ಟದ ಮುಖ್ಯ ಪಟ್ಟಣವಾಗಿದ್ದಿತು. ಅನೇಕ ಸರಕಾರೀ ನೌಕರರೂ ವತನದಾರರೂ ಅಲ್ಲಿ ವಾಸವಾಗಿದ್ದರು. ಧಾರವಾಡದಲ್ಲಿ ಆಗ ಒಂದು ಮರಾಠಿ ಹಾಗೂ ಅದಕ್ಕೆಯೇ ಜೋಡಿಸಲಾದ ಕನ್ನಡ ಶಾಲೆ ಮಾತ್ರ ಇದ್ದುವು. ಕ್ರಿ.ಶ. ೧೮೩೭ರಲ್ಲಿ ಅಲ್ಲಿಗೆ ಮತ ಪ್ರಸಾರಕ್ಕೆಂದು ಬಂದ ಬಾಸೆಲ್ ಮಿಶನ್ನಿನ ಹರ್ಮನ್ ಮೊಗ್ಲಿಂಗ್ ಕೂಡಲೇ ಒಂದು ಇಂಗ್ಲಿಷ್ ಶಾಲೆಯನ್ನು ಪ್ರಾರಂಭಿಸಿದನು. ಅದ ಬಲು ಬೇಗ ಸ್ಥಳೀಯರ ಗಮನವನ್ನು ಸೆಳೆಯಿತು.

ಬಾಸೆಲ್ ಮಿಶನ್ನಿನವರು ತಮ್ಮದೇ ಆದ ಬೋಧಕ ಶಾಲೆಯನ್ನು ಮಂಗಳೂರಲ್ಲಿ ಆರಂಭಿಸಿದರು. ವಿದ್ಯಾಕ್ಷೇತ್ರದಲ್ಲಿಯ ಅವರ ಪ್ರಗತಿಯು ಬೆರಗುಗೊಳಿಸುವಂತಿದೆ. ಕ್ರಿ.ಶ. ೧೮೫೩ರ ಹೊತ್ತಿಗೆ ಅವರು ೫೦ ಪ್ರಾಥಮಿಕ ಶಾಲೆಗಳನ್ನು ೮ ಹೈಸ್ಕೂಲುಗಳನ್ನು ನಡೆಸುತ್ತಿದ್ದರು. ೧೮೩೩ರಲ್ಲಿ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜರು ಒಂದು ಇಂಗ್ಲಿಷ್ ಶಾಲೆಯನ್ನು ಪ್ರಾರಂಭಿಸಿದರು. ಈ ಎಲ್ಲದರ ಪರಿಣಾಮವೆಂದರೆ, ಮಾತೃಭಾಷೆಯಲ್ಲಿ ಕಲಿಸಲು ಪಠ್ಯಪುಸ್ತಕಗಳು ಸಿದ್ಧವಾದದ್ದು.

ಬೇರೆ ಬೇರೆ ಊರುಗಳಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುತ್ತ ಹೋಗುವುದೇ ಅಂದಿನ ಶಿಕ್ಷಣಾಧಿಕಾರಿಗಳ ಮೂಲೋದ್ದೇಶವಾಗಿತ್ತು. ಅದಕ್ಕಾಗಿ ಅಂಕಲಿಪಿಯಿಂದ ಮೊದಲಾಗಿ ಪಠ್ಯಪುಸ್ತಕಗಳು ಬೇಕಾದವು. ಆದ್ದರಿಂದ ಅವುಗಳನ್ನು ಸಿದ್ಧಪಡಿಸುವುದಕ್ಕಾಗಿ ಕನ್ನಡ ಭಾಷಾಂತರ ಕಚೇರಿಯು ಅಸ್ತಿತ್ವದಲ್ಲಿ ಬಂದಿತು. ಅದರಂತೆ ಕನ್ನಡದಲ್ಲಿ ಕಲಿಸುವ ಶಿಕ್ಷಕರ ಕೊರತೆಯನ್ನು ಹೋಗಲಾಡಿಸಲು ಟ್ರೇನಿಂಗ್ ಕಾಲೇಜಿನ ಸ್ಥಾಪನೆಯಾಯಿತು. ಈ ಎಲ್ಲ ಸಾಧನೆಗಳಿಗೆ ಕನ್ನಡದಲ್ಲಿ ಕಳಕಳಿ ಇದ್ದ ಶಿಕ್ಷಣಾಧಿಕಾರಿಗಳ ಅವಶ್ಯಕತೆ ಇದ್ದಿತು.

ಅಂಥ ಅಧಿಕಾರಿಗಳಲ್ಲಿ ಮೊತ್ತ ಮೊದಲಿಗನ ಹೆಸರು ಡಬ್ಲ್ಯು. ಎ. ರಸಲ್‌ನದು. 'ಇದು ಕನ್ನಡ ನೆಲ' ಎಂದು ತೋರಿಸಿಕೊಟ್ಟನು. ತನ್ನ ಕೈ ಕೆಳಗಿನ ಕಟ್ಟಾಳುಗಳನ್ನು ಕನ್ನಡದ ಕೆಲಸಗಳಲ್ಲಿ ತೊಡಗಿಸಿದನು. ಮುಂಬಯಿ ಸೆಕ್ರೆಟರಿಯಟ್‌ನಲ್ಲಿ ಮರಾಠಿಯದೆ ಕಾರುಭಾರವಿದ್ದಾಗ, ಕನ್ನಡದ ಯಾವುದೇ ಕೆಲಸಕ್ಕಾಗಿ ಸರಕಾರದ ಒಪ್ಪಿಗೆಯನ್ನು, ಹಣವನ್ನು ದೊರಕಿಸುವುದರಲ್ಲಿ ಬಹುವಾಗಿ ಶ್ರಮಿಸಿದನು. ಈತನ ಮೇಲ್ವಿಚಾರಣೆಯಲ್ಲಿ, ಡೆಪ್ಯೂಟಿ ಚೆನ್ನಬಸಪ್ಪ, ವೆಂಕಟ ರಂಗೋ ಕಟ್ಟಿ, ಗಂಗಾಧರ ಮಡಿವಾಳೇಶ್ವರ ತುರಮರಿ ಮೊದಲಾದವರು ಆರಂಭದಲ್ಲಿ ಮಾಡಿದ ಕಾರ್ಯವು ಮುಂದಣ ದಿನಗಳಲ್ಲಿಯ ಕನ್ನಡ ಸಂಘಟನೆಗೆ ಪೋಷಕವಾಯಿತು.

✤ ✤ ✤ ✤

ಅಧ್ಯಾಯ -೩

• ಅಖಂಡ ಸೀಮೆಗಾಗಿ 'ಕನ್ನಡ ಸಮಾಚಾರ'

ಸಂಘಟನೆಯ ವಿಷಯದಲ್ಲಿ ಬಾಸೆಲ್ ಮಿಷನ್ನಿನ ಮೊಗ್ಲಿಂಗ್‌ನ ಪಾತ್ರವು ಹಿರಿದಾಗಿದೆ. ತಾನು ಬಂದ ಮುಖ್ಯ ಉದ್ದೇಶವಾದ ಧರ್ಮ ಪ್ರಸಾರವಲ್ಲದೆ ಇಲ್ಲಿಯ ಶಿಕ್ಷಣ ಮತ್ತು ಸಾಹಿತ್ಯದಲ್ಲಿಯು ಅನುಪಮ ಸೇವೆಯನ್ನು ಮಾಡಿದನು. ಮುಂಬಯಿ ಕರ್ನಾಟಕವನ್ನು ದಕ್ಷಿಣ ಮರಾಠಾ ಎಂದು ತಪ್ಪಾಗಿ ತಿಳಿಯುತ್ತಿದ್ದುದನ್ನು ಮೊಗ್ಲಿಂಗ್‌ನು ೧೮೮೪ರ ತನ್ನ ಮಿಶನ್ ವರದಿಯಲ್ಲಿ 'ದಕ್ಷಿಣ ಮಹಾರಾಷ್ಟ್ರವೆನ್ನುವ ಪ್ರದೇಶವೆಲ್ಲ ಕನ್ನಡದ ನಾಡೇ ಆಗಿದೆ' ಎಂಬುದಾಗಿ ಬರೆದು ಕನ್ನಡದ ವಿಸ್ತಾರವನ್ನು ಎತ್ತಿ ಹಿಡಿದು ಹೇಳಿದನು. ಕನ್ನಡದ ಮೊತ್ತ ಮೊದಲಿನ ಪತ್ರಿಕೆ 'ಮಂಗಳೂರು ಸಮಾಚಾರ'ವನ್ನು ೧೮೪೩ರಲ್ಲಿ ಸಂಪಾದಿಸಿ ಪ್ರಕಟಿಸಿದುದಲ್ಲದೆ ಮುಂದಿನ ಒಂದೇ ವರುಷದಲ್ಲಿ ಅದನ್ನು 'ಕನ್ನಡ ಸಮಾಚಾರ' ಎಂದು ಹೆಸರು ಬದಲಾಯಿಸಿ ಬಳ್ಳಾರಿಗೆ ತಂದನು. ಅದನ್ನು ಹಾಗೆ ಹೆಸರು ಬದಲಿಸಿ ತಂದ ಉದ್ದೇಶವನ್ನು ಈ ರೀತಿಯಾಗಿ ಸ್ಪಷ್ಟವಾಗಿ ಹೇಳಿದನು.

ಮಂಗಳೂರು, ಮೈಸೂರು, ತುಮ್ಕೂರು, ಬಳ್ಳಾರಿ, ಶಿವಮೊಗ್ಗ, ಹುಬ್ಬಳಿ,ಶಿರಸಿ, ಹೊನ್ನಾವರ, ಮೊದಲಾದ ಸ್ಥಳಗಳಲ್ಲಿ ಕೆಲವು ನೂರು ಮಂದಿ ಈ ಕಾಗದವನ್ನು (ಮಂಗಳೂರು ಸಮಾಚಾರವನ್ನು) ಈ ವರೆಗೆ ತೆಗೆದುಕೊಳ್ಳುತ್ತಾ ಬಂದರು. ಮೊದಲಿನ ನಂಬ್ರದ ಕಾಗದಗಳನ್ನು ಛಾಪಿಸಿ ಪ್ರಕಟನೆ ಮಾಡುವಾಗ್ಗೆ ನಾವು ಮಾಡಿದ ಆಲೋಚನೆ ಈ ಕಾಲದಲ್ಲಿ ಈ ದೇಸಸ್ಥರೊಳಗೆ ನಡಿಯುವುದೂ ಏನೊ ಎಂದು ಸ್ವಲ್ಪ ಸಂದೇಹ ಪಡುತ್ತಿದ್ದೆವು. ಈಗ ಈ ದೇಸಸ್ಥರಲ್ಲಿ ಅನೇಕರಿಗೆ ಕನ್ನಡ ಭಾಷೆಯಲ್ಲಿ ಬರೆದ ಒಂದು ಸಮಾಚಾರ ಕಾಗದವನ್ನು ಓದುವುದಿರಲಿ, ಮತಿ ಆಗುವುದೆಂದು ನೋಡಿ ಸಂತೋಷದಿಂದ ಅದನ್ನು ವೃದ್ಧಿಮಾಡುವ ಪ್ರಯತ್ನದಿಂದ ಇನ್ನು ಮುಂದೆ ಅದನ್ನು ಕಲ್ಲಿನಲ್ಲಿ ಛಾಪಿಸದೆ ಬಳ್ಳಾರಿಯಲ್ಲಿ ಇರುವ ಅಕ್ಷರಛಾಪ ಖಾನೆಯಲ್ಲಿ ಅಚ್ಚುಪಡಿ ಮಾಡಲಿಕ್ಕೆ ನಿಶ್ಚೈಯಿಸಿದ್ದೇನೆ. ಆಮೇಲೆ ಕನ್ನಡ ಶೀಮೆ ನಾಲ್ಕು ದಿಕ್ಕುಗಳಲ್ಲಿ ಯಿರುವವರು ಶುದ್ಧವಾದ ಮೊಳೆ ಅಚ್ಚುಗಳಿಂದ ಆಗುವ ಬರಹವನ್ನು ಸುಲಭವಾಗಿ ಓದಬಹುದು, ಇದಲ್ಲದೆ - ಹೆಚ್ಚು ವರ್ತಮಾನವಂನೂ ಚರಿತ್ರೆಗಳಂನೂ ವಿದ್ಯಾ ಪಾಠಗಳಂನು ಬುದ್ಧಿಮಾತುಗಳಂನು ಬರಿಯುವುದಕ್ಕೆ ಸ್ಥಳ ಸಿಕ್ಕುವದು.'

ಮೊದಲ ಬಾರಿಗೆ ಇದನ್ನು ಕನ್ನಡಿಗರಿಗೆ ತೋರಿಸಿದ ನಾಡಿನ ಖ್ಯಾತ ಸಂಶೋಧಕ ಡಾ. ಶ್ರೀನಿವಾಸ ಹಾವನೂರರು, 'ಇದರ ಹಿಂದಿರುವ ಕನ್ನಡ ಪ್ರಜ್ಞೆಯನ್ನು ಗಮನಿಸಬೇಕು' ಎನ್ನುತ್ತಾರೆ. ಮದ್ರಾಸ ಮತ್ತು ಮುಂಬಯಿ

ವಿಭಾಗಗಳಲ್ಲಿನ ಆಗಿನ ಕನ್ನಡಿಗರ ನಡುವೆ ಬಳಕೆ ಇರದಿದ್ದಾಗ ಅವರಲ್ಲಿ 'ನಾವು ಕನ್ನಡಿಗರು' ಎಂಬ ಭಾವನೆ ಮೂಡುವಂತೆ 'ಮಂಗಳೂರು ಸಮಾಚಾರ' ವೆಂಬ ಹೆಸರನ್ನು ಬಿಟ್ಟುಕೊಟ್ಟು ''ಈ ಕಾಗದವು ಕನ್ನಡ ಭಾಷೆಯನ್ನಾಡುವ ಸಕಲ ಜನರಲ್ಲಿ ಪ್ರಸಿದ್ಧಿ ಯಾಗಬೇಕೆಂಬ ಇಚ್ಛೆಯಿಂದ 'ಕನ್ನಡ ಸಮಾಚಾರ' ವೆಂಬ ಹೊಸ ಹೆಸರಿನಿಂದ ಹೊರಡುವುದೆಂದು'' ಘೋಷಿಸಿ ಕನ್ನಡತ್ವಕ್ಕೆ ವಿೀಳ್ಯವನ್ನು ಎತ್ತಿದನೆಂದೇ ಹೇಳಬೇಕು.

ಇಂಥದೇ ಇನ್ನೊಂದು ಸಂದರ್ಭ. ಕನ್ನಡಕ್ಕೆ ಶಬ್ದಕೋಶವನ್ನು ಕೊಟ್ಟ ಫರ್ಡಿನಾಂಡ ಕಿಟೆಲ್ಲರ ಹೆಸರನ್ನು ಯಾರು ಕೇಳಿಲ್ಲ. ಅವರು ಕಿಟೆಲ್ ಕೋಶವನ್ನು ಸಿದ್ಧಪಡಿಸುವಾಗ ಬ್ರಿಟಿಶ್ ಸರಕಾರವು ಅವರಿಗೆ ಒಂದು ಮಹತ್ವದ ಸೂಚನೆಯನ್ನು ಮಾಡಿತು. ಅದೆಂದರೆ, ಉತ್ತರ ಕರ್ನಾಟಕದ ಕನ್ನಡ ಭಾಷೆಗೂ, ತುಂಗಭದ್ರೆಯ ಕೆಳಗಿರುವ ಮೈಸೂರು ಸಂಸ್ಥಾನದ ಭಾಷೆಗೂ ತುಂಬಾ ವ್ಯತ್ಯಾಸವಿದ್ದು ಉತ್ತರ ಕರ್ನಾಟಕದಲ್ಲಿ ಬಳಕೆ ಇರುವ ಶಬ್ದಗಳನ್ನೂ ಸೇರಿಸಬೇಕು ಎಂದು ಹೇಳಿತು. ಅದಕ್ಕೆ ಕಿಟೆಲ್ ಕೊಟ್ಟ ದಿನಾಂಕ ೨೫-೨-೧೮೭೯ರ ಸುದೀರ್ಘ ಉತ್ತರದಲ್ಲಿಯ ಕೆಲವು ಸಾಲುಗಳು ಹೀಗಿವೆ.

"The form of government laws, Institution,s traditions and customs are nearly identical throughout the whole country and the canarese language, excepting style and the use of borrowed terms, is everywhere substantialy the same."

ಕರ್ನಾಟಕ ಒಂದೇ ಭಾಷೆ, ಜನಾಂಗ ಮುಂತಾದ ದೃಷ್ಟಿಗಳಿಂದ ಒಂದೇ ಎಂಬುದನ್ನು ಏಕೀಕರಣದ ಕಲ್ಪನೆಯೇ ಇಲ್ಲದ ಮುಕ್ಕಾಲು ಶತಮಾನದಷ್ಟು ಹಿಂದೆ ಕಿಟೆಲ್ ಮನಗಂಡಿದ್ದನೆಂಬುದು ಇಂದಿನವರ ಕಣ್ಣು ತೆರೆಯಿಸಬೇಕಾದ ಅಂಶವಾಗಿದೆ.

✤ ✤ ✤ ✤

ಅಧ್ಯಾಯ -೪

• ಕನ್ನಡಕ್ಕೆ ಜೀವ ತುಂಬಿದವರು

ಡೆಪ್ಯೂಟಿ ಚೆನ್ನಬಸಪ್ಪನವರು, ತುರಮರಿ ಗಂಗಾಧರರಾಯರು ಮತ್ತು ವೆಂಕಟ ರಂಗೋ ಕಟ್ಟಿ ಅವರುಗಳು, ೧೯ನೆಯ ಶತಮಾನದ ಉತ್ತರಾರ್ಧದಲ್ಲಿ, ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು ಜೀವಂತವಾಗಿ ಇಟ್ಟರಲ್ಲದೆ ಅದಕ್ಕೆ ತಕ್ಕ ಶಿಕ್ಷಣ ರೂಪವನ್ನು ಕಲ್ಪಿಸಿದರು. ಶಿಕ್ಷಣ ಮಾಧ್ಯಮವನ್ನಾಗಿಯೂ ಮಾಡಿದರು. ಇವರ ಜೊತೆಗೆ ಧೊಂಡೋ ನರಸಿಂಹ ಮುಳಬಾಗಲರು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ಶ್ರಮಿಸಿದರು. ಕನ್ನಡವನ್ನು ಮುಂಬಯಿ ಪ್ರಾಂತದಲ್ಲಿ ಮರಾಠಿಗೆ ಸರಿಮಿಗಿಲೆನ್ನುವಂತೆ ಮಾಡಿದರು. ಹೆಸರೇ ಹೇಳುವಂತೆ ಮುಳಬಾಗಲರ ಮನೆತನ ಮೈಸೂರು ಕಡೆಯದು. ಇಲ್ಲಿಗೆ ಬಂದ ನರಸಿಂಹ ಮುಳಬಾಗಲರು ತಮ್ಮ ಮಗನಿಗೆ 'ಧೋಂಡೋ' ಎಂಬ ಅಚ್ಚ ಮರಾಠಿ ಹೆಸರನ್ನು ಇಟ್ಟರು. ಅದನ್ನು ಕಂಡರೆ ಆ ದಿನಗಳಲ್ಲಿ ಮರಾಠಿ ವರ್ಚಸ್ಸು ಅಡುಗೆ ಮನೆಯನ್ನು ದಾಡಿ ಹೆರಿಗೆಯ ಮನೆಗೂ ವ್ಯಾಪಿಸಿತ್ತು ಎಂಬುದನ್ನು ಕಾಣಬಹುದು.

ಚನ್ನಬಸಪ್ಪನವರ ತಂದೆ ಬಸವಲಿಂಗಪ್ಪನವರು ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕದವರು. ಅವರ ಹಿರಿಯರು ವ್ಯಾಪಾರಕ್ಕೆಂದು ಧಾರವಾಡಕ್ಕೆ ಬಂದು ನೆಲೆಸಿದ್ದರು. ಹೀಗಾಗಿ ಧಾರವಾಡ ಚನ್ನಬಸಪ್ಪ ಎಂದು ಹೆಸರಾಯಿತು. ತಂದೆಯ ಅಕಾಲ ಮರಣದಿಂದ ಬಾಲ್ಯ ಕಷ್ಟದಲ್ಲಿಯೆ ಕಳೆಯಿತು. ಆದರೆ ಬಾಲಕ ಚುರುಕು ಬುದ್ಧಿಯವನು. ವಿಶೇಷತಃ ಗಣಿತ, ವಿಜ್ಞಾನದಲ್ಲಿ ಮುನ್ನೂರು ಮೈಲು ದೂರದ ಪುಣೆ ವರೆಗೆ ಕಾಲ್ನಡಿಗೆಯಲ್ಲಿ ನಡೆದು ಇಂಗ್ಲಿಷ್ ಶಾಲೆಗೆ ಹೆಸರು ಹಚ್ಚಿದರು. ಶಾಲೆ ಕಾಲೇಜು ಪರೀಕ್ಷೆಗಳಲ್ಲಿ ನಿರೀಕ್ಷಿತ ಯಶಸ್ಸು ದೊರಕಿತು. ಕೆಲವು ವರುಷ ಕಲಿತ ಕಾಲೇಜಿನಲ್ಲಿಯೇ ಅಧ್ಯಾಪಕರೆಂದು ಕೆಲಸ ಮಾಡಿದರು. ಆದರೆ ಅವರ ಮನಸ್ಸು ತಾಯಿ ನಾಡಿನಲ್ಲಿ ನೆಲೆಸಿತ್ತು. ಧಾರವಾಡಕ್ಕೆ ಮರಳಿದರು. ಮೊದಲು ಅಂಚೆ ಇಲಾಖೆಯಲ್ಲಿ ಸೇರಿದರು. ಆನಂತರ ೧೮೫೭ರಲ್ಲಿ ಮುಂಬಯಿ ಪ್ರಾಂತದ ವಿದ್ಯಾ ಇಲಾಖೆಯಲ್ಲಿ ಸೇರಿ ಬೆಳಗಾವಿಯ ನಾರ್ಮಲ್‌ಸ್ಕೂಲಿನ ಮುಖ್ಯ ಅಧ್ಯಾಪಕರಾದರು. ಅಲ್ಲಿ ಅವರು ಮಾಡಿದ ಮೊದಲ ಕೆಲಸವೆಂದರೆ ಕನ್ನಡ ಭಾಷೆಯನ್ನು ಎತ್ತಿ ಹಿಡಿದುದು. ಕನ್ನಡ ಪಂಡಿತರನ್ನು ಗೌರವಿಸಿದರು. ಇಲ್ಲಿಯವರೆಗೆ ಬಂದ ವಿದ್ಯಾಖಾತೆಯ ಅಧಿಕಾರಿಗಳು ಈ ಭಾಗದ ಶಿಕ್ಷಣ ಮಾಧ್ಯಮವು ಕನ್ನಡವೆ, ಮರಾಠಿಯೆ ಎಂಬ ಗೊಂದಲದಲ್ಲಿದ್ದವರಾಗಿದ್ದರು. ಚನ್ನಬಸಪ್ಪನವರಿಗೆ ಅಂಥ ಸಂಶಯವೇ ಇರಲಿಲ್ಲ. ಕನ್ನಡ ಭಾಷೆಗೆ ಒತ್ತು ಕೊಟ್ಟು ಕೆಲಸ ಮಾಡಿದಾಗ ವಿದ್ಯಾರ್ಥಿಗಳ ಸಂಖ್ಯೆಯೂ ಅಧಿಕವಾಯಿತು. ನಾರ್ಮಲ್ ಸ್ಕೂಲಿನಲ್ಲಿ ಅವರು ಇದ್ದದ್ದು ಕೇವಲ ಐದು ವರುಷ. ಆದರೆ ಹಿಂದಿನ ಮೂವತ್ತು ವರುಷಗಳಲ್ಲಿ ಸಾಧಿಸಲಾಗದ ಕೆಲಸವನ್ನು ಈ ಅವಧಿಯಲ್ಲಿ ಅವರು ಮಾಡಿ ತೋರಿಸಿದ್ದರು. ಅದು ಅವರ ನೌಕರಿಯಲ್ಲಿ ಬಡತಿಗೆ ಕಾರಣವಾಯಿತು.

ಕ್ರಿ.ಶ. ೧೮೬೧ರಲ್ಲಿ ಅವರು ಬೆಳಗಾವಿ ವಿಭಾಗದ ಡೆಪ್ಯೂಟಿ ಎಜುಕೇಷನಲ್ ಇನ್‌ಸ್ಪೆಕ್ಟರ್ ಆದರು. ಈಗ ಹಳ್ಳಿಪಳ್ಳಿಗಳ ಜನಸಾಮಾನ್ಯರೊಂದಿಗೆ ಬೆರೆಯುವ ಅವಕಾಶ ದೊರೆಯಿತು. ಹಿಂದಿನ ಅವರ ಶಿಷ್ಯರು ಈಗ ಈ ಶಾಲೆಗಳಲ್ಲಿ ಅಧ್ಯಾಪಕರಾಗಿದ್ದರು. ಅವರಿಗೆಲ್ಲ ಅವರು ಸಾಹೇಬರಾಗಿ ಹೋಗಿ ಕೆಲಸ ಮಾಡಲಿಲ್ಲ. ಶಿಕ್ಷಕರು ಮತ್ತು ಊರ ಜನರ ಮಧ್ಯದ ಕೊಂಡಿಯಾಗಿ ಕೆಲಸ ಮಾಡಿದರು. ಉಳಿದ ಇಲಾಖೆಗಳ ವರದಿಗಳಂತೆ ಶಾಲಾ ಖಾತೆಯ ವರದಿಗಳು ಅರ್ಧಂಬರ್ಧ ಮರಾಠಿಯಲ್ಲಿ ಇದ್ದುದ್ದಕ್ಕೆ ಈಗ ಪೂರ್ಣ ವಿರಾಮ ಹಾಕಿದರು. ವಿದ್ಯಾರ್ಥಿಗಳಿಗೆ ಅಂಕಿ ಮಗ್ಗಿಗಳನ್ನು ಮರಾಠಿಯಲ್ಲಿ ಹೇಳಿಕೊಡುವುದನ್ನು ನಿಲ್ಲಿಸಿದರು. ಮೈಗಳ್ಳ ಉಪಾಧ್ಯಾಯರನ್ನು ಎಚ್ಚರಿಸುವುದು ನಾಗರಿಕರ ಕರ್ತವ್ಯ ಎಂದು ಅವರು ಸಾರ್ವಜನಿಕರಿಗೆ ಸೂಚಿಸುತ್ತಿದ್ದರು. ಅಲ್ಲಲ್ಲಿ ವ್ಯಾಪಾರಸ್ಥರನ್ನು ಭೆಟ್ಟಿಯಾಗಿ ಕನ್ನಡದಲ್ಲಿ ಲೆಕ್ಕ ಪತ್ರಗಳನ್ನು ಇಡುವುದು ಸಾಮಾಜಿಕ ಧರ್ಮ ಎಂದು ಹೇಳುತ್ತಿದ್ದರು.

ಅವರಿಗೆ ಕನ್ನಡ ಸಾಹಿತ್ಯ , ಸಂಗೀತ, ಕಲೆ , ಧರ್ಮ, ಎಲ್ಲ ವಿಷಯಗಳಲ್ಲಿ ಒಲವು ಇತ್ತು. ಮೈತುಂಬ ಕೆಲಸವಿದ್ದಾಗಲೂ ಬರೆಯುವ ಹವ್ಯಾಸವಿತ್ತು. ಉಳಿದವರಿಗೆ ಕನ್ನಡದಲ್ಲಿ ಬರೆಯಲು ಹುರಿದುಂಬಿಸಿದರು. ಅವರು ಬರೆದ ಗಣಿತ ಪುಸ್ತಕಗಳು ಅನೇಕ ವರುಷ ಪಠ್ಯ ಪುಸ್ತಕಗಳಾಗಿದ್ದವು. ನಗರವನ್ನು ನಗಿಸುವ ಕಥೆ ಮತ್ತು ಮ್ಯಾಕ್‌ಬೆತ್ ಎಂಬ ಎರಡು ಪುಸ್ತಕಗಳನ್ನು ಬರೆದಿದ್ದರೆಂದೂ ಉಲ್ಲೇಖವಿದೆ. ತಾವು ಬರೆದದ್ದಕ್ಕಿಂತ ಇತರರಿಂದ ಬರೆಯಿಸಿದ್ದೇ ಹೆಚ್ಚು. ಕನ್ನಡದ ಸೊಲ್ಲು ಇಲ್ಲದಿದ್ದಾಗ ಅವರು ಲೇಖಕರನ್ನು ಮುಂದೆ ತಂದರು. ಪಂಡಿತರನ್ನು ಪ್ರೋತ್ಸಾಹಿಸಿ ಕಾವ್ಯ ಸಂಗ್ರಹ, ಟೀಕೆಗಳನ್ನು ಬರೆಯುವಂತೆ ಉತ್ತೇಜನ ನೀಡಿದರು. ಗಂಗಾಧರ ಮಡಿವಾಳೇಶ್ವರ ತುರಮರಿ, ವೆಂಕಟ ರಂಗೋ ಕಟ್ಟಿ ಮೊದಲಾದ ವಿದ್ವಾಂಸರ ಗ್ರಂಥ ರಚನೆಗೆ ಪ್ರತ್ಯಕ್ಷ ಸಹಾಯ ಮಾಡಿದರು. ಶೇಷಗಿರಿರಾವ್ ಚುರಮರಿ, ರೆ. ಜೆಗ್ಲರ್ ಮುಂತಾದವರ ಸಾಹಿತ್ಯ ಕಾರ್ಯಗಳನ್ನು ಅವರು ಪ್ರಶಂಸಿಸಿದರು. ವಿದ್ವಾಂಸರೆಲ್ಲರು ಕನ್ನಡ ಬಾವುಟದ ಅಡಿಯಲ್ಲಿ ನೆರೆಯುವಂತೆ ಅವರು ಹೊಸ ವಾತಾವರಣವನ್ನು ನಿರ್ಮಿಸಿದರು.

ಬೆಳಗಾವಿ ಧಾರವಾಡ ಜಿಲ್ಲೆಗಳಲ್ಲಿ ಅವರು ಸುಮಾರು ೨೦ ವರುಷ ಡೆಪ್ಯೂಟಿ ಎಜುಕೇಶನಲ್ ಇನ್‌ಸ್ಪೆಕ್ಟರ್ ಎಂದು ಕೆಲಸ ಮಾಡಿದರು. ಧಾರವಾಡ ಎಂಬ ಅವರ ಅಡ್ಡ ಹೆಸರು ಕೇವಲ ಕಾಗದದಲ್ಲಿ ಉಳಿದು ಅವರು ಡೆಪ್ಯೂಟಿ ಚೆನ್ನಬಸಪ್ಪ ಎಂದೇ ಹೆಸರಾದರು. ಅವರು ಅಧಿಕಾರಕ್ಕೆ ಬರುವ ಮುನ್ನ ಧಾರವಾಡ, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಇದ್ದ ಒಟ್ಟು ೩೪ ಕನ್ನಡ ಶಾಲೆಗಳ ಸಂಖ್ಯೆಯು ಇವರ ಅಧಿಕಾರದ ಅವಧಿಯಲ್ಲಿ ೬೬೮ನ್ನು ಮುಟ್ಟಿತು. ತಮ್ಮ ಕಾರ್ಯವನ್ನು ಪೂರ್ತಿಗೊಳಿಸುವ ಮೊದಲೆ ಅವರು ತಮ್ಮ ೫೭ನೆಯ ವಯಸ್ಸಿನಲ್ಲಿ ಕ್ರಿ.ಶ. ೧೮೮೧ರಲ್ಲಿ ತೀರಿಕೊಂಡರು.

✤ ✤ ✤ ✤

ಅಧ್ಯಾಯ -೫

• ಕಳಚಿದ ಮರಾಠಿ ಮೋಹ

"ಮಿತ್ರಾ, ನಿನ್ನ ಧನ ದೌಲತ್ತು ಈಗ ನಿನ್ನದಾಗಿದೆ : ಅಧಿಕಾರ ಪಡೆದಿದ್ದೀ. ಆದುದರಿಂದ ನಿನ್ನ ವೈಭವ, ಐಷಾರಾಮ ಹೆಚ್ಚಿರಲೂಬಹುದು. ಆದರೆ ವಿದ್ಯಾವಂತರೆಂದು ಹೇಳಿಕೊಳ್ಳುವ ನಾವು ಕೇವಲ ಇಂಥ ವೈಯಕ್ತಿಕ ದೊಡ್ಡಸ್ತಿಕೆಯಿಂದಲೇ ತೃಪ್ತವಾಗಲೇಬೇಕೆ ಅಥವಾ ಸಮಾಜಕಲ್ಯಾಣಕ್ಕಾಗಿ ದುಡಿಯುವ ಮಾರ್ಗವನ್ನು ಶೋಧಿಸಬೇಕೇ? ಇಂದಿನ ಕರ್ನಾಟಕದ ಕೆಲವೇ ಸುಶಿಕ್ಷಿತರು ನಾವು. ಅದರಲ್ಲಿಯೂ ನಿನ್ನ ಯೋಗ್ಯತೆ ವಿಶಿಷ್ಟವಾದದ್ದು. ಯೋಚಿಸಿ ನೋಡು. ನಮ್ಮ ಸಂಸ್ಕೃತ ಪಂಡಿತರು ಕನ್ನಡವನ್ನು ಕಡೆಗಣಿಸಿದ್ದಾರೆ. ಸಂಸ್ಕೃತ ಮಟ್ಟಕ್ಕೆ ಕನ್ನಡವು ಎಂದಿಗೂ ಬಾರದು ಎಂದು ಅವರ ಭಾವನೆ. ಮರಾಠಿಯ ಮೋಹದಿಂದ ಸಾಮಾನ್ಯರು ಕುರುಡರಾಗಿದ್ದಾರೆ. ಮಾತೃಭಾಷೆಯ ಸ್ವರೂಪ - ಸತ್ವದ ಅರಿವು ಯಾರಿಗೂ ಇಲ್ಲವಾಗಿದೆ. ಅಂದಮೇಲೆ ನಮ್ಮ ಕನ್ನಡವು ಹೇಗೆ ಮುಂದೆ ಬಂದೀತು? ಸುಶಿಕ್ಷಿತರ ಬುದ್ಧಿಶಕ್ತಿಯು ಸಮಾಜದ ಹಿತಕ್ಕೆ ಮೀಸಲಾಗಿರಬೇಕಲ್ಲವೆ ? ಇಲ್ಲವಾದರೆ ನಾವು ಹುಟ್ಟಿ ಬಂದು ಸಾರ್ಥಕವೇನು ? ನಿನ್ನ ಭಾಷಾ ಪ್ರೇಮ ಮತ್ತು ಪ್ರಭುತ್ವದ ಉಪಯೋಗವಾಗುವಂತೆ ಒಂದು ಪುಸ್ತಕವನ್ನು ನೀನು ಏಕೆ ಬರೆಯಬಾರದು ?"

೧೯ನೆಯ ಶತಮಾನದ ಮಧ್ಯಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಇದ್ದ ಪರಿಸ್ಥಿತಿಯನ್ನು ಈ ಪತ್ರವು ಸ್ಪಷ್ಟಗೊಳಿಸುತ್ತದೆ. ೧೮೬೦-೭೦ರ ಮಧ್ಯದಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ತಮ್ಮ ಆತ್ಮೀಯ ಮಿತ್ರ ಚುರಮರಿ ಶೇಷಗಿರಿರಾಯರಿಗೆ, ಧಾರವಾಡದಿಂದ ಮುಂಬಯಿಗೆ ಬರೆದ ಪತ್ರ ಇದಾಗಿದೆ. ಚುರಮರಿ ಶೇಷಗಿರಿರಾಯರು , ಡೆಪ್ಯೂಟಿ ಚನ್ನಬಸಪ್ಪನವರು ಪುಣೆಯಲ್ಲಿ ಕೆಲವು ವರುಷ ಇದ್ದವರು. ಸಿವಿಲ್ ಇಂಜಿನಿಯರಿಂಗ್ ಅಭ್ಯಾಸ ಮುಗಿಸಿ ಶೇಷಗಿರಿರಾಯರು ಲೋಕೋಪಯೋಗಿ ಇಲಾಖೆಯಲ್ಲಿ ಓವರ್ಸಿಯರ್ ಆಗಿ ನೌಕರಿಗೆ ಸೇರಿದರು. ಅದೇ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಚನ್ನಬಸಪ್ಪನವರು ಭಾರವಾದ ಎದೆಯಿಂದ ಗೆಳೆಯನನ್ನು ಬೀಳ್ಕೊಟ್ಟಿದ್ದರು. ಮುಂದಿನ ದಿನಗಳಲ್ಲಿ ಚನ್ನಬಸಪ್ಪನವರು ಧಾರವಾಡ - ಬೆಳಗಾವಿಗಳನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿದರು. ಶೇಷಗಿರಿರಾಯರು ಲೋಕೋಪಯೋಗಿ ಇಲಾಖೆಯಲ್ಲಿಯೇ ಉತ್ತರ ಕರ್ನಾಟಕದ ಭಾಗದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಕೆಲಸ ಮಾಡಿದರು.

ವೃತ್ತಿಯಿಂದ ಇಂಜಿನೀಯರರಾದರೂ ಪ್ರವೃತ್ತಿಯಿಂದ ಸಂಗೀತವು ಅವರ ಹವ್ಯಾಸವಾಗಿತ್ತು. ತಂದೆ ಸಂಗೀತದ ರಾಮಚಂದ್ರರಾಯರೆಂದೇ ಪ್ರಸಿದ್ಧಿಯಾಗಿದ್ದರು.

ಮನೆಯಲ್ಲಿಯ ಸಂಗೀತದ ವಾತಾರವಣ ಜೊತೆಗೆ ಕನ್ನಡ ಕಾವ್ಯಗಳಲ್ಲಿ ಆಸಕ್ತಿ, ವಿಶೇಷವಾಗಿ ನಾದಲೋಲ ಲಕ್ಷ್ಮೀಶನ ಜೈಮಿನಿ ಭಾರತವು ಶೇಷಗಿರಿರಾಯರ ಮನಸೂರೆಗೊಂಡಿತ್ತು. ಉತ್ತರ ಕರ್ನಾಟಕದ ಅಂದಿನ ರಾಜಭಾಷೆ ಮರಾಠಿ. ಅದನ್ನೂ ಕಲಿತದ್ದಾಯಿತು. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಮುಂದಿನ ಅಭ್ಯಾಸಕ್ಕೆ ಪುಣೆ ನಗರವನ್ನುಸೇರಿದರು.

ಪರಿಸ್ಥಿತಿವಶರಾಗಿ ಕನ್ನಡದಿಂದ ದೂರವಾಗಿದ್ದರೂ ಕನ್ನಡಕಾವ್ಯ, ಪದ್ಯಗಳು ಅವರನ್ನು ಬಿಟ್ಟುಕೊಟ್ಟಿರಲಿಲ್ಲ. ಅವರ ಮಧುರ ಕಂಠಕ್ಕೆ ಮುಗ್ಧರಾದ ಅನೇಕ ಮರಾಠಿ ಮಿತ್ರರು ಕನ್ನಡ ಹಾಡುಗಳನ್ನು ಅವರಿಂದ ಕೇಳಬಯಸುತ್ತಿದ್ದರು. ಅರ್ಥವಾಗದೆ ಹೋದರೂ ಆ ನಾದಲೀಲೆಗೆ ಮಾರುಹೋಗುತ್ತಿದ್ದರು. ಮೊದಮೊದಲು ಒಬ್ಬಿಬ್ಬರ ಮುಂದೆ ಹಾಡಲು ಆರಂಭಿಸಿ ಆನಂತರ ಮಿತ್ರರ ಒತ್ತಾಯದಿಂದ ಕಾರ್ಯಕ್ರಮ ಗಳನ್ನೇ ಕೊಡತೊಡಗಿದರು.

ಚನ್ನಬಸಪ್ಪನವರ ಪತ್ರವು ಶೇಷಗಿರಿರಾಯರ ಮೇಲೆ ಪರಿಣಾಮ ಬೀರಿತು. ಸಾಹಿತ್ಯದಲ್ಲಿ ಈ ಮೊದಲೆ ಗತಿ ಇತ್ತು. ಜೈಮಿನಿ ಭಾರತದ ಪೀಠಿಕಾ ಸಂಧಿಯನ್ನು ವಿವಿಧ ವೃತ್ತಗಳಲ್ಲಿ ಮರಾಠಿಯಲ್ಲಿ ಭಾಷಾಂತರಿಸಿ, ವಿವಿಧ ವಿಜ್ಞಾನ, ವಿಸ್ತಾರ ಎಂಬ ಮಾಸ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆದರಿಂದಾಗಿ ಮರಾಠಿ ಕಾವ್ಯ ಪ್ರೇಮಿಗಳು ಕನ್ನಡ ಸಾಹಿತ್ಯವನ್ನು ಆದರದಿಂದ ನೋಡುವಂತೆ ಆಗಿತ್ತು. ಇದೀಗ ಸಂಸ್ಕೃತದಲ್ಲಿಯ ಅಭಿಜ್ಞಾನ ಶಾಕುಂತಲ ನಾಟಕವನ್ನು ಕನ್ನಡದಲ್ಲಿ ಭಾಷಾಂತರಿಸಲು ತೊಡಗಿದರು. ಮಧ್ಯ ಮಧ್ಯ ಸಂಗೀತದ ಮೆರಗನ್ನು ತುಂಬಿದರು. ಸ್ನೇಹಿತನ ಒತ್ತಾಯ, ಭಾಷಾ ಸೇವೆಯ ಹಂಬಲ, ಅವರನ್ನು ಮುನ್ನಡೆಸಿದವು. ನಾಟಕವು ಪೂರ್ಣವಾಯಿತು.

ಚುರುಮರಿಯವರ ಶಾಕುಂತಲ ನಾಟಕದ ವೈಶಿಷ್ಟ್ಯವೆಂದರೆ ಆ ತರದ ಸಂಗೀತ ನಾಟಕವು ಕನ್ನಡದಲ್ಲಿ ಮೊದಲನೆಯದು. ಅದು ೧೮೬೯ರಲ್ಲಿ ಪ್ರಕಟವಾಯಿತು. ಆನಂತರ ೧೯೩೪ರಲ್ಲಿ ಮಧ್ಯ ನಾಲ್ಕು ಸಲ ಮರು ಮುದ್ರಣಗೊಂಡಿತು. ಅದರಲ್ಲಿಯ ಬಗೆಬಗೆಯ ಹೊಸ ಧಾಟಿಯ ಪದಗಳು, ಅದರಲ್ಲಿಯ ದೇಸಿಯ ಬೆಡಗು, ಸಂಭಾಷಣೆಯಲ್ಲಿಯ ಸರಳತೆ, ಕನ್ನಡ ಶಾಕುಂತಲಕ್ಕೆ ಅಪೂರ್ವ ಜನಪ್ರಿಯತೆಯನ್ನು ತಂದುಕೊಟ್ಟಿತು. ಅಲ್ಲಿಯ ವಿದೂಷಕರ ಮಾತುಗಳನ್ನು ಓದಿ ಜನಸಾಮಾನ್ಯರೂ ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದರು. ಕನ್ನಡ ಭಾಷೆಯ ಸಹಜ ಸೊಬಗು, ಅಭಿಮಾನಿಗಳನ್ನು ಮುಗ್ಧಗೊಳಿಸಿತು ಎನ್ನುತ್ತಾರೆ ಅವರ ಕಿರು ಚರಿತ್ರೆಯನ್ನು ಬರೆದ ಹಿರಿಯ ಸಾಹಿತಿ ವೆಂಕಟೇಶ ಸಾಂಗಲಿ ಅವರು.

ಕನ್ನಡ ಶಾಕುಂತಲದ ಲೋಕಪ್ರಿಯತೆ ಉತ್ಪ್ರೇಕ್ಷೆಯಾಗಿರಲಿಲ್ಲ. ಆದರೆ ಸಂಗೀತ ಗುಣಗಳು ಮರಾಠಿ 'ಶಾಕುಂತಲ' ವನ್ನೂ ಋಣಿಯನ್ನಾಗಿ ಮಾಡಿದ್ದವು.

ಬೆಳಗಾವಿ ಜಿಲ್ಲೆಯ ಗುರ್ಲಹೊಸೂರಿನವರಾಗಿದ್ದ ಮರಾಠಿ ನಾಟಕ ಪಿತಾಮಹ ಅಣ್ಣಾಸಾಹೇಬ ಕಿರ್ಲೋಸ್ಕರರು ಕನ್ನಡ ಶಾಕುಂತಲದಲ್ಲಿಯ ಹಲವು ಧಾಟಿ, ಮಟ್ಟುಗಳನ್ನು ತಮ್ಮ ಮರಾಠಿ ಶಾಕುಂತಲದಲ್ಲಿ ಬಳಸಿಕೊಂಡರು.

ಶೇಷಗಿರಿರಾಯರು ನಾಟಕವನ್ನು ತಮ್ಮ ಸ್ನೇಹಿತ, ಗುರು ಡೆಪ್ಯೂಟಿ ಚೆನ್ನಬಸಪ್ಪನವರಿಗೆ ಇಂತು ಅರ್ಪಿಸಿದ್ದಾರೆ.

''ಬಡ ಕವಿಗೆ ಪುಟ್ಟಿದ ಈ ಕುರೂಪ ಕೃತಿಗನ್ನಿಕೆಯನ್ನು ಜಾಣರೊಳ್ ಅಡಿಗಳ ದಾಸಿಯಾಗಿ ಬದುಕಲ್ ತಮ್ಮ ಶಕುಂತಲವನ್ನು ಕವಿ ಕಳುಹಿಸಿದರು.

ಬಡವರ ವಿದ್ಯೆಗಾಗಿ ತನು-ಮನ-ಧನದಿಂದ ಸಾಹಸಂ ಬಡುತಿಹ ಧೀರ ಚೆನ್ನಬಸವೇಶನ (ಚೆನ್ನಬಸಪ್ಪನವರ) ದಿವ್ಯ ಪಾದ ಭೂಷಣಕ್ಕೆ ಕಡು ಗುರುಭಕ್ತಿಯಿಂದ''

✤ ✤ ✤ ✤

ಅಧ್ಯಾಯ -೬

• ಕನ್ನಡದಲ್ಲಿ ಪಠ್ಯಪುಸ್ತಕಗಳು

ಶಿಕ್ಷಣದ ದೃಷ್ಟಿಯಿಂದ ಅದೊಂದು ಸಂಧಿಕಾಲವಾಗಿತ್ತು. ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ದಕ್ಷಿಣ ಮಹಾರಾಷ್ಟ್ರವೆಂದು ಕರೆಯುವ ನಾಲ್ಕು ಜಿಲ್ಲೆಗಳ ಜನರ ಭಾಷೆಯು ಕನ್ನಡ ಎಂಬುದನ್ನು ಆಳುವವರು ಒಪ್ಪಿದ್ದರು. ಆದರೆ ಪೇಶ್ವೆಯವರ ಕಾಲದಲ್ಲಿ ರಾಜಭಾಷೆಯಾಗಿ ಬೇರೂರಿದ್ದ ಮರಾಠಿಯನ್ನು ಸಡಿಲಿಸುವುದು ಆಗಿರಲಿಲ್ಲ. ಅದರಿಂದಾಗಿ ಈ ಭಾಗದ ವಿದ್ಯಾ ಪ್ರಸಾರವು ಕುಂಠಿತವಾಗುತ್ತಿದೆ ಎಂದು ಅಂದಿನ ಮುಂಬಯಿ ಪ್ರಾಂತದ ಗವರ್ನರ್ ಎಲ್‌ಫಿನ್‌ಸ್ಟನ್ ಕಂಡುಕೊಂಡಿದ್ದನು. ಅವನು ದೇಶ ಭಾಷೆಯ ವಿದ್ಯೆಗೆ ಅಧಿಕ ಒತ್ತು ಕೊಟ್ಟ ಮೇಲೆ ಇಲ್ಲಿಯ ಶಿಕ್ಷಣ ಕ್ರಮದಲ್ಲಿ ಬದಲಾವಣೆಯ ಗಾಳಿ ಬೀಸಹತ್ತಿತು.

ದೇಶೀಯ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದು , ಶಿಕ್ಷಣದ ಕ್ರಮವನ್ನು ಸುಧಾರಿಸುವುದು ಮೊದಲ ಹೆಜ್ಜೆಯಾಗಿದ್ದುವು. ಆದರೆ ಸಮಾಜದಲ್ಲಿ ವಿದ್ಯಾರ್ಜನೆಯ ಆಸಕ್ತಿ ಮೂಡದೆ ಇದು ಸಾಧ್ಯವಿರಲಿಲ್ಲ. ಕನ್ನಡದಲ್ಲಿ ಪರಿಣಿತರಾದ, ಶಿಕ್ಷಣದಲ್ಲಿ ಅನುಭವವುಳ್ಳ ಖಾಸಗೀ ಶಿಕ್ಷಕರನ್ನು ಸರಕಾರಿ ಶಾಲೆಗಳಲ್ಲಿ ನಿಯಮಿಸಿಕೊಂಡರೆ ಈ ಸಮಸ್ಯೆ ಕೆಲ ಮಟ್ಟಿಗೆ ಸುಧಾರಿಸಬಹುದಾಗಿತ್ತು. ಈ ಯೋಜನೆಯಲ್ಲಿ ಖಾಸಗೀ ಶಾಲೆಯಿಂದ ಸರಕಾರೀ ಶಾಲೆಯ ನೌಕರಿಗೆ ಸೇರಿದವರಲ್ಲಿ ಗಂಗಾಧರ ಮಡಿವಾಳೇಶ್ವರ ತುರುಮರಿಯವರು ಒಬ್ಬರಾಗಿದ್ದರು.

ಗಂಗಾಧರ ಮಡಿವಾಳೇಶ್ವರ ತುರಮರಿ (ಕ್ರಿ.ಶ. ೧೮೨೬-೧೮೬೬) :

ತುರಮರಿ ಎಂಬುದು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಂದು ಚಿಕ್ಕ ಹಳ್ಳಿ. ಪ್ರಾಥಮಿಕ ಶಿಕ್ಷಣವು ಅಂದಿನ ದಿನಗಳಲ್ಲಿ ರೂಢಿಯಲ್ಲಿ ಇದ್ದಂತೆ ಮರಾಠಿಯಲ್ಲೆ ಆಯಿತು. ಮುಂದೆ ಅಥಣಿಯ ಹಿರೇಮಠದ ಮಡಿವಾಳ ಸ್ವಾಮಿಗಳಲ್ಲಿ ಕನ್ನಡ, ಸಂಸ್ಕೃತಗಳ ಅಭ್ಯಾಸವನ್ನು ಪಡೆದರು. ಬಸವ ಪುರಾಣ, ರಾಜಶೇಖರ ವಿಳಾಸ, ಜೈಮಿನಿ ಭಾರತ ಮೊದಲಾದ ಕಾವ್ಯಗಳನ್ನು ಮುಖೋದ್ಗತವಾಗಿ ಹಾಡಬಲ್ಲವರಾಗಿದ್ದರು. ಅರ್ಥವತ್ತಾಗಿ ಹಾಡುತ್ತಿದ್ದರೆ ಸ್ವಾಮಿಗಳು ಸಹಿತವಾಗಿ ಇದುರಿನವರು ತಲೆದೂಗುತ್ತಿದ್ದರು.

ಪ್ರಾಯಕ್ಕೆ ಬಂದಾಗ ಧರ್ಮ ನೀತಿ ಪ್ರಸಾರದ ಸಾಮರ್ಥ್ಯವನ್ನು ಪಡೆದ ಬಳಿಕ ಅಲ್ಲಿಯೇ ಒಂದು 'ಸಾಲಿಮಠ'ವನ್ನು ತೆರೆದರು. ಅಂದಿನ ದಿನಗಳಲ್ಲಿ ಇಂಥ ಗ್ರಾಮೀಣ ಶಾಲೆಗಳು (ಗಾವಠೀಶಾಲೆಗಳು) ವಿದ್ಯಾವಂತರಿಗೆ ಉದ್ಯೋಗದ

ಸಾಧನಗಳಾಗಿದ್ದವು. ತುರಮರಿಯವರ ಶಾಲೆಯಲ್ಲಿ ಇಳಿವಯಸ್ಸಿನವರಾದಿಯಾಗಿ ಗ್ರಾಮದ ಎಲ್ಲರೂ ಸೇರಿದ್ದರು. ಮುಂದೆ ಐದಾರು ವರುಷಗಳಲ್ಲಿ ಅವರು ಸರಕಾರೀ ಶಿಕ್ಷಕರಾದರು.

ತುರಮರಿಯವರು ಸರಕಾರಿ ಶಾಲೆಯ ಶಿಕ್ಷಕರಾದಾಗ ಇಲ್ಲಿಯ ಶಾಲೆಗಳ ಪರಿಸ್ಥಿತಿ ಹೇಗಿತ್ತೆಂದು, ಶಿಕ್ಷಣ ಇಲಾಖೆಯ ಅಧಿಕಾರಿಗಳ ಈ ಕೆಳಗಿನ ಎರಡು ವರದಿಗಳಿಂದ ಊಹಿಸಬಹುದಾಗಿದೆ.

'ಕೆನರೀಜ್ ಶಾಲೆಗಳ ಸಂಖ್ಯೆ ತೀರ ಅಲ್ಪ. ಅವುಗಳಿಗಾಗಿ ಪಠ್ಯ ಪುಸ್ತಕಗಳ ವ್ಯವಸ್ಥೆಯನ್ನು ಮದ್ರಾಸ್ ಪ್ರಾಂತಕ್ಕೆ ವಹಿಸಿಕೊಡಬೇಕೆಂಬುದು ನನ್ನ ಅಭಿಪ್ರಾಯ ವಾಗಿದೆ. ಕನ್ನಡ ಪಠ್ಯ ಪುಸ್ತಕಗಳನ್ನು ತಯಾರಿಸುವ ಜವಾಬುದಾರಿಯು ಒಂದು ವೇಳೆ ನನ್ನ ಮೇಲೆ ಬಿದ್ದರೆ ನಾನಂತೂ ಮರಾಠಿ ಪುಸ್ತಕಗಳ ಮೊರೆ ಹೋಗುತ್ತೇನೆ'' ಎಂಬುದಾಗಿ ಒಬ್ಬ ಡಿ.ಪಿ.ಆಯ್. ವರದಿ ಮಾಡಿದ್ದಾನೆ.

'' ಈ ಭಾಗದ ದೇಶಭಾಷೆಯ ಉಪಾಧ್ಯಾಯರಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆ. ಇಂಗ್ಲಿಷ್ ಉಪಾಧ್ಯಾಯರು ಮತ್ತು ಡೆಪ್ಯೂಟಿ ಇನ್ಸಪೆಕ್ಟರರಲ್ಲಿಯಂತೂ ಅವರು ಇಲ್ಲವೇ ಇಲ್ಲ. ಉತ್ತರ ಭಾಗದಲ್ಲಿ ಗುಜರಾತಿ, ಮರಾಠಿ ಭಾಷೆಗಳ ಪ್ರಚಾರ ಮತ್ತು ಘೋಷಣೆಗಳು ನಡೆದಂತೆ ಈ ಜಿಲ್ಲೆಗಳಲ್ಲಿ ದೇಶಭಾಷೆಯಾದ ಕನ್ನಡದ ಬಗ್ಗೆ ನಡೆದಿಲ್ಲ'' ಎಂಬುದು ಇನ್ನೊಂದು ವರದಿ.

ತುರಮರಿಯವರು ಸರಕಾರೀ ಶಿಕ್ಷಕರಾಗಿ ಬಂದಾಗ ಅವರಿಗೆ ತುಂಬ ಹುಮ್ಮಸ್ಸು. ಖಾಸಗೀ ಶಾಲೆಯಂತೆ ತಮ್ಮ ಮಕ್ಕಳನ್ನು ಪಾಠಕ್ಕೆ ಕಳಿಸುವಂತೆ ತಂದೆ ತಾಯಂದಿರನ್ನು ಕಾಡಿ ಬೇಡುವ ಪ್ರಸಂಗವಿರಲಿಲ್ಲ. ಇಲ್ಲಿ ಮಕ್ಕಳ ಸಂಖ್ಯೆಯು ಉತ್ತೇಜನಕಾರಿಯಾಗಿತ್ತು. ಅವರು ಹೇಳುವ ಕನ್ನಡದಲ್ಲಿಯ ಕಥೆಗಳನ್ನು ಕವಿತೆಗಳನ್ನು ಮಕ್ಕಳು ಆಸಕ್ತಿಯಿಂದ ಕೇಳುತ್ತಿದ್ದರು. ಮರಾಠಿಮಯವಾಗಿದ್ದ ದಿನಗಳಲ್ಲಿ ಮಾತೃಭಾಷೆಯ ಕನ್ನಡ ಉಕ್ತಿಗಳು ಅಧಿಕ ಆತ್ಮೀಯವೆನಿಸಿದವು. ಅವರ ಹೆಸರು ಕೇಳಿಯೇ ಹಲವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲಾರಂಭಿಸಿದರು.

ಹತ್ತು ಹನ್ನೆರಡು ವರುಷ ಶಿಕ್ಷಕರಾಗಿದ್ದು ಕೊಂಡು ಸ್ವ - ಪ್ರಯತ್ನದಿಂದ ಇಂಗ್ಲೀಷನ್ನು ಕಲಿತರು. ಹೀಗಾಗಿ ಅವರು ಸಂಸ್ಕೃತ, ಕನ್ನಡ, ಮರಾಠಿ ಮತ್ತು ಇಂಗ್ಲಿಷ್ ನಾಲ್ಕುಭಾಷೆಗಳಲ್ಲಿ ಪರಿಣತಿಯನ್ನು ಹೊಂದಿದ್ದರು. ೧೮೬೫ರ ಹೊತ್ತಿಗೆ ಸರಕಾರವು ಅವರನ್ನು ಭಾಷಾಂತರಕಾರರೆಂದು ನೇಮಕ ಮಾಡಿತು. ಆ ಅವಧಿಯಲ್ಲಿ ಅವರಿಂದ ಮೇಲ್ಪಟ್ಟದ ಹಲವು ಪಠ್ಯ ಪುಸ್ತಕಗಳು ಪ್ರಕಟವಾದವು. ವಿದ್ಯಾ ಇಲಾಖೆಗಾಗಿ ಅವರು ರಚಿಸಿದ ಕೆಲವು ಪಠ್ಯ ಪುಸ್ತಕಗಳಲ್ಲಿ 'ಕನ್ನಡ ಕವಿತಾ ಪದ್ಧತಿ' 'ಕವಿತಾ ಸಂಗ್ರಹ' ಎಬ ಎರಡು ಸಂಕಲನಗಳು ಬಹುಕಾಲ ಪಠ್ಯ ಪುಸ್ತಕಗಳಾಗಿದ್ದವು. ರಾಜಶೇಖರ ವಿಳಾಸ ಮತ್ತು ಕೈವಲ್ಯ ಪದ್ಧತಿಯ ಟೀಕೆಗಳನ್ನೂ ಅವರು ಬರೆದರು. ಮುಖ್ಯವಾಗಿ ಕನ್ನಡ ಕಾವ್ಯ

ಸಿರಿಯನ್ನು ಜೀವಂತವಾಗಿ ಉಳಿಸಿದರು. ಪಾಂಡಿತ್ಯವೆಂದರೆ ವೇದವಿದ್ಯೆ, ಪಂಡಿರತರೆಂದರೆ ಸಂಸ್ಕೃತ ವಿಶಾರದರು ಎಂಬ ನಂಬಿಕೆಯು ಬೇರೂರಿದ್ದ ಕಾಲದಲ್ಲಿ ಅವರು ಕಷ್ಟ ನಿಷ್ಠೂರಗಳನ್ನು ಉಂಡು ಕನ್ನಡ ಭಾಷೆಯ ಸತ್ಯ ಸೌಂದರ್ಯದ ಕಡೆಗೆ ಸಮಾಜದ ಲಕ್ಷ್ಯವನ್ನು ಎಳೆದರು.

ಹೊಸಗನ್ನಡ ಸಾಹಿತ್ಯದಲ್ಲಿ ತುರಮರಿಯವರ ಹೆಸರು ಶಾಶ್ವತವಾಗಿ ಉಳಿಯುವುದಕ್ಕೆ ಕಾರಣ ಅವರ 'ಬಾಣ ಕಾದಂಬರಿ'ಯ ಅನುವಾದವೇ ಆಗಿದೆ. ಮೂಲ ಕೃತಿಯಲ್ಲ ಜಡವೆನಿಸಿದ ವರ್ಣನಾಭಾಗಗಳನ್ನು ಸಂಕ್ಷೇಪಿಸಿ - ರಸ-ಸಾರವನ್ನು ಕನ್ನಡದಲ್ಲಿ ನೀಡಿದ ಶ್ರೇಯಸ್ಸು ಕಾದಂಬರಿಗಿದೆ. ಕಾದಂಬರಿಯು ಹೊಸಗನ್ನಡದ ಭಾಷೆಗೆ, ಶೈಲಿಗೆ, ಡೌಲಿಗೆ ಅತ್ಯಂತ ಅಪರೂಪದ ಮಾದರಿಯಾಯಿತು. ಆನಂತರದ ಪ್ರತಿಯೊಬ್ಬ ಕನ್ನಡ ಸಾಹಿತಿಯು ಈ ಕಾದಂಬರಿಯ ಪ್ರಭಾವದಿಂದ ಹೊರಗೆ ಉಳಿಯಲು ಸಾಧ್ಯವಾಗಲಿಲ್ಲ.

ಗಂಗಾಧರ ಮಾಡವಾಳೇಶ್ವರ ತುರಮುರಿಯವರು ತಮ್ಮ ೫೦ನೆಯ ವಯಸ್ಸಿನಲ್ಲಿ ಕ್ರಿ.ಶ. ೧೮೭೭ರಲ್ಲಿ ಮರಣ ಹೊಂದಿದರು.

✤ ✤ ✤ ✤

ಅಧ್ಯಾಯ -೭

• ಕನ್ನಡ ಸಾಹಿತ್ಯ ಚರಿತ್ರೆಯ ಪುನರುಜ್ಜೀವನ

ಮೈಸೂರು ಸಂಸ್ಥಾನವು ಆಗ ಬ್ರಿಟೀಷರ ನೇರ ಆಡಳಿತದಲ್ಲಿ ಇದ್ದಿತು. ಅಲ್ಲಿಯೂ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ನೋಡಿಕೊಳ್ಳಲು ಕ್ರಿ.ಶ. ೧೮೫೮ರಲ್ಲಿ 'ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್' ಎಂಬ ಒಂದು ಪ್ರತ್ಯೇಕ ಇಲಾಖೆಯು ಅಸ್ತಿತ್ವದಲ್ಲಿ ಬಂದಿತು. ಅದೇ ವರುಷ ಬೆಂಗಳೂರಿನಲ್ಲಿ ಸರಕಾರವು ಸೆಂಟ್ರಲ್ ಹೈಸ್ಕೂಲನ್ನು ಪ್ರಾರಂಭಿಸಿತು. ಅದುವರೆಗೆ ಮಿಶನರಿಗಳು ನಡೆಸುತ್ತಿದ್ದ ಎಲ್ಲ ಶಾಲೆಗಳು ಈ ಹೊಸ ಶಿಕ್ಷಣ ಖಾತೆಯ ಅಧೀನಕ್ಕೆ ಬಂದುವು.

ಕ್ರಿ.ಶ. ೧೮೬೧ರಲ್ಲಿ ಮೈಸೂರು ಸಂಸ್ಥಾನದ ಮೊತ್ತ ಮೊದಲಿನ ಶಿಕ್ಷಣ ತರಬೇತಿ ಕೇಂದ್ರದ ಸ್ಥಾಪನೆ ಆಯಿತು. ಶಿಕ್ಷಣೋದ್ಯಮವು ಭರದಿಂದ ಪ್ರಗತಿಯನ್ನು ಹೊಂದತೊಡಗಿತು. ಮೈಸೂರಿನ ಅಧಿಕಾರಿಗಳು, ಮಿಶನರಿಗಳು ಮತ್ತು ಸ್ವತಃ ಮಹಾರಾಜರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಆಸ್ಥೆಯನ್ನು ವಹಿಸಿದವರಾಗಿದ್ದರು. ಈ ಹಂತದಲ್ಲಿ ಕನ್ನಡ ನಿಷ್ಠೆಯೇ ಮೂರ್ತಿವೆತ್ತಂತೆ ಇದ್ದ ಬಿ ಲೂಯಿ ರೈಸ ಎಂಬ ವ್ಯಕ್ತಿ ದೊರೆತು ಕನ್ನಡ ಭಾಷೆ, ಚರಿತ್ರೆ, ಸಾಹಿತ್ಯಗಳಿಗೆ ಒಂದು ಹೊಸ ಆಯಾಮು ದೊರೆಯುವಂತಾಯಿತು.

ಬೆಂಜಮಿನ್ ಲೂಯಿ ರೈಸ್

ವಿದೇಶೀಯನಾದರೂ ಲೂಯಿ ರೈಸ್ ಕನ್ನಡ ನಾಡಿನಲ್ಲೆ ಹುಟ್ಟಿದವನು. ಬಾಲ್ಯದಲ್ಲೆ ಕ್ನಡವನ್ನು ಕೇಳಿ ಬಲ್ಲವನಾಗಿದ್ದನು. ವಿದ್ಯಾಭ್ಯಾಸವು ಇಂಗ್ಲೆಂಡಿನ ಹ್ಯಾರ್ರೋದಲ್ಲಿ ಆಯಿತು. ಅಲ್ಲಿಂದ ಬಿ.ಎ. ಮುಗಿಸಿಕೊಂಡು, ೧೮೬೦ರಲ್ಲಿ ಬೆಂಗಳೂರು ಸೆಂಟ್ರಲ್ ಹೈಸ್ಕೂಲಿನ ಮುಖ್ಯಾಧ್ಯಾಪಕನೆಂದು ನೇಮಕನಾಗಿ ಬಂಧನು. ಅಧಿಕಾರ ವಹಿಸಿದ ಮರುವರುಷ, ತಾನೂ ಒಬ್ಬ ವಿದ್ಯಾರ್ಥಿಯಂತೆ ಕನ್ನಡ ಹೈಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತು ಪಾಸಾದನು.

ಮುಂದೆ ಮೈಸೂರು, ಕೊಡಗುಗಳ ಶಾಲಾ ಇನ್‌ಸ್ಪೆಕ್ಟರನಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದಾಗ ಕನ್ನಡ ನಾಡು ನುಡಿ ಮತ್ತು ಅದರ ಸಂಸ್ಕೃತಿ -ಇವುಗಳ ನಿಕಟ ಪರಿಚಯತವಾಯಿತು. ಆತನ ಮುಂದಿನ ಎಲ್ಲ ಕಾರ್ಯಗಳಿಗೆ ಇದುವೆ ತಳಹದಿಯಾಯಿತು. ಆತನ ಕನ್ನಡ ನಿಷ್ಠೆ ಬೆಳೆದದ್ದು ಈ ಕಾಲದಲ್ಲಿಯೇ. ಅವನ ಮುಂದಿನ ಚಟುಟಿಕೆಗಳು ಶಿಕ್ಷಣ, ಆಡಳಿತ ಮತ್ತು ಶಾಸನ ಈ ಮೂರು ರಂಗಗಳಲ್ಲಿ ಕಾಣಿಸಿಕೊಂಡವು.

ಶಾಲಾ ಇನ್‌ಸ್ಪೆಕ್ಷನ್ನಿಗೆ ಬೇರೆ ನಗರ ಗ್ರಾಮಗಳನ್ನು ಸುತ್ತುತ್ತಿದ್ದ ಕಾಲದಲ್ಲಿ ಶಾಸನಗಳು, ಹಳೆ ಹಸ್ತ ಪ್ರತಿಗಳು ರೈಸನ ಗಮನವನ್ನು ಸೆಳೆದವು. ಜೊತೆಗೆ ಕಮೀಶನರ್ ಬೌರಿಂಗನ ಆದೇಶದ ಮೇರೆಗೆ ಮೇಜರ್ ಡಿಕ್ಸನ್ ಎಂಬುವನು ಸಂಗ್ರಹಿಸಿದ ಅನೇಕ ಶಾಸನಗಳ ಪ್ರತಿಗಳೂ ದೊರಕಿದವು. ಅವುಗಳಿಗೆ ತಾನು ಸಂಗ್ರಹಿಸಿದವುಗಳನ್ನು ಸೇರಿಸಿ ಮೈಸೂರು ಶಾಸನ ಸಂಪುಟವನ್ನು ಸಿದ್ಧಪಡಿಸಿದನು. ಇದು ಕೇಂದ್ರ ಸರಕಾರದ ಯೋಜನೆಯಾಗಿದ್ದರಿಂದ ಅವರಿಂದಲೇ ಅದು ೧೮೭೯ರಲ್ಲಿ ಪ್ರಕಟವಾಯಿತು. ಕರ್ನಾಟದ ಶಾಸನಗಳ ಕುರಿತು ಪ್ರತ್ಯೇಕವಾಗಿ ಗ್ರಂಥರೂಪದಲ್ಲಿ ಬಂದ ಮೊದಲ ಸಂಪುಟ ಇದುವೆ ಆಗಿದೆ.

ಕ್ರಿ.ಶ. ೧೮೮೫ರಲ್ಲಿ ಶಿಕ್ಷಣ ಇಲಾಖೆಯ ಜೊತೆಗೆ ಹೊಸದಾಗಿ ಆರಂಭವಾದ ಪುರಾತತ್ವ ವಿಭಾಗದ ಕೆಲಸವನ್ನೂ ರೈಸನು ನೋಡಿಕೊಳ್ಳಬೇಕಾಯಿತು. ತನ್ನ ಆಡಳಿತ ಕ್ಷೇತ್ರದಲ್ಲಿರುವ ಜಿಲ್ಲೆಗಳಲ್ಲಿಯ ಎಲ್ಲ ಶಾಸನಗಳನ್ನು ಕ್ರಮಬದ್ಧವಾಗಿ ಪ್ರಕಟಿಸಬೇಕೆಂದು ರೈಸನು 'ಎಪಿಗ್ರಾಫಿಯಾ ಕರ್ನಾಟಕಾ'ದ ಹೊಳಹನ್ನು ಹಾಕಿಕೊಂಡನು. ಕೊಡಗು ಶಾಸನಗಳ ಸಂಪುಟವನ್ನು ಮೊದಲನೆಯದಾಗಿ ಹೊರತಂದನು. ಮುಂದಿನ ದಿನಗಳಲ್ಲಿ ಶಿಕ್ಷಣ ಇಲಾಖೆಯಿಂದ ಹೊರ ಬಂದು ಅಂದಿನ ದಿವಾನರಾಗಿದ್ದ ಕೆ. ಶೇಷಾದ್ರಿ ಐಯ್ಯರ ಅವರ ಆಸ್ಥೆಯಿಂದಾಗಿ ಪುರಾತತ್ವ ಇಲಾಖೆಯ ಸಂಪೂರ್ಣ ಅಧಿಕಾರವನ್ನು ವಹಿಸಿಕೊಂಡನು.

ಜಿಲ್ಲೆಗೆ ಒಂದರಂತೆ ಒಟ್ಟು ಹನ್ನೆರಡು ಶಾಸನ ಸಂಪುಟಗಳನ್ನು ಪ್ರಕಟಿಸಿದನು. ಅವುಗಳಲ್ಲಿ ಒಂಭತ್ತು ಸಾವಿರದಷ್ಟು ಶಾಸನಗಳಿವೆ. ಅದಕ್ಕೂ ಮೊದಲಿಗೆ ದೊರೆತವುಗಳು ಕೆಲವು ನೂರು ಮಾತ್ರ. ಎಂದರೆ ಆತನ ಕೆಲಸದ ಅಗಾಧತೆ ಗೊತ್ತಾಗುತ್ತದೆ. ಸಾವಿರಾರು ಶಾಸನಗಳನ್ನು ಹುಡುಕಿ ತೆಗೆದುದೇ ಒಂದು ಮಹಾ ಸಾಧನೆಯಾಗಿದೆ. ಬೇರಾವ ಭಾರತೀಯ ಸಂಶೋಧಕರೂ ಇವರಷ್ಟು ಶಾಸನಗಳನ್ನು ಕಂಡು ಹಿಡಿದಿಲ್ಲ. ಜೊತೆಗೆ ಅವುಗಳ ಅನುವಾದ, ಅವುಗಳಿಂದ ಹೊರಡುವ ರಾಜಮನೆತನಗಳ ಚರಿತ್ರೆ, ಇತರ ಐತಿಹಾಸಿಕ ಘಟನೆಗಳು ಮತ್ತು ಸಾಂಸ್ಕೃತಿಕ ಅಂಶಗಳು - ಇವನ್ನು ರೈಸನು ಪರಾಮರ್ಶಿಸಿದ್ದಾನೆ. ಮೆಕಂಝಿ, ಬುಕನನ್ ಮತ್ತು ಡಿಕ್ಸನ್‌ರು ಬರಿಯ ಶಾಸನಗಳನ್ನು ಸಂಗ್ರಹಿಸಿದರು. ಎಲಿಯಟ್‌ನಿಗೆ ಔತ್ತರೇಯ ಕನ್ನಡ ನಾಡಿನ ಶಾನಸಗಳಷ್ಟೆ ದೊರೆತಿದ್ದುವಲ್ಲದೆ, ಆರಂಭದಿಂದ ಈಚಿನ ವರೆಗಿನ ಸಮಗ್ರ ಇತಿಹಾಸವನ್ನು ನಿರೂಪಿಸುವುದಾಗಿದ್ದಿಲ್ಲ. ರೈಸ್ ತನ್ನ ಸಾಮಗ್ರಿಯ ಬಲದಿಂದ ಕರ್ನಾಟಕದ ಸಮಗ್ರ ಹಾಗೂ ಸರ್ವಾಂಗೀಣ ಇತಿಹಾಸವನ್ನು ರಚಿಸಿದ್ದಾನೆ.

'ಬಿಬ್ಲಿಯಾಥಿಕಾ ಕರ್ನಾಟಕಾ' ಮಾಲೆಯನ್ನು ಆರಂಭಿಸಿ ಕನ್ನಡದ ಹಲವು ಅಪೂರ್ವ ಕೃತಿಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ರೈಸನದಾಗಿದೆ. ಕನ್ನಡ ಸಾಹಿತ್ಯದ ಪ್ರಪ್ರಥಮ ಗ್ರಂಥವಾದ 'ಕವಿರಾಜಮಾರ್ಗ'ವು ಮೊದಲ ಸಲ ಈ ಮಾಲಿಕೆಯಲ್ಲಿ

ಬೆಳಕು ಕಂಡಿತು. ಸಂಸ್ಥಾನದ ವಿವಿಧ ಊರುಗಳಲ್ಲಿ ದೊರೆತ ಹಳಗನ್ನಡ ಹಸ್ತ ಪತ್ರಿಕೆಗಳನ್ನು ಅವನು ಸಂಗ್ರಹಿಸುತ್ತಲೇ ಇದ್ದನು ಮತ್ತು ಅವುಗಳಲ್ಲಿ ಕೆಲವನ್ನು ಮಾತ್ರ ಅಂದರೆ ಭಾಷಾಭೂಷಣ, ಶಬ್ದಾನುಶಾಸನ, ಪಂಪರಾಮಾಯಣ ಮತ್ತು ಪಂಪ ಭಾರತಗಳನ್ನು ಆಧುನಿಕ ರೀತಿಯಲ್ಲಿ ಪರಿಷ್ಕರಿಸಿ, ಪೀಠಿಕೆ ಟಿಪ್ಪಣಿಗಳೊಡನೆ ಪ್ರಕಟಿಸಿದನು. ಆತನ ಅಧಿಕ ಸಮಯವು ಶಾಸನ ಸಂಪುಟಗಳ ರಚನೆ, ಪ್ರಕಟಣೆಗಳಲ್ಲಿ ವಿನಿಯೋಗವಾಗುತ್ತಿತ್ತು. ಆದ್ದರಿಂದ ಬಿಬ್ಲಿಯಾಥಿಕಾ ಕರ್ನಾಟಿಕಾ ಮಾಲಿಕೆಯಲ್ಲಿ ಬಹಳಷ್ಟು ಕೃತಿಗಳನ್ನು ಪ್ರಕಟಿಸುವುದು ಆತನಿಂದ ಸಾಧ್ಯವಾಗಲಿಲ್ಲ.

ಆದರೆ ರೈಸನ ಬಹುದೊಡ್ಡ ಕೊಡುಗೆ ಎಂದರೆ ಆರ್. ನರಸಿಂಹಾಚಾರರನ್ನು ಕಂಡು ಹಿಡಿದು ತನ್ನ ಇಲಾಖೆಯಲ್ಲಿ ಸೇರಿಕೊಂಡುದೇ ಆಗಿದೆ. ಬಿಬ್ಲಿಯಾಥಿಕಾ ಕರ್ನಾಟಿಕಾ ಮಾಲೆಯಲ್ಲಿ ತಾನು ಮಾಡಲಾಗದ ಕೆಲಸವನ್ನು ಆಚಾರ್ಯರಿಂದ ಮಾಡಿಸಿದನು. ಶಾಸನ ಇಲಾಖೆಯಲ್ಲಿ ಉಳಿಸಿಕೊಂಡೇ ನೂರಾರು ಕನ್ನಡ ಕಾವ್ಯಗಳ ಹಸ್ತ ಪ್ರತಿಗಳ್ನು 'ಕಣ್ಣಲ್ಲಿ ಕಣ್ಣಿಟ್ಟು ಓದಿ ಕರ್ನಾಟಕ ಕವಿಚರಿತೆಯ ಮೂರು ಬೃಹತ್ ಸಂಪುಟಗಳನ್ನು ಸಂಪಾದಿಸಿ ಪ್ರಕಟಿಸಿದರು. ಅದರಿಂದಾಗಿ ಕನ್ನಡ ಸಾಹಿತ್ಯದ ಶ್ರೀಮಂತ ಭವ್ಯ ಪರಂಪರೆ ಗೊತ್ತಾಯಿತಲ್ಲದೆ ಹಳಗನ್ನಡ ಸಾಹಿತ್ಯದ ಪುನರುಜ್ಜೀವನಕ್ಕೂ ಕಾರಣವಾಯಿತು. ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ನಿವೃತ್ತರಾಗಿ ಸ್ವದೇಶದಲ್ಲಿ ವಿಶ್ರಾಂತಿಯನ್ನು ಹೊಂದುತ್ತಿದ್ದಾಗಲೂ ಕವಿಚರಿತೆಯ ಸಂಪುಟಗಳನ್ನು ಇಂಗ್ಲಿಷಿಗೆ ಅನುವಾದಿಸಬೇಕು ಎಂಬ ಅಪೇಕ್ಷೆಯನ್ನು ತೋರುತ್ತಿದ್ದುದು ರೈಸನ ಶಾಲೀನತೆ ಹಾಗೂ ಕನ್ನಡ ವಿಷಯದ ಕಳಕಳಿಯ ದ್ಯೋತಕವಾಗಿದೆ.

✤ ✤ ✤ ✤

ಅಧ್ಯಾಯ -೮

• ಕನ್ನಡ ನಾಡಿನ ಚರಿತ್ರೆಯ ಹೊಳಪುಗಳು

ನಾಡಿನ ಚರಿತ್ರೆಯನ್ನು ಸಾಧಾರಪೂರ್ವಕವಾಗಿ ಮೊಟ್ಟ ಮೊದಲಿಗೆ ಹೇಳಿದವರು ಮೈಸೂರು ಕಡೆಗೆ ಲೂಯಿ ರೈಸ್ ಆದರೆ, ಉತ್ತರ ಕರ್ನಾಟಕದಲ್ಲಿ ಫ್ಲೀಟ್‌ನ ಹೆಸರನ್ನೇ ಹೇಳಬೇಕಾಗುತ್ತದೆ. ಅಂತೆಯೇ 'ನಾಡಿನ ಇತಿಹಾಸ ಸಂಶೋಧನೆಯ ರಂಗದಲ್ಲಿ ರೈಸ್ ಮತ್ತು ಫ್ಲೀಟ್ ಅಶ್ವಿನೀ ದೇವತೆಗಳಿದ್ದಂತೆ' ಎಂದು ಹೇಳಿದ್ದು ಉಚಿತವಾಗಿದೆ. ರೈಸನ ಸಂಶೋಧನಾ ಕಾರ್ಯವು ಎಪಿಗ್ರಾಫಿಯಾ ಕರ್ನಾಟಕಾದ ಸಂಪುಟಗಳಲ್ಲಿ ಒಟ್ಟುಗೂಡಿದರೆ ಫ್ಲೀಟ್‌ನ ಶಾಸನ ಸಂಶೋಧನೆಯು ನಾನ್ನೂರಕ್ಕೆ ಮಿಕ್ಕಿದ ಬಿಡಿ ಲೇಖನಗಳಲ್ಲಿ ಚದುರಿವೆ. ಇವರಿಬ್ಬರೂ ಹಾಕಿ ಕೊಟ್ಟ ಅಸ್ತಿಭಾರದ ಮೇಲೆಯೆ ಮುಂದಿನ ದಿನಗಳಲ್ಲಿ ನಾಡಿನ ಚರಿತ್ರೆಯು ರೂಪು ಗೊಂಡಿತು ಎಂಬುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಫ್ಲೀಟ್‌ನನ್ನು ನೆನೆಯಬೇಕು.

ಜಾನ್ ಫೇಥಫುಲ್ ಫ್ಲೀಟ್ (೧೮೪೭-೧೯೧೭)

ಇಂಗ್ಲೆಂಡಿನಲ್ಲಿ, ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಮಾಡಿ ಭಾರತಕ್ಕೆ ಬಂದಾಗ ಫ್ಲೀಟ್‌ನಿಗೆ ಇಪ್ಪತ್ತರ ಹರೆಯ. ಮುಂಬಯಿ ಸರಕಾರದ ಕಂದಾಯ ಖಾತೆಯಲ್ಲಿ ಆತ ಅಧಿಕಾರವನ್ನು ಸ್ವೀಕರಿಸಿದನು. ದರ್ಪ ಧೈರ್ಯಗಳನ್ನು ತೋರಿಸಲು ಪೂರಕವಾದ ದೇಹದ ಆಕಾರವಿದ್ದಿತು. ಆದರೆ ಉಳಿದ ಬಿಳಿಯರಂತೆ ಐಷಾರಾಮದ ರಾತ್ರಿಗಳಲ್ಲಿ ಭೋಗಲೀಲೆಗಳಲ್ಲಿ ಮುಳುಗುವ ಅಪೇಕ್ಷೆ ಇರಲಿಲ್ಲ.

ಭಾರತಕ್ಕೆ ಬರುವ ಮೊದಲೇ ಫ್ಲೀಟ್ ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದನು. ಮುಂಬಯಿಯಲ್ಲಿದ್ದಾಗ ಬಿಡುವಿನ ವೇಳೆಯಲ್ಲಿ ಸಂಸ್ಕೃತ ವ್ಯಾಸಂಗದಲ್ಲಿ ನಿರತನಿರುತ್ತಿದ್ದನು. ಒಮ್ಮೊಮ್ಮೆ ರಾಯಲ್ ಏಶಿಯಾಟಿಕ್ ಸೊಸೈಟಿಯ ಕೋಣೆಯಲ್ಲಿ ಪ್ರಾಚೀನ ಕಡತಗಳನ್ನು ಓದುತ್ತಿದ್ದನು. ಇನ್ನೊಮ್ಮೆ ಸರಕಾರದ ಶಾಸನ ಸಂಗ್ರಹಾಲಯದಲ್ಲಿ ಧೂಳು ತಿನ್ನುತ್ತ ಬಿದ್ದಿದ್ದ ಶಾಸನಗಳನ್ನು ಓದುವುದರಲ್ಲಿ ಆಸಕ್ತನಾಗಿರುತ್ತಿದ್ದನು. 'ಈ ಕಲ್ಲುಗಳು ಅವನಿಗೆ ಪ್ರಾಚೀನ ಜನಜೀವನದ ಕನ್ನಡಿಯಾಗಿ ಕಂಡವು. ಕಾಡು ಮಧ್ಯದ ಹಾಳು ದೇವಾಲಯದಲ್ಲಿ ಭಕ್ತನೊಬ್ಬನು ಒಂದು ದೀಪ ಹಚ್ಚಿದಂತೆ ಆಯಿತು. ಈ ಕಲ್ಲುಗಳೊಂದಿಗೆ ಫ್ಲೀಟನು ಸಖ್ಯವನ್ನು ಬೆಳೆಸಿಕೊಂಡನು.

ಕೆಲವು ವರುಷಗಳ ಬಳಿಕ ದಕ್ಷಿಣ ಮಹಾರಾಷ್ಟ್ರದ ಅಸಿಸ್ಟಂಟ್ ಕಲೆಕ್ಟರನೆಂದು ಬೆಳಗಾವಿಗೆ ಬಂದನು. ದಕ್ಷಿಣ ಮಹಾರಾಷ್ಟ್ರವೆಂದರೆ ಉತ್ತರ ಕರ್ನಾಟಕದ ಭಾಗವಾಗಿತ್ತು. ಆಡಳಿತ ಕೇಂದ್ರವು ಬೆಳಗಾವಿಯಲ್ಲಿತ್ತು. ಮುಂಬಯಿ ಸಂಗ್ರಹಾಲಯದಲ್ಲಿದ್ದ ಬಹು ಸಂಖ್ಯೆಯ ಶಿಲಾಲಿಪಿಗಳು ಕನ್ನಡದಲ್ಲಿ ಇದ್ದುದನ್ನು ಅವನು ಗಮನಿಸಿದ್ದನು. ಅದನ್ನು ನೋಡಿದಾಗಲೇ ಕನ್ನಡ ಭಾಷೆ ತುಂಬ ಪ್ರಾಚೀನ ಮತ್ತು ನಾಗರಿಕತೆ ಉಳ್ಳದ್ದು ಆಗಿರಬೇಕೆಂದು ಊಹಿಸಿದ್ದನು. ಈತ ಬೆಳಗಾವಿಗೆ ಬಂದಾಗ ಮೊದಲು ಮಾಡಿದ ಕೆಲಸವೆಂದರೆ ಕನ್ನಡವನ್ನು ಕಲಿಯಲು ಪ್ರಾರಂಭಿಸಿದುದು. ಮುಂದೆ ೧೮೭೭ರಲ್ಲಿ ದಕ್ಷಿಣ ಭಾಗದ ವಿದ್ಯಾಧಿಕಾರಿಯಾದಾಗ ಪಂಡಿತರ ಸಹಾಯದಿಂದ ಅವನು ಕನ್ನಡ ಕಾವ್ಯಗಳ ಪರಿಚಯ ಮಾಡಿಕೊಂಡನು.

ಶಾಸನ ವಾಚನದಲ್ಲಿ ವೆಂಕಟ ರಂಗೋ ಕಟ್ಟಿ, ತುರಮರಿ, ಕಿತ್ತೂರ ಮೊದಲದಾದವರು ಆರಂಭದಲ್ಲಿ ಅವನಿಗೆ ನೆರವಾಗಿದ್ದಾರೆ. ಶಾಸನಗಳ ಪ್ರತಿಗಳನ್ನು ತೆಗೆಯುವಲ್ಲಿ ಗ್ರಿಗ್ಸ್ ಎಂಬ ಅಧಿಕಾರಿಯ ಸಹಾಯವಿದ್ದಿತು. ಶಾಸನ ಪರಿವೀಕ್ಷಣೆಯ ರಂಗದಲ್ಲಿ ಫ್ಲೀಟನಿಗಿಂತ ಮುಂಚೆ ಪ್ರಿನ್ಸೆಪ್, ಕನಿಂಗ್ ಹ್ಯಾಮ, ಡಿಕ್ಸನ್, ಹೋಪ್ ಎಲಿಯಟ್ ಇವು ಕೆಲವೇ ಹೆಸರುಗಳು ಕೇಳಿ ಬರುತ್ತಿದ್ದವು. ಡಿಕ್ಸನ್ ಮೈಸೂರು ಸೀಮೆಯ ಅನೇಕ ಶಾಸನಗಳನ್ನು ಹುಡುಕಿ ತೆಗೆದುದು ರೈಸನಿಗೆ ಅನುಕೂಲವಾಯಿತು. ಅದರಂತೆ ಉತ್ತರ ಕರ್ನಾಟಕದಲ್ಲಿ ಎಲಿಯಟ್ ಸಂಗ್ರಹಿಸಿದ್ದ ಶಾಸನಗಳು ಫ್ಲೀಟ್‌ನ ಪ್ರಯೋಜನಕ್ಕೆ ಬಂದುವು. ಶಾಸನಗಳಿಂದ ಇತಿಹಾಸ ಅಂಶಗಳ ಆಯ್ಕೆ ಮತ್ತು ಸತ್ಯ ನಿರ್ಣಯದ ಕ್ರಮವನ್ನು ಅರಿತನು. ಅವುಗಳಿಂದ ಫ್ಲೀಟನು ಇತಿಹಾಸ ರಚನೆಯನ್ನು ಮಾಡತೊಡಗಿದನು.

ಬೆಳಗಾವ ಜಿಲ್ಲೆಯಲ್ಲಿ ತನಗೆ ದೊರೆತಿದ್ದ ಸಂಸ್ಕೃತ ಕನ್ನಡ ಶಾಸನಗಳ ಬಗ್ಗೆ ಎರಡು ಲೇಖನಗಳನ್ನು ಬರೆದು ಮುಂಬಯಿಯ ರಾಯಲ್ ಏಶಿಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ ಪ್ರಕಟಿಸಿದನು. ಇವುಗಳಿಂದ ಗೋವೆಯ ಕದಂಬರ ಕಾಲದ ಮೇಲೆ ವಿಶೇಷ ಬೆಳಕು ಬಿದ್ದಿತು. ದಕ್ಷಿಣ ಮುಂಬಯಿಯ ತನ್ನ ವಾಸ್ತವ್ಯದಲ್ಲಿ ಫ್ಲೀಟ್‌ನು ಒಂದು ಸಾವಿರದಷ್ಟು ಶಿಲಾ ಹಾಗೂ ತಾಮ್ರ ಶಾಸನಗಳನ್ನು ಪರಿಶೀಲನೆ ಮಾಡಿದ್ದಾನೆ. ಶಾಸನಗಳ ಅಧ್ಯಯನದ ಅಂಗವಾಗಿ ಕಾಲಗಣನೆ ಹಲವು ಸ್ಥಳೀಯ ಐತಿಹ್ಯಗಳು ಮತ್ತು ಶಾಸನ ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ವಿಶಿಷ್ಟ ಪದಗಳನ್ನು ಕುರಿತು ಫ್ಲೀಟ್ ಈ ಅವಧಿಯಲ್ಲಿ ವಿಶೇಷ ಸಂಶೋಧನೆಯನ್ನು ಮಾಡಿದನು. ಶಕ, ವಿಕ್ರಮ ಇತ್ಯಾದಿ ಕಾಲಮಾಪನಗಳ ಮೂಲಭೂತ ಅಂಶಗಳನ್ನು ಪ್ರಕಟಿಸಿದನು. ಗಂಗರ ಕಾಲದ ಕೆಲವು ಚಾರಿತ್ರಿಕ ವಿಷಯಗಳನ್ನು ಶಾಸನಗಳ ಆಧಾರದಿಂದ ಹೊರಗೆ ತಂದನು.

ಮೈಸೂರು ಸಂಸ್ಥಾನದಲ್ಲಿ ರೈಸ್, ಮುಂಬಯಿ ಕರ್ನಾಟಕದಲ್ಲಿ ಫ್ಲೀಟ್, ಇವರಿಬ್ಬರ ಸಂಶೋಧನಾ ಕಾರ್ಯವನ್ನು ಒಟ್ಟುಗೂಡಿಸಿದಾಗ ಕನ್ನಡ ರಾಜಮನೆತನಗಳ ಕಥೆಯ ಚಿತ್ರಣ ಪೂರ್ಣವಾಗುತ್ತದೆ. 'ವಿಶೇಷವಾಗಿ ಮರಾಠರ, ಅಂತರದ ಪೇಶವಾಯಿಗಳ ಆಘಾತದಿಂದ ಜರ್ಜರಿತವಾಗಿದ್ದ ಅವಶೇಷಗಳಿಗೆ ಜೀವಕಳೆ ಕೊಟ್ಟು ಉತ್ತರ ಕರ್ನಾಟಕದ ಇತಿಹಾಸವನ್ನು ಸಾವಿನ ದವಡೆಯಿಂದ ಉಳಿಸಿದ ಶ್ರೇಯಸ್ಸು ಫ್ಲೀಟ್‌ನದು' ಎಂಬುದರಲ್ಲಿ ಅತಿಶಯೋಕ್ತಿ ಏನೂ ಇಲ್ಲ.

'ಮುಂಬಯಿ ಪ್ರಾಂತದ ಕನ್ನಡ ರಾಜ್ಯಗಳು' (Dynasties of the Kanarese Districts of the Bombay Presidency) ಎಂಬ ಇನ್ನೊಂದು ಗ್ರಂಥವು ಪ್ರಾಚೀನ ಕನ್ನಡ ರಾಜಮನೆತನಗಳಿಗೆ ಸಂಬಂಧಿಸಿದ್ದಾಗಿದೆ. ಶಾಸನಗಳ ಆಧಾರದ ಮೇಲೆ ಉತ್ತರೇಯ ಕನ್ನಡ ರಾಜರ ಅಂದರೆ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಪಶ್ಚಿಮ ಚಾಲುಕ್ಯ, ಕಲಚುರಿ, ಹೊಯ್ಸಳ, ರಟ್ಟ ಯಾದವ, ಶಿಲಾಹಾರ ಮುಂತಾದ ಮುಸ್ಲಿಮರ ಆಗಮನದ ಪೂರ್ವದ ರಾಜಮನೆತನಗಳ ಇತಿಹಾಸವನ್ನು ಇದರಲ್ಲಿ ನಿರ್ದುಷ್ಟವಾಗಿ ವರ್ಣಿಸಲಾಗಿದೆ. ಕರ್ನಾಟಕವೆಂಬುದು ಪ್ರತ್ಯೇಕ ಅಸ್ತಿತ್ವವುಳ್ಳ ನಾಡು. 'ಸದರ್ನ ಮರಾಠ ಕಂಟ್ರಿ'ಅಲ್ಲ ಎಂಬ ಫ್ಲೀಟ್‌ನ ಸಮರ್ಥಯುತವಾದ ಪ್ರತಿಪಾದನೆಯು ಇಲ್ಲಿ ಬಂದಿದೆ. ಕನ್ನಡ ಜನಜೀವನಕ್ಕೆ ಸ್ಫೂರ್ತಿಯ ನೆಲೆಯನ್ನೂ ತೋರಿಸಿದನು.

ಹಲವು ಶಾಸನಗಳಲ್ಲಿ ಉಲ್ಲೇಖಿತವಾದ 'ಮಹಾರಾಷ್ಟ್ರ' ಎಂಬ ಪದವು ಇಂದಿನ ಮಹಾರಾಷ್ಟ್ರವೇ ಎಂದೂ ಆ ಕಾರಣದಿಂದ ಚಾಲುಕ್ಯ ರಾಷ್ಟ್ರಕೂಟ ಮೊದಲಾದ ರಾಜಮನೆತನಗಳು ಮಹಾರಾಷ್ಟ್ರದವರೆಂದೂ ಅಂದಿನ ಖ್ಯಾತನಾಮ ಚಿ.ವಿ. ವೈದ್ಯ ಮತ್ತು ಇತರ ಹಲವು ಮರಾಠಿ ಇತಿಹಾಸಕಗಾರರು ಮಂಡಿಸಿದ ವಾದವನ್ನು ಫ್ಲೀಟ್ ಅಂದೇ ಅಲ್ಲಗಳೆದದ್ದು ವಿಶೇಷವಾಗಿದೆ.

ಫ್ಲೀಟ್ ಕನ್ನಡದ ಅಭಿಮಾನಿ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ. ಸತ್ಯ ನಿಷ್ಠೆ, ಕ್ರಿಯಾಶೀಲತೆಯನ್ನು ಕನ್ನಡಕ್ಕೆ ಧಾರೆಯೆರೆದನು. ತನ್ನ ಹೆಸರಿನಲ್ಲಿದ್ದ 'ಫೇಥಫುಲ್'ನ್ನು ಕನ್ನಡದ ಪರವಾಗಿ ನಿರಂತರವಾಗಿ ಇಟ್ಟುಕೊಂಡು ಫೆತಫುಲ್ ಫ್ಲೀಟ್‌ನಾಗಿ ಚಿರಕಾಲ ಕನ್ನಡಿಗರ ಮನದಲ್ಲಿ ಉಳಿದನು.

ಎಪ್ಪತ್ತು ವರುಷ ತುಂಬು ಜೀವನ ಬಾಳಿದ ಫ್ಲೀಟ್ ದಿನಾಂಕ ೨೧-೨-೧೯೧೭ರಂದು ತೀರಿಕೊಂಡನು. ಅವನ ಬಗ್ಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತ ಅಂದಿನ ವಾಗ್ಭೂಷಣ ಪತ್ರಿಕೆಯು ಬರೆದ ಕೆಲವು ಮಾತುಗಳನ್ನು ಇಂದಿನ ಸಂದರ್ಭದಲ್ಲಿ ಕನ್ನಡಿಗರು ನೆನಸಿಕೊಳ್ಳುವುದು ಅತ್ಯಗತ್ಯವೆನಿಸುತ್ತದೆ.

'ಬಹುಕಾಲದಿಂದ ಹೊಲಗಳಲ್ಲಿಯೋ, ತಿಪ್ಪೆಗಳಲ್ಲಿಯೋ, ಸ್ಮಶಾನ ಗಳಲ್ಲಿಯೋ ಮಣ್ಣು ತಿನ್ನುತ್ತ ಬಿದ್ದಿರುವಂಥ ಕರ್ನಾಟಕ ಇತಿಹಾಸಕ್ಕೆ

ಆಧಾರಭೂತವಾದ ಶಿಲಾಶಾಸನಗಳನ್ನು ಉದ್ಧರಿಸಿ ಅವುಗಳ ಸಹಾಯದಿಂದ ಹರಿದು ಹೋಗಿರುವ ಕನ್ನಡಿಗರ ಇತಿಹಾಸದ ಎಳೆಗಳನ್ನು ಜೋಡಿಸುವ ಕನ್ನಡ ಇತಿಹಾಸ ನಿರಪೇಕ್ಷ ಭಕ್ತ - ಕನ್ನಡವು ಕಗ್ಗನುಡಿಯೆಂದು ನಮ್ಮವರೇ ನಾಚಿಕೆಯಿಲ್ಲದೆ ನುಡಿಯುತ್ತಿದ್ದರೂ, ಇವರಿಗೆ ಮಾತ್ರ ಅದು ಸಗ್ಗದಂತೆ - ಮನುಷ್ಯನಲ್ಲಿ ಕೃತಜ್ಞತೆ ಇರುವ ಪಕ್ಷಕ್ಕೆ ಸಾವಿರಾರು ಮೈಲುಗಳ ಮೇಲಿರುವ ಯಾವ ನಾಡಿನಿಂದಲೋ ಬಂದು ನಮ್ಮ ಕನ್ನಡ ನಾಡಿದ ದೆಸೆಯಿಂದ ಬೆಲೆಯಿಲ್ಲದಷ್ಟು ಪ್ರೇಮವನ್ನೂ ಅಭಿಮಾನವನ್ನೂ ತೋರಿಸಿದ್ದಕ್ಕಾಗಿ ಅವರ ಸ್ಮಾರಕಾರ್ಥವಾಗಿ ಏನಾದರೊಂದು ಕಾರ್ಯವನ್ನು ಮಾಡಲಿಕ್ಕೇಬೇಕು....'' ಆದರೆ ನಾವು ಈವರೆಗೆ ಏನನ್ನು ಮಾಡಿದೆವು ?

✤ ✤ ✤ ✤

ಅಧ್ಯಾಯ -೯

• ಕರ್ನಾಟಕತ್ವ ಬೀಜ ಬಿತ್ತಿದ್ದರು

ಜಾನ್ ಫೇತ್‌ಫುಲ್ ಫ್ಲೀಟ್‌ನಿಂದ ಕರ್ನಾಟಕದ ಇತಿಹಾಸವು ಪುನರ್ಜನ್ಮ ತಾಳಿತು ಎಂಬುದರಲ್ಲಿ ಎರಡು ಮಾತಿಲ್ಲ. ಶೈಕ್ಷಣಿಕ ಹಾಗೂ ಲೌಕಿಕವಾಗಿ ಅದನ್ನು ಮುಂದುವರಿಸಿಕೊಂಡು ಹೋದವರಲ್ಲಿ ವೆಂಕಟ ರಂಗೋ ಕಟ್ಟಿ ಹೆಸರು ಮೊದಲಿಗೆ ಬರುತ್ತದೆ. ಹೌದು, ಶೈಕ್ಷಣಿಕ ಮತ್ತು ಲೌಕಿಕ ಶಬ್ದಗಳನ್ನು ಬಳಸಿದ್ದರ ಉದ್ದೇಶ, ಅವರು ತಂದೆ ಬಳಿಯಲ್ಲಿ ಸಂಸ್ಕೃತ ಕಾವ್ಯಶಾಸ್ತ್ರಗಳನ್ನು ಆಯುರ್ವೇದವನ್ನು ಕಲಿತಿದ್ದರು. ಮುಧೋಳದ ರಾಜೇಸಾಹೇಬರ ಆಶ್ರಯದಲ್ಲಿದ್ದ ಕಟ್ಟಿ ಮನೆತನಕ್ಕೆ ಚರಿತಾರ್ಥವನ್ನು ಸಾಗಿಸಲು ಯಾವ ಅಡಚಣೆಯೂ ಇರಲಿಲ್ಲ. ಆದರೆ ವೆಂಕಟ ರಂಗೋ ಹಾಗೆ ಮಾಡಲಿಲ್ಲ. ಉದರ ನಿಮಿತ್ತದ ಬಹುಕೃತ ವೇಷಗಳಲ್ಲಿ ವೈದಿಕ ವೃತ್ತಿಯೂ ಒಂದು ಎಂಬ ಅನುಭವ ಬಂದು ಲೌಕಿಕ ಜ್ಞಾನದ ದಾಹ ಅಧಿಕವಾಯಿತು.

ಆಗಿನ ದಿನಗಳಲ್ಲಿ ಪದ್ಧತಿಯಂತೆ ಮನೆಯವರ ವಿರೋಧ ಕಟ್ಟಿಕೊಂಡು 'ಹೂಣ' ಭಾಷೆಯನ್ನು ಕಲಿಯಲು ಪುಣೆಗೆ ಬಂದು ಸೇರಿದರು. ಆಗಿನ್ನೂ ಮುಂಬಯಿ ವಿಶ್ವವಿದ್ಯಾಲಯವೂ ಸ್ಥಾಪಿತವಾಗಿರಲಿಲ್ಲ. ಬೋರ್ಡ್ ಆಫ್ ಎಜುಕೇಶನ್ ಎಂಬ ಸರಕಾರೀ ಮಂಡಳಿಯ ಇಂಗ್ಲಿಷ್ ಶಾಲೆಯೊಂದರಲ್ಲಿ ನಾಲ್ಕಾರು ವರುಷ ಓದಿ ತನ್ನ ೨೩ನೆಯ ವಯಸ್ಸಿನಲ್ಲಿ ಶಿಕ್ಷಣವನ್ನು ಪೂರ್ತಿಗೊಳಿಸಿದ ಬಳಿಕ ಪೂಣೆಯ ಟ್ರೆನಿಂಗ್ ಕಾಲೇಜನಿಲ್ಲಿ ಉಪಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಹಾಗೆ ಅಲ್ಲಿಯೇ ಮುಂದುವರೆದಿದ್ದರೆ ವೆಂಕಟ ರಂಗೋ ಕಟ್ಟಿ ಮನೆತನವೂ ಇನ್ನೊಂದು ಮರಾಠಿ ಮನೆತನವಾಗುತ್ತಿತ್ತು. ಪ್ರಾರಂಭದಲ್ಲಿ ವೆಂಕಟ ರಂಗೋ ಕೂಡ ಅಪ್ಪಟ ಮರಾಠೀ ಮನುಷ್ಯರೇ ಆಗಿದ್ದರು. ಅಲ್ಲಿಯೇ ಪ್ರಸಿದ್ಧರಾದ ಕೃಷ್ಣಶಾಸ್ತ್ರೀ ಚಿಪಳೂಣಕರ ಮತ್ತು ಗಂಗಾಧರ ಶಾಸ್ತ್ರೀ ಜಾಂಭೇಕರ ಮುಂತಾದ ಮಹಾರಾಷ್ಟ್ರೀಯರ ಸಾಮಾಜಿಕ ಚಟುವಟಿಕೆಗಳ ಕ್ರಮವನ್ನು ಮೆಚ್ಚಿದರು. ಅಂಥ ಪರಿಸರದಲ್ಲಿ ಅವರು ಪೂರ್ಣವಾಗಿ ಮಹಾರಾಷ್ಟ್ರೀಯರಾಗಿದ್ದರೆನ್ನಬಹುದು. ಪುಣೆಯಲ್ಲಿದ್ದಾಗಲೆ ಅವರು ಅರೇಬಿಯನ್ ನೈಟ್ಸನ್ನು ಕನ್ನಡಕ್ಕೆ ಅನುವಾದಿಸಿದ್ದರು. ಆದರೆ ಮರಾಠಿಯಲ್ಲಿದ್ದಷ್ಟು ವಾಚನ - ಲೇಖನ ಪರಿಣಿತಿಯು ಕನ್ನಡದಲ್ಲಿ ಅವರಿಗಿರಲಿಲ್ಲ.

ಹತ್ತು ವರುಷಗಳ ಪುಣೆಯ ವಾಸ್ತವ್ಯದ ನಂತರ ವೆಂಕಟ ರಂಗೋ ಕರ್ನಾಟಕಕ್ಕೆ ಬಂದುದೂ ಒಂದು ಆಕಸ್ಮಿಕವೆ. ಕಾರವಾರ ಜಿಲ್ಲೆಯ ಹೊನ್ನಾವರ ಹೈಸ್ಕೂಲಿನಲ್ಲಿ

ಕನ್ನಡ ಅಧ್ಯಾಪಕರ ಜಾಗ ಖಾಲಿ ಆಯಿತು. ಮನೆ ಮಾತು ಕನ್ನಡ ಎಂಬ ಒಂದೇ ಒಂದು ಕಾರಣದಿಂದ ವೆಂಕಟ ರಂಗೋರನ್ನು ಪುಣೆಯಿಂದ ಹೊನ್ನಾವರಕ್ಕೆ ವರ್ಗ ಮಾಡಿಸಲಾಯಿತು. ಅವರಿಗೆ ಅದು ತುಸು ಬೇಸರವೆನಿಸಿತಾದರೂ ಕರ್ನಾಟಕಕ್ಕೆ ಅದು ತುಂಬ ಉಪಯೋಗವಾಯಿತು. ಮುಂದಿನ ೨೫ ವರುಷಗಳಲ್ಲಿ ಟ್ರೇನಿಂಗ್ ಕಾಲೇಜಿನ ಅಧ್ಯಾಪಕರಾಗಿ, ಸರಕಾರೀ ಭಾಷಾಂತರಕಾರರಾಗಿ ಶಿಕ್ಷಣ ಇಲಾಖೆಯಲ್ಲಿ ಪ್ರಮುಖ ಸ್ಥಾನಗಳನ್ನು ಪಡೆದರು. ಕನ್ನಡ ವಾಚನ, ವ್ಯಾಕರಣ, ಭೂಗೋಲ, ಆರೋಗ್ಯ ವಿದ್ಯೆ , ಗಣಿತ ಇವೆಲ್ಲ ವಿಷಯಗಳ ಮೇಲೆ ಪಠ್ಯ ಪುಸ್ತಕಗಳನ್ನು ಬರೆದರು. ಈ ಪಠ್ಯ ಪುಸ್ತಕಗಳೆಲ್ಲ ಬಹುತೇಕವಾಗಿ ಅಂದಿನ ಮರಾಠಿ-ಇಂಗ್ಲಿಷ್ ನಿಂದ ಅನುವಾದ ಗೊಳ್ಳುತ್ತಿದ್ದವು. ವೆಂಕಟ ರಂಗೋ ಅವುಗಳಲ್ಲಿ ಹೊಸ ವಿಷಯಗಳನ್ನು ಸೇರಿಸಿದರು. ಇತಿಹಾಸವನ್ನು ಕಲಿಸುವಾಗ ಆ ಪ್ರದೇಶದ ಚರಿತ್ರೆಯನ್ನು ಕಲಿಸಬೇಕೆಂಬ ನಿಯಮವಿದ್ದರೂ ಕಲಿಸಲು ಪುಸ್ತಕಗಳಿರಲಿಲ್ಲ. ಕಟ್ಟಿಯವರು ಕರ್ನಾಟಕದ ಇತಿಹಾಸವನ್ನು ಪ್ರಥಮತಃ ಬರೆದು ಕರ್ನಾಟಕತ್ವದ ಬೀಜವನ್ನು ಕನ್ನಡಿಗರಲ್ಲಿ ಊರಿದರು. ಈ ದಿಶೆಯಲ್ಲಿ ಹೊರಬಂದ ಅವರ ಇನ್ನೊಂದು ಕೃತಿ ''ಮುಂಬಯಿ ಕರ್ನಾಟಕದ ಗೆಝೆಟಿಯರ್'' ಸರಕಾರಿ ದಾಖಲೆಗಳ ಅನುವಾದ ವಾಗಿದ್ದರೂ ಆ ಪ್ರದೇಶವನ್ನು ಸಮಷ್ಟಿಯಾಗಿ ಕಣ್ಣ ಮುಂದೆ ಇರಿಸಿಕೊಂಡಿದ್ದಾಗಿದೆ. ಅಲ್ಲಲ್ಲಿ ಸ್ವಂತದ ವಿಚಾರಗಳನ್ನೂ ಸೇರಿಸಿದ್ದಾರೆ.

ವೆಂಕಟ ರಂಗೋ ಕಟ್ಟಿಯವರು ಕೈಗೊಂಡ ಪತ್ರಿಕಾ ವ್ಯವಸಾಯವು ಕನ್ನಡಕ್ಕೆ, ಕರ್ನಾಟಕಕ್ಕೆ ಸಂದ ವಿಶೇಷ ಕಾಣಿಕೆಯಾಗಿದೆ. ಶಿಕ್ಷಣದ ಮಹತ್ವವನ್ನು ಅರಿತ ಅವರು ತನ್ನ ಜನತೆಯ ಬೌದ್ಧಿಕ ವಿಕಾಸವಾಗಬೇಕು, ವಿಜ್ಞಾನ , ಇತಿಹಾಸ ಮುಂತಾದವು ಗಳಲ್ಲಿನ ಹೊಸ ಹೊಸ ವಿಚಾರಗಳನ್ನು ಅರಿಯಬೇಕು ಎಂಬೀ ದೃಷ್ಟಿಯಿಂದ ಪತ್ರಿಕಾ ರಂಗಕ್ಕೆ ಇಳಿದರು. ಕ್ರಿ.ಶ. ೧೮೬೧ರಲ್ಲಿ ಆರಂಭವಾದ 'ಕನ್ನಡ ಶಾಲಾ ಪತ್ರಿಕೆ'ಯು ಸರಕಾರೀ ಪರಿಪತ್ರಗಳನ್ನು ವರ್ಗಾವರ್ಗಿಯನ್ನು ಹೇಳುವುದಕ್ಕಷ್ಟೇ ಸೀಮಿತವಾಗಿದ್ದಾಗ ಅದರಲ್ಲಿ ಬೇರೆ ಬೇರೆ ಲೇಖನಗಳನ್ನು ಸೇರಿಸುವಲ್ಲಿ ಅವರು ಮುಂದಾದರು. ಆನಂತರ 'ಶೋಧಕ ' 'ಲೋಕ ಶಿಕ್ಷಕ' ಎಂಬ ಪತ್ರಿಕೆಗಳನ್ನು ಹೊರಡಿಸಿದರು. ಮುಂದೆ 'ಕರ್ನಾಟಕ ಪತ್ರ' ಹಾಗೂ 'ಚಂದ್ರೋದಯ' ಇವುಗಳ ಹೊಣೆಯನ್ನು ಕೆಲಕಾಲ ವಹಿಸಿಕೊಂಡರು. ಧಾರವಾಡದ 'ಕರ್ನಾಟಕ ವೃತ್ತ'ದೊಡನೆಯೂ ಅವರ ನಿಕಟ ಸಂಪರ್ಕವಿದ್ದಿತು.

ಶೋಧಕ ಪತ್ರಿಕೆಯ ಪ್ರಥಮ ಸಂಚಿಕೆಯ ಸಂಪಾದಕೀಯದಲ್ಲಿ (ಕ್ರಿ.ಶ. ೧೮೭೫) ಅವರು ಬರೆದ ಮಾತುಗಳನ್ನು ಗಮನಿಸಿದರೆ ಅಷ್ಟು ಹೊತ್ತಿಗೆ ಅಖಂಡ ಕರ್ನಾಟಕದ ವ್ಯಾಪ್ತಿ, ಜನಸಂಖ್ಯೆ ಇತ್ಯಾದಿಗಳ ಅರಿವಿನ ಜೊತೆಗೆ ಬದಿಯ ಮಹಾರಾಷ್ಟ್ರದೊಂದಿಗಿನ ತುಲನೆಯಿಂದ ಅಂದಿನ ಸ್ಥಿತಿಗತಿಯ ಮಾರ್ಮಿಕ ಚಿತ್ರವೂ ಕಾಣುತ್ತದೆ.

'ಕೊಲ್ಹಾಪುರ, ಬೀದರ, ನೀಲಗಿರಿ, ಪಶ್ಚಮ ಸಮುದ್ರ ಈ ೪ ಮರ್ಯಾದೆಗಳ ಮಧ್ಯದಲ್ಲಿ ಹಬ್ಬಿದ ಶೀಮೆಯು ಕರ್ನಾಟಕವೆಂದೆನಿಸಿಕೊಳ್ಳುತ್ತದೆ ಈ ದೇಶದ ಕ್ಷೇತ್ರವು ಸು. ೬೬,೦೦೦ ಚೌಕು ಮೈಲು. ಜನಸಂಖ್ಯೆ ೭೭ ಲಕ್ಷ. ಆದರೆ ನಮ್ಮ ನೆರೆಯಲ್ಲಿದ್ದ ಮಹಾರಾಷ್ಟ್ರ ದೇಶವು ಇದಕ್ಕೂ ಚಿಕ್ಕದಾಗಿದ್ದು, ಇವೆರಡೂ ದೇಶಗಳ ಈಗಿನ ಸ್ಥಿತಿಗತಿಗಳನ್ನು ಸರಿ ನೋಡಲಾಗಿ ಅತಿ ಖೇದಕರವಾದ ವ್ಯತ್ಯಾಸವು ಕಂಡುಬರುತ್ತದೆ. ಮಹಾರಾಷ್ಟ್ರದಲ್ಲಿ ನಾಲ್ಕೈದು ಕಾಲೇಜುಗಳು, ಬಹುಶಃ ಪ್ರತಿ ಜಿಲ್ಲೆಗೊಂದರಂತೆ ಹಾಯಸ್ಕೂಲುಗಳು ೨೦೦೦ಕ್ಕಿಂತ ಹೆಚ್ಚು ಇತರ ಶಾಲೆಗಳು ಇರುತ್ತವೆ. ಕರ್ನಾಟಕದಲ್ಲಿ ಕಾಲೇಜು ಎಂಬ ಹೆಸರೇ ಗೊತ್ತಿಲ್ಲ. ಹಾಯಸ್ಕೂಲುಗಳು (ಮೈಸೂರು, ಮದ್ರಾಸಗಳಿಗೆ ಸೇರಿದ ಭಾಗಗಳು ಸಹಿತ) ಐದಾರಕ್ಕಿಂತ ಹೆಚ್ಚಿಲ್ಲ. ಇತರ ಶಾಲೆಗಳು (ಪ್ರಾಥಮಿಕ) ಯೆಲ್ಲೂ ಕೂಡ ಆರೇಳು ನೂರರೊಳಗೇ.

ಮಹಾರಾಷ್ಟ್ರದಲ್ಲಿ ೩೦ಕ್ಕಿಂತ ಹೆಚ್ಚು ವರ್ತಮಾನ ಪತ್ರಗಳು ಸುಮಾರು ೨೦ ಮಾಸಿಕ ಪುಸ್ತಕಗಳೂ ಸದ್ಯಕ್ಕೆ ನಡೆಯುತ್ತಿವೆ. ಕರ್ನಾಟಕ ಭಾಷೆಯಲ್ಲಿ ಯರಡಕ್ಕಿಂತ ಹೆಚ್ಚು ವರ್ತಮಾನ ಪತ್ರಗಳು ಇಲ್ಲ. ಅವು ಬೆಂಗಳೂರು ಶೀಮೆಯ ಹೊರಗೆ ಯಾರಿಗೂ ಗೊತ್ತಿಲ್ಲ. ಮಾಸಿಕ ಪುಸ್ತಕವು ಇರುತ್ತದೆಂದು ಆಸೆ ಮಾಡಲಿಕ್ಕೆ ಮಾತ್ರ ಒಂದುಂಟು. ಅದೂ ಹುಟ್ಟಿ ವೊಂದು ವರ್ಷವೂ ಪೂರ್ಣವಾಗಿರುವುದಿಲ್ಲ. ಈ ಮುಂತಾದ ಸಂಗತಿಗಳಿಂದ ಈ ಯೆರಡು ದೇಶ ನಿವಾಸಿಗಳ ಸಾಂಪ್ರತ ಸ್ಥಿತಿಯಲ್ಲಿ ತೋರಿಬರುವ ಮಹದಂತರವ ನೋಡಿ ಕೆಲ ಜನ ಕರ್ನಾಟಕರು ಬಹು ಖೇದ ಪಡುವದನ್ನೂ ಮಹಾರಾಷ್ಟ್ರರು ಹೆಮ್ಮೆಯಿಂದ ಅವರನ್ನು ಧಿಕ್ಕರಿಸುವುದನ್ನೂ ನಾವು ಆಗ್ಗಾಗ್ಗೆ ನೋಡುತ್ತೇವೆ.

.....ಇದರಿಂದ ಕರ್ನಾಟಕರು ಮಂದಮತಿಗಳೆಂಬುದಾಗಿ ಸಿದ್ಧವಾಗ ಲರಿಯದು. ಕರ್ನಾಟಕದಲ್ಲಿ ಇಂಗ್ಲಿಷ್ ವಿದ್ಯೆ ಪ್ರಸಾರವು ಕಡಿಮೆಯಾಗಿರುವುದು. ಈ ನ್ಯೂನತೆಯಲ್ಲಿ ಸಹ, ಕರ್ನಾಟದ ಸಂತೋಷಪಡಿಸತಕ್ಕಂಥದ್ದೊಂದು ಸಂಗತಿ ಯೇನೆಂದರೆ ಅವರಲ್ಲಿ ಇಂಗ್ಲಿಷ್ ವಿದ್ಯದ ಪ್ರಸಾರವು ಕಡಿಮೆಯಾಗಿದ್ದ ಪ್ರಮಾಣದಂತೆಯೇ ಇಂಗ್ಲಿಷ್ ದುರ್ವ್ಯಸನಗಳು ದುರಾಚಾರಗಳು ಕಡಿಮೆ ಯಾಗಿರುತ್ತವೆ.

ಆದರೆ ಸ್ವದೇಶದ ವಿದ್ಯಾಬುದ್ಧಿಗಳೆಲ್ಲಾ ಮಹಾರಾಷ್ಟ್ರರನ್ನು ಕರ್ನಾಟಕರನ್ನು ಯದುರು ಬದುರು ಕುಳ್ಳಿರಿಸಿ ವಿಚಾರಿಸಲಾಗಿ ಕರ್ನಾಟಕದ ಗೌರವವು ಕಂಡುಬರುತ್ತದೆ. ಶ್ರೀಮಚ್ಛಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ವಿದ್ಯಾರಣ್ಯ ಭಟ್ಟಾಚಾರ್ಯರು, ಜೋಪದೇವ, ಇತ್ಯಾದಿ ಮಹಾಮಹಾ ಪ್ರತಾಪಿಗಳೆಂದುಕೊಂಡ ಅನಿರ್ವಾಚ್ಯ ವಿದ್ವಾಂಸರು ಈ ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದರು. ಮಹಾರಾಷ್ಟ್ರದಲ್ಲಿ ಇವರ ಯೋಗ್ಯತೆಯ ಜನ ಬಹುತರವಾಗಿ ಯಾರೂ ಆಗಲಿಲ್ಲೆಂದು ಹೇಳಬಹುದು - ಪ್ರಕೃತಕ್ಕೆ ಸಹ ನ್ಯಾಯ,

ವ್ಯಾಕರಣ ವೇದಾಂತ, ಜ್ಯೋತಿಷ್ಯ, ಧರ್ಮಶಾಸ್ತ್ರ ಮುಂತಾದ ಶಾಸ್ತ್ರಗಳಲ್ಲಿ ಪಾರಂಗತರಾದ ಜನರು ಕರ್ನಾಟಕದಲ್ಲಿ ಹೊರಟಷ್ಟರ ಚತುರ್ಥಾಂಶ ಜನರು ಸಹ ಮಹಾರಾಷ್ಟ್ರದಲ್ಲಿ ಹೊರಡರೆಂದು ಶೋಧಕರಿಗೆ ತಿಳಿದುಬರುವುದೆಂಬುದಕ್ಕೆ ಸಂದೇಹವಿಲ್ಲ. ಮೈಸೂರು, ಉಡುಪಿ, ಶೃಂಗೇರಿ, ಸ್ವಾದಿ ಮಂತ್ರಾಲಯ, ಗದ್ವಾಲ, ಬಾಗಲಕೋಟೆ, ಮುಧೋಳ, ಗಲಗಲಿ, ಖೇಡ ಮುಂತಾದ ಸ್ಥಳಗಳು ಈಗ್ಯೂ ವಿದ್ಯಾಪೀಠಗಳೆಂದೆನಿಸಿಕೊಳ್ಳುತ್ತವೆ.''

ತಮ್ಮ ಕಾರ್ಯವನ್ನು ಕನ್ನಡದ ಸೇವೆ, ಸಮಾಜ ಸೇವೆ ಎಂದು ಅವರು ಎಣಿಸಲಿಲ್ಲ. ಇಂಥ ಸೇವಾ ಭಾವವು ಮನುಷ್ಯನನ್ನು ಯಾವಾಗಲೂ ಅಧೀನಗೊಳಿಸುತ್ತದೆ ಎಂಬುದು ಅವರ ವಿಚಾರವಾಗಿದ್ದು, ಬದುಕಿನಲ್ಲಿ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸಿಕೊಂಡು ಅವುಗಳ ಪ್ರಯೋಜನ ಪಡೆಯಬೇಕೆನ್ನುವ ಹಂಬಲವಿದ್ದರೆ ಸಾಕು ನಾವು ಬೆಳೆಯುತ್ತೇವೆ. ಆಗ ಕನ್ನಡ ಬೆಳೆಯುತ್ತದೆ ಎಂಬ ಸಂದೇಶವನ್ನು ಅವರು ನಮಗೆ ಕೊಟ್ಟು ಹೋಗಿದ್ದಾರೆ. ಕನ್ನಡಕ್ಕಾಗಿ ಅಕ್ಷರಶಃ ಕೊನೆಯ ಉಸಿರಿರುವವರೆಗೂ ದುಡಿದು ತಮ್ಮ ೭೭ನೆಯ ವಯಸ್ಸಿನಲ್ಲಿ ಕ್ರಿ.ಶ. ೧೯೧೯ರಲ್ಲಿ ಕೊನೆಯುಸಿರೆಳೆದರು.

✤ ✤ ✤ ✤

ಅಧ್ಯಾಯ -೧೦

• ಕನ್ನಡ ನೀಲಾಂಜನಗಳು, ಆರತಿ ತಟ್ಟೆ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ 'ಕನ್ನಡಕ್ಕೆ ಹೋರಾಡಿದ ಕನ್ನಡಿಗರು ನೀಲಾಂಜನೆಗಳಾದರೆ, ರಸೆಲ್ಲನು ಆರತಿ ತಟ್ಟೆಯಾಗಿದ್ದಾನೆ.' ಎಂದು ಹೇಳಿದ್ದು ಸಾರ್ಥಕವಾಗಿದೆ. ಡೆಪ್ಯುಟಿ ಚೆನ್ನಬಸಪ್ಪ, ಭುಜಂಗರಾವ ಹುಯಿಲಗೋಳ, ವೆಂಟಕ ರಂಗೊ ಕಟ್ಟಿ, ಗಂಗಾಧರ ಮಡಿವಾಳೇಶ್ವರ ತುರಮರಿ, ಶಾಂತವೀರ ರಾಚಿದೇವ ಕಿತ್ತೂರ ಮೊದಲಾದವರು ಕನ್ನಡ ಭಾಷೆಯು ತನ್ನದೇ ಭೂಮಿಯಲ್ಲಿ ಉಳಿಸಿ ಬೆಳೆಸುವಂತೆ ತಪಸ್ಸು ಮಾಡಿದರು. ಆದರೆ ಪರಿಸ್ಥಿತಿಯಲ್ಲಿ ಸುಧಾರಣೆ ಆಗಿರಲಿಲ್ಲ. ಇದಕ್ಕೆ ಕಾರಣ ಇವರುಗಳೆಲ್ಲ ಸರಕಾರದ ನೀತಿ ನಿಯಮಾವಳಿಗಳ ಚೌಕಟ್ಟಿನಲ್ಲಿ ಉಸಿರು ಕಟ್ಟುವ ವಾತಾವರಣದಲ್ಲಿ ಕನ್ನಡ ಪರ ಚಟುವಟಿಕೆಗಳನ್ನು ಕೈಗೊಳ್ಳಬೇಕಿತ್ತು. ಇವರ ಭಗೀರಥ ಪ್ರಯತ್ನಗಳೆಲ್ಲ ವೈಯಕ್ತಿಕವಾಗಿದ್ದವು. ಇಲಾಖೆಯಲ್ಲಿದ್ದ ಬಹು ಸಂಖ್ಯಾತ ಅಧಿಕಾರಿಗಳು, ಶಿಕ್ಷಕರು ಮರಾಠಿಗರು ಇಲ್ಲವೇ ಆಸಕ್ತಿ ಇಲ್ಲದ ಬ್ರಿಟಿಷರು ಆಗಿದ್ದರಿಂದ ಕನ್ನಡದ ಪ್ರಗತಿ ಕುಂಟುತ್ತಿತ್ತು.

ಈ ಸಂದರ್ಭದಲ್ಲಿಯೆ ವಿಲಿಯಮ್ ಅಲೆನ್ ರಸೆಲ್ ಎಂಬ ಬ್ರಿಟಿಶ್ ಅಧಿಕಾರಿಯು ವಿದ್ಯಾಧಿಕಾರಿಯಾಗಿ ಕ್ರಿ.ಶ. ೧೮೬೪ರಲ್ಲಿ ನೇಮಕನಾದನು. 'ಸದರ್ನ ಡಿವಿಜನ್' ಎಂಬ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ಪ್ರದೇಶವು ಮೂಲತಃ ಕನ್ನಡದ್ದೇ ಎಂಬ ಪ್ರಜ್ಞೆಯು ವಾಲ್ಟರ್ ಎಲಿಯಟ್‌ನಂತೆ ರಸೆಲ್ಲನಿಗೂ ಇದ್ದಿತು. ಅಂತೆಯೇ ಮುಂದಿನ ದಿನಗಳಲ್ಲಿ ಸುಮಾರು ಇಪ್ಪತ್ತು ವರುಷ ಈ ವಿಭಾಗದಲ್ಲಿಯೇ ಕೆಲಸ ಮಾಡುವಾಗ ಕನ್ನಡವನ್ನು ಭದ್ರವಾಗಿ ಇಲ್ಲಿ ನೆಲೆಯೂರಿಸುವ ಪ್ರಯತ್ನದಲ್ಲಿ ಅವನು ವಿಶೇಷ ಯಶಸ್ಸನ್ನು ಸಾಧಿಸಲು ಸಾಧ್ಯವಾಯಿತು.

ಅವನು ಈ ಭಾಗದ ಶಿಕ್ಷಣಾಧಿಕಾರಿಯಾಗಿ ಬಂದ ಮೇಲೆ ಪರಿಸ್ಥಿತಿಯನ್ನು ಅಭ್ಯಸಿಸಿದನು. ಪರಿಸ್ಥಿತಿ ಗೊಂದಲಮಯುವಾಗಿದ್ದುದನ್ನು ಕಂಡನು. ಜನರ ಭಾಷೆ ಕನ್ನಡವಾಗಿದ್ದರೂ ಶಾಲೆಗಳಲ್ಲಿ ಮರಾಠಿಯನ್ನೇ ಕಲಿಸಲಾಗುತ್ತಿತ್ತು. ಅದನ್ನು ಕಂಡ ರಸೆಲ್ಲನು ತನ್ನ ಮೇಲಿನ ಇಲಾಖೆಯ ನಿರ್ದೇಶರಿಗೆ ಮೊದಲನೆಯ ವರದಿಯನ್ನು ಕಳಿಸುವಾಗ ಇಲ್ಲಿಯ ಚಿತ್ರವನ್ನು ಸ್ಪಷ್ಟ ಮಾತಗಳಲ್ಲಿ ಕೊಟ್ಟಿದ್ದಾನೆ.

The formation of the Canarese Division from 1863 afer the addition of North canara to this presidency. There are very few educated Canarese in this or any other Government

Department. The deputy inspectors and English Masters are none of them, Canarese and there are few Canarese even among the vernacular School masters in the District. The Canarese language has never been taught and culitivated in this region as the Gujarati and Marathi in theirs.. While in the other division the means for a good vernacular education are ampel in this division. Canarese books (and masters) are only in course of preparations.

As to want of Canarese men, I am endeavouring secure the services of all Canarese competenent for the higher as well as the lower posts.

One of the chief objects during the past year had been (as it will be for some time to come) to place the Canarese language on the same footing in the schools of this division Marathi and Gujarati occupy in their division."

ರಸಲ್ ಹೇಳುವಂತೆ ನುರಿತ ಹಾಗೂ ಸರಿಯಾದ ಕನ್ನಡವನ್ನು ಬಲ್ಲ ಶಿಕ್ಷಕರ ಅಭಾವ ಮತ್ತು ಪಠ್ಯ ಪುಸ್ತಕಗಳ ಕೊರತೆ, ಇವು ಮುಂಬಯಿ ಕರ್ನಾಟಕದ ಶಿಕ್ಷಣ ಪ್ರಗತಿಗೆ ಅಡ್ಡಿ ಆತಂಕಗಳಾಗಿದ್ದವು. ವೆಂಕಟ ರಂಗೊ ಕಟ್ಟಿ ಮತ್ತು ಗಂಗಾಧರ ಮಡಿವಾಳೇಶ್ವರ ತುರಮರಿಯವರ ಮುಖಾಂತರ ರಸಲ್‌ನು ಮುಂದಿನ ಮೂರು -ನಾಲ್ಕು ವರುಷಗಳಲ್ಲಿ ಪಠ್ಯಪುಸ್ತಕದಲ್ಲಿಯ ಬಹುಮಟ್ಟಿನ ಕೊರತೆಯನ್ನು ಸುಧಾರಿಸಿದನು. ಅಲ್ಲಿಯವರೆಗೂ ಮರಾಠಿ ಪಠ್ಯಗಳ ಭಾಷಾಂತರಗಳನ್ನೇ ಪಠ್ಯ ಪುಸ್ತಕಗಳನ್ನಾಗಿ ಕನ್ನಡ ಮಕ್ಕಳು ಓದುತ್ತಿದ್ದರು. ಮಹಾರಾಷ್ಟ್ರದ ಇತಿಹಾಸ ಚರಿತ್ರೆಗಳನ್ನು ಓದುತ್ತಿದ್ದ ಹುಡುಗರು ಈಗ ಈಲ್ಲಿಯ ಹಂಪೆ. ಗೇರುಸೊಪ್ಪೆ ತಡೆಸಲು ಇತ್ಯಾದಿಯಾಗಿ ಓದುವಂತೆ ಕಟ್ಟಿ ಅವರು ಪಠ್ಯಗಳ್ನು ಸಿದ್ಧಪಡಿಸಿದರೆ, ತುರಮರಿಯವರು ಕನ್ನಡ ಕಾವ್ಯಗಳಿಂದ ಆಯ್ದ ಭಾಗಗಳನ್ನು ಪಠ್ಯಕ್ರಮದಲ್ಲಿ ಸೇರಿಸಿದರು. ಮೈಸೂರು ಶಿಕ್ಷಣ ಇಲಾಖೆಯು 'ಮೂರನೆಯ ಪುಸ್ತಕ' ದವರೆಗೆ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸಿದರೆ, ಮುಂಬಯಿ ಕರ್ನಾಟಕದವರು 'ಐದನೆಯ ಪುಸ್ತಕ' ದವರೆಗೆ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿದ್ದರೆಂದರೆ ಅದೊಂದು ದೊಡ್ಡ ಸಾಧನೆಯೆ ಆಗಿತ್ತು. ರಸೆಲ್ ಅದನ್ನೂ ತನ್ನ ವರದಿಯಲ್ಲಿ ಕಾಣಿಸಿದ್ದಾನೆ.

ರಸೆಲ್ ಕಂಡಿದ್ದ ಇನ್ನೊಂದು ಕೊರತೆ ಶಿಕ್ಷಕರನ್ನು ಕುರಿತಾದದ್ದು . ಶಿಕ್ಷಕರು ಬೇಕಾದಷ್ಟು ಜನ ಇದ್ದರು. ಆದರೆ ಕನ್ನಡ ಪರಿಶ್ರಮದ ಶಿಕ್ಷಕರು ಇರಲಿಲ್ಲ. ಇಂಥರವನ್ನು ತಯಾರಿಸಲೆಂದು ಕ್ರಿ.ಶ. ೧೮೫೭ರಲ್ಲಿ ಧಾರವಾಡದಲ್ಲಿ ನಾರ್ಮಲ್

ಸ್ಕೂಲ್ ಸ್ಥಾಪನೆಯಾಗಿತ್ತಷ್ಟೆ. ಅದುವೆ ಕನ್ನಡ ಟ್ರೇನಿಂಗ್ ಕಾಲೇಜಿನ ಉಗಮ ಸ್ಥಾನವಾಗಿತ್ತು. ಆದರೆ ಸಾಕಷ್ಟು ವಿದ್ಯಾರ್ಥಿಗಳು ಬರಲಿಲ್ಲ ಎಂಬ ಕಾರಣದಿಂದ ಅದನ್ನು ಕ್ರಿ.ಶ. ೧೮೬೧ರಲ್ಲಿ ಬೆಳಗಾವಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ವಿದ್ಯಾರ್ಥಿಗಳೇನೊ ಬಂದರು. ಅರ್ಧಕ್ಕಿಂತ ಹೆಚ್ಚು ಜನ ಮರಾಠಿಗರು! ಇಲ್ಲಿಯೇ ಅಧ್ಯಾಪಕರಾಗಿದ್ದ ಡೆಪ್ಯುಟಿ ಚೆನ್ನಬಸಪ್ಪ, ವೆಂಕಟ ರಂಗೋ ಕಟ್ಟಿ ಅವರುಗಳು ಪರಿಸ್ಥಿತಿಯನ್ನು ಸುಧಾರಿಸಲು ಶ್ರಮಿಸಿದರು. ಈ ಸಮಯದಲ್ಲೇ ರಸೆಲ್ ವಿದ್ಯಾಧಿಕಾರಿಯಾಗಿ ಬಂದನು. ಅದೇ ವರುಷ ಚನ್ನಬಸಪ್ಪ ಟ್ರೇನಿಂಗ್ ಸ್ಕೂಲಿನ ಪ್ರಿನ್ಸಿಪಾಲರಾದರು. ತುರಮರಿಯವರೂ ಸಹ ಅಧ್ಯಾಪಕರೆಂದು ಬಂದರು. ಮುಂದಿನ ಒಂದೆರಡು ವರುಷಗಳಲ್ಲಿ ಮರಾಠಿಯ ವಾತಾವರಣವೂ ತಿಳಿಯಾಗತೊಡಗಿತು. ಅರ್ಧಕ್ಕಿಂತ ಹೆಚ್ಚು ಕನ್ನಡ ವಿದ್ಯಾರ್ಥಿಗಳು ಮುಂದೆ ಬಂದರು. ಇದೇ ವೇಳೆಗೆ ರಸೆಲ್‌ನು ಸರ್ಕಾರಕ್ಕೆ ಪತ್ರ ಬರೆದು ಈ ತರಬೇತಿ ಶಾಲೆಯನ್ನು ಕಾಲೇಜಿನ ಮಟ್ಟಕ್ಕೆ ಏರಿಸಿದ್ದುದು ಒಂದು ದೊಡ್ಡ ಸಾಧನೆ ಎನಿಸಿತು.

ಕ್ರಿ.ಶ. ೧೮೭೫ರಲ್ಲಿ ಹುಯಿಲಗೋಳ ಭುಜಂಗರಾಯರು ಪ್ರಿನ್ಸಿಪಾಲರಾಗಿ ಬರುವ ವೇಳೆಗೆ ಟ್ರೇನಿಂಗ್ ಕಾಲೇಜಿನಲ್ಲಿ ಕನ್ನಡದ ಗಂಟೆಯು ಬಾರಿಸತೊಡಗಿತ್ತು. ಆ ಧ್ವನಿಯಲ್ಲಿ ಶಾಂತವೀರ ರಾಚಿದೇವ ಕಿತ್ತೂರರ ಪಾತ್ರವನ್ನೂ ಮರೆಯುವಂತಿಲ್ಲ.

ಕ್ರಿ.ಶ. ೧೮೭೫ರಲ್ಲಿ ಟ್ರೇನಿಂಗ್ ಕಾಲೇಜು ಧಾರವಾಡಕ್ಕೆ ಮರಳಿ ಸ್ಥಾನಾಂತರಗೊಂಡಿತು. ಅಂದಿನಿಂದ ಮುಂದೆ ಕ್ರಿ.ಶ ೧೯೧೭ರಲ್ಲಿ ಧಾರವಾಡಲ್ಲಿ ಕರ್ನಾಟಕ ಕಾಲೇಜು ಪ್ರಾರಂಭವಾಗುವವರೆಗೆ ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವಲ್ಲಿ ಇದೊಂದು ಮಹತ್ವಪೂರ್ಣ ಶಿಕ್ಷಣ ಸಂಸ್ಥೆಯಾಗಿದ್ದಿತು. ಉಚ್ಚ ಶಿಕ್ಷಣ ಕಾಲೇಜುಗಳು ಈ ಭಾಗದಲ್ಲಿ ಇಲ್ಲದಿದ್ದಾಗ ಇದ್ದ ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡಕ್ಕೆ ಅಂಥ ಹೇಳಿಕೊಳ್ಳುವಂಥ ಸ್ಥಾನವಿಲ್ಲದಿದ್ದಾಗ, ಟ್ರೇನಿಂಗ್ ಕಾಲೇಜಿನ ಶಿಕ್ಷಕರೂ, ವಿದ್ಯಾರ್ಥಿಗಳು ಕನ್ನಡ ಪರಂಪರೆಯನ್ನು ಕಾಯ್ದುಕೊಂಡು ಬಂದರು. ಇಲ್ಲದಿದ್ದರೆ ಕನ್ನಡ ಪುನರುಜ್ಜೀವನಕ್ಕೆ ಇನ್ನೂ ಹೆಚ್ಚು ಕಾಲ ಹಿಡಿಯಬಹುದಾಗಿತ್ತು. ಇಲ್ಲಿಯ ಕನ್ನಡ ನಂದಾದೀಪದಿಂದ ತಮ್ಮ ಕಿರು ಸೊಡರನ್ನು ಬೆಳೆಸಿಕೊಂಡು ತರಬೇತುಗೊಂಡ ಶಿಕ್ಷಕರು ಕನ್ನಡದ ಬೆಳಕನ್ನು ಹಳ್ಳಿ - ಹಳ್ಳಿಗೆ ಕೊಂಡೊಯ್ದರು.

ಶಾಮರಾವ್ ವಿಟ್ಠಲ ಕೈಕಿಣಿ (೧೮೪೧-೧೯೦೫) ಅಂಥವರು ಸರಕಾರದಲ್ಲಿ ಕನ್ನಡಕ್ಕೆ ಉಚ್ಚ ಸ್ಥಾನವನ್ನು ಕಲ್ಪಿಸಿದರು. ಮುಂಬಯಿ ವಿಶ್ವವಿದ್ಯಾಲಯದಲ್ಲೂ ಕನ್ನಡಕ್ಕೆ ಹೆಚ್ಚಿನ ಸ್ಥಾನವನ್ನು ಗಳಿಸಿಕೊಟ್ಟರು. ಸೂರಿ ವೆಂಕಟರಮಣ ಶಾಸ್ತ್ರಿಗಳು (೧೮೫೩-೧೮೯೩) ಪತ್ರಿಕೋದ್ಯಮ ಹಾಗೂ ಅಚ್ಚು ಕೂಟಗಳ ಕ್ಷೇತ್ರದಲ್ಲಿ ಕನ್ನಡ ಮೇಲುಗೈಯಾಗುವಂತೆ ಮಾಡಿ ಆಗಿನ ಮರಾಠಿ, ಗುಜರಾತಿ, ಇಂಗ್ಲಿಷ್ ಪತ್ರಿಕಾ ಕರ್ತರ ಕಣ್ಣುಗಳನ್ನು ಕನ್ನಡದತ್ತ ಸೆಳೆದರು. ಶಾಂತಕವಿ (ಬಾಳಾಚಾರ್ಯ ಸಕ್ಕರಿ

೧೮೫೬-೧೯೨೦) ಗಳಂತೂ ತಮ್ಮ ಕಾವ್ಯದಿಂದ, ಕೀರ್ತನಗಳಿಂದ, ನಾಟಕಗಳಿಂದ ಕನ್ನಡದ ಹುಚ್ಚನ್ನು ಮನೆ-ಮನೆಗಳಲ್ಲಿಯ ಮನಗಳಿಗೆ ಮುಟ್ಟಿಸಿದರು. ಸತ್ತ ಜನತೆಯನ್ನು ಜೀವಂತಗೊಳಿಸಿದರು. ಭೂಮಿ ಹದವಾಗಿತ್ತು. ಸರಕಾರಿ ಮಟ್ಟದಲ್ಲಿ ಕನ್ನಡಿಗರು ನಡೆಸಿದ ಹೋರಾಟವನ್ನು ಸರಕಾರದ ಹೊರಗೆ ಒಂದೆಡೆ ಸೇರಿ ಸಾಂಘಿಕವಾಗಿ ಹೋರಾಡುವ ಕಾಲ ಕೂಡಿ ಬಂದಿತ್ತು. ಅದಕ್ಕೊಬ್ಬ ಕಾರಣ ಪುರುಷ ಬೇಕಾಗಿದ್ದನು. ಅವರು ರಾಮಚಂದ್ರ ಹಣಮಂತ ದೇಶಪಾಂಡೆ ಎಂಬ ರೂಪದಲ್ಲಿ ಬಂದರು. ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಅಖಂಡ ಕರ್ನಾಟಕದ ಬೀಜವನ್ನು ಬಿತ್ತಿದರು. ಅದು ಇನ್ನೊಂದು ರೋಚಕ ಕಥೆ.

♣ ♣ ♣ ♣

ಅಧ್ಯಾಯ -೧೧

• ಕನ್ನಡಕ್ಕೊಂದು ಗುಡಿ

''ಕನ್ನಡ ಭಾಷೆಯ ದೀನ ಸ್ಥಿತಿಯನ್ನು ದೂರಮಾಡುವುದಕ್ಕಾಗಿ ಕನ್ನಡ ಜನರ ಸಹಾಯದಿಂದ ಒಂದು ಸಂಘವನ್ನು ಸ್ಥಾಪಿಸಬೇಕೆಂಬ ವಿಚಾರವು ನನ್ನ ಮನಸ್ಸಿನಲ್ಲಿ ಸನ್ ೧೮೮೭ನೇ ಇಸವಿಯಲ್ಲಿ ಹುಟ್ಟಿತು. ಅಂದಿನಿಂದ ಈ ಹೊತ್ತಿನ ವರೆಗೆ ಅದೇ ಪ್ರಯತ್ನದಲ್ಲಿ ತೊಡಗಿರುತ್ತೇನೆ. ಇವೊತ್ತಿಗೆ ೩೭೦೦ ರೂಪಾಯಿಗಳ ಅಂಕಗಳೂ (ವಾಗ್ದಾನ) ರೋಖ ೨೮೭ ರುಪಾಯಿ ಕೂಡಿರುತ್ತವೆ.

ಹಿಂದೂಸ್ಥಾನದ ಎಲ್ಲ ಭಾಷೆಗಳಲ್ಲಿ ಕನ್ನಡವು ಹಳೆಯದಿರುತ್ತದೆ. ಕನ್ನಡ ಮಾತನಾಡುವವರ ಸಂಖ್ಯೆಯು ೧,೧೦,೦೦೦ ಇರುತ್ತದೆ. ಆರನೇಯ ಶತಮಾನದಿಂದ ಈ ಭಾಷೆಯಲ್ಲಿ ಎಷ್ಟೋ ಹೆಸರಾದ ಕವಿಗಳು ಆಗಿ ಹೋದರು. ಅವರಿಂದ ದೊಡ್ಡ ದೊಡ್ಡ ಗ್ರಂಥಗಳು ರಚಿಸಲ್ಪಟ್ಟಿವೆ. ಆದರೂ ಅವುಗಳನ್ನು ಓದಬೇಕೆಂಬ ಲವಲವಿಕೆ ಈಗಿನ ಕನ್ನಡಿಗರಲ್ಲಿ ತಕ್ಕಷ್ಟು ಇಲ್ಲ. ಇದ್ದ ಹಳೆ ಗ್ರಂಥಗಳು ಕೂಡ ಮೂಲೆಗೆ ಬೀಳುತ್ತಲಿವೆ. ಕನ್ನಡ ಭಾಷೆಯು ಅಪೂರ್ಣವಾದದ್ದು ಇದರಲ್ಲಿ ಸಾಕಷ್ಟು ಶಬ್ದಗಳೂ ಕೂಡಾ ಇಲ್ಲವೆಂದು ಕೆಲವರು ಅರಿಯದ ಜನರು ಅನ್ನುತ್ತಿರುತ್ತಾರೆ. ಇದು ತೀರ ತಪ್ಪಿನ ತಿಳುವಳಿಕೆಯಾಗಿದೆ. ಸಂಸ್ಕೃತ ಶಬ್ದಗಳ ಸಹಾಯವಿಲ್ಲದೆ, ಅಚ್ಚಕನ್ನಡ ಭಾಷೆಯನ್ನು ಬರೆಯುವುದು, ಕನ್ನಡ ಗ್ರಂಥಗಳ ಅವಲೋಕನವು ಹೆಚ್ಚಾದಂತೆ ಸಾಧ್ಯವಾಗಬಹುದು.

ಎಲ್ಲ ಕನ್ನಡಿಗರು ಸ್ವಭಾಷೆಯ ಅಭಿಮಾನ ಹಿಡಿದು ಆ ಸಂಘದ ಕೆಲಸವನ್ನು ನೆರವೇರಿಸಲಿಕ್ಕೆ ತಮ್ಮ ಕೈಲಾದಮಟ್ಟಿಗೆ, ತನು ಮನ ಧನಗಳಿಂದ ಸಹಾಯ ಮಾಡಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ.''

ಮೂವತ್ತರ ಹರೆಯದ, ಬ್ರಿಟಿಷ್ ಸರಕಾರದ ನೌಕರಿಯಲ್ಲಿದ್ದ ತರುಣನೊಬ್ಬ, ಧಾರವಾಡದ ಹೊಸ ಯೆಲ್ಲಾಪುರ ಹಳ್ಳಿಯ,ಶುಕ್ರವಾರ ಪೇಟೆಯ, ಉಡುಪಿ ಓಣಿಯಲ್ಲಿಯ ಅಂದಿನ ಶ್ರೀ ಶ್ರೀನಿವಾಸರಾವ್ ಗದಗಕರ ವಕೀಲರ ಮನೆಯ ಅಟ್ಟದ ಮೇಲೆ, ದಿನಾಂಕ ೧೮೯೦ರನೆಯ ಇಸವಿಯ ಜುಲೈ ೨೦ ರಂದು ಸಾಯಂಕಾಲದ ೫ ಗಂಟೆಯ ಗೋಧೂಳಿ ಮುಹೂರ್ತದಲ್ಲಿ ಹೀಗೆ ಸೆರಗೊಡ್ಡಿ ಬೇಡಿಕೊಂಡನು. ಉತ್ತರ ಕರ್ನಾಟಕದ ಬಹುತರ ಎಲ್ಲ ಸಭ್ಯ ಗೃಹಸ್ಥರೂ ಆ ಸಭೆಯಲ್ಲಿ ಸೇರಿದ್ದರು. ಅದೊಂದು ಅಪೂರ್ವ ಸನ್ನಿವೇಶ. ಎಲ್ಲೆಲ್ಲೂ ಕತ್ತಲೆ, ಗಾಢ ಅಂಧಃಕಾರ. ಸುತ್ತಲೂ , ಕನ್ನಡದ ಭವ್ಯ ಪರಂಪರೆಯ ವಿಸ್ಮೃತಿಯಿಂದ ಸ್ವಾಭಿಮಾನ

ಶೂನ್ಯರಾಗಿದ್ದ ಸ್ವಭಾಂಧವರು. ಅವರ ಮನ ಮುಟ್ಟಿ, ಅವರ ಹೃದಯದಲ್ಲಿ ಕನ್ನಡದ ಕಿಡಿ ಹೊತ್ತಿಸಿದ ಆ ಮಹಾ ದಿನದಂದು ಕನ್ನಡಾಂಬೆಯ ಗುಡಿಯೊಂದನ್ನು ಕಟ್ಟಲು ಸೆರಗೊಡ್ಡಿ ಬೇಡಿಕೊಂಡವರು ರಾ.ಸಾ. (ರಾವ ಸಾಹೇಬ) ರಾಮಚಂದ್ರ ಹಣಮಂತ ದೇಶಪಾಂಡೆ. ಕಟ್ಟಿದ್ದು ಧಾರವಾಡದ 'ಕರ್ನಾಟಕ ವಿದ್ಯಾವರ್ಧಕ ಸಂಘ' ಐದೂವರೆ ಶತಮಾನಗಳಷ್ಟು ಹಿಂದೆ ಇಂಥದೇ ಒಂದು ಸಂದರ್ಭದಲ್ಲಿ ಹಕ್ಕ ಬುಕ್ಕರೆಂಬ ಇಬ್ಬರು ಅಣ್ಣತಮ್ಮಂದಿರು ಸ್ಥಾಪಿಸಿದ ವಿಜಯನಗರ ಸಮ್ರಾಜ್ಯದ ನೆನಪು ಬರದೆ ಇರದು.

ಅದು ಒಂದು ದಿನದಲ್ಲಿ ಕಟ್ಟಿದ ಗುಡಿಯಲ್ಲ. ಅವರೆ ಹೇಳಿಕೊಂಡಂತೆ ಅಂಥದೊಂದು ಸಂಘಟನೆಯನ್ನು ಮಾಡಲು ಮೂರು ವರುಷ ಚಿಂತಿಸಿದ್ದಾರೆ. ಹಲವಾರು ಜನರನ್ನು ಸಂಪರ್ಕಿಸಿದ್ದಾರೆ. ತಮ್ಮ ಮನಸಿನಲ್ಲಿದ್ದ ಗುಡಿ, ಅಂದಿನ ಕಾಲದಲ್ಲಿ ಇಡೀ ಭಾರತದಲ್ಲಿ ಗುಜರಾತದಲ್ಲಿ ಮಾತ್ರ ಇತ್ತು ಅದುವೆ 'ಗುಜರಾತ ಸಾಹಿತ್ಯ ಪರಿಷತ್ತು' ಅದು ಹುಟ್ಟಿದ್ದು ಕ್ರಿ.ಶ. ೧೮೪೮ರಲ್ಲಿ. ಅದು ಬಿಟ್ಟರೆ ಇನ್ನೆಲ್ಲೂ ಇರಲಿಲ್ಲ. ಪತ್ರ ಬರೆದು ಅದರ ರೂಪು- ರೇಷೆಗಳನ್ನು ತರಿಸಿಕೊಂಡರು. ಅದರಲ್ಲಿ ತಮಗೆ ಬೇಕಾದ ಬದಲಾವಣೆಗಳನ್ನು ಮಾಡಿಕೊಂಡರು. ಸಂಘಟನೆಗೆ 'ಕರ್ನಾಟಕ ವಿದ್ಯಾವರ್ಧಕ ಸಂಘ' ಎಂದು ಹೆಸರನ್ನು ಕೊಟ್ಟರು. ಸಂಘದ ಘಟನೆಯನ್ನು ತಯಾರಿಸಿದರು. ೧೮೯೦ರ ಜನವರಿ ೧ರಂದು ಘಟನೆಯ ಕರಡು ಪ್ರತಿಯನ್ನು ತಾವು ಸಂಪರ್ಕಿಸಿದ ಎಲ್ಲ ಕನ್ನಡ ಬಾಂಧವರಿಗೆ ಕಳಿಸಿದರು. ನಿಯೋಜಿತ ಸಂಘದ ಮೊದಲನೆಯ ಸಭೆಯನ್ನು, ಜುಲೈ ೨೦, ೧೮೯೦ರಂದು ಕರೆಯಬೇಕೆಂದು ನಿರ್ಧರಿಸಿ. ಒಂದು ವಾರ ಮುಂಚಿತ ಎಲ್ಲರಿಗೂ ನೋಟೀಸನ್ನು ಕಳಿಸಿದರು. ನೋಟೀಸಿನ ಮೇಲೆ ಶ್ರೀಕಾರದ ಬದಲು 'ಕನ್ನಡ ಬೆಳೆಯಲಿ' ಎಂದು ಬರೆದಿದ್ದರು. ಅದುವೆ ಮುಂದಿನ ದಿನಗಳಲ್ಲಿ 'ಸಿರಿಗನ್ನಡಂ ಗೆಲ್ಗೆ' ಎಂಬ ಸಪ್ತಾಕ್ಷರಿ ಮಂತ್ರವಾಯಿತು.

ರಾಮಚಂದ್ರ ಹಣಮಂತ ದೇಶಪಾಂಡೆ ಅವರು ಧಾರವಾಡ ಜಿಲ್ಲೆಯ ನರೇಂದ್ರ ಊರಿನ ವತನದಾರರು. ಹುಟ್ಟಿದ್ದು ೧೮೬೧ ಮಾರ್ಚ್ ತಿಂಗಳ ೨೧ರಂದು. ಹುಡುಗ ಶಾಲೆಯಲ್ಲಿ ಚುರುಕು . ಹೈಸ್ಕೂಲಿನಲ್ಲಿ ಅವರ ಮಾಸ್ತರು, ಧೋಂಡೊ ನರಸಿಂಹ ಮುಳಬಾಗಲ ಪಂಡಿತರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉನ್ನತ ವರ್ಗದಲ್ಲಿ ಪಾಸಾದನು. ವಿದ್ಯಾರ್ಥಿ ವೇತನ ಸಿಕ್ಕಿತು. ಪುಣೆಯ ಡೆಕ್ಕನ್ನ ಕಾಲೇಜನ್ನು ಸೇರಿದರು. ಅಲ್ಲಿಯೂ ಸ್ಕಾಲರ ವಿದ್ಯಾರ್ಥಿ. ಸ್ನಾತಕ ಪದವಿಯಲ್ಲಿ ಉನ್ನತ ಸ್ಥಾನವನ್ನು ಉಳಿಸಿಕೊಂಡು 'ದಕ್ಷಿಣ ಫೆಲೋ' ಆದರು. ಮತ್ತೆ ಶಿಕ್ಷಣ ಮುಂದುವರೆಸಿ ಎಂ.ಎ. ಪರೀಕ್ಷೆಯಲ್ಲಿ ಸುವರ್ಣ ಪದಕವನ್ನು ಪಡೆದರು. ಜೊತೆಗೆ ಕರ್ನಾಟಕದ ಮೊದಲ ಎಂ.ಎ. ಹೆಗ್ಗಳಿಕೆಗೆ ಪಾತ್ರರಾದರು.

೧೮೮೪ ಡಿಸೆಂಬರ್ ತಿಂಗಳಲ್ಲಿ ಎಂ.ಎ. ಪರೀಕ್ಷೆಯಲ್ಲಿ ವಿಶಿಷ್ಟತೆ ಮೆರೆದು ಪಾಸಾದ 'ರಾಹದೇ' ಅವರಿಗೆ ಧಾರವಾಡ ಭಾಗದ ಕಮೀಶನರ್ ಈ ಪಿ. ರಾಬರ್ಟ್‌ಸನ್ ಅವರು ಇಟ್ಟಿದ್ದ ಬಂಗಾರದ ಪದಕ ಹಾಗೂ ಐದು ನೂರು

ರೂಪಾಯಿಗಳ ಗ್ರಂಥಗಳು ಬಹುಮಾನವಾಗಿ ದೊರೆತವು. ರೈಲಿನಿಂದ ಧಾರವಾಡಕ್ಕೆ ಮರಳಿದಾಗ, ಧಾರವಾಡದ ಜನತೆ ಇವರನ್ನು ರೈಲು ನಿಲ್ದಾಣದಲ್ಲಿ ಆರತಿಯಿಂದ ಸತ್ಕರಿಸಿ ಆನೆಯ ಮೇಲೆ ಮೆರವಣಿಗೆಯಲ್ಲಿ ಊರೊಳಗೆ ಕರೆದೊಯ್ದರು. ಅಂದಿನಿಂದ ಅವರು 'ರಾಹದೇ' ಬದಲು ಎಂ.ಎ. ದೇಶಪಾಂಡೆ ಎಂದೇ ಹೆಸರಾದರು!

ಪರಿಣಾಮ ಗೊತ್ತಾಗಿ ಧಾರವಾಡಕ್ಕೆ ಬಂದ ಮೇಲೆ, ಒಂದು ದಿನ ಸಹಜವಾಗಿ ಅಂದಿನ ವಿದ್ಯಾಧಿಕಾರಿಯಾಗಿದ್ದ ರಸೆಲ್‌ನನ್ನು ಕಾಣಲು ಹೋಗಿದ್ದರು. ಕನ್ನಡ ಪರ ಧೋರಣೆಗಳನ್ನು ಹೊಂದಿದ್ದ ರಸೆಲ್ ಇವರನ್ನು ಡೆಕ್ಕನ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಗುರುತಿಸಿದ್ದರು. ಸಂತೋಷ ಪಟ್ಟಿದ್ದರು. ಈಗ ಎಂ.ಎ. ಪದವಿ ಪಡೆದು ಎದುರಿಗೆ ಬಂದಾಗ, ರಸೆಲ್ .ರಾ. ಹ. ದೇಶಪಾಂಡೆ ಅವರನ್ನು ಮನಸಾರೆ ಅಭಿನಂದಿಸಿದರು. ಆದಾಗ ಅವರಿಗೆ ಇಪ್ಪತ್ತೂರು ವರುಷ. ಶ್ರೀಮಂತ ಮನೆತನ. 'ಮುಂದೆ ಏನು ಮಾಡಬೇಕೆದಿರುವಿ ?' ಎಂದು ಕೇಳಿದರು. 'ವ್ಯಾಸಂಗವನ್ನು ಮುಂದುವರೆಸಿ ಎಲ್.ಎಲ್.ಬಿ. ಮಾಡಬೇಕೆಂದಿರುವೆ' ಎಂದರು ರಾಹದೇ. ಅದಕ್ಕೆ ರಸೆಲ್ ಕೊಟ್ಟ ಉತ್ತರ ರಾಹದೇ ಅವರ ದಿಕ್ಕನ್ನೇ ಬದಲಾಯಿಸಿತು. ರಸೆಲ್ ಹೇಳಿದನು.

"ಧಾರವಾಡ ಹೈಸ್ಕೂಲಿಗೆ ಕೀರ್ತಿಯನ್ನು ವಿಶ್ವ ವಿದ್ಯಾಲಯದ ಉನ್ನತ ಮಟ್ಟಕ್ಕೆ ಒಯ್ದುದ್ದಕ್ಕಾಗಿ ನನ್ನ ಅಭಿನಂದನೆಗಳು. ಎಂ.ಎ. ಪಡೆದ ಮೊದಲ ವಿದ್ಯಾರ್ಥಿಯಾದ ನೀನು ಕರ್ನಾಟಕದ ಹೆಸರನ್ನು ಮುಂದೆ ತರಬೇಕು. ನಿನ್ನ ಹಾಗೂ ನಿಮ್ಮ ಮನೆತನ ದೃಷ್ಟಿಯಿಂದ ನೀನು ಎಲ್‌ಎಲ್‌ಬಿ ಓದವುದು ಒಳ್ಳೆಯ ವಿಚಾರ ಆಗಿರಬಹುದು. ಆದರೆ ನಾನು ಒಪ್ಪಲಾರೆ. ಪದವೀಧರರಾಗಿ ಸಮಾಜದಲ್ಲಿ ಮುಂದೆ ಬರುತ್ತಿರುವ ತರುಣರು ದೇಶದ ಪ್ರಗತಿಗಾಗಿ ದುಡಿಯಬೇಕಾದುದು ತಮ್ಮ ಜವಾಬ್ದಾರಿ ಎಂಬುದನ್ನು ತಿಳಿಯಬೇಕು. ಕಳೆದ ಇಪ್ಪತ್ತು ವರುಷಗಳ ನನ್ನ ಅನುಭವದಿಂದ ಈ ವಿಭಾಗದ ಶಿಕ್ಷಣದ ಮಂದಗತಿಗೆ ಈ ಪದವೀಧರರೇ ಕಾರಣರೆಂದು ಹೇಳಬಲ್ಲೆ. ತಾಯ್ನುಡಿಯ ಅಭಿಮಾನ ಮೂಡದೇ ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಬಗ್ಗೆ ನಿಜವಾದ ಹಸಿವು ಹುಟ್ಟಲಾರದು. ಅಂಥ ಅಭಿಮಾನ ಹುಟ್ಟಿಸಲು ಸಮರ್ಥರಾದ ಶಿಕ್ಷಕರು ಮುಂದೆ ಬರುತ್ತಿಲ್ಲ. ನಮ್ಮ ಪದವೀಧರ ಶಿಕ್ಷಕರಲ್ಲಿ ಕನ್ನಡ ಮಾತೃಭಾಷೆ ಉಳ್ಳವರು ತೀರ ಕಡಿಮೆ. ಇಂಥ ಸಂದರ್ಭದಲ್ಲಿ ನೀನು ಶಿಕ್ಷಣ ಖಾತೆಯನ್ನು ಏಕೆ ಸೇರಬಾರದು?'' ಎಂದು ರಸೆಲ್ ಕೇಳಿದಾಗ, ರಾಹದೇ ಅವರು ವಕೀಲಿ ಆಸೆಯನ್ನು ಅಲ್ಲೇ ಬಿಟ್ಟುಬಿಟ್ಟರು.

ಮರುತಿಂಗಳು, ೧೮೮೪ರ ಜನವರಿ ತಿಂಗಳಲ್ಲಿ ಅಂದಿನ ಶಿಕ್ಷಣ ಇಲಾಖೆಯ ನಿರ್ದೇಶಕ ಕೆ.ಎಮ್. ಚಾಟಫೀಲ್ಡನು ರಸೆಲ್‌ನ ಶಿಫಾರಸಿನಂತೆ ಬೆಳಗಾವಿ ಸರದಾರ ಹೈಸ್ಕೂಲಿನಲ್ಲಿ ಸಹಾಯಕ ಹೆಡ್ ಮಾಸ್ತರ ಎಂದು ರಾ.ಹ. ದೇಶಪಾಂಡೆ ಅವರನ್ನು ನೇಮಿಸಿದನು.

ಬೆಳಗಾವಿ ಸರದಾರ ಹೈಸ್ಕೂಲು ಅಂದಿನ ದಿನಗಳಲ್ಲಿ ಬಹಳ ಮುಖ್ಯವಾದ ವಿದ್ಯಾ ಸಂಸ್ಥೆಯಾಗಿತ್ತು. ವಿದ್ಯಾಭ್ಯಾಸವು ಕೇವಲ ಶ್ರೀಮಂತ ವರ್ಗದ ಸೊತ್ತಾಗಿತ್ತು. ರಾ.ಹ. ದೇಶಪಾಂಡೆ ಅವರು ಹಾಜರಾದ ದಿನಗಳಲ್ಲಿ ಹೈಸ್ಕೂಲಿನ ಶಿಕ್ಷಕರು, ವಿದ್ಯಾರ್ಥಿಗಳು ಸಂಸ್ಥಾನೀ ರೀವಿಯನ್ನು ನಡೆಸಿಕೊಂಡು ಬಂದವರಾಗಿದ್ದರು. ಹೈಸ್ಕೂಲಿನಲ್ಲಿ ಮರಾಠಿಗೆ ರಾಜಮರ್ಯಾದೆ ! ಮೊದಲ ಸಹಾಯಕ ಹೆಡ್ ಮಾಸ್ತರರೆಂದು ಕನ್ನಡಿಗನೊಬ್ಬ ಬಂದಿದ್ದರಿಂದ ಉಳಿದ ಅಧ್ಯಾಪಕರಿಗೆ ಅಸಮಾಧಾನ. ತಮ್ಮ ವಿರುದ್ಧ ಗುಸು ಗುಸು ನಡೆದಿದೆ ಎಂಬುದು ರಾ.ಹ. ದೇಶಪಾಂಡೆ ಅವರಿಗೆ ಗೊತ್ತಾಗಲು ಬಹಳ ದಿನಗಳು ಹಿಡಿಯಲಿಲ್ಲ. ಅದರಂತೆ ಹೈಸ್ಕೂಲಿನಲ್ಲಿ ಓದುತ್ತಿದ್ದ ಕನ್ನಡ ವಿದ್ಯಾರ್ಥಿಗಳ ಬಗ್ಗೆಯೂ, ಮರಾಠಿ ಅಧ್ಯಾಪಕರು ತೋರುತ್ತಿದ್ದ ಅಸಡ್ಡೆಯನ್ನೂ ಅವರು ಗಮನಿಸಿದರು. ಅಲ್ಲಿ ಇದ್ದ ಕೆಲವೇ ಕೆಲವು ಕನ್ನಡ ಮಾಸ್ತರರು ಮರಾಠೀ ಜನರಿಗೆ ತಲೆ ಬಗ್ಗಿಸಿ ದೀನ ಭಾವದಿಂದ ಇದ್ದುದನ್ನು ಕಂಡು ರಾ.ಹ. ನೊಂದುಕೊಂಡರು, ನುಂಗಿಕೊಂಡರು .

ಆದರೆ ಹೆಡ್ ಮಾಸ್ತರ ಹೂಗವರ್ಘನಿಗೆ ಇಂಥ ದಕ್ಷ ವಿಶೇಷ ಪ್ರಜ್ಞೆ. ತರುಣನನ್ನು ಕಂಡು ಖುಶಿಯಿಗಿತ್ತು. ಇಂಥವರು ಸಹಾಯಕರಾಗಿರದೆ ಒಂದು ಸಂಸ್ಥೆಯ ಮುಖ್ಯಸ್ಥರಾಗಿರಬೇಕೆಂಬುದು ಅವನ ಆಸೆಯಾಗಿತ್ತು. ಅಂತೆಯೇ ಧಾರವಾಢ ಹೈಸ್ಕೂಲಿನ ಹೆಡ್ ಮಾಸ್ತರ ಹುದ್ದೆ ಖಾಲಿಯಾಗಿದ್ದುದನ್ನು ಕಂಡು ಆತನು ಇವರನ್ನು ಅದಕ್ಕೆ ನೇಮಿಸಬೇಕೆಂದು ಮೇಲಿನವರಿಗೆ ಶಿಫಾರಸ್ಸನ್ನೂ ಮಾಡಿದನು. ಬ್ರಿಟಿಶ ಸರಕಾರದ ನೀತಿಗೆ ಅದು ವಿರುದ್ಧವಾಗಿತ್ತು. ಜಿಲ್ಲೆಯ ವರಿಷ್ಠ ಅಧಿಕಾರಿಗಳು ಇಂಗ್ಲಿಷರೇ ಆಗಿರಬೇಕೆಂಬುದು ಅವರ ನೀತಿಯಾಗಿತ್ತು. ಹೊಗವರ್ಘನ ಶಿಫಾರಸು ಸರಕಾರಕ್ಕೆ ಬಿಸಿ ತುಪ್ಪವಾಯಿತು. ಪೂರ್ತಿ ಅದನ್ನು ಕಡೆಗಣಿಸಲು ಸಾಧ್ಯವಿಲ್ಲ, ಇತ್ತ ಮಾಡುವಂತೆಯೂ ಇಲ್ಲ. ಆದ್ದರಿಂದ ಹೆಡ್ ಮಾಸ್ತರ ಹುದ್ದೆಗೆ ಸಮನಾದ ಡೆಪ್ಯೂಟಿ ಎಜುಕೇಷನಲ್ ಇನ್ಸ್‌ಪೆಕ್ಟರ ಎಂದು ಕಾರವಾರ ಜಿಲ್ಲೆಗೆ ೧೮೮೫ರ ಮೇ ತಿಂಗಳಿನಲ್ಲಿ ವರ್ಗ ಮಾಡಿದರು. ದೇಶಪಾಂಡೆ ಅವರಿಗೆ ಬೆಳಗಾವಿ ಹೈಸ್ಕೂಲಿನ ಅವಮಾನಕರ ಸ್ಥಿತಿಯಿಂದ ಪಾರಾದ ಸಮಾಧಾನವೇನೊ ಆಯಿತು. ಆದರೆ ಅಲ್ಲಿ ಹೋದ ಮೇಲೆ ಆ ಸಮಾಧಾನ ಉಳಿಯಲಿಲ್ಲ. ಬೆಳಗಾವಿಯಲ್ಲಾದರೋ ಒಂದೇ ಸ್ಥಳದಲ್ಲಿಯ ಕನ್ನಡ -ಮರಾಠಿಯ ಮಧ್ಯದ ಅಸಮಾನತೆಯನ್ನು ಕಾಣುತ್ತಿದ್ದರು. ಇಲ್ಲಿ ಇಡೀ ಜಿಲ್ಲೆಯಾದ್ಯಂತ ಶಿಕ್ಷಣದ ಉಸ್ತುವಾರಿಯನ್ನು ನೋಡಿಕೊಳ್ಳಬೇಕು. ಬೆಳಗಾವಿಗಿಂತ ಭಿನ್ನವಾದ ಕನ್ನಡ - ಮರಾಠಿಯರ ದ್ವಂದ್ವದ ಇನ್ನೊಂದು ಮುಖ ಅವರ ಕಣ್ಣ ಮುಂದೆ ಬಂದಿತು. ಸೌಲಭ್ಯ ಬಡತಿಗಳು ಮರಾಠಿ ಅಧ್ಯಾಪಕರಿಗೆ ಸುಲಭವಾಗಿ ಸಿಕ್ಕುತ್ತಿದ್ದರೆ, ಕನ್ನಡಿಗರು ಪಾಲಿಗೆ ಬಂದದ್ದನ್ನು ಪಂಚಾಮೃತವೆಂದು ಸ್ವೀಕರಿಸಬೇಕು. ರಾ.ಹ. ದೇ ಅವರು ತಮ್ಮವರೆಂಬ ಆತ್ಮೀಯತೆಯಿಂದ ಅನೇಕ ಕನ್ನಡ ಅಧ್ಯಾಪಕರು ತಮ್ಮ ಅನುಭವಗಳನ್ನು ತೋಡಿಕೊಂಡರು. ಪೇಶವಾಯೀ ಕಾಲದಲ್ಲಿ

ವಿರಾಜಮಾನವಾದ ಮರಾಠಿ ಭಾಷೆ, ಪೇಶವೆಗಳು ತಮ್ಮ ದೌಲತ್ತನ್ನು ಕಳೆದುಕೊಂಡ ನಂತರವೂ ಆ ಭಾಷೆ ತನ್ನ ದರ್ಪವನ್ನು ಅಧಿಕಾರವನ್ನು ಬಿಡಲು ಸಿದ್ಧವಿರಲಿಲ್ಲ.

ಪುಣೆಯ ಚೈತನ್ಯಶೀಲ ವಾತಾವರಣದಲ್ಲಿ ಬೆಳೆದ ರಾ.ಹ. ದೇಶಪಾಂಡೆ ಅವರಿಗೆ ಕೈ - ಕಟ್ಟಿಕೊಂಡು ಕುಳಿತುಕೊಳ್ಳುವುದು ಸಾಧ್ಯವಾಗಲಿಲ್ಲ. ಬೆಳೆಯುತ್ತಿದ್ದ ದಾಸ್ಯ ಭಾವವು ಕೀಟದಂತೆ ನಾಡಿನ ಜೀವ ಸತ್ವವನ್ನೇ ಹರಣ ಮಾಡುತ್ತಿತ್ತು. ತನ್ನ ನೋವನ್ನು ಗಟ್ಟಿಯಾಗಿ ತೋಡಿಕೊಳ್ಳುವ ತ್ರಾಣವಾಗಲೀ, ಧೈರ್ಯವಾಗಲೀ ಕನ್ನಡ ಭಾಷೆಗೆ ಇರಲಿಲ್ಲ. ಇಂಥ ಸಂಕಟದಿಂದ ಪಾರಾಗುವುದು ಹೇಗೆ ? ಇದಕ್ಕೆ ಪರಿಹಾರವೇನು? ಎಂಬುದರ ಕುರಿತು ಅಂದಿನಿಂದ ಚಿಂತಿಸಹತ್ತಿದರು. ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಹಲವಾರು ಗೆಳೆಯರೊಂದಿಗೆ ಚರ್ಚಿಸಹತ್ತಿದರು. ಸಾಧ್ಯವಿದ್ದಲ್ಲೆಲ್ಲ ಕನ್ನಡದ ಸ್ಥಾನಮಾನದ ಬಗ್ಗೆ ಇಲಾಖೆಯ ಮೇಲಧಿಕಾರಿಗಳಿಗೆ ಬರೆದರು. ಕನ್ನಡ ಅಧ್ಯಾಪಕರ ಕಷ್ಟ ಕಾರ್ಪಣ್ಯಗಳನ್ನು ಬರೆದು ತಿಳಿಸಿದರು. ಆದರೆ ಅವರ ದನಿ ಮೇಲಿನವರಿಗೆ ಮುಟ್ಟಲೇ ಇಲ್ಲ. ಕನ್ನಡದ ಕರ್ನಾಟಕದ ಹಣೆಬರಹವೇ ಇಷ್ಟು ಎಂಬಷ್ಟರಮಟ್ಟಿಗೆ . ಕನ್ನಡದ ಬಗ್ಗೆ ಕಾಳಜಿ ಇದ್ದ ರಸೆಲ್ ೧೮೮೭ರಲ್ಲಿ ನಿವೃತ್ತನಾದನು. ಅವನ ಸ್ಥಾನದಲ್ಲಿ ದೇಶಪಾಂಡೆ ಅವರೆ ಅರ್ಹರಾಗಿದ್ದರೂ , ಅವರಿಗಿಂತ ಕಡಿಮೆ ಶೈಕ್ಷಣಿಕ ಅರ್ಹತೆಗಳಿದ್ದ ಕನ್ನಡದ ಬಗ್ಗೆ ಹೃದಯದಲ್ಲಿ ದ್ವೇಷ ಭಾವನೆಗಳನ್ನು ತುಂಬಿಕೊಂಡಿದ್ದ ಮರಾಠೀ ಅಧಿಕಾರಿಗಳಾದ ಪಟವರ್ಧನ , ಸಹಸ್ರಬುದ್ಧಿ, ಕರಂದೀಕರ ಮುಂತಾದವರು ನೇಮಕಗೊಂಡರು.

ಅದರಿಂದಾಗಿ ರಸೆಲ್‌ನಂಥವರು ಎರಡು ದಶಕದುದ್ದಕ್ಕೂ ಕನ್ನಡಕ್ಕೆ ಈ ಭಾಗದಲ್ಲಿ ಅಗ್ರಸ್ಥಾನವನ್ನು ಕೊಡಬೇಕೆಂದು ಪಟ್ಟ ಶ್ರಮವೆಲ್ಲ ಹೊಳೆಯಲ್ಲಿ ಹುಣಿಸೆ ಹಣ್ಣನ್ನು ತೊಳೆದಂತಾಯಿತು ! ಈ ಅಧಿಕಾರಿಗಳು ಕನ್ನಡ ಶಾಲೆಗಳಲ್ಲಿ ಮರಾಠಿಗೆ ಹೆಚ್ಚಿನ ಸ್ಥಾನವನ್ನು ಕಲ್ಪಿಸಿಕೊಡುವ ದುಸ್ಸಾಹಸಕ್ಕೆ ಇಳಿದರು. ಇಂಥ ಅನ್ಯಾಯದ ವಿರುದ್ಧ ಒಬ್ಬಿಬ್ಬರು ಕನ್ನಡಿಗರು ಧ್ವನಿ ಎತ್ತಿದರು ನಿಜ, ಆದರೆ ಇಲಾಖೆಯು ನಡೆಸುತ್ತಿದ್ದ ವಾರ್ಷಿಕ ಸಮ್ಮೇಳನಗಳಲ್ಲಿ ಕರ್ನಾಟಕದ ಶಾಲೆಗಳಲ್ಲಿ ಮರಾಠಿಯನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಠರಾವುಗಳನ್ನು ಪಾಸು ಮಾಡಿಕೊಳ್ಳುತ್ತಿದ್ದರು. ಅದನ್ನು ಕಂಡ ರೊದ್ದ ವ್ಯಾಸರಾಯರಂಥವರು ಅಂದಿನ 'ಟೈಮ್ಸ್ ಆಫ್ ಇಂಡಿಯಾ' ದಂಥ ಪತ್ರಿಕೆಗಳಿಗೆ ವಾಚಕರ ವಾಣಿಯಲ್ಲಿ ಬರೆದು ಪ್ರತಿಭಟಿಸಿದ್ದೂ ಇದೆ. ಮರಾಠಿ ಶಾಲೆಗಳಲ್ಲಿ ಗುಜರಾತಿಯನ್ನು ಕಲಿಸಲಾಗುತ್ತಿದೆಯೆ ? ಗುಜರಾತಿ ಶಾಲೆಗಳಲ್ಲಿ ಮರಾಠಿಯನ್ನು ಕಲಿಸಲಾಗುತ್ತಿದೆಯೆ? ಕನ್ನಡ ಶಾಲೆಗಳಲ್ಲಿ ಮರಾಠಿ ಏಕೆ ಎಂದು ಪ್ರಶ್ನಿಸಿದ್ದಾರೆ.

ಇಂಥ ಅನ್ಯಾಯಗಳ ಸರಮಾಲೆಯನ್ನು ಸಹಿಸುತ್ತ ಬಂದ ರಾಹದೇ ಅವರು ನೌಕರಿಯಲ್ಲಿದ್ದಾಗಲೂ ತಮ್ಮ ಮೇಲಿನ ಮರಾಠಿ ಅಧಿಕಾರಿಗಳೊಂದಿಗೆ ಕನ್ನಡದ ಪರ ಸಮರವನ್ನೇ ಹೂಡುತ್ತ ಬಂದರು. ಇದರಿಂದ ಅವರಿಗೆ ಕಿರುಕುಳ, ಹಿಂಬಡತಿ,

ಮೇಲಿಂದ ಮೇಲೆ ವರ್ಗಾವಣೆ ಇತ್ಯಾದಿ ಬಹುಮಾನಗಳು ದೊರೆತವು. ೧೮೮೭ರಿಂದ ೧೯೦೭ರವರೆಗೆ ಅಂದರೆ ೨೦ ವರುಷಗಳ ಅವಧಿಯಲ್ಲಿ ೨೧ ಸಲ ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ, ಒಂದು ಊರಿನಿಂದ ಇನ್ನೊಂದು ಊರಿಗೆ ವರ್ಗಾವಣೆಗೆ ಒಳಪಟ್ಟರು.

ಬಾಲ್ಯದ ಶ್ರೀಮಂತ ವಾತಾವರಣ, ಸರಕಾರೀ ನೌಕರಿ ಈ ಕಾರಣಗಳಿಂದ ಒಂದು ರೀತಿಯ ವ್ಯಕ್ತಿ ವಿಶಿಷ್ಟತೆಯನ್ನು ಬೆಳೆಸಿಕೊಂಡಿದ್ದ ರಾಹದೇ ಅವರು ಸಾರ್ವಜನಿಕರ ಜೀವನಕ್ಕೆ ಹಂಬಲಿಸಿದವರಲ್ಲ. ಪರಿಸ್ಥಿತಿಯು ಅವರನ್ನು ಸಾರ್ವಜನಿಕ ರಂಗಕ್ಕೆ ಎಳೆಯಿತು. ಕೆಲಸ ಬಿಟ್ಟು ಮತ್ತೆ ಎಲ್‌ಎಲ್‌ಬಿ ಗೆ ಸೇರುವ ವಿಚಾರವಂತೂ ದೂರವಾಗಿತ್ತು. ಪರಿಸ್ಥಿತಿಯೊಂದಿಗೆ ಹೋರಾಟುವುದು ಒಂದೇ ಉಳಿದ ದಾರಿಯಾಗಿತ್ತು. ಆದರೆ ಸರಕಾರೀ ಸೇವೆ ಅವರ ಶಕ್ತಿಗೆ ಕಡಿವಾಣವನ್ನು ಹಾಕಿತ್ತು. ಸಮಾಜದ ಪ್ರಮುಖ ವ್ಯಕ್ತಿಗಳನ್ನು ಕಂಡು ಅವರ ಬೆಂಬಲ ಪಡೆದು ವಿದ್ಯಾ ಇಲಾಖೆಯಲ್ಲಿ ಕನ್ನಡವನ್ನು ಪ್ರತಿಷ್ಠಾಪಿಸುವ ಕಾರ್ಯವನ್ನು ದೃಢ ನಿರ್ಧಾರದಿಂದ ಎತ್ತಿಕೊಂಡರು. ಕನ್ನಡ ಭಾಷೆಯ ಉನ್ನತಿಯು ನಾಡಿದ ಎಲ್ಲ ಜಾತಿ ಜನಾಂಗಗಳಿಗೆ ಸಂಬಂಧಿಸಿದವುಗಳು, ಆದ್ದರಿಂದ ಒಂದು ಸಂಘಟನೆಯ ಮೂಲಕ ಅವರೆಲ್ಲರನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಪ್ರವೃತ್ತರಾದರು.

ಈ ಎಲ್ಲ ಹಿನ್ನೆಲೆಗಳಲ್ಲಿ ರಾ.ಹ. ದೇಶಪಾಂಡೆ ಅವರಿಗೆ ಕನ್ನಡದ ಮೇಲಿನ ಮರಾಠಿಗರ ದಾಳಿಯ ವಿರುದ್ಧ ವೈಯಕ್ತಿಕ ಹೋರಾಟ ಸಾಲದೆಂದೂ, ಸಂಘ ಶಕ್ತಿ ಅನಿವಾರ್ಯ ಎಂಬುದು ಖಾತ್ರಿ ಆಯಿತು. ಕನ್ನಡಕ್ಕಾಗಿ ಹೋರಾಡುವ ಸಂಘಟನೆಯೊಂದನ್ನು ಕಟ್ಟುವುದೆಂದು ನಿರ್ಧರಿಸಿದರು. ಅದುವೆ 'ಕರ್ನಾಟಕ ವಿದ್ಯಾವರ್ಧಕ ಸಂಘ '

'ಕರ್ನಾಟಕದಲ್ಲಿ ಎರಡು ಪ್ರಮುಖ ಜಾತಿಗಳು ತಮ್ಮ ದಕ್ಷಿಣೋತ್ತರ ಮನೋಭಾವವನ್ನು ಬಿಟ್ಟು ನಾಡಿನ ಕೆಲಸಕ್ಕಾಗಿ ಒಮ್ಮುಖವಾಗದಿದ್ದರೆ ಕನ್ನಡದ ಸರ್ವನಾಶ ಖಂಡಿತ' ಎಂಬ ಎಚ್ಚರದ ಮುನ್ನುಡಿಯನ್ನು ಅವರು 'ಚೈತನ್ಯ' (೧೮೯೧) ದಲ್ಲಿ ೧೧೫ ವರುಷಗಳ ಹಿಂದೆಯೇ ಬರೆದಿದ್ದಾರೆ. ಅವರ ಈ ನುಡಿಗಳು ಇಂದಿಗೂ ಪ್ರಸ್ತುತವಾದುದು ಈ ನಾಡಿನ ವಿಪರ್ಯಾಸ !

ತಾರೀಖು ೨೦, ಜುಲೈ ೧೮೯೦ರಂದು ದಿ. ಶ್ರೀನಿವಾಸರಾಯ ವಕೀಲ ಧಾರವಾಡ ಇವರ ಅಟ್ಟದ ಮೇಲೆ ಕರೆದ ಸಭೆಯ ನೋಟೀಸನ್ನು ದಿನಾಂಕ ೧೩ ಜುಲೈ ರಂದು ಕೊಟ್ಟಿದ್ದರು. ಅದರ ಒಕ್ಕಣಿಯನ್ನು ನೋಡಿದರೆ, ಕರ್ನಾಟಕ ವಿದ್ಯಾವರ್ಧಕ ಸಂಘವು ಆಗಲೇ ಹುಟ್ಟಿತ್ತು ಎಂದು ಕಾಣುತ್ತದೆ. ನೋಟೀಸು ''ತಮ್ಮ ಸಹಾಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘದ ಕೆಲಸವು ಈ ಹೊತ್ತಿನ ತನಕ ನಡೆದು...'' ಎಂದು ಪ್ರಾರಂಭವಾಗುತ್ತದೆ.

ಧಾರವಾಡದಲ್ಲಿ ವಿದ್ಯಾವರ್ಧಕ ಸಂಘವು ಮೊದಲೇ ಪ್ರಾರಂಭವಾಗಿತ್ತು. ಅದರ ಘಟನೆಯು ದಿನಾಂಕ ೧-೧-೧೮೯೦ರಂದು ಸಿದ್ಧವಾಗಿತ್ತು. ಅದಕ್ಕೆ ರಾ. ಹ. ದೇಶಪಾಂಡೆ ಅವರು ಗೌರವ ಕಾರ್ಯದರ್ಶಿಗಳೆಂದು ಸಹಿಯನ್ನೂ ಮಾಡಿದ್ದಾರೆ. ಜುಲೈ ೨೦ರಂದು ನಡೆದ ಸಭೆಯಲ್ಲಿ ಮೂರು ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

೧. ಕನ್ನಡ ಭಾಷೆಯನ್ನು ಬೆಳೆಸುವುದಕ್ಕೋಸ್ಕರ 'ಕರ್ನಾಟಕ ವಿದ್ಯಾವರ್ಧಕ ಸಂಘ' ಎಂಬ ಒಂದು ಸಭೆಯನ್ನು ಧಾರವಾಡದಲ್ಲಿ ಸ್ಥಾಪಿಸತಕ್ಕದ್ದು ಮತ್ತು ಅದರ ಆಡಳಿತದ ಬಗ್ಗೆ ರಾವ ಸಾಹೇಬ ರಾಮಚಂದ್ರ ಹಣಮಂತ ದೇಶಪಾಂಡೆ ಇವರು ಮಾಡಿದ ನಿಯಮಗಳನ್ನು ಸ್ವೀಕರಿಸತಕ್ಕದ್ದು.

೨. ಶ್ರೀ ಶಾಮರಾವ ವಿಟ್ಠಲ ಕೈಕಿಣಿ ಮುಂಬಯಿ ಉಚ್ಚನ್ಯಾಯಾಲಯದ ನ್ಯಾಯವಾದಿಗಳನ್ನು ಅಧ್ಯಕ್ಷರನ್ನಾಗಿ ರಾ. ಸಾ. ವೆಂಕಟ ರಂಗೋ ಕಟ್ಟಿ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದರಲ್ಲದೆ, ಗೌರವಾನ್ವಿತ ರಾವ ಬಹದ್ದೂರ ಗುರುಸಿದ್ಧಪ್ಪಾ ಗಿಲಗಂಚಿ, ರಾ. ಸಾ. ಶ್ರೀನಿವಾಸರಾವ ರೊದ್ದ, ಶಾಂತವೀರಪ್ಪ ಮೆಣಸಿನಕಾಯಿ, ಶೇಷಗಿರಿರಾವ ಕುಪ್ಪಿಕರ, ಗುರಾಚಾರ ಮೊರಬ ಮತ್ತು ಧೊಂಡೋ ನರಸಿಹಂ ಮುಳಬಾಗಿಲು ಅವರುಗಳು ಸದಸ್ಯರಾದರು. ರಾ. ಹ. ದೇಶಪಾಂಡೆ ಅವರು ಗೌರವ ಕಾರ್ಯದರ್ಶಿಗಳಾದರು.

೩. ಧಾರವಾಡದಲ್ಲಿ ಒಂದು ಪುಸ್ತಕಾಲಯವನ್ನು ಸ್ಥಾಪಿಸತಕ್ಕದ್ದು. ವಾಗ್ದಾನ ಮಾಡಿದ ಹಣದಲ್ಲಿ ಒಂದು ಸಾವಿರ ರೂಪಾಯಿಗಳು ಸಂಗ್ರಹವಾದ ಮೇಲೆ ಈ ಪುಸ್ತಕಾಲಯಕ್ಕೆ ೩೦೦ ರೂಪಾಯಿಗಳನ್ನು ಖರ್ಚು ಮಾಡತಕ್ಕದ್ದು.

ಕನ್ನಡವನ್ನು ಬೆಳೆಸಲು, ಕನ್ನಡ ಪುಸ್ತಕಗಳನ್ನು ಪ್ರಕಟಿಸುವಲ್ಲಿ ಪ್ರೋತ್ಸಾಹಿಸುವುದು, ಕನ್ನಡದಲ್ಲಿ ಭಾಷಣ ಮಾಡಲು ಪ್ರೋತ್ಸಾಹಿಸುವುದು ಸಂಘದ ಕಾರ್ಯಗಳಲ್ಲಿಬಹುಮುಖ್ಯವಾಗಿದ್ದವು. ಅಂತೆಯೇ ದಿನಾಂಕ ೧೨-೧೦-೧೮೯೦ ರಂದು ನಡೆದ ಸಂಘದ ಕಾರ್ಯಕಾರಿ ಮಂಡಳದ ಮೊದಲ ಸಭೆಯಲ್ಲಿ ಸ್ವೀಕರಿಸಿದ್ದ ಮಹತ್ವದ ಗೊತ್ತುವಳಿಗಳಲ್ಲಿ ಕೆಲವು ಇಂತಿವೆ.

೧. ಸಂಘದ ವತಿಯಿಂದ ಮುದ್ರಿಸಿ ಪ್ರಕಟಿಸುವುದಕ್ಕಾಗಿ ಸದ್ಯಕ್ಕೆ 'ಉತ್ತರ ರಾಮ ಚರಿತ' ವನ್ನು ತೆಗೆದುಕೊಳ್ಳುವ ನಿರ್ಣಯವಾಯಿತು.

೨. ಕನ್ನಡ ಜಿಲ್ಲೆಗಳಲ್ಲಿ ಕನ್ನಡ ಭಾಷೆಯಲ್ಲಿಯೇ ಪರೀಕ್ಷೆಗಳು ಆಗುವ ಬಗ್ಗೆ ಮೆ. ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಪೆಕ್ಟರ್ ಸಾಹೇಬರವರು ಮಾಡಿದ ನಿಯಮಗಳನ್ನು ಕುರಿತು ಅವರ ಉಪಕಾರವನ್ನು ಸ್ಮರಿಸುವ ಪತ್ರವನ್ನು ಅವರ ಹೆಸರಿನಿಂದಲೇ ಕಳಿಸುವುದು.

೩. ಮೆ. ಕಿಟ್ಟೆಲ್, ಝಿಗ್ಲರ್, ರೈಸ್, ಫ್ಲೀಟ ದೊರೆಗಳನ್ನು ಬಹುಮಾನಿತ ಸಭಾಸದರೆಂದು ಆರಿಸಬೇಕು ಮತ್ತು ಅವರಿಗೆ ಆದರಂತೆ ಪತ್ರ ಬರೆಯತಕ್ಕದ್ದು.

ಹೀಗೆ ಗೊತ್ತುವಳಿಗಳನ್ನು ಸ್ವೀಕರಿಸಿ ಆದರಂತೆ ಅದೇ ವರುಷ ಢೊಂಡೊ ನರಸಿಂಹ ಮುಳಬಾಗಿಲರ 'ಉತ್ತರರಾಮ ಚರಿತ' ವನ್ನು ಪ್ರಕಟಿಸಿದರು. ಮತ್ತು ಅಂದು ಈ ಭಾಗಕ್ಕೆ ಸಂಬಂಧ ಪಡದ ಮೈಸೂರು ಸಂಸ್ಥಾನದಲ್ಲಿದ್ದ ರೈಸರನ್ನು ಸಂಘದ ಗೌರವಾನ್ವಿತ ಸದಸ್ಯರನ್ನಾಗಿ ಮಾಡಿದ್ದು ವಿಶೇಷವಾಗಿದೆ. ಪ್ರಾರಂಭದಿಂದಲೆ ಕನ್ನಡಿಗರನ್ನು ಒಂದುಗೂಡಿಸುವುದು, ಕನ್ನಡ ಭಾಷೆಯ ಅಸ್ತಿತ್ವವನ್ನು ಸ್ಥಿರ ಪಡಿಸುವುದು, ಮೊದಲಾದ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬಂದರು.

ಕನ್ನಡದ ಬೆಳವಣಿಗೆಗಾಗಿ ಕರ್ನಾಟಕದ ವಿದ್ಯಾವರ್ಧಕ ಸಂಘವು ಹಲವಾರು ಬಗೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಕನ್ನಡಿಗರು ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಅನೇಕ ಆಕರ್ಷಕ ಬಹುಮಾನಗಳನ್ನೂ ಇಡುತ್ತಿದ್ದರು. ಮರು ವರುಷದ ಅಂದರೆ ದಿನಾಂಕ ೭-೯-೧೮೯೧ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ನೋಡಬಹುದು. ''ವಾರ್ಷಿಕ ಸಮಾರಂಭದಲ್ಲಿ 'ಗಿರಿಜಾ ಕಲ್ಯಾಣ' ದಲ್ಲಿ ಪರೀಕ್ಷೆ ಕೊಟ್ಟಂತ ೨೫ ವರುಷದೊಳಗಿನ ವಯಸ್ಸುಳ್ಳ ಉಮೇದುವಾರರಿಗೆ ಇನಾಮು ಕೊಡುವುದಕ್ಕೋಸ್ಕರ ದೇಶಪಾಂಡೆ ಇವರು ೨೫ ರುಪಾಯಿ ಕೊಟ್ಟದ್ದನ್ನು ಸಭೆಯವರು ಆಭಾರ ಪೂರ್ವಕ ಸ್ವೀಕರಿಸ್ಸಿದರು.'' ಅದರಂತೆ ಕನ್ನಡದಲ್ಲಿ ಅರ್ಧತಾಸು 'ಉದ್ಯೋಗಿನಮ್' ಶ್ಲೋಕ ಕುರಿತು ಭಾಷಣ ಮಾಡಿದವರಿಗೆ ಶ್ರೀನಿವಾಸರಾವ ಬೀಡಿ ಇವರು ೧೦ ರುಪಾಯಿ, ಕನ್ನಡದಲ್ಲಿ ತುರಮರಿಯವರ 'ಕಾಂದಬರಿ' ಯಷ್ಟು ಅಥವಾ ಹೆಚ್ಚು ಬರೆದ ಕಾದಂಬರಿಗೆ ಮೆಣಸಿನಕಾಯಿ ಅವರಿಂದ ೧೦, ಹೂಲಿ ಅವರಿಂದ ೧೦ ರು. ಮತ್ತು ಶಿವನಪ್ಪ ದೇಸಾಯಿ ಅವರಿಂದ ೧೦ ರು. ಹೀಗೆ ಮೂವತ್ತು ರೂಪಾಯಿಗಳ ಬಹುಮಾನಗಳನ್ನು ಸಂಘವು ಘೋಷಿಸಿತ್ತು. ಅಂದಿನ ದಿನಗಳಲ್ಲಿ ಈ ಮೊತ್ತ ಬಹು ದೊಡ್ಡದಾಗಿತ್ತು. ಆ ದಿನಗಳಲ್ಲಿ ೧ ತೊಲ ಬಂಗಾರಕ್ಕೆ ೧೦ ರುಪಾಯಿ ಇತ್ತು ಎಂದರೆ ಈ ಬಹುಮಾನಗಳ ಬೆಲೆ ಗೊತ್ತಾದೀತು.

ಅದರಂತೆ ಕನ್ನಡ ಮಾತನಾಡುವ ಎಲ್ಲ ಜನರ್ರೂ ಈ ಸಂಘದೊಂದಿಗೆ ಸಂಪರ್ಕ ಇಟ್ಟುಕೊಳ್ಳುವಂತೆ ಪ್ರಯತ್ನಿಸಿದ್ದೂ ಶ್ಲಾಘನೀಯವಾಗಿದೆ. ಈ ವಿಷಯದಲ್ಲಿಅಂದಿನ ಸಭೆಯಲ್ಲಿ ತೆಗೆದುಕೊಂಡ ಒಂದು ನಿರ್ಣಯ ಹೀಗಿದೆ. ''ಸಂಘಕ್ಕೆ ಆಶ್ರಯ ಕೊಡುವ ಬಗ್ಗೆ ಮೈಸೂರು ಮಹಾರಾಜರು, ವಂಟಮೂರಿ, ಸಿರಸಂಗಿ ದೇಸಾಯಿಗಳು, ಮುಂತಾದ ಕನ್ನಡ ಸಂಸ್ಥಾನಿಕರಿಗೆ ಪತ್ರ ಬರೆಯಬೇಕೆಂಬ ರಾ.ಹ. ದೇಶಪಾಂಡೆ ಇವರು ಸೂಚನೆ ಮಾಡಿದ್ದಕ್ಕೆ ಸಭೆಯು ಸರ್ವಾನುಮತಿಯಿಂದ

ಮಾನ್ಯಮಾಡಿತು''. ದಿನದ ೨೪ ಗಂಟೆ ಕನ್ನಡ ಹೇಗೆ ಬೆಳೆಯಬೇಕೆಂಬುದನ್ನೇ ದೇಶಪಾಂಡೆಯವರು ವಿಚಾರಿಸುತ್ತಿದ್ದರು. ಧಾರವಾಡಕ್ಕೆ ಅವರು ವರ್ಗವಾಗಿ ಬಂದಿದ್ದರಷ್ಟೆ. ಹೈಸ್ಕೂಲಿನಲ್ಲಿ ವಾರ್ಷಿಕ ಸಮಾರಂಭ. ವಿದ್ಯಾರ್ಥಿಗಳ ಭಾಷಣ ಸ್ಪರ್ಧೆಯ ಮಾಧ್ಯಮ ಕೇವಲ ಮರಾಠಿ ಎಂದು ತಿಳಿದಾಗ ಅವರು ಹೆಡ್ ಮಾಸ್ತರರ ಬಳಿ ಹೋಗಿ 'ಕನ್ನಡದಲ್ಲಿ ಯಾಕೆ ಇಲ್ಲ' ಎಂದರು. 'ಕನ್ನಡದಲ್ಲಿ ಮಾತನಾಡಬಲ್ಲ ವಿದ್ಯಾರ್ಥಿಗಳೇ ಇಲ್ಲ ' ಹೆಡ್ ಮಾಸ್ತರರ ಉತ್ತರ. ದೇಶಪಾಂಡೆ ಅವರು ಅಷ್ಟಕ್ಕೆ ಬಿಡಲಿಲ್ಲ. ಹೋಗಿ ಭಾಷಣ ಮಾಡಲು ಹೆಸರುಗಳನ್ನು ಕೊಟ್ಟ ವಿದ್ಯಾರ್ಥಿಗಳ ಪಟ್ಟಿಯನ್ನು ನೋಡಿದರು. ಅದರಲ್ಲಿ ಒಂದುಹೆಸರು ಇವರ ಕಣ್ಣಿಗೆ ಬಿತ್ತು. ಕೂಡಲೇ ಆ ವಿದ್ಯಾರ್ಥಿಯನ್ನುಕರೆಸಿದರು. ಆತನನ್ನು ಕೂಡಿಸಿಕೊಂಡು ಕೇಳಿದರು. 'ಕನ್ನಡದಲ್ಲಿ ಮಾತನಾಡಲು ನಾವು ಇನ್ನು ಮುಂದೆ ಪುಣೆ - ಮುಂಬಯಿಂದ ಜನರನ್ನು ಕರೆಯಿಸಬೇಕೇನಪ್ಪಾ ? ನಿನ್ನ ತಂದೆ - ತಾಯಿ ಮನೆಯಲ್ಲಿ ಯಾವ ಭಾಷೆಯನ್ನು ಮಾತನಾಡುತ್ತಾರೆ. ಅದನ್ನು ಮರೆಯಬೇಡ'' ಎಂದು ಆತನ ಬೆನ್ನು ತಟ್ಟಿದರು. ವಿದ್ಯಾರ್ಥಿ ಸಂಕೋಚ, ನಾಚಿಕೆ, ಇದುವರೆಗೆ ಯಾವ ಮಾಸ್ತರರೂ ಹೀಗೆ ಕರೆಸಿ ಕೇಳಿರಲಿಲ್ಲ, ಬೆನ್ನು ತಟ್ಟಿರಲಿಲ್ಲ. '' ನಾನು ಕನ್ನಡದಲ್ಲಿಯೇ ಮಾತನಾಡುತ್ತೇನೆ'' ಎಂದು ಮಾತ್ರ ಹೇಳಿ ಹೊರಟುಹೋದನು. ಆಗ ಮತ್ತೆ ಕನ್ನಡದಲ್ಲಿ ಬಹುಮಾನಕ್ಕೆ ಪ್ರತ್ಯೇಕ ಹಣ ಇಲ್ಲ ಎಂಬ ನೆಪ ಬಂದಿತು. ದೇಶಪಾಂಡೆ ಅವರೇ ೨೫ ರುಪಾಯಿಗಳನ್ನು ಸಂಗ್ರಹಿಸಿ ಕೊಟ್ಟರು. ವಿದ್ಯಾರ್ಥಿ ಕನ್ನಡದಲ್ಲೇ ಮಾತನಾಡಿದನು. ತನ್ನ ಕಂಠದಲ್ಲಿ ಸಿಂಹಧ್ವನಿ ಅಡಗಿದೆ ಎಂಬುದು ಆತನಿಗೆ ಆವಾಗಲೇ ತಿಳಿದದ್ದು. ಆತ ಬೇರೆ ಯಾರೂ ಅಲ್ಲ, ಕರ್ನಾಟಕವನ್ನು ಕಟ್ಟಿದ ಸಪ್ತರ್ಷಿಗಳಲ್ಲಿ ಒಬ್ಬರಾದ ಮುದವೀಡು ಕೃಷ್ಣರಾಯರು !

ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸುವಾಗ ದಿನಾಂಕ ೧೩-೭-೧೮೯೦ರಂದು ಕೊಟ್ಟ ನೋಟೀಸಿನ ಶ್ರೀಕಾರ, ॥ ಕನ್ನಡ ಬೆಳೆಯಲಿ ॥ ಎಂಬುದಾಗಿತ್ತು. ಐದು ವರುಷಗಳ ನಂತರ 'ವಾಗ್ಭೂಷಣ' ತಿಂಗಳ ಪತ್ರಿಕೆಯನ್ನು ಹೊರಡಿಸುವಾಗ ಕೊಟ್ಟ ನೋಟೀಸಿನ ಶ್ರೀಕಾರ ॥ಸಿರಿಗನ್ನಡಂ ಗೆಲ್ಗೆ॥ ಎಂಬುದಾಗಿದೆ. ಅದುವೆ ಇಂದಿನವರೆಗು ಅಖಂಡ ಕರ್ನಾಟಕದಲ್ಲಿ ಬಳಕೆಯಾಗುತ್ತಿರುವ ಕನ್ನಡದ ಶ್ರೀಕಾರ.

'ಕನ್ನಡದಲ್ಲಿ ಗ್ರಂಥಗಳನ್ನು ಹೊಸದಾಗಿ ಬರೆದು, ಬೇರೆ ಭಾಷೆಗಳಿಂದ ಪರಿವರ್ತಿಸಿ , ಪ್ರಾಚೀನ ಗ್ರಂಥಗಳನ್ನು ಪರಿಶೋಧಿಸಿ, ಪ್ರಕಟಿಸುವುದು 'ಸಂಘದ ಇನ್ನೊಂದು ಮುಖ್ಯ ಉದ್ದೇಶವಾಗಿತ್ತು. ಮೊದಲ ವರುಷವೇ 'ಉತ್ತರರಾಮ ಚರಿತೆ' 'ವೇಣಿಸಂಹಾರ' 'ಮಾಲವಿಕಾಗ್ನಿ ಮಿತ್ರ' ದಂಥ ಬೆಲೆಯುಳ್ಳ ಕೃತಿಗಳನ್ನು ಸಂಘವು ನಾಡಿಗೆ ನೀಡಿತು. ಆನಂತರದ ದಿನಗಳಲ್ಲಿ ವಾಗ್ಭೂಷಣದ ಮುಖಾಂತರ ಮೊದಲು ಅದರಲ್ಲಿ ಧಾರವಾಹಿಯಾಗಿ ಕೊಟ್ಟು ಆನಂತರ ಪುಸ್ತಕ ರೂಪದಲ್ಲಿ ಸುಮಾರು

೪೦ಕ್ಕಿಂತ ಅಧಿಕ ಕೃತಿಗಳನ್ನು ಪ್ರಕಟಿಸಿತು.ಸಂಘದ ಮುಖಾಂತರ ಸುಮಾರು ೧೨ ಗ್ರಂಥಗಳನ್ನು ಪ್ರಕಟಿಸಿದೆ. ೧೯೪೦ವರೆಗೆ ಅಂದರೆ ೫೦ ವರುಷಗಳಲ್ಲಿ ಸುಮಾರು ನಾಲ್ಕು ನೂರಕ್ಕಿಂತ ಅಧಿಕ, ಕನ್ನಡದಲ್ಲಿ ಪ್ರಕಟವಾದ ವಿವಿಧ ವಿಷಯಗಳ ಮೇಲಿನ ಗ್ರಂಥಗಳಿಗೆ ಸುಮಾರು ೨೫ ಸಾವಿರ ರುಪಾಯಿಗಳಷ್ಟು ಹಣವನ್ನು ಬಹುಮಾನವಾಗಿ ಕೊಟ್ಟಿದೆ. ಅವುಗಳಲ್ಲಿ ೯೫ ಕಾಂದಬರಿಗಳಿವೆ. ೬೦ ಚರಿತ್ರೆಯ ಪುಸ್ತಕಗಳಿವೆ. ೪೪ ಸಂಶೋಧನ ಗ್ರಂಥಗಳಿವೆ. ೩೩ ಪೌರಾಣಿಕ, ೩೧ ಕಾವ್ಯ, ೩೦ ನಾಟಕ ಮತ್ತು ೨೮ ಐತಿಹಾಸಿಕ ಪುಸ್ತಕಗಳಿವೆ. ಉಳಿದಂತೆ ಶಿಕ್ಷಣ, ವೇದಾಂತ, ಸಾಹಿತ್ಯ, ವಿಮರ್ಶೆ, ಗಣಿತ, ಶಾಸ್ತ್ರೀಯ ವಿಷಯ, ಒಕ್ಕಲುತನ ಇತ್ಯಾದಿ ಪುಸ್ತಕಗಳೂ ಇವೆ ಎಂದರೆ ವಿಷಯ ವೈವಿಧ್ಯ ಗೊತ್ತಾಗುತ್ತದೆ. ಕನ್ನಡ ಭಾಷೆಯಲ್ಲಿ ಈ ವಿಷಯಗಳ ಮೇಲೂ ಪುಸ್ತಕಗಳನ್ನು ಬರೆಯಬಹುದು ಎಂಬುದನ್ನು ಅವರು ಆ ದಿನಗಳಲ್ಲೇ ತೋರಿಸಿಕೊಟ್ಟರು. ಅದು ವಿಶೇಷವಾಗಿತ್ತು. ಅಂತೆಯೇ ಅಂದಿನ ದಿನಗಳಲ್ಲಿ ಸಂಘಕ್ಕೆ ಭೇಟಿ ಕೊಟ್ಟ ಹಲವಾರು ಮಹನೀಯರು ಸಂಘದ ಕಾರ್ಯವನ್ನು ಬಾಯ್ತುಂಬ ಹೊಗಳಿದ್ದಾರೆ. ಮೈಸೂರು ಸರಕಾರದ ಅಂದಿನ ಶಿಕ್ಷಣಾಧಿಕಾರಿಗಳಾದ ಹೆಚ್.ಜೆ. ಭಾಭಾ ಅವರು ೧೮೯೨ರಲ್ಲಿ ಸಂಘಕ್ಕೆ ಭೆಟ್ಟಿಕೊಟ್ಟು "The objects of the sangha are most laudable" ಎಂದು ಹೇಳಿದ್ದರೆ, ಅದೇ ವರುಷ ಭೆಟ್ಟಿ ಕೊಟ್ಟ ಆಯ್.ಸಿ. ಎಸ್. ಅಧಿಕಾರಿಗಳಾದ ಜಾನ್ ಫೇಥಫುಲ್ ಫ್ಲೀಟರು "The society has in view a very prase - worthy and important object... I wish the society all success in its endeavours" ಎಂದು ಬರೆದಿದ್ದಾರೆ.

ಸಮಸ್ತ ಕರ್ನಾಟಕಕ್ಕೆ ಅನ್ವಯಿಸುವಂತಿದ್ದ ಸಂಘದ ಸಂವಿಧಾನವು ಸಂಘದ ಮತ್ತು ರಾ.ಹ. ದೇಶಪಾಂಡೆ ಅವರ ದೂರದೃಷ್ಟಿಗೆ ಉತ್ತಮ ನಿದರ್ಶನವಾಗಿದೆ. ಬ್ರಿಟಿಷ್ ಅಧಿಪತ್ಯದ ಎಲ್ಲ ಕನ್ನಡ ಪ್ರದೇಶಗಳು, ಅದರಂತೆ ಮೈಸೂರನ್ನು ಒಳಗೊಂಡಂತೆ ಎಲ್ಲಾ ದೇಶೀಯ ಸಂಸ್ಥಾನಗಳು - ಅವುಗಳ ಸಾಂಸ್ಕೃತಿಕ ಒಕ್ಕಟ್ಟು ಅವರ ಹೆಬ್ಬಯಕೆಯಾಗಿತ್ತು. ಆರಂಭದಿಂದಲೂ ಅದನ್ನು ಅವರು ಒಂದಿಲ್ಲೊಂದು ರೀತಿಯಲ್ಲಿ ಸ್ಪಷ್ಟಪಡಿಸುತ್ತಲೇ ಬಂದಿದ್ದಾರೆ. ಮೈಸೂರು ಮಹಾಜನರಲ್ಲಿ ಅಪಾರ ಗೌರವವನ್ನು ತೋರಿಸಲಾಗಿದೆ. ಮೈಸೂರು ವಿದ್ವಾಂಸರ ಬಗ್ಗೆ ಅತ್ಯಂತ ಅಭಿಮಾನ. ಸಂಘದ ಪ್ರಥಮ ವಾರ್ಷಿಕ ಸಭೆಯಲ್ಲಿ ಸಂಘಕ್ಕೆ ಆಶ್ರಯ ಕೊಡುವ ಬಗ್ಗೆ ಮೈಸೂರು ಮಹಾರಾಜರೇ ಮೊಲಾದವರಿಗೆ ಪತ್ರಬರೆಯಬೇಕೆಂದು ನಿರ್ಣಯಿಸಿದ್ದನ್ನು ಹೇಳಿತಷ್ಟೆ. ಅದೇ ವರುಷ ಮೈಸೂರು ವಿದ್ಯಾ ಇಲಾಖೆಯ ನಿರ್ದೇಶಕರು ಬಂದಾಗ ಅವರನ್ನು ಕರೆದು ವೀಳ್ಯ ಕೊಟ್ಟು ಗೌರವಿಸಲಾಯಿತು. ಮೈಸೂರು ಮಹಾರಾಜರ ಪಟ್ಟಾಭಿಷೇಕ ಮಹೋತ್ಸವದಲ್ಲಿ ಸಮಸ್ತ ಕನ್ನಡ ಜನರ ಪರವಾಗಿ ಸಂಘದ ಸದಸ್ಯರ ಗೌರವಾರ್ಪಣೆ ಮಾಡಿದರು. ಕನ್ನಡ ಸಮಷ್ಟಿ ಪುರುಷರನ್ನು ನಿರ್ಮಿಸುವಲ್ಲಿ ಕರ್ನಾಟಕದ ವಿದ್ಯಾವರ್ಧಕ ಸಂಘವು ಮತ್ತು ರಾ.ಹ. ದೇಶಪಾಂಡೆ ಅವರು ವಹಿಸಿದ ಪಾತ್ರದ ವಿಶೇಷತೆ ಇರುವುದು ಇಲ್ಲಿ.

ಸಂಘದ ಸಭೆಯಲ್ಲಿ ಕನ್ನಡ ಮಾತನಾಡಲಿಕ್ಕೆ ಅಡ್ಡಿಯಿಲ್ಲ. ಉಳಿದ ಭಾಷೆಗಳಲ್ಲಿ ಮಾತಾಡುವವರು ಅಧ್ಯಕ್ಷರ ಅಪ್ಪಣೆ ತೆಗೆದುಕೊಂಡು ಮಾಡಬೇಕು' ಸಂಘದ ಸಭೆಯೊಂದರಲ್ಲಿ ತೆಗೆದುಕೊಂಡ ನಿರ್ಣಯ ಇದು. ಇಂದಿಗೆ ಸುಮಾರು ೧೧೦ ವರುಷಗಳ ಹಿಂದೆ ತೆಗೆದುಕೊಂಡ ನಿರ್ಣಯ ಅದೂ ಮರಾಠಿಗರ ಪ್ರಾಬಲ್ಯದ ದಿನಗಳಲ್ಲಿ, ಕನ್ನಡಕ್ಕೆ ಏನೇನು ನೆಲೆ ಇಲ್ಲ ಎಂದು ತಿಳಿದ ದಿನಗಳಲ್ಲಿ, ಎಂದು ನೆನಪಿಸಿಕೊಳ್ಳಬೇಕು. ಸುವರ್ಣ ಕರ್ನಾಟಕದ ಇಂದಿನ ದಿನಗಳಲ್ಲಿ ನಾವು ಕನ್ನಡಕ್ಕೆ ಎಷ್ಟರ ಮಟ್ಟಿಗೆ ಬೆಲೆಯನ್ನು ಕೊಡುತ್ತಿದ್ದೇವೆ ಎಂಬುದನ್ನು ಆತ್ಮ ಸಾಕ್ಷಿಯಾಗಿ ವಿಮರ್ಶಿಸಿಕೊಳ್ಳಲು ಇದಕ್ಕಿಂತ ಹೆಚ್ಚಿನದು ಏನು ಬೇಕು ?

ಸಂಘವು ಸ್ಥಾಪನೆಗೊಂಡಾಗ, ಈ ಭಾಗದಲ್ಲಿ ಒಂದು ಕನ್ನಡ ಮಾಸ ಪತ್ರಿಕೆಯನ್ನು ಹೊರಡಿಸಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದರು. ಐದಾರು ವರುಷ ಗಳ ಅವ್ಯಾಹತ ಪ್ರಯತ್ನದಿಂದ ೧೮೯೬ರಲ್ಲಿ 'ವಾಗ್ಭೂಷಣ' ಎಂಬ ಸಂಘದ ಮಾಸಪತ್ರಿಕೆಯನ್ನು ಹೊರತಂದರು. ಹಲವಾರು ಹೊಸ ಲೇಖಕರು ಅದರ ಮೂಲಕ ಬೆಳಕಿಗೆ ಬಂದರು. ಗಳಗನಾಥರ 'ಪ್ರಬುದ್ಧ ಪದ್ಮನಯನ' ಮೊದಲು ಈ ಪತ್ರಿಕೆಯಲ್ಲಿ ಅಚ್ಚಾಯಿತು. ಕಥೆ, ಕಾದಂಬರಿ, ಶಾಸ್ತ್ರಗ್ರಂಥಗಳಿಂದ ಕನ್ನಡವು ಸಮೃದ್ಧವಾಗತೊಡಗಿತು. ಅದು ಇನ್ನೊಂದು ಕಥೆ. ಅದಕ್ಕಿಂತ ಮೊದಲು, ಕರ್ನಾಟಕ ವಿದ್ಯಾವರ್ಧಕ ಸಂಘವು ಹುಟ್ಟಿದ ಎರಡು ವರುಷಗಳಲ್ಲಿ ಹತ್ತಿರದ ಬಿಜಾಪುರದಲ್ಲಿ ಮರಾಠಿಗರಿಗೆ ಸರಿ ಉತ್ತರ ನೀಡವಂತೆ 'ಕರ್ನಾಟಕ ವೈಭವ' ಎಂಬ ವಾರ ಪತ್ರಿಕೆ ಪ್ರಾರಂಭವಾಯಿತು. ಅದು ಇನ್ನೊಂದು ರೋಚಕ ಕಥೆ

ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಿ ಕರ್ನಾಟಕ ಇಪ್ಪತ್ತು ತುಕಡಿಗಳಲ್ಲಿ ಹಂಚಿ ಹೋಗಿದ್ದರೂ ಸ್ಥೂಲವಾಗಿ ಮೈಸೂರು - ಕರ್ನಾಟಕ, ಮದ್ರಾಸು-ಕರ್ನಾಟಕ, ಮುಂಬಯಿ - ಕರ್ನಾಟಕ ಮತ್ತು ಹೈದರಾಬಾದ-ಕರ್ನಾಟಕ ಎಂದು ನಾಲ್ಕು ಭಾಗಗಳಲ್ಲಿ ಗುರುತಿಸಬಹುದಾಗಿತ್ತು. ಇವುಗಳಲ್ಲಿ ಮೈಸೂರು ಕರ್ನಾಟಕ ಎಂದರೆ ಒಡೆಯರ ಮೈಸೂರು ಸಂಸ್ಥಾನದ ಪ್ರದೇಶದಲ್ಲಿ ಮಾತ್ರ ಕನ್ನಡ ಭಾಷೆಗೆ ಗಂಡಾಂತರ ಇರಲಿಲ್ಲ. ಕಳೆದ ಎರುಡ ಸಾವಿರ ವರುಷಗಳಿಂದ ಇಲ್ಲಿನ ಪ್ರದೇಶದಲ್ಲಿ ಕನ್ನಡವೇ ಆಡು -ಭಾಷೆಯಾಗಿತ್ತು. ರಾಜ-ಭಾಷೆಯೂ ಆಗಿತ್ತು. ಆಗೊಮ್ಮೆ ಈಗೊಮ್ಮೆ ಕೆಲವು ಪ್ರದೇಶಗಳು ತೀರ ಹಿಂದಿನ ದಿನಗಳಲ್ಲಿ ತಮಿಳರ ಆಡಳಿಕ್ಕೆ ಮರಾಠಿ, ಮುಸ್ಲಿಮರ ಆಡಳಿತಕ್ಕೆ ಒಳಪಟ್ಟರೂ ಕನ್ನಡ ಭಾಷೆಗೆ -ಕನ್ನಡಿಗರಿಗೆ ತೊಂದರೆ ಇರಲಿಲ್ಲ.

ಮದರಾಸು ಕರ್ನಾಟಕದಲ್ಲಿ ಇಂದಿನ ಉಡುಪಿ, ಮಂಗಳೂರು ಕಾಸರಗೋಡು, ನೀಲಗಿರಿ ಜಿಲ್ಲೆಗಳು ಕೊಳ್ಳೇಗಾಲ, ಹೊಸೂರು, ಮಡಕ ಶಿರಾ ತಾಲ್ಲೂಕುಗಳು ಮತ್ತು ಬಳ್ಳಾರಿ ಜಿಲ್ಲೆಗಳು ಬರುತ್ತಿದ್ದುವು. ಅವುಗಳಲ್ಲಿ ಕರಾವಳಿ ಪ್ರದೇಶಗಳಾದ ಕಾಸರಗೋಡು, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳ ಜನರ

ಮಾತೃಭಾಷೆಯು ಕನ್ನಡದ ಹೊರತಾದ ತುಳು ಹಾಗೂ ಕೊಂಕಣಿ ಭಾಷೆ. ಹೀಗಾಗಿ ಅಲ್ಲಿ ರಾಷ್ಟ್ರಕವಿ ಗೋವಿಂದ ಪೈ ಅವರು ಹೇಳಿದಂತೆ ಹೆತ್ತ ಭಾಷೆಯೇ ಬೇರೆ - ಆದರೆ ಹೊತ್ತ ಭಾಷೆ ಕನ್ನಡ. ಹೀಗಾಗಿ ಅಖಂಡ ಕರ್ನಾಟಕದ ಏಕೀಕರಣದ ಬಗ್ಗೆ ಹೇಳಿಕೊಳ್ಳುವಂಥ ಜಾಗೃತಿ ಮೂಡಲಿಲ್ಲ. ಆದರೆ ಕಾಸರಗೋಡನ್ನು ಮಲೆಯಾಳಿಗಳು ಕಬಳಿಸುವ ಹುನ್ನಾರ ಅರಿತ ಮೇಲೆ ಅಲ್ಲಿಯ ಜನ ಎಚ್ಚೆತ್ತು ತೀವ್ರ ಚಳವಳಿಗೆ ಕಾರಣರಾದರೂ ಆ ಹೊತ್ತಿಗೆ ಕಾಲ ಮಿಂಚಿತ್ತು. ಇಂದಿಗೂ ಆ ಪ್ರದೇಶ ಕನ್ನಡಕ್ಕೆ ಎರವಾಗಿದೆ. ಉಳಿದಂತೆ ಬಹು ದೊಡ್ಡ ಪ್ರದೇಶ ಬಳ್ಳಾರಿ ಜಿಲ್ಲೆಯದಾಗಿತ್ತು. ತೆಲುಗರು ಬಳ್ಳಾರಿ ಸಹಿತ ಇಡೀ ಪ್ರದೇಶದ ಮೇಲೆ ಹೊಂಚು ಹಾಕಿದಾಗ ಅಲ್ಲಿಯ ಜನ ಜಾಗೃತರಾದರು. ಆದರೆ ಆದವಾನಿ , ಆಲೂರು ಮತ್ತು ರಾಯದುರ್ಗಗಳನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವುದು ಆಗಲಿಲ್ಲ.

ಹೈದರಾಬಾದ - ಕರ್ನಾಟಕದಲ್ಲಿ ಉಳಿದೆಲ್ಲ ಪ್ರದೇಶಗಳಿಗಿಂತ ವಿಚಿತ್ರ ಸನ್ನಿವೇಶ ನಿರ್ಮಾಣವಾಗಿತ್ತು. 'ನಾಡಿನ ಇತರ ಭಾಗಗಳಲ್ಲಿ ರಾಜಭಾಷೆಯಾಗಿ ಇಂಗ್ಲಿಷ್ ಮತ್ತು ನೆರೆಹೊರೆ ಭಾಷೆಯಾಗಿ ಮರಾಠಿ, ತೆಲಗು ಅಥವಾ ಮಲಯಾಳಿ ಇವುಗಳ ಪ್ರಭಾವದಲ್ಲಿ ಕನ್ನಡ ತೆರೆಯ ಹಿಂದೆ ಸರಿದಂತಾಗಿದ್ದರೆ ಹೈದರಾಬಾದ - ಕರ್ನಾಟಕದಲ್ಲಿ ಇಂಗ್ಲಿಷಿನ ಜೊತೆಗೆ ಉರ್ದು ಕೂಡ ರಾಜಭಾಷೆಯಾಗಿ ಮೆರೆಯುತ್ತಿತ್ತು. ಜೊತೆಗೆ ಸ್ಥಳೀಯರ ಮಾತೃಭಾಷೆಯಾದ ತೆಲಗಿನ ಹಿಡಿತವೂ ಕನ್ನಡ ಮೇಲೆ ಇತ್ತು. ಆದರೆ ಕನ್ನಡಿಗರಿಗೆ ತೆಲಗಿಗಿಂತ ಮರಾಠಿಯ ಕಾಲ್ತುಳಿತ ಅಲ್ಲಿ ಹೆಚ್ಚಾಗಿ ಇದ್ದಿತು. ಅದಕ್ಕೆ ಕಾರಣ, ಹೈದರಾಬಾದಿನ ನವಾಬರು ಬ್ರಿಟಿಷರ ಅಧೀನದಲ್ಲಿ ಬಂದಾಗ, ಅಲ್ಲಿಯ ಆಡಳಿತಕ್ಕೆ ಬಂದ ಬ್ರಿಟಿಷ್ ಮುಂಬಯಿ ಸರ್ಕಾರದ ಮರಾಠಿ ಅಧಿಕಾರಿಗಳು.ತೆಲಗು - ಉರ್ದುಗಳಿಗಿಂತ ಮರಾಠಿಗರಿಗೆ ಅಲ್ಲಿಯ ಕನ್ನಡದ ಬಗ್ಗೆ ತೀರ ಅಸಡ್ಡೆ . ಈ ಕಾನಡೀ ಮಂದಿಗೆ ನೆಟ್ಟಗೆ ಆಳಲಿಕ್ಕೆ ಕೂಡ ಬರುವುದಿಲ್ಲ. ಮೊದಲು ಆಳಲಿಕ್ಕೆ ಕಲೀಲಿ' ಎಂದು ಹೀಗಳೆಯುವುದನ್ನು ಅಲ್ಲಿಯ ಕನ್ನಡಿಗರು ಕೇಳಿದ್ದನ್ನು ಹಲವಾರು ಹಿರಿಯರು ಸ್ಮರಿಸಿದ್ದಾರೆ. ಇದರಿಂದಾಗಿ ಹೈದರಾಬಾದ-ಕರ್ನಾಟದ ಜನರು ಎಚ್ಚೆತ್ತುಕೊಳ್ಳಲು ಮತ್ತೆ ಅರ್ಧ ಶತಕದಷ್ಟು ಕಾಲ ಬೇಕಾಯಿತು. ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೦) ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು (೧೯೧೫), ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಭೆ ಮತ್ತು ಅಖಂಡ ಕರ್ನಾಟಕ ಏಕೀಕರಣ ಪರಿಷತ್ತಿನ (೧೯೨೪) ಹೊಳಪು ಹುಟ್ಟಿದ ಮೇಲೆ ಹೈದರಾಬಾದ ಕರ್ನಾಟಕದಲ್ಲಿ ಕನ್ನಡ ಭಾಷೆ, ಕರ್ನಾಟಕದ ಬಗ್ಗೆ ಎಚ್ಚರ ಬರಬೇಕಾಯಿತು. ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿರದಿದ್ದರೆ ಅಂಥದೇ ಪರಿಸ್ಥಿತಿ ಮಂಬಯಿ ಕರ್ನಾಟಕದಲ್ಲೂ ಉದ್ಭವವಾಗುತ್ತಿತ್ತು.

ಮುಂಬಯಿ ಕರ್ನಾಟಕ ಎಂದು ಕರೆಯುವ ಪ್ರದೇಶದಲ್ಲಿ ಬ್ರಿಟಿಷರ ಅಧೀನದ ಬೆಳಗಾವಿ, ಬಿಜಾಪುರ, ಧಾರವಾಡ,ಕಾರವಾರ, ಸೊಲಾ ಪುರ ಮತ್ತು

ಮಂಗಳವೇಢೆ ಪ್ರಾಂತಗಳಲ್ಲದೆ ಸುಮಾರು ೧೪ ಚಿಕ್ಕ ದೊಡ್ಡ ಸಂಸ್ಥಾನಗಳಲ್ಲಿ ಈ ಪ್ರದೇಶ ಹರಿದು ಹಂಚಿ ಹೋಗಿತ್ತು. ಸವಣೂರು ಸಂಸ್ಥಾನ ಒಂದನ್ನು ಬಿಟ್ಟರೆ ಉಳಿದೆಲ್ಲ ಸಂಸ್ಥಾನಗಳು ಮರಾಠಿ ಸಂಸ್ಥಾನಿಕರ ಆಡಳಿತದಲ್ಲಿದ್ದವು. ಸವಣೂರಲ್ಲಿ ಮುಸ್ಲಿಮ ನವಾಬನಿದ್ದನು. ಅಂತೆಯೇ ಮೊದಲು ಇಲ್ಲಿ ಕನ್ನಡದ ದೀಪವನ್ನು ಹಚ್ಚಬೇಕು. ಆನಂತರ ಆ ಬೆಳಕಿನಲ್ಲಿ ಉಳಿದ ಕರ್ನಾಟಕಗಳ ಜನರನ್ನು ಕೂಡಿಕೊಳ್ಳಬೇಕು. ಅದುವೆ ಕರ್ನಾಟಕ ವಿದ್ಯಾವರ್ಧಕ ಸಂಘದ ಉದ್ದೇಶವಾಗಿತ್ತು.

ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿದ ಮೊದಲ ದಶಕದಲ್ಲಿಯೇ (೧೮೯೦-೧೯೦೦) ಬ್ರಿಟಿಷ್ ಕರ್ನಾಟಕ ಪ್ರದೇಶಗಳಲ್ಲದೆ, ಮರಾಠಿ ಸಂಸ್ಥಾನಿಕರಿಗೆ ಒಳಪಟ್ಟ ಕನ್ನಡ ಪ್ರದೇಶದಲ್ಲಿಯೂ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಯಶಸ್ವಿಯಾಗಿ ಮಾಡಿದರು. ಪ್ರಾರಂಭದಿಂದಲೇ ಕನ್ನಡಕ್ಕಾಗಿ ದುಡಿಯುವವರನ್ನು ಒಂದುಗೂಡಿಸುವುದು, ಕನ್ನಡ ಭಾಷೆಯ ಅಸ್ತಿತ್ವವನ್ನು ಸ್ಥಿರಪಡಿಸುವುದು, ಕನ್ನಡ ಗ್ರಂಥಕರ್ತರಿಗೆ ಪ್ರೋತ್ಸಾಹ ನೀಡುವುದು ಮೊದಲಾದ ಕಾರ್ಯಗಳು ಯಶಸ್ವಿಯಾಗಿ ನಡೆದವು ಎನ್ನಲು ಕನ್ನಡ ಅದ್ಯ ಕಾದಂಬರಿಕಾರ ಗಳಗನಾಥರ'ಪ್ರಬುದ್ಧ ಪದ್ಮನಯನಾ' ಕಾದಂಬರಿಯ ಪ್ರಸ್ತಾವನೆಯಲ್ಲಿ ಕಾದಂಬರಿಕಾರರು ಬರೆದ ಮಾತುಗಳು ಸಾಕ್ಷಿಯಾಗಿವೆ.

''ಪ್ರಿಯ ವಾಚಕರೆ, ಪದ್ಧತಿಯಂತೆ ಪ್ರಸ್ತಾವನೆಯ ಸಂಬಂಧವಾದ ನಾಲ್ಕು ಮಾತುಗಳನ್ನು ಬರೆಯುವ ಮೊದಲು, ಪಾರಿತೋಷಕದ ಆಸೆಯನ್ನು ತೋರಿಸಿ ಈ ಕಾದಂಬರಿಯನ್ನು ಬರೆಯಲ್ಪಟ್ಟಿದೆ. ಕ.ವಿ.ವ.ಸಂ.ದ ಉಪಕಾರವನ್ನು, ಇದನ್ನು ಬರೆಯುವ ವಿಷಯವಾಗಿ ರಾಮಚಂದ್ರರಾವ ದೇಶಪಾಂಡೆಯವರ ಉಪಕಾರವನ್ನು ಸ್ಮರಿಸದೆ ಇರೆನು.''

ಸಂಘದ ೨೨-೧೧-೧೮೯೯ರ ಸಭೆಯಲ್ಲಿ ಪಾಸಾದ ಗೊತ್ತುವಳಿ 'ಪುಣೆಯಲ್ಲಿ ೨೩/೨೪/೨೫ ಈ ದಿವಸಗಳಲಿ ಕೂಡುವ ಇನ್‌ಸ್ಪೆಕ್ಟರ್ ಕಾನ್‌ಫರೆನ್ಸಿಗೆ, ಕನ್ನಡ ಶಾಲೆಗಳಲ್ಲಿ ಬಾಳಬೋಧ (ದೇವನಾಗರಿ) ಅಕ್ಷರಗಳನ್ನೂ, ಮರಾಠಿ ಭಾಷೆಯನ್ನೂ ಕಲಿಸುವ ಅವಶ್ಯವಿಲ್ಲವೆಂದು ವೆಂಕಟರಾವ್ ಕಟ್ಟಿ ಮತ್ತು ವೆಂಕಟರಾವ್ ಕಾಯಜರಕರ ಇವರಿಬ್ಬರ ಹೊರತಾಗಿ ಉಳಿದವರ ಒಪ್ಪಿಗೆಯಿಂದ ಗೊತ್ತಾಯಿತು.''

೧೫-೨-೧೯೦೦ರ ಸಭೆಯಲ್ಲಿ 'ಜಮಖಂಡಿ ಹಾಯಸ್ಕೂಲ್ ಹೆಡ್ ಮಾಸ್ತರರಿಗೆ ಅವರ ಶಾಲೆಯಲ್ಲಿ ಕನ್ನಡ ಅಭ್ಯಾಸ ನಡೆಯುತ್ತದೋ ಇಲ್ಲವೋ ಎಂಬ ಬಗ್ಗೆ ಅಲ್ಲಿಯ ಡೆಪ್ಯೂಟಿ ಇನ್‌ಸ್ಪೆಕ್ಟರ್ ಮತ್ತು ದೇಶಭಾಷೆಯ ಮಾಸ್ತರರಿಗೆ ಕನ್ನಡವನ್ನು ಕಲಿಸುವ ಪ್ರಾಥಮಿಕ ಶಾಲೆಗಳು ಇರುತ್ತವೋ ಇಲ್ಲವೋ ಎಂಬ ಬಗ್ಗೆ ಪತ್ರಗಳನ್ನು ಬರೆದು ಎರಡೂ ಕಡೆಯಲ್ಲಿ ಕನ್ನಡ ಅಭ್ಯಾಸ ನಡೆಯುವುದಿಲ್ಲವೆಂದು ಉತ್ತರ ಬಂದರೆ ಕನ್ನಡದ ಅಭ್ಯಾಸ ನಡೆಸುವ ಬಗ್ಗೆ ಯೋಗ್ಯ ಅಧಿಕಾರಿಗಳಿಗೆ ಬರೆದು

ಪ್ರಯತ್ನಿಸಬೇಕು' ಎಂಬ ಗೊತ್ತುವಳಿ ಪಾಸು ಮಾಡಿದರು. ವಾಸ್ತವದಲ್ಲಿ ಜಮಖಂಡಿಯು ಪಟವರ್ಧನ ಎಂಬ ಮರಾಠಿ ಸಂಸ್ಥಾನಿಕನ ಆಡಳಿತಕ್ಕೆ ಒಳಪಟ್ಟಿತ್ತು.

ಇವೆಲ್ಲ ನಿರ್ಣಯಗಳು ಕೇವಲ ಕಾಗದದ ಮೇಲೆ ಉಳಿಯಲಿಲ್ಲ. ಕಾರ್ಯ ರೂಪದಲ್ಲಿ ಬಂದುದು ವಿಶೇಷವಾಗಿತ್ತು. ಕನ್ನಡಿಗರಲ್ಲಿ ಐಕ್ಯ ಮತ್ತು ಜಾಗೃತಿಯನ್ನು ನೆಲೆಗೊಳಿಸಲು ಕನ್ನಡ ನಾಡಿನಲ್ಲಿ 'ಲೋಕ ಶಿಕ್ಷಕ', 'ವಾಗ್ಭೂಷಣ'ಗಳಂಥ ಪತ್ರಿಕೆಗಳನ್ನು ಪ್ರಕಟಿಸಿತು. ಶಾಲೆಗಳಲ್ಲಿ ಕನ್ನಡದ ನಿಜವಾದ ಸ್ಥಾನವನ್ನು ನೆಲೆಗೊಳಿಸಲು ಸಂಘವು ಈ ಮೊದಲ ಹತ್ತು ವರುಷಗಳಲ್ಲಿ ಮನಃಪೂರ್ವಕ ಪ್ರಯತ್ನಿಸಿತು. ೧೯೦೦ರ ಅಕ್ಟೋಬರ್ ತಿಂಗಳಲ್ಲಿ ಧಾರವಾಡದಲ್ಲಿ ನಡೆದ ವಿದ್ಯಾಪರಿಷತ್ತಿನಲ್ಲಿ ಸಂಘದ ಪ್ರತಿನಿಧಿಯಾಗಿ ಅಂದಿನ ಸಂಘದ ಸನ್ಮಾನಿತ ಕಾರ್ಯದರ್ಶಿಗಳಾದ ನಾರಾಯಣರಾವ ಕರಗುದರಿಯವರು 'ಕನ್ನಡ ಶಾಲೆಗಳಲ್ಲಿ ಮರಾಠಿ ಕಲಿಸಬಾರದು' ಎಂಬ ವಿಷಯದಲ್ಲಿ ಪ್ರಬಂಧವನ್ನೇ ಮಂಡಿಸಿ ಕನ್ನಡಿಗರ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಇದಕ್ಕೆ ಅಂದು ಸಂಘದ ಅಧ್ಯಕ್ಷರಾಗಿದ್ದ ವೆಂಕಟರಂಗೋ ಕಟ್ಟಿಯವರು 'ಮರಾಠಿಯನ್ನು ಕೆಲಮಟ್ಟಿಗೆ ಕಲಿಸಬೇಕು' ಎಂದು ಸೂಚಿಸಿದಾಗ ಸದಸ್ಯರು ಅವರ ಅಭಿಪ್ರಾಯವನ್ನು ಒಪ್ಪಲಿಲ್ಲ. ಅಷ್ಟೇ ಅಲ್ಲ ಮುಂದೆ ಮೂರು ತಿಂಗಳ ಆನಂತರ ದಿನಾಂಕ ೨೦-೧-೧೯೦೧ರಂದು ನಡೆದ ಸಂಘದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ಸಂಘದ ಸದಸ್ಯರ ಗಟ್ಟಿ ನಿಲುವಿಗೆ ಸಾಕ್ಷಿಯಾಗಿದೆ.

'ಅವರು ಸಂಘದ ಅಧ್ಯಕ್ಷರಾಗಿದ್ದರೂ , ಅವು ಸಂಘದ ಅಭಿಪ್ರಾಯ ಗಳಾಗಿರುವುದಿಲ್ಲ. ಸಂಘದ ಅಭಿಪ್ರಾಯಗಳು ಅವರ ಅಭಿಪ್ರಾಯಗಳಿಂದ ಭಿನ್ನವಾಗಿರುತ್ತವೆ....ಇವು ಅಧ್ಯಕ್ಷರ ಮಾನ ಹಾನಿಯಾಗಬೇಕೆಂಬ ಹೇತುವಿನಿಂದ ಬರೆದಂಥವು ಅಲ್ಲ. ಕೇವಲ ಸಂಘದ ಮತ್ತು ಕರ್ನಾಟಕದ ವಿದ್ಯೆಯ ಹಿತದ ಸಲುವಾಗಿ ಇರುತ್ತವೆಂದು ಸಹ ಅವರಿಗೆ ತಿಳಿಸಬೇಕು.'

ಹೀಗೆ ಸಂಘ ಪ್ರಾರಂಭದ ಕಠಿಣ ಪರಿಸ್ಥಿತಿಯಲ್ಲೂ ಕನ್ನಡದ ಉದ್ಧಾರಕ್ಕಾಗಿ ಪ್ರಯತ್ನಪಟ್ಟಿದೆ. ಇಲ್ಲಿಯ ಇನ್ನೊಂದು ವಿಶೇಷವೆಂದರೆ ಸಂಘ ಯಾವೊಂದು ಜಾತಿ, ಮತ, ಸರಕಾರ, ಅಥವಾ ಕೆಲವು ವಿಶಿಷ್ಟ ವ್ಯಕ್ತಿಗಳ ಪ್ರಭಾವ, ರಾಜಕೀಯ ಇದಾವುದಕ್ಕೂ ಮಣೆಯನ್ನು ಹಾಕಲಿಲ್ಲ. ವೆಂಕಟ ರಂಗೋ ಕಟ್ಟಿ ಅವರು ಅಂದಿನ ಪ್ರಭಾವಿ ವ್ಯಕ್ತಿಗಳಾಗಿದ್ದರು. ಆದರೆ ಕನ್ನಡಕ್ಕಾಗಿ ಹೋರಾಡಲು ಹುಟ್ಟಿದ ಒಂದು ಸಂಘಟನೆ ಮತ್ತು ಅದರ ಬೆಳವಣಿಗೆ ಅಂದಿನ ಜನರಿಗೆ ಮುಖ್ಯವಾಗಿತ್ತು.

ಅಧ್ಯಾಯ -೧೨

• ಮುಳುಗಿದ ಕನ್ನಡದ ಉಜ್ವಲ ಸೂರ್ಯ !

ಕನ್ನಡಿಗರು ತಮ್ಮ ಭಾಷೆಯೊಂದಿಗೆ ಅವಿಚ್ಛಿನ್ನವಾಗಿ ಸಾವಿರ ವರುಷಗಳ ವರೆಗೆ ಚಕ್ರವರ್ತಿಗಳಾಗಿ ಭರತಖಂಡದಲ್ಲೆಲ್ಲ ಕರ್ನಾಟಕದ ಕೀರ್ತಿಯನ್ನು ಬೆಳೆಯಿಸಿದವರು. ಅದೇ ಕನ್ನಡಿಗರು ತಮಗೆ ಇತಿಹಾಸವೇ ಇಲ್ಲ ತಮ್ಮ ಭಾಷೆಗೆ ಚರಿತ್ರೆ ಇಲ್ಲ, ಇದು ಕಲಿಯುವ ಭಾಷೆಯೂ ಅಲ್ಲ, ಎಂಬಷ್ಟರ ಮಟ್ಟಿಗೆ ಅವನತಿಗೆ ಈಡಾದದ್ದನ್ನು ನೋಡಬೇಕೆಂದರೆ, ಮತ್ತು 'ಚರಿತ್ರೆಯೇ ಇಲ್ಲದೆ ಹುಟ್ಟಿದ ಮರಾಠಿ' ಭಾಷೆ ತಾನು ಹುಟ್ಟಿದ ಒಂದೆರಡೇ ಶತಕಗಳಲ್ಲಿ ಇಡೀ ಕರ್ನಾಟಕದ ಮೇಲೆ ಎಷ್ಟೊಂದು ಪ್ರಭಾವ ಬೀರಿತು ಎಂಬುದನ್ನು ನೋಡಬೇಕೆಂದರೆ ಇಂದು ಹೈದರಾಬಾದ ಕರ್ನಾಟಕ ಎಂದು ಕರೆಯಿಸಿಕೊಳ್ಳುವ ಕಲಬುರ್ಗಿ, ಬೀದರ, ರಾಯಚೂರ ಪ್ರದೇಶಗಳತ್ತ ಕಣ್ಣು ಹಾಯಿಸಬೇಕು. ವಾಸ್ತವದಲ್ಲಿ ಮುಂಬಯಿ ಕರ್ನಾಟದಂತೆ ಅದು ಒಂದಿನವೂ ಬ್ರಿಟಿಷರ ಅಧಿಪತ್ಯದಲ್ಲಿರಲಿಲ್ಲ. ಅಖಂಡ ಆರು ನೂರು ವರುಷಗಷ್ಟು ಕಾಲ ಅದು ಮುಸಲ್ಮಾನರ ಅಧಿಪತ್ಯಕ್ಕೆ ಒಳಪಟ್ಟಿತ್ತು. ಆದರೂ ಅಲ್ಲಿಯ ಮರಾಠಿಯ ಪ್ರಭಾವವನ್ನು ಕಡಿಮೆ ಮಾಡಿ ಫಾರಸೀ ಉರ್ದು ಬಾಷೆಗಳನ್ನು ತರಲು ನಿಜಾಮ ಕೂಡ ಹೆಣಗಾಡಬೇಕಾಯಿತು. ಅಂಥದ್ದರಲ್ಲಿ ಕನ್ನಡವನ್ನು ಯಾರು ಕೇಳಬೇಕು ?

ಆದರೆ ಕನ್ನಡದಲ್ಲಿ ಇಂದು ದೊರೆಯುವ ಮೊದಲ ಕೃತಿ 'ಕವಿರಾಜಮಾರ್ಗ' ವನ್ನು ಇದೇ ಪರಿಸರದಲ್ಲಿಯ ಅರಸ ನೃಪತುಂಗನು ರಚಿಸಿದನು. ಆದಿ ಕವಿ ಎನಿಸಿದ ಪಂಪ ಈ ಪರಿಸರದಲ್ಲಿ ತನ್ನ ವಿಖ್ಯಾತ ಕಾವ್ಯಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ'ಗಳನ್ನು ಬರೆದನು. ಬಸವೇಶ್ವರ, ಅಲ್ಲಮಪ್ರಭುಗಳು ಅಕ್ಕಮಹಾದೇವಿಯಂಥ ಹಲವಾರು ಶರಣ - ಶರಣೆಯರು ವಿಶ್ವಮಾನ್ಯ ಶರಣ ಸಾಹಿತ್ಯವನ್ನು ರಚಿಸಿದ್ದು ಇದೇ ನೆಲದಲ್ಲಿಯ ಅನುಭವ ಮಂಟಪದಲ್ಲಿ. ಇದು ಸಾಹಿತ್ಯದ ವಿಷಯವಾದರೆ, ಮಳಖೇಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ 'ರಾಷ್ಟ್ರಕೂಟ 'ರು ಪಶ್ಚಿಮಕ್ಕೆ ಗುಜರಾತದವರೆಗೆ , ಪೂರ್ವ ದಿಕ್ಕಿನಲ್ಲಿ ಓರಿಸ್ಸ ಬಂಗಾಳದ ವರೆಗೆ ತಮ್ಮ ಕೈಯ ಚಳಕವನ್ನು ತೋರಿಸಿದ್ದರು. ಅನಂತರದ ಪಶ್ಚಿಮ ಚಾಳುಕ್ಯರು ಇಂದಿನ ಬಸವ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಮೊದಲನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ ಮತ್ತು ಮೂರನೆಯ ಸೋಮೇಶ್ವರ (ಕ್ರಿ.ಶ. ೧೦೪೨-೧೧೩೪) ಈ ಮೂವರು ಅರಸರು ಉತ್ತರ ಭಾರತದ ದಿಗ್ವಿಜಯವನ್ನು ಸಾಧಿಸಿದವರು. ಈ ದಿನಗಳಲ್ಲಿ ಮಿಥಿಲೆ (ಇಂದಿನ ಉತ್ತರ ಬಿಹಾರ) ಮತ್ತು ನೇಪಾಳಗಳಲ್ಲಿ ನಾನ್ಯದೇವ, ಮಲ್ಲದೇವ ನರಸಿಂಹದೇವ ಮೊದಲಾದ

ಕನ್ನಡಿಗರು ಅರಸರಾಗಿದ್ದರು. ಬಂಗಾಲ ಪ್ರಾಂತದಲ್ಲಿ ವಿಜಯಸೇನ, ಬಲ್ಲಾಳಸೇನ, ಲಕ್ಷ್ಮಣಸೇನ ಮೊದಲಾದವರು ಆಳಿದರು. ಬಾದಾಮಿಯ ಚಾಲುಕ್ಯ ವಂಶದವರೆ ವೆಂಗಿ ಮಂಡಲ (ಇಂದಿನ ಆಂಧ್ರಪ್ರದೇಶದಲ್ಲಿಯ ಭಾಗ)ವನ್ನು ಆಳಿದರು. ಕನ್ನಡದ ಸೂರ್ಯ ಉಜ್ವಲವಾಗಿ ಬೆಳಗುತ್ತಿದ್ದ ಕಾಲವದು. ಅದರ ಬೇರು ಇದ್ದದ್ದು ಈ ಹೈದರಾಬಾದ ಕರ್ನಾಟಕದಲ್ಲಿ.

ಕ್ರಿ.ಶ. ೧೨ನೆಯ ಶತಮಾನದಲ್ಲಿ ಕಲ್ಯಾಣ ಚಾಳುಕ್ಯರ ರಾಜ್ಯವು ಒಡೆದು ಮೂರು ಹೋಳುಗಳಾದವು. ವರಂಗಲ್ಲಿನ ಕಾಕತೀಯರು, ದೇವಗಿರಿಯ ಯಾದವರು ಮತ್ತು ದ್ವಾರ ಸಮುದ್ರದ ಹೊಯ್ಸಳರು ಇವುಗಳೇ ಆ ಮೂರು ರಾಜ್ಯಗಳು. ಮೂರೂ ಕನ್ನಡದ ರಾಜ್ಯಗಳು, ಬರುಬರುತ್ತ ಇವುಗಳಲ್ಲಿಯ ವರಂಗಲ್ಲಿನ ಕಾಕತೀಯರು ತೆಲುಗಿನಲ್ಲಿ ವ್ಯವಹರಿಸಲು ಪ್ರಾರಂಭಿಸಿದರೆ, ದೇವರಗಿಯ ಯಾದವರು ಮರಾಠಿಗೆ ಮಾರು ಹೋದರು. ದೋರಸಮುದ್ರದ ಹೊಯ್ಸಳರು ಮಾತ್ರ ಕೊನೆಯವರೆಗೂ ಕನ್ನಡಿಗರಾಗಿಯೇ ಉಳಿದರು. ಇದು ಇತಿಹಾಸ.

ಪರಸ್ಪರ ತಂತಮ್ಮಲ್ಲಿ ಬಡಿದಾಡುತ್ತಿದ್ದ ಈ ರಾಜ್ಯಗಳು, ೧೪ನೆಯ ಶತಮಾನದ ಪ್ರಾರಂಭದಲ್ಲಿ (ಕ್ರಿ.ಶ. ೧೩೧೨) ಹೊಸ ಹುರುಪಿನ ಮಹಮ್ಮದೀಯರ ಹೊಡೆತಗಳಿಗೆ ಪಳಪಳನೆ ಉದುರಿ ಬಿದ್ದುವು. ಕಾಕತೀಯರು, ಯಾದವರು ನಾಮಶೇಷರಾದರು. ಹೊಯ್ಸಳರ ಮೂರನೆಯ ಬಲ್ಲಾಳ ಮಾತ್ರ ಹೊಳೆಯ ದಂಡೆಗಿದ್ದ ಗಲಗು ಮಳೆಗಾಲದಲ್ಲಿಯ 'ಹೊಳೆಯ ಪ್ರವಾಹಕ್ಕೆ ತಲೆ ಬಗ್ಗಿಸಿ ಹೊಳೆಯು ಇಳಿದೊಡನೆ ಪುನಃ ತಲೆ ಎತ್ತುವಂತೆ' ಮಹಮ್ಮದಿಯರಿಗೆ ಸೋತು, ಧೈರ್ಯಗುಂದದೆ ಸಮಯವನ್ನು ಕಾಯಹತ್ತಿದನು. ರಾಷ್ಟ್ರ ಸಂಘಟನೆಯನ್ನು ಮಾಡುತ್ತ, ಇಂದು ದೋರ ಸಮುದ್ರದಲ್ಲಿದ್ದರೆ, ನಾಳೆ ಕಣ್ಣಾನೂರಿನಲ್ಲಿ, ಮತ್ತೊಂದು ದಿನ ಹಂಪಿಯಲ್ಲಿ ಹೀಗೆ ನಿಂತಲ್ಲಿ ನಿಲ್ಲದೆ ಕಷ್ಟಪಟ್ಟು ತನ್ನ ಇಡೀ ಆಯುಷ್ಯವನ್ನು ಸವೆಸಿದನು. ಒಮ್ಮೆ ಮಧುರೆಯ ಸುಲ್ತಾನನ್ನೂ ಸೋಲಿಸಿದನು. ಸುಲ್ತಾನನ ವಿಶ್ವಾಸ ಘಾತುಕತನದಿಂದ ಅವನಿಂದಲೇ ಸತ್ತು ಮಧುರೆಯ ಕೋಟೆಯ ಬಾಗಿಲಿಗೆ ಬಲ್ಲಾಳನನ್ನು ತೂಗು ಹಾಕಲಾಯಿತು ! ಆದರೆ ಆತನ 'ಬಲಿದಾನ' ಹುಸಿ ಹೋಗಲಿಲ್ಲ. ಆತನ ಅಸ್ಥಿಪಂಜರದಿಂದ ಹೊರಟ ತೇಜಸ್ಸು ಮುಂದಿನ ಕೆಲವೇ ದಿನಗಳಲ್ಲಿ ವಿಜಯ ನಗರ ಸಾಮ್ರಾಜ್ಯದ ಉದಯಕ್ಕೆ ಕಾರಣವಾಯಿತು. (ಕ್ರಿ.ಶ. ೧೩೩೬) ಇದೆಲ್ಲ ನಡೆದದ್ದು ಕೇವಲ ೨೬ ವರುಷಗಳ ಅಂತರದಲ್ಲಿ ಎಂಬುದು ವಿಶೇಷವಾಗಿದೆ. ಆದರೆ ಅದು ರಾಷ್ಟ್ರಕೂಟ ನೃಪತುಂಗನ, ಕಲ್ಯಾಣಿ ಚಾಲುಕ್ಯರ ೬ನೆಯ ವಿಕ್ರಮಾದಿತ್ಯನ ನಾಡಿಗೆ ಏನೂ ಉಪಯೋಗವಾಗಲಿಲ್ಲ. ಪ್ರತಿಯಾಗಿ ಇಲ್ಲಿ ಮುಂದಿನ ಹತ್ತು ವರುಷಗಳಲ್ಲಿ ಕಲಬುರ್ಗಿ ರಾಜಧಾನಿಯನ್ನಾಗಿ ಮಾಡಿಕೊಂಡು 'ಬಹಮನಿ' ಎಂಬ ಮಹಮ್ಮದೀಯರ ರಾಜ್ಯ ಪ್ರಾರಂಭವಾಯಿತು.(ಕ್ರಿ.ಶ. ೧೩೪೭) ಅಂದು ಇಲ್ಲಿಯ

ಜನರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಮತ್ತು ಪರಂಪರೆಗಳಿಗೆ ಎರವಾದವರು ಮತ್ತೆ ಅವುಗಳನ್ನು ಪಡೆಯಲು ಆರು ಶತಮಾನಗಳಷ್ಟು ಕಾಲ ಕಾಯಬೇಕಾಯಿತು. (ಕ್ರಿ.ಶ. ೧೯೪೮) !

ಆದರೆ ಮಂದಿನ ದಿನಗಳಲ್ಲಿ ಅಂದರೆ ೧೯ನೆಯ ಶತಮಾನದ ಕೊನೆಯಲ್ಲಿ ಮತ್ತು ೨೦ನೆಯ ಶತಮಾನದ ಆದಿಯಲ್ಲಿ, ಇತಿಹಾಸವನ್ನು ಬರೆಯುವಾಗ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಅರಸರೆಲ್ಲರೂ 'ಅಸ್ಸಲ್ ಮರಾಠಾ ಕ್ಷತ್ರಿಯ' ರೆಂದು ಮಹಾಮಹೋಪಾಧ್ಯಾಯ ಭಾಂಡಾರಕರರೇ ಮೊದಲಾದದವರು ಪ್ರಚಾರ ಮಾಡಿದರು ! ಅದಕ್ಕೆ ನಾವು ತಲೆ ದೂಗಿದೆವು. ನಮಗೆ ಇತಿಹಾಸವೇ ಇಲ್ಲ, ನಮ್ಮ ಭಾಷೆಗೆ ಸಾಹಿತ್ಯವೇ ಇಲ್ಲ, ನಮ್ಮ ಭಾಷೆ ಒಂದು ಬುಡಕಟ್ಟು ಜನಾಂಗದ ಭಾಷೆ. ಅದು ಮರಾಠಿ ಮೂಲದಿಂದಲೆ ಹುಟ್ಟಿದ್ದು ಎಂದು ಹೇಳುವಷ್ಟರ ಮಟ್ಟಿಗೆ ಕನ್ನಡ ಹೇಳ ಹೆಸರಿಲ್ಲದಾಯಿತು. ವಿಶ್ವಮಾನ್ಯ ಕನ್ನಡ ಕೃತಿಗಳನ್ನು ನೀಡಿದ ನೆಲದಲ್ಲಿಯ ಭಾಷೆ, ಪರಂಪರೆ, ಸಂಸ್ಕೃತಿಗಳು ನಿರ್ಲಕ್ಷ್ಯಕ್ಕೆ ಈಡಾದರೆ ಅಥವಾ ಅನ್ಯ ಬಾಷಾ ಆಕ್ರಮಣಕ್ಕೆ ಒಳಗಾದರೆ ಎಂಥ ಅನಾಹುತವಾಗಬಹುದು ಎನ್ನಲು ಇದಕ್ಕಿಂತ ಬೇರೆ ಉದಾಹರಣೆಗಳು ಬೇಕಿಲ್ಲ. ಪ್ರಾರಂಭದಿಂದಲೇ ಇಂಗ್ಲಿಷು ಬೇಕು ಎಂಬ ಜನರು ಇದನ್ನು ಗಮನಿಸಬೇಕು.

ಒಂದು ಜನಾಂಗವು ಏರಿಕೆಯಲ್ಲಿರುವಾಗ ಅವರ ಅಂತರ್ಬಾಹ್ಯ ಗುಣಗಳು ವಿಕಸಿತವಾಗಿ ಕ್ರಿಯಾ ಶಕ್ತಿಯು ಹೆಚ್ಚಾದಂತೆ ಅವರ ನುಡಿಯೂ ವಿಕಾಸಗೊಳ್ಳುತ್ತದೆ. ಹತವೀರ್ಯರಾದ ಜನರ ಭಾಷೆಯು ಬೆಳೆಯದೆ ಕುಂಠಿತವಾಗಿ ಸಂಕೋಚವಾಗುವುದು. ಯಾಕೆಂದರೆ ಜನರ ಸಂಸ್ಕೃತಿಯು ಹೊರಬೀಳಲು ನುಡಿಯೇ ಮುಖ್ಯ ಸಾಧನ. ಕ್ರಿ.ಶ. ೧೪ನೆಯ ಶತಮಾನದವರೆಗೆ ಅಂದಿನ ಹೈದರಾಬಾದ ಕರ್ನಾಟಕದ ಪ್ರದೇಶದಲ್ಲಿ ಕನ್ನಡ ನುಡಿಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಇಲ್ಲಿಯ ಮಳಖೇಡದಲ್ಲಿ ಕುಳಿತು ನೃಪತುಂಗನು ಕವಿರಾಜಮಾರ್ಗವನ್ನು ಬರೆಯುತ್ತ, ಕಾವೇರಿಯಿಂದ ಗೋದಾವರಿಯ ಮಧ್ಯದ ಕನ್ನಡದ ಮೆರಗನ್ನು ಗುರುತಿಸಿ ಅದರಲ್ಲಿಯ ತಿರುಳ್ಗನ್ನಡ ನಾಡನ್ನು ಗುರುತಿಸಿದ್ದನು. ಪಂಪನು ತನ್ನ ವಿಕ್ರಮಾರ್ಜುನ ವಿಜಯ, ಆದಿಪುರಾಣಗಳನ್ನು ಈ ನೆಲದಲ್ಲಿಯೇ ಕುಳಿತು ಬರೆದು ಕನ್ನಡ ಕುಲಕ್ಕೆ ಆದಿ ಕವಿಯಾದನು. ಪೊನ್ನನಿಗೆ ಆಶ್ರಯ ಕೊಟ್ಟ ರಾಷ್ಟ್ರಕೂಟ ಅರಸನಾದ ಕನ್ನರನು ಇಲ್ಲಿಯವನಾದರೆ ಅವನಿಂದ ಶಾಂತಿ ಪುರಾಣ ಬರೆಸಿದ ಮಲ್ಲಪ, ಪುನ್ನಿಮಯ್ಯರು ಇಲ್ಲಿಯವರು. ರನ್ನನ ಪೋಷಕನಾದ ತೈಲಪ ಚಕ್ರವರ್ತಿಯ ನಾಡು ಇದು. ರನ್ನನಿಂದ ಗ್ರಂಥಗಳನ್ನು ಬರೆಯಿಸಿದ ಪುಣ್ಯಾತ್ಮಳಾದ ಅತ್ತಿಮಬ್ಬೆ ಈ ನಾಡಿನವಳು.

ಗೋದಾವರಿ ಪರಿಸರದ ನಾಂದೇಡ, ನಿಜಾಮಾಬಾದ, ಕರೀಮನಗರ ಜಿಲ್ಲೆಗಳು ಕನ್ನಡದ ಪ್ರದೇಶಗಳು. ಪಂಪನ ಆಶ್ರಯದಾತನಾದ ಅರಿಕೇಸರಿಯ ಮನೆತನದ ಮೂಲಪುರುಷನಾದ 'ಯುದ್ಧಮಲ್ಲ' ನ ರಾಜಧಾನಿಯಾದ ಬೋಧನವು

ಕನ್ನಡವಾಗಿತ್ತು. ಅಲ್ಲಿ ದೊರೆತ ಕನ್ನಡ ಶಾಸನವೇ ಅದಕ್ಕೆ ನಿದರ್ಶನವಾಗಿದೆ. ಚಕ್ರವರ್ತಿಗಳೂ ಕವಿಚಕ್ರವರ್ತಿಗಳೂ ಉದಯಿಸಿದ ನಾಡಿನಲ್ಲಿ ಅವರು ಬರೆದ ಗ್ರಂಥಗಳನ್ನು ಓದಿ ತಿಳಿಯಲಾರದಷ್ಟು ಮತಿಹೀನರಾದರು. ಅದಕ್ಕೆ ಕಾರಣಗಳು ಏನು? ಎಂಬುದನ್ನು ತಿಳಿಯಬೇಕು. ಸ್ವತಃ ವೀರರಾಗಿಯೂ, ರಣರಂಗದಲ್ಲಿ ಶತ್ರುಗಳ ಬಿಸಿನೆತ್ತರದಿಂದ ತಮ್ಮ ಕತ್ತಿಗಳ ಧಾರೆಗೆ ನೀರು ಕುಡಿಸಿದವರೇ ಮನೆಗೆ ಬಂದ ಮೇಲೆ ಶಾಂತಿ ಕಾಲದಲ್ಲಿ ಅದೇ ಕೈಯಿಂದ ಲೆಕ್ಕಣಿಕೆಯನ್ನು ಹಿಡಿದು ಉದ್ಗ್ರಂಥಗಳನ್ನು ಬರೆದವರು. ಆದರೆ ರಾಜಕೀಯ ವೈಭವ ಅಳಿದೊಡನೆ ಎಲ್ಲ ಗುಣಗಳು ಮಾಯವಾಗಿ ಬಿಟ್ಟವು.

ಕಲ್ಯಾಣ ಚಾಲುಕ್ಯರ ರಾಜ್ಯವು ಒಡೆದ ನಂತರ ಈ ಪ್ರದೇಶದಲ್ಲಿ ಕನ್ನಡ ಭಾಷೆಯೇ ಕುಗ್ಗುತ್ತ ಬಂದಿತು. ಗ್ರಂಥಗಳ ಮಾತಂತಿರಲಿ, ತ್ರಿಭುವನಮಲ್ಲ ವಿಕ್ರಮಾಂಕನ ಕಾಲದ ಶಾಸನಗಳ ಭಾಷೆ, ಬರವಣಿಗೆ ರೀತಿ ಅಕ್ಷರಗಳ ಕೆತ್ತನೆಗಳನ್ನು ನೋಡಬಹುದು. ಚಾಲುಕ್ಯರ ನಂತರ ದೇವಗಿರಿ ಯಾದವರ ಕೊನೆಯ ಕಾಲದ ಶಾಸನಗಳ ಭಾಷೆ ಮತ್ತು ರೀತಿಯಲ್ಲಿ ಬದಲಾವಣೆಯಾಯಿತು. ನಮಸ್ತುಂಗ ಶಿರಶ್ಚುಂಬಿ' ಎಂದು ಪ್ರಾರಂಭವಾಗುವ ಬದಲು ಶಾಸನಗಳು 'ಶ್ರೀ ಗುರುಭ್ಯೋನಮಃ' ಎಂದು ಪ್ರಾರಂಭವಾದವು. ಕನ್ನಡ ಭಾಷೆ ಶಿಥಿಲವಾಯಿತು. ಬರಬರುತ್ತ ಮರಾಠಿಗೆ ಹೋಲುವ ಪದಗಳನ್ನೇ ಉಪಯೋಗಿಸಲಾಯಿತು. ಆಳಂದಿ ತಾಲೂಕಿನ ಪಟ್ಟ ಸಾವಳಗಿ ಹತ್ತಿರದ 'ಕಿಣಿ' ಎಂಬ ಊರಲ್ಲಿ ಮಹಮ್ಮದ ತುಘಲಕನ ಕಾಲದ ಒಂದು ಕನ್ನಡ ಶಾಸನವಿದೆ. ಶಾಸನದ ಕಲ್ಲು ಒರಟು, ಅಕ್ಷರಗಳು ಅಂಕುಡೊಂಕ. ಬರಹವಂತೂ ದೇವರೇ ಗತಿ. ಈ ಮೊದಲಿನ ತ್ರಿಭುವನ ಮಲ್ಲನ ಶಾಸನವನ್ನು ಈ ಶಾಸನದೊಂದಿಗೆ ಹೋಲಿಸಿದರೆ ಕನ್ನಡದ ಅಧಃಪತನದ ಅರಿವಾಗುತ್ತದೆ. ಮುಂದಿನ ದಿನಗಳಲ್ಲಿ ಕಲಬುರ್ಗಿಯ ಸುತ್ತಮುತ್ತ ಬಹುಮನಿ ಸುಲ್ತಾನರ ಕಾಲದ ಶಾಸನಗಳು ಕನ್ನಡದಲ್ಲಿರುವುದು ಸಾಧ್ಯವೇ ಇರಲಿಲ್ಲ. ಅರಬ್ಬಿ ಅಥವಾ ಪರ್ಶಿಯನ್ ಭಾಷೆಗಳಲ್ಲಿ ಇವೆ. ಶಾಸನಗಳ ಕೆಳ ಭಾಗದಲ್ಲಿ ಸ್ಥಳೀಯರಿಗೆ ಗೊತ್ತಾಗಲೆಂದು ನಾಗರಿ ಲಿಪಿಯನ್ನು ಬಳಸಲಾಗುತ್ತಿತ್ತು. ಆದರೆ ಭಾಷೆ ದಖಣಿ ಉರ್ದು ಅಥವಾ ಮರಾಠಿ ಮಿಶ್ರ ಪರ್ಶಿಯನ್ ! ಕನ್ನಡದ ಹೆಸರೇ ಇಲ್ಲ. ರಾಜ್ಯದ ಆಡಳಿತದಲ್ಲು ಕನ್ನಡಿಗರಿಗೆ ಸ್ಥಳವಿಲ್ಲ. ಸ್ಥಳೀಯ ಜನರಾದ ಕನ್ನಡಿಗರ ಬದಲು ಉತ್ತರದಿಂದ ಬಂದ ಮರಾಠಿಗರು ಇಲ್ಲವೆ ರಜಪೂತರಿಗೆ ಪ್ರೋತ್ಸಾಹ ಇರುತ್ತಿತ್ತು. ಹೀಗಾಗಿ ಕನ್ನಡಿಗರಿಗೆ ಇಲ್ಲಿ ಅಸ್ತಿತ್ವವೇ ಉಳಿಯಲಿಲ್ಲ. ಈ ಹಂತದಲ್ಲಿ ಕಾಗದದ ಬಳಕೆ ಬಂದಿತು. ಬಿಜಾಪುರದ ಆದಿಲಶಾಹಿ ಸುಲ್ತಾನರಿಂದ ಹೊರಟ ಫರ್ಮಾನುಗಳು, ಸನದುಗಳು ಸುಂದರವಾದ ಪರ್ಶಿಯನ್ ಭಾಷೆಯಲ್ಲಿ ಕಿಲ್ಲೇದಾರನಿಂದ ಅಮಲ್ದಾರನಿಗೆ, ಜಮೀನದಾರನಿಗೆ ಬರೆದವುಗಳಲ್ಲಿ ಮೇಲಿನ ಅರ್ಧ ಭಾಗ ಫಾರಶಿಯಲ್ಲಿ ಕೆಳಗಿನ ಅರ್ಧ ಭಾಗ ಮೋಡಿ ಲಿಪಿಯಲ್ಲಿ ! ಭಾಷೆ ಮಾತ್ರ ಫಾರಸೀ ಅಥವಾ ಮುಕ್ಕಾಲು ಪಾಲು ಫಾರಸಿ ಶಬ್ದ ಮಿಶ್ರಿತ ಮರಾಠಿ.

ಕನ್ನಡಿಗರ ರಾಜ್ಯವು ಹೋದೊಡನೆ ರಾಜಕೀಯ ಸಂಸ್ಥೆಗೆ ಸಂಬಂಧಪಟ್ಟ ಪಾರಿಭಾಷಿಕ ಕನ್ನಡ ಶಬ್ದಗಳನ್ನು ಜನರು ಮರೆತು ಬಿಟ್ಟರು. ಆನಂತರ ಪೇಶ್ವೆ ರಾಜ್ಯವು ಉದಯವಾದಾಗ ಮರಾಠಿಯೇ ಸಾರ್ವತ್ರಿಕವಾಗಿ ರಾಜಭಾಷೆಯಾಯಿತು. ಕನ್ನಡವು ಬರೀ ಮಾತನಾಡುವ ಭಾಷೆಯಾಗಿ ಸಂತೆ, ಪೇಟೆ, ಹಳ್ಳಿ, ಮನೆಮಾರುಗಳಲ್ಲಿ ಮಾತ್ರ ಉಳಿಯಿತು. ಪಾಲಕರ ಅಕ್ಷರಾಭ್ಯಾಸವೂ ಕೂಡ ಮೋಡಿಯಲ್ಲಿ ಮೊದಲಾಯಿತು. ಇದರಿಂದ ಜನರಿಗೆ ಕನ್ನಡ ಅಕ್ಷರಾಭ್ಯಾಸವೂ ಇಲ್ಲದಂತಾಯಿತು.

ಅದರಿಂದಾಗಿ ಇಲ್ಲಿಯ ಕನ್ನಡ ಜನರ ಸಂಸ್ಕೃತಿ ಆಚಾರ ವಿಚಾರಗಳಲ್ಲೂ ಹೇಗೆ ಬದಲಾವಣೆ ಆಯಿತು ಎಂಬುದನ್ನು ಕಳೆದ ಶತಮಾನದ ಮೊದಲಾರ್ಧದಲ್ಲಿದ್ದ ಹಿರಿಯ ವಿದ್ವಾಂಸರಾದ ಕಲಬುರ್ಗಿ ಭಾಗದವರೇ ಆದ ದಿವಂಗತ ಕಪಟರಾಳ ಕೃಷ್ಣರಾಯರು ಕ್ರಿ.ಶ ೧೯೨೦ರಲ್ಲಿ ತಮ್ಮ ಒಂದು ಬರಹದಲ್ಲಿ ಅತ್ಯಂತ ರೋಚಕವಾಗಿ ಬಣ್ಣಿಸಿದ್ದಾರೆ.

''ದೇವರ ಮಾರ್ಗವನ್ನು ತೋರಿಸುವ ಗುರುವು ಸ್ವತಃ ತಾನೇ ದೇವರಾಗಿ ಜನರ ಮನಸ್ಸಿನಲ್ಲಿ ಅಧಿಷ್ಠಿತನಾದನು. ಮುಸಲ್ಮಾನ ಫಕೀರರು ಗುರುಗಳಾದರು. ವೇದವು ಕುರಾನವು ಒಂದೇ ಆಯಿತು. ಈ ಫಕೀರರ ಗೋರಿಗಳೆ ದೇವಸ್ಥಾನಗಳಾದವು. ಸಾಮಾಜಿಕ ಮಾರ್ಗದರ್ಶಿಗಳಾದ ಮೇಲ್ತರಗತಿ ಜನರ ಸ್ಥಿತಿಯು ಈ ರೀತಿಯಾಗಿ ಮಾನಸಿಕ ಬದಲಾವಣೆಯಾಗಿದ್ದರೆ, ಸಮಾಜದ ಸಾಮಾನ್ಯ ಜನರು ಲಾಡಿ ಕಟ್ಟಿಕೊಂಡು, ದೀನ ದೀನ ಎತ್ತುತ್ತ ಗೋರಿಗಳಿಗೂ ಪೀರಗಳಿಗೂ ನೈವೇದ್ಯವನ್ನು ಕೊಡುವುದು ರೂಢವಾದದ್ದೇನು ಆಶ್ಚರ್ಯದ ಮಾತಲ್ಲ. ಜಾತಿ ಸಂಸ್ಥೆಯಂಥ ಭದ್ರವಾದ ಕೋಟೆಯು ಸಮಾಜವನ್ನು ಸಂರಕ್ಷಿಸದಿದ್ದರೆ ಇಂದು ಕನ್ನಡಿಗರು ಏನಾಗಿ ಉಳಿಯುತ್ತಿದ್ದರೋ ಏನೊ ಎಂಬುದನ್ನು ಊಹಿಸುವುದೂ ಕಷ್ಟ''ಇದು ಅಂದಿನ ಕನ್ನಡಿಗರ ಸ್ಥಿತಿಯಾಗಿತ್ತು.

ಒಂದು ಕಾಲದಲ್ಲಿ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಕನ್ನಡ ಬರೀ ಮಾತನಾಡುವ ಭಾಷೆಯಾಗಿತ್ತು. ಸಂತೆಪೇಟೆ ಹಳ್ಳಿಗಳ ಮನೆ ಮಾರುಗಳಲ್ಲಿ ಕನ್ನಡದ ಸೊಲ್ಲು ಕೇಳಬಹುದಿತ್ತಾದರೂ ಅದರಲ್ಲೂ ಮರಾಠಿ - ಉರ್ದು ಮಿಶ್ರಿತ ಶಬ್ದಗಳು ಹೇರಳವಾಗಿರುತ್ತಿದ್ದವು. ಸಮಾಜದ ಮೇಲ್ತರಗತಿಯವರಾದ ದೇಶಮುಖ, ದೇಶಪಾಂಡೆ, ಗೌಡ, ಕುಲಕರ್ಣಿಗಳು, ವ್ಯಾಪಾರಿಗಳು ವ್ಯಾವಹಾರಿಕ ದೃಷ್ಟಿಯಿಂದ ಮರಾಠಿಯನ್ನು ಕಲಿತುಕೊಳ್ಳುತ್ತಿದ್ದರು. ಕನ್ನಡದ ಅವಶ್ಯಕತೆಯೇ ಇವರಿಗೆ ಬೀಳುತ್ತಿದ್ದಿಲ್ಲ. ಪೇಶ್ವೆಗಳ ಕಾಲದಿಂದ ಇತ್ತೀಚಿನವರೆಗೆ ಬ್ರಾಹ್ಮಣರು ಮನಸೋತವರಾಗಿ ಕನ್ನಡವೆಂದರೆ ಲಿಂಗಾಯಿತರ ಭಾಷೆಯೆಂದು ತಿಳಿದರು. ಕನ್ನಡವೆಂದರೆ 'ವಾಣಿ ಭಾಷಾ' ಎಂಬುದಾಗಿ ಅರ್ಧಂಬರ್ಧ ಮರಾಠಿಗರೇ ಆದ ಕನ್ನಡ ಬ್ರಾಹ್ಮಣರು ಕರೆಯುತ್ತಿದ್ದರು. ವಾಣಿ ಭಾಷೆ ಎಂದರೆ ಬಣಜಿಗರ ಭಾಷೆ. ಅಂತೆಯೇ, ಕನ್ನಡವನ್ನು ಕಲಿಯಲು ಬಯಸಿದರೆ 'ಕನ್ನಡೇನು ಕಲೀತಿ ? ಎನ್ನುತ್ತಿದ್ದರು.

ವೈದಿಕ ಅಭ್ಯಾಸ ಮಾಡುವ ಬ್ರಾಹ್ಮಣರಿಗೆ ಕನ್ನಡವೆಂದರೆ ಒಂದು ರೀತಿಯ ತಿರಸ್ಕಾರ. ಕೃಷ್ಣೆಯ ಉತ್ತರ ಭಾಗದಲ್ಲೆಲ್ಲ ಇದೇ ಸ್ಥಿತಿ ಇತ್ತು. ರಾಯಚೂರು ಕೊಪ್ಪಳ ಜಿಲ್ಲೆಗಳಲ್ಲಿ ಮೊದಲಿನಿಂದಲೂ ಕನ್ನಡಕ್ಕೆ ಕಲಬರ್ಗಿ, ಬೀದರಗಳಲ್ಲಿಯಷ್ಟು ದೈನ್ಯಾವಸ್ಥೆ ಇರಲಿಲ್ಲ. ಅದಕ್ಕೆ ಕಾರಣ, ಈ ಪ್ರದೇಶಗಳು ಬಹುತೇಕ ವಿಜಯನಗರ ರಾಜ್ಯದಲ್ಲಿ ಇದ್ದುದು. ಅನಂತರ ಹರಿದಾಸರ ಸಾಹಿತ್ಯ ಮತ್ತು ಕೀರ್ತನೆಗಳಿಂದ. ಆದರೂ ಅಲ್ಲಿ ಕೂಡ ಸರಕಾರೀ ವ್ಯವಹಾರದಲ್ಲಿ ಮರಾಠಿಯೇ ಸೇರಿತ್ತು. ಮಠಗಳಲ್ಲಿಯ ಜಂಗಮರು ಪುರಾಣ ಹೇಳುವ ಅಯ್ಯನವರು ಮಾತ್ರ ಅಲ್ಲೊಬ್ಬ ಇಲ್ಲೊಬ್ಬ ಕನ್ನಡ ಅರಿತವರು ಇರುತ್ತಿದ್ದರು. ಅವರಿಗೆ ಅದು ಉಪಜೀವನದ ಸಾಧನವಾಗಿದ್ದರಿಂದ ಪುರಾಣ ಹೇಳುವಷ್ಟರ ಮಟ್ಟಿಗೆ ಕನ್ನಡವನ್ನು ಕಲಿತು ಕೊಳ್ಳುತ್ತಿದ್ದರು. ಆದರೆ ಇಂಥವರಿಗೆ ಮನ್ನಣೆ ಇರಲಿಲ್ಲ. ಪಾಮರರು ಮಾತ್ರ ಪುರಾಣಕ್ಕಾಗಿ ಧಾರ್ಮಿಕ ಭಾವನೆಯಿಂದ ಇವರನ್ನು ಮನ್ನಿಸುತ್ತಿದ್ದರು.

ಈ ಹಂತದಲ್ಲಿ ಕಾಗದದ ಬಳಕೆ ಬಂದಿತು. ಬಿಜಾಪುರದ ಆದಿಲಶಾಹಿ ಸುಲ್ತಾನರಿಂದ ಹೊರಟ ಫರ್ಮಾನುಗಳು ಸನದುಗಳು ಸುಂದವಾದ ಪರ್ಸಿಯನ್ ಭಾಷೆಯಲ್ಲಿ ಕಿಲ್ಲೇದಾರಿನಿಂದ ಆಮಲ್ದಾರನಿಗೆ, ಜಮೀನುದಾರನಿಗೆ ಬರೆದವುಗಳಲ್ಲಿ ಮೇಲಿನ ಅರ್ಧಭಾಗ ಫಾರಸಿಯಲ್ಲಿ ಕೆಳಗಿನ ಅರ್ಧಭಾಗ ಮೋಡಿ ಲಿಪಿಯಲ್ಲಿ ! ಭಾಷೆ ಮಾತ್ರ ಫಾರಸೀ ಅಥವಾ ಮುಕ್ಕಾಲು ಪಾಲುಫಾರಸೀ ಮಿಶ್ರೀತ ಮರಾಠಿ. ಸರ್ ಸಾಲಾರಜಂಗನ ಕಾಲದಲ್ಲಿ ಈ ಪ್ರದೇಶದಲ್ಲಿ ಹೊಸ ಮನ್ವಂತರ ಪ್ರಾರಂಭವಾಯಿತು. ಜಿಲ್ಲೆಗಳು ನಿರ್ಮಾಣವಾದವು. ಕಿಂಚಿತ್ ಕನ್ನಡದ ಸಂಸ್ಕೃತಿ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದ ಸುರಪುರ ಸಂಸ್ಥಾನ ಕ್ರಿ.ಶ. ೧೮೫೮ರಲ್ಲಿ ಇಂಗ್ಲಿಷರ ವಿರುದ್ಧ ಬಂಡೆದ್ದು ನಾಮಶೇಷವಾಯಿತು. ಅವರು ಅದನ್ನು ಹೈದರಾಬಾದ ನಿಜಾಮನ ವಶಕ್ಕೆ ಕೊಟ್ಟರು. ಕಲಬುರ್ಗಿ ಸುಭೆಯಲ್ಲಿ ಸುರಪುರ ಒಂದು ಜಿಲ್ಲಾ ಸ್ಥಳವಾಯಿತು. ಅನಂತರ ಕೆಲ ದಿನಗಳಲ್ಲಿ ಅದು ಲಿಂಗಸುಗೂರು ಜಿಲ್ಲೆಯಲ್ಲಿ ಸೇರ್ಪಡೆ ಆಯಿತು. ಆ ದಿನಗಳಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಪ್ರದೇಶ, ಕಲಬುರ್ಗಿ, ರಾಯಚೂರು, ಲಿಂಗಸುಗೂರು ಮತ್ತು ನಳದುರ್ಗ ಹೀಗೆ ನಾಲ್ಕು ಜಿಲ್ಲೆಗಳನ್ನು ಒಳಗೊಂಡಿತ್ತು. ಬೀದರಿನ ಕೊನೆಯ ಭಾಗವನ್ನು ನಳದುರ್ಗ ಜಿಲ್ಲೆಯಲ್ಲಿ ಸೇರಿಸಲಾಗಿತ್ತು. ದರಬಾರೀ ಭಾಷೆ ಫಾರಸಿಯ ಬದಲಾಗಿ ಉರ್ದು ಭಾಷೆಯು ಕಚೇರಿಗಳಲ್ಲಿ ಪ್ರವೇಶ ಪಡೆಯಿತು. ಜಿಲ್ಲಾ ಕಚೇರಿಗಳಲ್ಲಿ ಉರ್ದುವನ್ನು ರೂಢಿಸಲಾಯಿತು. ಇನ್ನು ತಹಸೀಲ್ದಾರರ ಕಚೇರಿಗಳಲ್ಲೂ ಉರ್ದುವನ್ನು ರೂಢಿಸಬೇಕು.... ತಹಸೀಲು ಕಚೇರಿಗಳಲ್ಲಿ ಕಾರಕೂನರನ್ನು ನೇಮಿಸುವಾಗ ಉರ್ದು ಮತ್ತು ದೇಶೀ ಭಾಷೆ ಹೀಗೆ ಉಭಯ ಭಾಷೆ ಬಲ್ಲವರನ್ನು ನೇಮಿಸಬೇಕೆಂದು ಆದೇಶವಾಯಿತು. ರಾಯಚೂರು ಲಿಂಗಸುಗೂರು ಜಿಲ್ಲೆಗಳಿಗೆ ಒಳಪಟ್ಟ ತಾಲ್ಲೂಕುಗಳಲ್ಲಿ ಗ್ರಾಮಸ್ಥರ ಎಲ್ಲ ಲೆಕ್ಕ ಪತ್ರಗಳೂ ಮರಾಠಿಯಲ್ಲೇ ಇಡಲಾಗುತ್ತಿತ್ತು. ಕೆಲವು ಕಡೆಗೆ ತಹಸೀಲ್ದಾರ ಮತ್ತು

ಗ್ರಾಮಸ್ಥರ ನಡುವೆ ಪತ್ರ ವ್ಯವಹಾರ ಕನ್ನಡದಲ್ಲಿ ನಡೆಯುತ್ತಿತ್ತಾದರೂ ತಹಸೀಲಿನ ಭಾಷೆ ಮಾತ್ರ ಮರಾಠಿಯೇ ಆಗಿತ್ತು. ಸುರಪುರ ಶಾಹಪುರ ತಾಲೂಕುಗಳು ಲಿಂಗಸುಗೂರು ಜಿಲ್ಲೆಗೆ ಸಂಬಂಧಿಸಿದ್ದುವು. ಯಾದಗಿರಿಯು ರಾಯಚೂರು ಜಿಲ್ಲೆಯಲ್ಲಿತ್ತು. ಈ ಮೂರು ತಾಲೂಕುಗಳಲ್ಲಿ ಗ್ರಾಮಸ್ಥರ ಲೆಕ್ಕಪತ್ರಗಳು ಮರಾಠಿಯಲ್ಲೇ ನಡೆಯುತ್ತಿದ್ದವು. ಇಂಥ ಸ್ಥಿತಿಯಲ್ಲಿ ಮೂರು ಭಾಷೆ ಬಲ್ಲವರನ್ನು ನೇಮಿಸುವ ಪ್ರಸಂಗ ಬಂದಿತು. ಹೀಗಿರುವಾಗ ದೇಶಭಾಷೆಯಾದ ಕನ್ನಡವನ್ನು ತಹಸೀಲಿನಲ್ಲಿ ನಡೆಸಬೇಕು ಅಥವಾ ತಹಸೀಲಿನ ಭಾಷೆಯನ್ನು ಉರ್ದುವನ್ನಾಗಿ ಮಾಡಿ ಗ್ರಾಮಸ್ಥರೊಡನೆ ಪತ್ರ ವ್ಯವಹಾರವನ್ನು ಕನ್ನಡದಲ್ಲಿ ಮಾಡುವುದು ಉಚಿತವೆಂದು ನಿರ್ಧರಿಸಲಾಯಿತು. ಅದರಂತೆ ಮಾಲಗುಜಾರಿಯಿಂದ ಕಲಬುರ್ಗಿಯ ಸುಬೇದಾರನಿಗೆ ಸೂಚಿಸಲಾಯಿತು. ಆದೇಶವನ್ನು ಜಾರಿಗೊಳಿಸುವ ಮೊದಲು ಸುಬೇದಾರನು ಪ್ರತಿಯೊಂದು ತಾಲೂಕುಗಳಿಂದ ವಿವರಣೆಯನ್ನು ಬಯಸಿದನು. ಯಾವ ಯಾವ ತಾಲೂಕುಗಳಲ್ಲಿ ಕನ್ನಡ, ಇನ್ನು ಯಾವ ತಾಲೂಕುಗಳಲ್ಲಿ ಮರಾಠಿ ಬಳಕೆಯಲ್ಲಿದೆ ಕನ್ನಡ ದ ಪ್ರದೇಶಗಳಲ್ಲಿ ಬಳಕೆಯಿಯಲ್ಲಿರುವ ಮರಾಠಿ ಭಾಷೆಯ ಬದಲು ಕನ್ನಡವನ್ನು ಯಾಕೆ ಬಳಸಬಾರದು ? ಎಂದು ಕಲಬುರ್ಗಿ , ರಾಯಚೂರು, ಲಿಂಗಸಗೂರು ಜಿಲ್ಲೆಗಳ .... ತಾಲೂಕುದಾರರಿಗೆ ಕೇಳಿದನು. ಆತನು ತನ್ನ ಜಿಲ್ಲೆ ಮತ್ತು ಎಲ್ಲ ತಾಲೂಕುದಾರರಿಂದ ಅಭಿಪ್ರಾಯಗಳನ್ನು ಪಡೆದನು. ಅವರಿಂದ ಬಂದ ಉತ್ತರಗಳು ತುಂಬಾ ರೋಚಕ ವಾಗಿವೆ.

ಹೈದರಾಬಾದಿನ ನಿಜಾಮ ಸಂಸ್ಥಾನದಲ್ಲಿಯ ಕಲಬುರ್ಗಿಯ ಜಿಲ್ಲೆಯಲ್ಲಿ ಏಳು ತಾಲೂಕುಗಳಿದ್ದವು. ಅವುಗಳಲ್ಲಿ ಕೋಡಂಗಲ್ಲು, ಗುರಮಿಟಕಲ್ಲು ತಾಲೂಕುಗಳಲ್ಲಿ ತೆಲಗು ಭಾಷೆಯನ್ನು ಬಳಸಲಾಗುತ್ತಿತ್ತು. ಕಲಬುರ್ಗಿ, ಮಹಾಗಾವ, ಚಿಂಚೋಳಿ, ಅಂದೇಲಿ ಮತ್ತು ಸೇಡಮ್ ತಾಲೂಕುಗಳಲ್ಲಿ ಗ್ರಾಮ ಮಟ್ಟದಿಂದ ಮರಾಠಿಯನ್ನು ಬಳಸಲಾಗುತ್ತಿತ್ತು. ಅದನ್ನು ಅನುಸರಿಸಿ ಕಲಬುರ್ಗಿ ಜಿಲ್ಲೆಯ ಅವ್ವಲ ಕಾರಕೂನನು ಕೊಟ್ಟ ವರದಿ ಹೀಗಿದೆ.

'ಗೌಡ ಕುಲಕರ್ಣಿಯವರು ಮರಾಠಿ ಓದು ಬರಹವನ್ನು ಬಲ್ಲವರು. ಒಬ್ಬರಿಗಾದರೂ ಕನ್ನಡ ಬರುವುದಿಲ್ಲ. ತಾಲೂಕುಗಳಲ್ಲಿಯ ಮಾತನಾಡುವ ಭಾಷೆಯನ್ನೇ ತಹಸೀಲು ಮತ್ತು ಗ್ರಾಮಗಳಲ್ಲಿ ರೂಢಿಗೊಳಿಸುವುದಾದರೆ, ಕೋಡಂಗಲ್ಲು ಗುರಮಿಟಕಲ್ಲಿನಲ್ಲಿ ತೆಲಗು, ಉಳಿದ ತಾಲೂಕುಗಳಲ್ಲಿ ಕನ್ನಡವಾಗ ಬೇಕಾಗುವುದು. ಆದರೆ ಮರಾಠಿಯೆ ಬರಹದ ಭಾಷೆಯಾಗಿರುವುದರಿಂದ ಕನ್ನಡವನ್ನು ರೂಢಿಗೊಳಿಸುವುದು ಸದ್ಯಕ್ಕೆ ಸಾಧ್ಯವೂ ಹಿತವೂ ಅಲ್ಲ. ಸರಕಾರದ ಕೆಲಸವೂ ಸಾಗಲಾರದು. ಜನರು ಕನ್ನಡ ಮಾತನಾಡುತ್ತಿದ್ದರೂ ಮರಾಠಿಯನ್ನು ಬರೆಯುವುದು ಪುರಾತನಕಾಲದಿಂದಲೂ ನಡೆದು ಬಂದಿದೆ. ಆದುದರಿಂದ ತಹಸೀಲು ಮತ್ತು ಹಳ್ಳಿಗಳಲ್ಲಿ ಈಗಿದ್ದಂತೆ ಮರಾಠಿಯನ್ನಿರಗೊಡುವುದೇ ಒಳಿತಾಗಿದೆ.

ರಾಯಚೂರು ಜಿಲ್ಲೆಯಲ್ಲಿ ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಕೆಲಸ ನಡೆಯುತ್ತಿತ್ತು. ೧೯ನೆಯ ಶತಮಾನದ ಮೊದಲ ಭಾಗದಲ್ಲಿ ಆಗಿನ ಅವ್ವಲ ತಾಲೂಕುದಾರನು ಮಾನವಿ, ದೇವದುರ್ಗ, ಯಾದಗಿರಿ, ರಾಯಚೂರು ತಾಲೂಕುಗಳಲ್ಲಿ ಸಂಪೂರ್ಣವಾಗಿ ಕನ್ನಡ ತಾಲ್ಲೂಕುಗಳಾಗಿದ್ದರಿಂದ ಕನ್ನಡದಲ್ಲಿಯೇ ಸರಕಾರೀ ಕೆಲಸ ಸಾಗಬೇಕೆಂದೂ, ಆಲಂಪೂರು ತಾಲೂಕು ತೆಲಗು ಇರುವುದರಿಂದ ಅಲ್ಲಿ ತೆಲಗು ನಡೆಯಬೇಕೆಂದು ಅಪ್ಪಣೆ ಕೊಟ್ಟನು. ಆದರೆ ಯಾದಗಿರಿ ತಾಲೂಕಿನಲ್ಲಿ (ಅದು ಮೊದಲು ರಾಯಚೂರು ಜಿಲ್ಲೆಯಲ್ಲಿತ್ತು) ಕನ್ನಡ ಪ್ರದೇಶವಾಗಿದ್ದರೂ ಪೂರ್ವದಿಂದಲೂ ಮರಾಠಿಯೇ ನಡೆದು ಬಂದಿದೆ. ಮತ್ತು ಗೌಡ ಕುಲಕರ್ಣಿಯವರಿಗೆ ಮರಾಠಿ ಮೈಯುಂಡಂತಾಗಿದೆ. ಆದುದರಿಂದ ಈಗಿನ ಸ್ಥಿತಿಯಲ್ಲಿ ಬದಲಾವಣೆ ಮಾಡುವ ಅವಶ್ಯಕತೆ ಇಲ್ಲ ' ಎಂದು ವರದಿಯಾಯಿತು.

'ಲಿಂಗಸುಗೂರು ಜಿಲ್ಲೆಯಲ್ಲಿಯ ಗಂಗಾವತಿ, ಕುಷ್ಟಗಿ, ಲಿಂಗಸುಗೂರು, ಸಿಂಧನೂರು ಈ ನಾಲ್ಕು ತಾಲೂಕುಗಳಲ್ಲಿ ಸಾಮಾನ್ಯವಾಗಿ ಪೂರ್ವ ಕಾಲದಿಂದಲೂ ತಹಸೀಲು ಮತ್ತು ಗ್ರಾಮಸ್ಥರ ನಡುವೆ ದೇಶ ಭಾಷೆಯಾದ ಕನ್ನಡದಲ್ಲಿ ಪತ್ರ ವ್ಯವಹಾರ ನಡೆದಿತ್ತು. ತಮ್ಮ ಲೆಕ್ಕ ಪತ್ರಗಳನ್ನು ಕನ್ನಡದಲ್ಲಿ ಇಡುತ್ತಿದ್ದರು. ಆದರೆ ಸುರಪುರ ಮತ್ತು ಶಾಹಪೂರ ತಾಲೂಕುಗಳ ಗ್ರಾಮಸ್ಥರು ತಮ್ಮ ಲೆಕ್ಕಪತ್ರಗಳನ್ನು ಮರಾಠಿಯಲ್ಲೇ ಪೂರ್ವದಿಂದ ಇಡುತ್ತ ಬಂದಿರುವರು. ಈಗ ಎರಡು ತಾಲೂಕುಗಳಲ್ಲಿಯ ಜನರು ಕನ್ನಡ ಮಾತನಾಡುತ್ತಿದ್ದರೂ ಮರಾಠಿಯನ್ನು ಬಲ್ಲವರಾಗಿರುವರು.

ಹೀಗೆ ಕನ್ನಡವೇ ಆಗಿದ್ದ ಮೂರು ಜಿಲ್ಲೆಗಳ ಬಗ್ಗೆ ವರದಿಯನ್ನು ಮೇಲಧಿಕಾರಿಗಳಿಗೆ ಕಳುಹಿಸಲಾಯಿತು. ಬೀದರದ ಬಗ್ಗೆ ಯೋಚಿಸುವ ಪ್ರಶ್ನೆಯೇ ಇರಲಿಲ್ಲ. ಯಾಕೆಂದರೆ ನಲದುರ್ಗ ಜಿಲ್ಲೆಯಲ್ಲಿ ಸಮಾವೇಶ ಗೊಂಡಿದ್ದ ಈ ಪ್ರದೇಶ ಮರಾಠಿಯದೆಂದು ನಿರ್ಧರಿಸಿದ್ದರು.

ಮೂರು ವರದಿಗಳನ್ನು ಅವಲೋಕನ ಮಾಡಿ ಅಂದಿನ ಸುಬೇದಾರನಾಗಿದ್ದ 'ಇಮಾದಜಂಗ ಬಹಾದ್ದೂರ' ಪ್ರತಿಯೊಂದು ವರದಿಯ ಮೇಲೆ ತನ್ನ ಟಿಪ್ಪಣಿಯನ್ನು ಮಾಡಿ, ತನ್ನ ಮೇಲಧಿಕಾರಿಯಾದ ಮಾಲಗುಜಾರಿಗೆ ಕಳುಹಿಸಿದನು. ಆತನ ಟಿಪ್ಪಣಿಯ ಸಾರಾಂಶ ಇಂತಿದೆ.

* ಕಲಬುರ್ಗಿ ಜಿಲ್ಲೆ - ಕೋಡಂಗಲ್ಲ, ಗುರುಮಿಟ್‌ಕಲ್ಲಗಳಲ್ಲಿ ತೆಲುಗು ನಡೆದಿರುವುದು ಸರಿಯಾಗಿದೆ. ಉಳಿದ ತಾಲೂಕುಗಳಲ್ಲಿಯ ಜನರು ಕನ್ನಡ ಮಾತನಾಡುತ್ತಿದ್ದರಿಂದ ಗ್ರಾಮಸ್ಥರ ಮತ್ತು ತಹಸೀಲದಾರನ ದಫ್ತರುಗಳು ಕನ್ನಡದಲ್ಲಿಯೇ ಇಡಬೇಕು. ಗೌಡ, ಕುಲಕರ್ಣಿಯವರಿಗೆ ಕನ್ನಡ ಓದು - ಬರಹ ಬಾರದಿದ್ದರೆ ಅವರಿಗಾಗಿ ನಿಯಮಿತವಾದ ಅವಧಿಯನ್ನು ಕೊಡಬೇಕು. ನನ್ನ ಅಭಿಪ್ರಾಯದಲ್ಲಿ ಒಂದು ವರ್ಷದ ಅವಧಿ ಸಾಕಾಗುವುದು. ಒಂದು ವರ್ಷದೊಳಗೆ ಅವರು ಕಲಿಯಬೇಕು.

* ರಾಯಚೂರು ಜಿಲ್ಲೆ ಅಲಂಪೂರು ಮತ್ತು ಯಾದಗಿರಿಯನ್ನುಳಿದು ನಾಲ್ಕು ತಾಲೂಕುಗಳಲ್ಲಿ ಕನ್ನಡವನ್ನು ರೂಢಿಗೊಳಿಸುವುದು ಒಳ್ಳೆಯದಾಗಿದೆ. ಅಲಂಪೂರಿನಲ್ಲಿ ತೆಲಗು ಇದ್ದುದು ಸರಿಯೇ ಆದರೆ ಯಾದಗಿರಿಯಲ್ಲಿ 'ಕನ್ನಡ ಮಾತನಾಡುತ್ತಿರುವಾಗ ಕನ್ನಡದಲ್ಲಿ ದಫ್ತರ ಇಡದಿರಲು ಏನೂ ಕಾರಣವಿಲ್ಲ. ಪೂರ್ವಕಾಲದಿಂದ ಮರಾಠಿಯಲ್ಲಿ ದಫ್ತರ ಇಟ್ಟಿರುವುದು, ಗೌಡ ಕುಲಕರ್ಣಿಯವರಿಗೆ ಅದು ಮೈಯುಂಡಿರುವುದು ಸರಿಯಾದ ಕಾರಣವಲ್ಲ.

* ಲಿಂಗಸುಗೂರು ಜಿಲ್ಲೆ - ಸುರಪುರ ಶಾಹಪುರ ತಾಲೂಕುಗಳನ್ನುಳಿದು ಇತರ ತಾಲೂಕುಗಳಲ್ಲಿ ಕನ್ನಡ ನಡೆದಿರುವುದು ಒಳ್ಳೆಯದಾಗಿದೆ. ಸುರಪುರ ಮತ್ತು ಶಾಹಪುರ ಗಳಲ್ಲಿಯು ಕನ್ನಡದಲ್ಲಿ ದಫ್ತರಗಳನ್ನು ಇಡುವುದು, ಗೌಡ ಕುಲಕರ್ಣಿಯವರಿಗೆ ಕನ್ನಡವನ್ನು ಕಲಿಯಲು ಅವರಿಗೆ ಒಂದು ವರ್ಷದ ಅವಧಿಯನ್ನು ಕೊಡಬೇಕು ಎಂಬುದಾಗಿ ಮೂರು ಜಿಲ್ಲೆಗಳ ಅವ್ವಲ ತಾಲೂಕುದಾರರ ವರದಿಗಳ ಮೇಲೆ ಇಮಾದಜಂಗ ಸುಬೇದಾರನು ತನ್ನ ಟಿಪ್ಪಣಿಗಳನ್ನು ಬರೆದು ಸರಕಾರಕ್ಕೆ ಕಳುಹಿಸಿದನು. ಸರಕಾರ ಆತನ ಸಲಹೆಗಳನ್ನು ಒಪ್ಪಿತು ಕೂಡ. ಆದರೆ ಸರಕಾರದಲ್ಲಿ ತೊಂದರೆಯುಂಟಾಗ ದಂತೆ ನೋಡಿಕೊಳ್ಳಲು ಕನ್ನಡ ಕಲಿಯಲು ಒಂದು ವರ್ಷದ ಅವಧಿಯು ಕಠಿಣವೆನಿಸುತ್ತಿದ್ದ ಪಕ್ಷದಲ್ಲಿ, ತಾಲೂಕುದಾರನ ಅಭಿಪ್ರಾಯಗಳನ್ನು ಅನುಲಕ್ಷಿಸಿ ಮೆಲ್ಲಮೆಲ್ಲನೆ ಕನ್ನಡವನ್ನು ಸರಕಾರಿ ದಫ್ತರಗಳಲ್ಲಿ ರೂಢಿಗೊಳಿಸಬೇಕೆಂದು ಸಲಹೆ ಕೊಟ್ಟರು. ಅದರಂತೆ ಮೂರು ವರ್ಷಗಳ ಅವಧಿಯಲ್ಲಿ ಸುರಪುರ, ಶಾಹಪುರ, ಯಾದಗಿರಿ, ಕಲುಬುರ್ಗಿ, ಮಹಗಾವಿ, ಚಿಂಚೊಳ್ಳಿ ಮತ್ತು ಸೇಡಂ ತಾಲೂಕುಗಳ ಗೌಡ ಕುಲಕರ್ಣಿಯವರು ಕನ್ನಡವನ್ನು ಕಲಿಯಬೇಕೆಂದು ಅಪ್ಪಣೆಯನ್ನೂ ಕೊಡಲಾಯಿತು. ಅವರುಗಳು ಕಲಿಯುತ್ತಿರುವುದರ ಬಗ್ಗೆ ಕಾಲಕಾಲಕ್ಕೆ ಪ್ರಗತಿ ವರದಿಯನ್ನು ಕಳುಹಿಸಬೇಕು. ಮೂರು ವರ್ಷಗಳ ನಂತರ ಅಂತಿಮ ವರದಿಯನ್ನು ಕಳುಹಿಸಬೇಕೆಂದೂ ಆದೇಶವಾಗಿತ್ತು. ಆದರೆ ಆ ಮೂರು ವರುಷಗಳಲ್ಲಿ ಇಮಾದಜಂಗ ಬದಲಿಯಾದನು. ಅವನು ಹೋಗುವ ದಾರಿಯನ್ನೇ ನೋಡುತ್ತ ಕುಳಿತಿರುವಂತೆ ಕನ್ನಡ ಕಲಿಯುವ ಯಾವ ಕೆಲಸವೂ ಆಗಲಿಲ್ಲ. ಈ ತಾಲೂಕುಗಳಲ್ಲಿ ಮರಾಠಿಯೇ ವ್ಯವಹಾರ ಭಾಷೆಯಾಗಿ ಉಳಿಯಿತು. ರಾಜಭಾಷೆಯಾಗಿ ಉರ್ದು ಆಗಲೇ ಆಡಳಿತದಲ್ಲಿ ಸೇರಿಕೊಂಡು ಬಿಟ್ಟಿತ್ತು. ಇನ್ನು ಕನ್ನಡಕ್ಕೆಲ್ಲಿಯ ಸ್ಥಳ ?

ಬ್ರಿಟಿಷ್ ರಾಜ್ಯಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಾರಂಭವಾದಂತೆ

ಹೈದರಾಬಾದಿನ ನಿಜಾಮ ಸಂಸ್ಥಾನದಲ್ಲೂ ಸರಕಾರದ ವತಿಯಿಂದ ಶಿಕ್ಷಣ ಇಲಾಖೆಯನ್ನು ಪ್ರಾರಂಭಿಸಲಾಯಿತು. ಕಲಬುರ್ಗಿ, ಸುರಪುರ, ರಾಯಚೂರು, ಲಿಂಗಸುಗೂರುಗಳಲ್ಲಿ ಸರಕಾರೀ ಶಾಲೆಗಳು ಶುರುವಾದವು. ಕಲಬುರ್ಗಿಯಲ್ಲಿ ಹೈಸ್ಕೂಲು ಆಯಿತು. ಈ ಶಾಲೆಗಳಲ್ಲಿ ಮೊದಲಿನಿಂದಲೇ ಉರ್ದು ಮತ್ತು ಇಂಗ್ಲಿಷ್ ಭಾಷೆಗಳಿಗೆ ಪ್ರಾಧಾನ್ಯ. ಪ್ರಾಥಮಿಕ ಶಾಲೆಗಳಲ್ಲಿ ಮೊದಲಿನ ಒಂದರೆಡು ವರ್ಷ ಮರಾಠಿ ಕಲಿಸಿದರು. ಆ ದಿನಗಳಲ್ಲಿ ಕಲಬುರ್ಗಿಯ ಹೈಸ್ಕೂಲಿನಲ್ಲಿ ಹೆಡ್ ಮಾಸ್ತರರಾಗಿದ್ದ ಶ್ರೀನಿವಾಸಚಾರ್ಯ ಎಂಬುವರು ಕನ್ನಡ ವಿದ್ಯಾರ್ಥಿಗಳಿಗೆ ಕನ್ನಡವನ್ನೇ ಮೊದಲು ಕಲಿಸಬೇಕು. ಮರಾಠಿಯ ಬದಲು ಕನ್ನಡವನ್ನು ಸರಕಾರಿ ದಫ್ತರುಗಳಲ್ಲಿ ಜಾರಿಯಾಗದ ವಿನಃ ಜನರು ಕನ್ನಡವನ್ನು ಕಲಿಯುವುದಿಲ್ಲವೆಂದು ತನ್ನ ಮೇಲಧಿಕಾರಿಗಳ ಮುಖಾಂತರ ಸರಕಾರಕ್ಕೆ ವರದಿಯನ್ನು ಕಳಿಸಿದನು. ಆದರೆ ಮೇಲಿನವರು ಅದಕ್ಕೆ ಲಕ್ಷ್ಯ ಕೊಡಲಿಲ್ಲ. ಆ ಪ್ರಯತ್ನವು ನಿಷ್ಫಲವಾಯಿತು. ಆದರೆ ಈ ಭಾಗದಲ್ಲಿ ಐದುನೂರು ವರುಷಗಳ ನಂತರ ಕನ್ನಡವನ್ನು ತರಬೇಕೆಂದು ಪ್ರಯತ್ನಿಸಿದ ಮೊದಲಿಗರಲ್ಲಿ ಇಮಾದಜಂಗ ಮತ್ತು ಶ್ರೀನಿವಾಸಚಾರ್ಯರ ಹೆಸರುಗಳು ಚರಿತ್ರೆಯಲ್ಲಿ ಉಳಿದುವು.

ಬ್ರಿಟಿಷರ ಪ್ರಭಾವಲಯದಲ್ಲಿ ನಡೆವ ಸಂಸ್ಥಾನಗಳ ಆಡಳಿತದಲ್ಲಿ ಬ್ರಿಟಿಷ್ ರಾಜ್ಯಗಳಿಂದಲೆ ಅಧಿಕಾರಿಗಳು ಬರುತ್ತಿದ್ದರು. ಹೈದರಾಬಾದಿಗೆ ಮುಂಬಯಿ ರಾಜ್ಯ ಸಮೀಪ. ಹೀಗಾಗಿ ಬರುವ ಅಧಿಕಾರಿಗಳೆಲ್ಲ ಮರಾಠಿಗರು. ಶಿಕ್ಷಣ ಇಲಾಖೆ ಪ್ರಾರಂಭವಾದಾಗ ಅಲ್ಲಲ್ಲಿಯ ಶಾಲೆಗಳಿಗೆ ಮುಂಬಯಿ ಇಲಾಖೆಯ ಮಹಾರಾಷ್ಟ್ರೀಯರೇ ಬಂದರು. ಈ ಮರಾಠಿಗರು ಸರಕಾರಿ ನೌಕರಿಗಳಲ್ಲಿ ಇದ್ದುದರಿಂದ ಸಮಾಜದಲ್ಲಿ ಗೌರವ ಸ್ಥಾನವಿರುತ್ತಿತ್ತು. ಆ ಮೊದಲೆ ಮರಾಠಿ ಸಂಸ್ಕಾರಕ್ಕೆ ಮಾರು ಹೋದ ಕನ್ನಡಿಗರಿಗೆ ಇವರನ್ನು ಕಂಡು ಅನುಸರಿಸುವುದರಿಂದ ಅವರಿಗೆ ತುಂಬ ಖುಷಿ. ಹೊಸದಾಗಿ ಕೋರ್ಟುಗಳು ಪ್ರಾರಂಭವಾದವು. ವಕೀಲ ಪರೀಕ್ಷೆ ಮರಾಠಿಯಲ್ಲಿ. ಆದ್ದರಿಂದ ಮರಾಠಿಗರು ವಕೀಲರಾಗುವುದು ಸಹಜವಾಗಿತ್ತು. ಪುಣೆಯ ಜ್ಞಾನ ಪ್ರಕಾಶ, ಕೇಸರಿ ಮುಂತಾದ ಪತ್ರಿಕೆಗಳು ಪ್ರಸಾರವಾಯಿತು. ಪುಣೆಯಲ್ಲಿನ ಚಟುವಟಿಕೆಗಳ ಪ್ರತಿಬಿಂಬಗಳು, ಕಲಬುರ್ಗಿ, ಬೀದರ, ಹೈದರಾಬಾದುಗಳಲ್ಲಿ ವಾಚನಾಲಯ, ಗ್ರಂಥಾಲಯ, ನಾಟಕ ಮುಂತಾದ ಎಲ್ಲ ಕಾರ್ಯಗಳಿಗೆ ಪುಣೆಯೇ ಆದರ್ಶವಾಗಿತ್ತು. ಕೆಲವು ದಿನಗಳ ನಂತರ ಕಲಬುರ್ಗಿಯಲ್ಲಿ 'ನೂತನ ವಿದ್ಯಾಲಯ' ಎಂಬ ಶಾಲೆಯನ್ನು ಪ್ರಾರಂಭಿಸಲಾಯಿತು. ಅದು ಕೂಡ ಮರಾಠಿಯಲ್ಲಿಯೆ ಈ ಸಂಸ್ಥೆಯ ಸ್ಥಾಪಕರೂ ಮರಾಠಿಗರೇ. ಅದು ಇಂದು ಪ್ರತಿಷ್ಠಿತ ಕನ್ನಡ ಮಹಾವಿದ್ಯಾಲಯವಾಗಿದೆ. ಆ ವಿಷಯ ಬೇರೆ. ಆದರೆ ಆಗಿನ ದಿನಗಳಲ್ಲಿ ಇಲ್ಲಿಯ ಕನ್ನಡಿಗರು ತಮ್ಮ ಆತ್ಮಗೌರವವನ್ನು ಮರಾಠಿಗರಿಗೆ ಧಾರೆ ಎರೆದಿದ್ದರು. ಮರಾಠಿಗರ ಪಡಿನೆರಳೇ ಇವರಾಗಿದ್ದರು.

ಕನ್ನಡಿಗರು ಸಭೆಗಳಲ್ಲಿ ಹರುಕು ಮುರುಕು ಮರಾಠಿಯನ್ನಾಗಲಿ ಅಥವಾ ಅಸ್ಪಷ್ಟವಾದ ಉರ್ದು ಭಾಷೆಯನ್ನು ಬಳಸುತ್ತಿದ್ದರು. ಮರಾಠಿಗರು ಮಾತ್ರ ತಮ್ಮ ಮಾತೃಭಾಷೆಯಾದ ಮರಾಠಿಯಲ್ಲಿ ಉತ್ಕೃಷ್ಟವಾದ ಶೈಲಿಯಲ್ಲಿ ಮಾತನಾಡುತ್ತಿದ್ದರು. ಬರಬರುತ್ತ ಕೋರ್ಟು ಕಚೇರಿಗಳಲ್ಲಿ ಕೆಲವು ಕನ್ನಡ ವಕೀಲರು ಕಾಣಿಸಿಕೊಂಡರು. ಆದರೇನು ? ಮರಾಠಿಗರಿಗೂ ಅವರ ಪಡಿನೆರಳಾದ ಹಳಬರಾದ ಕನ್ನಡಿಗರಿಗೂ ಇದೊಂದು ದೊಡ್ಡ ಆಘಾತವೆನಿಸಿತು. ನಾಲ್ಕು ಕಡೆಗಳಿಂದಲೂ ಕನ್ನಡಕ್ಕೆ ವಿರೋಧವಿತ್ತು. ಕನ್ನಡ ಎಂದವನು ಬಂಡುಗಾರ. ಸಮಾಜ ದ್ರೋಹಿ. ಇದರ ಪ್ರತಿಕ್ರಿಯೆ ಎಂದರೆ, ಕಲಬುರ್ಗಿ ನಾಡು ಮಹಾರಾಷ್ಟ್ರವೆಂದು ಪ್ರತಿಪಾದಿಸಲಾಯಿತು. ಮರಾಠಿಗರು ಈ ರೀತಿಯಾಗಿ ಇತಿಹಾಸವನ್ನೂ ಬರೆದರು.

ಮತ್ತೊಂದು ಕಡೆಗೆ ಉರ್ದು ಭಾಷೆಯು ಸರಕಾರಿ ಭಾಷೆ ಎಂದು ಘೋಷಣೆ ಆಯಿತು. 'ಉರ್ದು' ಶಿಕ್ಷಣದ ಮಾಧ್ಯಮ ಭಾಷೆಯಾಯಿತು. ನಿಜಾಮನ ಸಂಸ್ಥಾನದಲ್ಲಿ ಸರಕಾರಿ ಅಧಿಕಾರಿಗಳು ಉರ್ದು ಪುರಸ್ಕೃತರು. ಅವರು ಒಂದು ಹೆಜ್ಜೆ ಮುಂದೆ ಹೋಗಿ ದೇಶಿ ಭಾಷೆಗಳನ್ನು ಮಟ್ಟ ಹಾಕಬೇಕೆಂದರು. ಶಿಕ್ಷಣದಲ್ಲಿ ಉರ್ದು ಪ್ರಥಮ ಭಾಷೆಯಾದರೆ, ಇಂಗ್ಲಿಷ್ ದ್ವಿತೀಯ ಭಾಷೆಯಾಯಿತು. ಮರಾಠಿಗೂ ಕನ್ನಡಕ್ಕೂ ಒಂದೇ ಏಟು ! ಉರ್ದುವಿನ ಆಕ್ರಮಣದಿಂದ ಎಲ್ಲರಿಗೂ ಒಂದೇ ನೋವು. ಉರ್ದುವಿನಿಂದ ಮರಾಠಿಗೆ ಹಿಮ್ಮೆಟ್ಟುವ ಪ್ರಸಂಗ ಬಂದಾಗ್ಯೂ ಕನ್ನಡಕ್ಕೆ ಈ ಮರಾಠಿ ಅಭಿಮಾನಿಗಳ ವಿರೋಧ.

ಅಕ್ಕಲಕೋಟೆ, ಕಲಬುರ್ಗಿ ವಾಡಿ, ಯಾದಗಿರಿ, ರಾಯಚೂರು, ಅದೋನಿ ರೈಲು ನಿಲ್ದಾಣಗಳಲ್ಲಿ ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಊರುಗಳ ಹೆಸರುಗಳನ್ನು ಬರೆಯಬೇಕು ಎಂದು ನ್ಯಾಯವಾದ ಬೇಡಿಕೆಯನ್ನು ರೈಲ್ವೆ ಅಧಿಕಾರಿಗಳಿಗೆ ತಿಳಿಸಲಾಯಿತು. ಅಧಿಕಾರಿಗಳು ಮರಾಠಿಯ ಬದಲು ಕನ್ನಡವನ್ನೆ ಬರೆಯಿಸಿದರು. ಆದರೆ ಮುಂದಿನ ಕೆಲವೇ ದಿನಗಳಲ್ಲಿ ಮರಾಠಿಗರು ಅದನ್ನು ಅಳಿಸಿ ಮರಾಠಿಯಲ್ಲಿ ಹೆಸರನ್ನು ಬರೆಯಿಸಲು ಯಶಸ್ವಿಯಾದರು. ಕನ್ನಡ ನಾಡಿನಲ್ಲಿ ತಲೆಯ ಮೇಲೆ ಉರ್ದುವಿನ ಹರಿತ ಕತ್ತಿ, ಕಾಲ ಕೆಳಗೆ ಮರಾಠಿಯ ನೆಗ್ಗಿನ ಮುಳ್ಳು, ಯುವಕರು, ಕಾಲೇಜಿನಲ್ಲಿಯ ವಿದ್ಯಾರ್ಥಿಗಳು ತಮ್ಮತಮ್ಮೊಳಗೆ, ಮನೆಯಲ್ಲಿ ಚಿಕ್ಕ ಮಕ್ಕಳೊಡನೆ ಉರ್ದುವಿನಲ್ಲಿ ಮಾತನಾಡುವುದೆಂದರೆ ಅದೊಂದು ಹೆಮ್ಮೆಯ ವಿಷಯವಾಗಿತ್ತು. ಮನೆಯಲ್ಲಿಯ ಹೆಂಸಗರು ಕೂಡ ಉರ್ದು ಕಲಿಯಬೇಕೆಂದು ಸರಕಾರಿ ಶಿಕ್ಷಣ ಇಲಾಖೆಯ ಹುಕುಮು ! ಪಂಪ, ಪೊನ್ನ, ನೃಪತುಂಗ, ತೈಲಪ ಅರಿಕೇಸರಿಯ ವಂಶಜರು ಇವರು. ಕಟ್ಟಿಗೆಗೆ ಹುಳು ಹತ್ತಿದಂತೆ ಜೀವನವಾಗಿತ್ತು. ಅಂಥದ್ದರಲ್ಲಿ ಕನ್ನಡವನ್ನು ಕಟ್ಟಬೇಕಾಗಿತ್ತು.

✣ ✣ ✣ ✣

ಅಧ್ಯಾಯ -೧೩

• ಏಕೀಕರಣದ ಮೊದಲ ಮೆಟ್ಟಿಲು

ಕ್ರಿ.ಶ. ೧೮೫೦ರಲ್ಲಿ ಬೆಳಗಾವಿಯಲ್ಲಿ ಸರದಾರ ಹೈಸ್ಕೂಲಿನ ಸ್ಥಾಪನೆಯೊಂದಿಗೆ ಕನ್ನಡಿಗರ ಆತ್ಮ ಪ್ರತ್ಯಯ ಮೂಡತೊಡಗಿತ್ತು. ಮುಂದಿನ ದಿನಗಳಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಲ್ಲಿ ಕನ್ನಡಿಗರ ಸಂಘಟನೆ ಮೊದಲಾಯಿತೆಂದು ಈಗಾಗಲೆ ಗುರುತಿಸಲಾಗಿದೆ. ಸಂಘಟನೆಯ ಮುಂದಿನ ಹಂತ ಐಕ್ಯ. ಅದು ಅಖಂಡ ಕರ್ನಾಟಕದ ಏಕೀಕರಣದ ಮೆಟ್ಟಿಲು. ಅದೊಂದು ಸ್ಪಷ್ಟ ರೂಪ ದೊರೆತದ್ದು ಬಿಜಾಪುರದಲ್ಲಿ ಎಂದು 'ಕರ್ನಾಟಕ ವೈಭವ' ಎಂಬ ಪತ್ರಿಕೆಯ ಹೆಸರೇ ಸಾರಿ ಹೋಳುತ್ತದೆ.

ಮರಾಠಿಮಯವಾಗಿದ್ದ ಅಂದಿನ ಮುಂಬಯಿ ಕರ್ನಾಟಕದಲ್ಲಿ ಪ್ರತಿಯೊಂದು ಕಾಗದ ಪತ್ರಗಳು, ಅಸಲ ಅರ್ಜಿ, ವಕೀಲ ಪತ್ರ, ಸ್ಥಾವರ ಜಂಗಮುಗಳಲ್ಲಿಯ ದರಖಾಸ್ತು, ಕಕ್ಷೀದಾರರ ಯಾದಿ, ಖರ್ಚಿನ ಹಣದ ಪಾವತಿ, ವಕೀಲರ ಬದಲೀ ನೋಟೀಸುಗಳು, ಗ್ರಾಮಸ್ಥರಿಗೆ ಉಪಯುಕ್ತವಾಗುವ ಲಾವಣೀ ಪತ್ರಿಕೆ, ಬೆಲೆ ಕಮ್ಮಿ - ಜಾಸ್ತಿ ಪತ್ರಿಕೆಗಳ ರೈತರ ಪಾವತಿ ಬುಕ್ಕುಗಳು ಎಲ್ಲವೂ ಮರಾಠಿಯಲ್ಲಿದ್ದವು. ಇದರೊಂದಿಗೆ ಕೋರ್ಟು ಕಚೇರಿಗಳ ನೋಟೀಸು, ತಿಳುವಳಿಕೆ ಪತ್ರ, ಜಾಹೀರುನಾಮೆ, ಹರಾಜುಗಳ ಪತ್ರ, ಪ್ರಕಟಣೆಗಳು ಮರಾಠಿಯಲ್ಲೇ ಪ್ರಕಟವಾಗುತ್ತಿದ್ದವು. ಕನ್ನಡ ಜನರು ಅದಕ್ಕೆ ಓದಿ ತಮಗೆ ಅನಿಸಿದ್ದನ್ನು ಹೇಳಬೇಕಾದರೆ ಅದೇ ರೀತಿಯಲ್ಲಿ ಮರಾಠಿಯಲ್ಲೆ ಹೇಳಬೇಕಾಗುತ್ತಿತ್ತು. ಸೋಡ ಚೀಟಿಯ (ವಿವಾಹ ವಿಚ್ಛೇದನ) ನೋಟೀಸನ್ನು ಕೂಡ ಮರಾಠಿಯಲ್ಲೇ ಕೊಡಬೇಕಾಗುತ್ತಿತ್ತು. ಹೀಗಾಗಿ ಗ್ರಾಮಸ್ಥರಿಗೆ, ಗ್ರಾಮ ಲೆಕ್ಕಾಧಿಕಾರಿಗಳಿಗೆ, ಕಂದಾಯ ಇಲಾಖೆಯ ಕಾರ್ಯಗಳಿಗೆ, ಕೋರ್ಟು ಕಚೇರಿಗಳಿಗೆ ಉಪಯುಕ್ತವಾದ ಈ ಎಲ್ಲ ನಮೂನೆಯ ಫಾರ್ಮುಗಳನ್ನು ಕನ್ನಡದಲ್ಲಿ ಮುದ್ರಿಸಲು ಒಂದು ಕನ್ನಡ ಮುದ್ರಣಾಲಯದ ಅವಶ್ಯಕತೆ ಇತ್ತು. ಅದನ್ನು ಮನಗಂಡು ಬಿಜಾಪುರದಲ್ಲಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಮೇಲಿನ ದರ್ಜೆಯ ಕೆಲವು ಗುಮಾಸ್ತರು ಕೂಡಿಕೊಂಡು ಕನ್ನಡದ ಮೇಲಿನ ಅಭಿಮಾನ ಜೊತೆಗೆ ಕಿಂಚಿತ್ ಲಾಭದಾಯಕ ಕೆಲಸವೆಂದು ತಿಳಿದು ಶ್ರೀ ಶಕ ೧೮೧೩ ಖರನಾಮ ಸಂವತ್ಸರ ಫಾಲ್ಗುಣ ಶುದ್ಧ ಸಪ್ತಮಿ ಶನಿವಾರ ತಾರೀಖು - ೫-೩-೧೮೯೨ ರಂದು ರೋಹಿಣಿ ನಕ್ಷತ್ರ ಹಾಗೂ ಅಮೃತ ಸಿದ್ಧಿ ಯೋಗದ ಶುಭ ಮುಹೂರ್ತದಲ್ಲಿ 'ಗ್ರಾಮಾಧಿಕಾರಿ ಮುದ್ರಣಾಲಯ'ವನ್ನು ಪ್ರಾರಂಭಿಸಿದರು. ಅದರ ಹೆಸರೇ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಜೊತೆಗೆ ಅಂದಿನ ದಿನಗಳಲ್ಲಿ ಪ್ರಸಿದ್ಧಿ ಪಡೆದಿದ್ದ

ಬಿಜಾಪುರ ಹಾಗೂ ಮುಂಬಯಿ ಕರ್ನಾಟಕದಲ್ಲೆಲ್ಲ ಮನೆ ಮಾತಾಗಿದ್ದ ಲೋಕಮಾನ್ಯ ತಿಲಕರ 'ಕೇಸರಿ' ಮರಾಠಿ ಪತ್ರಿಕೆಯು ಒಂದು ಕನ್ನಡ ಪತ್ರಿಕೆಯನ್ನು ಪ್ರಕಟಿಸಲು ಸಹ ಅದು ಪ್ರಚೋದಿಸಿತು. ರಾಷ್ಟ್ರೀಯತೆಯ ಅರಿವಿನೊಂದಿಗೆ ನೋಟೀಸು, ಹರಾಜು ಜಾಹೀರುನಾಮೆಗಳ ಪ್ರಕಟಣೆ ಕನ್ನಡದಲ್ಲೂ ಆಗಲಿ ಎಂಬ ಪ್ರಾದೇಶಿಕ ಅಭಿಮಾನ ಹಾಗೂ ವ್ಯಾವಹಾರಿಕತೆ ಪತ್ರಿಕೆಯನ್ನು ಪ್ರಾರಂಭಿಸಲು ಮೂಲ ಕಾರಣವಾಯಿತು. ಅಂತೆಯೇ 'ಗ್ರಾಮಾಧಿಕಾರಿ ಮುದ್ರಣಾಲಯ' ಮತ್ತು 'ಕರ್ನಾಟಕ ವೈಭವ' ಪತ್ರಿಕೆಗಳು ಒಂದೇ ದಿನ ಪ್ರಾರಂಭವಾದವು.

ಮೊದಲ ಸಂಚಿಕೆ ದೊರೆತಿಲ್ಲವಾದರೂ, ಲಭ್ಯವಿದ್ದ ಮೊದಲನೆಯ ವರುಷದ ಮೂರನೆಯ ಸಂಚಿಕೆ ಕೂಡ ಪತ್ರಿಕೆಯ ಉದ್ದೇಶವನ್ನು ಸ್ಪಷ್ಟ ಪಡಿಸುತ್ತದೆ. ಕನ್ನಡ ಭಾಷೆ ಹಾಗೂ ಕರ್ನಾಟಕದ ಕುರಿತು ಇದ್ದ ಅಭಿಮಾನವನ್ನು ೧೮೯೨ ಮಾರ್ಚ್ ೧೯ರ ಸಂಚಿಕೆಯಲ್ಲಿಯೇ ನೋಡಬಹುದು.

'The love of ONE's OWN's Own country' ಎಂಬ ಇಂಗ್ಲಿಷ್ ಕವಿತೆಯ ಕೆಲವು ಸಾಲುಗಳನ್ನು ಉದ್ಧರಿಸಿ, ಅದರ ಕನ್ನಡ ಅನುವಾದವನ್ನು ಕೊಟ್ಟು, ಅದಕ್ಕೆ 'ಜನ್ಮ ಭೂಮಿಯ ಅಕ್ಕರೆಯು' ಎಂಬ ತಲೆಬರಹವನ್ನು ಕೊಟ್ಟಿದ್ದಾರೆ.

ಹಳಿಯಬೇಡಿರಿ ; ಬೇಡಿರಯ್ಯಾ ।
ತಳೆದ ಭೂಜನನಿಯ ಸು ಸೇವಕ ।
ನಳಜಿಗಂಜದೆ ಸಿದ್ಧವಾಗುವ ಕಾದುವದಕೆಂದು ॥
ಛಲವಿದೆಂತೊ ತಾಯಿಯಗಲಿದ ।
ರಳದೆ ಹಸು ಮಗುವಿದರ ತೆರದಿಂ ।
ಬಲವ ತೋರುವ ಸುಭಟನಾವೇಶವಿದು ತಿಳಿಯೆಂದಾ ॥

ಇದು ನಮ್ಮ ನಾಡಿನ ಬಗ್ಗೆ ಇರುವ ಅನಿಸಿಕೆಯನ್ನು ತೋರಿದರೆ ಮುಂದಿನ ಸಾಲುಗಳು 'ಕನ್ನಡ ಭಾಷೆಯ ಬಗ್ಗೆ ಉದ್ಗಾರವು' ಎಂಬುದನ್ನು ಹೇಳುತ್ತದೆ. 'ಕನ್ನಡ ಭಾಷೆಯ ಬಗ್ಗೆ ನಮ್ಮ ಮನಸ್ಸಿನೊಳಗೆ ಯಾವಾಗಲೂ ಕುದಿಯುವ ಉದ್ಗಾರಗಳು ಏನು ಮಾಡಿದರೆ ಹೊರಬೀಳುವವು ? ಎಂಬ ಪ್ರಶ್ನೆಗೆ ಹಿಗೆ ಪ್ರತ್ಯುತ್ತರವಾಗಿ ಹೇಳಬಹುದಲ್ಲಾ - ಸಂಸಾರದ ತೊಂದರೆಗಳಲ್ಲಿ ಬೇಸತ್ತು ಬಾಯಾರಿ ವೈರಾಗ್ಯವನ್ನು ಹುಡುಕಹೋದರೆ ನಾವು ಯಾವ ತೆರನಾದ ವೈರಾಗ್ಯವನ್ನು ಸ್ವೀಕರಿಸಬೇಕೆಂಬುದು ನಮಗೆ ತಿಳಿಯುವುದಿಲ್ಲ. ಅರಣ್ಯಕ್ಕೆ ಹೋಗಿ ಮನ ಸಂಯಮ ಮಾಡಿ ಧ್ಯಾನಿಸುವ ದಿನ ಮಾನಗಳಂತೂ ಹೋಗೇ ಹೋದುವು. ಆದ್ದರಿಂದ ಈಗಿನ ದಿನ ಮಾನದ ಮೇರೆಗೆ ಲೋಕ ಹಿತದ ಮೂಲ ತತ್ವವನ್ನು ವ್ಯವಹಾರ ದೃಷ್ಟಿಯಿಂದ ನೋಡುವುದೂ, ಸ್ವಹಿತ ಸ್ವಾಭಿಮಾನಗಳನ್ನು ಮರೆಯಿಸುವುದರ ಕಡೆಗೆ ಹಾತೊರಿಸದೆ ಇರುವುದೂ ಇದೇ ನಿಜವಾದ ವೈರಾಗ್ಯದ ಚಿನ್ಹೆಗಳಾಗಿರುವುದರಿಂದ ಇಂಥ ವೈರಾಗ್ಯವಿದ್ದರೆ ಮಾತ್ರ ಉದ್ಗಾರಗಳು ತಮ್ಮಿಂದ ತಾವೇ ಹೊರಬೀಳುವವು.

ಪತ್ರಿಕೆಯ ಹೆಸರನ್ನು 'ಕರ್ನಾಟಕ ವೈಭವ' ಯೆಂದು ಯಾರು? ಯಾಕೆ ? ಸೂಚಿಸಿದರು. ಅಥವಾ ಆ ಹೆಸರಿನಿಂದಲೆ ಪತ್ರಿಕೆಯನ್ನು ಪ್ರಾರಂಭಿಸಿದ ಉದ್ದೇಶವೇನಿತ್ತು ? ಎಂಬ ವಿಷಯಗಳ ಕುರಿತು ಖಚಿತವಾದ ಉಲ್ಲೇಖಗಳು ದೊರೆತಿಲ್ಲ. ಆದರೆ ಮೊದ ಮೊದಲಿನ ಕೆಲವು ಸಂಚಿಕೆಗಳಲ್ಲಿ ಪತ್ರಿಕೆಯ ತಲೆಬರಹದ ಕೆಳಗೆ ಒಂದು ಸುಂದರವಾದ ಕಂದಪದ್ಯ ಇದ್ದು ಅದು ಹೀಗಿದೆ.

ಕರ್ನಾಟಕ ವೈಭವವಿದು
ಕರ್ಣಾಮೃತವಾಗಿ ಜನರ ಸದ್ವರ್ಧನವು
ಕರ್ಣಾಭರಣದ ತೆರದಿಂ
ಕರ್ನಾಟಕ ದೇಶದೊಳ್ಗೆ ಮಿನುಗಿತ್ತಿರ್ಕ್ಕುಂ ।

ಈ ಪದ್ಯದ ಕರ್ತೃವಿನ ಉಲ್ಲೇಖನವೂ ಇಲ್ಲ. ಎರಡನೆಯ ಸಾಲಿನಲ್ಲಿ ಒಂದು ಮಾತ್ರೆ ಕಡಿಮೆಯಾಗಿದ್ದರೂ ಸುಂದರವಾದ ಪದ್ಯ ಪತ್ರಿಕೆಯ ಘೋಷಣೆಯಾಗಿತ್ತು. ಹರಿದು ಹಂಚಿ ಹೋದ ಕರ್ನಾಟಕದ ಏಕತೆಯ ಕಲ್ಪನೆಯು ೧೮೯೨ರಷ್ಟು ಹಿಂದೆ ಜೋರಾಗಿತ್ತು ಎಂದು ಇದರಿಂದ ಊಹಿಸಬಹುದು.

'ಕರ್ನಾಟಕ ವೈಭವ' ಪತ್ರಿಕೆಯನ್ನು ಹಾಗೂ 'ಗ್ರಾಮಾಧಿಕಾರಿ ಮುದ್ರಣಾಲಯ'ವನ್ನು ಎಷ್ಟು ಜನ ಕೂಡಿಕೊಂಡು ಪ್ರಾರಂಭಿಸಿದರೆಂದು ಖಚಿತವಾಗಿ ಹೇಳಲು ಆಧಾರಗಳು ದೊರೆತಿಲ್ಲವಾದರೂ, ಮುದ್ರಣಾಲಯದ ವ್ಯವಸ್ಥಾಪಕರೆಂದು ಸರ್ವಶ್ರೀ ಅಣ್ಣಾಜಿ ಗೋಪಾಳ ಜೋರಾಪುರಕರ ಹಾಗೂ ಗುಂಡೇರಾವ ರಾಮಚಂದ್ರರಾವ ಮಣೂರಕರ ಇಬ್ಬರ ಹೆಸರುಗಳು ದೊರೆಯುತ್ತವೆ. ಆದರೆ ಮುದ್ರಣಾಲಯ ಹಾಗೂ ಪತ್ರಿಕೆಯನ್ನು ಪ್ರಾರಂಭಿಸುವಾಗ ಸಾರ್ವಜನಿಕರಿಂದ ಶೇರುಗಳನ್ನು ಕೂಡಿಸಿದ್ದರೆಂದು ಕಾಣುತ್ತದೆ. ಹದಿನೇಳು ವರುಷಗಳ ನಂತರ ತಮ್ಮ ಪತ್ರಿಕೆ. ೪-೨-೧೯೦೯ರ ಸಂಚಿಕೆಯಲ್ಲಿ ಈ ಕುರಿತು ಒಂದು ಪ್ರಕಟನೆ ಇದೆ. ಅದರ ಪೂರ್ಣ ಪಾಠ ಹೀಗಿದೆ.

'ಕೆಳಗೆ ಸಹಿ ಮಾಡಿದ ಪ್ರೊಪ್ರಾಯಟರ್ಸ್ ಹಾಗೂ ಮ್ಯಾನೇಜರ್ಸ ಗ್ರಾಮಾಧಿಕಾರಿ ಪ್ರೆಸ್ ವಿಜಾಪುರ ಇವರ ಕಡೆಯಿಂದಾ ತಿಳುಹಿಸುವದರಲ್ಲಿ ಬರುತ್ತದಲ್ಲಾ - ಗ್ರಾಮಾಧಿಕಾರಿ ಪ್ರೆಸ್ಸ ಕಂಪನಿ ಈಗ್ಗೆ ಕೆಲವು ದಿನಗಳ ಪೂರ್ವದಲ್ಲಿ ಕಂಪನಿ ಅಕ್ಟ ಪ್ರಕಾರ ಲಿಮಿಟೆಡ್ ಮಾಡಲ್ಪಟ್ಟಿದ್ದು ಆದರೆ ಅದು ಕೆಲವು ಶೇಯರ ಹೋಲ್ಡರ ಜನರಿಗೆ ಫಾಯದೇಶೀರವಾಗಿ ಕಂಡುಬಾರದ್ದರಿಂದ ಸದರೀ ಪ್ರೆಸ್ಸದ ಪೂರ್ವದ ಲಾಗಾಯತ ಚಾಲಕ ಹಾಗೂ ಮಾಲೀಕರಾದ ಮಿ॥ ಗುಂಡೇರಾವ್ ರಾಮಚಂದ್ರರಾವ ಮಣೂಈರಕರ ಹಾಗೂ ಮಿ॥ ಅಣ್ಣಾಜಿ ಗೋಪಾಳ ಜೋರಾಪೂರಕರ ಇವರು ಸದರೀ ಗ್ರಾಮಾಧಿಕಾರಿ ಪ್ರಸ್ಸಿನ ಎಲ್ಲ ಮಾಲಕೀ ಹಕ್ಕನ್ನು ಶೇಯರ ಹೋಲ್ಡರರ ಕಡೆಯಿಂದ ಮಾರಲಿಕ್ಕೆ ತೆಗೆದುಕೊಂಡಿದ್ದಾರೆ. ಈಗಿನ ಅವರ ಅಸ್ತಿತ್ವದ ವಿಷಯದಲ್ಲಿ ಯಾರೂ ತಿಲಮಾತ್ರವಾದರೂ ಸಂಶಯ

ತೆಗೆದುಕೊಳ್ಳಬಾರದು' ಎಂದು ಉಭಯತರು ಸಹಿಮಾಡಿ ನೋಟೀಸನ್ನು ಕೊಟ್ಟಿದ್ದಾರೆ. ಇದರಿಂದ ಮುದ್ರಣಾಲಯ ಒಂದೇ ಕಂಪನಿ ಆಕ್ಟ್ ಪ್ರಕಾರ ನೊಂದಾಯಿಸಿತ್ತೋ ಅಥವಾ ಅದರಲ್ಲಿ 'ಕರ್ನಾಟಕ ವೈಭವ' ಪತ್ರಿಕೆಯೂ ಒಳಗೊಂಡಿತ್ತೋ ಎಂಬುದು ಸ್ಪಷ್ಟವಾಗುವುದಿಲ್ಲ. ಆದರೆ 'ಪೂರ್ವದ ಲಾಗಾಯತು ಚಾಲಕ ಮತ್ತು ಮಾಲಿಕ' ಎಂದು ಇವರಿಬ್ಬರ ಹೆಸರುಗಳು ಇರುವುದರಿಂದ ಗುಂಡೇರಾವ ಮತ್ತು ಅಣ್ಣಾಜಿ ಇಬ್ಬರು ಪ್ರೆಸ್ಸು ಮತ್ತು ಪತ್ರಿಕೆಗಳನ್ನು ಪ್ರಾರಂಭಿಸಿದರೆಂದು ಕಾಣುತ್ತದೆ. ಅದಕ್ಕೆ ಪೂರಕವಾಗಿ ಪ್ರಾರಂಭದ ಪತ್ರಿಕೆಗಳು ಅಣ್ಣಾಜಿ ಗೋಪಾಳ ಅವರು ಮುದ್ರಿಸಿದ್ದಾರೆ ಎಂದು ಹೇಳಿದ್ದರೆ ಮುಂದೆ ೨೫-೭-೧೯೧೮ರಿಂದ ಗುಂಡೇರಾವ ಮಣೂರಕರ ಅವರ ಹೆಸರು ಮುದ್ರಕನ ಸ್ಥಾನದಲ್ಲಿ ಇದೆ. ಸಂಪಾದಕರ ಹೆಸನ್ನು ಪ್ರತ್ಯೇಕವಾಗಿ ನಮೂದಿಸಿಲ್ಲ.

ಅಣ್ಣಾಜಿ ಮತ್ತು ಗುಂಡೇರಾಯರಲ್ಲಿ ಅಣ್ಣಾಜಿ ಗೋಪಾಳ ಜೋರಾಪುರಕರ ಬಗ್ಗೆ ವಿವರಗಳು ದೊರೆಯುತ್ತಿಲ್ಲ. ಆದರೆ ಗುಂಡೇರಾವ ರಾಮಚಂದ್ರರಾವ ಮುಣೂರಕರ ಬಗ್ಗೆ ಒಂದಿಷ್ಟು ಮಾಹಿತಿ ದೊರೆಯುತ್ತದೆ.

ಅಂದಿನ ನಿಜಾಮ ಸರಕಾರದ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಹಿರೇ ಮಣ್ಣೂರು ಗ್ರಾಮದ ಪಾಟೀಲರ ಮನೆತನದಲ್ಲಿ ಹುಟ್ಟಿದ ಗುಂಡೇರಾಯರ ಹಿರಿಯರು ಪೇಶ್ವೇ ಕಾಲದಿಂದ ಹೆಸರುವಾಸಿಯಾದವರು. ಹಿರೇ ಮಣ್ಣೂರು ಕೂಡ ಹೊಯ್ಸಳ ಕಾಲೀನ ಚೆನ್ನ ಕೇಶವ ದೇವಾಲಯದಿಂದ ಪ್ರಸಿದ್ಧವಾದುದೆ ಇದೆ. 'ನಾರೋ ಹಣಮಂತ' ಅವರ ವಂಶಸ್ಥರಾದ ಇವರಿಗೆ 'ಖಟಾವಕರ' ಎಂಬ ಅಡ್ಡ ಹೆಸರೂ ಇತ್ತು. ರಂಗರಾವ ಮುಂಬಾಜಿ ಖಟಾವಕರ ಅವರ ಮೊಮ್ಮಗ ರಾಮಚಂದ್ರ. ಅವರಿಗೆ ಇಬ್ಬರು ಗಂಡು ಮಕ್ಕಳು. ಹಿರಿಯವರೇ ಗುಂಡೇರಾಯರು. ೧೮೫೦/೬೦ರ ದಶಕದಲ್ಲಿ ಹುಟ್ಟಿದರು. ಕನ್ನಡ ಮರಾಠಿ ಸಂಸ್ಕೃತ ಹಾಗೂ ಉರ್ದುವಿನೊಂದಿಗೆ ಇಂಗ್ಲೀಶನ್ನೂ ಅಭ್ಯಾಸ ಮಾಡಿದ್ದರು. ಅಂದಿನ ಬ್ರಿಟಿಷ್ ಕರ್ನಾಟಕದಲ್ಲಿ ಕಂದಾಯ ಇಲಾಖೆಯಲ್ಲಿ ಸೇರಿ ಬಿಜಾಪುರ ಕಲೆಕ್ಟರ (ಜಿಲ್ಲಾಧಿಕಾರಿ) ಆಫೀಸಿನಲ್ಲಿ ಕಾರಕೂನರೆಂದು ಕೆಲಸ ಮಾಡುತ್ತಿದ್ದರು.

ಮರಾಠಿ ಮಯವಾಗಿದ್ದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಎಲ್ಲಾ ಕಾಗದ ಪತ್ರಗಳು ಮರಾಠಿಯಲ್ಲೇ ಇದ್ದುದನ್ನು ಕಂಡು ಗುಂಡೇರಾಯರ ಕನ್ನಡದ ಅಭಿಮಾನ ಜಾಗೃತವಾಯಿತು. ಕನ್ನಡದ ನೆಲದಲ್ಲಿಯ ಕನ್ನಡದ ಜನರು ಕನ್ನಡದಲ್ಲಿಯೇ ವ್ಯವಹರಿಸಬೇಕು ಎಂಬುದು ಗುಂಡೇರಾಯರ ವಾದವಾಗಿತ್ತು. ಅದಕ್ಕೆ ತಕ್ಕ ಸಲಕರಣೆಗಳು ಇಲ್ಲವೆಂಬ ಪಿಳ್ಳೆ ನೆವ ಸರಕಾರದ್ದಾಗಿತ್ತು. 'ಸರಿ, ನಾವೇ ನಿಮಗೆ ಕನ್ನಡದಲ್ಲಿ ಎಲ್ಲ ಕಾಗದಪತ್ರಗಳನ್ನು ಫಾರ್ಮುಗಳನ್ನು ಮುದ್ರಿಸಿ ಕೊಡುತ್ತೇವೆ' ಎಂದು ಹೇಳಿದರು. ಅವರಿಗೆ ಹೆಗಲು ಕೊಡಲು ಅವರ ಸಹೋದ್ಯೋಗಿಯಾಗಿದ್ದ ಅಣ್ಣಾಜಿ ಗೋಪಾಳರು ಮುಂದೆ ಬಂದರು. ಇಬ್ಬರೂ ತಮ್ಮ ನೌಕರಿಗೆ

ರಾಜೀನಾಮೆಯನ್ನು ಕೊಟ್ಟು ಹೊರ ಬಂದರು. ಕಲೆಕ್ಟರ ಅಫೀಸ ಪಕ್ಕದಲ್ಲೇ ಗ್ರಾಮಾಧಿಕಾರಿ ಮುದ್ರಣಾಲಯವನ್ನು ಪ್ರಾರಂಭಿಸಿ ಬಿಟ್ಟರು !

ಮುದ್ರಣಾಲಯದ ಹೆಸರೇ ಅದರ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಆದರೆ ನೌಕರಿಯನ್ನು ಬಿಡುವಾಗ ಮುದ್ರಣಾಲಯವನ್ನು ಪ್ರಾರಂಭಿಸುವ ಒಂದೇ ಉದ್ದೇಶ ಅವರದ್ದಾಗಿರಲಿಲ್ಲ. ಮುದ್ರಣಾಲಯದ ಪ್ರಾರಂಭದ ದಿನವೇ 'ಕರ್ನಾಟಕ ವೈಭವ' ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಮುದ್ರಣಾಲಯ ಮತ್ತು ಪತ್ರಿಕೆಗಳ ಮಾಲೀಕರಾಗಿ, ಪ್ರಕಾಶಕರಾಗಿ, ಸಂಪಾದಕರಾಗಿ ಸರಿ ಸುಮಾರು ಮೂವತ್ತು ವರುಷ ಕಾರ್ಯ ನಿರ್ವಹಿಸಿದರು. ಅಂದಿನ ದಿನಗಳಲ್ಲಿ ಕಂದಾಯದಂಥ ಇಲಾಖೆಯಲ್ಲಿ ಒಳ್ಳೆಯ ಅಧಿಕಾರ ಮತ್ತು ಸಂಪಾದನೆ ಇದ್ದ ಮೇಲ್ದರ್ಜೆಯ ಕಾರಕೂನರಾಗಿದ್ದ ಅವರು ಕನ್ನಡದ ಅಭಿಮಾನದಿಂದ, ದೇಶದ ಸ್ವಾತಂತ್ರ್ಯದ ಕಳಕಳಿಯಿಂದ ನೌಕರಿಗೆ ರಾಜೀನಾಮೆ ಕೊಟ್ಟು ಕನ್ನಡ ಮುದ್ರಣಾಲಯ ಮತ್ತು ಕನ್ನಡ ವಾರ ಪತ್ರಿಕೆಯನ್ನು ಪ್ರಾರಂಭಿಸಿದ್ದು ರೋಚಕವಾಗಿದೆ.

ಪತ್ರಿಕೆಯ ಪ್ರಾರಂಭದ ದಿನದಿಂದ ಅಂದರೆ ೧೮೯೨ರಿಂದ ೧೯೨೧ರ ವರೆಗೆ ಗುಂಡೇರಾಯರು ಪತ್ರಿಕೆಯ ಸಂಪಾದಕರಾಗಿದ್ದರು. ಆ ದಿನಗಳಲ್ಲಿ ಗುಂಡೇರಾಯರ ಲೇಖನಿಯು ಸರಳ ಹಾಗೂ ಹರಿತವಾಗಿತ್ತು. ಅವರ ಅನೇಕ ಅಗ್ರ ಲೇಖನಗಳು ಇಂದಿಗೂ ಮಾದರಿಯಾಗಿ ಉಳಿದಿವೆ. ಧಾರವಾಡ ವಿದ್ಯಾವರ್ಧಕ ಸಂಘದ ಬೆಳ್ಳಿ ಹಬ್ಬದಂದು ಬರೆದ ೨೧-೩-೧೯೧೪ರ ಅಗ್ರ ಲೇಖನದಲ್ಲಿ ಕನ್ನಡ ನಾಡು ನುಡಿಯ ಬಗೆಗಿದ್ದ ಅವರ ಕಳಕಳಿ ಮನನೀಯವಾಗಿದೆ. ಅದರಂತೆ ಧಾರವಾಡದ ಕರ್ನಾಟಕ ಕಾಲೇಜು ಅದರ ಅವಶ್ಯಕತೆ ಬಗ್ಗೆ ವರುಷಗಟ್ಟಲೆ ಅಗ್ರ ಲೇಖನಗಳನ್ನು ಬರೆದಿದ್ದಾರೆ. ಇಂದಿಗೂ ಕನಸಾಗಿಯೇ ಉಳಿದ ಹುಬ್ಬಳ್ಳಿ ಕಾರವಾರ ರೈಲು ಮಾರ್ಗದ ಬಗ್ಗೆ ಬರೆದ ಹಲವಾರು ವಿಶೇಷ ಲೇಖನಗಳು, ರಾವ ಬಹದ್ದೂರ ಅರಟಾಳರು ಮತ್ತು ಬ್ರಾಹ್ಮಣರು ಇತ್ಯಾದಿ ಲೇಖನಗಳು ಗಮನಾರ್ಹವಾಗಿವೆ.

ಕನ್ನಡ ಭಾಷೆಯ ಅಭಿಮಾನ ಮತ್ತು ವ್ಯವಹಾರ ಈ ಸಂಯುಕ್ತ ಉದ್ದೇಶಗಳಿಂದ ಪ್ರಾರಂಭವಾದ 'ಕರ್ನಾಟಕ ವೈಭವ' ಪತ್ರಿಕೆಯು ದಿನ ಕಳೆದಂತೆ ವ್ಯವಹಾರದ ಜೊತೆಗೆ ರಾಷ್ಟ್ರೀಯತೆಯ ಕಡೆಗೆ ವಿಶೇಷ ಗಮನ ಕೊಟ್ಟಿತು. ವಂಗ ಭಂಗ ಚಳುವಳಿ, ಲೋಕಮಾನ್ಯ ತಿಲಕರ ಕಾರಾಗೃಹ ವಾಸ ಇತ್ಯಾದಿಗಳ ಕಾಲದಲ್ಲಿ ಪತ್ರಿಕೆಯು ಉಗ್ರ ಸ್ವರೂಪವನ್ನು ತಾಳಿತು. ಬ್ರಿಟಿಷರನ್ನು ನೇರವಾಗಿ ಆಪಾದಿಸತೊಡಗಿತು.

ಸಮಗ್ರ ಭಾರತದ ಸ್ವಾತಂತ್ರ್ಯ ಚಳುವಳಿಯ ವೃತ್ತಾಂತವನ್ನು ಕನ್ನಡಿಗರಿಗೆ ಕೊಡತೊಡಗಿತು. ೧೯೦೭ರಲ್ಲಿ ಬಾಬು ಅರವಿಂದ ಘೋಷರ ಅಲೀಪುರ ಕೇಸಿನ ಸಮಗ್ರ ವರದಿಯನ್ನು, ೧೯೦೮ರಲ್ಲಿ ಲೋಕಮಾನ್ಯ ಟಿಳಕರನ್ನು ಸೆರೆ ಹಿಡಿದು ಮಂಡಾಲೆಯ ಜೈಲಿಗೆ ಕಳಿಸಿದ ಸಂಪೂರ್ಣ ವೃತ್ತಾಂತವನ್ನು ವಿವರವಾಗಿ

ವಾರ-ವಾರಕ್ಕೂ ಕೊಡುತ್ತ ಬಂದಿತು. ಕೊನೆಯಲ್ಲಿ ೧೭-೧೦-೧೯೦೮ರಂದು 'ಟಿಳಕರ ಖಟ್ಲೆ' ಎಂಬ ಏಳು ನೂರು ಪುಟಗಳ ಕನ್ನಡ ಪುಸ್ತಕವನ್ನು ಪ್ರಕಟಿಸಿ ಒಂದು ರೂಪಾಯಿ ಬೆಲೆಗೆ ಮಾರಿದ ಜಾಹಿರಾತು ಕೂಡ ಪತ್ರಿಕೆಯಲ್ಲಿ ದೊರೆಯುತ್ತದೆ. ಆ ಹೊತ್ತಿಗಾಗಲೆ ಟಿಳಕರ ಚರಿತ್ರೆಯನ್ನು ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟಿಸುವುದಲ್ಲದೆ ಪುಸ್ತಕ ರೂಪದಲ್ಲೂ ತಂದಿತು ಎಂಬುದು ವಿಶೇಷವಾಗಿದೆ.

ಪತ್ರಿಕೆಯು ಇವರ ಸಂಪಾದಕತ್ವದಲ್ಲಿ ಇದ್ದಾಗಲೆ ೧೯೦೭ರಷ್ಟು ಹಿಂದೆ ಬ್ರಿಟಿಶ್ ಲೇಖಕ ವಾಲಂಟೈನ ಚಿರೋಲನು, ''ಕರ್ನಾಟಕದ 'ಕರ್ನಾಟಕ ವೈಭವ' ಎಂಬ ಪತ್ರಿಕೆಯು ಒಂದು ಉಗ್ರವಾದ ಕ್ರಾಂತಿಕಾರಿ ಪತ್ರಿಕೆ, ಕನ್ನಡ ಬಲ್ಲ ಎಲ್ಲ ಪ್ರದೇಶಗಳಲ್ಲಿ ಅದರ ಪ್ರಸಾರವಿದೆ'' ಎಂದು ತನ್ನ ಬೃಹತ್ ಗ್ರಂಥ 'ಇಂಡಿಯನ್ ಅನ್‌ರೆಸ್ಟ್' ದಲ್ಲಿ ಉಲ್ಲೇಖಿಸಿದ್ದಾನೆ. ಕರ್ನಾಟಕ ವೈಭವ ಪತ್ರಿಕೆಯ ಪ್ರಸಾರ ಎಷ್ಟಿತ್ತು ಎಂಬುದರ ಬಗ್ಗೆ ಖಚಿತವಾಗಿ ಹೇಳಲು ಬರದಿದ್ದರೂ, ಆ ಪತ್ರಿಕೆಯಲ್ಲಿ ಪ್ರಕಟವಾದ ಕೆಲವು ವಿಷಯಗಳಿಂದ ಅದು ಸಾಕಷ್ಟು ಪ್ರಸಾರವನ್ನು ಹೊಂದಿತ್ತು ಎಂದು ಊಹಿಸಬಹುದಾಗಿದೆ.

೨೪-೨-೧೯೧೨ರ ಸಂಚಿಕೆಯಲ್ಲಿ 'ವಿಕಟ ಪ್ರತಾಪ' ಎಂಬ ಸಚಿತ್ರವೂ ವಿಚಿತ್ರವೂ ಆದ ಮಾಸ ಪತ್ರಿಕೆಯ ಉಲ್ಲೇಖ ಹಾಗೂ 'ಮ್ಯಾನೇಜರ ವಿಕಟ ಪ್ರತಾಪ ಆಫೀಸ ಕುಪ್ಪಂ (ಉತ್ತರ ಅರ್ಕಾಟು)' ಎಂಬುದರ ಜಾಹೀರಾತು ಇದೆ. ಅದರಲ್ಲಿ ಹೊಸದಾಗಿ ಚಂದಾದಾರರಾಗುವವರಿಗೆ 'ವಿಕಟ ಸಂಬಂಧಂ' ಎಂಬ ವಿನೋದ ಪುಸ್ತಕವನ್ನು ಬಹುಮಾನವಾಗಿ ಕೊಡುವುದಾಗಿ ಹೇಳಲಾಗಿದೆ.

ಮಹಾತ್ಮಾ ಗಾಂಧೀಜಿ ಅವರು ಇನ್ನೂ ಉದಯಿಸಿರಲಿಲ್ಲ. ಕನ್ನಡಭಾಷೆ, ಸಾಹಿತ್ಯ, ಹರಿದು ಹಂಚಿ ಹೋದ ಕನ್ನಡಿಗರ ಒಂದು ಗೂಡುವಿಕೆಯ ಅವಶ್ಯಕತೆ ಇತ್ಯಾದಿ ಹಲವಾರು ವಿಷಯಗಳ ಕುರಿತು ಬಹು ಮೂಲ್ಯ ಲೇಖನಗಳು ಈ ದಿನಗಳಲ್ಲಿ ಪ್ರಕಟವಾಗಿವೆ.

ಕನ್ನಡದಲ್ಲಿ ಪೋರ್ತುಗೀಜ ಶಬ್ದಗಳು, ಮರಾಟಿಯಲ್ಲಿ ಕನ್ನಡ ಶಬ್ದಗಳು ಮುಂತಾಗಿ ಶುದ್ಧ ಭಾಷಾ ವಿಜ್ಞಾನದ ಲೇಖನಗಳು, ಜದುನಾಥ ಸರಕಾರರಂಥವರ 'ವಿಜಾಪುರ ಪತನ' ಮೊದಲಾದ ಶ್ರೇಷ್ಠ ಐತಿಹಾಸಿಕ ಲೇಖನಗಳು, ಬಾಲ ವಿವಾಹ ಪದ್ಧತಿಯ ಅನಿಷ್ಠತೆ, ಜಾತಿ- ಕೋಮುಗಳ ವೈಶಿಷ್ಟ್ಯ, ಮೊದಲಾದ ಸಾಮಾಜಿಕ ಕಳಕಳಿಯ ಲೇಖನಗಳು ಪ್ರಕಟವಾಗಿವೆ.

೨೩-೩-೧೯೧೨ರ ಸಂಚಿಕೆಯ ಪತ್ರ ವ್ಯವಹಾರದಲ್ಲಿ ಮಾಗಡಿಯ ಎಂ. ಟಿ. ವಲ್ಲಭ ಐಯ್ಯಂಗಾರ, ಋಷಿಗಳೆಂದರೆ ಯಾರು ? ಎಂಬ ಕುರಿತು ಪತ್ರ ಬರೆದಿದ್ದಾರೆ. ಇನ್ನೊಂದು ಸಂಚಿಕೆಯಲ್ಲಿ ಕೊಡಗಿನ ಜನರು ತಮ್ಮಲ್ಲಿಯ ಕನ್ನಡದ ದುರವಸ್ಥೆಯ ಕುರಿತು ಇಂಗ್ಲೆಂಡಿನ ಬಾದಶಹನಿಗೆ ಅರ್ಪಿಸಿದ ಬಿನ್ನವತ್ತಳೆಯ ನಕಲು ಇದೆ.

೧೭-೨-೧೯೧೪ರ ಸಂಚಿಕೆಯಲ್ಲಿ ಹನುಮಾನ್ ಕಂಪನಿ ಮೈಸೂರಿನ 'ಮಧುರವಾಣಿ'ಯ ಜಾಹೀರಾತು ಇದೆ. ಅಲ್ಲದೆ ಕರ್ನಾಟಕದ ವಿವಿಧ ಭಾಗಗಳ ಅನೇಕ ವ್ಯಾಪಾರೀ ಜಾಹೀರಾತುಗಳೂ ಇವೆ. ಇವುಗಳಿಗೆ ಕಳಸ ಎಂಬಂತೆ ೧೯೧೧ರಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಪ್ರಾಸ ಬಿಟ್ಟು ಕವಿತೆಗಳನ್ನು ರಚಿಸಲು ಪ್ರಾರಂಭಿಸಿದಾಗ ಪ್ರಾಸ ಬೇಕೋ ಬೇಡವೋ ಎಂಬ ಬಗ್ಗೆ ವರುಷಗಟ್ಟಲೆ ಕರ್ನಾಟಕ ವೈಭವ ಪತ್ರಿಕೆಯಲ್ಲಿ ಖಾರವಾದ ಚರ್ಚೆ ನಡೆದಿದೆ. ಗೋವಿಂದ ಪೈಗಳೊಂದಿಗೆ ಅಂದಿನ ಖ್ಯಾತನಾಮರೆಲ್ಲ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ವಿಷಯದ ಮಹತ್ವವಂತೂ ಸರಿಯೇ, ಜೊತೆಗೆ ಪತ್ರಿಕೆಯ ಪ್ರಸಾರ ಹಾಗೂ ಮೌಲ್ಯವೂ ಇವರಿಂದ ಗೊತ್ತಾಗುತ್ತದೆ.

ರಾಷ್ಟ್ರೀಯತೆಯ ದೃಷ್ಟಿಯಿಂದ ಬಾಬು ಅರವಿಂದ ಘೋಷ, ಲೋಕಮಾನ್ಯ ಟಿಳಕರ ಕುರಿತು ಅಭಿಮಾನ ತೋರಿಸಿ ಪತ್ರಿಕೆಯು ಲೇಖನಗಳನ್ನು ಪ್ರಕಟಿಸುತ್ತಿತ್ತು. ಆದರೆ ಅದು ಕನ್ನಡದ ಅಭಿಮಾನಕ್ಕೆ ಹಿಂದೆ ಬೀಳಲಿಲ್ಲ ಎಂಬುದು ಮಹತ್ವದ್ದಾಗಿದೆ. ಈ ದಿನಗಳಲ್ಲೇ ವಿಜಾಪುರ ನಗರದ ನಡು ಮಧ್ಯದಲ್ಲಿ ಮರಾಠಿಗರು ಮರಾಠಿ ಶಾಲೆಯನ್ನು ತೆರೆಯಲು ಬಂದಾಗ ಅದನ್ನು ಖಂಡಿಸಿ ಅಲ್ಲಿ ಕನ್ನಡ ಶಾಲೆ ಬೇಕು ಎಂದು ಪತ್ರಿಕೆಯು ಪಟ್ಟು ಹಿಡಿಯಿತು.

ಸತ್ಯಾಗ್ರಹ, ಧರಣಿಗಳ ಕಲ್ಪನೆಯೇ ಇಲ್ಲದಿದ್ದಾಗ, ಮರಾಠಿ ಶಾಲೆಯನ್ನು ಪ್ರಾರಂಭಿಸಲು ಬಂದ ಪಟವರ್ಧನ ಬಾಯಿಯನ್ನು ಹಿಂತಿರುಗಿಸಿ ಅಲ್ಲಿ ಕನ್ನಡ ಶಾಲೆಯನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾಯಿತು. ಅದುವೆ ಇಂದು ಊರ ನಡುಮಧ್ಯ ಗಾಂಧಿಚೌಕ ಎಂಬಲ್ಲಿ ಇದ್ದ ಒಂದನೆಯ ನಂಬರಿನ ಶಾಲೆಯಾಗಿದೆ.

ಇದೀಗ ಬ್ರಿಟಿಷರ ಕಾಕ ದೃಷ್ಟಿ 'ಕರ್ನಾಟಕ ವೈಭವ'ದ ಮೇಲೂ ಬಿದ್ದಿತು. ಈ ದಿನಗಳಲ್ಲಿ ಪತ್ರಿಕೆಯು ಎರಡೂ ದಂಡೆಯ ಮೇಲೆ ಕೈ ಇಟ್ಟು ಕರ್ನಾಟಕದ ಏಕೀಕರಣದತ್ತ ವಿಶೇಷ ಗಮನ ಕೊಟ್ಟಿತು. ಆಗ ರಾಷ್ಟ್ರಮಟ್ಟದಲ್ಲಿ ಲೋಕಮಾನ್ಯ ಟಿಳಕರು ಸೆರೆಮನೆಯಲ್ಲಿದ್ದರು.

ಕ್ರಿ.ಶ. ೧೮೯೨ರಲ್ಲಿ ಕರ್ನಾಟಕ ವೈಭವವು ಪ್ರಾರಂಭವಾಗುವ ಮೊದಲು ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ವೃತ್ತ ಪತ್ರಿಕೆಗಳನ್ನು ಗಮನಿಸಿದಾಗ 'ಕರ್ನಾಟಕ ವೈಭವ' ಪತ್ರಿಕೆಯ ಮಹತ್ವ ಗೊತ್ತಾಗುತ್ತದೆ. ಕನ್ನಡದ ಮೊತ್ತ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' (೧೮೪೩) ಅನಂತರ ಅದುವೆ 'ಕಂನಡ ಸಮಾಚಾರ' (೧೮೪೪) ಎಂದಾಯಿತು. ಅನಂತರ 'ಧಾರವಾಡ ವೃತ್ತ' (೧೮೪೩), ಬೆಳಗಾವಿಯ 'ಕರ್ನಾಟಕ ಮಿತ್ರ', ಬಳ್ಳಾರಿಯ 'ಕಂನಡ ವಾರ್ತಿಕ' (೧೮೫೭) ಮೈಸೂರಿನ 'ಕರ್ನಾಟಕ ಪ್ರಕಾಶಿಕಾ', ಮುಂಬಯಿಯ 'ಕನ್ನಡ ಸುವಾರ್ತೆ' (೧೮೮೨-೮೩) 'ಕರ್ನಾಟಕ ಹಿತೇಚ್ಛು' (೧೮೮೭-ಬೆಳಗಾವಿ) ಇತ್ಯಾದಿ ಹೆಸರುಗಳನ್ನುಗಮನಿಸಿದಾಗ

ಕರ್ನಾಟಕ ವೈಭವವು 'ಬಿಜಾಪುರ ವಾರ್ತೆ, ವಾರ್ತಿಕ, ವೃತ್ತ, ಸಮಾಚಾರ, ಮಿತ್ರ ಎಂದಾಗಬೇಕೇ ಹೊರತು ಕರ್ನಾಟಕ ವೈಭವ ಎಂದಾಗುತ್ತಿರಲಿಲ್ಲ. ಪತ್ರಿಕೆಯನ್ನು ಪ್ರಾರಂಭಿಸುವವರ ಹಿಂದೆ ಇದ್ದ ಅಖಂಡ ಕರ್ನಾಟಕದ ಕಲ್ಪನೆ, 'ವೈಭವ'ದ ನಾಂದಿಯನ್ನು ಹಾಡಿದೆ ಎಂದು ಯಾರೂ ಹೇಳಬಹುದು.

ಕರ್ನಾಟಕ ವೈಭವ ಪತ್ರಿಕೆಯ ಪ್ರಸಾರದ ಕುರಿತು ಖಚಿತವಾಗಿ ಹೇಳಲು ಬಾರದು. ಎಲ್ಲ ಭಾಗಗಳಲ್ಲಿಅದಕ್ಕೆ ಓದುಗರು ಇದ್ದಿರಬಹುದೆಂದು ಕಾಣುತ್ತದೆ. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಅದು ತುಂಬ ಆತಂಕದ ದಿನಗಳನ್ನೆ ಕಂಡಿತೆಂದು ಕಾಣುತ್ತದೆ. ಈ ಕುರಿತು ಪತ್ರಿಕೆಯು ಆಗಾಗ ತನ್ನ ಅಳಲನ್ನು ತೋಡಿಕೊಂಡು ತನ್ಮೂಲಕ ಕನ್ನಡಿಗರಲ್ಲಿ ಕನ್ನಡತ್ವದ ಜಾಗ್ರತೆಯನ್ನು ಮೂಡಿಸುವ ಪ್ರಯತ್ನವನ್ನೂ ಮಾಡಿದೆ. ಪ್ರಾರಂಭದ ಹಂತಗಳಲ್ಲಿ ಕನ್ನಡ ಓದುಗರನ್ನು ಆಕರ್ಷಿಸುವ ರೀತಿಯೂ ಅನನ್ಯವಾಗಿದೆ.

''ನಮ್ಮ ಪತ್ರದ ಅನೇಕ ಚಂದಾದಾರರ ಕಡೆಗೆ ಬಹಳಷ್ಟು ಹಣವು ಥಕಾಯಿಸಿ ನಿಂತಿದ್ದು, ಅದನ್ನು ಕಳುಹಿಸಲು ಆ ಮಹಾಜನರಿಗೆ ಅನೇಕ ಸಾರಿ ಬಹು ಪರಿಯಿಂದ ಖಾಸಗಿ ಪತ್ರ ದ್ವಾರಾ ಕೇಳಿಕೊಂಡಾಗ್ಯೂ ಅವರ ಕೋಮಲ ಅಂತಃಕರಣಕ್ಕೆ ಇನ್ನೂ ದ್ರವ ಹುಟ್ಟಲೊಲ್ಲದು! ಆದರೆ ಇಂಥ ಜನರ ಕಡೆಯಿಂದ ಯಾವ ಬಗೆಯಾಗಿ ಚಂದಾ ಹಣವನ್ನು ವಸೂಲಿ ಮಾಡಬೇಕು. ಇದೇ ನಮಗೆ ತಿಳಿಯಲೊಲ್ಲದು. ಇರಲಿ ನಮ್ಮ ವಾಚಕ ವರ್ಗವು ಈ ರೀತಿಯಾಗಿ ತಮ್ಮ ಉದಾರ ಆಶ್ರಯವನ್ನು ಕೊಡುತ್ತ ಹೋದರೆ ವರ್ತಮಾನ ಪತ್ರಕ್ಕೆ ದಿನೇ ದಿನೇ ಕ್ಷಯ ರೋಗವು ಯಾಕೆ ಹತ್ತಬಾರದು ? ...''

ಇದು ೧೯೦೧ರ ಪತ್ರಿಕೆಯ ಸಂಪಾದಕರ ಭಾಷೆ! ಅವರ ಈ ಪ್ರಾರ್ಥನೆಯೂ ಕಿವಿಗೆ ಬೀಳದಿದ್ದಾಗ ೧೯-೮-೧೯೦೫ರ ಸಂಚಿಕೆಯಲ್ಲಿ 'ಆತ್ಮವೃತ್ತವು' ಎಂದು ಹೇಳುತ್ತ 'ವಾಚಕ ಮಹಾಶಯರೇ! ನಮ್ಮ ಪತ್ರಿಕೆಗೆ ಈ ಹೊತ್ತಿಗೆ ೧೩ ವರುಷಗಳು ತುಂಬಿ ಹೊಸ ದಿನವಾಗಿದೆ... ನಿಯಮಿತವಾಗಿ ಒಂದು ಮನೋರಂಜಕ ಹಾಗೂ ಬೋಧಪರ ಕಾದಂಬರಿಯನ್ನು ಪ್ರತಿ ಸಂಚಿಕೆಯಲ್ಲಿ ಕೊಡುತ್ತಾ ಹೋಗಿ ಕಡೆಗೆ ಆ ಪುಸ್ತಕ ಮುಗಿದ ಕೂಡಲೇ ಅದನ್ನು ಚೆನ್ನಾಗಿ ಕಟ್ಟಿಸಿ ನಮ್ಮ ಚಂದಾದಾರರಿಗೆ ಕಾಣಿಕೆಯಾಗಿ ಕೊಡುವೆವು. ಈ ಪ್ರಕಾರದ ಒಂದು 'ಇಂದಿರಾ' ಎಂಬ ಕಾದಂಬರಿಯು ಕಳೆದ ತಿಂಗಳಿನಿಂದ ನಮ್ಮ ಸಂಚಿಕೆಯಲ್ಲಿ ಬರಹತ್ತಿದೆ' ಎಂಬುದಾಗಿ ಚಂದಾದಾರರಿಗೆ ಒಂದು ಆಕರ್ಷಕ ಪ್ರಯತ್ನ ಮಾಡಿದ್ದಾರೆ. ಆದರೆ ಇಂದಿನಂತೆ ನಾವು ಕನ್ನಡಿಗರು ಅದೂಕ್ಕ ಬಗ್ಗಲಿಲ್ಲ. ಪತ್ರಿಕೆಗೆ ೨೦ ವರುಷಗಳಾದಾಗ ೩-೧-೧೯೧೪ರಂದು ಒಂದು ಅಗ್ರಲೇಖನವನ್ನು ಬರೆದು .... 'ಈವರೆಗೆ ನಾವು ಕರ್ನಾಟಕಸ್ಥರ ಹಾಗೂ ಕನ್ನಡ ಭಾಷೆಯ ಸೇವೆಯನ್ನು ಪರಿಪರಿಯಿಂದ ಮಾಡುತ್ತ ಬಂದಿದ್ದೇವೆ. ಇದಕ್ಕೋಸ್ಕರ ಕಷ್ಟ ನಷ್ಟಗಳನ್ನು ವಿಶೇಷವಾಗಿ ಸೋಸಿರುತ್ತೇವೆ. ಆದರೂ ಕೈಗೊಂಡ ಕೆಲಸವನ್ನು ಬಿಟ್ಟಿಲ್ಲ''

ಎಂದು ಮುಂತಾಗಿ ಹೇಳಿದ್ದಾರೆ. ಮತ್ತೆ ಐದು ತಿಂಗಳುಗಳಲ್ಲಿ ದಿನಾಂಕ ೨-೫-೧೯೧೪ರ ಸಂಚಿಕೆಯಲ್ಲಿ ''ಕನ್ನಡಿಗರ ವರ್ತಮಾನ ಪತ್ರಗಳೂ ಮಾಸಪತ್ರಗಳೂ '' ಎಂಬ ಅಗ್ರ ಲೇಖನವನ್ನು ಬರೆದು ಪ್ರಕಟಿಸಿದ್ದು ನೋಡಿದರೆ ಪತ್ರಿಕೆಯು ಸಂಪಾದಕರಿಗೆ ಕನ್ನಡ ವೃತ್ತ ಪತ್ರಿಕಾ ವ್ಯವಸಾಯ ಕುರಿತು ಇದ್ದ ಕಳಕಳಿಯನ್ನು ಗುರುತಿಸಬಹುದು.

ಇಷ್ಟಾಗಿಯೂ ಪತ್ರಿಕೆಯ ಪ್ರಚಾರ ಅಂದು ಕನ್ನಡ ಭಾಷೆ ಗೊತ್ತಿದ್ದ ಎಲ್ಲ ಭಾಗಗಳಲ್ಲಿ ಇತ್ತು ಎಂದು ಆ ಪತ್ರಿಕೆಯಲ್ಲಿ ಪ್ರಕಟವಾದ ವಿವಿಧ ಭಾಗದ ಜನರು ಸಂಪಾದಕರಿಗೆ ಬರೆದ ಪತ್ರಗಳಿಂದ ಲೇಖನಗಳಿಂದ ಗುರುತಿಸಬಹುದಾಗಿದೆ.

ಕರ್ನಾಟಕ ವೈಭವ ಪತ್ರಿಕೆಯ ವಿಶೇಷತೆ ಇರುವುದು, ಕನ್ನಡ ಓದುಗರನ್ನು ಬೆಳೆಸುವುದರಲ್ಲಿಯದೇ ಆಗಿದೆ. ಕ್ರಿ.ಶ. ೧೮೯೯ರಷ್ಟು ಹಿಂದೆ ಕತೆ ಕಾದಂಬರಿಗಳನ್ನು ಧಾರವಾಹಿಯಾಗಿ ಪ್ರಕಟಿಸುವ ಪತ್ರಿಕೆ ಇದಾಗಿತ್ತು. ಬಂಗಾಲಿ, ಮರಾಠಿ ಭಾಷೆಗಳಿಂದ ಅನುವಾದಗಳಲ್ಲದೆ, ಕನ್ನಡದಲ್ಲೂ ಸ್ವತಂತ್ರ ಕಥೆ ಕಾದಂಬರಿಗಳನ್ನು ಪತ್ರಿಕೆಯು ಪ್ರಕಟಿಸಲು ಪ್ರಾರಂಭಿಸಿತ್ತು. ೧೯೦೩ರಲ್ಲಿ ಒಬ್ಬ ಸುಧಾರಕರನ ಆತ್ಮವೃತ್ತ (ಕಾದಂಬರಿ) ಫುಲಾಜಾನೆ ಬೇಗಮ್ (ನಾಟಕ), ಶಾರ್ದೂಲ ಇಲ್ಲವೆ ರಜಪೂತರ ಒಡೆಯ ರಣಧೀರನು (ಕಾದಂಬರಿ) ನಿತ್ಯಾನಂದ (ಕಾದಂಬರಿ) ೧೯೦೫ರಲ್ಲಿ ಪ್ರಕಟವಾದ 'ಚಾತುರ್ಯದ ಮಾದರಿಯು' (ಕಥೆ) ಹಾಗೂ ಕೆರೂರ ವಾಸುದೇವಾಚಾರ್ಯರರದಲ್ಲದ 'ಇಂದಿರಾ' ಎಂಬ ಇನ್ನೊಂದು ಕಾದಂಬರಿ ಹತ್ತು ಪರಿಚ್ಛೇದಗಳಲ್ಲಿ ಪ್ರಕಟವಾಗಿವೆ. ಗೋಪಾಲರಾವ ಸೀತಾಬಾಯಿ ಅವರ ಮೂರು ಗಂಡು ಮಕ್ಕಳು ಮತ್ತು ಸೊಸೆಯಂದಿರ ಸುತ್ತ ಹೆಣೆದ ಕಾದಂಬರಿ ಶಿಕ್ಷಣದ ಪ್ರಭಾವವನ್ನು ಹೇಳುತ್ತದೆ. ಲೇಖಕರ ಹೆಸರು ಇಲ್ಲ ! ಬಹುಶಃ ಮಣ್ಣೂರಕರ ಗುಂಡೇರಾಯರೇ ಬರೆದುದಾಗಿರಬೇಕು.

ಕವಿತೆಗಳಲ್ಲಿ ಪ್ರಾಸ ಬೇಕೋ ಬೇಡವೋ ಎಂಬ ಕುರಿತು ಚರ್ಚೆ ನಡೆದಿತ್ತಷ್ಟೆ. ಆಧುನಿಕ ವಿಷಯಗಳ ಕುರಿತು ಮುಕ್ತ ಛಂದಸ್ಸು ಅನುಕೂಲ ಎಂಬ ಅಭಿಪ್ರಾಯ ಬಂದಿತು. ಅದಕ್ಕೆ ವಿರುದ್ಧವಾಗಿ ಅಂದು ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಶಿವಮೂರ್ತಿ ಸ್ವಾಮಿ ಹಿರೇಮಠ ಎಂಬುವರು ಅದೇ ಆಗ ನಾಡಿನಲ್ಲಿ ಬಂದ ಮೋಟಾರು ಸಾಯಕಲ್ಲುಗಳ ಕುರಿತು ಮತ್ತೇಭ ವಿಕ್ರೀಡಿತ ವೃತ್ತದಲ್ಲಿ ಎರಡು ಪದ್ಯಗಳನ್ನು ರಚಿಸಿದ್ದಾರೆ. ಕರ್ನಾಟಕ ವೈಭವ ೨೧-೨-೧೯೨೭ರ ಸಂಚಿಕೆಯಲ್ಲಿ ಪ್ರಕಟವಾಗಿವೆ.

ಮೋಟಾರ್ ಮತ್ತೇಭಃ

ಇದು ಏನಚ್ಚರಿ ಬೆಂಕಿ ಗಾಳಿ ಬಲದಿಂ ಸರ್‍ರೆಂದು ಓಡುತಿದೆ !
ಇದು ಮದ್ದಾನೆಯೋ ಮಾಯೆಯಿಂ ನಡೆ ಭಂವ ಭಂವೆಂದು ಕೂಗುತಿದೆ ।

ಇದು ಮಾ ರಕ್ಕಸವೇನು ! ದಾರಿಯಲಿ ತಾ ಟರ್‍ರೆಂದು ಚೀರುತಿದೆ ।
ಇದು ಏಂ ಸೊಕ್ಕಿದ ಪೋರನೋ ಜನರ ಕಣ್ಣೊಳ್ಮಣ್ಣು ತುಂಬುತಿದೋ!

ಸಾಯಿಕಲ್

ಇದು ಏಂ ಕೌತಕ ತಾನೆಯೇ ಸುಳುಸುಳು ಭರ್ಗುಟ್ಟಿಯೋಡುತಿದೆ ।
ಇದು ಕೈಲಾಸದ ಪ್ರಾಣಿಯೋ ಹವೆಯನುಂಡುಂಡು ಸಾಗುತಿದೆ ।
ಇದು ಏಂ ಕಿನ್ನರ ವೆಣ್ಣೋ! ಜಣಜಣನೆಂದಿಂಪಾಗಿ ಹಾಡುತಿದೆ ।
ಇದುಏನುದ್ಧಟ ಬಾಲೆಯೋ ಹುಡಿಯುಂ ತಾಂ ತೂರುತ್ತ ಹೋಗುತಿದೆ ।

ಬಿಜಾಪುರದ ಕರ್ನಾಟಕ ವೈಭವ ಪತ್ರಿಕೆಯಲ್ಲಿ ವಿವಿಧ ವಿಷಯಗಳಿರುತ್ತಿದ್ದವು. ಸ್ಫುಟ ವಿಚಾರಗಳು, ವಿವಿಧ ವಾರ್ತೆಗಳು, ಇಹ ವೃತ್ತ, ಪೇಟೆಯ ಧಾರಣೆಯು, ಸರಕಾರಿ ಗೆಝೆಟಿ ಬರೆದು ಬಂದದ್ದು. ಪತ್ರ ವ್ಯವಹಾರ, ವರ್ಗಾ ವರ್ಗಿಗಳು, ಹಾಗೂ ಸಂಪಾದಕೀಯಗಳು ಪತ್ರಕೆಯ ಕೆಲವು ಅಂಕಣಗಳಾಗಿದ್ದವು. ಸಂಪಾದಕೀಯಗಳು ಆ ದಿನಗಳಲ್ಲಿ ಪ್ರಸಿದ್ಧವಾಗಿದ್ದವು. 'ಮತಾಭಿಲಾಷಿ ಸ್ತ್ರೀಯರ ಗೊಂದಲವು', 'ಬೇರೆ ಬೇರೆ ರಾಷ್ಟ್ರಗಳ ಸಾಲದ ಹಣವು' 'ಕರ್ನಾಟಕ ಕಾಲೇಜು' 'ರೈಲು' 'ಬರಗಾಲ' ಇತ್ಯಾದಿ ವಿವಿಧ ವಿಷಯಗಳ ಕುರಿತು ಸಂಪಾದಕೀಯಗಳು ಇರುತ್ತಿದ್ದವು. ಸ್ಫುಟ ಲೇಖನಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಅಂದು ದೇಶದಲ್ಲಿ ಪ್ರಚಲಿತವಾಗಿದ್ದ ಸ್ವಾತಂತ್ರ್ಯ ಸಂಗ್ರಾಮದ ವಿಷಯಗಳು ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುತ್ತಿದ್ದವು. ಮಾದರಿಗೆಂದು ಅಕ್ಟೋಬರ ೧೮೯೭ರ ಒಂಬತ್ತನೆಯ ದಿನಾಂಕದ ಸಂಚಿಕೆಯಲ್ಲಿ ಬಂದ ದಾಮೋದರ ಹರಿ ಚಾಫೆಕರ ಬಂಧನದ ಸ್ಪುಟ ಲೇಖನದ ಕೆಲವು ಸಾಲುಗಳನ್ನು ನೋಡಬಹುದು.

'ಇಂಗ್ರಜಿ ದೈನಿಕವೆಂಬ ಪತ್ರದ ಮೇಲಿಂದ ತಿಳಿದು ಬರುವುದೇನೆಂದರೆ, ಪೊಲೀಸರು ದಾಮೋದರ ಹರಿ ಚಾಪೇಕರೆಂಬ ಮನುಷ್ಯನನ್ನು ಹಿಡಿದಿದ್ದು ಅವನ ಕಬೂಲಿ ಜಬಾನಿಯು ಸಹ ಮ್ಯಾಜಿಸ್ಟ್ರೇಟರ ಬಳಿಯಲ್ಲಿ ತೆಗೆದುಕೊಳ್ಳಲ್ಪಟ್ಟಿದೆ. ಅದರಲ್ಲಿಯ ಮುಖ್ಯ ಸಂಗತಿಗಳು ... ಯಾವುವೆಂದರೆ ದಾಮೋದರ ಹರಿ ಚಾಫೇಕರ ಎಂಬ ಗೃಹಸ್ಥನು ೨೮ ವರುಷ ಪ್ರಾಯದವನಿದ್ದು ಸಶಕ್ತನಿರುತ್ತಾನೆ. ಇವರೆನ್ನುವುದೇನೆಂದರೆ ಪುಣೆಯಲ್ಲಾದ ಇಬ್ಬರ ಸಾಹೇಬರ ಖೂನಿಯು ತಾನೆ ಮಾಡಿರತ್ತಾನೆ. ಮುಂಬಯಿಯಲ್ಲಿ ನಮ್ಮ ಮಹಾರಾಜ್ಞಿಯವರ ಪ್ರತಿಮೆಯ ಮೋರೆಗೆ ಡಾಂಬರನ್ನು ಸವರಿ ಕೊರಳಲ್ಲಿ ಪಾದರಕ್ಷೆಗಳ ಮಾಲಿಕೆಯನ್ನು ಹಾಕಿದವನು ತಾನೆ! ಯುನಿವ್ಹರ್ಶಿಟಿ ಪರೀಕ್ಷೆಗಾಗಿ ಏರ್ಪಡಿಸಿದ ಮಂಟಪವನ್ನು ಅಗ್ನಿ ನಾರಾಯಣನಿಗೆ ಅರ್ಪಣೆ ಮಾಡಿದವನು ತಾನೆ. ಮಿ. ಗಾಡಗೀಳ ಎಂಬ ಬ್ಯಾರಿಷ್ಟರರಿಗೆ ಚೆನ್ನಾಗಿ ಥಳಿಸಿದವನು ತಾನೆ ! ಸುಧಾಕರ ಎಡಿಟರ ಸಮಾಚಾರ ತೆಗೆದುಕೊಂಡ ಮೂರ್ತಿಯೂ ತಾನೆ ! ಕರಮಣೂಕ ಪತ್ರದ ಮಾಲೀಕರಾದ ಮಿ. ಕುಲಕರ್ಣಿ

ಎಂಬವರಿಗೆ ಚೆನ್ನಾಗಿ ಒಂದು ಕೈ ತೋರಿಸಿದವನು ತಾನೇ ! ಪುಣೆಯಲ್ಲಿ ಶ್ರೀಮನ್ ಮಹಾರಾಜ್ಞಿಯವರ ತಸಬೀರಕ್ಕೆ ಅವಮಾನವನ್ನು ಮಾಡಿದವರು ತಾನೆ ಎಂದು ಆತ್ಮ ಖುಷಿಯಿಂದ ಈ ಪ್ರಕಾರವಾಗಿ ಸಾದ್ಯಂತವಾಗಿ ಜಬಾನಿಯನ್ನು ಕೊಟ್ಟಿದ್ದಾನೆ. ಈ ಮನುಷ್ಯನು ಹೇಳಿದಂತೆ ಇವನ ಎಲ್ಲ ಕೃತಿಗಳು ನಿಜವಿದ್ದ ಪಕ್ಷದಲ್ಲಿ ಇವನೊಬ್ಬನು ಕಲಿಯುಗದಲ್ಲಿಯ ಹಿಡಂಬಾ ಇಲ್ಲವೆ ಬಕಾಸುರ ದೈತ್ಯನೆಂತಲೇ ತಿಳಿಯಲಿಕ್ಕೆ ಏನೂ ತೊಂದರೆ ತೋರಿ ಬರುವುದಿಲ್ಲ. ಇವನು ಒಂದು ಬಾವಿಯಲ್ಲಿ ಒಗೆದ ತನ್ನ ಕೆಲವು ಹತ್ಯಾರಗಳನ್ನು ಸಹ ತೋರಿಸಿ ಕೊಟ್ಟಿದ್ದಾನಂತೆ. ಈ ಭಯಾನಕ ಮತ್ತು ವಿಲಕ್ಷಣವಾದ ನಾಟಕವು ರಂಗಭೂಮಿಯ ಮೇಲಂತೂ ಬಂದು ನಿಂತಿದೆ. ಇದರಲ್ಲಿಅಡಸೋಂಗುಗಳು ಯಾವ ಯಾವವು ಹೊರಗೆ ಬರುತ್ತವೋ ನೋಡುವಾ'.

ಪ್ರಚಲಿತ ಸುದ್ಧಿಯನ್ನು ನಿಖರವಾಗಿ ಹೇಳಿದಂತೆಯೂ ಆಗಿರಬೇಕು. ಅದು ಆಳುವವರಿಗೆ ಬರ್ಷಣವೂ ಆಗಿರಬಾರದು. ಅದರಿಂದಾಗಿ ಜನರಲ್ಲಿ ನಡೆದ ಘಟನೆಗಳ ಅರಿವಾಗುತ್ತಿತ್ತು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿಯೂ ದೊರೆಯುತ್ತಿತ್ತು.

ಅದರಂತೆ 'ವಿವಿಧ ವಾರ್ತೆಗಳು' ಎಂಬಶೀರ್ಷಿಕೆ ಕೂಡ ರಂಜನೀಯ ಹಾಗೂ ವಾಚನೀಯವಾಗಿರುತ್ತಿತ್ತು. ಅದೇ ಸಂಚಿಕೆಯ ಒಂದು ವಾರ್ತೆ ಇಂದಿಗೂ ಓದಲು ಅರ್ಹವಾಗಿದೆ.

'ಕ್ರಿಕೆಟ್ ಬಹಾದ್ದೂರನಾದ ರಣಜೀತಸಿಂಗನ ಕ್ರಿಕೆಟ ಆಟದ ಬಗ್ಗೆ ಒಂದು ಬುಕ್ಕು ಬರೆದು ಛಾಪಿಸಿ ೫ ಗಿನಿಗೆ ಒಂದು ಪ್ರತಿಯಂತೆ ಮಾರಾಟಕ್ಕಿಡಲು ದಿವಸದೊಳಗೆ ಛಾಪಿಸಿದ ೧೦,೦೦೦ ಪ್ರತಿಗಳೆಲ್ಲ ಖರ್ಚಾದವು. ಇದೇ ಇಂಗ್ಲೆಂಡಿನ ನಿವಾಸಿಗಳು ರಣಜೀತ ಸಿಂಗನಿಗೆ ಕೊಟ್ಟ ಇನಾಮು ಎಂದು ತಿಳಿಯಬೇಕು.'

ಇಹವೃತ್ತ ಅಥವಾ ಇಹವಾರ್ತೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಆ ವಾರದ ಸ್ಥಳೀಯ ಹವಾಮಾನ ಹಾಗೂ ವಾರದ ವಿಶೇಷ ದಿನಗಳ ಉಲ್ಲೇಖ ಇದೆ. ಆಡು ಭಾಷೆಯ ಬಳಕೆಯ ದೃಷ್ಟಿಯಿಂದ ೨೩-೩-೧೯೧೨ ಇಹ ವಾರ್ತೆಯನ್ನು ನೋಡಬಹುದು.

ಬಿಸಿಲು ಅಸಹ್ಯವಾಗಿದೆ. ಈ ವರುಷ ಹೋಳಿ ಹುಣ್ಣಿಮೆಯ ಸುತ್ತ ಆಗುವ ಒಂದೆರಡು ಅಡ್ಡ ಮಳೆಗೂ ಇಲ್ಲದ್ದರಿಂದ ನೀರಿನ ಪುರವಠೆಯು ಬಹಳ ಕಡಿಮೆಯಾಗಿದೆ. ಹವೆ ಚೆನ್ನಾಗಿದೆ. ರೋಗಾದಿಗಳು ಏನೂ ಇಲ್ಲ.

ಪೇಟೆಯ ದಾರಣೆಯಲ್ಲಿ ಅಂದಿನ ಪೇಟೆಯ ಎಲ್ಲ ವಸ್ತುಗಳ ಧಾರಣೆಯ ಉಲ್ಲೇಖವಿದೆ. ಸರಕಾರೀ ಗೆಜೆಟಿನಲ್ಲಿ ಗವರ್ನರಿಂದ ಹಿಡಿದು ತಾಲೂಕಿನ ಶಿರಸ್ತೇದಾರನವರೆಗಿನ ಆ ವಾರದಲ್ಲಿನ ಅವರ ಓಡಾಟದ ವಿವರ ಇದೆ. ವರ್ಗಾ ವರ್ಗಿಯ ಶೀರ್ಷಿಕೆಯಲ್ಲಂತೂ ನೌಕರದಾರರಿಂದಲೇ ಪ್ರಾರಂಭವಾದ

ಪತ್ರಿಕೆಯಾದ್ದರಿಂದ ಸವಿವರವಾಗಿ ಅವರ ಮೂಲ ವೇತನದ ಉಲ್ಲೇಖ ಕೂಡ ಇರುತ್ತಿತ್ತು. ಎಷ್ಟೋ ಸಲ ಇದಕ್ಕಾಗಿಯೇ ಪ್ರತ್ಯೇಕ ಪುರವಣಿಯನ್ನು ಕೂಡ ಹೊರಡಿಸಲಾಗಿದೆ. ಮಾದರಿಗೆಂದು ೧-೪-೧೯೯೧ರ ಪುರವಣಿಯಲ್ಲಿರುವ ಒಂದು ವರ್ಗಾವರ್ಗಿಯನ್ನು ನೋಡಬಹುದು.

ಮುದ್ದೇಬಿಹಾಳ ತಾದ ೨೫ರು ಯದ ಕಾರಕೂನ ರಾ ಶೇಷೋ ವೆಂಕಟೇಶ ಇವರು ಪೆನ್ಶನ್ ತೆಗೆದುಕೊಂಡಿದ್ದರಿಂದ ಇವರ ಜಾಗಕ್ಕೆ ಬದಾಮಿ ತಾದ ೨೫ರುದ ಕಾರಕೂನ ವಾಸುದೇವ ಕೃಷ್ಣ ದಿವೇಕರ ಇವರಿಗೆ ಮತ್ತು ಅವರ ಜಾಗಕ್ಕೆ ರಾ ರಾಘವೇಂದ್ರ ಮಂಗೇಶ ಉಧಿಯಾರವರ ಬಿ.ಎ. ಇವರ ನೇಮಕ ಆಗಿರುತ್ತದೆ.

ಪತ್ರಿಕೆಯನ್ನು ವೈವಿಧ್ಯಪೂರ್ಣವಾಗಿ ಬೆಳೆಸುವಲ್ಲಿ ಗುಂಡೇರಾವ ರಾಮಚಂದ್ರರಾವ ಮಣೂರಕರ ಅವರ ಪಾತ್ರ ಹಿರಿದಾಗಿದೆ. ಅವರು ಸ್ವತಃ ಸಾಹಿತಿಗಳೂ, ತುಂಬ ಓದಿಕೊಂಡವರೂ ಆಗಿದ್ದರೆಂದು ಕಾಣುತ್ತದೆ. ಪತ್ರಿಕೋದ್ಯಮದ ಕುರಿತು ನಿರ್ದಿಷ್ಟ ದೃಷ್ಟಿಕೋನವನ್ನು ಇಟ್ಟುಕೊಂಡವರಾಗಿದ್ದರು. ೧೯೦೪ರ ನಂತರ ಸಾಹಿತ್ಯ ಕಲೆಗಳ ಕುರಿತು ವಿಶೇಷ ಶೀರ್ಷಿಕೆಗಳನ್ನು ಪ್ರಾರಂಭಿಸಿದರು. ಆ ಹೊತ್ತಿಗೆ ನಾಡಿನಲ್ಲಿ ಪರಿಚಿತವಾಗುತ್ತಿದ್ದ ಕಾದಂಬರಿಯ ಪ್ರಕಾರವನ್ನು ಆಗಲೇ ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಲು ಪ್ರಾರಂಭಿಸಿದರು. ಅವರವೆ ಕೆಲವು ಕಾದಂಬರಿಗಳು ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗಿವೆ. ಬಂಕಿಮಚಂದ್ರ ಚಟರ್ಜಿ ಅವರ 'ಮೃಣಾಲಿನಿ' ಎಂಬ ಕಾದಂಬರಿ ಇವರಿಂದಲೇ ಅನುವಾದಿಸಲ್ಪಟ್ಟಿದ್ದು ಅದು ಮೊದಲು ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟಗೊಂಡು ಆನಂತರ ಪುಸ್ತಕ ರೂಪದಲ್ಲಿ ಪ್ರಕಟವಾದ ಉಲ್ಲೇಖ ಪತ್ರಿಕೆಯಲ್ಲಿ ದೊರೆಯುತ್ತದೆ. ಅದರಂತೆ 'ರಾಜಾ ತೋಡರಮಲ್ಲ' 'ವೃತಧಾರಿಣಿ' ಎಂಬ ಕಾದಂಬರಿಗಳ ಹೆಸರನ್ನು ಕೂಡ ಇಲ್ಲಿ ಉಲ್ಲೇಖಿಸಬಹುದು. ಅನೇಕ ಹೊಸ ಕವಿಗಳಿಗೂ ಸಾಹಿತಿಗಳಿಗೂ ಪ್ರಸಿದ್ಧಿಯನ್ನು ತಂದುಕೊಟ್ಟ ಶ್ರೇಯಸ್ಸು ಈ ಪತ್ರಿಕೆಯದಾಗಿದೆ. 'ಕನ್ನಡ ವಾಮನ' ಎಂಬ ಅಂಕಿತದ ವಾಮನ ಸಾವಳಗಿ ಅವರ ಅನೇಕ ಕವಿತೆಗಳನ್ನು 'ನನ್ನ ಕವಿತೆಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಿಸಲಾಗಿದೆ. ಧೋಂಡೋ ನರಸಿಂಹ ಮುಳಬಾಗಿಲ ಅವರ 'ಮಾಂಗಲ್ಯ ಬಂಧನ' ಎಂಬ ಖಂಡ ಕಾವ್ಯವು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದ್ದು ನಾಲ್ಕು ವಾರ ಪ್ರಕಟವಾಗಿದೆ. ಜೊತೆಗೆ ಅಂದಿನ ಖ್ಯಾತನಾಮರಾದ ಕೆರೂರ ವಾಸುದೇವಾಚಾರ್ಯ , ನಾ.ವೆಂ. ಕುರುಡಿ, ಕೃ.ಶ್ರೀ, ಹನಗುಂದ, ನಾ.ಶ್ರೀ ರಾಜಪುರೋಹಿತ ಅವರ ಲೇಖನಗಳೂ,ಸ್ಥಳೀಯರಾದ ಜೆ.ಆರ್. ಕುಲಕರ್ಣಿ ಅನಿಖಿಂಡಿ ಮಾಸ್ತರು, ತಿರುಮಲ ಕುಲಕರ್ಣಿ ಮೊದಲಾದವರ ಬರಹಗಳೂ ಇರುತ್ತಿದ್ದವು. 'ಪ್ರಸಾದ' ಕುರಿತು ಆರ್.ಜಿ,ಹಬ್ಬು ಹಾಗೂ ಸೋಹಂ ಅವರ ಲೇಖನಗಳು ಉಲ್ಲೇಖನಾರ್ಹವಾಗಿದೆ.

ಬಿಜಾಪುರದ ಕರ್ನಾಟಕ ವೈಭವ ವಾರ ಪತ್ರಿಕೆ ಕನ್ನಡ ಬಲ್ಲ ಎಲ್ಲ ಪ್ರದೇಶಗಳ ಜನರನ್ನು ಒಂದುಗೂಡಿಸುವಲ್ಲಿ ಶ್ರಮಿಸಿತು. ಅದರಲ್ಲಿಯ ವಿವಿಧ ವಿಷಯಗಳು ಜನರನ್ನು ಕನ್ನಡದಲ್ಲಿ ಓದಲು ಹಚ್ಚಿದವು. ಸಾಮಾನ್ಯ ಜನರೂ ಆಕರ್ಷಕರಾಗುವಂತೆ ಸುದ್ಧಿಗಳು ಇರುತ್ತಿದ್ದವು.

ಕಾರವಾರ - ಹುಬ್ಬಳ್ಳಿ ರೈಲು ಮಾರ್ಗ ಇಂದಿಗೂ ಆ ಭಾಗದ ಜನರಿಗೆ ಬಿಸಿಲು ಕುದುರೆಯಾಗಿಯೇ ಉಳಿದಿದೆ. ಆದರೆ ಕಾರವಾರ - ಹುಬ್ಬಳ್ಳಿ ರೈಲು ಮಾರ್ಗದ ಸರ್ವೇ ಕೆಲಸ ಈ ದೇಶಕ್ಕೆ ರೈಲು ಮಾರ್ಗ ಬರುವ ದಿನಗಳಲ್ಲೇ ಆಗಿತ್ತು ಎಂದರೆ ನಂಬಲು ಆಗಲಿಕ್ಕಿಲ್ಲ. ಅದಕ್ಕೀಗ 'ಬೇಡಿಕೆಯ ೧೫೦ರ ಸಂಭ್ರಮ' ಎಂದರೆ ತಪ್ಪಾಗಲಿಕ್ಕಿಲ್ಲ. ದಿನಾಂಕ ೨೭-೬-೧೯೧೪ರಂದು ಕರ್ನಾಟಕ ವೈಭವ ಪತ್ರಿಕೆ ಈ ಕುರಿತು ಒಂದು ಸುದೀರ್ಘ ಅಗ್ರ ಲೇಖನವನ್ನು ಬರೆದು ಪ್ರಕಟಿಸಿದೆ. 'ಕಾರವಾರ - ಹುಬ್ಬಳ್ಳಿ ರೇಲ್ವೆ' ಎಂಬುದು ಈ ಲೇಖನದ ತಲೆ ಬರಹ. ಸುಮಾರು ಎರಡೂವರೆ ಅಂಕಣದಷ್ಟು ಅಗ್ರಲೇಖನವಿದೆ. ಆದರ ಕೆಲವು ಭಾಗಗಳು ಕನ್ನಡಿಗರಿಗೆ ಇಂದಿಗೂ ಅರ್ಥವತ್ತಾಗಿ ಕಾಣಬಹುದು. ಅಂದಿನಿಂದಲೂ ಕೆಲವು ಸ್ವಾರ್ಥ ಸಾಧಕರು ಈ ಕೆಲಸವನ್ನು ಆಗಗೊಡದಂತೆ ಹೇಗೆ ನೋಡಿಕೊಳ್ಳುತ್ತಿದ್ದಾರೆ ಎಂಬುದು ಗಮನಾರ್ಹವಾಗಿದೆ. ಆ ಅಗ್ರ ಲೇಖನ ಹೀಗೆ ಪ್ರಾರಂಭವಾಗುತ್ತದೆ.

''ನಿಸರ್ಗತಃ ಕಾರವಾರ ಬಂದರು ಹಿಂದೂಸ್ತಾನದ ಪಶ್ಚಿಮ ದಂಡೆಯಲ್ಲಿರುವ ಎಲ್ಲಾ ಬಂದರುಗಳಿಗಿಂತಲೂ (ಮುಂಬಯಿ - ಕರಾಚಿಗಳನ್ನೊಳಗೊಂಡು) ನೌಕಾ ವ್ಯವಸಾಯಕ್ಕೆ ಬಹು ಅನುಕೂಲವಾದದ್ದು' ಎಂದು ಆದರ ಮಹತ್ವವನ್ನು ಹಿನ್ನಾಡಿನಲ್ಲಿ ಬೆಳೆಯುವ ಅರಣ್ಯ ಸಂಪತ್ತು ಮಸಾಲೆ ಸಾಮಾನು, ಹತ್ತಿ ಬೆಳೆ ಇತ್ಯಾದಿಗಳನ್ನು ಪ್ರಸ್ತಾಪಿಸುತ್ತ ''ಈ ಮಾತು ನಮ್ಮ ಸರಕಾರದವರ ಲಕ್ಷ್ಯಕ್ಕೆ ಬರಲಿಲ್ಲವೆಂತಲ್ಲ. ಬಹಳ ವರುಷಗಳ ಪೂರ್ವದಲ್ಲಿ ಅಂದರೆ ಸನ್ ೧೮೬೩ರಲ್ಲಿ ಕಾರವಾರದಿಂದ ಗದುಗಿನ ವರೆಗೆ ಲೋಹಮಾರ್ಗವನ್ನು ಮಾಡಬೇಕೆಂದು ಆಲೋಚಿಸಿ ಸರಕಾರದವರು ಸರ್ವೇ ಮುಂತಾದ್ದನ್ನು ಮಾಡಿಸಿದ್ದರು. ಸರ್ವೇ ಕೆಲಸ ಸನ್ ೧೮೬೯ರಲ್ಲಿ ಮುಗಿದು ಮುಂದೆ ಭವತಿ - ನ ಭವತಿಯಾಗಿ ಸನ್ ೧೮೭೯ನೇ ವರ್ಷ ಆ ಕಾರ್ಯವು ನಿರಾಕರಿಸಲ್ಪಟ್ಟಿತು.

ಹೀಗೆ ಕಾರವಾರ - ಹುಬ್ಬಳಿ ಲೋಹ ಮಾರ್ಗ ಚರಿತ್ರೆಯನ್ನು ವಿವರಿಸುತ್ತ ಮುಂದೆ ಅದು ನಿರಾಕರಿಸಲ್ಪಟ್ಟ ಕಾರಣಗಳನ್ನು ಕೂಡ ಹೇಳಿದ್ದಾರೆ. ಮುಂಬಯಿ - ಕರಾಚಿಯ ವ್ಯಾಪಾರಸ್ಥರು, ಕಾರವಾರಕ್ಕೆ ಲೋಹ ಮಾರ್ಗವು ಬಂದು ಕಾರವಾರ ಬೆಳೆದರೆ ಮುಂಬಯಿ ವರ್ಚಸ್ಸು ಇಳಿಯುವುದೆಂಬ ಭೀತಿಯಿಂದ ರೇಲ್ವೆಗೆ ಅಡ್ಡಗಾಲು ಹಾಕಿದರೆಂದು ಹೇಳುತ್ತಾರೆ. ಇದರ ಲಾಭವನ್ನು ಅಂದಿನ ಪೋರ್ಚುಗೀಸ್ ಸರಕಾರ ಪಡೆದು ಲೊಂಡಾ- ಮರ್ಮಗೋವಾ ರೈಲು ಮಾರ್ಗವನ್ನು ರಚಿಸಿದರು. ಅದಕ್ಕಾಗಿ 'ಬ್ರಿಟಿಷ್ ಹಿಂದೂಸ್ಥಾನದ ದುಡ್ಡು ಅನ್ಯಾಯವಾಗಿ ಪರಕೀಯರಾದ

ಪೋರ್ಚುಗೀಸರ ಪಾಲಾಗುವ ಅನರ್ಥ ಹೆಚ್ಚಿನದು ಎಂದು ಹೇಳುತ್ತ, ''ರಾಯಚೂರಿನಿಂದ ಗದುಗಿನವರೆಗೆ ಅಗತಕ್ಕ ಲೋಹಮಾರ್ಗದ ಕೆಲಸವು ಮುಗಿಯಿತೆಂದರೆ ನಿಜಾಮರ ರಾಜ್ಯದಲ್ಲಿಯ ವ್ಯಾಪಾರವೆಲ್ಲ ಪೋರ್ಚುಗೀಸರ ಕೈಯಲ್ಲಿಯೇ ಆಗುವುದಿಲ್ಲವೇ ?'' ಎಂದು ಬ್ರಿಟಿಷರನ್ನು ಎಚ್ಚರಿಸಿದ್ದಾರೆ. ಅಂದರೆ ರಾಯಚೂರು - ಮಾನ್ವಿ - ಸಿಂಧನೂರ - ಕುಷ್ಟಗಿ - ಗದಗು - ರೈಲು ಮಾರ್ಗ ಕೂಡ ಅಂದಿನಿಂದಲೇ ಬೇಡಿಕೆಯಲ್ಲಿತ್ತು ಮತ್ತು ಬಹುಶಃ ಆದರ ಕೆಲಸವನ್ನು ಕೈಗೊಂಡಿದ್ದರೇನೋ. ಅದು ಕೂಡ ಇಂದಿಗೂ ಆಗಿಲ್ಲ ಎಂಬ ಮಾತು ಬೇರೆ. ಆದರೆ ಕರ್ನಾಟಕ ವೈಭವವು ಬ್ರಿಟಿಷರಿಗೆ ಎಚ್ಚರ ಕೊಡುತ್ತ ಜನರನ್ನು ಎಚ್ಚರಿಸಿದ್ದು ಬಹು ಮುಖ್ಯವಾಗಿದೆ. - ''ವರ್ತಮಾನ ಪತ್ರಕರ್ತರಲ್ಲದೆ ಪ್ರಜಾ ಜನರಾದರೂ ರಾಶಿ -ರಾಶೀ ಅರ್ಜಿಗಳನ್ನು ಮಾಡಿ ಗೌರ್ನಮೆಂಟು ಹೌಸಿನಲ್ಲಿ ಅವುಗಳನ್ನು ಇಡಲಿಕ್ಕೆ ಕೂಡ ಸ್ಥಳವಿಲ್ಲದಂತೆ ಮಾಡಿದಲ್ಲಿ ಬೇಗನೆ ವಿಚಾರವಗುವುದೆಂದು ನಮ್ಮ ನಿಶ್ಚಯವಾದ ತಿಳಿವಳಿಕೆ ಇರುತ್ತದೆ' ಎಂದು ಲೇಖನವನ್ನು ಮುಗಿಸಿದ್ದಾರೆ. ಪಾಪ ಅವರಿಗೇನು ಗೊತ್ತು . ಅದು ಇಂದಿನವರೆಗೂ ಕಾರ್ಯಗತಗೊಂಡಿಲ್ಲವೆನ್ನುವುದು. ಈ ರೈಲು ಮಾರ್ಗಗಳ ವಿಚಾರಣೆ ನಡೆದು ನೂರನಲ್ವತ್ತು ವರುಷಗಳಿಗೂ ಮೇಲಾಯಿತು. ಅಗ್ರ ಲೇಖನ ಬರೆದು ತೊಂಭತ್ತು ವರುಷಗಳಾದವು. ಇದೀಗ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ಐವತ್ತೆಂಟು ವರುಷಗಳಾದವು. ಇದೀಗ ಹುಬ್ಬಳ್ಳಿಯಿಂದ ಕಾರವಾರಕ್ಕೆ, ಗದುಗಿನಿಂದ - ರಾಯಚೂರಿಗೆ ರೈಲು ಇಲ್ಲ. ಮಾತಿನ ರೈಲಿಗೆ ನಿಲ್ದಾಣವಿಲ್ಲ !

ಹೀಗೆ ವಿಜಾಪುರದಿಂದ ಹೊರಡುತ್ತಿದ್ದ ಪತ್ರಿಕೆಯೊಂದು ಕರ್ನಾಟಕದ ಹಿತ ಸಾಧಿಸುವಲ್ಲಿ ದೂರದ ಕಾರವಾರ ಬಂದರಿನ ಅಭಿವೃದ್ಧಿಯತ್ತ ಲಕ್ಷ್ಯ ಹಾಯಿಸಿತು. ಗದಗ - ರಾಯಚೂರು ಮಾರ್ಗದ ಬಗ್ಗೆ ಚಿಂತಿಸಿತು. ಇದು ನಾಡಿನ ಹಿತವೆಂದಾದರೆ, ಧಾರ್ಮಿಕವಾಗಿ ಕೂಡ ಪತ್ರಿಕೆಯ ದೃಷ್ಟಿ ತುಂಬ ಕ್ರಾಂತಿಕಾರಿಯಾಗಿತ್ತು. ಸಂಪಾದಕರು ಮತ್ತು ವ್ಯವಸ್ಥಾಪಕರು ಬ್ರಾಹ್ಮಣರಾಗಿದ್ದರು. ಆದರೂ ಕೂಡ ಕಳೆದ ಶತಮಾನದ ಮೊದಲ ಎರಡು ದಶಕಗಳಲ್ಲಿಯೇ ಅಂದಿನ ಧಾರ್ಮಿಕ ಮುಖಂಡರನ್ನು ಮಠಾಧೀಶರನ್ನು ಎದುರು ಹಾಕಿಕೊಂಡು ಉಗ್ರ ಅಗ್ರ ಲೇಖನಗಳನ್ನುಬರೆದಿದ್ದಾರೆ. ಜನ - ಜಾಗ್ರತಿಯಲ್ಲಿ ಭಾಗವಹಿಸಿ ಜನಸಾಮಾನ್ಯರಿಂದ ಪತ್ರಗಳನ್ನು ಬರೆಯಿಸುವುದಲ್ಲದೆ ಮಠಾಧೀಶರೊಂದಿಗೆ ಬಹಿರಂಗ ಚರ್ಚೆಗಳನ್ನೂ ನಡೆಸಿದ್ದಾರೆ.

ಕರ್ನಾಟಕದಿಂದ ಐ.ಸಿ.ಎಸ್. ಪರೀಕ್ಷೆ ಪಾಸಾದ ಪ್ರಥಮ ಕನ್ನಡಿಗರೆಂದರೆ ಬಹುಶಃ ಬಾಗಲಕೋಟೆಯ ಜಿ.ವಿ. ಬೇವೂರ ಅವರು. ತೊಂಭತ್ತು ವರುಷಗಳ ಹಿಂದೆ ಅವರು ಐಸಿಎಸ್ ಪರೀಕ್ಷೆ ಪಾಸಾಗಿ ಬಂದಾಗ ಕರ್ನಾಟಕದ ಉಚ್ಚ ವರ್ಗದ ಬ್ರಾಹ್ಮಣರಲ್ಲಿ ಒಂದು ರೀತಿಯ ಕ್ರಾಂತಿಯೇ ಉಂಟಾಯಿತೆಂದು ತೋರುತ್ತದೆ. ಈ ಹಿಂದೆ ಧಾರವಾಡದ ರಾ.ಹ. ದೇಶಪಾಂಡೆ ಅವರು ಪ್ರಥಮ ಎಮ್.ಎ.

ಪದವೀಧರರಾಗಿ ಬಂದಾಗ ಸ್ವಾಗತಿಸಿದ್ದಂತೆ ಬೇವೂರರಿಗೆ ಸ್ವಾಗತವಿರಲಿಲ್ಲ. ಪ್ರತಿಯಾಗಿ ಬಹಿಷ್ಕಾರವಿತ್ತು. ಐಸಿಎಸ್ ಪರೀಕ್ಷೆಗಾಗಿ ಅಂದು ಅವರು ಸಾಗರೋಲ್ಲಂಘನ ಮಾಡಿ ಇಂಗ್ಲೆಂಡಿಗೆ ಹೋಗಿ ಬಂದದ್ದರಿಂದ ಅವರು ಬ್ರಾಹ್ಮಣ ವರ್ಗದವರ ಬಹಿಷ್ಕಾರಕ್ಕೆ ಪಾತ್ರರಾಗಬೇಕಾಯಿತು. ಆಗ 'ಕರ್ನಾಟಕ ವೈಭವ' ಪತ್ರಿಕೆಯಲ್ಲಿ ಸುಮಾರು ಐದು ವರುಷಗಳ ಕಾಲ ತುಂಬ ಖಾರವಾಗಿ ಚರ್ಚೆ ನಡೆದಿದೆ. ಬ್ರಾಹ್ಮಣ ಸಂಪಾದಕರ ಅಗ್ರ ಲೇಖನ ಪತ್ರಿಕೆಯ ಕ್ರಾಂತಿಕಾರಕ ಧೋರಣೆಯನ್ನು ಎತ್ತಿ ತೋರಿಸುತ್ತದೆ. ದಿನಾಂಕ ೨೩-೮-೧೯೧೩ರಂದು ಬರೆದ 'ಮಿ. ಬೇವೂರರಿಗೆ ಬಹಿಷ್ಕಾರ' ಎಂಬ ಅಗ್ರ ಲೇಖನ ಬ್ರಾಹ್ಮಣರ ಕೆಲವು ವಿಚಾರಗಳಿಗೆ ಇಂದಿಗೂ ಮಾರ್ಗದರ್ಶಿಯಾಗಿವೆ.

ಮಿ. ಬೇವೂರರ ಕುರಿತು ಕಿರು ಪರಿಚಯ ಕೊಡುತ್ತ ಅವರು ಪರದೇಶ ಗಮನದ ಉದ್ದೇಶವನ್ನು ಸ್ಪಷ್ಟಪಡಿಸುತ್ತ ಹೀಗೆ ಹೇಳಿದ್ದಾರೆ. ''ಮಿ. ಬೇವೂರರ ಪರದೇಶ ಗಮನವು ಅವರ ಕೇವಲ ಸ್ವಾರ್ಥದ್ದಾಗಿರದೆ ದೇಶ ಹಿತಾರ್ಥದ್ದಾಗಿದೆ. ಇಂಥ ಸಾಹಸಿಗರು ಪರದೇಶ ಗಮನ ಮಾಡದಿದ್ದರೆ ರಾಜ್ಯ ಕಾರಭಾರ, ಕೈಗಾರಿಕೆ, ವ್ಯಾಪಾರ, ಮುಂತಾದ ಯಾವ ಕ್ಷೇತ್ರದ ಸುಧಾರಣೆಯೂ ನಮ್ಮ ದೇಶವು ಮುಂದೆ ಹೆಜ್ಜೆ ಇಡುವಂತಿಲ್ಲ. ಅದರ ದಾರಿದ್ರ್ಯವು ದೂರಾಗುವುದಿಲ್ಲ. ಹಿಂದಕ್ಕೆ ಕಚನು ದೈತ್ಯರ ದೇಶಕ್ಕೆ ಹೋಗಿ ಶುಕ್ರಾಚಾರ್ಯರಿಂದ ಸಂಜೀವಿನಿ ಮಂತ್ರವನ್ನು ಕಲಿತು ಬಂದು ದೇವತೆಗಳನ್ನು ಗೆಲಿಸಿದನಲ್ಲವೆ ? ಆಗ ಅವನಿಗೆ ಯಾಕೆ ಬಹಿಷ್ಕಾರ ಹಾಕಲಿಲ್ಲ?''ಇಲ್ಲಿ ಸಂಪಾದಕರ ಬರವಣಿಗೆಯನ್ನು ಗಮನಿಸಬೇಕು. ವೇದ - ಪುರಾಣಗಳಿಂದ ದೃಷ್ಟಾಂತಗಳನ್ನು ಕೊಡುವಾಗಲೂ ಪ್ರಸ್ತುತ ಪರಿಸ್ಥಿತಿಗೆ ಹೊಂದುವಂತೆ ದೈತ್ಯರ ದೇಶಕ್ಕೆ ಹೋಗಿ ಸಂಜೀವಿನಿ ತಂದು ಗೆಲಿಸಿದಂತೆ - ಇಲ್ಲಿ ಕೂಡ ಪಾಶ್ಚಾತ್ಯ ದೈತ್ಯರ ಹತ್ತಿರ ಹೋಗಿ ಅವರ ಇಂಗ್ಲಿಷ್ ಶಿಕ್ಷಣ ಪಡೆದು ಅವರನ್ನು ಸೋಲಿಸುವ ಉದ್ದೇಶ ಸ್ಪಷ್ಟವಾಗಿದೆ. ಜೊತೆಗೆ 'ಬಹಿಷ್ಕಾರ'ಕ್ಕೆ ಯಾವ ಪ್ರಾಚೀನ ಆಧಾರಗಳೂ ಇಲ್ಲವೆಂಬುದನ್ನು ಹೇಳಬೇಕಾಗಿದೆ. ಕಚನೊಂದಿಗೆ ಸಂಪಾದಕರು ತಮ್ಮ ಅಗ್ರ ಲೇಖನದಲ್ಲಿ ಇಂಥ ಹಲವಾರು ಪ್ರಾಚೀನ ದೃಷ್ಟಾಂತಗಳನ್ನು ಉದಾಹರಿಸಿದ್ದಾರೆ.

ಕರ್ನಾಟಕ ವೈಭವ ಪತ್ರಿಕೆಯು ಕ್ರೌನ ಅರ್ಧ ಸೈಜಿನ ನಾಲ್ಕು ಪುಟಗಳಲ್ಲಿ ಪ್ರತಿ ಶನಿವಾರ ಸಾಂಯಕಾಲ ಪ್ರಕಟವಾಗುತ್ತಿತ್ತು. ವಾರ್ಷಿಕ ಚಂದಾ ೩ ರುಪಾಯಿ. ಬಿಡಿ ಸಂಚಿಕೆ ೧ ಅಣೆ (ಇಂದಿನ ಆರು ಪೈಸೆ) ಪತ್ರಿಕೆಗೆ ಸಾಕಷ್ಟು ಪ್ರಸಾರ ಹಾಗೂ ಪ್ರಸಿದ್ಧಿ ಇದ್ದಿತ್ತಾದರೂ ಆರ್ಥಿಕವಾಗಿ ಅಷ್ಟೇನೂ ಚೆನ್ನಾಗಿ ಇರಲಿಲ್ಲವೆಂದು ಕಾಣುತ್ತದೆ. ೩-೧-೧೯೧೪ರ ಸಂಪಾದಕೀಯದಲ್ಲಿ 'ಇಂದಿಗೆ ಈ ಪತ್ರಿಕೆ ಆರಂಭವಾಗಿ ೨೧ ವರುಷಗಳಾದವು. ನಮ್ಮ ಕರ್ನಾಟಕದಲ್ಲಿ ಇದು ಇಷ್ಟು ದಿನ ಬಾಳಿದ್ದೇ ದೊಡ್ಡ ಮಾತು' ಎಂದು ಹೇಳುತ್ತ ಪತ್ರಿಕೆಯ ಕಷ್ಟ ನಷ್ಟಗಳನ್ನು ತೋಡಿಕೊಂಡಿದ್ದಾರೆ. ಆಗಲೂ ಜಿ.ಆರ್. ಮಣೂರಕರ ಅವರೇ ಪತ್ರಿಕೆಯ ಸಂಪಾದಕರಾಗಿ ಇದ್ದರು.

ಕ್ರಿ.ಶ. ೧೯೪೨ರಿಂದ ೧೯೨೨ರವರೆಗೆ ಕರ್ನಾಟಕ ವೈಭವದ ಒಂದು ಘಟ್ಟ ಮುಗಿದಂತೆ ಅನಂತರದ ದಿನಗಳೆಂದರೆ, ದೇಶದಲ್ಲಿಯ ರಾಷ್ಟ್ರೀಯತೆಯ ಜಾಗ್ರತೆ, ಮಹಾತ್ಮಾ ಗಾಂಧಿಯವರ ಉದಯ, ರಾಷ್ಟ್ರೀಯ ಕಾಂಗ್ರೆಸ್ಸಿನ ವ್ಯಾಪಕ ಪ್ರಭಾವದಿಂದ 'ಕರ್ನಾಟಕ ವೈಭವ'ವು ಪೂರ್ತಿಯಾಗಿ ರಾಷ್ಟ್ರೀಯ ವಾರ ಪತ್ರಿಕೆಯಾಯಿತು. ಗುಂಡೇರಾವ ಮಣೂರಕರ ಅವರು ಮುದ್ರಕ ಪ್ರಕಾಶಕರಾಗಿ ಉಳಿದು ದೇಶಭಕ್ತ ಜಯರಾವ ದೇಶಪಾಂಡೆ ಅವರು ೧೯೨೧ರಲ್ಲಿ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿದರು. ಅವರ ವ್ಯಕ್ತಿತ್ವ ಅಪರೂಪವಾದದ್ದು. ಅಲ್ಪಾಯುಷಿಗಳಾಗಿದ್ದ ಅವರು ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡ ಒಂದೇ ವರುಷದಲ್ಲಿ ತೀರಿ ಕೊಂಡಿದ್ದರೂ ಅವರ ಪ್ರಸಿದ್ಧಿ ದೇಶಾದ್ಯಂತ ಹರಡಿತ್ತೆಂದು ಪತ್ರಿಕೆಯು ಹೇಳುತ್ತದೆ. ಅವರ ಪ್ರಥಮ ಪುಣ್ಯತಿಥಿಯಂದು ಅವರ ಕುರಿತು ಕರ್ನಾಟಕ ವೈಭವವು ರಾಯಲ್ ಅಷ್ಟಪತ್ರದ ೮೦ ಪುಟಗಳ ಸ್ಮಾರಕ ಸಚಿತ್ರ ಸಂಚಿಕೆಯನ್ನು ಹೊರಡಿಸಿತ್ತೆಂದು ಪತ್ರಿಕೆಯಲ್ಲಿಯ ಜಾಹೀರಾತು ಹೇಳುತ್ತದೆ. ದುರ್ದೈವದಿಂದ ಆ ಸ್ಮರಣ ಸಂಚಿಕೆಯು ಇಂದು ಲಭ್ಯವಿಲ್ಲ. ಜಾಹೀರಾತಿನಲ್ಲಿ ಹೇಳಿದಂತೆ ಅದರಲ್ಲಿ ಜಯರಾವ ದೇಶಪಾಂಡೆ ಅವರ ಕುರಿತು ಪಂಡಿತ ತಾರಾನಾಥರು, ಬೆನಗಲ್ ರಾಮರಾಯರು, ಕಾರ್ನಾಡು ಸದಾಶಿವರಾಯರು, ಶ್ರೀಮತಿ ಸರೋಜಿನಿ ನಾಯಿಡು, ಕಸ್ತೂರಿ ರಂಗ ಅಯ್ಯಂಗಾರ, ರಾಜೇಂದ್ರ ಪ್ರಸಾದ, ಮೊದಲಾದವರು ಲೇಖನಗಳನ್ನು ಬರೆದಿದ್ದಾರಂತೆ. ಅಲ್ಲದೆ ಜಯರಾಯರ ರಾಜಕೀಯ, ಸಾಮಾಜಿಕ, ಶಿಕ್ಷಣ ವಿಷಯಗಳನ್ನೂ ಅದರಲ್ಲಿ ಸಂಗ್ರಹಿಸಿ ಕೂಡಲಾಗಿದೆಯೆಂದು ಜಾಹೀರಾತು ಹೇಳುತ್ತದೆ. ಖಂಡಿತವಾಗಿಯೂ ಅದೊಂದು ಸ್ಮರಣೀಯ ಸಂಗ್ರಾಹ್ಯ ಸ್ಮರಣ ಸಂಚಿಕೆಯಾಗಿರಬೇಕು. ಕರ್ನಾಟಕದ ಸಿಂಹ ಎಂದು ಹೆಸರಾಗಿದ್ದ ದೇಶಭಕ್ತ ಗಂಗಾಧರರಾವ ದೇಶಪಾಂಡೆ ಅವರ ಮಾತಿನಲ್ಲಿ ಹೇಳವುದಾದರೆ, 'ಜಯರಾವ ದೇಶಪಾಂಡೆ ಅವರಿಗೆ ಕನ್ನಡ ನಾಡಿನ ಮೇಲೂ, ನುಡಿಯ ಮೇಲೂ ಅತ್ಯಂತ ಪ್ರೇಮವಿತ್ತು. ಕರ್ನಾಟಕವನ್ನು ಮುಂದೆ ತಂದು ಇಡೀ ಹಿಂದೂಸ್ತಾನದಲ್ಲಿ ಅದರ ಹೆಸರು ಮಾಡಬೇಕೆಂದು ಅವರ ಆಕಾಂಕ್ಷೆ ಇತ್ತು. ನಾನೂ ನಿಮ್ಮ ಸೇವಕನೇ ಆಗಿದ್ದರೂ ಕರ್ನಾಟಕದ ಬಗ್ಗೆ ಇಷ್ಟು ಅಭಿಮಾನ ನನಗಿದ್ದಿಲ್ಲ, ಎಂದು ಹೇಳಿದ್ದಾರೆ. ಅವರು ೨೩-೬-೧೯೨೨ರಲ್ಲಿ ಅಕಾಲ ಮರಣ ಹೊಂದಿದ್ದು ನಾಡಿನ ದುರ್ದೈವ! ಅವರ ಹೆಸರು ಇಂದು ಯಾರಿಗೂ ಗೊತ್ತಿಲ್ಲ! ಸ್ವಾತಂತ್ರ್ಯ ಚಳುವಳಿಯ, ಕರ್ನಾಟಕ ಏಕೀಕರಣ ಚಳುವಳಿಯ ಯಾವ ದಾಖಲೆಗಳಲ್ಲೂ ಅವರ ಹೆಸರು ಸೇರದಿದ್ದುದು ಆಶ್ಚರ್ಯವೆನಿಸುತ್ತದೆ. ಅವರ ಅಕಾಲ ಮರಣದ ಅನಂತರ ತುಸು ದಿನ ರಂಗರಾವ ತಿಳಗೂಳ ವಕೀಲರು ಪತ್ರಿಕೆಯನ್ನು ಸಂಪಾದಿಸಿದರು. ಅವರಿಗೆ ಕನ್ನಡ ಬರೆಯಲು ಬರುತ್ತಿರಲಿಲ್ಲ. ದೇವನಾಗರಿ ಲಿಪಿಯಲ್ಲಿ ಬರೆದು ಕನ್ನಡದಲ್ಲಿ ಮೊಳೆ ಜೋಡಿಸಿ ಮುದ್ರಿಸುತ್ತಿದ್ದರು!

ರಂಗರಾವ ತಿಳಗೂಳ ಅವರಿಗೆ ಸಹಾಯಕರಾಗಿ ಅದೇ ಆಗ ಬಿ.ಎ. ಪರೀಕ್ಷೆ ಕಟ್ಟಿ ಬಂದ ಮೊಹರೆ ಹಣಮಂತರಾಯರು ಇದ್ದರು. ಸುಮ್ಮನೆ ಅಡ್ಡಾಡುತ್ತಿದ್ದ ಅವರನ್ನು ಗುಂಡೇರಾವ ಮಣೂರಕರ ಅವರು ಪತ್ರಿಕೆಯ ಕಚೇರಿಗೆ ಕರೆತಂದು ಬರೆಯಲು ಹಚ್ಚಿದರೆಂದು ಮೊಹರೆ ಅವರೆ ಒಂದೆಡೆ ಹೇಳಿಕೊಂಡಿದ್ದರೆ. ಮುಂದಿನ ದ್ದಿನಗಳಲ್ಲಿ ಧಾರವಾಡದಲ್ಲಾದ ಗೋಳೀಬಾರಿನ ಬಗ್ಗೆ ಮುದವೀಡು ಕೃಷ್ಣರಾಯರು 'ಧಾರಾತೀರ್ಥವಾದ ಧಾರವಾಡ' ಎಂಬ ಲೇಖನವನ್ನು ಕರ್ನಾಟಕ ವೈಭವದ ವಿಶೇಷ ಸಂಚಿಕೆಯಲ್ಲಿ ಬರೆದಿದ್ದರು. ಅದರ ಬಹು ಭಾಗವನ್ನು ಎತ್ತಿ ಮೊಹರೆ ಹಣಮಂತರಾಯರು ಮುಂದೆ ಗೋಳೀಬಾರ ಆಗಿ ಒಂದು ವರುಷದ ಅನಂತರ ಅದರ ಸ್ಮರಣಾರ್ಥವಾಗಿ ಅಗ್ರಲೇಖನವನ್ನು ಬರೆದು ಸರಕಾರವನ್ನು ಟೀಕಿಸಿದ್ದರು. ಅದಕ್ಕಾಗಿ ತಿಳಗೂಳ ರಂಗರಾಯರನ್ನು ಬಂಧಿಸಿದರು. ಇದು ನಡೆದದ್ದು ಸಪ್ಟೆಂಬರ್ ೧೯೨೨ ರಲ್ಲಿ ಅಂದಿನಿಂದ ಮೊಹರೆ ಹಣಮಂತರಾಯರು ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕರಾದರು. ಮಧ್ಯ ಕೆಲವು ಸಮಯ ಮೊಹರೆ ಅವರು ಸೆರೆಮನೆಗೆ ಹೋದಾಗ ಕೌಲಜಗಿ ಹಣಮಂತರಾಯರು ಸಂಪಾದಕರಾಗಿದ್ದರು. ಆದರೆ ೧೯೩೩ರಲ್ಲಿ ಮೊಹರೆ ಹಣಮಂತರಾಯರು ಸಂಯುಕ್ತ ಕರ್ನಾಟಕಕ್ಕೆ ಹೋಗುವವರೆಗೂ ಅವರೇ ಕರ್ನಾಟಕ ವೈಭವದ ಸಂಪಾದಕರಾಗಿದ್ದರು.

ಕರ್ನಾಟಕ ವೈಭವದ ಅಭ್ಯಾಸವೆಂದರೆ ಕನ್ನಡ ಪತ್ರಿಕಾ ವ್ಯವಸಾಯದ ಅಭ್ಯಾಸವೂ ಹೌದು, ಮಣೂರಕರ ಗುಂಡೇರಾಯರು ಅಖಂಡ ಮೂವತ್ತು ವರುಷಗಳವರೆಗೆ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿ ದಾಖಲೆಯನ್ನು ನಿರ್ಮಿಸಿದರು. ಅವರ ಗರಡಿಯಲ್ಲಿ ತಯಾರಾದ ಮೊಹರೆ ಹಣಮಂತರಾಯರನ್ನು ಇಂದು ಕನ್ನಡ ಪತ್ರಿಕಾ ರಂಗದ ಪಿತಾಮಹ ಎಂದು ಗುರುತಿಸಲಾಗುತ್ತದೆ. ಗುಂಡೇರಾಯರನ್ನು ಪ್ರಪಿತಾಮಹ ಎಂದು ಕರೆಯಬೇಕು. ನೂರು ವರುಷಗಳ ಹಿಂದೆ ವೈವಿಧ್ಯಮಯವಾದ ಸ್ಥಿರ ಶೀರ್ಷಿಕೆಗಳೊಂದಿಗೆ ಅವರು ಪತ್ರಿಕೆಯನ್ನು ನಡೆಸಿ ತೋರಿಸಿದ್ದಾರೆ.

ಕನ್ನಡ ಭಾಷೆ ಕಳೆದ ಶತಮಾನದಲ್ಲಿ ಬೆಳೆದು ಬಂದ ಬಗೆ, ಕರ್ನಾಟಕದ ಏಕೀಕರಣದ ಚಳುವಳಿ, ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರ ಇತ್ಯಾದಿಗಳನ್ನು ಕರ್ನಾಟಕ ವೈಭವ ಹೇಳುವಷ್ಟು ನಿರ್ದುಷ್ಟವಾಗಿ ಬೇರೆ ಯಾವ ಆಧಾರಗಳೂ ದೊರೆಯಲಿಕ್ಕಿಲ್ಲ. ಇಂಥದೊಂದು ವೀರಗಾಥೆಯ ಪತ್ರಿಕೆಯನ್ನು ಗೊತ್ತಿದ್ದೋ ಗೊತ್ತಿಲ್ಲದೆಯೋ ಕನ್ನಡಿಗರು ಮರೆತು ಬಿಟ್ಟಿದ್ದೇವೆ. ಅದು ನಮ್ಮ ಸಹಜ ಗುಣ ಅಷ್ಟೆ !

✤ ✤ ✤ ✤

ಅಧ್ಯಾಯ -೧೪

• ಕನ್ನಡಿಗರನ್ನು ಬೆಸೆದ ಪತ್ರಿಕೆಗಳು

ಕನ್ನಡ ಪತ್ರಿಕೆಗಳ ಆವಿಷ್ಕಾರ, ಹರಿದು ಹಂಚಿ ಹೋದ ಕನ್ನಡಿಗರು ತಾವೆಲ್ಲ ಒಂದು ಎಂಬ ಭಾವನೆ ಬರಲು ತುಂಬ ಸಹಾಯವಾಯಿತು. ಕರ್ನಾಟಕ ವೈಭವದ ಕಥೆಯನ್ನು ತಿಳಿದಿದ್ದಾಯಿತು. ಆ ಮೊದಲಿನ ಪ್ರಯತ್ನಗಳನ್ನೂ ಗಮನಿಸಬೇಕು.

೧೮೪೩ರಲ್ಲಿ ಪ್ರಾರಂಭವಾದ 'ಮಂಗಳೂರು ಸಮಾಚಾರ' ಪತ್ರಿಕೆಯೇ ಮೊದಲ ಕನ್ನಡ ಪತ್ರಿಕೆಯೆಂದು ನಿರ್ಣೀತವಾದದ್ದಿದೆ. ಅದುವೇ ಮುಂದಿನ ವರುಷದಲ್ಲಿ 'ಕಂನಡ ಸಮಾಚಾರ'ವಾಗಿ ಬಳ್ಳಾರಿಯಿಂದ ಹೊರಡತೊಡಗಿದ್ದ ವಿಷಯವೂ ನಿಚ್ಚಳವಾದದ್ದಿದೆ. ಈ ಪತ್ರಿಕೆಯಲ್ಲಿ ಪೂರ ವರ್ತಮಾನಗಳು, ಸರಕಾರಿ ನಿರೋಪಗಳು, ಸುಬುದ್ದಿಯನ್ನು ಹೇಳುವ ಸಾಮತಿಗಳು, ಹಾಡುಗಳು, ಕಥೆಗಳು, ಮತ್ತು ಸರ್ವರಾಜ್ಯ ವರ್ತಮಾನಗಳು ಹೀಗೆ ವಿವಿಧ ಸ್ವರೂಪದಲ್ಲಿ ವಿಷಯಗಳನ್ನು ಪ್ರಕಟಿಸಲಾಗುತ್ತಿತ್ತು. ಇವುಗಳಲ್ಲಿ ಪೂರ ವರ್ತಮಾನಗಳಿಗೆ ಸ್ವಾಭಾವಿಕವಾಗಿಯೇ ಮಹತ್ವ ಬಂದು ಪ್ರತಿ ಪತ್ರಿಕೆಯಲ್ಲೂ ಇಂತಹ ವರ್ತಮಾನಗಳು ತಪ್ಪದೇ ಪ್ರಕಟವಾಗುತ್ತಿದ್ದವು.

ಪತ್ರಿಕೆಯ ಬರವಣಿಗೆ ಒಬ್ಬನದೇ ಆಗಿದ್ದರೂ ಬೇರೆಯವರು ತಮ್ಮ ಊರಿನ ಯಾವುದೊಂದು ವರ್ತಮಾನವನ್ನು ಕಳುಹಿಸುವುದಕ್ಕೆ ಸ್ವಾಗತವಿದ್ದಿತು. ಅದರಂತೆಯೇ ಮೈಸೂರಿನ ಒಂದು ಕಾಗದವೂ ಬಂದಿದ್ದಿತು. ಆಗ ಸಂಪಾದಕರು ಈ ರೀತಿ ಅದರ ಬಗ್ಗೆ ಬರೆದಿದ್ದರು.

'ಅದು ಇಂಥವರು ಬರೆದದ್ದು ಎಂಬ ಹೆಸರು ಮುಂತಾಗಿರುವುದಿಲ್ಲ. ಆದಾಗ್ಯೂ ಈ ಕಾಗದ ಮೊದಲು ಸೇರಿದಾದ ಕಾರಣ ಆ ವರ್ತಮಾನ ಛಾಪಿಸಲಿಕ್ಕೆ ನಿಶ್ಚಯಿಸಿದೆ. ಇನ್ನು ಮುಂದೆ ಯಾರಾದರೂ ಒಂದು ವರ್ತಮಾನ ಸೇರಿಸಬೇಕಂತ ಬರೆದು ಕಳುಹಿಸುವುದಾದರೆ... ಅವರ ಹೆಸರು, ಊರು ಮುಂತಾಗಿ ನಮಗೆ ತಿಳಿಯುವ ಹಾಗೆ ಮಾತ್ರ ಬರೆದು ಟಪಾಲ ದಸ್ತುರಿ ಕೊಟ್ಟು ಕಳುಹಿಸಿದರೆ ಆ ಸಮಾಚಾರ ಛಾಪಿಸಬಹುದು'' ಹೀಗೆ ಬರೆದು ಮೈಸೂರಿನಿಂದ ಬಂದ ಆ ಸುದ್ಧಿಯನ್ನು ಪ್ರಕಟಿಸಿದ್ದಾರೆ. ಅದು ಮುಮ್ಮಡಿ ಕೃಷ್ಣರಾಜರನ್ನು ಕುರಿತು ಇದೆ.

''ಜೂನ್ ತಿಂಗಳಲ್ಲಿ ಈ ಊರು ದೊರೆಗಳವರ ಮಕ್ಕಳ ವಿವಾಹೋತ್ಸವ ಆಯಿತು.

ಪ್ರಸ್ತುತದಲ್ಲಿ ದೊರೆಗಳವರು ಬ್ರಾಂಹ್ಮಣರೇ ಮೊದಲಾದ ಸಮಸ್ತ ಜಾತಿಯವರಲ್ಲಿ ಅಬಾಲ ವೃದ್ಧರಿಗೆ ಭೋಜನವನ್ನು ಮಾಡಿಸಿ, ಅವರವರ

ಯೋಗ್ಯತಾನುಸಾರವಾಗಿ ಶಾಲು, ವಲ್ಲಿ, ಧೋತ್ರ, ಮೊದಲಾದ ಉಡುಗೊರೆಗಳನ್ನು ಕೊಟ್ಟು ಸಮಸ್ತರನ್ನು ತೃಪ್ತಿಪಡಿಸಿದರು. ಆ ಉಡುಗೊರೆಗಳು ಈ ಊರಲ್ಲಿ ಎಲ್ಲಾ ಕಡೆಗಳಲ್ಲಿಯೂ ಭರಿತವಾಗಿರುವ ಕಾರಣ ಯಾವ ಸ್ಥಳದಲ್ಲಿ ನೋಡಿದರೂ ಅವರ ಉದಾರ ಕ್ಷಮಾ ಕೊಂಡಾಡಲ್ಪಟ್ಟಿದೆ. ಇದಲ್ಲದೆ ಅತ್ಯಂತ ಶ್ರಮ ಅನುಭವಿಸುತ್ತಿದ್ದ ಕೆಲವರಿಗೆ ಸಂಬಳ ಮಾಡಿಸಿ ಕೊಟ್ಟು, ಇನ್ನೂ ಕೆಲವರ ಸಂಬಳ ಹೆಚ್ಚು ಮಾಡಿಸಿದರು. ಇದೇ ಪ್ರಕಾರವಾಗಿ ಈ ದೊರೆಯವರು ಅನೇಕರನ್ನು ಸಂರಕ್ಷಿಸಿ ಪುತ್ರ ಪೌತ್ರರು ಅವರ ಉಪಕಾರವನ್ನು ಸ್ಮರಿಸುವ ಹಾಗೆ ಮಾಡಿದ್ದಾರೆ. ಇವರ ದಾತೃತ್ವದ ನಿದರ್ಶನಗಳು ಅನೇಕ - ಕಣ್ಣಿನಿಂದ ಕಂಡವರು.'' (೬ ನೇ ಸಂಚಿಕೆ)

ಇಲ್ಲಿಯ ಸಂಪಾದಕರ ಟಿಪ್ಪಣಿ ಮತ್ತು ಸುದ್ದಿಯ ಮಹತ್ವದ ಎರಡು ಅಂಶಗಳೆಂದರೆ ೧೬೫ ವರುಷಗಳಷ್ಟು ಹಿಂದೆ, ಅದೇ ಆಗ ಪತ್ರಿಕಾ ವ್ಯವಸಾಯ ಪ್ರಾರಂಭವಾದಾಗಲೂ ಕೂಡ ಹೆಸರಿಲ್ಲದ ಓದುಗರ ಪತ್ರಗಳಿಗೆ ಗಮನ ನೀಡಲಾಗದೆಂಬ ಇಂದಿನ ಪತ್ರಿಕಾ ಧರ್ಮವನ್ನು ಅಂದೂ ಪಾಲಿಸುತ್ತಿದ್ದರು. ತಮ್ಮ ಹೆಸರು ಬಹಿರಂಗ ಬರಬಾರದೆನ್ನುವವರು ಸಂಪಾದಕರಿಗಾದರೂ ತಮ್ಮ ಹೆಸರು -ವಿಳಾಸಗಳನ್ನು ತಿಳಿಸಬೇಕು ಎಂಬುದೇ ಆಗಿತ್ತು. ಇನ್ನೊಂದು ಮಹತ್ವದ ಅಂಶವೆಂದರೆ, ಮೈಸೂರು ಅಂದಿನ ಮಂಗಳೂರು ಜನರಿಗೆ ಹೊರದೇಶ. ಅಲ್ಲಿಯ ಜನ ಪರಕೀಯರು, ಆದರೆ ಭಾಷೆಯ ಮೂಲಕ ಪರಸ್ಪರ ಸಂಬಂಧ ಸಂಪರ್ಕವನ್ನು ಕಲ್ಪಿಸಲು ಪತ್ರಿಕೆ ಮಾಧ್ಯಮವಾದದ್ದು ಗಮನಾರ್ಹವಾಗಿದೆ.

''ಯಾರನ್ನಾದರೂ ಟೀಕಿಸುವಾಗ ಅನಾಮಧೇಯರಾಗಿ ಉಳಿಯುವುದು ಇಂದಿನ ಪತ್ರಿಕಾ ಸಂಪ್ರದಾಯವಿರುವಾಗ ಈ 'ಕಣ್ಣಿನಿಂದ ಕಂಡವರು' ನಿರ್ಹೇತುಕ ಬುದ್ಧಿಯಿಂದ ಮುಮ್ಮಡಿ ಕೃಷ್ಣರಾಜರ ಔದಾರ್ಯವನ್ನು ಕೊಂಡಾಡಲು ಹಾಗೆ ಮಾಡಿದ್ದಾರೆ. ರಾಜರನ್ನು ಕುರಿತ ಈ ಸಮಕಾಲೀನ ದಾಖಲೆಯು ಐತಿಹಾಸಿಕ ಮಹತ್ವವುಳ್ಳದ್ದಾಗಿದೆ''ಎಂಬುದರಲ್ಲಿ ಎರಡು ಮಾತಿಲ್ಲ.

'ಮಂಗಳೂರು ಸಮಾಚಾರ' ಮತ್ತು ಅನಂತರ ಹೆಸರು ಬದಲಾದ 'ಕಂನಡ ಸಮಾಚಾರ' ವಾದ ಪತ್ರಿಕೆಯನ್ನು ನಡೆಸುತ್ತಿದ್ದವರು ಕ್ರಿಶ್ಚಿಯನ್ ಮಿಶನರಿಗಳು ಎಂಬುದು ಗೊತ್ತಿದ್ದುದೇ ಆಗಿದೆ. ಸ್ವಮತ ಪ್ರಸಾರಕ್ಕಾಗಿ ಈ ಪತ್ರಿಕೆಯನ್ನು ಬಳಸಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ಅದರಿಂದಾಗಿ ಇದು ಜಾತ್ಯಾತೀತ ಎನ್ನಬಹುದಾದ ಮತ್ತು ಎಲ್ಲ ವರ್ಗದ ಕನ್ನಡಿಗರನ್ನು ಉದ್ದೇಶಿಸಿದ ಪತ್ರಿಕೆಯಾಗಿ ನಿಂತಿದೆ. ಕ್ರಿಶ್ಚಿಯನ್ ಮತದ ಪ್ರಚಾರಗಳು ವ್ಯಕ್ತವಾದ ಹಲವು ಸಂದರ್ಭಗಳೆಂದರೆ, ದಾಸರ ಪದ ಇಲ್ಲವೆ ಸಂಸ್ಕೃತ ಶ್ಲೋಕವನ್ನು ಕೊಡುತ್ತ ಅದಕ್ಕೆ ಸಮಾನವಾದ ಬೈಬಲ್ ಉಕ್ತಿಗಳನ್ನು ವಿವರಿಸಿದುದು. ಈ ನಿಮಿತ್ತದಿಂದ ಪುರಂದರದಾಸರ ೩-೪ ಪದಗಳು ಪ್ರಥಮತಃ ಮುದ್ರಣ ರೂಪದಲ್ಲಿ ಹೊರಬಂದುದು ಇಲ್ಲಿಯೇ. ಇವುಗಳ

ಜೊತೆಗೆಯೇ ದೇಶ - ವಿದೇಶಗಳ ಸುದ್ದಿಗಳನ್ನೂ ಕೊಡುತ್ತಿದ್ದರು. ವಾಚಕರ ಮನರಂಜನೆಗಾಗಿ ಐದಾರು ಸಣ್ಣ ಕತೆಗಳು ವರ್ಷಾವಧಿಯಲ್ಲಿ ಪ್ರಕಟವಾಗಿವೆ.

ಪತ್ರಿಕೆಯು ಹೀಗೆ ವ್ಯವಸ್ಥಿತವಾಗಿ ಮುಂದುವರಿದಿದ್ದಾಗ ಅದರ ಮುದ್ರಣ ಕಾರ್ಯವನ್ನು ಬಳ್ಳಾರಿಗೆ ಸಾಗಿಸಿ ಅಲ್ಲಿ ಅದಕ್ಕೆ 'ಕಂನಡ ಸಮಾಚಾರ' ಎಂಬ ಹೆಸರನ್ನಿಟ್ಟು ಪತ್ರಿಕೆಯನ್ನು ಪ್ರಕಟಿಸಿದ ಕಾರಣವನ್ನು ಈ ಮೊದಲೆ ತಿಳಿದಾಗಿದೆ. ಹೀಗೆ ಪತ್ರಿಕೆ ಬಳ್ಳಾರಿಗೆ ಸ್ಥಳಾಂತರವಾಯಿತಾದರೂ ಅದು ಮುಂದೆ ಬಹಳ ದಿನ ಬದುಕಲಿಲ್ಲ. ವರ್ಷಾಂತ್ಯದವರೆಗೆ ಮಾತ್ರ ನಡೆದು ಪತ್ರಿಕೆಯು ನಿಂತು ಹೋಯಿತು.

ಮುಂದೆ ಕೆಲವು ವರುಷಗಳಲ್ಲಿ ದೇಶೀಯರೂ ಪತ್ರಿಕಾ ರಂಗದಲ್ಲಿ ಕಾಲಿರಿಸಿದರು. ಕನ್ನಡದಲ್ಲಿ ಮೊಟ್ಟ ಮೊದಲ ಪತ್ರಿಕೆಯನ್ನು ದೇಶೀಯರು ಪ್ರಾರಂಭಿಸಿದ್ದು ಬೆಳಗಾವಿಯಲ್ಲಿ ಎಂಬುದು ಮಹತ್ವದ್ದಾಗಿದೆ. ಮರಾಠಿಯ ಪ್ರಭಾವದಲ್ಲಿದ್ದುಕೊಂಡು ಕನ್ನಡ ಸಾರಸ್ವತವಾಗಲೀ, ವಾಚಕ ವೃಂದವಾಗಲೀ ಸೃಷ್ಟಿಯಾಗಿರದಿದ್ದಾಗ ೧೮೪೯ರಷ್ಟು ಹಿಂದೆ ದೇಶೀ ಮುದ್ರಣವೂ ನೆಲೆಗೊಂಡಿರದಿದ್ದಾಗ ಬೆಳಗಾವಿಯಿಂದ ಕನ್ನಡ ಪತ್ರಿಕೆಯೊಂದು ಹೊರಟು ಆರು ವರುಷಗಳವರೆಗೆ ನಡೆದಿದೆ. ಬೆಳಗಾವಿ ಮರಾಠಿಗರದ್ದು ಎನ್ನುವ ಮರಾಠಿ ಜನ ಇದನ್ನು ಗಮನಿಸಬೇಕು.

ಪತ್ರಿಕೆಯ ಹೆಸರು 'ಸುಬುದ್ಧಿ ಪ್ರಕಾಶ' ಅದು ೧೮೪೯ರಲ್ಲಿ ಬೆಳಗಾವಿಯಲ್ಲಿ ಆರಂಭವಾಯಿತು. ಈ ಮೊದಲು ಯಾವ ದೇಶಿಯನೂ ಖಾಸಗಿಯಾಗಿ ಕನ್ನಡ ಪುಸ್ತಕ ಅಥವಾ ಪತ್ರಿಕೆಯನ್ನು ಪ್ರಕಟಿಸಿಲ್ಲ. ಅದು ಕಲ್ಲಚ್ಚಿನಲ್ಲಿ ಮುದ್ರಣಗೊಳ್ಳುತ್ತಿತ್ತು. ಅದರ ಚಂದಾ ಹಣ ವರುಷಕ್ಕೆ ೯ ರುಪಾಯಿ, ತಿಂಗಳಿಗೆ ೮ ಆಣೆ ಇದ್ದಿತು.

ಮುಂದಿನ ದಿನಗಳಲ್ಲಿ ಕನ್ನಡ ಪತ್ರಿಕಾ ವ್ಯವಸಾಯವು ೧೮೬೦ರ ಒಳ ಹೊರಗೆ ನಿಯಮಿತವಾಗಿ ಆರಂಭವಾಯಿತು. ಬೆಂಗಳೂರು ಧಾರವಾಡ ಮತ್ತು ಮಂಗಳೂರು ಈ ನಗರಗಳಿಂದ ಪತ್ರಿಕೆಗಳು ಹೊರಡಲಾರಂಭಿಸಿದವು. ಕ್ರಿ.ಶ. ೧೮೫೯ರ ಜೂನ್ ತಿಂಗಳಲ್ಲಿ ಹೊರ ಬಂದ 'ಮೈಸೂರು ವೃತ್ತಾಂದ ಬೋಧಿನಿ' ಯು ಮೈಸೂರು ಕಡೆಯ ಮೊತ್ತ ಮೊದಲಿನ ವಾರಪತ್ರಿಕೆಯಾಗಿದೆ. ನವೆಂಬರ್ ೧೮೬೧ರಲ್ಲಿ ಧಾರವಾಡದಲ್ಲಿ 'ಜ್ಞಾನಬೋಧಕ' ಎಂಬ ಕನ್ನಡ ಪತ್ರಿಕೆ ಪ್ರಾರಂಭವಾಯಿತು. ಅರುಣೋದಯ ಎಂಬ ಮಾಸಪತ್ರಿಕೆಯು ೧೯೬೧ರಲ್ಲಿ ಬೆಂಗಳೂರಿನಿಂದ ಪ್ರಕಟವಾಗತೊಡಗಿತು. ಅದೇ ವರುಷ ಮಂಗಳೂರಿನಿಂದ ' ವಿಚಿತ್ರ ವರ್ತಮಾನ ಸಂಗ್ರಹ' (illustrated Canarese Journal) ಎಂಬ ಕನ್ನಡ - ಇಂಗ್ಲಿಷ್ ಎರಡೂ ಭಾಷೆಗಳ ಲೇಖನಗಳುಳ್ಳ ಪತ್ರಿಕೆ ಹೊರಟಿತು. ಆನಂತರದ ಮಹತ್ವದ ಪತ್ರಿಕೆಯೆಂದರೆ 'ಕನ್ನಡ ಶಾಲಾ ಪತ್ರಿಕೆ' ಅದನ್ನು ಡೆಪ್ಯೂಟಿ ಚೆನ್ನಬಸಪ್ಪ ಅವರು ೧೮೬೫ರಲ್ಲಿ ಬೆಳಗಾವಿಯಿಂದ ಪ್ರಾರಂಭ ಮಾಡಿದಾಗ ಅದರ ಹೆಸರು 'ಮಠಪತ್ರಿಕೆ' ಎಂದು ಇದ್ದಿತು.

ಕ್ರಿ.ಶ. ೧೮೬೫ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಬೆಳಗಾವಿಯಿಂದ ಹೊರಡಿಸಲು ಪ್ರಾರಂಭಿಸಿದ 'ಮಠ ಪತ್ರಿಕೆ' ೧೮೬೭ರಲ್ಲಿ 'ಶಾಲಾ ಪತ್ರಕ' ಎಂಬ ಬದಲಾವಣೆ ಹೊಂದಿತು. ಮುಂದೆ ೧೮೭೧ರಲ್ಲಿ ಅದರ ಹೆಸರು'ಕನ್ನಡ ಶಾಲಾ ಪತ್ರಿಕೆ' ಎಂದು ಮತ್ತೆ ಬದಲಾಗಿ ೧೯೨೫ರವರೆಗೆ ಆ ಹೆಸರು ಉಳಿದುಕೊಂಡಿತು. ಆನಂತರ ಅದರ ಹೆಸರು 'ಜೀವನ ಶಿಕ್ಷಣ'ಎಂಬುದಾಗಿ ಹೊಸ ಹೆಸರಿನಿಂದ ಇಂದಿಗೂ ಬದುಕಿರುವ ಪತ್ರಿಕೆಯಾಗಿದೆ. ಮೂರು ಶತಮಾನಗಳನ್ನು ಕಂಡ ಏಕೈಕ ಕನ್ನಡ ಪತ್ರಿಕೆ ಅದಾಗಿದೆ.

ಮುಂಬಯಿ ಕರ್ನಾಟಕದ ಟ್ರೇನಿಂಗ್ ಕಾಲೇಜಿನ ಆವರಣದಲ್ಲಿ ಪ್ರಾರಂಭವಾದ ಪತ್ರಿಕೆಯು ಬೆಳಗಾವಿ - ಧಾರವಾಡಗಳ ಮಧ್ಯ ಓಡಾಡಿ ೧೮೭೭ರಿಂದ ನಿಯಮಿತವಾಗಿ ಧಾರವಾಡದಿಂದಲೇ ಪ್ರಕಟವಾಗತೊಡಗಿತು. ''ಕನ್ನಡ ನಿಷ್ಠೆಯ ಗಂಗೋತ್ರಿ'' ಯಂತಿದ್ದ ಟ್ರೇನಿಂಗ್ ಕಾಲೇಜಿನಲ್ಲಿ ಬೆಳೆದುದರಿಂದ ಅನೇಕ ಪ್ರೌಢ ಲೇಖನಗಳಿಗೆ ಅದು ಎಡೆ ಮಾಡಿಕೊಟ್ಟಿತು. ಕನ್ನಡ ಸಾಹಿತ್ಯ ಮತ್ತು ಶಾಸ್ತ್ರ ಗ್ರಂಥಗಳ ಪರಾಮರ್ಶೆ ಕೂಡ ಅದರ ಮೂಲಕ ನಡೆಯಿತು. ಮೂಲತಃ ಅದು ಶಿಕ್ಷಣ ಶಾಖೆಯ ಕನ್ನಡ ಮುಖ ಪತ್ರಿಕೆಯಾಗಿತ್ತಷ್ಟೆ.

ಕನ್ನಡ ಭಾಷೆ ಮತ್ತು ಕನ್ನಡದಲ್ಲಿ ಶಿಕ್ಷಣ ಇವುಗಳ ಅಭಿವೃದ್ಧಿಗಾಗಿ ಡೆಪ್ಯೂಟಿ ಚೆನ್ನಬಸಪ್ಪನವರು ಕಳಕಳಿಯಿಂದ ಶ್ರಮಿಸುತ್ತಿದ್ದರೆಂಬ ವಿಷಯ ಗೊತ್ತಿದ್ದುದೇ ಆಗಿದೆ. ಆ ಮಾತಿಗೆ ನಿದರ್ಶನ ಎಂಬಂತೆ ೧೮೬೮ನೆಯ ವರ್ಷದ ಆಗಸ್ಟ್ ಸಂಚಿಕೆಯಲ್ಲಿ ಬಂದ ಪ್ರಕಟನೆಯನ್ನು ನೋಡಬಹುದು.

''ಸಂತೋಷದ ವರ್ತಮಾನ. ನಾವು ಬಹು ಸಂತೋಷದಿಂದ ಸಮಸ್ತ ಜನರಿಗೆ ವಿಶೇಷವಾಗಿ ಲಿಂಗಾಯಿತರಿಗೆ ತಿಳಿಸುವುದೇನೆಂದರೆ, ಬೆಳಗಾವಿ ಜಿಲ್ಲೆಯ ಡೆಪ್ಯೂಟಿ ಇನ್‌ಸ್ಪೆಕ್ಟರರಾದ ಚೆನ್ನಬಸಪ್ಪನವರು ಹೇಳಿಕೊಂಡಿದ್ದರಿಂದ ಚಿತ್ರದುರ್ಗದ ಮುರಿಗಿ ಜಗದ್ಗುರು ಸ್ವಾಮಿಗಳವರು ಬಹು ದಯಾಳುಗಳಾಗಿ ಅನಾಥರಾದ ವಿದ್ಯಾರ್ಥಿಗಳಿಗೆ ಬೆಳಗಾವಿಯಲ್ಲಿ ಅನ್ನ ಕೊಡುವುದಕ್ಕೋಸ್ಕರ ಪ್ರತಿ ತಿಂಗಳಿಗೆ ೩೦೦ ರೂಪಾಯಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ಹಣದಿಂದ ಒಂದು ಬಾಡಿಗೆ ಮನೆ ಪಡೆದು ಅಡಿಗೆಯವರು ಮೊದಲಾದ ಚಾಕರರನ್ನು ಯಿಟ್ಟು ಸುಮಾರು ೩೦ ಜನ ನಿರಾಶ್ರಿತರಾದ ವಿದ್ಯಾರ್ಥಿಗಳಿಗೆ ಯೆರಡು ಹೊತ್ತು ಊಟ ಇರುವುದಕ್ಕೆ ಸ್ಥಳ ಕೊಡತಕ್ಕ ಬಗ್ಗೆ ಈಗ ತಜವೀಜು ನಡೆದಿದೆ''.

ಕರ್ನಾಟಕದಲ್ಲಿ ವೀರಶೈವರ ಮೊದಲ ಬೋರ್ಡಿಂಗ್ ಶಾಲೆಯಿದು. ಇಂದು ಊರೂರಿಗೆ ಕಾಣಸಿಗುವ ಇಂಥ 'ನಿಲಯ'ಗಳಿಗೆ ಇದುವೆ ನಾಂದಿಯಾಯಿತು. ತಮ್ಮ ಅಧಿಕಾರ ಸ್ಥಾನದಿಂದ ಡೆಪ್ಯೂಟಿ ಚೆನ್ನಬಸಪ್ಪನವರು ಕನ್ನಡದ ಬಳಕೆಗೆ ಸಂಬಂಧಪಟ್ಟ ಒಂದು ಪರಿಪತ್ರವನ್ನು ಹೊರಡಿಸಿದ್ದರು. ೧೮೬೮ ಅಕ್ಟೋಬರ್ ಸಂಚಿಕೆಯಲ್ಲಿ ಅದು ಪ್ರಕಟವಾಗಿದೆ.

''ನೋಟೀಸು - ಗೋಕಾಂವಿ, ಸವದತ್ತಿ ಮತ್ತು ಸಂಪಗಾವಿ ತಾಲೂಕಿನಲ್ಲಿರುವ ಯಾವತ್ತು ಮಾಸ್ತರರಿಗೆ ತಿಳಿಸುವುದೇನೆಂದರೆ ನೀವು ನಿಮ್ಮ ದಫ್ತರುಗಳನ್ನು ಕನ್ನಡದಲ್ಲಿ ಇಡ್ರಿ. ಯಿತ್ತ ಕಡೆಯಿಂದಾಗಲೀ ಅಥವಾ ಮತ್ತಾವ ಕಡೆಯಿಂದಾಗಲಿ ನಿಮಗೆ ಆರೆ (ಮರಾಠಿ) ಬರಿದು ಬಂದರು ಸಹ ನೀವು ಕನ್ನಡದಲ್ಲಿ ಉತ್ತರ ಕೊಡುತ್ತ ಬರ್‍ರಿ. ಯಿನ್ನು ಮೇಲೆ ಬರುವ ಕಾಗದಗಳು ಆರೇದಲ್ಲಿ ಬರಬಾರದು. ತಾರೀಖು ೧೬, ಸಪ್ಟೆಂಬರ್ ೧೮೫೮ ಮು|| ಬೆಳಗಾವಿ''.

ಅಖಂಡ ಕರ್ನಾಟಕ ನಿರ್ಮಾಣವಾಗಿ ಅರ್ಧ ಶತಮಾನ ಕಳೆದರೂ ಇಂದಿಗೂ ಆಡಳಿತ ಭಾಷೆಯಾಗಿ ಕನ್ನಡ ಪೂರ್ತಿಯಾಗಿ ರೂಪುಗೊಂಡಿಲ್ಲ. ೧೩೭ ವರುಷಗಳ ಹಿಂದೆ, ಬ್ರಿಟಿಷರ ಆಡಳಿತ, ಮರಾಠಿಯ ಪ್ರಾಬಲ್ಯದಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಈ ಪರಿಪತ್ರವನ್ನು ಹೊರಡಿಸುವ ಸಾಹಸ ಮಾಡಿದ್ದಲ್ಲದೆ, ಅವರ ನೋಟೀಸು ಕಾರ್ಯಗತವಾಗುವಂತೆ ನೋಡಿಕೊಂಡರು. ಅಂತೆಯೇ ಈ ಭಾಗದಲ್ಲಿ ಕನ್ನಡ ಉಳಿಯಿತು. ಆದರೆ ಅಖಂಡ ಕರ್ನಾಟಕ ರೂಪುಗೊಂಡ ಮೇಲೆ ಮತ್ತೆ ಕಲಸು ಮೇಲೋಗರವಾಗಿ ಇಂಗ್ಲಿಷು ಮೆರೆಯಲು ಶುರುವಾಯಿತು. ಬ್ರಿಟಿಷರು ಹೋಗಿ ಆರು ದಶಕಗಳು ಸಮೀಪಿಸುತ್ತಿದ್ದರೂ ಇಂಗ್ಲಿಷಿನಿಂದ ಬಿಡುಗಡೆಯಾಗಲಿಲ್ಲ. ಇನ್ನೀಗ ಅದು ಪ್ರಾಥಮಿಕ ಮೊದಲ ತರಗತಿಯಿಂದಲೇ ಬೇಕು ಎಂದು ಕೂಗುವವರನ್ನು ಡೆಪ್ಯೂಟಿ ಚೆನ್ನಬಸಪ್ಪನವರು ಮೇಲಿನಿಂದಲೇ ನೋಡಿ ಮರುಕ ಪಡುತ್ತಿರಬೇಕು.

ಕ್ರಿ.ಶ. ೧೮೮೦ರ ದಶಕದ ಒಳಹೊರಗಿನ ಕಾಲದಲ್ಲಿ ಬೆಂಗಳೂರಿನಿಂದ 'ಹಿತಬೋಧಿನಿ', ಧಾರವಾಡದಿಂದ 'ಚಂದ್ರೋದಯ' ಮತ್ತು ಮುಂಬಯಿಯಿಂದ 'ಕನ್ನಡ ವಾರ್ತೆ' ಪತ್ರಿಕೆಗಳು ಕನ್ನಡ ಪತ್ರಿಕಾ ವ್ಯವಸಾಯದಲ್ಲಿ ಹೊಸ ಮಾರ್ಗವನ್ನು ಹಿಡಿದವು. ವಿಚಾರ, ಜಾಗೃತಿ, ಸ್ವಂತ ಅಭಿಪ್ರಾಯಗಳ ಅಭಿವ್ಯಕ್ತಿ ಮತ್ತು ರಾಷ್ಟ್ರೀಯ ಮನೋವೃತ್ತಿ ಮೊದಲಾದವು.

ಧಾರವಾಡದಿಂದ ಹೊರಡುತ್ತಿದ್ದ 'ಅರುಣೋದಯ' ೩೫ ವರ್ಷಗಳ ಕಾಲ ಕನ್ನಡ ಪತ್ರಿಕೆಯಾಗಿ ಅಸ್ತಿತ್ವದಲ್ಲಿದ್ದಿತು. ಅದರ ವಿಷಯವ್ಯಾಪ್ತಿಯು ಧಾರವಾಡ ನಗರದಿಂದ ಹಿಡಿದು ವಿದೇಶಗಳ ಬಿಡಿ- ಬಿಡಿಯಾದ ಸುದ್ದಿಗಳವರೆಗೂ ಹರಡಿತ್ತು. ಪತ್ರಿಕೆಯಲ್ಲಿ ಸ್ಥಳೀಯ ಹಾಗೂ ಪ್ರಚಲಿತ ಸುದ್ದಿಗಳಿಗೆ ತುಂಬಾ ಪ್ರಾಶಸ್ತ್ಯವಿದ್ದಿತ್ತು. ಪೇಟೆಯ ಧಾರಣೆ, ಶೈಕ್ಷಣಿಕ ವಿಚಾರ, ವರ್ಗಾವರ್ಗಿ ಇವುಗಳನ್ನು ಕೊಡುವಾಗ ಕನ್ನಡ ವಿಷಯದ ಕಳಕಳಿ ಪರ್ಯಾಯವಾಗಿ ಕಾಣಿಸಿಕೊಳ್ಳುತ್ತಿತ್ತು.

ಮುಂಬಯಿಯಿಂದ ಹೊರಡುತ್ತಿದ್ದ 'ಕನ್ನಡ ಸುವಾರ್ತೆ' ಪತ್ರಿಕೆ ದೇಶದಲ್ಲಿಯ ಆಗುಹೋಗುಗಳ ಸುದ್ದಿಯೊಂದಿಗೆ ಕನ್ನಡ ಸೀಮೆಯ ಸುದ್ದಿಗಳನ್ನೂ ಕೊಡುತ್ತಿದ್ದುದು ವಿಶೇಷವಾಗಿದೆ.

ಮುಂಬಯಿ ಕರ್ನಾಟಕದ ಪ್ರಾಂತ್ಯದಲ್ಲಿಯ ಸಣ್ಣ -ಸಣ್ಣ ವಿಷಯಗಳತ್ತ

ಕೂಡ 'ಕನ್ನಡ ಸುವಾರ್ತೆ' ಗಮನ ಕೊಡುತ್ತಿತ್ತು. ೯-೧೨-೧೮೮೯ರ ಸಂಚಿಕೆಯಲ್ಲಿ ಒಂದು ಸುದ್ದಿ 'ಮುಂಬಯಿ ವಿದ್ಯಾಖಾತೆಯಲ್ಲಿ ಉತ್ತಮ ರೀತಿಯಿಂದ ಕನ್ನಡಕ್ಕಾಗಿ ಸೇವೆ ಸಲ್ಲಿಸುತ್ತಿದ್ದ ವೆಂಕಟ ರಂಗೋ ಕಟ್ಟಿಯವರನ್ನು ನಿವೃತ್ತ ಗೊಳಿಸುವುದು ಬೇಡ . ಅದು ಅನಿವಾರ್ಯವೇ ಎಂದಾದರೆ ಇನ್ನೊಬ್ಬ ಶಿಕ್ಷಣ ತಜ್ಞ ರಾ.ಹ. ದೇಶಪಾಂಡೆ ಆ ಸ್ಥಾನಕ್ಕೆ ಬರಲಿ' ಎಂದು ಸೂಚನೆಯನ್ನು ಮಾಡಿದೆ.

ಸಂಪಾದಕರು ಮಂಗೇಶ ನಾಡಕರ್ಣಿ ಎಂಬುವರಾಗಿದ್ದು ಸಹಜವಾಗಿ ಅವರು ಉತ್ತರ ಕನ್ನಡ ಜಿಲ್ಲೆಯ ವಿಷಯಗಳಿಗೆ ಅಧಿಕ ಪ್ರಾಶಸ್ತ್ಯ ಕೊಡುತ್ತಿದ್ದರು. ಕಾರವಾರ ಜಿಲ್ಲೆ ತಾಲೂಕು ಮಟ್ಟದ ವಿವಿಧ ಚಟುವಟಿಕೆಗಳು, ರೈತ ಜನರ ಸಂಕಷ್ಟಗಳು, ಅಧಿಕಾರಿಗಳ ದುಷ್ಕೃತ್ಯಗಳು ಇವುಗಳನ್ನೆಲ್ಲ ವಿವರವಾಗಿ ವರದಿ ಮಾಡುತ್ತಿದ್ದರು. ಅಂದಿನ ಮುಂಬಯಿಯಲ್ಲಿ ಕನ್ನಡಿಗರ ವಸತಿ ಕಡಿಮೆಯಿದ್ದರೂ ಹತ್ತು ವರ್ಷಕ್ಕೂ ಮಿಕ್ಕಿ 'ಕನ್ನಡ ಸುವಾರ್ತೆ' ನಡೆದು ಬಂದದ್ದು ಸಾಹಸದ ಮಾತೇ ಆಗಿದೆ.

ಇದರಷ್ಟೇ ಸಮಾನವಾಗಿ ಮೇಲೆದ್ದು ನಿಂತ ಇನ್ನೊಂದು ಮುಂಬಯಿಯ ಕನ್ನಡ ವಾರ ಪತ್ರಿಕೆಯೆಂದರೆ 'ಹವ್ಯಕ ಸುಭೋಧ' ಕ್ರಿ.ಶ ೧೮೮೫ರಿಂದ ೧೮೮೯ರ ವರೆಗೆ ಬಾಳಿದ ಈ ಪತ್ರಿಕೆಯ ಪ್ರಸಾರವೂ ಅಧಿಕವಾಗಿತ್ತು ಎಂದರೆ ಸುಮಾರು ಒಂದು ಸಾವಿರದಷ್ಟು !

'ಹವ್ಯಕ ಸುಬೋಧ' ದ ಸಂಪಾದಕ ಕರ್ಕಿ ವೆಂಕಟರಮಣಶಾಸ್ತ್ರಿ ಕೂಡ ಉತ್ತರ ಕರ್ನಾಟಕದವರು ಹಾಗಾಗಿ ಪತ್ರಿಕೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಂಕಷ್ಟಗಳಿಗೆ ಹೆಚ್ಚಿನ ಪ್ರಾಶಸ್ತ್ಯ ವಿದ್ದಿತ್ತು. ಜಿಲ್ಲೆಯ ಅಧಿಕಾರಿಗಳ ಮೈ ಸೊಕ್ಕಿನ ನಡತೆ, ಲಂಚಗುಳಿತನ, ಸ್ತ್ರೀಲೋಲುಪ್ತತೆ, ಸರಕಾರಿ ಸೌಲಭ್ಯಗಳ ದುರುಪಯೋಗ ಮುಂತಾದ ಅಂಶಗಳನ್ನು ಪದೇ ಪದೇ ಸಾರ್ವಜನಿಕರ ಗಮನಕ್ಕೆ ತಂದದ್ದಾಗಿದೆ.

ಸರಕಾರಿ ಕಚೇರಿಯಲ್ಲಿಯ ಭ್ರಷ್ಟಾಚಾರದ ವಿವಿಧ ರೂಪಗಳನ್ನು ಅರಿಯಬಯಸುವವರು 'ಹವ್ಯಕ ಸುಬೋಧ'ವನ್ನು ಓದಿದರೆ ಸಾಕು ಎನ್ನಿಸುವಷ್ಟು ವಿವರ ಚಿತ್ರಗಳು ಅದರಲ್ಲಿವೆ. ಅಧಿಕಾರಿಗಳ ಹೆಸರನ್ನು ತೆಗೆದುಕೊಂಡೇ ನಿರ್ದಾಕ್ಷಿಣ್ಯವಾಗಿ ಅವರನ್ನು ಟೀಕಿಸಲಾಗುತ್ತಿತ್ತು. ವಿದೇಶೀಯರಲ್ಲದೆ ದೇಶೀಯ ಅಧಿಕಾರಿಗಳೂ ಕರ್ಕಿ ವೆಂಕಟರಮಣಶಾಸ್ತ್ರಿಗಳ ಹರಿತ ಲೇಖನಗಳಿಗೆ ತುತ್ತಾಗಿದ್ದಾರೆ.

ಬದುಕಿದ ೪೦ ವರುಷಗಳಲ್ಲಿ ಏನೆಲ್ಲ ಮಾಡಿದರು ಹೊನ್ನಾವರ ತಾಲೂಕಿನ ಕರ್ಕಿಯ ವೆಂಕಟರಮಣಶಾಸ್ತ್ರಿ (೧೮೫೨-೧೮೯೨) ಅವರು. ಅವರೊಬ್ಬ ಧೀರ ಪತ್ರಿಕೋಧ್ಯಮಿಗಳು, ಆದ್ಯ ಸಾಮಾಜಿಕ ನಾಟಕಕಾರ, ಕನ್ನಡ ಮುದ್ರಣಕಾರ, ಹರಿತ ಬರಹಗಾರ, ಏನೆಲ್ಲ ಹೆಸರು ಮಾಡಿದವರು.

ಹಾಗೆ ನೋಡಿದರೆ ಅಪ್ಪ ಸೂರಿ ವಿಘ್ನೇಶ್ವರ ಶಾಸ್ತ್ರಿ ಅವರು ಕರ್ಕಿಯ ವೇದಶಾಸ್ತ್ರ ಸಂಪನ್ನ ಬ್ರಾಹ್ಮಣರು. ಅತಿಥಿ ಸತ್ಕಾರ, ಪರೋಪಕಾರಗಳಿಗೆ ಹೆಸರಾದ

ವ್ಯಕ್ತಿ. ಹಿರಿಯ ಮಗ ವೆಂಕಟರಮಣನ ವಿದ್ಯಾಭ್ಯಾಸ ಆಗಿನ ಕಾಲದ ಎಲ್ಲ ವಿದ್ವಾಂಸರ ಮಕ್ಕಳಂತೆ ಸಂಸ್ಕೃತದಲ್ಲೆ ಆಯಿತು. ವ್ಯವಹಾರಕ್ಕಾಗಿ ಕನ್ನಡ. ಪಾಂಡಿತ್ಯಕ್ಕೆ ಸಂಸ್ಕೃತ ವೈದಿಕ ವಿದ್ಯೆ ಪಾರಂಗತ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಸಾಗರ ತಾಲೂಕಿನ ರಾಮಚಂದ್ರಾಪುರ ಮಠಕ್ಕೆ ಹೋದರು. ವೇದ - ವೇದಾಂಗ, ಕಾವ್ಯ - ನಾಟಕ - ವ್ಯಾಕರಣಗಳಲ್ಲಿ ವಿಶೇಷ ಪ್ರೌಢಿಮೆ ಸಂಪಾದಿಸಿ ಗುರುಗಳ ಅನುಗ್ರಹಕ್ಕೆ ಪಾತ್ರರಾದರು. ಶಿಕ್ಷಣ ಮುಗಿದ ಬಳಿಕ ಶ್ರೀ ಮಠದಲ್ಲೆ ಪಾರುಪತ್ಯಗಾರರಾಗಿ ಮುಂದುವರೆದರು.

ವೆಂಕಟರಮಣ ಶಾಸ್ತ್ರಿಗಳು ಅದೇ ಸ್ಥಾನದಲ್ಲಿ ಉಳಿದಿದ್ದರೆ ಬಹುಶಃ ಶ್ರೀ ಮಠದ ಪರಮ ಶಿಷ್ಯರಾಗಿ ಮಠದ ಅಭ್ಯುದಯಕ್ಕೆ ಭಾಗಿಯಾಗಿ, ಅವರೊಬ್ಬ ಹವ್ಯಕ ಸಮಾಜದ ಪ್ರತಿಷ್ಠಿತ ವ್ಯಕ್ತಿಯಾಗಿ ಬಾಳಬಹುದಿತ್ತು. ಮಠದ ಮತ್ತು ಅಲ್ಲಿನ ಶಿಷ್ಯ ಪರಿವಾರದ ವ್ಯವಹಾರಗಳು ಶಾಸ್ತ್ರಿಯವರಿಗೆ ಸಹಿಸುವುದಾಗಲಿಲ್ಲ. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅಧರ್ಮವನ್ನು ಮಠದಿಂದ ನಿಯುಕ್ತರಾದ ಆಚಾರ್ಯರು, ಭಟ್ಟರು ಧನ ಲೋಭಿಗಳಾಗಿ ಸ್ವಾರ್ಥಕ್ಕಾಗಿ ಮಠದ ಹೆಸರನ್ನು ಬಳಸಿಕೊಳ್ಳುತ್ತಿದ್ದುದು ಅವರಿಗೆ ಅಸಹ್ಯವೆನಿಸಿತು.

ಆಹ್ನಿಕ, ಪೂಜೆ, ಸೂಕ್ತ - ಸ್ತೋತ್ರಗಳು ಹಾಗೂ ಇತರ ಮಠದ ದೈನಂದಿನ ಕಾರ್ಯಗಳೊಂದಿಗೆ ಗುರುಪೀಠಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂದು ವೆಂಕಟರಮಣ ಶಾಸ್ತ್ರಿಗಳ ಅಪೇಕ್ಷೆಯಾಗಿತ್ತು. ಅದಕ್ಕೆಂದೇ ಮಠದಲ್ಲಿದ್ದಾಗ 'ಬೋಧಾಯನಿಯ ವೆಂಕಟೇಶೀಯ ಪ್ರಯೋಗಮಾಲಾ, ಗಾಯತ್ರಿ ಪುರಶ್ಚರಣ ವಿಧಾನ, ಸರ್ವ ಸಂಸ್ಕಾರ ವಿಧಿ, ಪೂಜಾ ಸಮುಚ್ಚಯ, ಸ್ತೋತ್ರ ರತ್ನಾಕರ, ಸಹಸ್ರನಾಮಾವಳಿ ಇತ್ಯಾದಿ ಪುಸ್ತಕಗಳನ್ನು ಬರೆದು ಸಿದ್ಧಪಡಿಸಿದರು. ಆದರೆ ಮಠದ ವಾತಾವರಣಕ್ಕೆ ಒಗ್ಗದ ಶಾಸ್ತ್ರಿ ಅವರು ಕೆಲಸವನ್ನು ಬಿಟ್ಟು ಹೊರ ಬಿದ್ದರು.

ಈ ಅವಧಿಯಲ್ಲಿ ಅವರು ತುಸು ಇಂಗ್ಲಿಷನ್ನೂ ಕಲಿತಿದ್ದರು. ಕಟ್ಟು ಮಸ್ತಾದ ಧಡೂತಿ ಆಸಾಮಿಯಾಗಿದ್ದ ಶಾಸ್ತ್ರಿಗಳು ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಇಲಾಖೆಯನ್ನು ಸೇರಿ ಫೌಜದಾರರೆಂಬ ಕೆಲಸ ಮಾಡಿದರು. ಆದರೆ ಅದು ಇನ್ನೊಂದು ಮಠ ! ಪೋಲೀಸ್ ಖಾತೆಯ ದೊಡ್ಡ ಸಾಹೇಬರನ್ನು ಒಲಿಸಿಕೊಳ್ಳುವ ಕಲೆ, ಮೇಲೂ ಕೆಳಗೂ ಇದ್ದ ಲಂಚಮಯ ವಾತಾವರಣ, ಮೋಸ, ವಂಚನೆ, ದುರಾಚಾರ, ಕೊಲೆ ಮುಂತಾದ ವ್ಯವಹಾರದಲ್ಲೆ ದೈನಂದಿನ ಬದುಕನ್ನು ಕಳೆಯುವುದು ಅವರಿಗೆ ಅಸಾಧ್ಯವೆನಿಸಿತು. ಆ ಕೆಲಸವನ್ನೂ ಬಿಟ್ಟರು. ಆದರೆ ಈ ಅವಧಿಯಲ್ಲಿಯ ಅವರ ಸಂಚಾರಗಳು, ಉತ್ತರ ಕನ್ನಡ, ಸಾಗರ ಮತ್ತು ಮೈಸೂರು ಸಂಸ್ಥಾನದ ಪರಿಸರಗಳಲ್ಲಿ ತಿರುಗಾಡಿದ್ದುದು ಅವರಿಗೆ ಜೀವನಾನುಭವವನ್ನು ಒದಗಿಸಿತ್ತು. ವಿದ್ಯೆಯ ಬೆಳಕು ಕಾಣದ, ಮೂಢ ನಂಬಿಕೆಗಳಿಂದ ಬಂಧಿತವಾದ ಸಮಾಜದ ಬಗ್ಗೆ ಕಳಕಳಿ ಹುಟ್ಟಿತು. ಹವ್ಯಕ ಸಮಾಜದ ಏಳಿಗೆ ಮತ್ತು ಕನ್ನಡ ಸೇವೆ ಅವರ ಕಣ್ಣ ಮುಂದಿನ ಗುರಿಗಳಾದವು. ಆದಾಗ ಉತ್ತರ ಕನ್ನಡ ಜಿಲ್ಲೆಯು, ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರ್ಪಡೆಯಾಗಿ

ಮುಂಬಯಿ ಪ್ರಾಂತ್ಯದಲ್ಲಿ ಸೇರ್ಪಡೆಯಾಗಿತ್ತು (೧೮೬೨) ಶಾಸ್ತ್ರಿ ಅವರು ಊರೂರು ಅಲೆದು ಎಲ್ಲಿಯೂ ತೃಪ್ತಿಯಾಗದೆ ಕೊನೆಗೆ ಮುಂಬಯಿಗೆ ತೆರಳಿದರು.

ಅಂದಿನ ಮುಂಬಯಿ ಪ್ರಾಂತ್ಯದ ಮೂರು ಪ್ರಮುಖ ಭಾಷೆಗಳಲ್ಲಿ ಕನ್ನಡ ಒಂದಷ್ಟೆ. ಆದರೆ ಮರಾಠಿ, ಗುಜರಾತಿಗಿಂತ ಕೆಳಗಿನ ಸ್ಥಾನದ್ದಾಗಿತ್ತು. ಅದು ೧೮೮೫ನೆಯ ವರುಷ ಸಮಾಜ ಸುಧಾರಣೆಯ ಗಾಳಿ ಮುಂಬಯಿಯಲ್ಲಿ ಬೀಸುತ್ತಿದ್ದ ಕಾಲವದು. ಮುಂಬಯಿ ಪ್ರಾಂತ್ಯದ ನಾಲ್ಕು ಕನ್ನಡ ಜಿಲ್ಲೆಗಳಲ್ಲಿ ಸಮುದ್ರ ಸಂಪರ್ಕದಿಂದಾಗಿ ಉತ್ತರ ಕನ್ನಡ ಜಿಲ್ಲೆಯ ಸಾಕಷ್ಟು ಜನರು ಮುಂಬಯಿಗೆ ಬಂದು ವಾಸಿಸುತ್ತಿದ್ದರು. ಅವರಲ್ಲಿಯ ಕೆಲವರು ಕನ್ನಡದ ಕೆಲಸವನ್ನು ಆಗಷ್ಟೇ ಪ್ರಾರಂಭಿಸಿದ್ದರು. 'ಕನ್ನಡ ಸುವಾರ್ತೆ' ಎಂಬ ಪತ್ರಿಕೆ ಹೊರಡುತ್ತಿತ್ತು. ಅದಕ್ಕಾಗಿ 'ಕರ್ನಾಟಕ ಪ್ರೆಸ್' ಆರಂಭವಾಗಿದ್ದಿತು. ಇದೀಗ ವೆಂಕಟರಮಣ ಶಾಸ್ತ್ರಿಗಳು ಈ ರಂಗದಲ್ಲಿ ಧುಮುಕಿ ಚೈತನ್ಯ ತುಂಬಿದರು. 'ಭಾರತೀ ಪ್ರೆಸ್' ಸ್ಥಾಪಿಸಿ ಆ ಮೂಲಕ ಪ್ರಕಟಣಾ ಕಾರ್ಯದಲ್ಲಿ ತೊಡಗಿದರು. ಮೊತ್ತ ಮೊದಲ ಕೃತಿ 'ದಕ್ಷಿಣ ಯಾತ್ರಾ ಚರಿತ್ರೆ' ಎಂಬುದು ಉಡುಪಿಯಿಂದ ಗುರುವಾಯೂರುವರೆಗಿನ ಕ್ಷೇತ್ರಗಳನ್ನು ಒಂದೋ -ಎರಡೋ ಪದ್ಯಗಳಲ್ಲಿ ವರ್ಣಿಸಿದ ೩೨ ಪುಟಗಳ ಅಂಗೈಯಗಲದ ಪುಸ್ತಕವದು. ಅನಂತರ ಸುಮಾರು ೨೦ ಪುಸ್ತಕಗಳನ್ನು ಪ್ರಕಟಿಸಿದರು. ಅವರ ಸ್ವಂತದ ಕೃತಿಗಳೆಂದು 'ಪ್ರಾಚೀನ ನಾಟ್ಯ ಕಥಾರ್ಣವ (೧೮೮೮) 'ಅನಾರ್ಯಠ ವಿವರ ಮತ್ತು ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಗಳನ್ನು ಹೆಸರಿಸಬೇಕು. ಇವುಗಳಲ್ಲಿ ಹವ್ಯಕ ಸಮಾಜದಲ್ಲಿದ್ದ ಕನ್ಯಾ ವಿಕ್ರಯದ ವಿಷಯವನ್ನು ಆಧರಿಸಿ ಬರೆದ 'ಇಗ್ಗಪ್ಪ ಹೆಗಡೆ ಪ್ರಹಸನ' ಕನ್ನಡದ ಆದ್ಯ ಸಾಮಾಜಿಕ ನಾಟಕವೆಂಬ ಮನ್ನಣೆ ಪಡೆಯಿತು.

ವೆಂಕಟರಮಣ ಶಾಸ್ತ್ರಿ ಅವರ ನಿಜವಾದ ಶ್ರಮ, ಕಳಕಳಿ ಅವರ ಪತ್ರಿಕೋದ್ಯಮದಲ್ಲಿ ಎದ್ದು ಕಾಣುತ್ತದೆ. 'ಹವ್ಯಕ ಸುಬೋಧ' ವಲ್ಲದೆ ೧೮೮೮ರ ಜನವರಿಯಿಂದ 'ಹಿತೋಪದೇಶ' ಎಂಬ ಇನ್ನೊಂದು ಪತ್ರಿಕೆಯನ್ನೂ ಅವರು ನಡೆಸಿದರು. ಈ ಮಾಸಿಕ ಪತ್ರಿಕೆಯ ಮೂಲ ಉದ್ದೇಶ ಎಳೆಯರ ಮಾನಸಿಕ ವಿಕಾಸವಾಗಿತ್ತು. ಚರಿತ್ರೆ, ಪ್ರಚಲಿತ ವಿಷಯಗಳು, ವೈಜ್ಞಾನಿಕ ಲೇಖನಗಳು ಅದರಲ್ಲಿ ಪ್ರಕಟವಾಗುತ್ತಿದ್ದುವು. ಆದರೆ ವಿಶೇಷ ಆಕರ್ಷಣೆ ಅದರಲ್ಲಿ ಪ್ರಕಟವಗುತ್ತಿದ್ದ ವ್ಯಂಗ್ಯ ಚಿತ್ರಗಳಲ್ಲಿತ್ತು. ಕನ್ನಡದಲ್ಲಿ ವ್ಯಂಗ್ಯ ಚಿತ್ರಗಳನ್ನು ಮೊತ್ತ ಮೊದಲಿಗೆ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರೇ ಬಳಸಿದ್ದಾರೆಂದು ತೋರುತ್ತದೆ.

ಹಿತೋಪದೇಶವನ್ನು ನಾಡಿನ ಭಾಷಾಭಿಮಾನಿಗಳು ತುಂಬ ಮೆಚ್ಚಿಕೊಂಡಿದ್ದರೆಂದು ಕಾಣುತ್ತದೆ. ಆಗ ಬೆಳಗಾವಿಯಲ್ಲಿ ಇಂಜಿನಿಯರಾಗಿದ್ದ ಶ್ರೀಮಾನ್ ಕರ್ಪೂರ ಶ್ರೀನಿವಾಸರಾಯರಿಗೆ 'ಹಿತೋಪದೇಶ'ದ ಮೊದಲ ಸಂಚಿಕೆ ದೊರೆತಾಗ ದಿನಾಂಕ ೧೨-೨-೧೮೮೮ರಂದು ಸಂಪಾದಕರಿಗೆ ಒಂದು ಪತ್ರ ಬರೆದರು. ಅದು ಹೀಗಿದೆ.

"ನೀವು ಕಳುಹಿಸಿದ ನಿಮ್ಮ ಅಮೂಲ್ಯವಾದ 'ಹಿತೋಪದೇಶ'ವೆಂಬ ಮಾಸಿಕ ಪುಸ್ತಕವನ್ನು ಸ್ವೀಕರಿಸಿದೆನು. ನಮ್ಮ ಕನ್ನಡ ಭಾಷೆ ಅತಿ ಹೀನ ಸ್ಥಿತಿಯಲ್ಲಿದ್ದು ಇಂಥಾ ಹಿತೋಪದೇಶಕವಾದ ಪತ್ರಿಕೆಗಳು ಬಹು ಅಪೂರ್ವವಾಗಿರುವುದರಿಂದ ನಿಮ್ಮ ಮೊದಲನೇ ಯತ್ನಕ್ಕೆ ನಿಮ್ಮನ್ನು ಬಹಳವಾಗಿ ಕೊಂಡಾಡಬೇಕಾಗಿದೆ. ಮುಖ್ಯವಾಗಿ ನಿಮ್ಮ ಚಿತ್ರಗಳು ಕೇವಲ ಆನಂದವನ್ನುಂಟು ಮಾಡುವುದಲ್ಲದೆ ನಿಜ ಸ್ಥಿತಿಯ ಸಂಗತಿಗಳನ್ನು ಚೆನ್ನಾಗಿ ಮನಸಿಗೆ ಹತ್ತುವ ಹಾಗೆ ತೋರಿಸುತ್ತವೆ.

'ಹವ್ಯಕ ಸಂಬೋಧ' ದಲ್ಲಿಯ ಕೆನರಾ ಜಿಲ್ಲೆಯ ಅರಣ್ಯ ಖಾತೆಯ ಅವ್ಯವಹಾರಗಳನ್ನು ಬಯಲಿಗೆಳೆದುದರ ಪರಿಣಾಮವಾಗಿ ಸರಕಾರದಿಂದ ಅವರು ಶಿಕ್ಷೆಯನ್ನು ಅನುಭವಿಸಬೇಕಾಯಿತು. ರಾಜಕೀಯ ಕಾರಣದಿಂದ ಶಿಕ್ಷೆಗೊಳಗಾದ ಕನ್ನಡ ಲೇಖಕರಲ್ಲಿ ವೆಂಕಟರಮಣ ಶಾಸ್ತ್ರಿ ಅವರೇ ಮೊದಲಿಗರು ಆ ಮುಂದೆ ಅವರು ಮುಂಬಯಿಯನ್ನುಬಿಟ್ಟು ಪುಣೆಗೆ ಬಂದರು. ಅಲ್ಲಿ ಅವರು ೧೮೮೨ರಲ್ಲಿ ಕೊನೆಯುಸಿರೆಳೆದರು. ಕೇವಲ ಐದು ವರುಷಗಳ ಅವಧಿಯಲ್ಲಿ ಅವರು ಧೀರ ಪತ್ರಿಕೋದ್ಯಮಿಯಾಗಿ, ಆದ್ಯ ಸಾಮಾಜಿಕ ನಾಟಕಕಾರರಾಗಿ ಕನ್ನಡವನು ಕಟ್ಟಿ ಕನ್ನಡ ಸಾರಸ್ವತದಲ್ಲಿ ಅವರು ಶಾಶ್ವತವಾಗಿ ಉಳಿಯುವಂತಾದರು.

೧೯೨೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವರಕವಿ ದ.ರಾ. ಬೇಂದ್ರೆಹಾಗೂ ಹಿರಿಯ ಸಂಶೋಧಕರಾಗಿದ್ದ ನಾ ಶ್ರೀ. ರಾಜಪುರೋಹಿತರು ಕನ್ನಡ ಪತ್ರಿಕೆಗಳ ಒಂದು ಪ್ರದರ್ಶನವನ್ನು ಏರ್ಪಡಿಸಿದ್ದರು. ಅದಾಗ ಕನ್ನಡದಲ್ಲಿ ಪತ್ರಿಕೆಗಳು ಪ್ರಾರಂಭವಾಗಿ ೮ ದಶಕಗಳಾಗಿದ್ದವು. ಆದರೆ, ಸರಿ ಸುಮಾರು ೨೦ ಭಾಗಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ನಾಡು ಒಂದಾಗಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯವು ದೊರತಿರಲಿಲ್ಲ. ಆದರೂ ಪ್ರದರ್ಶನದಲ್ಲಿ ೫೭ ಮೃತ ಪತ್ರಿಕೆಗಳೂ ೬೬ ಸಜೀವ ಪತ್ರಿಕೆಗಳನ್ನು ಪ್ರದರ್ಶಿಸಲಾಗಿತ್ತು !

ಅಕ್ಟೋಬರ್ ೧೯೨೧ರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ನಾ.ಶ್ರೀ. ರಾಜಪುರೋಹಿತರು ಈ ಕುರಿತು ಒಂದು ಲೇಖನವನ್ನೆ ಬರೆದು ಪ್ರದರ್ಶನಕ್ಕೆ ಇಟ್ಟ ಪತ್ರಿಕೆಗಳ ಹೆಸರು, ಅವು ಪ್ರಾರಂಭವಾದ ವರುಷಗಳೊಂದಿಗೆ ನಮೂದಿಸಿದ್ದಾರೆ. ಪತ್ರಿಕೆ ಪ್ರದರ್ಶನದ ಉದ್ದೇಶವನ್ನು ಈ ರೀತಿಯಾಗಿ ಹೇಳಿದ್ದಾರೆ.

"ಪತ್ರಿಕೆಗಳನ್ನು ಪ್ರಕಟಿಸಿ ಜ್ಞಾನ ಪ್ರಸಾರವನ್ನೂ ಲೋಕ ಜಾಗೃತಿಯನ್ನೂ ಮಾಡುವ ಕಾರ್ಯವು ಇತರ ಉದ್ಯೋಗಗಳಂತೆ ಲಾಭದಾಯಕವಾದುದಲ್ಲ. ಕೇವಲ ಸ್ವಾರ್ಥ ತ್ಯಾಗ ಪೂರ್ವಕವಾದ ದೇಶೋನ್ನತಿಯ ಪವಿತ್ರವಾದ ಕಾರ್ಯವು ಇಂತಹ ಅಸೀಧಾರಾವ್ರತದಂಥ ಕಷ್ಟಕರವಾದ ಕಾರ್ಯವನ್ನು ಮಾಡಲು ಮುಂದುವರಿದ ಮಹನೀಯರುಗಳನ್ನು ಅಭಿನಂದಿಸುವುದಕ್ಕಾಗಿಯೂ ಪತ್ರಿಕೆಗಳಿಗೆ ಬಂದೊದಗುವ ರೋಗ ನಿದಾನಗಳನ್ನು ಕಂಡು ಹಿಡಿದು, ಚಿಕಿತ್ಸೆಯನ್ನು ಗೊತ್ತುಪಡಿಸಿ, ಜನರಲ್ಲಿ

ಜ್ಞಾನಲಾಲಸೆಯನ್ನುಂಟು ಮಾಡಿ ಅವುಗಳ ಅಕಾಲ ಮರಣವನ್ನು ನಿಲ್ಲಿಸುವುದಕ್ಕಾಗಿಯೂ ಜನರಲ್ಲಿ ಜ್ಞಾನವನ್ನುಂಟು ಮಾಡಿ ಅವುಗಳಿಗೆ ಲೋಕಾಶ್ರಯವು ದೊರೆಯುವಂತೆ ಮಾಡುವುದಕ್ಕಾಗಿಯೂ ಈ ಪತ್ರಿಕಾ ಪ್ರದರ್ಶನ ಏರ್ಪಡಿಸಲ್ಪಟ್ಟಿತು.

ಅಂದಿನ ದಿನಗಳಲ್ಲಿ ಅದೊಂದು ಸಾಹಸದ ಕೆಲಸವೇ ಆಗಿತ್ತು. ಈಗಿನಂತೆ ಒಂದೆಡೆ ನೋಂದಣಿ ಮಾಡುವ ಪದ್ಧತಿಯೂ ರೂಢಿಯಲ್ಲಿ ಇರಲಿಲ್ಲ. ಬೇರೆ-ಬೇರೆ ಭಾಷೆಗಳ ಜನರ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳನ್ನು ಸಂಗ್ರಹಿಸಬೇಕಾಗಿತ್ತು. ಅವರೆ ಮುಂದುವರಿದು ಹೇಳುತ್ತ ''ನಾನು ಹಾಗೂ ನಮ್ಮ ಮಿತ್ರರಾದ ಶ್ರೀಯುತ ದ.ರಾ. ಬೇಂದ್ರೆ ಅವರೂ ಸೇರಿ ಒಂದು ಪ್ರಕಟಣೆಯನ್ನು ಕರ್ಮವೀರ, ಸಾಧ್ವಿ, ಕಂಠೀರವ ಪತ್ರಿಕೆಗಳಲ್ಲಿ ಪ್ರಸಿದ್ಧ ಮಾಡಿ, ಸಮಸ್ತ ಸಂಪಾದಕ ಮಹಾಶಯರನ್ನೂ ಇತರ ಕನ್ನಡ ಬಂಧುಗಳನ್ನೂ ಪತ್ರಿಕೆಗಳ ಒಂದೊಂದು ಪ್ರತಿಯನ್ನು ಕಳುಹಿಸಿಕೊಡಿರೆಂದು ಪ್ರಾರ್ಥನೆ ಮಾಡಿಕೊಂಡೆವು. ಹಾಗೂ ಅವುಗಳ ಜೊತೆಯಲ್ಲಿ ಆಯಾ ಪತ್ರಿಕೆಗಳ ಚರಿತ್ರೆಯನ್ನು ಬರೆದು ಕಳುಹಿಸಿರೆಂದು ಬರೆದುಕೊಂಡೆವು. ಇದೇರೀತಿಯಾಗಿ ಬೇರೆ ನೂರು ಕಾರ್ಡುಗಳನ್ನು ಮುದ್ರಿಸಿ, ಪ್ರತಿಯೊಬ್ಬ ಸಂಪಾದಕರಿಗೂ ಪತ್ರಗಳನ್ನು ಕಳುಹಿಸಿದೆವು ಎಂದಿದ್ದಾರೆ. ಅವರ ಮನಸ್ಸಿಗೆ ಸ್ಪಂದಿಸಿ ಕೆಲವರು ತಮ್ಮ ಪತ್ರಿಕೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಇನ್ನು ಕೆಲವನ್ನು ಅವರಿಬ್ಬರೂ ಅಲ್ಲಿ ಇಲ್ಲಿ ಹುಡುಕಿ ದೊರಕಿಸಿದರು. ಈ ರೀತಿಯಾಗಿ ಸಂಗ್ರಹಿಸಿದ ಪತ್ರಿಕೆಗಳನ್ನು ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನದಲ್ಲಿ ದೊರೆತ ಪ್ರಶಸ್ತ ಸ್ಥಳದಲ್ಲಿ ಪ್ರದರ್ಶಿಸಿದರಂತೆ.

ಪ್ರದರ್ಶನದಲ್ಲಿ ಇಡಲ್ಪಟ್ಟ ಮೃತ ಹಾಗೂ ಸಜೀವ ಪತ್ರಿಕೆಗಳು ಇಂತಿವೆ.

ಮೃತ ಪತ್ರಿಕೆಗಳು

(ಅಂಕಣದಲ್ಲಿ ಪ್ರಾರಂಭದ ವರುಷ)

೧) ಸಭಾ ಪತ್ರವು (೧೮೬೮)	೨) ಹಿತ ಬೋಧಿನ (೧೮೮೩)
೩) ಆನಂದ ಮಂದಿರ (೧೮೮೭)	೪) ಅರುಣೋದಯ (೧೮೮೭)
೫) ಹಿತೋಪದೇಶ ((೧೮೮೮)	೬) ಲೋಕಶಿಕ್ಷಕ ((೧೮೯೦)
೭) ಸುರಭಿ (೧೮೯೫)	೮) ಜ್ಞಾನೋದಯ (೧೮೯೬)
೯) ಭಾಷಾ ಸೇವಕ (೧೮೯೬)	೧೦) ಸವಿನುಡಿ ((೧೮೯೮)
೧೧) ಗ್ರಂಥ ಸಂಗ್ರಹ ((೧೮೯೯)	೧೨) ಸುವಾಸಿನಿ ((೧೯೦೦)
೧೩) ಹಿತ ವಾದಿ (೧೯೦೪)	೧೪) ವಿವೇಕೋದಯ (೧೯೦೪)

೧೫) ವೈದ್ಯ ಸಿಂಧು (೧೯೦೬)
೧೬) ವೀರಶೈವ ಪ್ರಭಾಕರ ((೧೯೦೬)
೧೭) ವಿಕಟ ಪ್ರತಾಪ (೧೯೦೬)
೧೮) ಕನ್ನಡ ನುಡಿಗನ್ನಡಿ (೧೯೦೭)
೧೯) ವಿನೋದಿನಿ (೧೯೦೭)
೨೦) ಸುಭಾಷಿಣಿ
೨೧) ಆವಾಕಾಶ ತೋಷಿಣಿ (೧೯೦೭)
೨೨) ವಾಗ್ದೇವಿ (೧೯೦೭)
೨೩) ಸರ್ವಜನಹಿತೋಪಕಾರಿಣಿ(೧೯೦೭)
೨೪) ವೀರಶೈವ ಗ್ರಂಥ ಪ್ರಕಾಶಿಕಾ(೧೯೦೭)
೨೫) ಭಾರತ ಮಿತ್ರ (೧೯೦೮)
೨೬) ವಿದ್ಯಾನಂದ (೧೯೦೮)
೨೭) ಚಾತುರ್ಯ (೧೯೦೮)
೨೮) ಸರ್ವನೋಪಕಾರಿಣಿ (೧೯೦೮)
೨೯) ಕರ್ನಾಟಕ ಚಂದ್ರಿಕೆ (೧೯೦೮)
೩೦) ಭಕ್ತಿ ವಿಜಯ (೧೯೦೯)
೩೧) ಶ್ರೀ ಕೃಷ್ಣಸೂಕ್ತಿ (೧೯೦೮)
೩೨) ಶಾರದಾ (೧೯೧೦)
೩೩) ಜೈನ ಹಿತೈಷಿಣಿ (೧೯೧೦)
೩೪) ಪರಮಾರ್ಥ (೧೯೧೧)
೩೫) ಮಧುರವಾಣಿ ((೧೯೧೧)
೩೬) ವೇದಾರ್ಥ ಪ್ರಕಾಶ (೧೯೧೪)
೩೭) ಶ್ರೀಕೃಷ್ಣ (೧೯೧೫)
೩೮) ಆರ್ಯ ಮಹಿಳಾ (೧೯೧೫)
೩೯) ಸಚಿತ್ರ ಭಾರತ (೧೯೧೫)
೪೦) ವಿದ್ಯೋದಯ (೧೯೧೫)
೪೧) ಚಂದ್ರೋದಯ (೧೯೧೫)
೪೨) ಲೋಕ ಶಿಕ್ಷಕ (೧೯೧೫)
೪೩) ಬೋಧಿನಿ (೧೯೧೬)
೪೪) ಸವಿಗಾರ (೧೯೧೬)
೪೫) ವಿಜ್ಞಾನ (೧೯೧೭)
೪೬) ಮಹಿಳಾ (೧೯೧೭)
೪೭) ಮಲೆನಾಡು ಸಮಾಚಾರ (೧೯೧೭)
೪೮) ಹಿತಚಿಂತಕ (೧೯೧೭)
೪೯) ಕರ್ನಾಟಕ ನಂದಿನಿ (೧೯೧೭)
೫೦) ಆನಂದ ಚಂದ್ರಿಕೆ (೧೯೧೮)
೫೧) ವಾಣಿ ವಿಲಾಸ (೧೯೧೮)
೫೨) ಪ್ರಬೋಧ (೧೯೧೮)
೫೩) ಹಾಸ್ಯ ಕೌಮುದಿ (೧೯೧೯)
೫೪) ಜ್ಞಾನಾಂಜನ (೧೯೧೯)
೫೫) ಕರ್ನಾಟಕ ಎಜ್ಯುಕೇಷನ್ ಸೋಸಾಯಿಟಿ ತ್ರೈಮಾಸಿಕ (೧೯೨೦)
೫೬) ನವನೀತ (೧೯೨೦)
೫೭) ಹಿತವಾದಿ (೧೯೨೦)

ಒಂದು ಎರಡು ವರುಷಗಳಷ್ಟು ಹಿಂದೆ ಹುಟ್ಟಿ ಮೃತವಾದ ಪತ್ರಿಕೆಗಳೂ ಇವೆ.

ಸಜೀವ ಪತ್ರಿಕೆಗಳು

೧) ಶಾಲಾ ಪತ್ರಿಕೆ (೧೮೬೫)
೨) ವಿದ್ಯಾದಾಯಿನಿ (೧೮೯೨)
೩) ಕರ್ನಾಟಕ ಗ್ರಂಥಮಾಲೆ (೧೮೯೨)
೪) ವಾಗ್ಭೂಷಣ (೧೮೯೬)

೫) ಮಹಿಳಾ ಸಖಿ (೧೯೦೧)
೬) ತೇಜಿನ ವಿಜಯ (೧೯೦೫)
೭) ಸದ್ಬೋಧ ಚಂದ್ರಿಕೆ ((೧೯೦೭)
೮) ಡೆಕ್ಕನ್ ಕಾಲೇಜ್ ತ್ರೈಮಾಸಿಕ(೧೯೦೯)
೯) ಒಕ್ಕಲಿಗರಿಗೂ ಒಕ್ಕಲುತನವೂ(೧೯೧೦)
೧೦) ವಿಕಟ ವಿನೋದಿನಿ (೧೯೧೧)
೧೧) ಕಾದಂಬರಿ ಸಂಗ್ರಹ (೧೯೧೧)
೧೨) ಧರ್ಮ ತರಂಗಿಣಿ (೧೯೧೧)
೧೩) ಸ್ಯಾನಿಟರಿ ತ್ರೈಮಾಸಿಕ (೧೯೧೪)
೧೪) ವಿದ್ಯೋದಯ (೧೯೧೫)
೧೫) ಕನ್ನಡ ಕೋಗಿಲೆ (೧೯೧೫)
೧೬) ಕನ್ನಡ ಶಿಕ್ಷಕ (೧೯೧೫)
೧೭) ಅಕ್ಷರಾಂಜಲಿ (೧೯೧೯)
೧೮) ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ (೧೯೧೬)
೧೯) ಮಧ್ವ ಸಿದ್ಧಾಂತ ಪ್ರಕಾಶಿನಿ (೧೯೧೬)
೨೦) ಸರಸ್ವತಿ (೧೯೧೭)
೨೧) ಕರ್ನಾಟಕ ಕಾಲೇಜು ತ್ರೈಮಾಸಿಕ (೧೯೧೭)
೨೨) ತಾರಕೋದಯ (೧೯೧೭)
೨೩) ವಿದ್ಯೋದಯ (೧೯೧೭)
೨೪) ಪೌರ ಸಾಮಾಜಿಕ ಪತ್ರಿಕೆ (೧೯೧೮)
೨೫) ವಿದ್ಯಾರ್ಥಿ (೧೯೧೮)
೨೬) ಭಕ್ತಿ ಸಂದೇಶ (೧೯೧೮)
೨೭) ಪ್ರಭಾತ (೧೯೧೮)
೨೮) ಪ್ರಬುದ್ಧ ಕರ್ನಾಟಕ (೧೯೧೯)
೨೯) ಸದ್ಗುರು (೧೯೧೯)
೩೦) ಭಕ್ತಬಂಧು(೧೯೧೯)
೩೧) ಕನ್ನಡ ಸಹಕಾರಿ (೧೯೧೯)
೩೨) ಪ್ರಾಥಮಿಕ ಶಿಕ್ಷಕ (೧೯೧೯)
೩೩) ಬ್ರಹ್ಮವಿದ್ಯಾ (೧೯೧೯)
೩೪) ಉಪಾಧ್ಯಾಯ ಸರ್ವಸ್ವ (೧೯೧೯)
೩೫) ಮಾತೃಭೂಮಿ (೧೯೨೦)
೩೬) ವಿಶ್ವಬ್ರಹ್ಮವಿಜಯ (೧೯೨೦)
೩೭) ಕರ್ನಾಟ ಶಿಕ್ಷಣ (೧೯೨೦)
೩೮) ವೀರಶೈವ ಧರ್ಮ ಪ್ರಕಾಶಿಕೆ(೧೯೨೦)
೩೯) ಕೈಗಾರಿಕೆ (೧೯೨೦)
೪೦) ಬಾಲ ಮಿತ್ರ (೧೯೨೧)

ವರ್ತಮಾನ ಪತ್ರಿಕೆಗಳು

೪೧) ಮೈಸೂರು ಸ್ಟಾರ್ (೧೮೮೭)
೪೨) ವೃತ್ತಾಂತ ಪತ್ರಿಕೆ (೧೮೮೭)
೪೩) ಕರ್ನಾಟಕ ವೃತ್ತ (೧೮೮೭)
೪೪) ಧನಂಜಯ (೧೮೮೯)
೪೫) ಲೋಕಬಂಧು (೧೮೯೧)
೪೬) ಕರ್ನಾಟಕ ವೈಭವ (೧೮೯೨)
೪೭) ಸ್ವದೇಶಾಭಿಮಾನಿ ಶ್ರ೧೯೦೬)
೪೮) ಸಾಧ್ವಿ (೧೯೦೭)
೪೯) ಒಕ್ಕಲಿಗರ ಪತ್ರಿಕೆ (೧೯೦೭)
೫೦) ರಾಜಹಂಸ (೧೯೧೩)
೫೧) ಅರ್ಥಸಾಧಕ ಪತ್ರಿಕೆ (೧೯೧೪)
೫೨) ಸಂಪದಭ್ಯುದಯ (೧೯೧೪)
೫೩) ಶಿವಮೊಗ್ಗಾ ವೃತ್ತಾಂತ (೧೯೧೫)
೫೪) ಕಾನಡ ವೃತ್ತ (೧೯೧೮)
೫೫) ಶುಭೋದಯ (೧೯೧೬)
೫೬) ದಿ ಟ್ರೂಥ್ (೧೯೧೮)
೫೭) ಲೋಕವಾರ್ತೆ (೧೯೧೮)
೫೮) ವಿಭಾಕರ (೧೯೧೮)
೫೯) ಕಂಠೀರವ (೧೯೧೮)
೬೦) ಸತ್ಯವಾದಿ (೧೯೧೮)

೬೧) ವೃತ್ತಾಂತ ರತ್ನಾಕರ (೧೯೧೮) ೬೨) ವಿಜಯ (೧೯೧೮)
೬೩) ಕರ್ನಾಟಕ ಮಿತ್ರ (೧೯೨೦) ೬೪) ಬ್ರಾಹ್ಮಣ ಪತ್ರಿಕೆ (೧೯೨೦)
೬೫) ಕರ್ನಾಟಕ ಟಾಯಮ್ಸ್ (೧೯೨೧) ೬೬) ಕರ್ಮವೀರ (೧೯೨೧)
೬೭) ನವೀನ ಭಾರತ (೧೯೨೧)

೧೯೨೧ರ ಚಿಕ್ಕಮಗಳೂರಿನ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶನಗೊಂಡ ಮೃತ ಹಾಗೂ ಸಜೀವ ಪತ್ರಿಕೆಗಳಲ್ಲಿ ೧೨೪ ಪತ್ರಿಕೆಗಳಿದ್ದವು. ಆದರೆ ಈ ಪ್ರದರ್ಶನದಲ್ಲಿ ಇನ್ನೂ ಎಷ್ಟೋ ಮೃತ ಹಾಗೂ ಸಜೀವ ಪತ್ರಿಕೆಗಳು ಬಂದಿರುವುದಿಲ್ಲ' ಎಂದು ಹೇಳಲಾಗಿದೆ. ವಿಶೇಷವಾಗಿ ವೀರಕೇಸರಿ, ಸುಮತಿ, ಧನುರ್ಧಾರಿ, ಭಾರತೀ ವಿಲಾಸ, ಲಾಗೆಜೆಟ್, ಹವ್ಯಕ ಸುಬೋಧ, ಕನ್ನಡ ಕೇಸರಿ, ಹಿಂದುಸ್ಥಾನ ಸಮಾಚಾರ, ಮೈಸೂರು ನವಸೈನಿಕ ಪತ್ರಿಕೆ, ವ್ಯವಸಾಯ, ಸುದ್ದಿಯ ಸೊಬಗು, ರಸಿಕ, ರಂಜನಿ, ಲೋಕಮಿತ್ರ, ತುಮಕೂರು ವರ್ತಮಾನ, ಹೊಸಪೇಟೆಯ ನವನೀತ, ಸುದರ್ಶನ, ಬೆಂಗಳೂರು ಡಿಸ್ಟ್ರಿಕ್ಟ್ ಪತ್ರಿಕೆ, ಭಾರತಿ, (ಸಿದ್ಧಾಪುರ), ವಸುಮತಿ, ಕೊಡಗು ಕ್ಷೇಮ ಸಮಾಚಾರ, ಮೊದಲಾದ ಪತ್ರಿಕೆಗಳು ಅವರಿಗೆ ದೊರೆಯಲಿಲ್ಲ ಎಂದು ಹೇಳಿಕೊಂಡಿದ್ದಾರೆ.

ಇವುಗಳಲ್ಲಿಯ 'ಸುದ್ದಿಯ ಸೊಬಗು ಪತ್ರಿಕೆಯ ಉಲ್ಲೇಖವು ಈ ಹಿಂದಿನ ಯಾವ ಸಂಪ್ರಬಂಧಗಳಲ್ಲಾಗಲಿ, ಬರಹಗಳಲ್ಲಾಗಲಿ ಬಂದಿಲ್ಲದಿರುವುದು ವಿಶೇಷವಾಗಿದೆ. ಆದರೆ ಆ ಪತ್ರಿಕೆಯು ಕನ್ನಡದಲ್ಲಿಯ ಮೊದಲನೆಯ ವರ್ತಮಾನ ಪತ್ರಿಕೆ ಎಂಬುದಾಗಿ ೧೯೧೭ರ ಅಕ್ಟೋಬರ್ ತಿಂಗಳ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಉಲ್ಲೇಖಿತವಾಗಿದೆ ಮತ್ತು ಈ ಪತ್ರಿಕೆಯ ಬಗ್ಗೆ ಸಮಕಾಲೀನ ಇತರ ಪತ್ರಿಕೆಗಳೂ ಉಲ್ಲೇಖಿಸಿವೆ ಎಂದು ಹೇಳಲಾಗುತ್ತದೆ. ವಿಶೇಷವಾಗಿ ಅದು ಬಳಸುವ ಭಾಷೆಯ ಬಗ್ಗೆ ಕ್ರಿ.ಶ. ೧೮೭೩ರ ಫೆಬ್ರುವರಿಯ ಸಂಚಿಕೆಯಲ್ಲಿ ಬೆಳಗಾವಿಯ 'ಶಾಲಾ ಪತ್ರಕ' ಪತ್ರಿಕೆಯಲ್ಲಿ ಈ ರೀತಿ ಉದ್ಗಾರಗಳನ್ನು ತೆಗೆದಿದ್ದಾರೆ.

'ಈಗ ನಾಲ್ಕುರು ವರುಷಗಳ ಹಿಂದಿನ ಸ್ಥಿತಿಯನ್ನು ನೋಡಲಾಗಿ ಆಗ್ಯೂ,ಈಗ್ಯೂ ಬಹಳ ಅಂತರವುಂಟೆಂದು ಕಂಡು ಬರುತ್ತದೆ. ಆಗ ತಕ್ಕಮಟ್ಟಿಗೆ ಶುದ್ಧವಾಗಿ ಕನ್ನಡ ಭಾಷೆಯಲ್ಲಿ ನಾಲ್ಕು ಪಂಕ್ತಿಗಳನ್ನು ಬರೆಯ ಬಲ್ಲವರನ್ನು ಕಾಣುವುದು ಅಪರೂಪವಾಗಿತ್ತು. ಅರ್ಧ ಮಹಾರಾಷ್ಟ್ರ ಮಿಶ್ರಿತವಾದ ಕನ್ನಡ ಭಾಷೆಯು ಈ ಪ್ರಾಂತದಲ್ಲಿ ವಾಡಿಕೆಯಾಗಿ ನಡೆಯುತ್ತಿದ್ದಂತೆಯೇ ಎಲ್ಲ ಬಗೆಯ ಕಾಗದ ಪತ್ರಗಳಲ್ಲಿ ದೃಷ್ಟಿಗೆ ಬೀಳುತ್ತಿತ್ತು. ಈ ಪತ್ರಕದಲ್ಲಿ ಪ್ರಸಿದ್ಧಿಸಲ್ಪಡುವುದಕ್ಕೆ ನಮ್ಮ ಬಳಿಗೆ ೧೦ ಪತ್ರಗಳು ಬಂದರೆ ಅವುಗಳಲ್ಲಿ ಸ್ಥಳ ಕೊಡುವಷ್ಟು ಶುದ್ಧವಾದ ಭಾಷೆಯುಳ್ಳ ಪತ್ರ ಒಂದು ಸಹ ದುರ್ಲಭವಾಗುತ್ತಿತ್ತು.

ಆದರೆ ಈಗಿನ ಸ್ಥಿತಿಯು ಹಾಗಿಲ್ಲ. ನಮಗೆ ಬಂದ ಪತ್ರಗಳಲ್ಲಿಅರ್ಧಕ್ಕಿಂತ ಹೆಚ್ಚು ಪತ್ರಗಳು ಸ್ವೀಕರಿಸತಕ್ಕಂಥವಿರುತ್ತವೆಂದು ನೋಡಿ ನಮಗೆ ಬಹಳ ಸಂತ್ತೋಷವಾಗುತ್ತದೆ. ಇದಲ್ಲದೆ ಇತ್ತಲಾಗಿ ಬೆಳಗಾವಿಯಲ್ಲಿ ಹೊಸದಾಗಿ ಕನ್ನಡ ಅಚ್ಚುಕೂಟವುಂಟಾದುದರಿಂದ ಕಳೆದ ವರ್ಷ ಒಂದೂವರೆ ವರ್ಷದೊಳಗೆ ಹತ್ತೆಂಟು ಹೊಸ ಕನ್ನಡ ಪುಸ್ತಕಗಳು ಜನರಿಂದ ಪ್ರಸಿದ್ಧಿಸಲ್ಪಟ್ಟವೆಂಬುದು ಅತ್ಯಾನಂದಕರವಾದ ಸಂಗತಿ.

ಈ ಉದ್ಗಾರಗಳನ್ನು ನೋಡಿದರೆ 'ಸುದ್ಧಿಯ ಸೊಬಗು' ಪತ್ರಿಕೆಯು ಕ್ರಿ.ಶ. ೧೮೬೮-೬೯ರಲ್ಲಿ ಬೆಳಗಾವಿಯಿಂದಲೇ ಹೊರಡುತ್ತಿತ್ತೆಂದು ಕಾಣುತ್ತದೆ. ಪೂರ್ಣ ಪ್ರಮಾಣದ ಕನ್ನಡ ವರ್ತಮಾನ ಪತ್ರವೊಂದು ಪ್ರಾರಂಭವಾದುದು ಬೆಳಗಾವಿಯಿಂದಲೇ ಎಂಬುದು ಇನ್ನಷ್ಟು ವಿಶೇಷ ವಿಷಯವಾಗಿದೆ. ಈ ಬಗ್ಗೆ ಸಂಶೋಧನೆಯಾಗಬೇಕಿದೆ. ಕನ್ನಡ ಭಾಷೆಯ ಅಭಿವೃದ್ಧಿಯ ಬಗ್ಗೆ ಉದ್ಗಾರಗಳನ್ನು ತೆಗೆಯುತ್ತ ಕನ್ನಡ, ಕರ್ನಾಟಕ, ಕನ್ನಡ ಸಾಹಿತ್ಯದ ಹಿಂದಿನ ಕಾಲದ ಶ್ರೀಮಂತಿಕೆಯನ್ನು ನೆನಪಿಸಿಕೊಂಡದ್ದು ಅಪೂರ್ವವಾಗಿದೆ. ಶಾಲಾ ಪಕ್ಷದಲ್ಲಿಯ ಉದ್ಗಾರಗಳನ್ನು ಉಲ್ಲೇಖಿಸುತ್ತ 'ಆಹಾಹಾ ! ಯಾವ ಕನ್ನಡವು 'ತಿರುಳ್ ಕನ್ನಡ' !! ಎಂದು ನೃಪತುಂಗ, ಆದಿಪಂಪ, ಮೊಲಾದ ಉದ್ಧಾಮ ಪಂಡಿತರಿಂದ ಹೊಗಳಿಸಿಕೊಂಡಿತೋ, ಯಾವ ಕನ್ನಡದಲ್ಲಿ ಆದಿಪಂಪ, ರನ್ನ, ಪೊನ್ನ, ಕುಮಾರವ್ಯಾಸರಂತಹ ಉದ್ಧಾಮ ಕವಿಗಳೂ ನೃಪತುಂಗ, ನಯಸೇನರಂತಹ ವೈಯಾಕರಣರೂ ಅವತರಿಸಿದರೋ ಅಂತಹ ಕನ್ನಡ ಸ್ಥಿತಿಯು ಹೀಗಾಗಬೇಕೇ !!! ಹಾಯ್ !! ಯಾರೇನು ಮಾಡುವುದು' ಎಂದಿದ್ದಾರೆ. ಮುಂದುವರೆದು ಇನ್ನು ಮೇಲಾದರೂ ನಮ್ಮ ಉತ್ತರ ಕರ್ನಾಟಕದ ಬಂಧುಗಳು ನಮ್ಮ ಪೂರ್ವದ ಕೀರ್ತಿಯನ್ನು ಸ್ಮರಿಸಿ ಕರ್ತವ್ಯ ನಿಷ್ಠರಾಗಿ ಸಮಸ್ತ ಕನ್ನಡಿಗರಿಗೆಲ್ಲಾ ಮೇಲು ಪಂಕ್ತಿಯಾಗಿ ಶೋಭಿಸಬೇಕೆಂದು ಹಾರೈಸಿದ್ದಾರೆ.

ಪ್ರದರ್ಶನದಲ್ಲಿದ್ದ ಮೃತ ಪತ್ರಿಕೆಗಳಲ್ಲಿ ವಿಜ್ಞಾನ, ಪ್ರಬೋಧ, ಹಿತೋಪದೇಶ, ಸುವಾನಿಸಿ, ಶ್ರೀ ಕೃಷ್ಣ ಮೊದಲಾದುವು ಸರ್ವಾಂಗ ಸುಂದರವಾದ ಪತ್ರಿಕೆಗಳಾಗಿದ್ದವಂತೆ. ಜೊತೆಗೆ ೫೭ ಮೃತ ಪತ್ರಕೆಗಳನ್ನು ಉಲ್ಲೇಖಿಸುತ್ತ ಇಷ್ಟು ಪತ್ರಿಕೆಗಳು ಯಾಕೆ ಮರಣಹೊಂದಿದವು ? ಇವುಗಳಿಗೆ ರೋಗವೇನಾಗಿತ್ತು ? ಎಂದು ಚರ್ಚಿಸುತ್ತ ಅದಕ್ಕಾಗಿಯೇ ಪತ್ರಿಕೆಯ ಚರಿತ್ರೆಯನ್ನು ಕೇಳಿದ್ದಾಗಿ ಹೇಳಿಕೊಂಡಿದ್ದಾರೆ. ಪ್ರತಿಯಾಗಿ ಸುವಾಸಿನಿ, ವಿಜ್ಞಾನ, ಕರ್ನಾಟಕ ವೈಭವ, ನವೀನ ಭಾರತ, ಪತ್ರಿಕೆಗಳು ತಕ್ಕಮಟ್ಟಿಗೆ ಚೆನ್ನಾಗಿ ಬರೆದು ಕಳಿಸಿದ್ದರು. ವೈದ್ಯ ಸಿಂಧು, ಸರಸ್ವತಿ ಪತ್ರಿಕೆಗಳ ಸಂಪಾದಕರು ತಮ್ಮ ಪತ್ರಿಕೆಯ ಚರಿತ್ರೆಯನ್ನ ಬರೆದು ಕಳುಹಿಸದೆ, ತಮ್ಮ ಸ್ವಂತ ಜೀವನ ಚರಿತ್ರೆಯನ್ನು ಬರೆದು ಕಳಿಸಿದ್ದರಂತೆ ! ಮಿಕ್ಕವರು ಯಾರೂ ಏನೂ ಚರಿತ್ರೆಯನ್ನು ಬರೆದು ಕಳುಹಿಸಲಿಲ್ಲ. 'ಆದುದರಿಂದ ರೋಗವನ್ನು ನಿದಾನ ಮಾಡುವುದಕ್ಕೂ ಚಿಕಿತ್ಸೆಯನ್ನು ಗೊತ್ತು ಪಡಿಸುವುದಕ್ಕೂ ನಮಗೆ ಸರಿಯಾಗಿ ತಿಳಿಯಲಿಲ್ಲ' ಎಂದು

ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ ಮತ್ತು ಮುಂದಾದರೂ ಸಂಪಾದಕ ಮಹಾಶಯರೆಲ್ಲರೂ ಇದರಡಿಯಲ್ಲಿರುವ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಬರೆದು ಕಳಿಸಬೇಕೆಂದು ಕೇಳಿಕೊಂಡಿದ್ದಾರೆ. ಅದರಲ್ಲಿ ಒಂದು ಪ್ರಶ್ನೆ ' ನಿಮ್ಮ ಪತ್ರಿಕೆಯ ಚಂದಾದಾರರು ಧಾರವಾಡ, ಮೈಸೂರು, ಮಂಗಳೂರು ಪ್ರಾಂತಗಳಲ್ಲಿ ಶೇಕಡ ಯಾವ ಯಾವ ಪ್ರಮಾಣದಲ್ಲಿ ಇದ್ದಾರೆ ?' ಎಂಬುದು. ಪತ್ರಿಕೆಗಳ ಮೂಲಕ ವಿಭಿನ್ನ ಪ್ರಾಂತಗಳಲ್ಲಿದ್ದ ಕನ್ನಡಿಗರು ಪರಸ್ಪರ ಸಂಪರ್ಕದಲ್ಲಿ ಬರಬೇಕೆಂಬುದೇ ಅವರ ಆಶಯವಾಗಿತ್ತು. ಅದಕ್ಕೊಂದು ನಿದರ್ಶನವನ್ನು ಕೊಡುವುದಾದರೆ ಬೇರೊಂದು ಸಂದರ್ಭದಲ್ಲಿ ಉಲ್ಲೇಖಿತವಾದಂತೆ 'ಸದ್ಬೋಧ ಚಂದ್ರಿಕೆ' ಎಂಬ ಮಾಸ ಪತ್ರಿಕೆಯು ಧಾರವಾಡ ಜಿಲ್ಲೆಯ ಅಗಡಿಯ ಆನಂದವನದಿಂದ ಪ್ರಕಟವಾಗುತ್ತಿತ್ತಷ್ಟೇ. ಆ ಮಾಸಪತ್ರಿಕೆಯಲ್ಲಿ ಅದಾಗಲೇ ಮೈಸೂರು ಭಾಗದಲ್ಲಿ ಪ್ರಸಿದ್ಧರಾಗಿದ್ದ ಬಿ. ವೆಂಕಟಾಚಾರ್ಯ ಕಾದಂಬರಿಕಾರರಂತೆ ಗಳಗನಾಥರು ಸುಂದರ ಹಾಗೂ ಸುಲಭವಾದ ಕನ್ನಡ ಭಾಷೆಯಲ್ಲಿ ಕಾದಂಬರಿಗಳನ್ನು ಬರೆಯುತ್ತಿದ್ದರು. ಅವರ ಭಾಷೆಗೆ ಮರುಳಾಗಿ ಕ್ರಿ.ಶ. ೧೯೧೬-೧೭ರಲ್ಲಿ ಸದ್ಬೋಧ ಚಂದ್ರಿಕೆ ಮಾಸ ಪತ್ರಿಕೆಯ ಏಳು ಸಾವಿರ ಜನರು ಚಂದಾದಾರರಾಗಿದ್ದರು. 'ಕನ್ನಡ ಪುಸ್ತಕಗಳನ್ನು ಎಂದೂ ಕಣ್ಣೆತ್ತಿ ನೋಡದ ಹೈದರಾಬಾದ ಪ್ರಾಂತದ ಜನರು ಐದುನೂರು ಮಂದಿ ಚಂದಾದಾರರಾಗಿದ್ದರು ! ಮಂಗಳೂರು, ಮದ್ರಾಸ, ಬಳ್ಳಾರಿ, ಅನಂತಪುರ, ಮೊದಲಾದ ಕರ್ನಾಟಕದ ಪ್ರತಿಯೊಂದು ಭಾಗದಲ್ಲಿಯೂ ಮಾಸ ಪತ್ರಿಕೆ ಪ್ರವೇಶ ಮಾಡಿದೆ.' ಎಂದು ೧೯೧೭ರಷ್ಟು ಹಿಂದೆ ಹೇಳಿಕೊಂಡಿದ್ದಾರೆ. ಅದಕ್ಕೊಂದು ಸುಂದರವಾದ ಕಲ್ಪನೆಯನ್ನು ನೀಡಿದ್ದಾರೆ.

''ಸದ್ಬೋಧ ಚಂದ್ರಿಕೆ' ಮಾಸ ಪತ್ರಿಕೆಯೊಂದು ನದಿಯೆಂದು ಕಲ್ಪಿಸಿದರೆ, ಈ ನದಿಯ ಮಹಾಪ್ರವಾಹವು ತನ್ನ ಸುತ್ತ ಮುತ್ತ ಹಾಕಿದಂಥ ಮಂಗಳೂರು ಕನ್ನಡ, ಮೈಸೂರು ಕನ್ನಡಗಳೆಂಬ ಕೃತ್ರಿಮ ಒಡ್ಡುಗಳನ್ನು ಕಿತ್ತು ಒಗೆದು, ಒಳ್ಳೆ ಭರದಿಂದ ಎಲ್ಲ ಕಡೆಗೂ ಹರಿದು ಹೋಗದೇ !!'' ಎಂಥ ಸುಂದರ ಕಲ್ಪನೆಯಲ್ಲವೆ ? ೧೯ನೆಯ ಶತಮಾನದ ಉತ್ತರಾರ್ಧ ಮತ್ತು ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಕನ್ನಡಿಗರನ್ನು ಬೆಸೆಯಲು ಪತ್ರಿಕೆಗಳು ಅಪೂರ್ವ ಕೆಲಸವನ್ನು ಮಾಡಿವೆ. ಅದನ್ನು ಮರೆಯಲಾಗದು.

❖ ❖ ❖ ❖

ಅಧ್ಯಾಯ -೧೫

• ನಾಟಕಗಳು, ಕೀರ್ತನೆಗಳು

ಕೃತಪುರಬೋಳಿರ್ದಾಗ ಕನ್ನಡ ನುಡಿಯ ದು ।
ಸ್ಥಿತಿಯ, ನಾಟಕನಟನದಿಂ ಕಳೆಯಬೇಕೆಂದು ॥
ಸತತಮಲ್ಲಿಯ ಜನಕೆ ಪೇಳ್ವೆವದರಿಂ ।
ಸ್ಫೂರ್ತಿಗೊಂಡಗಲಿ ಬಯಕೆಯಂತೆ ॥
ಅತಿಶಯನಾನಂದದಿಂದ ತ್ಕವರಸವ ಮಾಡಿ ।
ಪ್ರಥಮದೊಳುಷಾಹರಣ ನಾಟಕವ ರಚಿಸಿ ಪ
ಧೃತಿಯಂತೆ ನಟನವಂ ಕಲಿಸಿದೆವು
ನಾಟಕವು ರಂಗಸ್ಥಳಕೆ ಬಂದುದು ॥

ನಾಟಕದ ನಟನದಿಂದ ಕನ್ನಡ ನುಡಿಯ ದುಸ್ಥಿತಿಯನ್ನು ಕಳೆಯಲು 'ಉಷಾಹರಣ' ಎಂಬ ನಾಟಕವನ್ನು ಬರೆದು ಆಡಿದೆನೆಂದು ಶಾಂತಕವಿಗಳು ತಮ್ಮದೊಂದು ಪದ್ಯದಲ್ಲಿ ಹೇಳುತ್ತಾರೆ. ಕೃತಪುರದಲ್ಲಿ ಅಂದರೆ ಇಂದಿನ 'ಗದಗ' ನಗರದಲ್ಲಿ ಅವರು ಇದ್ದಾಗ ಈ ನಾಟಕವನ್ನು ಬರೆದು, ಆಡಿಸಿದರು.

ಹೊಸ ಗನ್ನಡ ಅರುಣೋದಯದ ಕಾಲದಲ್ಲಿಯೇ ಪ್ರತಿಭಾನ್ವಿತ ಶಾಂತಕವಿಗಳು (೧೮೫೬-೧೯೨೦) ಹತ್ತು ಹಲವಾರು ರೀತಿಯಲ್ಲಿ ಕನ್ನಡವನ್ನು ಕಟ್ಟುವ ಕೆಲಸವನ್ನು ಮಾಡಿದರು. ಅವರ ನಿಜವಾದ ಹೆಸರು ಬಾಳಾಚಾರ್ಯ, ಗೋಪಾಳಾಚಾರ್ಯ ಸಕ್ಕರಿ ಎಂಬುದು. ಸಕ್ಕರಿ ಮನೆತನವು ಧಾರವಾಡ ಜಿಲ್ಲೆಯ ಸಾತೇನಹಳ್ಳಿಯದು. ಸಾತೇನಹಳ್ಳಿಯ ಹನುಮಂತ ದೇವರು 'ಶಾಂತೇಶ' ಎಂಬುದಾಗಿ ಆ ನಾಡಿನಲ್ಲಿ ಪ್ರಖ್ಯಾತನಾಗಿದ್ದಾನೆ. ಅವನ ಹೆಸರಿನಲ್ಲಿಯೇ ಹುಟ್ಟಿಕೊಂಡವರು ಈ 'ಶಾಂತಕವಿ'. ಅವರ ಮನೆತನದ ಮೂಲ ಪುರುಷರಾದ ಶ್ರೀನಿವಾಸಾಚಾರ್ಯರು ಮಹಾ ವಿದ್ವಾಂಸರು. ಶ್ರೀನಿವಾಸತೀರ್ಥರೆಂದೇ ಪರಿಚಿತರು. ಶ್ರೀ ಮಧ್ವಾಚಾರ್ಯರ ಗ್ರಂಥವೊಂದಕ್ಕೆ 'ಶರ್ಕರಾ' ಎಂಬ ಹೆಸರಿನ ಸಂಸ್ಕೃತ ಟೀಕೆಯನ್ನು ಬರೆದು, ಶರ್ಕರಾ ಅಥವಾ ಸಕ್ಕರಿ ಎಂಬ ಅಭಿದಾನವನ್ನು ಪಡೆದರು. ಅದುವೆ ಮುಂದೆ ಅವರ ಮನೆತನದ ಹೆಸರಾಯಿತು.

ಮನೆಯಲ್ಲಿ ಸಂಸ್ಕೃತ, ಅಯ್ಯನವರ ಮಠದಲ್ಲಿ ಕನ್ನಡ ಕಲಿತು ಬಾಳನು ಅಂದಿನ ಪ್ರಾಥಮಿಕ ಶಾಲಾಂತ ಮುಲ್ಕೀ ಪರೀಕ್ಷೆಯನ್ನು ಪಾಸಾದನು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಸಂಸ್ಕೃತ ಪಾಂಡಿತ್ಯ ಸವಕಳಿ ನಾಣ್ಯವಾಗಿತ್ತು. ಇತ್ತ

ರಾಜಾಶ್ರಯವೂ ಇಲ್ಲ, ಅತ್ತ ಲೋಕಾಶ್ರಯವೂ ಇಲ್ಲ. ಉದರ ನಿರ್ವಹಣೆಗೆ ಕನ್ನಡವನ್ನೆ ಅವಲಂಬಿಸಬೇಕಾಯಿತು.

ಮನೆಯಿಂದ ಹೊರಬಿದ್ದು ಅಯ್ಯನವರ ಪಾಠ ಶಾಲೆಯಲ್ಲಿ ಕನ್ನಡವನ್ನು ಕಲಿಯುವಾಗ ದಾರಿಯಲ್ಲಿಯ ಹಾಡು, ಕುಣಿತ ಮನರಂಜನೆ ಮನ ಸೆಳೆಯಿತು. ಮಠದಲ್ಲಿಯ ಹಲವು ಗೆಳೆಯರು ಜೊತೆಯಾದರು. ರಾಧಾನ ಆಟ, ಭಾಗವತರ ಆಟ, ಗೀಗೀಪದ, ಡಪ್ಪಿನ ಪದ ಏನೇ ಇದ್ದರೂ ಅಲ್ಲಿ ಬ್ರಾಹ್ಮಣರ ಹುಡುಗ 'ಬಾಳ'ನು ಹಾಜರಾಗುತ್ತಿದ್ದನು. ಅದು ಕೆಲಸವಿಲ್ಲದ ಹುಂಬ ಜನರ ಆಟ' ಎಂದು ಮಂಡಿವಂತರ ಮೂದಲಿಕೆಯಲ್ಲಿ ಬೆಳೆದನು ಬಾಳ.

ಮುಲ್ಕೀ ಪರೀಕ್ಷೆ ಪಾಸಾಗಿ ಹದಿನಾರನೆಯ ವಯಸ್ಸಿನಲ್ಲಿ ರಾಣೆಬೆನ್ನೂರು ಕನ್ನಡ ಶಾಲೆಯ ಮಾಸ್ತರರೆಂದು ಬಾಳ- ಬಾಳಾಚಾರ್ಯರು ನೌಕರಿಗೆ ಸೇರಿದರು. ಸಂಬಳಕ್ಕಾಗಿ ಶಾಲೆಯಲ್ಲಿ ಮಾಸ್ತರಿಕೆ, ಉಳಿದ ಹೊತ್ತಿನಲ್ಲಿ ಸಂಗೀತ, ನಾಟಕಗಳ ಆರಾಧನೆ. ನೌಕರಿಯಲ್ಲಿ ಅವರು ಹಾವೇರಿ, ಧಾರವಾಡ, ಬೆಳಗಾವಿ, ಗೋಪನಕೊಪ್ಪ ಮುಂತಾದ ಊರುಗಳಲ್ಲಿ ಕೆಲಸ ಮಾಡಿ ಗದಗಿಗೆ ಬಂದರು. ಬೆಳಗಾವಿಯಲ್ಲಿದ್ದಾಗ 'ಶಿಕ್ಷಕರ ತರಬೇತಿ 'ವಿದ್ಯಾಲಯದಲ್ಲಿ 'ಶಿಕ್ಷಕ ತರಬೇತಿ'ಯನ್ನು ಪಡೆದರು. ಅಲ್ಲಿ ಕನ್ನಡ ಪಂಡಿತರಾಗಿದ್ದ ಶಾಂತವೀರ ರಾಚದೇವ ಕಿತ್ತೂರರ ಸಂಪರ್ಕದಿಂದ ಬಾಳಾಚಾರ್ಯರಲ್ಲಿ ಕಾವ್ಯಾಸಕ್ತಿ ಬೆಳೆಯಿತು. ವಿದ್ಯಾಲಯದಲ್ಲಿಯ ಸಮಾರಂಭ, ಸ್ವಾಗತ, ಸನ್ಮಾನಗಳಲ್ಲಿ ಕವಿತೆಗಳನ್ನು ರಚಿಸಿ, ಹಾಡುವುದು ಅಂದಿನ ಬಹು ಮುಖ್ಯ ಸಂದರ್ಭಗಳಾಗಿರುತ್ತಿದ್ದವು. ಗ್ರಾಮೀಣ ಭಾಗದ ಶಾಲೆಗಳಲ್ಲಿ ಅದು ಇಂದಿಗೂ ನಡೆದುಕೊಂಡು ಬಂದಿದೆ. ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಅತಿಥಿ, ಅಭ್ಯಾಗತರು, ಅಧ್ಯಕ್ಷರ ಹೆಸರುಗಳನ್ನು ಪವಣಿಸಿ ರಚಿಸಿದ ಸ್ವಾಗತ ಗೀತೆಗಳನ್ನು ವಿದ್ಯಾರ್ಥಿ - ವಿದ್ಯಾರ್ಥಿನಿಯರಿಂದ ಹಾಡಿಸುವುದು. ಅದಕ್ಕೆ ಹಿನ್ನೆಲೆಯಾಗಿ ಹಾರ್ಮೋನಿಯಂ, ತಬಲಾ, ತಾಳ.... ಇತ್ಯಾದಿ ವಾದ್ಯಗಳು , ಆ ಲೋಕವೇ ಬೇರೆ.

ಅಂದಿನ ದಿನಗಳಲ್ಲಿ ವಿಕ್ಟೋರಿಯಾ ಮಹಾರಾಣಿಯಿಂದ, ರೆವಿನ್ಯೂ ಅಧಿಕಾರಿಯವರೆಗೆ ಎಲ್ಲರ ಗುಣವರ್ಣನೆ ಕಾವ್ಯ ವಸ್ತುವಾಗಿರುತ್ತಿತ್ತು. ಇಂಥ ಕವಿತೆಗಳನ್ನು ರಚಿಸುವುದು ಶಿಕ್ಷಕರಿಗೆ ಹೆಮ್ಮೆಯ ವಿಷಯವೂ ಆಗಿರುತ್ತಿತ್ತು. ಒಮ್ಮೊಮ್ಮೆ ಅದು ಅವರ ಯೋಗ್ಯತಾ ಪತ್ರವೂ ಆಗಿರುತ್ತಿತ್ತು. ಸ್ವತಃ ಶಾಂತವೀರ ರಾಚಿದೇವ ಕಿತ್ತೂರರು ಕೂಡ ಅಂದಿನ ರೆವಿನ್ಯೂ ಕಮಿಶನರರಾಗಿದ್ದ ಡಾ|| ಜಾನ್ ಫೇತ್‌ಫುಲ್ ಫ್ಲೀಟನ ಸ್ತುತಿ ಪರವಾದ ಕೆಲವು ಪದ್ಯಗಳನ್ನು ರಚಿಸಿ, 'ನವರತ್ನಹಾರ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದರು. ಇಂಥದೇ ಒಂದು ಸಂದರ್ಭದಲ್ಲಿ ತಮ್ಮ ಶಿಷ್ಯ ಸಕ್ಕರಿ ಬಾಳಾಚಾರ್ಯರಿಗೂ ಸ್ವಾಗತ ಗೀತೆಗಳನ್ನು ಬರೆಯುವಂತೆ ಅವರು ಪ್ರೋತ್ಸಾಹಿಸಿದರು. ಸಂಸ್ಕೃತದ ಅಭ್ಯಾಸ, ದಾಸರ ಪದಗಳ ಪ್ರಭಾವದಿಂದಾಗಿ

ಬಾಳಾಚಾರ್ಯರು ಕವಿತೆಗಳನ್ನು ಬರೆಯಲು ಪ್ರಯತ್ನಿಸಿ ತಮಗೂ ಕವಿತೆಗಳನ್ನು ಬರೆಯಲು ಬರುತ್ತದೆ ಎಂಬುದನ್ನು ಕಂಡುಕೊಂಡರು. ಆದರೆ, ಅವರು ಗದುಗಿನಲ್ಲಿ ನೌಕರಿ ಮಾಡುವಾಗ ಅವರ ನಿಜವಾದ ಪ್ರತಿಭೆಗೆ ಅವಕಾಶ ದೊರೆಯಿತು.

ಗದುಗಿನಲ್ಲಿ ನೌಕರಿ ಮಾಡುವಾಗ ಅವರು ಒಮ್ಮೆ ತಮ್ಮ ಯಾವುದೋ ಕೆಲಸಕ್ಕಾಗಿ ಹತ್ತಿರದ ಮುಳಗುಂದಕ್ಕೆ ಹೋಗಿದ್ದರು. ಅಲ್ಲಿ ಯಾರದೋ ಮನೆಯಲ್ಲಿ ಹರಿಕೀರ್ತನೆ ನಡೆದಿತ್ತು. ತಾಳ, ತಂಬೂರಿ, ಗೆಜ್ಜೆನಾದ, ಬಾಳಾಚಾರ್ಯರನ್ನು ಆಕರ್ಷಿಸಿತು. ಕೀರ್ತನೆ ಕೇಳಲು ಕುಳಿತರು. ಕೀರ್ತನಕಾರನ ದನಿ ಏನೋ ಚೆನ್ನಾಗಿತ್ತು. ತಾಳ -ಲಯಬದ್ಧವಾಗಿ ಹಾಡುತ್ತಿದ್ದ. ಆದರೆ ಹಾಡುವ ಪದಗಳೆಲ್ಲ ಮರಾಠಿಯ ಅಭಂಗಗಳು. ರಾಮದಾಸರ ಮನಾಚೆ ಶ್ಲೋಕ ಹಾಗೂ ಇತರ ಮರಾಠಿ ಪದ ಪದ್ಯಗಳು. ಕೀರ್ತನದ ಭಾಷೆ ಮರಾಠಿ ಮಿಶ್ರಿತ ಕನ್ನಡ. ಅದು ಕನ್ನಡದಲ್ಲಿ ಹರಿಕೀರ್ತನ! ಬಾಳಾಚಾರ್ಯರಿಗೆ ತಡೆಯಲಾಗಲಿಲ್ಲ. ಕೀರ್ತನಗಾರರನ್ನು ನಿಲ್ಲಿಸಿ ಕೇಳಿಯೇ ಬಿಟ್ಟರು . 'ಇದೇನು ಮರಾಠಿ ಕೀರ್ತನೆನೋ, ಕನ್ನಡ ಹರಿಕೀರ್ತನೆನೋ' ದಾಸಯ್ಯ ಬಾಯಿ ಬಿಚ್ಚಿ ಹೇಳಬೇಕು ಎಂಬಷ್ಟರಲ್ಲಿ ಆತನ ಪರವಾಗಿ ಮನೆಯ ಯಜಮಾನನೇ ಹೇಳಿದನಂತೆ.

ಇದು ಕನ್ನಡ ಕೀರ್ತನೇನೇ ಹೌದು. ಆದರೆ ಕನ್ನಡದಾಗ ಕೀರ್ತನೆ ಎಲ್ಲಿವೆ ಹೇಳಿರಿ? ಎಂದನಂತೆ. ಅದು ಬಾಳಾಚಾರ್ಯರ ಸ್ವಾಭಿಮಾನಕ್ಕೆ ಕಿಡಿ ಹಚ್ಚಿತು. ಅವರ ಕನ್ನಡ ಪ್ರಜ್ಞೆ ಜಾಗೃತವಾಯಿತು. ಮನೆಗೆ ಬಂದು ಕನ್ನಡದಲ್ಲಿ ಕೀರ್ತನೆಯನ್ನು ರಚಿಸಲು ಮುಂದಾದರು.

'ಮುಕುಂದ ನಾಮಾಮೃತ' ಕೀರ್ತನೆಯ ಹೆಸರು. ಅಚ್ಚಕನ್ನಡದಲ್ಲಿ ರಚಿತವಾದ ಈ ಕೀರ್ತನೆಯನ್ನು ಮಾಡಲು ಅಂದಿನ ದಿನಗಳಲ್ಲಿ ಯಾರೂ ಮುಂದೆ ಬಂದಿರಲಿಲ್ಲವಂತೆ. ಸ್ವತಃ ಬಾಳಾಚಾರ್ಯರೇ ಕಾಲಲ್ಲಿ ಗೆಜ್ಜೆ ಕಟ್ಟಿ ತಾಳ ಹಿಡಿದರು. ಆ ನಿಮಿತ್ತದಿಂದ ಕೀರ್ತನ ರಂಗದಲ್ಲಿ ಅವರು ಒಂದು ಪರಂಪರೆಯನ್ನೇ ನಿರ್ಮಿಸಿ, 'ನವಕರ್ನಾಟಕ ನಿರ್ಮಾಣಕ್ಕೆ ನಾಂದಿ ಇಟ್ಟರು.' ಮನೆತನದ ಕುಲದೇವರು ಸಾತೇನ ಹಳ್ಳಿ, ಶಾಂತೇಶನ ರಕ್ಷೆಯಲ್ಲಿ 'ಶಾಂತೇಶ ವಿಠಲ', ಶಾಂತ ವಿಠಲ' ಎಂಬ ಮುದ್ರಿಕೆಗಳಿಂದ ಹಲವಾರು ದೇವರನಾಮ, ಕೀರ್ತನೆ, ಪದ -ಪದ್ಯಗಳನ್ನು ರಚಿಸಿ, 'ಶಾಂತಕವಿ' ಎಂದು ಪ್ರಸಿದ್ಧರಾದರು.

ಕೀರ್ತನೆಗಳ ರಚನೆಯ ಉದ್ದೇಶವನ್ನು ಅವರು ತಮ್ಮ 'ಗಜೇಂದ್ರ ಮೋಕ್ಷ' ಎಂಬ ಕೀರ್ತನೆಯ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ. 'ಶ್ರೀಮನ್ನಾರಾಯಣನ ಗುಣಗಳನ್ನು ಕೊಂಡಾಡುವ ವಿಷಯಗಳಲ್ಲಿ ಅನೇಕ ಮಾರ್ಗಗಳಿರುತ್ತವೆ. ವೀಣಾ, ಮೃದಂಗಾದಿ ಸಂಗೀತ ಸಾಹಿತ್ಯಗಳೊಂದಿಗೆ ರಂಗಸ್ಥಲದಲ್ಲಿ ನಿಂತು, ಹರಿಕೀರ್ತನೆಯನ್ನು ಮಾಡುವುದು. ಆ ಅನೇಕ ಮಾರ್ಗಗಳೊಳಗಿನದೇ ಒಂದಾಗಿರುವುದು. ಈ ದಿವ್ಯ ಮಾರ್ಗದ ವಿಷಯದಲ್ಲಿ ಸ್ವತಂತ್ರವಾದ ಗ್ರಂಥಗಳು

ದುರ್ದೈವಿಗಳಾದ ನಮ್ಮ ಕನ್ನಡ ಭಾಷೆಯಲ್ಲಿ ಇಲ್ಲದಿರುವುದರಿಂದ ನಮ್ಮ ದೇಶದ ಹರಿದಾಸರು ಮೋರೋಪಂತರ ಮಹಾರಾಷ್ಟ್ರ ಆರ್ಯ, ಅಮೃತರಾಯರ ಮಹಾರಷ್ಟ್ರ ಕವಾಟ, ಕಬೀರದಾಸರ ಹಿಂದುಸ್ತಾನಿ ದೋಹರೇ ಮುಂತಾದವುಗಳನ್ನು ತೆಗೆದುಕೊಂಡು ಅವುಗಳ ಅರ್ಥವನ್ನು ಕನ್ನಡ ಮಾತಿನಿಂದ ಹೇಳುತ್ತ, ಕೀರ್ತನೆ ಮಾಡುತ್ತಾರೆ. ಹೀಗೆ ಭತ್ತ - ಮೊಸರು ಕಲಿಸಿದಂತೆ ಕೀರ್ತನೆ ಮಾಡುವುದರಿಂದ ಕನ್ನಡ ಭಾಷೆಯ ಗೌರವವು ಕಡಿಮೆ ಆಗುತ್ತದೆ. ಅದು ಆಗಬಾರದೆಂಬ ಅಭಿಮಾನದಿಂದ ನಾವು ಈ ಗ್ರಂಥವನ್ನು ರಚಿಸಿರುತ್ತೇವೆ.

ಕೀರ್ತನೆಯ ಮೂಲಕ ಕನ್ನಡಿಗರ ಇತಿಹಾಸ ಹೇಳುವ ಪ್ರಯತ್ನವನ್ನು ಮಾಡಿದವರಲ್ಲಿ ಶಾಂತಕವಿಗಳೇ ಮೊದಲಿಗರು. ರಾಮಾಯಣ, ಮಹಾಭಾರತ, ಭಾಗವತದ ಪ್ರಸಂಗಗಳ ಕೀರ್ತನೆಗಳನ್ನಲ್ಲದೆ ಅವರು 'ವಿದ್ಯಾರಣ್ಯ ವಿಜಯ' ಮೊದಲಾದ ಕೀರ್ತನೆಗಳನ್ನೂ ಬರೆದರು. ಹರಿಕರ್ತನೆ ಮಾಡಿದರು. ಅದುವೆ ಅವರ ಮುಂದಿನ ನಾಟಕಗಳ ರಚನೆಗೂ ನಾಂದಿಯಾಯಿತು.

'ಎ ಲ್ಲಿ ನೋಡಿದರೂ ಕನ್ನಡದ ಭಾಷೆಯೆಟ್ಟಿಯದ
ಥಲಿಲ್ಲ ಮೃದು ಶಬ್ದವಿಲ್ಲ ಭಾಷಾ ಸರಣಿ
ಯಿಲ್ಲವೈ ಸ್ವಾರಸ್ಯವಿಲ್ಲ ನಾಟಕವಿಲ್ಲ ನಟ ನಟಿಗಳಿಲ್ಲವಿನ್ನು
ಇಲ್ಲವವು ಮುಂದಾಗುವಾಶೆ ಕೂಡ ಇಲ್ಲ
ವಿಲ್ಲವೆಂದೀ ಧಾರವಾಡ ಸೀಮೆಯ ಜನರು
ಸೊಲ್ಲಿಸುವ ಕಾಲದಲಿ ನಾಟಕಂ ಪುಟ್ಟಿದುದು ಕೃತಪುರದೊಳು'

ಎಂದು ಹೇಳಿಕೊಂಡಿದ್ದಾರೆ ಶಾಂತಕವಿಗಳು ಅಥವ ಸಕ್ಕರಿ ಬಾಳಾಚಾರ್ಯರು. ಧಾರವಾಡ ಸೀಮೆಯಲ್ಲಿ ಕನ್ನಡದ ಸೊಲ್ಲು ಇರಲಿಲ್ಲ. ಇದ್ದರೂ ಅದರಲ್ಲಿ ಮೃದು ಶಬ್ದವಿಲ್ಲ. ಭಾಷಾ ಸರಣಿಯಿಲ್ಲ. ಸ್ವಾರಸ್ಯವಿಲ್ಲ ಆದ್ದರಿಂದಲೇ ಕೃತಪುರದಲ್ಲಿ (ಗದಗದಲ್ಲಿ) ಕರ್ನಾಟಕದ ನಾಟಕವು ಹುಟ್ಟಿತು ಎಂದು ಹೇಳಿದ್ದಾರೆ.

ಗದಗಿನ 'ಫಸ್ಟ್‌ಗ್ರೇಡ್ ಆಂಗ್ಲೋ ವರ್ನ್ಯಾಕುಲರ್' ಶಾಲೆಯಲ್ಲಿ ಮಾಸ್ತರಾಗಿ ಸಕ್ಕರಿ ಬಾಳಾಚಾರ್ಯರು ನೌಕರಿ ಮಾಡುತ್ತಿರುವಾಗ 'ಉಷಾಹರಣ' ಎಂಬುದಾಗಿ ತಮ್ಮ ಪ್ರಥಮ ಸಂಗೀತ ನಾಟಕವನ್ನು ಬರೆದರು. ಅದನ್ನು ರಂಗಭೂಮಿ ಮೇಲೂ ಅವರೆ ತಂದರು. ತಮ್ಮೊಂದಿಗೆ ಹಲವು ತರುಣ ಕಲಾವಿದರನ್ನು ಕೂಡಿಸಿಕೊಂಡರು. ಉಮಚಗಿ ಲಚ್ಚಪ್ಪ ನಾಯಕ, ಗುಡಿ ರಾಘವೇಂದ್ರಾಚಾರ್ಯ, ಕೊಣ್ಣೂರ ಜೀವಬಾಳಪ್ಪ, ಕುನ್ನಿ ಭಾವಿ ತಮ್ಮಣ್ಣ, ಅಸುಂಡಿ ವೆಂಕಪ್ಪ, ದೋಣಿ ರಂಗಪ್ಪ, ತಳಕಲ್ಲ ಗುರುಲಿಂಗಪ್ಪ, ಯಜ್ಞೇಶ್ವರ ಪಂತ ಮೊದಲಾದವರನ್ನು ಸೇರಿಸಿ 'ಕೃತಪುರ ನಾಟಕ ಮಂಡಳಿ' ಯನ್ನು ಸ್ಥಾಪಿಸಿ, ಉಷಾಹರಣ ನಾಟಕವನ್ನು ರಂಗದ ಮೇಲೆ ತಂದರು. ಅದು 'ಮುಂದಿನ ಐವತ್ತು ವರುಷಗಳವರೆಗೆ ಕನ್ನಡ ರಂಗಭೂಮಿಗೆ ಆಸೆಯ ಚಿಗುರಾಗಿ ಉಳಿಯಿತು.''

ಇದು ನಡೆದದ್ದು ಕ್ರಿ.ಶ. ೧೮೭೩ರಲ್ಲಿ. ಹಾಗೆ ನೋಡಿದರೆ ಹೊಸಗನ್ನಡದ ಪ್ರಥಮ ನಾಟಕವೆನಿಸಿದ ಚುರಮರಿ ಶೇಷಗಿರಿರಾಯರ 'ಶಾಕುಂತಲ'ವು ೧೮೭೦ರಲ್ಲೇ ಅಚ್ಚಾಗಿದ್ದಿತು. ಆದರೆ ಅದು ರಂಗಭೂಮಿಯ ಮೇಲೆ ಬಂದಿರಲಿಲ್ಲ. ಅದಕ್ಕೆ ಆ ಅವಕಾಶ ದೊರೆಯಲು ಮುಂದೆ ೩೫ ವರ್ಷಗಳೇ ಬೇಕಾಯಿತು. ಕನ್ನಡ ಶಾಕುಂತಲದ ರಂಗ ಪ್ರಯೋಗ ಆದದ್ದು ಕ್ರಿ.ಶ. ೧೯೦೫ರಲ್ಲಿ. ಅಂತೆಯೇ ಶಾಂತಕವಿಗಳು ಕನ್ನಡದ ಪ್ರಥಮ ನಾಟಕಕಾರ ಎನಿಸಿದರು.

ಮೈಸೂರಿನ ಬಸವಪ್ಪ ಶಾಸ್ತ್ರಿಗಳು ಅನುವಾದ ಮಾಡಿದ 'ಶಾಕುಂತಲ' ನಾಟಕಕ್ಕಿಂತ ಮೊದಲೇ ಶಾಂತಕವಿಗಳ ನಾಟಕಗಳು ರಂಗವನ್ನು ಕಂಡಿದ್ದವು. ಬಸವಪ್ಪ ಶಾಸ್ತ್ರಿಗಳ ಕನ್ನಡ ಶಾಕುಂತಲ ನಾಟಕ ಮೈಸೂರು ಅರಮನೆಯಲ್ಲಿ ಮೊದಲಿಗೆ ಪ್ರದರ್ಶನಗೊಂಡುದು ೧೮೮೧ರಲ್ಲಿ. ಆ ಹೊತ್ತಿಗೆ ಶಾಂತಕವಿಗಳು ತಮ್ಮ ನಾಟಕವನ್ನು ರಂಗಭೂಮಿಯ ಮೇಲೆ ತಂದು ಎಂಡು ವರ್ಷಗಳಾಗಿತ್ತು. ಅದರಿಂದಾಗಿ 'ಕನ್ನಡದಲ್ಲಿ ಸ್ವತಂತ್ರ ನಾಟಕಗಳನ್ನು ರಚಿಸಿ, ವೃತ್ತಿರಂಗದ ರೀತಿಯಲ್ಲಿ ಅವುಗಳನ್ನು ಮೊದಲಿಗೆ ಆಡಿದ ಯಶಸ್ಸು ಶಾಂತಕವಿಗಳಿಗೆ ಸಲ್ಲಬೇಕಾದುದು ಸಹಜವೇ ಆಗಿದೆ. ಅದೂ ಒಂದಾದ ಮೇಲೆ ಒಂದರಂತೆ ಬಂದ ನಾಟಕಗಳು. ಅದನ್ನು ಶಾಂತಕವಿಗಳೇ ತಮ್ಮದೊಂದು ಕೃತಿಯಲ್ಲಿ ಹೀಗೆ ಹೇಳಿದ್ದಾರೆ ಕೂಡ.

'ಇದೆ ಮೊದಲಿನದು ನಮ್ಮ ಕನ್ನಡ ನಾಡಿನೊಳ
ಗುದಯಿಸಿದ ಕನ್ನಡದ ನಾಟಕದ ಮೇಳವಾ
ದುದರಿಂದ ಕರ್ನಾಟ ನಾಟಕ ಪ್ರಥಮ ಗುರುವೆಂದೆಂಬರೆಮಗಿಂದಿಗಂ

''ಕೃತಪುರ ನಾಟಕ ಮಂಡಳಿಯಿಂದ ಕರ್ನಾಟಕ ವೃತ್ತಿರಂಗಭೂಮಿ ಉದ್ಘಾಟನೆಯಾಯಿತೆಂದು ಜನರು ಶಾಂತಕವಿಗಳಿಗೆ 'ಕರ್ನಾಟಕ ನಾಟಕ ಪ್ರಥಮ ಗುರು' ಎಂದು ಅಭಿಮಾನದಿಂದ ಕರೆದಿರುವುದು ಸೂಕ್ತವಾಗಿದೆ.

ಅದಾದ ನಂತರ ಶ್ರೀಯಾಳ ಸತ್ವ ಪರೀಕ್ಷೆ', ಕೀಚಕ ವಧೆ, ವತ್ಸಲಾಹರಣ, ಸುಂದೋಪಸುಂದರ ವಧೆ, ಸೀತಾರಣ್ಯ ಪ್ರವೇಶ, ಸುಧನ್ವ ವಧೆ ಮಂತಾದ ನಾಟಕಗಳನ್ನು ಬರೆದು ರಂಗದ ಮೇಲೆ ತಂದರು. ತಮ್ಮ ಕೃತಪುರದ ನಾಟಕ ಮಂಡಳಿಯನ್ನು ಗದಗಿನಿಂದ ಶಿರಹಟ್ಟಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಲಾದಗಿ (ಆಗ ಜಿಲ್ಲಾ ಸ್ಥಳವಾಗಿತ್ತು) ಮುಂತಾದ ಊರುಗಳಲ್ಲಿ ಈ ನಾಟಕಗಳನ್ನು ಪ್ರದರ್ಶಿಸಿದರು.

ನಾಟಕವನ್ನು ಬರೆದವನೇ ಆ ಕಾಲದಲ್ಲಿ ನಾಟಕದ ನಿರ್ದೇಶಕನೂ ಆಗಿರುತ್ತಿದ್ದ. ಹಾಗೆ ಬಾಳಾಚಾರ್ಯರು ನಾಟಕದ ಮಾಸ್ತರರೂ ಆಗಿದ್ದರು. ಪ್ರತಿದಿನ ಶಾಲೆ ಬಿಟ್ಟೊಡನೆ ನೇರವಾಗಿ ನಾಟಕದ 'ರಂಗ ತಾಲೀಮ ಖಾನೆ'ಗೆ ಬರುತ್ತಿದ್ದರು. ಅಲ್ಲಿ ನಟರು ಬಂದು ಮೊದಲೇ ಸೇರಿರುತ್ತಿದ್ದರು. ಸರಿರಾತ್ರಿ ಹೊತ್ತಿನವರೆಗೆ,

ಒಮ್ಮೊಮ್ಮೆ ಬೆಳ್ಳಂಬೆಳಗು ನಾಟಕದ ತಾಲೀಮು ನಡೆಯುತ್ತಿತ್ತು. ಇಂಥದ್ದರಲ್ಲಿಯೇ ಅವರಿಗೆ ಗದುಗಿನಿಂದ ಹೊಂಬಳಕ್ಕೆ ವರ್ಗವಾಯಿತು. ಆದರೂ ತಮ್ಮ ದಿನದ ಕರ್ತವ್ಯವನ್ನು ಬಿಡಲಿಲ್ಲ. ಶಾಲೆ ಬಿಟ್ಟ ತಕ್ಷಣ ಹೊಂಬಳದಿಂದ ಗದಗಿಗೆ ಬರಬೇಕು. ೧೨ ಕಿ.ಮೀ. ದಾರಿ! ಆ ದಿನಗಳಲ್ಲಿ ಸಂಪರ್ಕ ಸಾಧನವೆಂದರೆ ಕುದುರೆ, ಇಲ್ಲವೆ ಎತ್ತಿನ ಗಾಡಿ. ಬಡಮಾಸ್ತರರ ಹತ್ತಿರ ಕುದುರೆಯೂ ಇರಲಿಲ್ಲ. ಪ್ರತಿದಿನ ಎತ್ತಿನ ಗಾಡಿಯನ್ನು ಕಟ್ಟುವವರು ಯಾರು ? ಆದ್ದರಿಂದ ಶಾಲೆ ಬಿಟ್ಟ ತಕ್ಷಣ 'ಗದಗ' ನಗರದತ್ತ ಮುಖ ಮಾಡಿ ನಡೆದು ಬಿಡುತ್ತಿದ್ದರು. ದಾರಿಯಲ್ಲಿ ದನ ಕಾಯುವವರು ತಮ್ಮ ದನಗಳನ್ನು ಹೊಡೆದುಕೊಂಡು ಸಾಯಂಕಾಲದ ಹೊತ್ತಿಗೆ ಊರು ಸೇರಬೇಕಷ್ಟೆ. ಅವರ ದನ,ಎಮ್ಮೆಗಳ ಮೇಲೆ ಕುಳಿತು ದಾರಿ ಸವೆಸಿ ಗದಗ ಸೇರಿ ರಂಗತಾಲೀಮು ಖಾನೆಗೆ ಬಂದು ಮುಟ್ಟುತ್ತಿದ್ದರು! ನಾಟಕ ಹೇಳಿಕೊಟ್ಟು ಮತ್ತೆ ಮರುದಿನದ ಶಾಲೆಗೆ ಹಾಜರು !

ಶಾಂತಕವಿಗಳ ನಾಟಕಗಳ ಜನಪ್ರಿಯತೆ ತುಸುವೆ ಸಮಯದಲ್ಲಿ ಎಲ್ಲ ದಿಕ್ಕುಗಳಲ್ಲೂ ಪರಸರಿಸಿತು. ಉಷಾಹರಣದ ಜಯಭೇರಿಯಿಂದ ನಾಟ್ಯಕಲೆಯಲ್ಲಿ ಅಭಿರುಚಿಯಿರುವ ತರುಣರು ಉತ್ಸಾಹದಿಂದ ಅಲ್ಲಲ್ಲಿ ನಾಟಕ ಕಂಪನಿಗಳನ್ನು ಕಟ್ಟಿಕೊಂಡರು. ನರಗುಂದ, ಹಲಸಗಿ, ಕುಂದಗೋಳ ಕೊಣ್ಣೂರು ಕಂಪನಿಗಳು ಇದೇ ಕಾಲದಲ್ಲಿ ಜನ್ಮ ತಾಳಿ ಬಾಳಾಚಾರ್ಯರ ನಾಟಕಗಳನ್ನು ರಂಗಭೂಮಿಯ ಮೇಲೆ ತಂದವು. ಈ ಮಂಡಳಿಗಳ ಬೇಡಿಕೆಯಂತೆ ಅವರು ಹೊಸ ಹೊಸ ನಾಟಕಗಳನ್ನು ಬರೆಯುತ್ತಲೇ ಇದ್ದರು.

ಶಾಂತಕವಿಗಳ ಕನ್ನಡ ನಾಟಕಗಳಿಂದ ಕನ್ನಡ ನಾಡಿನ ಜನರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಹಿಂದೆ ಬೀಳಲಿಲ್ಲ. ೧೮೮೧ರಲ್ಲಿ 'ಉಷಾಹರಣ' ನಾಟಕವು ಬೆಳಗಾವಿಯಲ್ಲಿ ಪ್ರದರ್ಶಿತವಾದಾಗ ಶಾಂತಕವಿಗಳನ್ನು ಅಭೂತಪೂರ್ವ ಉತ್ಸಾಹದಿಂದ ಸನ್ಮಾನಿಸಿದರು. ಅದುವರೆಗೆ ಮಹಾರಾಷ್ಟ್ರದ ಮರಾಠಿ ರಂಗಭೂಮಿಯಿಂದ ಸಮ್ಮೋಹಿತರಾದ ರಸಿಕರು ಶಾಂತಕವಿಗಳ ನಾಟಕಗಳಿಗೆ ಮುಗ್ಧರಾದರು. ಮರಾಠಿ ರಂಗಭಮಿಯ ರಸಿಕರು ಶಾಂತಕವಿಗಳ ನಾಟಕವನ್ನು ನೋಡಿ ಮೆಚ್ಚಿಕೊಂಡಿದ್ದಾರೆ. ಕನ್ನಡ ರಸಿಕರು ರಂಗದ ಮೇಲೆ ಶಾಂತಕವಿಗಳನ್ನು ಅಪ್ಪಿ, ಕೊಂಡಾಡಿದರಂತೆ. ಮರುದಿನ ಅದೇ ರಂಗಸ್ಥಳದ ಮೇಲೆ ಶಾಂತಕವಿಗಳನ್ನು ಸಾರ್ವಜನಿಕರು ಸನ್ಮಾನಿಸಿ, ಜರದ ರುಮಾಲು - ಶಾಲುಗಳನ್ನು ಅರ್ಪಿಸಿ ತಮ್ಮ ಗೌರವ ಆದರಗಳನ್ನು ಸಲ್ಲಿಸಿದರು.

ಅದೇ ವರ್ಷ ಆಗಸ್ಟ್ ೨೪ ರಂದು ಧಾರವಾಡದ ಆನಂದೋದ್ಭವ ನಾಟ್ಯ ಗೃಹದಲ್ಲಿ ಶಾಂತಕವಿಗಳನ್ನು ಸಾರ್ವಜನಿಕವಾಗಿ ಸನ್ಮಾನಿಸಲಾಯಿತು. ಸಮಕಾಲೀನರಲ್ಲಿ 'ಕಾಕಾ' ಎಂದೇ ಪ್ರಸಿದ್ಧರಾಗಿದ್ದ ಮದಿಹಾಳ ಗೋವಿಂದರಾಯರ ಸಂಚಾಲಕತ್ವದಲ್ಲಿ ಶಾಂತಕವಿಗಳನ್ನು ಸನ್ಮಾನಿಸಿ, ಅವರ ಕವಿತಾಶಕ್ತಿಯ ಪ್ರಶಸ್ತಿಗಾಗಿ

ಒಂದು ಕೈ ಗಡಿಯಾರವನ್ನು ಕೊಡಲಾಯಿತು. ರಂಗರಾವ್ ಭೀಮಾಜಿ ಎಂಬುವರು ಅವರ ನಾಟ್ಯ ಸೇವೆಗೆಂದು ಸುಂದರವಾದ ಉಡುಪನ್ನು ಕಾಣಿಕೆಯಾಗಿ ಕೊಟ್ಟರು. ಈ ವರದಿಗಳು ಅಂದಿನ ಪತ್ರಿಕೆಗಳಾದ ಕಲಾದಗಿಯ 'ಹಿತೇಚ್ಛು' (ಮರಾಠಿ), ಬೆಳಗಾವಿಯ 'ಜ್ಞಾನ ಬೋಧಕ' , ಧಾರವಾಡದ 'ಧಾರವಾಡ ವೃತ್ತ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಆಗಿನ್ನೂ ಅವರಿಗೆ ೨೫ ವರ್ಷ !

ಕನ್ನಡ ಕಟ್ಟುವುದಕ್ಕಾಗಿಯೇ ಅವರು ನಾಟಕಗಳನ್ನು ಬರೆದರು ಎನ್ನಲು ಅವರ ಪ್ರತಿಯೊಂದು ನಾಟಕಗಳ ಪಾತ್ರಗಳು ಇಲ್ಲವೆ, ನಾಟಕಗಳ ಪ್ರಸ್ತಾವನೆಗಳಲ್ಲಿ ಆ ಬಗ್ಗೆ ಉಲ್ಲೇಖಗಳಿವೆ. ಉದಾಹರಣೆಗೆ ಅವರ ಪ್ರಥಮ ನಾಟಕ ಪ್ರಾರಂಭವಾಗುವುದೇ ಹೀಗೆ. ಪರದೆ ಎತ್ತಿದ ನಂತರ 'ನಟಿ' : ಈವೊತ್ತು ತಾವು ಯಾವ ನಾಟಕವನ್ನು ಪ್ರಯೋಗಿಸತಕ್ಕವರು ? ಸೂತ್ರಧಾರ : ಪ್ರಿಯಳೇ ! ನಾಟಕ ಗ್ರಂಥಗಳು ಕನ್ನಡ ಭಾಷೆಯಲ್ಲಿ ಇಲ್ಲವೆಂಬ ಕುಂದನ್ನ ನಿವಾರಣೆ ಮಾಡುವ ಅಭಿಮಾನದಿಂದ, ಅನೇಕ ನಾಟಕಗಳನ್ನು ರಚಿಸಿದ್ದರಿಂದಲೂ ಅವುಗಳನ್ನು ಶಿಷ್ಯರಿಗೆ ಕಲಿಸಿ, ರಂಗಸ್ಥಳದಲ್ಲಿ ಮಾಡಿಸಿ ತೋರಿಸಿದ್ದರಿಂದಲೂ ಕನ್ನಡ ನಾಟಕೋತ್ಪಾದಕರೂ ಕನ್ನಡ ಕವಿವರ್ಯರೂ ಆದಂಥ ಬಾಳಾಚಾರ್ಯ ಸಕ್ಕರಿ ಊರ್ಫ ಶಾಂತಕವಿಗಳು ಹೊಸದಾಗಿ ನಿರ್ಮಿಸಿದ ಉಷಾಹರಣವೆಂಬ ಸರಸ ನಾಟಕವನ್ನು ಯೋಜಿಸಬೇಕೆಂದು ಮಾಡಿದ್ದೇನೆ.'

''ಇಂದಿನ ಕನ್ನಡ ವಿದ್ವಾಂಸರು ಕನ್ನಡದ ಅಭಿವೃದ್ಧಿಯ ವಿಚಾರದಲ್ಲಿ ಅಲಕ್ಷ್ಯ ಮಾಡುತ್ತಿದ್ದಾರೆ. ಎಷ್ಟು ಮಾಡಿದರೂ ಅವರು ಪಂಡಿತರೇ ಪಂಡಿತರು. ಅವರಂತೆ ನಮ್ಮಿಂದ ಹ್ಯಾಗೆ ಆದೀತು ! ಅವರ ಮುಗುಳು ನಗೆಯ ಒಂದೆರಡು ಶಬ್ದಗಳಿಂದ ಆದಷ್ಟು ಕಾರ್ಯವು ನಮ್ಮಂಥವರ ಇಡೀ ಜೀವಿತದಿಂದಲೂ ಆಗಲಿಕ್ಕಿಲ್ಲ. ಆದರೆ ಅಂಥ ರಸ ಪಂಡಿತರಿಗೆ, ಅಣಕಿಸಿ ಅವರಲ್ಲಿ ಗ್ರಂಥ ರಚನೆಯ ಈರ್ಷ್ಯೆಯನ್ನು ಉತ್ಪನ್ನ ಮಾಡುವ ವಿಚಾರದಿಂದ ಕನ್ನಡ ಭಾಷೆಯಲ್ಲಿ ೬೩ ಗ್ರಂಥಗಳನ್ನು ರಚಿಸಿದ್ದೇವೆ.

'ಸೀತಾರಣ್ಯ ಪ್ರವೇಶ' ನಾಟಕದ ಪ್ರಸ್ತಾವನೆಯಲ್ಲಿ ಶಾಂತಕವಿಗಳು ಹೀಗೆ ಬರೆದಿದ್ದಾರೆ. ಅವರ ಮೂಲ ಚೇತನವು ಜನಾಭಿಮುಖವಾಗಿದ್ದಿತು. ಅದು ಕನ್ನಡ ಜನತೆಯದ್ದು. ಸಾಮಾನ್ಯ ಜನತೆಯಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಯಾಗ ಬೇಕೆಂಬುದು ಅವರ ಸ್ಪಷ್ಟ ಗುರಿಯಾಗಿದ್ದಿತು. ಹಳೆಯ ಪಂಡಿತರು ಮತ್ತು ಇಂಗ್ಲಿಷ್ ವಿದ್ಯಾವಂತರು ಕನ್ನಡ ಸೇವೆಯನ್ನು ಮಾಡುತ್ತಿಲ್ಲ ಎಂಬುದು ಅವರ ತಕರಾರು ಇದ್ದಿತು. ಅದನ್ನು ಅವರು ತಮ್ಮ ಪದ್ಯ ಒಂದರಲ್ಲಿ ಹೇಳಿಕೊಂಡೂ ಇದ್ದಾರೆ.

'ಎಲ್ಲಿರುವುದಭಿಮಾನ, ಕನ್ನಡಿಗರೇ ಪೇಳಿ
ಸುಳ್ಳೇ ಬಡ ಬಡಿಸುವಿರಿ ಸಭೆ
ಗಳಲ್ಲಿ ಗುರು ಪರಿಶ್ರಮದಿಂದಾಂಗ್ಲೇಯ ಭಾಷೆಯ
ಕಲಿತು ಧರಿಸಿ ಪದವಿಗಳನುಪಜೀವಿಸುವಿರೇ

ಹೊರತು ತದ್ಭಾಷೆಯುದ್ಧ್ರಂಥಗಳ ಕನ್ನಡದಿ
ಪರಿವರ್ತನಂಗೊಳಿಸಲಿಲ್ಲವಲ್ಲಾ'

ಹೀಗೆ ಕನ್ನಡದ ಅಭಿಮಾನವೇ ಶಾಂತಕವಿಗಳ ಸಾಹಿತ್ಯ ಕಾರ್ಯದ ಪ್ರೇರಕ ಶಕ್ತಿಯಾಗಿದ್ದಿತು. ಕನ್ನಡದಲ್ಲಿ ಗ್ರಂಥಗಳು ಹೆಚ್ಚಾಗಬೇಕು. ಅನ್ಯ ಭಾಷೆಯಗಳಲ್ಲಿ ಇದ್ದ ಉತ್ತಮ ಕೃತಿಗಳು ಕನ್ನಡಕ್ಕೆ ಬರಬೇಕು. ಎಲ್ಲೆಲ್ಲಿಯೂ ಕನ್ನಡದ ಪ್ರಚಾರವಾಗಬೇಕು ಎಂಬುದೇ ಅವರ ಪರಮಗುರಿಯಾಗಿದ್ದಿತು.

ನಾಟಕ - ಕೀರ್ತನೆಗಳನ್ನಲ್ಲದೆ ಇತರ ಹಲವು ಗದ್ಯ -ಪದ್ಯ ಪುಸ್ತಕಗಳೂ, ಲಾವಣಿ ಪದಗಳನ್ನೂ ಅವರು ಬರೆದಿದ್ದಾರೆ. ೧೮೮೬ರಲ್ಲಿ ಅವರಿಗೆ 'ಅಗಡಿ'ಗೆ ವರ್ಗಾವಾಯಿತು. ಅದು ಶೇಷಾಚಲ ಸದ್ಗುರುವಿನ ಸಾನ್ನಿಧ್ಯ. ಶಾಂತ, ಪವಿತ್ರ ವಾತಾವರಣವಾಗಿತ್ತು. ಅಲ್ಲಿಯ ಅಗಡಿ ಶರಣಪ್ಪನವರು ಮೂಡಲಪಾಯ ಪದ್ಧತಿಯ 'ವಿರಾಟಪರ್ವ' ಬಯಲಾಟವನ್ನು ರಚಿಸಿ ಪ್ರಸಿದ್ಧರಾಗಿದ್ದರು. ಸವಣೂರು, ಶಿವಮೊಗ್ಗ, ಶಿರಸಿ, ಸಿದ್ದಾಪುರ ಮೊದಲಾದ ಊರುಗಳಲ್ಲಿ ಶರಣಪ್ಪನವರ ಬಯಲಾಟ ಹೆಸರಾಗಿದ್ದಿತು. ಇಂಥ ಸಂದರ್ಭದಲ್ಲಿ ನಾಟಕಕಾರ - ಕೀರ್ತನಕಾರ ಶಾಂತಕವಿಗಳು ಅಗಡಿಗೆ ಬಂದದ್ದು ಊರವರಿಗೆ ರಸದೌತಣವಾಯಿತು. ಅಲ್ಲಿಯೂ ನಾಟಕ ಕಂಪನಿ ಸ್ಥಾಪಿತವಾಯಿತು. 'ಉಷಾಕಿರಣ' ನಾಟಕವು ಜಯಭೇರಿಯನ್ನು ಬಾರಿಸಿತು. ಜೊತೆಗೆ 'ಚಿತ್ರಸೇನ ಗಂಧರ್ವ', 'ವಿರಾಟಪರ್ವ' ಎಂಬ ಹೊಸ ನಾಟಕಗಳನ್ನೂ ಅವರು ರಂಗದ ಮೇಲೆ ತಂದರು. ರಾಣಿಬೆನ್ನೂರು, ಬ್ಯಾಡಗಿ, ಹಾವೇರಿ, ಕರ್ಜಗಿ, ಮೊದಲಾದ ಸುತ್ತಮುತ್ತಲಿನ ಊರುಗಳಲ್ಲಿಯೂ ಅವರ ನಾಟಕಗಳು ಪ್ರದರ್ಶನಗೊಂಡವು. ಶಾಂತಕವಿಗಳ ಹೆಸರು ಹಳ್ಳಿ -ಹಳ್ಳಿಯನ್ನು ಮುಟ್ಟಿತು. ಎಲ್ಲೆಲ್ಲಿಯೂ ಸನ್ಮಾನ ಸತ್ಕಾರಗಳಾದವು. ಅದೊಂದು ದಿನ ಅಂದಿನ ದಿನಗಳಲ್ಲಿಯ ಶ್ರೇಷ್ಠ ಅನುಭಾವ ಕವಿ ಶಿಶುನಾಳ ಶರೀಫರು ಅಗಡಿಗೆ ಬಂದಿದ್ದರು. ಶಾಲೆಯ ಬಳಿ ಹಾದು ಹೋಗುತ್ತಿರುವಾಗ ಪಕ್ಕದ ನಾಸೀಪುಡಿ ಪಾರ್ವತಮ್ಮನ ಅಂಗಡಿಯಲ್ಲಿ ಜನರು ಗುಂಪು ಸೇರಿದ್ದನ್ನು ಕಂಡರು. ಅದೊಂದು ಜನಪದ ಗಾನಗೋಷ್ಠಿ ಯಾಗಿದ್ದಿತು. 'ವಿವಿಧ ಭಾವ ರಾಗಗಳಲ್ಲಿ ಒಂದರ ಮೇಲೊಂದು ಪದಗಳು ಪ್ರವಾಹದಂತೆ ಉಕ್ಕಿ ಹರಿಯುತ್ತಿದ್ದವು. ಸೇರಿದ್ದ ಜನಸಮುದ್ರವು ಆ ಪ್ರವಾಹದಲ್ಲಿ ತೇಲುತ್ತ ತಮ್ಮನ್ನು ತಾವೇ ಮರೆತು ಸಂಗೀತದಲ್ಲಿ ಗುಂಗಾಗಿದ್ದರು. ಶರೀಫ ಸಾಹೇಬರೂ ಅವರಲ್ಲಿ ಒಬ್ಬರಾಗಿ ಕಣ್ಣುಮುಚ್ಚಿ ಕುಳಿತಿದ್ದರು. ಸಂಗೀತ ಕಾರ್ಯಕ್ರಮ ಮುಗಿಯಿತು. ಶರೀಫ ಸಾಹೇಬರು ಸಮಾಧಿಯಿಂದ ಹೊಬಂದರು. ಹಾಡಿದವರು ಸಕ್ಕರಿ ಬಾಳಾಚಾರ್ಯರೆಂದು ಗೊತ್ತಾಯಿತು. ಆನಂದ ತುಂದಿಲರಾಗಿ 'ಸಕ್ಕರಿಯೆಪ್ಪಾ ನೀನು ನಿಜವಾಗಿ ಸಕ್ಕರಿ!' ಎನ್ನುತ್ತ ಶಾಂತಕವಿಗಳನ್ನು ಬಿಗಿದಪ್ಪಿದರಂತೆ. ಶಾಂತಕವಿಗಳು ಅಗಡಿ ಗ್ರಾಮದಲ್ಲಿ ಮಾಸ್ತರರಾಗಿ ಬಂದ ಹತ್ತು ವರುಷಗಳು (೧೮೮೬-೧೮೯೫) ಶಾಂತಕವಿಗಳ ಜೀವನದ ಸುವರ್ಣ ಕಾಲವಾಗಿತ್ತು. ಪ್ರಾಥಮಿಕ

ಶಾಲೆಯ ಮುಖ್ಯಾಧ್ಯಾಪಕರಾಗಿ ಬಂದವರು ಊರ ಜನರೆಲ್ಲರ ಕಣ್ಮಣಿಗಳಾಗಿ ಇದ್ದು ವರ್ಗವಾಗಿ ಹೊರಟರು. ಗ್ರಾಮಸ್ಥರು ಅವರಿಗೆ ಅಪೂರ್ವ ರೀತಿಯ ಗೌರವ - ಸತ್ಕಾರ ಮಾಡಿದರು. ನಿವೃತ್ತರಾದ ನಂತರ ಅವರು ಅಲ್ಲಿಯೇ ಬಂದು ಇರಬೇಕೆಂದು ಅಪೇಕ್ಷಿಸಿ ಒಂದು ಮನೆಯನ್ನೂ ಈರಾಪುರ ಗ್ರಾಮದ ಸರ್ವೆಯಲ್ಲಿರುವ ಹನ್ನೆರಡು ಎಕರೆ ಜಮೀನನ್ನೂ ದಾನವಾಗಿ ಕೊಟ್ಟರಂತೆ ! ನಿವೃತ್ತಿಯಾಗುವವರೆಗಿನ ಮುಂದಿನ ಹದಿನೇಳು ವರುಷಗಳನ್ನು (೧೮೯೫-೧೯೧೨) ಅವರು ಬಹುಮಟ್ಟಿಗೆ ಅಜ್ಞಾತವಾಗಿಯೇ ಕಳೆದರು. ಆ ದಿನಗಳಲ್ಲಿ ಅವರು ಕೋಳಿವಾಡ, ಧಾರವಾಡ, ಹುಬ್ಬಳಿ ಮೊದಲಾದ ಊರುಗಳಲ್ಲಿ ನೌಕರಿ ಮಾಡಿದರು. ಹಳ್ಳಿಗಳ ಸ್ನೇಹಮಯ ವಾತಾವರಣ ಇಲ್ಲಿ ಅಪರೂಪ. ರಸಿಕತೆ, ಕಲಾಪ್ರೇಮ, ಪಟ್ಟಣದ ಸಂಘರ್ಷಮಯ ವಾತಾವರಣದಲ್ಲಿ ಕಾಣದಾಗಿತ್ತು. ಕನ್ನಡ ಸುಶಿಕ್ಷಿತರು ಕೂಡ ಅವರ ನಾಟಕಗಳನ್ನು ಮರೆಯಲಾರಂಭಿಸಿದರು. ೧೯೧೨ರಲ್ಲಿ ನಿವೃತ್ತರಾದರು. ಮುಂದಿನ ಎರಡು ವರುಷಗಳಲ್ಲಿ ಅವರ ಪತ್ನಿ ರುಕ್ಮಿಣಿ ಬಾಯಿ ತೀರಿಕೊಂಡರು. ವಯಸ್ಸಿಗೆ ಬಂದ ಮಗ ಸ್ವತಂತ್ರನಾಗಿದ್ದನು. ಪತ್ನಿಯ ನಿಧನದಿಂದ ಸಂಸಾರದ ಬಂಧನ ಕಳಚಿದಂತಾಯಿತು. ಮನಸ್ಸು ಮತ್ತೆ ಬಹಿರ್ಮುಖವಾಯಿತು. ಧಾರವಾಡದಲ್ಲಿ ಕನ್ನಡ - ಮರಾಠಿ ವಾದ ಉಲ್ಬಣಿಸಿದ ಕಾಲವದು. ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ'ದ ಮೆರವಣಿಗೆ ನಾಡಿನಾದ್ಯಂತ ನಡೆದ ಕಾಲ. ಅದನ್ನು ಓದಿದ ಶಾಂತಕವಿಗಳಲ್ಲಿ ರಾಷ್ಟ್ರೀಯತ್ವದ ಸ್ಫೂರ್ತಿ ಚಿಮ್ಮಿತು. ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ರಕ್ಷಣೆಗೇ ತಮ್ಮ ಉಳಿದ ಆಯುಷ್ಯದ ಏಕಮೇವ ಕರ್ತವ್ಯವೆಂದು ಅವರು ಭಾವಿಸಿದರು. 'ವಿದ್ಯಾರಣ್ಯ ವಿಜಯ' ಕೀರ್ತನೆಯನ್ನು ಬರೆದು ಮತ್ತೆ ಕಾಲಿಗೆ ಗೆಜ್ಜೆಯನ್ನು ಕಟ್ಟಿದರು.

'ರಕ್ಷಿಸು ಕರ್ನಾಟಕ ದೇವಿ ॥

ಎಂಬ ಪಲ್ಲವಿಯೊಂದಿಗಿನ ಮೂರು ನುಡಿಗಳ ಕೀರ್ತನೆಯಲ್ಲಿ ಕರ್ನಾಟಕದ ವೀರ ಚರಿತ್ರೆಯನ್ನು ಹೇಳುತ್ತ ''ಹೊಣೆಗೇಡಿತನವನ್ನು ಹರಿದೊಗೆದು ಪೌರುಷವಂತರಾಗಿರಿ ಎಂಬ ಸಂದೇಶವನ್ನು ಕರ್ನಾಟಕದ ಮನೆಮನೆಗೆ ಮುಟ್ಟಿಸಿದರು. ಅವರ ಈ ಕೀರ್ತನೆ ಮುಂದಿನ ಎರಡು ದಶಕಗಳವರೆಗೆ ಮುಂಬಯಿ ಕರ್ನಾಟಕದಲ್ಲಿ ನಾಡಗೀತೆಯಾಗಿ ಮೆರೆಯಿತು. ವಿದ್ಯಾರಣ್ಯ ವಿಜಯ ಕೀರ್ತನೆಯ ಇನ್ನೊಂದು ಸಂದರ್ಭದಲ್ಲಿ ಬಂದ

'ಏಳು ಸಾಯಣ ಕಟ್ಟು ಗ್ರಂಥವ।
ನೇಳು ಪಂಪಾ ಕ್ಷೇತ್ರಕೆ ॥
ಗಾಳಿ ಗಂಟುಗಳೋದಿದೇತಕೆ ।
ಏಳು ಈ ಕ್ಷಣ ಮಾತ್ರಕೆ ॥

ಎಂಬ ಸಾಲುಗಳು ಯುವ ಜನಾಂಗದ ರಣಕಹಳೆಯಾಗಿ ಮೊಳಗಿದವು.

೧೯೧೮-೧೯ರಲ್ಲಿ ಧಾರವಾಡದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ನಾಲ್ಕನೆಯ ಅಧಿವೇಶನ ನಿಯೋಜಿತವಾಗಿದ್ದಿತು. ದುಡ್ಡಿನ ಸಂಗ್ರಹ ಸಂಯೋಜಕರನ್ನು ಕಾಡುತ್ತಿತ್ತು. ಆಗ ಈ ಕನ್ನಡದ ದಾಸಯ್ಯನಿಗೆ ಅರವತ್ತೆರಡರ ಪ್ರಾಯ. ಲಕ್ಷ್ಮಿಪತಿಗಳಿಗೆ ಅಸಾಧ್ಯವಾದುದನ್ನು ಈ ಭಿಕ್ಷಾಧಿಪತಿ ಸಾಧಿಸುತ್ತಾನೆ. ನೀವು ಮುಂದೆ ಸಾಗಿರಿ' ಎನ್ನುತ್ತ ಒಂದು ಕೈಯಲ್ಲಿ ಊರುಗೋಲು ಇನ್ನೊಂದು ಕೈಯಲ್ಲಿ ಜೋಳಿಗೆ ಹಿಡಿದುಕೊಂಡು ಬೇಡಲು ಬಂದಿಹನು ಕನ್ನಡದ ದಾಸಯ್ಯ ' ಎನ್ನುತ್ತ ಊರೂರು - ಮನೆ - ಮನೆಗಳಿಗೆ ಹೋಗಿ ತಮ್ಮ ಜೋಳಿಗೆಯನ್ನು ಕನ್ನಡದ ಕೆಲಸಕ್ಕಾಗಿ ತುಂಬಿಕೊಟ್ಟರು. ಅವರು ಸಾಯುವ ಕಾಲಕ್ಕೆ (೧೯೨೦) ಒಂದು ವರುಷ ಮೊದಲು ಕಟ್ಟಿದ ಈ ಪದ್ಯದ ಉಳಿದ ಸಾಲುಗಳು ಇಂತಿವೆ.

'ಕನ್ನಡ ಮಾತಿನ ತಂದೆ ತಾಯಿಗಳಿಂದ
ಚೆನ್ನ ಚೆನ್ನೆಯರೆಲ್ಲ ಹುಟ್ಟದಿರಿ
ಕನ್ನಡ ದೇಶದಿ ದೊಡ್ಡವರಾದಿರಿ
ಕನ್ನಡದಿಂದಲೆ ಶ್ರೀಮಂತರಾದಿರಿ - ಕನ್ನಡ ದೇಶದಿ ಹೆಸರಾದಿರಿ
ಅನ್ಯ ಭಾಷೆಗಳಂತೆ ಕನ್ನಡ ಭಾಷೆಗೆ ಉನ್ನತಿಕೆಯ ತರಬೇಕೆಂದು
ಹೊನ್ನು ಕೂಡಿಸಲಿಕ್ಕೆ ಬಂದಿಹನಾತನು - ಮನ್ನಿಸಿ ನೀವೆಲ್ಲ ಕೊಡಬೇಕು...'

ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಅದನ್ನು ಕಂಡ ಶಾಂತಕವಿಗಳ ಹೃದಯ ತುಂಬಿ ಬಂದಿತು.

''ಈ ಕಾಲವಂ ನೋಡಬಯಸಿ ಮುದುಕನಾದೆನ್ನ ಸುಪ್ರಾರ್ಥನೆಗೆ
ಪರಮಾತ್ಮನಿಂದೊಲಿದ ।
ಧರೆಯೊಳುದಿಸಿದ ಕಾರ್ಯ ಸಫಲವಾಯ್ತು, ಪರಮ ಕರ್ನಾಟಕದ ಕೀರ್ತಿ
ವಿಸ್ತಾರವಾಯಿತು, ಹರುಷ ನಿರ್ಭರವಾಯ್ತು ಶಾಂತೇಶಗೆ ॥

ಎಂಬ ಕೃತಕೃತ್ಯ ಭಾವ ಕವಿಗಳಲ್ಲಿ ಸಂತೃಪ್ತಿ ಮೂಡಿಸಿತು.

ಅಧ್ಯಾಯ -೧೬

• ಮುಂಬಯಿ ಶಾಸನಸಭೆಯಲ್ಲಿ ಕನ್ನಡ ಧ್ವನಿ

ಕನ್ನಡ ಭಾಷೆಯ ಬೆಳವಣಿಗೆಗೆ ಹಾಗೂ ಕನ್ನಡ ಅಭ್ಯಾಸದ ಪ್ರಚಾರಕ್ಕೆ ರೊದ್ದ ಶ್ರೀನಿವಾಸರಾಯರು ಮಾಡಿದ ಪ್ರಯತ್ನ, ಪಟ್ಟ ಶ್ರಮ ಚಿರಸ್ಮರಣೀಯ. ಅದೊಂದರಿಂದಲೇ ಅವರ ಹೆಸರು ಇಡೀ ಕರ್ನಾಟಕಕ್ಕೇ ಮನೆ ಮಾತಾಗಿರಬೇಕು. ''ನಿಜವಾಗಿ ರೊದ್ದರಾಯರ ಹೆಸರು ಉಳಿದ ಕರ್ನಾಟಕದ ಪ್ರಾಂತಗಳಲ್ಲಿ , ಅಲ್ಲಿನವರ ಹೆಸರು ಇಲ್ಲಿ. ಹಾಗಾದಾಗ ಕರ್ನಾಟಕದ ಏಕೀಕರಣ ಸುಗಮವಾಗಬಹುದು'' ಎಂದು ದಿವಂಗತ ಸಿದ್ದವನಹಳ್ಳಿ ಕೃಷ್ಣಶರ್ಮರು ಕರ್ನಾಟಕ ಏಕೀಕರಣ ಪೂರ್ವದಲ್ಲೇ ಒಂದೆಡೆ ಬರೆದಿದ್ದಾರೆ.

'ಕರ್ನಾಟಕ ಪಿತಾಮಹ' ಎಂದೇ ಹೆಸರಾಗಿದ್ದ ರೊದ್ದ ಶ್ರೀನಿವಾಸರಾಯರು (೧೮೫೦-೧೯೩೯) ೧೯೨೦ರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ನಡೆದ ೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ದಿನಾಂಕ : ೧೭-೯-೧೮೫೦ರಂದು ಧಾರವಾಡದಲ್ಲಿ ಜನಿಸಿದರು. ಹೈಸ್ಕೂಲು ಅಧ್ಯಾಪಕ, ಜಿಲ್ಲಾ ಶಿಕ್ಷಣಾಧಿಕಾರಿ, ಧಾರವಾಡದ ಟ್ರೇನಿಂಗ್ ಕಾಲೇಜು ಪ್ರಾಚಾರ್ಯ ಇತ್ಯಾದಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ೧೯೦೮ರ ಜುಲೈನಲ್ಲಿ ನಿವೃತ್ತರಾದರು. ಕೇಳುವವರೇ ಇಲ್ಲದಿದ್ದ ಕಾಲದಲ್ಲಿ ಕನ್ನಡದ ಪ್ರಚಾರ ಮಾಡಿ, ಧಾರವಾಡದ ಜಿಲ್ಲೆಯಲ್ಲಿ ಕನ್ನಡ ಶಾಲೆಗಳ ಸಂಖ್ಯೆಯನ್ನು ೨೦೦ರಿಂದ ೬೦೦ಕ್ಕೇರಿಸಿದರು. ಅಲ್ಲದೆ ಹಳ್ಳಿ ಹಳ್ಳಿಗಳನ್ನು ಸುತ್ತಿ ಲಕ್ಷಾಂತರ ರುಪಾಯಿ ಸಂಗ್ರಹಿಸಿ 'ಕರ್ನಾಟಕ ಕಾಲೇಜ'ನ್ನು ಸ್ಥಾಪಿಸಿ, ಕನ್ನಡ ನಾಡಿಗಾಗಿ ಬಹು ಶ್ರಮಿಸಿದ ಇವರನ್ನು ಕನ್ನಡಿಗರು ಎಂದೆಂದಿಗೂ ಮರೆಯುವಂತಿಲ್ಲ.

ನಿವೃತ್ತರಾದ ಮೇಲೆ ಅವರು ಇನ್ನಷ್ಟು ಚುರುಕಾಗಿದ್ದರು. ಧಾರವಾಡದ ಹೆಣ್ಣು ಮಕ್ಕಳ ಶಿಕ್ಷಣ ವಿದ್ಯಾಲಯ, ಕರ್ನಾಟಕ ಹೈಸ್ಕೂಲು, ಕರ್ನಾಟಕ ಮಹಿಳಾ ವಿದ್ಯಾಲಯ ಮಿತ್ರ ಸಮಾಜ, ಬರಗಾಲ ನಿವಾರಕ ಸಂಘ, ವ್ಯಾಪಾರೋತ್ತೇಜಕ ಸಂಘಗಳು ರೊದ್ದರಾಯರ ಪರಿಶ್ರಮದಿಂದ ರೂಪುಗೊಂಡವು. ಸಾರ್ವಜನಿಕ ಕ್ಷೇತ್ರದಲ್ಲೂ ಅವರ ಪಾತ್ರ ಹಿರಿದಾಗಿತ್ತು. ೧೯೦೮ರಿಂದ ೧೯೧೫ರವರೆಗೆ ಮುಂಬಯಿ ವಿಧಾನ ಪರಿಷತ್ ಸದಸ್ಯರು, ೧೯೧೨ರಿಂದ ೧೯೧೫ರವರೆಗೆ ಧಾರವಾಡ ನಗರ ಸಭೆ ಅಧ್ಯಕ್ಷರು, ೧೯೨೫ರವರೆಗೆ ಜಿಲ್ಲಾ ಸ್ಥಳೀಯ ಮಂಡಳಿ ಅಧ್ಯಕ್ಷರಾಗಿದ್ದರು. ರೊದ್ದರಾಯರ ಕ್ರಿಯಾಶಕ್ತಿ ಜನತೆಗೂ ಅಂದಿನ ಸರಕಾರಕ್ಕೂ ಚೆನ್ನಾಗಿ ಮನವರಿಕೆಯಾಗಿತ್ತು. ಅಂತೆಯೇ ಜನರು ಅವರನ್ನು 'ಕರ್ನಾಟಕ ಪಿತಾಮಹ' ಎಂದು ಕರೆದರೆ, ಸರಕಾರ ಅವರಿಗೆ ಮೊದಲು 'ರಾವ ಬಹದ್ದೂರ್' , ಅನಂತರ

'ದಿವಾಣ ಬಹಾದ್ದೂರ' ಎಂಬ ಬಿರುದುಗಳನ್ನು ನೀಡಿತು. ಅಲ್ಲದೆ, ಬ್ರಿಟಿಷ್ ಸರಕಾರದ ಅತ್ಯುನ್ನತ ಪದವಿ 'ಸಿಆಯ್ಇ' ಯನ್ನು ಪಡೆದ ಮೊದಲ ಕನ್ನಡಿಗ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

'ದೇಶಭಾಷೆಗಳ ಮೂಲಕ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಣ ನಡೆಯಬೇಕು' ಎಂದು ೧೯೧೧ರಷ್ಟು ಹಿಂದೆ ಪ್ರತಿಪಾದಿಸಿದ್ದರು. ಪರಭಾಷೆಗಳ ಅನಿಯಂತ್ರಿತ ಪ್ರತಿಷ್ಠೆ ಬೆಳೆಯುತ್ತ ಹೋದ ಹಾಗೆ, ಅವು ನಮ್ಮ ಮಾತೃಭಾಷೆಯನ್ನು ನಮ್ಮ ಅಡಿಗೆ ಮನೆಯಿಂದಲೂ ಹೊರದೂಡ ಹತ್ತುವವು' ಎಂದು ಹೇಳಿದ್ದು ಇಂದಿಗೂ ಚಿಂತನೀಯವಾಗಿದೆ.

೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಮೂರು ಸಮ್ಮೇಳನಗಳು ಬೆಂಗಳೂರು - ಮೈಸೂರುಗಳಲ್ಲಿ ನಡೆದು, ಅವುಗಳಿಗೆ ಎಚ್. ವಿ. ನಂಜುಂಡಯ್ಯನವರೇ ಅಧ್ಯಕ್ಷರಾಗಿದ್ದರು. ನಾಲ್ಕನೆಯದು ಧಾರವಾಡದಲ್ಲಿ ನಡೆದಾಗ ಆರ್. ನರಸಿಂಹಾಚಾರ್ಯರು, ಹಾಸನದಲ್ಲಿ ನಡೆದ ಐದನೆಯದರ ಅಧ್ಯಕ್ಷತೆಯನ್ನು ಕರ್ಪೂರ ಶ್ರೀನಿವಾಸರಾಯರು ವಹಿಸಿದ್ದರು. ಅದಾದ ನಂತರ ಆರನೆಯ ಸಮ್ಮೇಳನ, ಅಂದು ಮದ್ರಾಸ್ ಇಲಾಖೆಗೆ ಒಳಪಟ್ಟಿದ್ದ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ನಡೆಯಿತು. ಅದರ ಅಧ್ಯಕ್ಷತೆಯನ್ನು ಮುಂಬಯಿ ಇಲಾಖೆಗೆ ಒಳಪಟ್ಟ ಧಾರವಾಡದ ರೊದ್ದ ಶ್ರೀನಿವಾಸರಾಯರು ವಹಿಸಿದ್ದರು. ಸಂಘಟನೆ ಬೆಂಗಳೂರು ಜನರದ್ದು. ಹೀಗಾಗಿ ಮೊದಲ ನಿಜವಾದ ಅಖಂಡ ಕರ್ನಾಟಕದಸಂಘಟನೆಯ ಸಮ್ಮೇಳನ ಇದಾಗಿತ್ತು. ಅಂತೆಯೇ ಅವರ ಅಧ್ಯಕ್ಷ ಭಾಷಣದಲ್ಲಿ ಹರಿದು ಹಂಚಿಹೋದ ಕನ್ನಡ ಪ್ರದೇಶಗಳ ದುಸ್ಥಿತಿ, ಪರಭಾಷೆಯ ದಬ್ಬಾಳಿಕೆಯಿಂದ ಕನ್ನಡಕ್ಕಾಗುತ್ತಿರುವ ಅನ್ಯಾಯ, ಕನ್ನಡ ಬಗ್ಗೆ ಕನ್ನಡಿಗರಿಗಿರುವ ಸಂಕುಚಿತ ಮನೋಭಾವ ಇವುಗಳ ಕುರಿತು ವಿಶ್ಲೇಷಿಸಿದ್ದಾರೆ. ಕನ್ನಡ ರಾಜ ಕನ್ನಡ ಪ್ರಜೆಗಳನ್ನೊಳಗೊಂಡ ಮೈಸೂರು ರಾಜ್ಯವೂ ಇವುಗಳಿಗೆ ಹೊರತಾಗಿರಲಿಲ್ಲ ಎಂದು ಸೋದಾರಣವಾಗಿ ಹೇಳಿದ್ದಾರೆ. ೮೫ ವರುಷಗಳ ಹಿಂದೆ ಅವರು ಮಾಡಿದ ಭಾಷಣದಲ್ಲಿಯ ಕೆಲವು ಮಾತುಗಳು ಇಂದಿಗೂ ಪ್ರಸ್ತುತವಾಗಿವೆ.

''ನಮ್ಮ ಪ್ರಾಚೀನ ವೈಭವವು ಹಾಗಿತ್ತು... ಹೀಗಿತ್ತೆಂದು ಸಗೌರವ ಅಭಿಮಾನಪಡುವುದು ಯೋಗ್ಯವೂ ಇಷ್ಟವೂ ಆಗಿರುವುದಾದರೂ ಅಷ್ಟರಿಂದಲೇ ನಮ್ಮ ಇತಿ ಕರ್ತವ್ಯವಾದಂತಾಗುವುದಿಲ್ಲ. ಹಳೆದನ್ನು ನೆನೆಸುತ್ತ ಸುಮ್ಮನೆ ಕೂಡುವುದು ಮಾನಸ ಕೋಟಿಯ ಅಧಃಪತನದ ಲಕ್ಷಣವಾಗುತ್ತದೆ... ಭರತಖಂಡದೊಳಗಿನ ಬೇರೆ -ಬೇರೆ ಜನಾಂಗಗಳು ತಮ್ಮ - ತಮ್ಮ ಮಾತೃಭಾಷೆಯ ಜೀರ್ಣೋದ್ಧಾರ ಕಾರ್ಯವನ್ನು ಅನೇಕಾನೇಕ ವರ್ಷಗಳಿಂದ ನಡೆಸಿರುವಂತೆ ಕನ್ನಡಿಗರಾದ ನಾವು ನಡೆಸಿರುವುದಿಲ್ಲವೆಂಬುದನ್ನು ಪ್ರಾಂಜಲ ಬುದ್ಧಿಯಿಂದ ಒಪ್ಪಿಕೊಳ್ಳಲೇಬೇಕು.

''ಗ್ರಾಮದೇವತೆ ಜಾತ್ರೆಯ ಕಾಲಕ್ಕೆ ಪಶುವಧೆ ಮಾಡಿ ಅದರ ದೇಹಾವಶೇಷವನ್ನು ಊರ ನಾಲ್ಕು ದಿಕ್ಕುಗಳಿಗೆ ದಿಗ್ಬಲಿಯಾಗಿ ಸಮರ್ಪಿಸುವ ರೂಢಿಯುಂಟೆಂಬುದನ್ನು ತಾವು ಬಲ್ಲಿರಿ. ಇದಕ್ಕೇ ನಮ್ಮ ವ್ಯಾವಹಾರಿಕ ಭಾಷೆಯಲ್ಲಿ 'ಚರಗಾ ಚೆಲ್ಲುವುದು' ಎನ್ನುತ್ತಾರೆ. ನಮ್ಮ ಕರ್ನಾಟಕದ ಅವಸ್ಥೆಯಾದರೂ ಬಲಿಬಿದ್ದ ಪಶುವಿನಂತಾಗಿ ನಾಲ್ಕಾರು ಕಡೆಗೆ ನಾಲ್ಕಾರು ಚರಗಗಳನ್ನು ಚೆಲ್ಲಿಕೊಟ್ಟಂತಾಗಿದೆ.

''...ಮುಂಬಯಿ ಮದರಾಸು ಸರಕಾರಗಳಿಗೆ ಅಧೀನವಾದ ಕರ್ನಾಟಕ ಭಾಗದ ಅವಸ್ಥೆ ಹೀಗಾಗಿದ್ದರೆ, ಇನ್ನು ಸ್ವಚ್ಛ ಕರ್ನಾಟಕರೆಂದೂ, ಅಚ್ಚ ಕನ್ನಡಿಗರೆಂದೂ ಸಗೌರವ ಅಭಿಮಾನ ತಾಳುವ ಮೈಸೂರವರ ಗತಿ ಏನಾಗಿರುವುದೆಂಬುದನ್ನು ನಾವು ವಿಚಾರಿಸಿ ನೋಡೋಣ. ಅಲ್ಲಿ ರಾಜರಾಡುವ ಭಾಷೆಯೂ ಪ್ರಜೆಗಳಾಡುವ ಭಾಷೆಯೂ ಕನ್ನಡವೇ ಆಗಿದೆ. ಅಂದರೆ ಅರಸಿನಿಂದ ಆಳಿನವರೆಗೂ ಎಲ್ಲರೂ ಒಂದೇ ಕನ್ನಡ ತಾಯಿಯ ಮಕ್ಕಳಾಗಿರುವವರು. ಆದರೂ ಅಲ್ಲಿಯ ವೈಚಿತ್ರ್ಯವನ್ನೇನೆಂದು ಬಣ್ಣಿಸಬೇಕು (?) ಈಗಿನ ಮಹಾರಾಜರ ಪಿತಾಮಹರಾದ ಶ್ರೀ ಕೃಷ್ಣ ರಾಜ ಒಡೆಯರ ಕಾಲದಲ್ಲಿ ಸುಮಾರು ೫೦ ವರುಷಗಳು ಬ್ರಿಟಿಷ್ ಅಧಿಕಾರಿಗಳ ಆಡಳಿತೆಗೆ ಮೈಸೂರು ರಾಜ್ಯ ಈಡಾಗಿದ್ದರಿಂದ ಆ ಕಾಲದಲ್ಲಿ ಪ್ರಬಲವಾಗಿ ಮುಂದೆ ಬಂದ ಇಂಗ್ಲಿಷ್ ಭಾಷೆ ತನ್ನ ಅಖಂಡ ವರ್ಚಸ್ಸನ್ನು ಅಲ್ಲಿ ಒಂದೇ ಸಮನೆ ಹೆಚ್ಚಿಸುತ್ತಲೇ ಇರುವುದು. ಸಾಮಾನ್ಯವಾಗಿ ಅತ್ತ ಕಡೆಯ ಹೆಣ್ಣು ಮಕ್ಕಳು ಮಾತನಾಡತಕ್ಕ ಕನ್ನಡದಲ್ಲಿ ೫-೬ ಇಂಗ್ಲಿಷ್ ಶಬ್ದಗಳು ಮಿಶ್ರಿತವಾಗಿರುತ್ತವೆಂದು ಕೇಳುತ್ತೇವೆ.... ಪರಭಾಷೆಯ ಅನಿಯಂತ್ರಿತ ಪ್ರತಿಷ್ಠೆಯು ಬೆಳೆಯುತ್ತ ಹೋದ ಹಾಗೆ ಅವು ನಮ್ಮ ಜನ್ಮ ಭಾಷೆಯನ್ನು ನಮ್ಮ ಅಡಿಗೆಯ ಮನೆಯಿಂದಲೂ ದೇವರ ಕೋಣೆಯಿಂದಲೂ ಹೊರದೂಡ ಹತ್ತುವುದೆಂಬುದೇ ಆಗಿದೆ. ಇದಕ್ಕೆ ಕಾರಣವೆಂದರೆ, ಕನ್ನಡಿಗರಲ್ಲದ ಅನೇಕ ಜನರು ಮೈಸೂರಿನ ಆಡಳಿತದಲ್ಲಿ ಬಂದು ಸೇರಿದ್ದರಿಂದಲೂ ಆ ಪ್ರಾಂತದ ಶಿಕ್ಷಣ ಸೂತ್ರಗಳು ಪರಭಾಷೆಯವರ ಕೈಯಲ್ಲಿ ಸಿಲುಕಿದ್ದರಿಂದಲೂ ಕನ್ನಡಕ್ಕೆ ಅಪರಿಮಿತವಾದ ಹಾನಿಯುಂಟಾಯಿತೆಂಬುದಂತೂ ನಿಸ್ಸಂದೇಹವಾಗಿದೆ.''

ಇಂದು ಕೂಡ ಇಂಗ್ಲಿಷ್ ಭಾಷೆಯನ್ನೆ ಮೊದಲ ತರಗತಿಯಿಂದ ಪ್ರಾರಂಭಿಸಬೇಕು ಎನ್ನುವವರು ಇದನ್ನು ಗಮನಿಸಬೇಕು. ಕಳೆದ ಆರು ಶತಮಾನಗಳಿಂದ ಕನ್ನಡ ಜನರು ಛಿನ್ನ - ವಿಚ್ಛಿನ್ನ ವಾಗಿ ಹಲವಾರು ಭಾಷೆಯ ಜನರ ಅಧೀನದಲ್ಲಿ ಆಡಳಿತಕ್ಕೆ ಒಳಪಟ್ಟಾಗ ಆದ ಹಾನಿಯನ್ನು ತುಂಬಿಕೊಳ್ಳುವುದು ಇಂದಿಗೂ ಆಗಿಲ್ಲ. ಮೈಸೂರು ವಿಶ್ವವಿದ್ಯಾಲಯ ಪ್ರಾರಂಭವಾಗುವ ದಿನಗಳಲ್ಲಿಯ ಚಿತ್ರ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ.

''ಸುಮಾರು ಅರ್ಧ ಶತಮಾನಗಳವರೆಗೆ ಪರಕೀಯ ಭಾಷೆಯ ವರ್ಚಸ್ಸು ಮೈಸೂರಿನ ಮಹಾಜನರ ಮೇಲೆ ಅವ್ಯಾಹತವಾಗಿ ನೆಲೆಗೊಂಡಿದ್ದ ಮೂಲಕವಾಗಿಯೇ,

ಮೊನ್ನೆ ಮೊನ್ನೆ ಮೈಸೂರಿಗೆ ಸ್ವತಂತ್ರವಾದ ವಿಶ್ವವಿದ್ಯಾಲಯದಿಂದಲೂ ಹಲ ಕೆಲವು ಪಂಡಿತ ಮಾನ್ಯರಾದ ಸ್ತ್ರೀ-ಪುರುಷರೂ ವಿರೋಧಿಸಿದರೆಂದು ಹೇಳಿದರೆ ಅಡ್ಡಿಯೇನು?.... ಯಾವ ಮೈಸೂರಿನಲ್ಲಿ ರಾಜಭಾಷೆಯು ಕನ್ನಡವೋ ಅಲ್ಲಿಯೇ ಕನ್ನಡ ಭಾಷೆಯ ಅಭ್ಯಾಸವೆಂಬುದು ಕೀಳುತರದ್ದೆಂಬ ಕಲ್ಪನೆಯಾಗಿದ್ದರೆ ಪರಭಾಷೆಯ ಅಂಕಿತದಲ್ಲಿರುವ ಕನ್ನಡ ಪ್ರಜೆಗಳ ಅಸಡ್ಡೆಯನ್ನು ತಾವೇ ಊಹಿಸುವುದು ಲೇಸು' ಎಂದಿದ್ದಾರೆ. ಜೊತೆಗೆ ಧಾರವಾಡದಲ್ಲಿ ಒಂದು ಕಾಲೇಜನ್ನು ಪಡೆಯಲು ಪಟ್ಟ ಶ್ರಮವನ್ನು ವಿವರಿಸಿದ್ದಾರೆ. ಅದೊಂದು ಬೇರೆ ಕಥೆ.

ಕರ್ನಾಟಕ ಪಿತಾಮಹ ಎಂದು ಹೆಸರಾದ ರೊದ್ದ ಶ್ರೀನಿವಾಸರಾಯರ ಪೂರ್ವಜರು ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪೆನಗೊಂಡ ತಾಲೂಕಿನ ರೊದ್ದಂ ಎಂಬ ಗ್ರಾಮದ ಕರಣಿಕ ಮನೆತನದವರು. ಶ್ರೀನಿವಾಸರಾಯರ ತಂದೆ ಕೋನೇರಿರಾಯರು. ಧಾರವಾಡದಲ್ಲಿದ್ದ ತಮ್ಮ ಚಿಕ್ಕಪ್ಪನ ಮನೆಯಲ್ಲಿ ಶಿಕ್ಷಣಕ್ಕಾಗಿ ಬಂದರು. ಕನ್ನಡ-ಮರಾಠಿ ಭಾಷೆಗಳ ವ್ಯಾವಹಾರಿಕ ಅಭ್ಯಾಸವನ್ನು ಮಾಡಿ ಅಲ್ಲಿಯೇ ಸರ್ವೇ ಇಲಾಖೆಯಲ್ಲಿ ಒಂದು ಸಣ್ಣ ನೌಕರಿಯನ್ನು ಹಿಡಿದರು. ಮದುವೆಯಾಯಿತು.

ಕೋನೇರಿರಾಯ ಮತ್ತು ಸುಬ್ಬಮ್ಮ ದಂಪತಿಗಳಲ್ಲಿ ಜನಿಸಿದ ಶ್ರೀನಿವಾಸರಾಯರು ಧಾರವಾಡದ ಮದಿಹಾಳದಲ್ಲಿಯ ಒಂದು 'ಗಾಂವಂಠೀ' ಶಾಲೆಯಲ್ಲಿ ಓದನ್ನು ಪ್ರಾರಂಭಿಸಿದರು. ಬಡತನದಿಂದಾಗಿ ವಿದ್ಯಾಭ್ಯಾಸ ಸುಸೂತ್ರವಾಗಿ ಸಾಗಲಿಲ್ಲ. ವಾರಾನ್ನದ ಊಟ, ಬೀದಿ ದೀಪದ ಓದು, ಮನೆಯಲ್ಲಿಯ ತೊಂದರೆಗಳಿಂದಾಗಿ ಓದನ್ನು ನಿಲ್ಲಿಸಬೇಕಾಯಿತು. ಈ ದಿನಗಳಲ್ಲಿಯೇ ಅವರ ತಂದೆ ತೀರಿಕೊಂಡರು, ತಾನು ಮತ್ತು ತಾಯಿ ಇಬ್ಬರ ಜೀವನ ನಿರ್ವಹಣೆಗಾಗಿ ಕೆಲಸವನ್ನು ಹುಡುಕಬೇಕಾಯಿತು. ಆದರೆ ನೌಕರಿಯ ವಯಸ್ಸಿಗೂ ಬಂದಿರಲಿಲ್ಲ. ಆ ಹೊತ್ತಿಗೆ ಅವರು ಗಾಂವಠೀ ಶಾಲೆಯಲ್ಲಿ ಕಲಿತ ಕನ್ನಡ ಮರಾಠಿ ಮತ್ತು ಜೊತೆ - ಜೊತೆಗೆ ಮಿಶನ್ ಶಾಲೆಯಲ್ಲಿ ಕಲಿತ ಇಂಗ್ಲಿಷ್ ಭಾಷೆಗಳು ಉಪಯೋಗಕ್ಕೆ ಬಂದವು. ತಾವೇ ಒಂದು ಗಾಂವಠೀ ಶಾಲೆ ತೆರೆದರು. ಎಂಟು ವಿದ್ಯಾರ್ಥಿಗಳು ಬಂದರು. ತಿಂಗಳಿಗೆ ಎಂಟು ಆಣೆ ಶುಲ್ಕ ೪ ರುಪಾಯಿಗಳ ಮೇಲೆ ಇಬ್ಬರ ಜೀವನ ಸಾಗಬೇಕು. ಉಪವಾಸ - ವನವಾಸದೊಂದಿಗೆ ದಿನಗಳನ್ನು ಕಳೆಯುತ್ತ ಅಧಿಕ ಸಂಬಳದ ನೌಕರಿಯನ್ನು ಹುಡುಕ ಹತ್ತಿದನು. ಹುಬ್ಬಳ್ಳಿ ಬಾಸೆಲ್ ಮಿಶನ್ ಶಾಲೆಯಲ್ಲಿ ತಿಂಗಳಿಗೆ ೧೫ ರು.ಗಳ ನೌಕರಿ ದೊರೆಯಿತು. ಆದರೆ ಅದೇ ವರುಷ ತಂದೆ ತೀರಿಕೊಂಡದ್ದರಿಂದ ವಿಧವೆ ತಾಯಿ ತಾನಿದ್ದ ಮನೆಯನ್ನು ಬಿಟ್ಟು ಬರಲು ಒಪ್ಪಲಿಲ್ಲ. ಧಾರವಾಡದಿಂದ ಹುಬ್ಬಳ್ಳಿ ೧೮ ಕಿಲೋಮೀಟರು ಅಂತರ. ಈಗಿನಂತೆ ವಾಹನ ಸೌಕರ್ಯ ಇರಲಿಲ್ಲ. ಪ್ರತಿದಿನ ಬೆಳಿಗ್ಗೆ ಸ್ನಾನ - ಊಟ ಮಾಡಿ ೮ ಗಂಟೆಗೆ ಧಾರವಾಡ ಬಿಟ್ಟು ಶಾಲೆಯ ಹೊತ್ತಿಗೆ ಸರಿಯಾಗಿ ಹುಬ್ಬಳ್ಳಿಗೆ ನಡೆದುಕೊಂಡು

ಬರುತ್ತಿದ್ದರು. ಮತ್ತೆ ಸಾಯಂಕಾಲ ಧಾರವಾಡಕ್ಕೆ ಹೋಗುತ್ತಿದ್ದರು. ಪ್ರತಿದಿನ ಸುಮಾರು ೨೪ ಮೈಲು ಅಥವಾ ೩೬-೩೭ ಕಿ.ಮೀ. ನಡೆಯುತ್ತಿದ್ದರು ಎಂದರೆ ಇಂದು ಯಾರೂ ನಂಬಲಿಕ್ಕಿಲ್ಲ ಆದರೆ ಆ ದಿನಗಳಲ್ಲಿಯ ಜನರ ಆರೋಗ್ಯ - ಶರೀರ ಹಾಗಿತ್ತು !

ಬಾಸೆಲ್ ಮಿಶನ್ ಶಾಲೆಯಲ್ಲಿ ೧೫ ರು. ಸಂಬಳ ಸಿಗುತ್ತಿತ್ತು. ಆದರೆ ಎಷ್ಟು ದಿನ ಕೆಲಸ ಮಾಡಿದರೂ ಸಂಬಳ ಹೆಚ್ಚಾಗುವುದಿಲ್ಲ ಎಂದು ಗೊತ್ತಾದೊಡನೆ ಶ್ರೀನಿವಾಸರಾಯರು ನೌಕರಿ ಬಿಟ್ಟು ಬೆಳಗಾವಿಯ ಟ್ರೇನಿಂಗ್ ಕಾಲೇಜಿಗೆ ಹೋದರು. ಅಲ್ಲಿದ್ದಾಗಲೇ ಅವರು ಮ್ಯಾಟ್ರಿಕ್ ಪರೀಕ್ಷೆಯನ್ನೂ ಕಟ್ಟಿದರು. ಅಂದಿನ ದಿನಗಳಲ್ಲಿ ಮ್ಯಾಟ್ರಿಕ್ ಪರೀಕ್ಷಾ ಕೇಂದ್ರ (ಇಂದಿನ ಎಸ್.ಎಸ್.ಎಲ್.ಸಿ.) ಮುಂಬಯಿಯಲ್ಲಿತ್ತು. ಬೆಳಗಾವಿಯಿಂದ ಪರೀಕ್ಷೆ ಕಟ್ಟಲು ಮುಂಬಯಿಗೆ ಹೊರಟರು. ಆ ದಿನಗಳಲ್ಲಿ ಬೆಳಗಾವಿಯಿಂದ ಪುಣೆಗೆ ರೈಲು ಮಾರ್ಗವೂ ಇರಲಿಲ್ಲ. ಕೆಲದಿನ ನಡೆಯುತ್ತ ಇನ್ನು ಕೆಲವು ದಿನ ಬೇರೆ ಸಹಾಯದಿಂದ ೨೩ನೆಯ ಆಗಸ್ಟ್ ೧೮೯೯ರಂದು ಪುಣೆ ಮುಟ್ಟಿದರು. ನವೆಂಬರ್‌ನಲ್ಲಿ ಮುಂಬಯಿ ಸೇರಿ ಪರೀಕ್ಷೆ ಕಟ್ಟಿದರು. ದುರ್ದೈವದಿಂದ ಪಾಸಾಗಲಿಲ್ಲ. ಮತ್ತೆ ಒಂದು ವರುಷ ಪುಣೆ ಹೈಸ್ಕೂಲಿನಲ್ಲಿ ಕಲಿತು ೧೮೭೦ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದರು. ರಸೆಲ್‌ರ ಸಹಾಯದಿಂದ ಡೆಕ್ಕನ್ ಕಾಲೇಜಿನಲ್ಲಿ ಮುಂದೆ ಕಲಿಯಬೇಕಂದು ಹೆಸರು ಹಚ್ಚಿದರು. ಆದರೆ ಹೊರಗಿನವರ ಎಷ್ಟೇ ಸಹಾಯವಿದ್ದರೂ ಆದಾಗಲೇ ಮದುವೆಯಾಗಿದ್ದ ಅವರು, ಪುಣೆಯಲ್ಲಿ ಮನೆ ಮಾಡಿ ತಾನು, ಹೆಂಡತಿ ಮತ್ತು ತಾಯಿ ಮೂವರ ಜೀವನ ಸಾಗಿಸುವುದು ಕಷ್ಟ ಎನಿಸಿತು. ಆದ್ದರಿಂದ ಧಾರವಾಡದಲ್ಲೇ ಶಿಕ್ಷಣ ಇಲಾಖೆಯಲ್ಲಿ ಒಂದು ಕೆಲಸವನ್ನು ದೊರಕಿಸಿ ಇರಬೇಕೆದು ನಿಶ್ಚಯಿಸಿದರು.

೧೮೭೨ ಜನವರಿ ಮೂರರಂದು ಸರಕಾರದವರು ಧಾರವಾಡದಲ್ಲಿ ಒಂದು ಹೈಸ್ಕೂಲನ್ನು ಪ್ರಾರಂಭಿಸಿದರು. ಅಲ್ಲಿ ಕೆಲಸಕ್ಕೆ ಪ್ರಯತ್ನಿಸಿದರಾದರೂ ದೊರೆಯಲಿಲ್ಲ. ಕೆಲವು ದಿನ ಕಂದಾಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ಅಲ್ಲಿಯ 'ಲಂಚ'ದ ಅವತಾರಗಳನ್ನು ಕಂಡು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಕಾರವಾರ 'ಇಂಗ್ಲಿಷ್ ಶಾಲೆಯಲ್ಲಿ ೪೫ರು. ಸಂಬಳದ ಶಿಕ್ಷಕ ವೃತ್ತಿ ದೊರೆಯಿತು ಅಲ್ಲಿಂದ ೧೯೦೮ರಲ್ಲಿ ನಿವೃತ್ತಿಯಾಗುವವರೆಗೆ ರೊದ್ದ ಶ್ರೀನಿವಾಸರಾಯರು ಹಿಂತಿರುಗಿ ನೋಡಲಿಲ್ಲ. ವರುಷ ವರುಷಕ್ಕೂ ಮೇಲೇರುತ್ತ ಹೋದರು. ಹೋದಲ್ಲೆಲ್ಲ ತಮ್ಮ ಛಾಪನ್ನು ಒತ್ತಿದರು. ಮೇಲಿನವರ ಶಿಫಾರಸು ಪತ್ರಗಳನ್ನು ಗಳಿಸಿದರು. ತಮ್ಮ ಕೆಲಸದೊಂದಿಗೆಯೇ ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ನಿರತರಾದರು. ಅವುಗಳಲ್ಲಿ ಮಿತ್ರ ಸಮಾಜ, ವ್ಯಾಪಾರೋತ್ತೇಜಕ ಕಂಪನಿ, ಕ್ಷಾಮ ನಿವಾರಕ ಸಂಘ ಮೊದಲಾದ ಸಂಘಟನೆಗಳನ್ನು ಹೆಸರಿಸಬೇಕು.

ವೃತ್ತಿಯಲ್ಲಿ ಎನಿದ್ದರೂ ಒಂದು ಮಿತಿಯಲ್ಲಿ ಕೆಲಸ ಮಾಡಬೇಕಷ್ಟೆ. ಬ್ರಿಟಿಷರ ಅಧೀನರಾಗಿದ್ದರೂ, ಅವರಿಂದಲೂ ಒಳ್ಳೆಯ ಕೆಲಸಗಳನ್ನು ಮಾಡಿಸಬಹುದು ಎಂಬುದು ರೊದ್ದರ ನಿರೀಕ್ಷೆಯಾಗಿತ್ತು. ಅದಕ್ಕೆ ಕಾಯಿದೆ ಕೌನ್ಸಿಲನ ಸಭಾಸದರಾಗುವುದು ಅಗತ್ಯವಾಗಿತ್ತು.

ಭಾರತದಲ್ಲಿ ಬ್ರಿಟಿಷರು ತಮ್ಮ ಆಡಳಿತವನ್ನು ಪ್ರಾರಂಭಿಸಿದ ಮೇಲೆ ಕಾಯಿದೆ ಕೌನ್ಸಿಲ್ ಅಥವಾ ಬ್ರಿಟಿಷ್ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಒಂದು ನ್ಯಾಯ ಸಭೆಯನ್ನು ರಾಜಧಾನಿ ಕಲಕತ್ತೆಯಲ್ಲಿ ಸ್ಥಾಪಿಸಿದ್ದರು. ಪ್ರಾರಂಭದಲ್ಲಿ ಕೌನ್ಸಿಲ್ಲಿನ ಎಲ್ಲ ಸದಸ್ಯರೂ ಸರಕಾರದ ಅಧಿಕಾರಿಗಳಾಗಿದ್ದರು. ೧೮೬೧ರಲ್ಲಿ ಅದು ಮಾರ್ಪಾಡಾಗಿ ೧೫ ಜನ ಸದಸ್ಯರಲ್ಲಿ ೬ ಜನ ಸರಕಾರದ ಅಧಿಕಾರಿಗಳು, ಇನ್ನು ೯ ಜನ ಪ್ರಜಾಪ್ರತಿನಿಧಿಗಳು ಇರಬೇಕೆಂದು ಗೊತ್ತಾಯಿತು. ಜೊತೆಗೆ ಮುಂಬಯಿ ಮದ್ರಾಸ್‌ಗಳಲ್ಲೂ ಇಂಥ ಪ್ರಾಂತೀಯ ಕಾಯಿದೆ ಕೌನ್ಸಿಲ್‌ಗಳು ಪ್ರಾರಂಭವಾದವು. ಪ್ರಜಾಪ್ರತಿನಿಧಿಗಳನ್ನು ನೇಮ್ಮಿಸಿಕೊಳ್ಳುವ ಅಧಿಕಾರವು ಕೌನ್ಸಿಲ್ಲಿನ ಅಧ್ಯಕ್ಷರಾದ ಗವರ್ನರರಿಗೆ ಇರುತ್ತಿತ್ತು. ದಾದಾಭಾಯಿ ನವರೋಜಿ, ರಾನಡೆ, ತೇಲಂಗ, ಮೆಹತಾ, ಬದ್ರುದ್ದೀನ ತಯ್ಯಬಜಿ ಅಂಥ ಪ್ರಸಿದ್ಧರು ಸದಸ್ಯರಾಗಿದ್ದರು.

ಮೂವತ್ತು ವರುಷಗಳವರೆಗೆ ನಡೆದ ಈ ವ್ಯವಸ್ಥೆಯಲ್ಲಿ ೧೮೯೧ರಲ್ಲಿ ಕೌನ್ಸಿಲ್ ಆಕ್ಟ್ ಬಂದಿತು. ಈ ಆಕ್ಟಿನಿಂದ ವರಿಷ್ಠ ಕಾಯಿದೆ ಕೌನ್ಸಿಲ್ಲಿನ ಸದಸ್ಯರ (ಇಂಪೀರಿಯಲ್ ಲೆಜಿಸ್ಲೇಟೀವ್ ಕೌನ್ಸಿಲ್) ಸಂಖ್ಯೆ೧೬ ಎಂದು ನಿರ್ಧಾರವಾಯಿತು. ಅವರಲ್ಲಿ ೬ ಜನ ಸರಕಾರಿ ಇನ್ನುಳಿದ ಹತ್ತು ಜನ ಪ್ರಜಾಪ್ರತಿನಿಧಿಗಳು. ಅದರಂತೆ ಮುಂಬಯಿ ಪ್ರಾಂತಿಕ ಕೌನ್ಸಿಲ್ಲಿನ ಸದಸ್ಯರ ಸಂಖ್ಯೆ ೨೦ ಎಂದು ಗೊತ್ತಾಯಿತು. ಇದರಲ್ಲಿ ೮ ಸ್ಥಳಗಳು ಲೋಕನಿಯುಕ್ತ ಸಭಾಸದರಿಗೆ, ಅವುಗಳಲ್ಲಿ ೨ ಸಿಂಧ ಪ್ರಾಂತಕ್ಕೆ, ೧, ಗುಜರಾತಕ್ಕೆ ೨ ದಕ್ಷಿಣ ಭಾಗಕ್ಕೆ ೧ ಪುಣೆ ಮತ್ತು ೩ ಮುಂಬಯಿ ಪಟ್ಟಣಕ್ಕೆ ನಿಗದಿಯಾದವು. ಮೊದಲನೆಯ ಕೌನ್ಸಿಲ್ಲಿಗೆ ದಕ್ಷಿಣ ಭಾಗದಿಂದ ಬೆಳಗಾವಿಯ ನಾತು ವಿಷ್ಣುಪಂತರು ಆರಿಸಿ ಬಂದಿದ್ದರು. ಮುಂದಿನ ಚುನಾವಣೆಗಳಲ್ಲಿ ಒಮ್ಮೆ ಛತ್ರೆ, ಇನ್ನೊಮ್ಮೆ ಖರೆ ಹೀಗೆ ಮರಾಠಿ ಜನರೇ ಚುನಾಯಿತರಾದರು. ಕರ್ನಾಟಕದ ಬಗ್ಗೆ ಅಭಿಮಾನವುಳ್ಳವರು ದಕ್ಷಿಣ ಭಾಗದಿಂದ ಮುಂಬಯಿ ಕೌನ್ಸಿಲ್ಲಿನಲ್ಲಿ ಪ್ರತಿನಿಧಿಸದ ಹೊರತು ಈ ಭಾಗದ ಅಭಿವೃದ್ಧಿಯಾಗದು ಎಂದರು. ರಾವಬಹದ್ದೂರ ಗಿಲಗಂಚಿ ಗುರುಸಿದ್ಧನಪ್ಪನವರೊಬ್ಬರು ಮಾತ್ರ, ಸರಕಾರದಿಂದ ನಿಯುಕ್ತರಾದ ಸಭಾಸದರಾಗಿದ್ದರು.

ಕರ್ನಾಟಕದ ಹಿತವನ್ನು ಸಾಧಿಸಲು ರೊದ್ದರಾಯರೇ ಕೌನ್ಸಿಲ್ಲಿನಲ್ಲಿ ಬರುವುದು ಅವಶ್ಯವೆಂದು ಜನರು ನಿಶ್ಚಯಿಸಿದರು. ಪೂರ್ಣ ನಿವೃತ್ತಿ ವೇತನ ಬರುವಷ್ಟು ಸೇವಾವಧಿ ಆಗಿರದಿದ್ದರೂ ನೌಕರಿಗೆ ರಾಜೀನಾಮೆಯನ್ನು ಕೊಟ್ಟು ಸ್ವ ಇಚ್ಛೆ ನಿವೃತ್ತಿ ಪಡೆದರು. ೧೯೦೮ರ ಜುಲೈ ತಿಂಗಳಲ್ಲಿ ಚುನಾವಣೆಗೆ ನಿಲ್ಲಲು ಸಿದ್ಧತೆ

ಮಾಡಿ ಕೊಂಡರು. ಎದುರಾಳಿ ಅನುಭವಸ್ಥ ಆಗಲೇ ಎರಡು ಸಲ ಸಭಾಸದರೆಂದು ಚುನಾಯಿತರಾದವರು. ಮರಾಠಿ ಮನುಷ್ಯ, ದಾಜಿ ಆಬಾಜಿ ಖರೆ ಎಂದು ಅವರ ಹೆಸರು. ಕೊಂಕಣದ ಎಲ್ಲಾ ಮತಗಳೂ ಅವರಿಗೆ ದೊರೆಯುವುದು ಖಚಿತ ಎಂಬ ಪರಿಸ್ಥಿತಿ. ೧೯೦೯ರ ಜುಲೈ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಎಲ್ಲರ ನಿರೀಕ್ಷೆಯನ್ನು ಹುಸಿಗೊಳಿಸಿ, ರೊದ್ದ ಶ್ರೀನಿವಾಸರಾಯರು ಆರಿಸಿ ಬಂದರು. ಮುಂದಿನ ದಿನಗಳಲ್ಲಿ ಮತ್ತೆ ಎರಡು ಸಲ ಕೌನ್ಸಿಲ್ಲಿಗೆ ಆರಿಸಿ ಬಂದರು. ೧೯೦೯ರಿಂದ ೧೯೧೬ರ ವರೆಗೆ ಏಳು ವರುಷ ಮುಂಬಯಿ ಕಾಯಿದೆ ಕೌನ್ಸಿಲ್ಲಿನ ಸಭಾಸದರಾಗಿದ್ದರು.

ರೊದ್ದರಾಯರು ಕೌನ್ಸಿಲ್ಲಿನಲ್ಲಿ ನಿರ್ಭೀತಿಯಿಂದ ತಮ್ಮ ಸಮಸ್ಯೆಗಳನ್ನು ಮಂಡಿಸುತ್ತಿದ್ದರು ಮತ್ತು ಅವುಗಳು ಪಾಸಾಗುವಂತೆ ನೋಡಿಕೊಳ್ಳುತ್ತಿದ್ದರು. ಮುಂಬಯಿ ಕರ್ನಾಟಕದ ಹಲವಾರು ಜ್ವಲಂತ ಸಮಸ್ಯೆಗಳನ್ನು ಕೌನ್ಸಿಲ್ಲಿನಲ್ಲಿ ಮಂಡಿಸಿದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ದೇಶ ಭಾಷೆಗಳ ಮುಖಾಂತರ ಶಿಕ್ಷಣ, ಹೈಸ್ಕೂಲುಗಳಲ್ಲಿ ಶುಲ್ಕವನ್ನು ಹೆಚ್ಚಿಸಕೂಡದು. ಜೇಲಿನಿಂದ ಬಿಡುಗಡೆ ಹೊಂದಿದ ಜನರ ಸುಧಾರಣೆ, ಹುಬ್ಬಳ್ಳಿ ಕಾರವಾರ ರೇಲ್ವೆ ಮತ್ತು ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪನೆ ವಿಷಯಗಳು ವಿಶೇಷವಾಗಿವೆ.

ಸರಿಯಾಗಿ ೯೫ ವರ್ಷಗಳ ಹಿಂದೆ , ಮೈಸೂರು ಸಂಸ್ಥಾನದಲ್ಲಿ ಕೂಡ ದೇಶಭಾಷೆಯಲ್ಲಿ ಶಿಕ್ಷಣವನ್ನು ವಿರೋಧಿಸುತ್ತಿರುವಾಗ ರೊದ್ದ ಶ್ರೀನಿವಾಸರಾಯರು ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೇಶ ಭಾಷೆಗಳ ಮುಖಾಂತರವೇ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸಿದರು. ಅದು ೧೯೧೧ನೆ ಇಸ್ವಿಯ ಜುಲೈ ತಿಂಗಳ ೨೫ನೆ ತಾರೀಖು. ರಾಯರ ವಾದ ಸರಣಿ ನಿರರ್ಗಳವಾಗಿತ್ತು.

''...ದೇಶಬಾಷೆಯ ಅಭ್ಯಾಸವನ್ನು ಚೆನ್ನಾಗಿ ಮಾಡಿದವನಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಬೇಗ ಆಗುವುದಲ್ಲದೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ತೇರ್ಗಡೆ ಹೊಂದಿ ಅವನು ಮೇಲೆ ಬರುವನು. ಇದನ್ನು ನಾನು ನನ್ನ ಅನುಭವದಿಂದ ಹೇಳುತ್ತೇನೆ...'' ಎಂದು ವಾದವನ್ನು ಮಂಡಿಸುತ್ತ ಸಮಕಾಲೀನದಲ್ಲಿ ಎಲ್ಫಿನ್‌ಸ್ಟನ್ ಕಾಲೇಜು ಮುಂಬಯಿ ಮತ್ತು ಡೆಕ್ಕನ್ ಕಾಲೇಜು ಪುಣೆಯಲ್ಲಿ ಕಲಿತು ಮುಂದೆ ಬಂದ ಹಲವಾರು ಜನರ ಉದಾಹರಣೆ ಕೊಟ್ಟರು.

''ಬೆಳಗಾವಿಯ ಟ್ರೇನಿಂಗ್ ಕಾಲೇಜಿಗೆ ಸೇರುವಾಗ ನನಗೆ ಸಾದಾ ಭಾಗಾಕಾರದ ಮುಂದಿನ ಗಣಿತದ ಜ್ಞಾನವಿದ್ದಿಲ್ಲ. ಒಂದು ವರ್ಷದೊಳಗೆ ಅಂಕಗಣಿತ, ಬೀಜಗಣಿತ ಜ್ಞಾನವನ್ನು ಚೆನ್ನಾಗಿ ಮಾಡಿಕೊಂಡೆನು. ಇತಿಹಾಸ, ಗಣಿತಶಾಸ್ತ್ರ, ರಸಾಯನಶಾಸ್ತ್ರ ಮೊದಲಾದ ವಿಷಯಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಕಲಿಸುವುದು ಅತಿ ಸುಲಭವೆಂದು ನಾನು ನನ್ನ ಅನುಭವದಿಂದ ಹೇಳುತ್ತೇನೆ.'' ಎಂಬ ಅವರ ಸ್ವಾನುಭವದ ಮಾತುಗಳು ಇಂದಿನ ಶಿಕ್ಷಣ ತಜ್ಞರು ಹಾಗೂ ಇಂಗ್ಲಿಷ್ ಬೇಕು ಎಂಬುವವರು ಗಮನಿಸುವಂತಿವೆ.

ಇಂದಿಗೂ ಜ್ವಲಂತವಾಗಿ ಇರುವ ಕಳೆದ ಒಂದೂವರೆ ಶತಮಾನದಿಂದ ನೆನೆಗುದಿಗೆ ಬಿದ್ದಿರುವ ಹುಬ್ಬಳ್ಳಿ-ಕಾರವಾರ ರೈಲ್ವೆಯ ಅಗತ್ಯವನ್ನು ರೊದ್ದ ಶ್ರೀನಿವಾಸರಾಯರು ಮುಂಬಯಿ ಕಾಯಿದೆ ಕೌನ್ಸಿಲಿನ ಮುಂದೆ ಮಂಡಿಸಿದಾಗ, ಯೋಜನೆಯ ಒಳಹೊರಗನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಮದ್ರಾಸ್ ಮತ್ತು ಸದರ್ನ್ ಮರಾಠಾ ರೈಲ್ವೆಯ ಮೇಲಿದ್ದ ಹುಬ್ಬಳ್ಳಿ ಮಾರ್ಗ ಬೇರೆ ಯಾವುದಾದರೊಂದು ಸ್ಟೇಶನ್ನಿಗೆ ಕಾರವಾರದಿಂದ ರೈಲ್ವೆ ಮಾರ್ಗ ನಿರ್ಮಿಸುವ ವಿಚಾರವನ್ನು ಮಾಡುವುದು ಇಷ್ಟವಿರುತ್ತದೆಂದು ಬೋರ್ಡಿಗೆ ಮುಂಬೈ ಸರಕಾರದವರು ತಿಳಿಸಬೇಕೆಂದು ಈ ಕೌನ್ಸಿಲ್ಲು ಶಿಫಾರಸ್ಸು ಮಾಡುತ್ತದೆ ಎಂಬುದಾಗಿ ಗೊತ್ತುವಳಿಯನ್ನು ಮಂಡಿಸಿ ನಿರ್ಣಯಕ್ಕಾಗಿ ತಮ್ಮ ವಾದವನ್ನು ಸುದೀರ್ಘವಾಗಿ ಮಂಡಿಸಿದ್ದಾರೆ. ಕಾರವಾರ ಬಂದರಿನ ಮಹತ್ವ ಮತ್ತು ಅದರಿಂದ ಕರ್ನಾಟಕಕ್ಕೆ ಆಗುವ ಲಾಭ, ಮುಂಬಯಿ ಮತ್ತು ಮದ್ರಾಸ್ ಚೇಂಬರ್ ಆಫ್ ಕಾಮರ್ಸಿನವರು ತಮ್ಮ ಸ್ವಾರ್ಥಕ್ಕಾಗಿ ಈ ರೈಲು ಮಾರ್ಗ ಬೇಡ ಎಂದುದು .. ಇತ್ಯಾದಿ ಹತ್ತು ಹಲವು ವಿಷಯಗಳನ್ನು ಹೇಳಿದರು. ಕೊನೆಯಲ್ಲಿ ಅಂದಿನ ಕಾಯಿದೆ ಕೌನ್ಸಿಲ್ಲಿನ ಅಧ್ಯಕ್ಷರಾಗಿದ್ದ ಸರ್ ರಿಚರ್ಡ್ ಲ್ಯಾಂಬರು ನಿರ್ಣಯಕ್ಕೆ ತಮ್ಮ ಅನುಕೂಲ ಅಭಿಪ್ರಾಯ ಕೊಟ್ಟು ನಿರ್ಣಯವನ್ನು ಪಾಸು ಮಾಡಿದರು. ಆದರೆ ಈವರೆಗೂ ರೈಲು ಮಾರ್ಗ ಆಗಲಿಲ್ಲ. ಅದು ಈ ಭಾಗದ ಜನರ ದುರ್ದೈವ. !

ರೊದ್ದ ಶ್ರೀನಿವಾಸರಾಯರು ಕರ್ನಾಟಕದ ಜನರಿಗಾಗಿ ಮಾಡಿದ ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಅತಿ ಮಹತ್ವದ ಮತ್ತು ಚಿರಕಾಲ ನೆನಪಿಡುವ ಕಾರ್ಯವೆಂದರೆ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪನೆ. ಯಾಕೆಂದರೆ ಅದುವೆ ಮುಂಬರುವ ವರ್ಷಗಳಲ್ಲಿ ಬರುವ ಕರ್ನಾಟಕ ವಿಶ್ವವಿದ್ಯಾಲಯದ ಅಡಿಗಲ್ಲಾಯಿತು. ಅವರ ಕುರಿತಾದ ಸಂಸ್ಕೃತ ಕಾವ್ಯ ರೊದ್ದರಾಜ ಕೀರ್ತಿ ಮಂಜರಿ'ಯಲ್ಲಿ ಬಹು ಸುಂದರವಾಗಿ ಈ ಬಗ್ಗೆ ಕವಿ ವರ್ಣಿಸಿದ್ದಾನೆ.

ಸಾರ್ಥಕ್ಯೆಪಿ ಮಹಾತ್ಮಾ !
ಗುರುತಯುತ್ಸಾಜ್ಞ ನೋಪಕಾರಕೃತೇಃ
ಕರ್ನಾಟಕ ಕಾಲೇಜಿತಿ
ವಿದ್ಯಾಪೀಠಂ ನ್ವೇಶಯದ್ಧೀಮಾನ್ಃ

ಕರ್ನಾಟಕದ ತರುಣರು ಉಚ್ಚ ಶಿಕ್ಷಣಕ್ಕಾಗಿ ತಮ್ಮಮನೆ -ಮಾರು, ಬಂಧು-ಬಳಕ, ದೇಶ-ಕೋಶಗಳನ್ನು ಬಿಟ್ಟು ದೂರ ಹೋಗಬೇಕಾದುದರಿಂದ ಶ್ರೀಮಂತರಾದವರು ಮಾತ್ರ ಉತ್ತಮ ಶಿಕ್ಷಣ ಪಡೆಯಲು ಸಾಧ್ಯವಿತ್ತು. ಬಡವರು ಉಚ್ಚ ಶಿಕ್ಷಣದ ವಿಚಾರವನ್ನೇ ಎತ್ತುತ್ತಿರಲಿಲ್ಲ. ಆದರೆ ರೊದ್ದ ಶ್ರೀನಿವಾಸರಾಯರ ಆಶಯ 'ಮುಸುರೆ ತಿಕ್ಕುವವರ ಮಕ್ಕಳು ಕೂಡ ಪದವೀಧರರಾಗಿರಬೇಕು'

ಎಂಬುದಾಗಿತ್ತು. ಅದನ್ನು ಅವರು ಹಲವಾರು ಸಂದರ್ಭಗಳಲ್ಲಿ ಕಾಯಿದೆ ಕೌನ್ಸಿಲ್ಲಿನಲ್ಲಿ ಒಂದು ಶತಮಾನ ಕಾಲದಷ್ಟು ಹಿಂದೆ ಹೇಳುತ್ತಿದ್ದರು ಎಂಬುದು ವಿಶೇಷವಾಗಿದೆ.

ಹಾಗೆ ನೋಡಿದರೆ ಕರ್ನಾಟಕ ಕಾಲೇಜಿನ ಕಲ್ಪನೆಯು ೧೮೭೭ರಿಂದಲೇ ಕರ್ನಾಟಕದ ಮಂದಾಳುಗಳ ತಲೆಯಲ್ಲಿ ಇತ್ತು.ಆದರೆ ಅದಕ್ಕಾಗಿ ಒಂದು ಸುಸಂಘಟಿತ ಪ್ರಯತ್ನವಿರಲಿಲ್ಲ. ರೊದ್ದರಾಯರು ೧೯೦೮ರಲ್ಲಿ ನಿವೃತ್ತರಾದ ದಿನದಿಂದಲೇ ಕಾಲೇಜಿನ ಯೊಜನೆಗೆ ತಮ್ಮ ತನು-ಮನ-ಧನಗಳನ್ನುಸಂಪೂರ್ಣವಾಗಿ ಅರ್ಪಿಸುವ ನಿಶ್ಚಯ ಮಾಡಿದರು. ಕುಳಿತಲ್ಲಿ ನಿಂತಲ್ಲಿ ಹೋದಲ್ಲಿ ಬಂದಲ್ಲಿ ಕಾಲೇಜಿನ ಮಾತನ್ನೇ ಎತ್ತುತ್ತಿದ್ದರು. ಸ್ಥಾನಿಕ ಅಧಿಕಾರಿಗಳಾದ ಕಲೆಕ್ಟರ್ ಹಡಸನ್, ಕಮೀಶನರ ಗಿಬ್ಸರನ್ನು ಸಂಪರ್ಕಿಸಿ ಕಾಲೇಜು ಸ್ಥಾಪನೆಯ ವಿಷಯದಲ್ಲಿ ಅವರಿಂದ ಸಹಾನುಭೂತಿ ಸಂಪಾದಿಸಿದರು. ಅದೇ ವರ್ಷ ಸಪ್ಟೆಂಬರ್ ತಿಂಗಳಲ್ಲಿ ಮುಂಬೈ ಗೌರ್ನರಾದ ಸರ್ ಜಾರ್ಜ್ ಸಿಡನ್ ಹ್ಯಾಮ್ ಕ್ಲಾರ್ಕ್ ಬೆಳಗಾವಿಗೆ ಬರುತ್ತಿದ್ದಾನೆಂಬ ವಿಷಯ ತಿಳಿದೊಡನೆ ಅವನೊಡನೆ ಭೆಟ್ಟಿಯ ಅಪ್ಪಣೆಯನ್ನು ಮೊದಲೇ ಪಡೆದುಕೊಂಡು ಬೆಳಗಾವಿಗೆ ಹೋದರು. ಗವರ್ನರ್‌ನೊಂದಿಗೆ ಸುದೀರ್ಘ ಚರ್ಚೆ ಮಾಡಿದರು. ಆನಂತರ ಮುಂಬೈ ಸರಕಾರಕ್ಕೆ ಪತ್ರ ಬರೆದರು. ಅದಕ್ಕೆ ಧಾರವಾಡದಲ್ಲಿ ಅಂದು ಎಕ್ಸಿಕ್ಯೂಟಿವ್ ಇಂಜಿನಿಯರಾಗಿದ್ದ ಬೆಳವಡಿ ನಂಜುಂಡಯ್ಯ ರಾಯರಿಗೆ ಸಹಾಯ ಮಾಡಿದರು. ಪತ್ರ ಬರೆಯಲಿಕ್ಕೆ ಸಹಾಯ ಮಾಡಿದ್ದಲ್ಲದೆ ರೈಲ್ವೆ ಕಚೇರಿಗಳು ಮದ್ರಾಸಿಗೆ ಹೋದಮೇಲೆ, ರೈಲ್ವೆ ಕಟ್ಟಡಗಳನ್ನು ಕರ್ನಾಟಕ ಕಾಲೇಜಿಗಾಗಿ ಉಪಯೋಗಿಸಬಹುದೆಂಬ ಸೂಚನೆಯನ್ನು ಮಾಡಿದ್ದರು. ಆ ರೀತಿ ನೀಲ ನಕ್ಷೆಯನ್ನೂ ತಯಾರಿಸಿಕೊಟ್ಟರು.

ಫೆಬ್ರವರಿ ೨೭, ೧೯೦೯ರಂದು ರೊದ್ದರಾಯರು ಸರಕಾರಕ್ಕೆ ಬರೆದ ಪತ್ರಕ್ಕೆ ಸರಕಾರ ಜೂನ್ ತಿಂಗಳಿನಲ್ಲಿ ಉತ್ತರ ಕೊಟ್ಟಿತು. ಧಾರವಾಡದಲ್ಲಿ ಕರ್ನಾಟಕ ಕಾಲೇಜನ್ನು ಸ್ಥಾಪಿಸಲು ಸರಕಾರಕ್ಕೆ ಸಂಪೂರ್ಣ ಸಹಾನುಭೂತಿ ಇದೆ ಎಂದು ತಿಳಿಸುತ್ತ, ಶಾಲೆಯ ಪ್ರಾರಂಭಕ್ಕೆ ಕನಿಷ್ಠ ೨ ಲಕ್ಷ ೭೭ ಸಾವಿರ ರುಪಾಯಿಯನ್ನು ಸಂಗ್ರಹ ಮಾಡಿದರೆ ಸರಕಾರದವರು ಕಾಲೇಜಿನ ಯೋಜನೆಯ ಬಗ್ಗೆ ನಿಶ್ಚಿತವಾದ ವಿಚಾರ ಮಾಡುವುದಾಗಿ ತಿಳಿಸಿತು.

ಅಂದಿನ ದಿನಗಳಲ್ಲಿ ೨ ಲಕ್ಷ ೭೪ ಸಾವಿರ ರುಪಾಯಿ ಸಂಗ್ರಹಿಸುವುದು ಕಠಿಣವಾಗಿತ್ತು. ಸರಕಾರ ಸೂಚಿಸಿದಂತೆ, ಅದಕ್ಕಾಗಿ 'ಕರ್ನಾಟಕ ಕಾಲೇಜು ಅಸೋಸಿಯೇಶನ್' ಎಂಬ ಸಂಘವನ್ನು ಹುಟ್ಟುಹಾಕಿದರು. ಸಂಘದ ಅಧ್ಯಕ್ಷರನ್ನಾಗಿ ಅಂದು ಮುಂಬೈ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಕನ್ನಡಿಗರೇ ಆದ ಸರ್ ನಾರಾಯಣ ಚಂದಾವರಕರ ಅವರನ್ನೇ ಮಾಡಿದರು. ಚೇರಮನ್ನರಾಗಿ ರೊದ್ದ

ಶ್ರೀನಿವಾಸರಾಯರು, ಕಾರ್ಯದರ್ಶಿಗಳಾಗಿ ಕರಗುದರಿ ನಾರಾಯಣರಾಯರು ಕೋಶಾಧ್ಯಕ್ಷರಾಗಿ ಜಠಾರ ಬಳವಂತರಾಯರಿದ್ದರು.

'ಕರ್ನಾಟಕದ ಎಲ್ಲ ಜಾತಿ ಮತ ಪಂಥಗಳ ಬಂಧುಗಳಿಗೆ' ಎಂದು ಪ್ರಾರಂಭಿಸಿ ೧೯೧೧ರ ಜನವರಿಯಲ್ಲಿ ಕರ್ನಾಟಕದ ಜನರಿಗೆ ಒಂದು ವಿನಂತಿ ಪತ್ರವನ್ನು ಪ್ರಕಟಿಸಿದರು. ಈ ಮಧ್ಯೆ ಅವರು ಕಾಯಿದೆ ಕೌನ್ಸಿಲ್ಲಿನ ಸಭಾಸದರೆಂದು ಚುನಾಯಿತರಾದದ್ದರಿಂದ ಕೌನ್ಸಿಲ್ಲಿನ ಪ್ರತಿ ಸಭೆಯಲ್ಲಿ ಕರ್ನಾಟಕ ಕಾಲೇಜಿನ ಬಗ್ಗೆ ವಿಷಯ ಮಂಡಿಸಿದರು. ಬೇರೆ ಭಾಗಗಳ ಸಭಾಸದರಿಂದಲೂ ಸಹಾನುಭೂತಿ ಗಳಿಸಿದರು. ೧೯೧೨ ಏಪ್ರಿಲ್ ೨೬ರಂದು ಕರ್ನಾಟಕದ ಜನತೆಗೆ ಮತ್ತೊಂದು ವಿನಂತಿ ಪತ್ರ ಪ್ರಕಟಿಸಿ ನಾಲ್ಕೂ ಜಿಲ್ಲೆಯ ಪ್ರತಿನಿಧಿಗಳ ಒಂದು ಸಂಘ ಮಾಡಿದರು. ಅದರಲ್ಲಿ ಎಲ್ಲ ಭಾಗದ ಎಲ್ಲ ಜಾತಿಯ ಜನರನ್ನು ಸೇರಿಸಿದರು. ಒಂಭತ್ತು ಜನರ ಸಂಘಟನೆಯಲ್ಲಿ ರೊದ್ದರಾಯರು, ಬೆಳವಿ ದತ್ತಾತ್ರೇಯ ರಾಯರು, ಕೆಂಭಾವಿ ರಾಘವೇಂದ್ರರಾವ್, ಪಂಡಿತ ಪುಂಡಲೀಕರಾವ್, ಅಚ್ಯುತ ಭಾಸ್ಕರ ದೇಸಾಯಿ, ರಾಘವೇಂದ್ರ ರಾಮಚಂದ್ರ ಗಂಗೊಳ್ಳಿ, ಶಾಂತವೀರಪ್ಪ ಮೆಣಸಿನಕಾಯಿ, ಇಬ್ರಾಹಿಮಖಾನ ಪಠಾಣ ಮತ್ತು ಫಕಿರಪ್ಪಾ ಗುರುಬಸಪ್ಪಾ ಹಳಕಟ್ಟಿ ಅವರುಗಳು ಇದ್ದರು. ನಿಧಾನವಾಗಿ ಹಣ ಸಂಗ್ರಹವಾಗತೊಡಗಿತು. ಲಿಂಗಾಯಿತ ಸಮಾಜದ ವತಿಯಿಂದ ಒಂದು ಲಕ್ಷ ರುಪಾಯಿ ಸಂಗ್ರಹಿಸಿ ಕೊಡುವುದಾಗಿ ರಾ.ಬ. ಅರಟಾಳ ರುದ್ರಗೌಡರು ಸರಕಾರಕ್ಕೆ ತಿಳಿಸಿದರು.

ಅಂತು - ಸುದೀರ್ಘ -ಪರಿಶ್ರಮದ ಅನಂತರ ೧೯೧೭ರ ಜೂನ್ ತಿಂಗಳ ೩೦ನೇ ತಾರೀಖು, ಬುಧವಾರ ಸಾಯಂಕಾಲ ೫ ಗಂಟೆಗೆ ಟ್ರೇನಿಂಗ್ ಕಾಲೇಜಿನ ಜನರಲ್ ಹಾಲಿನಲ್ಲಿ ಕರ್ನಾಟಕ ಕಾಲೇಜಿನ ಪ್ರಾರಂಭೋತ್ಸವದ ಅಪೂರ್ವ ಸಮಾರಂಭ ಬಹಳ ಉತ್ಸಾಹ-ಉಲ್ಲಾಸದಿಂದ ಜರುಗಿತು. ಸುಮಾರು ೪ ಸಾವಿರದಷ್ಟು ಜನ ಕೂಡಿದ್ದರೆಂದೂ, ಬಹುತೇಕ ಜನರಿಗೆ ಕೂಡಲಿಕ್ಕೆ ಸ್ಥಳವೂ ದೊರೆಯಲಿಲ್ಲ! ಕರ್ನಾಟಕ ಕಾಲೇಜನ್ನು ಪ್ರಾರಂಭಿಸಲು ಎಲ್ಲ ವರ್ಗದ ಜನರು ಉದಾರ ದೇಣಿಗೆ ನೀಡಿದ್ದು ವಿಶೇಷವಾಗಿದೆ. ಅದರಲ್ಲಿ ಮಾಧ್ವರ ಶ್ರೀ ಉತ್ತರಾದಿಮಠ ಮತ್ತು ಚಿತ್ರದುರ್ಗದ ಶ್ರೀಮನ್ಮಹಾರಾಜ ಮುರುಘ್ ರಾಜೇಂದ್ರ ಜಗದ್ಗುರು ಜಯದೇವ ಮಹಾಸ್ವಾಮಿಗಳು ಕೊಟ್ಟಿದ್ದು ಗಮನಾರ್ಹವಾಗಿದೆ.

ಅಂದಿನ ದಿನಗಳಲ್ಲಿ ಕರ್ನಾಟಕ ಪಿತಾಮಹ ಎನಿಸಿದ ರೊದ್ದ ಶ್ರೀನಿವಾಸರಾಯರು ದಿನಾಂಕ ೪-೮-೧೯೩೯ರಂದು ೮೦ನೆಯ ವಯಸ್ಸಿನಲ್ಲಿ ತಮ್ಮ ಪಾಲಿನ ಕೆಲಸ ಮುಗಿಸಿ ತೀರಿಕೊಂಡರು.

✤ ✤ ✤ ✤

ಅಧ್ಯಾಯ -೧೭

• ಕನ್ನಡಿಗರಲ್ಲಿ ಸ್ವಾಭಿಮಾನ ಜಾಗ್ರತೆ

ಕಳೆದ ಶತಮಾನದ ಮೊದಲ ದಶಕವು ಅಖಂಡ ಕರ್ನಾಟಕದ ಹೆಜ್ಜೆಗಳಲ್ಲಿ ದಿಟ್ಟ ಹೆಜ್ಜೆಗಳು. ವಿಶೇಷವಾಗಿ ಎರಡು ಅತ್ಯಂತ ಮಹತ್ವದ ಘಟನೆಗಳು ನಡೆದವು.ಎರಡೂ ಘಟನೆಗಳ ಕಾರಣಕರ್ತರು ಒಬ್ಬರೆ ಎಂಬುದು ಸೋಜಿಗದ ವಿಷಯ. ಆದರಲ್ಲಿಯ ಒಂದು ಘಟನೆ ಎಂದರೆ ೧೯೦೫ರ ಮೇ ತಿಂಗಳ ರಜೆಯಲ್ಲಿ ಆಲೂರು ವೆಂಕಟರಾಯರು (೧೮೮೦-೧೯೬೪) ಮಿತ್ರರೊಂದಿಗೆ ಆನೆಗೊಂದಿಯ ಪ್ರವಾಸಕ್ಕೆ ಹೋಗಿದ್ದು. ಎಷ್ಟೋ ಜನ ಆ ಮೊದಲು ಪ್ರವಾಸಕ್ಕೆ ಹೋಗಿರಬಹುದು. ಆದರೆ ಆಲೂರು ವೆಂಟಕರಾಯರ 'ಹಾಳು ಹಂಪಿ'ಯ ಅವಶೇಷಗಳ ದರ್ಶನವು ಕನ್ನಡ ಬಲ್ಲ ಅಂದಿನ ಎಲ್ಲರನ್ನು ಬಡಿದೆಬ್ಬಿಸಲು ಕಾರಣವಾಯಿತು.

''ನಮ್ಮ ವಿಜಯನಗರವು ಅಲ್ಲಿ ಪ್ರತ್ಯಕ್ಷವಾಗಿಯೂ ವಿಸ್ತಾರವಾಗಿಯೂ ನನ್ನ ಮುಂದೆ ಬಿದ್ದಿದೆ. ಆ ದಿವಸದ ದರ್ಶನವು ನನ್ನ ಮನನದಲ್ಲಿ ವಿದ್ಯುತ್ತಿನ ಸಂಚಾರ ಮೂಡಿಸಿತು. ಚಲನಚಿತ್ರ ಪಟದಲ್ಲಿ ವಿದ್ಯುದ್ದೀಪದ ಬಲದಿಂದ ಮೂರ್ತಿಗಳು ಮೂಡುವಂತೆ ನನ್ನ ಹೃದಯದಲ್ಲಿ ಕರ್ನಾಟಕ ದೇವಿಯ ಸುಂದರ ಮೂರ್ತಿಯು ಒಡಮೂಡ ಹತ್ತಿತು. ಆ ದರ್ಶನವು ನನ್ನ ತಲೆಯಲ್ಲಿ ನಾನಾ ವಿಧದ ತರಂಗಗಳಿಗೆ ಇಂಬುಗೊಟ್ಟಿತು. ಹೃದಯ ಸಮುದ್ರ ಅಲ್ಲೋಲ ಕಲ್ಲೋಲವಾಯಿತು. ಆ ದಿವಸವು ನನ್ನ ಜೀವನಕ್ರಮದಲ್ಲಿ ಕ್ರಾಂತಿಯನ್ನು ಮಾಡಲಿಕ್ಕೆ ಕಾರಣವಾಯಿತು'' ಎಂದು ಆಲೂರರೇ ಹೇಳಿಕೊಂಡಿದ್ದಾರೆ. ಕರ್ನಾಟಕದ ಇತಿಹಾಸ, ಸಾಹಿತ್ಯಗಳ ವ್ಯಾಸಂಗವನ್ನು ಅವರು ಆರಂಭಿಸಿದ್ದು ಅದೇ ಸಮಯದಲ್ಲಿ. ಕನ್ನಡ ಪುಸ್ತಕಗಳನ್ನು ಓದಬೇಕೆಂಬ ಉದ್ದೇಶದಿಂದ ಅವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಪ್ರವೇಶಿಸಿದರು. 'ಕನ್ನಡ ಗುಡಿ' ಇದ್ದಿತು. ಆದರೆ ಆ ಗುಡಿಗೆ ಒಬ್ಬ ಪುರೋಹಿತನ ಅಗತ್ಯವನ್ನು ಅವರು ಮನಗಂಡರು. ತಾವೆ ಅದರ ಕಾರ್ಯಭಾರವನ್ನು ಹೊತ್ತುಕೊಂಡರು. 'ವಾಗ್ಭೂಷಣ'ದ ಸಂಪಾದಕತ್ವವನ್ನು ವಹಿಸಿ, ಅದಕ್ಕೆ ಹೊಸ ರೂಪವನ್ನು ಕೊಟ್ಟರು. ಅಲ್ಲಿಯ ಗ್ರಂಥ ಭಾಂಡಾರದಲ್ಲಿಯ ಧೂಳನ್ನು ಝಾಡಿಸಿದಾಗ ಕನ್ನಡ ಗ್ರಂಥಗಳ ದುಸ್ಥಿತಿಯ ಅರಿವಾಯಿತು.

ಕನ್ನಡದಲ್ಲಿಯ ಈ ಗ್ರಂಥ ದಾರಿದ್ರ್ಯಕ್ಕೆ ಹಲವಾರು ಕಾರಣಗಳಿದ್ದವು. ಇಲ್ಲಿಯ ವಿದ್ಯಾಭ್ಯಾಸ ,ಉಪಾಧ್ಯಾಯರ ಮೇಲಿನ ಮರಾಠಿಯ ಪ್ರಭಾವ, ಗ್ರಂಥ ರಚನೆಯ ಮಹತ್ವವನ್ನು ತಿಳಿಯದ ಲೇಖಕರು. ಅಂಥವರಿಗೂ ಇರದಿದ್ದ ಉತ್ತೇಜನ. ಈ ಸಮಸ್ಯೆ ಇನ್ನೂ ಆಳವಾದದ್ದೆಂದು ಆಲೂರ ವೆಂಕಟರಾಯರು ಅರಿತರು. ಅಂದಿನ

ಪರಿಸ್ಥಿತಿಯ ನಿಜವಾದ ಅರಿವು ಸಿಗಬೇಕೆಂದರೆ ಮುಂದೆ ೧೯೧೪ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಬಿಜಾಪುರದ 'ಕರ್ನಾಟಕ ವೈಭವ' ಪತ್ರಿಕೆಯ ೧-೯-೧೯೧೪ರ ಸಂಚಿಕೆಯ ಸುದೀರ್ಘ ಸಂಪಾದಕೀಯವನ್ನು ಓದಬೇಕು. ಅದರಲ್ಲಿಯ ಕೆಲವು ಸಾಲುಗಳು ಹೀಗಿವೆ.

"... ಶುದ್ಧವಾದ ಕ್ರಮಿಕ ಪುಸ್ತಕಗಳಿದ್ದಿಲ್ಲ. ಮಿಶನರಿ ಜನರು ಪ್ರಸಿದ್ಧ ಮಾಡಿದ 'ಶಾಲಾ ವ್ಯಾಕರಣವೆ' ವ್ಯಾಕರಣವು. ಶಾಲೆಯ ಗುರುಗಳು ಅಂಕಗಣಿತವನ್ನು ಕಲಿಸುವಾಗ 'ಏಕೆ ದ್ವಿತೀಯಾಂಶ ಗುಣಿಲೆ ತೀನ ಚುತರ್ಥಾಂಶ' ಎಂದು ಕಲಿಸುತ್ತಿದ್ದರು.... ಎರಡನೆಯ ಪುಸ್ತಕದ ಮೊದಲನೆಯ ಪಾಠದಲ್ಲಿಯ ಷಟ್ಪದಿಯ ಸೊಬಗು ನೋಡಿರಿ !

'ಬಾಲಕರೆ ನಿಮ್ಮೊದಲ ಪುಸ್ತಕ
ಸಾಲ್ಯೋಳೋದಿದಿರಲ್ಲವರದರೊಳು !!'

ಆಹಾಹಾ ಕನ್ನಡವೆ, ನಿಮ್ಮ + ಮೊದಲು ಇವುಗಳ ಸಂಧಿ 'ನಿಮ್ಮೊದಲ ಸಾಲೆ + ಒಳ್ - ಸಾಲ್ಯೊಳ್...

.... ಹೀಗೆ ನಮ್ಮ ಭಾಷೆಯು ದುರ್ದೆಸೆಯಿಲ್ಲಿರುವಾಗ ಅದರ ಉದ್ಧರಣಾರ್ಥವಾಗಿ ವಿದ್ಯಾವರ್ಧಕ ಸಂಘದಂಥ ಸಂಘವು ಅವಶ್ಯವಾಗಿ ಬೇಕಾಗಿತ್ತು." ಅಭಿಮಾನವು ಹೆಚ್ಚಾಯಿತು ಎಂಬುದನ್ನೂ ಒಪ್ಪಿದ್ದಾರೆ. ಆದರೆ ಮುಂದೆ ಅದಕ್ಕೆ ಯಾವ ಪಾಪಿಯ ದೃಷ್ಟಿಯಾಯಿತೋ ಆಯಿತು !' ಎಂದಿದ್ದಾರೆ. ಆ ದೃಷ್ಟಿ ದೋಷವನ್ನು ದೂರ ಮಾಡಲೋ ಎಂಬಂತೆ ವೆಂಕಟರಾಯರು ಮುಂದಿನ ಹೆಜ್ಜೆಗಳನ್ನು ಇಟ್ಟರು.

ಮುಂಬಯಿ ಕರ್ನಾಟಕ , ಮೈಸೂರು, ಮದ್ರಾಸ ಮತ್ತು ಹೈದರಾಬಾದ ಕರ್ನಾಟಕಗಳಲ್ಲಿಯ ಕನ್ನಡ ಭಾಷೆಯಲ್ಲಿ ಏಕರೂಪತೆ ಇಲ್ಲದಿರುವುದು ಕನ್ನಡ ಗ್ರಂಥ ಪ್ರಚಾರಕ್ಕೆ ಮತ್ತು ಆ ಮೂಲಕ ಕನ್ನಡಿಗರನ್ನು ಒಂದಗೂಡಿಸುವಲ್ಲಿ ದೊಡ್ಡ ಅತಂಕವಾಗಿದೆ ಎಂದು ಅವರು ಭಾವಿಸಿದರು. ಈ ಭಾಷಾ ಭೇದವನ್ನು ಸಾಧ್ಯವಾದಷ್ಟು ಮಟ್ಟಿಗೆ ಅಳಿಸಿ ಏಕರೂಪತೆ ಉಂಟು ಮಾಡುವುದು ಮೊದಲ ಕೆಲಸವೆಂದು ತಿಳಿದರು.

೧೯೦೭ರ ಜೂನ್ ೨ ಮತ್ತು ೩ನೆಯ ದಿನಾಂಕಗಳಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಸಂಘಟಿಸಿದರು. ಅದು ಸಂಘದ ವಾರ್ಷಿಕ ಅಧಿವೇಶನದ ಅಂಗವೂ ಆಗಿತ್ತು. ಕರ್ನಾಟಕದ ವಿವಿಧ ಭಾಗಗಳಿಂದ ಗ್ರಂಥಕರ್ತರು, ಶಿಕ್ಷಕರು, ವಿದ್ಯಾಧಿಕಾರಿಗಳು ಸೇರಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರು ಕರ್ನಾಟಕದ ವಿದ್ವಾಂಸರಾದ ಎಸ್. ಜಿ. ನರಸಿಂಹಾಚಾರ್ಯರು ವಹಿಸಿದ್ದರು. ಸಮ್ಮೇಳನದಲ್ಲಿ ಸ್ವೀಕರಿಸಿದ ಗೊತ್ತುವಳಿಗಳಲ್ಲಿ

೧. ಕನ್ನಡ ಗ್ರಂಥಗಳಲ್ಲಿ ಉಪಯೋಗಿಸುವ ಭಾಷೆಯಲ್ಲಿ ಏಕರೂಪತೆಯನ್ನು ಉಂಟುಮಾಡುವುದು

೨. ಅಕ್ಷರ ಸಂಯೋಜನೆ, ಶಬ್ದರೂಪ, ವಾಕ್ಯರಚನೆ, ಇವೆಲ್ಲಾ ವ್ಯಾಕರಣ ಶುದ್ಧವಾಗಿಯೂ, ಕೂಡಿದ ಮಟ್ಟಿಗೆ ಏಕರೂಪವಾಗಿಯೂ ಇರತಕ್ಕದ್ದು. ಹೀಗೆ ಎರಡು ನಿರ್ಣಗಳನ್ನು ಸ್ವೀಕರಿಸಲಾಯಿತು. ಇಂದಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಬೀಜಾಂಕುರವಾದದ್ದು ಇಲ್ಲಿ. ಮುಂದಿನ ವರುಷ ಅದಕ್ಕೂ ಶತಮಾನದ ಸಂಭ್ರಮ !

ಮತ್ತೆ ಮರು ವರುಷ ಎರಡನೆಯ ಸಮ್ಮೇಳನವೂ ಧಾರವಾಡದಲ್ಲಿ ಸಂಘದ ಆಶ್ರಯದಲ್ಲಿಯೇ ಸೇರಿತ್ತು. ವರುಷ - ವರುಷವೂ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಇಂಥ ಸಮ್ಮೆಳನಗಳನ್ನು ನಡೆಸಿ, ಭಾಷೆಯ ಏಕರೂಪತೆ ಮತ್ತು ಬೆಳವಣಿಗೆಗೆ ಮಾರ್ಗದರ್ಶಕವಾಗಬೇಕೆಂದು ಅವರು ಆಪೇಕ್ಷಿಸಿದ್ದರು. ಮೂರನೆಯ ಸಮ್ಮೇಳನವು ಬೆಂಗಳೂರಲ್ಲಿ ನಡೆಯಬೇಕೆಂದು ಅವರು ಪ್ರಯತ್ನಿಸಿದರು. ಅಲ್ಲಿಯ ಧುರೀಣರಿಗೆ ಪತ್ರ ಬರೆದರು. ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯ ನಿರ್ದೇಶಕರು ಧಾರವಾಡಕ್ಕೆ ಬಂದಾಗ ಅವರನ್ನು ಸಂಘಕ್ಕೆ ಕರೆದು ಸತ್ಕರಿಸಿದರು. ಅನಂತರ ಹತ್ತಾರು ಸಲ ಸ್ವಂತ ಖರ್ಚಿನಲ್ಲಿ ಬೆಂಗಳೂರಿಗೆ ಹೋಗಿ ಬಂದರು. ಆದರೆ ಮೂರನೆಯ ಸಮ್ಮೇಳನ ರೂಪುಗೊಳ್ಳಲು ಆರು ವರುಷಗಳೇ ಹಿಡಿದವು. ಕೊನೆಗೆ ಕರ್ಪೂರ ಶ್ರೀನಿವಾಸರಾಯರು ಹಾಗೂ ಎಚ್.ವಿ. ನಂಜುಂಡಯ್ಯ ಅವರ ಸಹಾಯದಿಂದ ಅಂದಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿನ ಬಲದಿಂದ ವೆಂಕಟರಾಯರ ಪ್ರಯತ್ನ ಯಶಸ್ವಿಯಾಯಿತು. ಕನ್ನಡ ಗ್ರಂಥಕರ್ತರ ಮೂರನೆಯ ಸಮ್ಮೇಳನವು ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ರೂಪದಲ್ಲಿ ನಡೆದು ೧೯೧೫ರಲ್ಲಿ ಇಂದಿನ 'ಸಾಹಿತ್ಯ ಪರಿಷತ್ತಿನ' ಸ್ಥಾಪನೆಗೆ ಕಾರಣವಾಯಿತು. ಬಿ. ಕೃಷ್ಣಪ್ಪನವರು ಪ್ರಥಮ ಕಾರ್ಯದರ್ಶಿ. ಆದರೆ ಈ ಸಮ್ಮೇಳನದ ಮುಖ್ಯ ಕಾರ್ಯವನ್ನೆಲ್ಲ ಆಲೂರು ವೆಂಕಟರಾಯರು ಧಾರವಾಡದಿಂದಲೇ ನಡೆಸಿದರು. ಅದುವೇ ಕರ್ನಾಟಕ ವಿದ್ಯಾವರ್ಧಕ ಸಂಘದ ಬೆಳ್ಳಿ ಹಬ್ಬದ ವರುಷವಾಗಿತ್ತು !

ಆನೆಗೊಂದಿಯ ಪ್ರವಾಸದ ಫಲವಾಗಿ ಈ ಮೊದಲು 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ವಿದ್ಯಾರಣ್ಯರು' ಎಂಬ ಚಿಕ್ಕ ಪುಸ್ತಕವನ್ನು ಬರೆದು ಪ್ರಕಟಿಸಿದ್ದರು. ವಿಜಯನಗರ ಸಾ

ಮ್ರಾಜ್ಯದ ಸ್ಥಾಪನೆಯ ಕಾಲದಲ್ಲಿ ಪ್ರಜೆಗಳಲ್ಲಿ ಹುಟ್ಟಿದ್ದ ಭಯ, ನಿರಾಶೆ, ನಿರ್ವೀರ್ಯತೆಗೆ ವಿದ್ಯಾರಣ್ಯರ ತಪಸ್ಸು ಸಂಜೀವಿನಿಯನ್ನು ನೀಡಿತ್ತು. ಭುವನೇಶ್ವರಿಯ ಅನುಗ್ರಹಕ್ಕೆ ಪಾತ್ರರಾಗಿ ಕರ್ನಾಟಕ ಸಾಮ್ರಾಜ್ಯ ನಿರ್ಮಾಣಕ್ಕಾಗಿ ಮೂರುಮುಕ್ಕಾಲು ಗಳಿಗೆ ಕಾಲ ಬಂಗಾರದ ಮಳೆ ಸುರಿಸಿದ ಮಹಾಮಹಿಮರವರು! ಅವರ

ಗುಣಾತಿಶಯಗಳನ್ನು ವೆಂಕಟರಾಯರು ಜನಸಾಮಾನ್ಯರಿಗೆ ಈ ಪುಸ್ತಕದಲ್ಲಿ ಬರೆದು ಪ್ರಚುರಪಡಿಸಿದರು. 'ಕರ್ನಾಟಕತ್ವದ ಅಭಿಮಾನ ಹುಟ್ಟಿಸುವುದಕ್ಕೆ ನಾನು ಬರೆದ ಮೊಟ್ಟ ಮೊದಲಿನ ಪುಸ್ತಕ ಈ ಶ್ರೀ ವಿದ್ಯಾರಣ್ಯ ಚರಿತ್ರೆ' ಎಂದು ಅವರೆ ಹೇಳಿಕೊಂಡಿದ್ದಾರೆ. ಅವರ ಈ ಪುಸ್ತಕದ ಪ್ರಭಾವದಿಂದಲೇ ಶಾಂತಕವಿಗಳು 'ವಿದ್ಯಾರಣ್ಯ ವಿಜಯ' ಕೀರ್ತನೆಯನ್ನು ಬರೆದು ಮನೆ -ಮನೆಗೆ ಮುಟ್ಟಿಸಿದರು.

ಏಳು ಸಾಯಣ ಕಟ್ಟು ಗ್ರಂಥವ
ನೇಳು ಪಂಪಾ ಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ
ಏಳು ಈ ಕ್ಷಣ ಮಾತ್ರಕೆ ।

ಎಂಬುದು ಆಲೂರರ ಕುರಿತೇ - ಹೇಳಿದಂತಿತ್ತು. ಕಷ್ಟಪಟ್ಟು ಎಲ್.ಎಲ್.ಬಿ. ಪಾಸಾಗಿ ವಕೀಲಿ ಮಾಡುತ್ತಿದ್ದ ಆಲೂರರು ಅಖಂಡ ಕರ್ನಾಟಕ ಸ್ಥಾಪನೆಗೆ ಕಂಕಣಬದ್ಧರಾದರು.

ಕಷ್ಟಪಟ್ಟು ಕಲಿತ ಕಾನೂನು ಪುಸ್ತಕಗಳನ್ನು ಗಂಟು ಕಟ್ಟಿ ಇಟ್ಟರು. ಹಿಂದೊಮ್ಮೆ ವೇದಾಂತದ ಪುಸ್ತಕಗಳನ್ನು ಗಂಟು ಕಟ್ಟಿ ಇಟ್ಟು ಹಂಪಿಗೆ ಬಂದ ವಿದ್ಯಾರಣ್ಯರಂತೆ ಆಲೂರು ವೆಂಕಟರಾಯರು ಹೊಸ ವಿಶಾಲ ವಿಜಯನಗರ ಕರ್ನಾಟಕ ಸಾಮ್ರಾಜ್ಯ ವನ್ನು ಕಟ್ಟಲು ಕಂಕಣಬದ್ಧರಾದರು. ಹೊನ್ನಿನ ಮಳೆಗರೆದು ಹಕ್ಕ -ಬುಕ್ಕರನ್ನು ಸಾಮ್ರಾಜ್ಯ ಸ್ಥಾಪನೆಗೆ ಅಣಿಗೊಳಿಸಿದಂತೆ ಆಲೂರು ವೆಂಕಟರಾಯರು 'ಕರ್ನಾಟಕ ಗತ ವೈಭವ' ವನ್ನು ಬರೆದು ಪ್ರಕಟಿಸಿ, ಕನ್ನಡಿಗರನ್ನು ಒಂದು ಗೂಡಿಸಿ ಅಖಂಡ ಕರ್ನಾಟಕದ ಸ್ಥಾಪನೆಗೆ ಸಿದ್ಧಗೊಳಿಸಿದರು.

ಕಾವ್ಯ, ಸಾಹಿತ್ಯ, ಇತಿಹಾಸ, ರಾಜಕಾರಣ, ಉಜ್ವಲ ದೇಶಾಭಿಮಾನಗಳಿಂದ ಕೂಡಿದ ವೀರಶೈಲಿಯಲ್ಲಿ ಬರೆದ ಗ್ರಂಥವು ಕನ್ನಡಿಗರ ಕೈಪಿಡಿಯಾಯಿತು. ಆನಂತರದ ದಿನಗಳಲ್ಲಿ ಕನ್ನಡ ಮಾತನಾಡುವ ಹರಿದು ಹಂಚಿ ಹೋದ ಪ್ರದೇಶಗಳಲ್ಲೆಲ್ಲ ಮೈಸೂರು ಸಂಸ್ಥಾನವನ್ನೊಳಗೊಂಡು ಎಲ್ಲ ಕನ್ನಡ ಪ್ರದೇಶಗಳಲ್ಲಿ ನಡೆದ ವಿವಿಧ ಚಟುವಟಿಕೆಗಳಿಗೆ, ಜಾಗೃತಿಗೆ, ಸಾಹಿತ್ಯ, ಕಲೆಗಳ ಸೇವೆಗೆ 'ಕರ್ನಾಟಕ ಗತವೈಭವ' ಗ್ರಂಥ ಸ್ಪೂರ್ತಿಬಿಂದುವಾಯಿತು.

೧೯೩೦ ಅಕ್ಟೋಬರದಲ್ಲಿ ಮೈಸೂರಿನಲ್ಲಿ ಸೇರಿದ ೧೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಆಲೂರು ವೆಂಕಟರಾಯರು ನಿಯೋಜಿತರಾದಾಗ ವರಕವಿ ದ.ರಾ. ಬೇಂದ್ರೆ ಅವರು ಆಲೂರರ ಬಗ್ಗೆ ಒಂದು ಕಿರುಪರಿಚಯ ಲೇಖನವನ್ನು ಬರೆದು ಅಂದಿನ 'ಜಯಕರ್ನಾಟಕ' ಪತ್ರಿಕೆಯ ೮ನೆಯ ಸಂಪುಟದ ೧೨ನೆಯ ಸಂಚಿಕೆಯಲ್ಲಿ ಪ್ರಕಟಿಸಿದ್ದರು. ಆಗಿನ್ನೂ ಕರ್ನಾಟಕ ರೂಪುಗೊಂಡಿರಲಿಲ್ಲ. ಮುಂದೆ ೨೩ ವರುಷ ಅಂದರೆ ಕಾಲು ಶತಮಾನದ ಆನಂತರ

'ವಿಶಾಲ ಮೈಸೂರು ರಾಜ್ಯ' ರೂಪುಗೊಂಡಿತು. 'ಕರ್ನಾಟಕ' ಎನಿಸಿಕೊಳ್ಳಲು ಮತ್ತೆ ೧೭ ವರುಷ. ೪೨ ವರುಷಗಳ ಮೊದಲು ಆಲೂರರ ಬಗ್ಗೆ ಬೇಂದ್ರೆಯವರ ಲೇಖನದ ಕೆಲವು ಸಾಲುಗಳು ಅವರ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ.

''ಕರ್ನಾಟಕದ ಹಿರಿಮೆಯಲ್ಲಿ ಆಲೂರವರ ಹೆಸರು ಅದ್ವಿತೀಯವಾಗಿದೆ. ಕಣ್ಣಲ್ಲಿ ಆಕೃತಿ ವಿಶೇಷವಾಗಲಿ, ಮನಸ್ಸಿನಲ್ಲಿ ತುಂಬುವ ಮಾತುಗಾರಿಕೆಯಾಗಲಿ ಇವರದಲ್ಲ. ರಾಜಕೀಯ ರಣರಂಗದಲ್ಲಿಯೂ ಇತಿಹಾಸ ಕ್ಷೇತ್ರದಲ್ಲಿಯೂ ಸಾಹಿತ್ಯ ಲೋಕದಲ್ಲಿಯೂ ಇವರಿಗೂ ಮಿಗಿಲಾದ ಕೆಲಸ ಮಾಡುವವರಿದ್ದಾರೆ. ಕೈಗೊಂಡ ಕಾರ್ಯಕ್ಕೆ ಧನವನ್ನೂ ಕಾಲವನ್ನು ಇವರಿಗಿಂತ ಹೆಚ್ಚು ಮಾಡಿದವರು ಇಲ್ಲವೆಂದಲ್ಲ. ತಮ್ಮ ಆಚಾರ ಬಲದಿಂದಲೂ, ವಿಚಾರದ ತೇಜದಿಂದಲೂ ಇವರಿಗಿಂತಲೂ ಆದರವನ್ನುಂಟು ಮಾಡುವವರೂ, ಜಾತಿಯ ಮೂಲಕ ದೊಡ್ಡ ಮುಂದಾಳೆನಿ ಕೊಂಡವರೂ, ಪದವಿಯ ಮೂಲಕ ಮಹಾ ಗೌರವಸ್ಥರೆನಿಸಿಕೊಂಡವರೂ ಉಂಟು. ಆಲೂರರಲ್ಲಿ ಸಂಘಟನೆಯ ಶಕ್ತಿಯಾಗಲಿ ಚಳುವಳಿಯ ವೃತ್ತಿಯಾಗಲಿ, ಜನಸಂಮೋಹ ನಾಯಕ ಸ್ವಭಾವವಾಗಲಿ ಯಾವೂದೂ ಇಲ್ಲ. ಏಕಮುಖವಾಗಿಯೂ, ಬಹುಮುಖವಾಗಿಯೂ ತಾತ್ಕಾಲಿಕ ತೀವ್ರಾವೇಶದಿಂದಲೂ ಏಕ ನಿಷ್ಠೆಯಿಂದಲೂ ಕಾರ್ಯ ಮಾಡುವ ಹಲ ಕೆಲವರು ಇವರಿಗಿಂತಲೂ ಹೆಸರಾಗಿದ್ದಾರೆ. ಆದರೆ ಬಹುಮುಖವಾಗಿಯೂ, ಏಕನಿಷ್ಠೆಯಿಂದಲೂ, ಅನನ್ಯ ಬುದ್ಧಿಯಿಂದಲೂ, ಸತತ ಅನುಸಂಧಾನದಿಂದಲೂ ಕರ್ನಾಟಕದ ಸಲುವಾಗಿ ವಿಚಾರ ಮಾಡುವವರೂ ತದನುಸಾರವಾಗಿಯೆ ಆಚರಿಸಲು ಪ್ರಯತ್ನಿಸುವವರೂ ಹಿರಿಯರಾದ ಕನ್ನಡಿಗರಲ್ಲಿ ಇನ್ನೂ ಇವರೊಬ್ಬರೇ ! ಅದೇ ಇವರ ತಪಸ್ಸು. ಇವರ ಅದ್ವಿತೀಯವಾದ ಹೆಸರು ಅದರ ಫಲವು.''

ಇದು ಆಲೂರರ ವಿಶೇಷವಾಗಿತ್ತು . ಮುಕ್ಕಾಲು ಶತಮಾನದ ಹಿಂದೆ ಬೇಂದ್ರೆಯವರು ಹೇಳಿದ ಮಾತು ಇಂದಿಗೂ ಅನ್ವಯವಾಗುತ್ತದೆ. ಅನುಸಂಧಾನಪೂರ್ವಕವಾಗಿ ಕನ್ನಡ ನಾಡಿನ ಬಗ್ಗೆ ಕಳಕಳಿಯಿಂದ ಚಿಂತಿಸುವವರಲ್ಲಿ ಈಗಲೂ ಆಲೂರರ ಹೆಸರೊಂದನ್ನೆ ಹೇಳಬೇಕಾದೀತು.

ಅಂತೆಯೇ ಅವರಿಗೆ 'ಕರ್ನಾಟಕದ ಪ್ರಾಣೋಪಾಸಕರು' ಎಂದರು. ಅವರು ಕರ್ನಾಟಕದ ಪ್ರಾಣೋಪಾಸನೆಯ ಸಂಕಲ್ಪವನ್ನು ಮಾಡಿದ ಮೇಲೆ ಅವರಿಗೆ ತನ್ನದೆನ್ನುವ ಕೆಲಸಗಳೇ ಇರಲಿಲ್ಲ. ಜೀವನವಿಡೀ ಕರ್ನಾಟಕದ ಸರ್ವಾಂಗ ಪೋಷಣೆಗೆ ಬೇಕಾಗುವ ಎಲ್ಲ ಮಾತೂ, ಎಲ್ಲ ಕೆಲಸಗಳೂ ಅವರಿಗೆ ಬೇಕಾದವುಗಳೇ ಆಗಿದ್ದವು. ಎಲ್ಲವನ್ನೂ ಅಂದು ಅವರು ಮಾಡಿ - ಮಾಡಿಸಿದರು. ಆಡಿ- ಆಡಿಸಿದರು. ಅವರ ಈ ವೃತ್ತಿಯನ್ನು ನೋಡಿದ ಕಬ್ಬೂರ ಮಧ್ವರಾಯರು ಅವರಿಗೆ 'ಕರ್ನಾಟಕದ ಕುಲಪುರೋಹಿತರು' ಎಂದು ಪರಿಹಾಸದಲ್ಲಿ ಆಡಿದ ಮಾತು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ಪರಮಾರ್ಥದ ದಾರಿಯೇ ಆಯಿತು. ಪುರೋಹಿತರಂತೆ ಆಲೂರರು

ಕನ್ನಡ - ಕರ್ನಾಟಕದ ಕೆಲಸಕ್ಕೆ ಎಲ್ಲ ಕನ್ನಡಿಗರಿಂದ ಸಂಕಲ್ಪ ಮಾಡಿಸಿ, ಆ ಕೆಲಸವನ್ನು ಬೇರೆ -ಬೇರೆ ಯಜಮಾನರಿಗೆ ವಹಿಸಿಕೊಟ್ಟು ಬಿಡುತ್ತಿದ್ದರು. ಅವರಿಂದ ಆ ಕೆಲಸಗಳನ್ನು ಮಾಡಿಸುತ್ತಿದ್ದರು.

'ಇತಿಹಾಸ ಮತ್ತು ಸಾಹಿತ್ಯ ಇವುಗಳು ಜೀವನ ಮಂಡಲದ ದಕ್ಷಿಣೋತ್ತರ ಧ್ರುವಗಳು. ತ ರಾಜಕಾರಣ ಮತ್ತು ಪತ್ರಿಕೆಯನ್ನು ನಡೆಸುವುದು ಅವುಗಳ ಪ್ರಯೋಗ ಶಾಲೆಗಳು. ಈ ಪ್ರಯೋಗ ಶಾಲೆಯಲ್ಲಿ ಸಿದ್ಧಪಡಿಸಿದ ರಸಾಯನವನ್ನು ಅವರು ಕರ್ನಾಟಕೋದ್ಯಮದಲ್ಲಿ ಕಾಲಕಾಲಕ್ಕೆ ಉಪಯೋಗಿಸಿದರು. ಈ ಪಾಠವನ್ನು ಅವರು ಲೋಕಮಾನ್ಯ ಟಿಳಕರಿಂದ ಕಲಿತರು. ಯಾವುದಕ್ಕೂ ಧರ್ಮವೂ, ತತ್ವಜ್ಞಾನವೂ ಜೀವಾಳವೆಂಬುದನ್ನು ಶ್ರೀ ಅರವಿಂದ ಘೋಷರಿಂದ ತಿಳಿದುಕೊಂಡು ರಾಷ್ಟ್ರಜೀವನವನ್ನು ಯಾವಾಗಲೂ ಅವರು ತತ್ವಶಾಸ್ತ್ರದ ಪರಿಭಾಷೆಯಲ್ಲಿ ಹೇಳಿದರು. ಲೋಕಮಾನ್ಯ ಟಿಳಕರು, ಬಾಬು ಅರವಿಂದ ಘೋಷರು ಅದ್ವೈತ ಸಿದ್ಧಾಂತವನ್ನು ರಾಷ್ಟ್ರೀಯತ್ವದಲ್ಲಿ ಅನ್ವಯಿಸಿ ತೋರಿಸಿದರು. ಆದರೆ ಅವರ ಹೆಜ್ಜೆಗಳಲ್ಲಿ ನಡೆದ ಆಲೂರರಿಗೆ ಅದ್ವೈತವಾಗಿರಲಿಲ್ಲ. ದ್ವೈತವಾಗಿತ್ತು. ಭಾರತ - ಭಾರತೀಯ ಎಂಬುದು 'ಕರ್ನಾಟಕಾಂತರ್ಗತ ಭಾರತಮಾತೆ' ಯಾಗಿತ್ತು. ಅಂಥ ವ್ಯಾಪಕ ಅರ್ಥದಲ್ಲಿ ಅನ್ವಯಿಸಿ ಅವರು ಕರ್ನಾಟಕಾಂತರ್ಗತ ಭಾರತ ಮಾತೆಯನ್ನು ಪೂಜಿಸಿದರು. ಕರ್ನಾಟಕದ ಭುವನೇಶ್ವರಿ ಅಂತರ್ಗತದಲ್ಲಿ ಭಾರತ ಮಾತೆಯನ್ನು ಕಂಡರು. ಅದು ಅವರ ದೇಶಭಕ್ತಿಯ ರಾಷ್ಟ್ರಭಕ್ತಿಯ ಉಪಸಿದ್ಧಾಂತವಾಗಿತ್ತು.

ಭಾರತದಂಥ ವಿಶಾಲ ದೇಶದಲ್ಲಿ ಹಲವಾರು ಪ್ರಬುದ್ಧ ಭಾಷೆಗಳಿರುವಾಗ ರಾಷ್ಟ್ರ ಪ್ರೇಮವು ಕೂಡ ಆಯಾ ಭಾಷೆಗಳ ಮೂಲಕ ಆಯಾ ಪ್ರಾದೇಶಿಕ ಪ್ರೇಮ - ಅಭಿಮಾನಗಳ ಮೂಲಕ ಹೆಚ್ಚು ಅರ್ಥಪೂರ್ಣವಾಗಿ ಜನಮನದಲ್ಲಿ ಬೇರು ಬಿಡಬಹುದು ಎಂಬ ಮಾತನ್ನು ಶ್ರದ್ಧಾಪೂರ್ವಕವಾಗಿ ಕಂಡು ಹಿಡಿದು ಆ ರೀತಿ ನಡೆದುಕೊಳ್ಳಲು ಪ್ರಯತ್ನಿಸಿದವರಲ್ಲಿ ಆಲೂರು ವೆಂಕಟರಾಯರು ಕರ್ನಾಟಕದಲ್ಲಿ ಪ್ರಥಮರಾಗಿದ್ದರು. ಅವರು ಹೇಳುತ್ತಿದ್ದ 'ಕರ್ನಾಟಕಾಂತರ್ಗತ ಭಾರತ ಸೇವೆ' ಯ ಅರ್ಥವನ್ನು ತಿಳಿದುಕೊಳ್ಳಲು ಮೊದ ಮೊದಲು ಕಠಿಣವಾಯಿತು. ಆದರೆ ಅದು 'ತಾತ್ವಿಕ ದೃಷ್ಟಿಯಿಂದ ಮಹಾತ್ಮಾಗಾಂಧೀಜಿ ಅವರು ಹೇಳಿದ ಸ್ವದೇಶಿ ವಿಚಾರಕ್ಕೆ ಸಮಾನವಿರುವದು. ಇದೇ ಮುಂದೆ ಭಾಷಾನುಗುಣ ಪ್ರಾಂತ ರಚನೆಗೆ ದಾರಿಯನ್ನು ಹಾಕಿಕೊಟ್ಟಿತು. ಮುಂಬೈ, ಪುಣೆ, ಅಥವಾ ಬೆಳಗಾವಿಯಿಂದ ಇಂಗ್ಲಿಷ್, ಮರಾಠಿ ಭಾಷೆಯಲ್ಲಿ ಬರುವ ಹಸ್ತಪ್ರತಿಗಳು ಕರ್ನಾಟಕದಲ್ಲಿ ಕನ್ನಡದಲ್ಲಿಯೇ ಪ್ರಕಟವಾಗ ಬೇಕು. ಅದರ ಸಲುವಾಗಿ ಕಾಂಗ್ರೆಸ್ಸೇ ಆಗಲೀ, ಹೋಮರೂಲ ಚಳವಳಿಯೇ ಆಗಲಿ ಅವುಗಳ ಪ್ರಚಾರ ಕಾರ್ಯ ಕನ್ನಡದಲ್ಲಿಯೇ ನಡೆಯಬೇಕೆಂದು ವೆಂಕಟರಾಯರು ಆಯಾ ಮುಖಂಡರಿಗೆ ತಿಳಿಸಿದ್ದು ನನಗೆ ನೆನಪಿದೆ' ಎಂದಿದ್ದಾರೆ ದಿವಾಕರ ರಂಗರಾಯರು.

ಈ ಕುರಿತು ದಿವಾಕರ ರಂಗರಾಯರು 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಎಂಬ ತಮ್ಮ ಲೇಖನದಲ್ಲಿ ಮತ್ತೊಮ್ಮೆ ನೆನಪಿಸಿಕೊಳ್ಳುತ್ತಾ ''೧೯೧೪-೧೮'ರ ಹೋಮ್‌ರೂಲ್ ಚಳವಳಿ -ಇನ್ನೊಂದು ಆಂದೋಲನದ ಅಲೆಯನ್ನು ಎಬ್ಬಿಸಿ , ದಕ್ಷಿಣದಲ್ಲಿ ವಿಶೇಷತಃ ಕರ್ನಾಟಕದಲ್ಲಿ ೧೯೨೧ರ ಅಸಹಕಾರ ಚಳವಳಿಗೆ ಒಳ್ಳೆಯ ಹಿನ್ನೆಲೆ ಒದಗಿಸಿತು.... ಇದಲ್ಲದೇ ಪ್ರಾಂತೀಯತಾ ಚಳವಳಿಯು ರಾಷ್ಟ್ರೀಯತೆಗೆ ಪೋಷಕವಾಗಿ ಪ್ರಬಲವಾಯಿತು. ಹೋಮರೂಲ ಚಳವಳಿ ಇಲ್ಲಿ ಆರಂಭವಾದಾಗ ಅದನ್ನು ''ಕರ್ನಾಟಕ ಪ್ರಾಂತೀಯ ಹೋಮರೂಲ ಲೀಗ' ಎಂದು ಕರೆಯಬೇಕು ಮತ್ತು ಅದರ ಪ್ರಚಾರ ಸಾಹಿತ್ಯವೆಲ್ಲ ಕನ್ನಡದಲ್ಲಿ ಇರಬೇಕೆಂದು ಆಲೂರರು ಪಟ್ಟು ಹಿಡಿದರು. ಅವರ ಈ ನಿಲುವು ಗಣ್ಯ ಐತಿಹಾಸಿಕ ಮಹತ್ವದ್ದು. ''ಯಾವುದೇ ಒಂದು ಸಾಮೂಹಿಕ ಜನತಾ ಪ್ರಧಾನ ಚಳುವಳಿಯ ಪ್ರಚಾರವನ್ನು ಜನರ ಭಾಷೆಯಲ್ಲಿಯೇ ಮಾಡದಿದ್ದಲ್ಲಿ ಅದು ಯಶಸ್ವಿಯಾಗದು'' ಎಂದಿದ್ದಾರೆ.

ಹಗಲಿರುಳೂ ಅನ್ನ ನಿದ್ರೆ ತೊರೆದು ಕರ್ನಾಟಕದ ಉತ್ಕರ್ಷಕ್ಕಾಗಿ ಚಿಂತಿಸಿ, ಅದಕ್ಕಾಗಿ ತನುಮನಧನಗಳನ್ನರ್ಪಿಸಿ ದುಡಿದವರು ಆಲೂರು ವೆಂಕಟರಾಯರು. ಅವರ ತನು ಕನ್ನಡವಾಗಿತ್ತು. ಕನ್ನಡ ಬಿಟ್ಟು ಅವರಿಗೆ ಬೇರೆ ಗತಿ ಇರಲಿಲ್ಲ , ಮತಿ ಇರಲಿಲ್ಲ.

ಆಷಾಢ ಶುದ್ಧ ಪಂಚಮಿ , ಕ್ರಿ.ಶ. ೧೮೮೦ರ ಜುಲೈ ೧೨ರಂದು ಆಲೂರು ವೆಂಕಟರಾಯರು ಬಿಜಾಪುರದಲ್ಲಿ ಹುಟ್ಟಿದರು. ಅವರ ತಂದೆ ಭೀಮರಾಯರು 'ಲೋಕಲ್ ಫಂಡ್' ಕಾರಕೂನರಾಗಿ ಸರಕಾರೀ ನೌಕರಿಗೆ ಸೇರಿದ್ದರು. ಮುಂದಿನ ದಿನಗಳಲ್ಲಿ ತಮ್ಮ ಕಾರ್ಯ ದಕ್ಷತೆ ಮತ್ತು ಪ್ರಾಮಾಣಿಕ ಕೆಲಸದಿಂದ ಶಿರಸ್ತೇದಾರ ಅಂದರೆ ಇಂದಿನ ಡೆಪ್ಯೂಟಿ ತಹಶೀಲದಾರ ಹುದ್ದೆಗೆ ಏರಿದರು. ಕೊನೆ -ಕೊನೆಗೆ ಕೆಲವು ಸಮಯ ಅವರು ಮಾಮಲೇದಾರರಾಗಿಯೂ ಅಲ್ಲಲ್ಲಿ ಕೆಲಸ ಮಾಡಿದರು. ಅವರು ಒಳ್ಳೆಯ ಪರಿಶುದ್ಧ ನಡತೆಯವರಾಗಿದ್ದರು. ಆಚಾರ ಶೀಲರು.ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಒಲವು ಅಧಿಕವಾಗಿತ್ತು. ಅಲ್ಲಲ್ಲಿ ದೇವಸ್ಥಾನಗಳನ್ನು ಕಟ್ಟಿಸುವುದು, ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸುವುದು ಅವರ ಹವ್ಯಾಸವಾಗಿತ್ತು. ಆದಾಗ ಪ್ರಚಲಿತದಲ್ಲಿದ್ದ ಲೋಕಮಾನ್ಯ ಟಿಳಕರ 'ಕೇಸರಿ' ಪತ್ರಿಕೆ, ಧಾರ್ಮಿಕ ಗ್ರಂಥಗಳು, ಹೊಸ್ತಕಾಲದ ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳು ಭೀಮರಾಯರ ಇನ್ನಿತರ ಆಸಕ್ತಿಯ ವಿಷಯಗಳಾಗಿದ್ದವು. ಅವರ ಮನೆತನವು ಇಂದಿನ ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರಿನದು. ಅದು ಮಲಾಪಹಾರಿ ಹೊಳೆಯ ದಂಡೆಯ ಊರು.

ವೆಂಕಟರಾಯರ ಜನ್ಮಕಾಲದಲ್ಲಿ ಬಹುಶಃ ಅವರ ತಂದೆ ಬಿಜಾಪುರದಲ್ಲಿ ನೌಕರಿಯನ್ನು ಮಾಡುತ್ತಿರಬೇಕು. ವೆಂಕಟರಾಯರ ಜನ್ಮ ಬಿಜಾಪುರದಲ್ಲಾದರೂ ಅವರ ಪ್ರಾಥಮಿಕ ಶಿಕ್ಷಣವು ಪ್ರಾರಂಭವಾದದ್ದು ನವಲಗುಂದದಲ್ಲಿ. ಆಗಲೇ

ಮನೆಯಲ್ಲಿ ಸಂಸ್ಕೃತ ಪಾಠಕ್ಕೆ ಅಕ್ಷರಪೂಜೆಯಾಗಿತ್ತು. ಭೀಮರಾಯರಿಗೆ ಆಗಾಗ ಊರಿಂಧೂರಿಗೆ ವರ್ಗವಾದಂತೆ ಶಾಲೆಗಳೂ ಬೇರೆಯಾಗುತ್ತಿದ್ದವು. ಕನ್ನಡ ಎರಡು - ಮೂರು ವರ್ಗಗಳನ್ನು ಗದಗಿನ ಮೊದಲನೆಯ ನಂಬರ ಶಾಲೆಯಲ್ಲಿ ನಾಲ್ಕನೆಯ ವರ್ಗವನ್ನು ಹಾನಗಲ್ಲು - ಹೀಗೆ ಪ್ರಾಥಮಿಕ ಶಿಕ್ಷಣ ಪೂರೈಸಿ ಇಂಗ್ಲಿಷ್ ಶಾಲೆಗೆ ಸೇರುವಷ್ಟರಲ್ಲಿ ಧಾರವಾಡ ಸೇರಿದರು.

ಶಾಲೆಯಲ್ಲಿ ಅಭ್ಯಾಸಕ್ಕಿಂತ ಶಾಲೆಯ ಹೊರಗಿನ ಚಟುವಟಿಕೆಗಳಲ್ಲಿ ವೆಂಕಟರಾಯರಿಗೆ ಆಸಕ್ತಿ. ಸ್ವಭಾವತಃ ಬುದ್ಧಿವಂತರು. ವರ್ಗದಿಂದ ವರ್ಗಕ್ಕೆ ಸಾಗಿ ಹೋಗಲು ತೊಂದರೆ ಇರಲಿಲ್ಲ. ಆದರೆ ಏನಾದರೊಂದು ಹೊಸದನ್ನು ಮಾಡುವ ತವಕ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಅವರಲ್ಲಿತ್ತು. ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಗೆಳೆಯರೊಂದಿಗೆ ಸಂಸ್ಕೃತ 'ವೇಣಿ ಸಂಹಾರ' ನಾಟಕವನ್ನು ಆಡಿ ಹಿರಿಯರನ್ನ ದಂಗು ಬಡಿಸಿದ್ದರು.

ಟಿಳಕರು ಪ್ರಾರಂಭಿಸಿದ ಸಾರ್ವಜನಿಕ ಗಣೇಶ ಉತ್ಸವ ಧಾರವಾಡಕ್ಕೂ ಪ್ರವೇಶಿಸಿತ್ತು. ಬೀದಿ - ಬೀದಿಗಳಲ್ಲಿ ಗಣೇಶನನ್ನು ಕೂಡಿಸಿ ಐದು, ಏಳು, ಒಂಭತ್ತು ದಿನಗಳ ಉತ್ಸವವನ್ನು ಆಚರಿಸುತ್ತಿದ್ದರು. ಉತ್ಸವದಲ್ಲಿ ವಿವಿಧ ಮನರಂಜನೆಯ ಕಾರ್ಯಕ್ರಮುಗಳನ್ನು ನೀಡಲು ಹತ್ತಾರು ' ಗಣೇಶ ಮೇಳ'ಗಳು ವಿಶೇಷ ಪ್ರಚಾರದಲ್ಲಿದ್ದವು. ಅಲ್ಲೆಲ್ಲ ಮರಾಠಿ ಪದಗಳು, ಏಕಾಂತ ನಾಟಕಗಳಿಗೆ ಅಗ್ರಪಟ್ಟ. ವಿದ್ಯಾರ್ಥಿಯಾಗಿದ್ದ ವೆಂಕಟರಾಯರಿಗೆ ಅದು ಒಂದು ರೀತಿ ಮೊಸರಿನಲ್ಲಿ ಕಲ್ಲು ಇದ್ದಂತೆ ಅನಿಸಿತು. ಆ ದಿನಗಳಲ್ಲಿ 'ಕನ್ನಡ ಮೇಳ' ಕೂಡಿಸುವ ಸ್ಫೂರ್ತಿ ಉಂಟಾಯಿತು. ಜೊತೆಗಾರ ಸ್ನೇಹಿತ ಲಕ್ಷ್ಮಣ ಘಟಿಕಾರನಿಂದ ಕನ್ನಡದಲ್ಲಿ ಪದಗಳನ್ನು ಕಟ್ಟಿಸಿ ಹಾಡಲು ಹಚ್ಚಿದರು. ೧೫-೨೦ ಕನ್ನಡ ಪದಗಳನ್ನು ಸಂಗ್ರಹಿಸಿ 'ಗಜಾನನ ಸ್ತವನ' ಎಂಬ 'ಕನ್ನಡ ಮೇಳಾ ಪದ ಸಂಗ್ರಹ'ವನ್ನು ಧಾರವಾಡದ ರಾಜಹಂಸ ಮುದ್ರಣಾಲಯದಲ್ಲಿ ಅಚ್ಚು ಹಾಕಿಸಿ ಆಲೂರು ವೆಂಕಟರಾಯರು ಪ್ರಕಟಿಸಿದರು. ಆಗಿನ್ನೂ ಅವರು ಹೈಸ್ಕೂಲ ವಿದ್ಯಾರ್ಥಿ, ರಾಯರಾಗಿದ್ದಿಲ್ಲ. ಆಲೂರು ವೆಂಕಣ್ಣ ಎಂದು ಪರಿಚಿತ. ಬಹುಶಃ ಕನ್ನಡ ಕಾರ್ಯ ಪ್ರಾರಂಭವಾದದ್ದು ಆ ದಿನಗಳಿಂದ.

ಕ್ರಿ.ಶ. ೧೮೯೫ರ ದಿನಗಳಿರಬಹುದು. ಧಾರವಾಡದಲ್ಲಿ ಲೋಕಮಾನ್ಯ ಟಿಳಕರ ಅನುಯಾಯಿಯಾಗಿದ್ದ ನಾಮಜೋಶಿ ಎಂಬವರು ಉಪನ್ಯಾಸ ಮಾಡಿದರು. ೧೫ರ ವೆಂಕಣ್ಣ ಆ ಉಪನ್ಯಾಸ ಕೇಳಲು ಹೋಗಿದ್ದ. ಉಪನ್ಯಾಸದಲ್ಲಿ ನಾಮಜೋಶಿ ಹೇಳಿದ್ದರು. 'ಪರದೇಶಿ ಅನುಕರಣದಿಂದ ಭಾರತೀಯ ಉದ್ಯೋಗ ಧಂದೆಗಳು ಹಾಳಾಗುವುದು ಮಾತ್ರವಲ್ಲ, ಆಟ - ನೋಟಗಳಲ್ಲಿಯೂ ನಾವು ಕುರುಡರಾಗಿ ಅವರ ಹೆಜ್ಜೆಯನ್ನೇ ತುಳಿಯುತ್ತಿದ್ದೇವೆ - ಎಂಥ ನಾಚಿಕೆಗೇಡು .... ಇತ್ಯಾದಿ'' ವೆಂಕಣ್ಣನಿಗೆ ಅವರ ಉಪನ್ಯಾಸ ಮನಸ್ಸಿಗೆ ತಾಕಿತು. ಮರುದಿನ ಹೈಸ್ಕೂಲಿನಲ್ಲಿ ಒಂದು ದೇಶೀ ಆಟದ ಕ್ಲಬ್ಬನ್ನು ಸ್ಥಾಪಿಸಿದರು. ಸದಸ್ಯರು ಕೇವಲ ದೇಶೀ ಆಟಗಳನ್ನೇ

ಆಡತಕ್ಕದ್ದು ಚಿಣಿ-ಫಣಿ, ಹುತುತೂ, ಖೋಖೋ, ಇತ್ಯಾದಿ ದೇಶೀ ಆಟಗಳನ್ನು ಆಡಲು ಪ್ರಾರಭಿಸಿದರು. ಅಂದಿನಿಂದಲೇ ಅವರು ಸ್ವದೇಶಿ ವ್ರತವನ್ನು ಹಿಡಿದರು. ೧೮೯೭ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಹೈಸ್ಕೂಲಿಗೆ ಎರಡನೆಯವರಾಗಿ ಪಾಸಾದರು. ಪ್ಲೇಗಿನ ಹಾವಳಿಯಿಂದ ಆ ವರುಷ ಕಾಲೇಜು ಸೇರಲಿಲ್ಲ. ಮನೆಯಲ್ಲೇ ಸಂಸ್ಕೃತ ಅಭ್ಯಾಸ ಮುಂದುವರಿಸಿದರು. ಧರ್ಮ ಮೀಮಾಂಸೆಯನ್ನು ಓದುವಾಗ ಒಂದು ಸಂಶಯ ಬಂದಿತು. ಮೂಲ ಲೇಖಕ ಮ್ಯಾಕ್ಸಮುಲ್ಲರ್ ಅವರನ್ನೇ ಕೇಳಬೇಕೆಂದು ಅವರಿದ್ದ ಲಂಡನ್ ನಗರಕ್ಕೆ ಪತ್ರಬರೆದರು ! ಅದು ವೆಂಕಣ್ಣನ ಮನೋಧರ್ಮವಾಗಿತ್ತು. ಈ ದಿನಗಳಲ್ಲೆ ಪ್ರೊ. ಭಾನ ಅವರ ಮರಾಠಿ 'ನೀತಿ ಮೀಮಾಂಸೆ'ಯನ್ನು ಕನ್ನಡಕ್ಕೆ ಅನುವಾದಿಸಲು ಪ್ರಾರಂಭಿಸಿದರು.

೧೮೯೯ರಲ್ಲಿ ವೆಂಕಟರಾಯರು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಪುಣೆಯ ಫರ್ಗ್ಯೂಸನ್ ಕಾಲೇಜು ಸೇರಿದರು. ಅದೇ ವರುಷ ಅಲ್ಲಿಯ ಪರಾಂಜಪೆ ಅವರಿಗೆ ರ್‍ಯಾಂಗ್ಲರ್ ಪದವಿ ಬಂದಿತ್ತು. ತನ್ನಿಮಿತ್ತ ನಡೆದ ಸಮಾರಂಭ ಒಂದರಲ್ಲಿ ಗೋಪಾಲ ಕೃಷ್ಣ ಗೋಖಲೆ (ಮುಂದಿನ ದಿನಗಳಲ್ಲಿಯ ಮಹಾತ್ಮಾಗಾಂಧೀಜಿ ಅವರ ರಾಜಕೀಯ ಗುರು) ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು.

'...ಪರೀಕ್ಷೆ ಪಾಸಾಗುವುದು ವಿದ್ಯಾರ್ಥಿ ಜೀವನದ ಒಂದು ಮುಖ್ಯ ಗುರಿ, ನಿಜ. ಆದರೆ ಮುಂದೆ ನೀವು ಸರಕಾರೀ ನೌಕರಿ ಹಿಡಿದು ಪರಮ ಪುರುಷಾರ್ಥ ಸಾದಿಸಿದೆವು ಎಂದು ತಿಳಿಯಬಾರದು... ವಿದ್ಯಾರ್ಥಿಗಳ ನಿಜವಾದ ಕಾರ್ಯ, ಈ ಪರೀಕ್ಷೆಗಳ ನಂತರ ಆರಂಭವಾಗುತ್ತದೆ. ನಿಮ್ಮ ವಿದ್ಯಾಬುದ್ಧಿ ಕರ್ತೃತ್ವ ಶಕ್ತಿಗಳು ದೇಶದ ಉನ್ನತಿಗೆ ಯಾವ ಮಟ್ಟಿಗೆ ಉಪಯೋಗವಾದೀತು ಎಂಬುದನ್ನು ಮರೆಯಬೇಡಿರಿ. ತರುಣರ ಬುದ್ಧಿ ಮತ್ತು ಶಕ್ತಿಗಳು ದೇಶದ ಮಹತ್ವದ ಸಂಪತ್ತು. ನೀವೆಲ್ಲ ದೇಶಸೇವೆಗೆ ನಿಮ್ಮನ್ನು ಅರ್ಪಿಸಿಕೊಳ್ಳಿರಿ. ಅದಕ್ಕೆ ತಕ್ಕ ಸಿದ್ಧತೆಯನ್ನು ಈಗಿನಿಂದಲೇ ಮಾಡಿಕೊಳ್ಳಿರಿ...'

ಅಂದಿನಿಂದಲೇ ವೆಂಕಟರಾಯರ ಚಿಂತನೆಯ ದಾರಿ ಬದಲಾಯಿತು. ನೌಕರಿಯನ್ನಂತೂ ಮಾಡುವುದಿಲ್ಲ. ಅಪ್ಪನಿಗೂ ಅಷ್ಟೇ. ಆಗಿನ ದಿನಗಳಲ್ಲಿ ಮಗ ದೊಡ್ಡ ವಕೀಲನಾಗಬೇಕು ಎಂಬ ಎಲ್ಲ ತಂದೆಯರ ಆಸೆಯಂತೆ ಭೀಮರಾಯರಿಗೂ ಮಗನು ವಕೀಲನಾಗಬೇಕೆಂಬುದೇ ಆಗಿತ್ತು. ವೆಂಕಟರಾಯರಿಗೂ ಅದುವೆ ಗುರಿಯಾಗಿದ್ದಿತ್ತಾದರೂ ವಕೀಲಿಯಿಂದ ಹಣ ಗಳಿಸುವ ಉದ್ದೇಶದಿಂದಲ್ಲ. ವಕೀಲಿ ಪರೀಕ್ಷೆ ಪಾಸಾದ ಬಳಿಕ ಯಾವ ರೀತಿಯಲ್ಲಿ ದೇಶಕಾರ್ಯ ಆರಂಭಿಸುವುದು ಎಂಬುದನ್ನು ಅಂದಿನಿಂದಲೇ ಚಿಂತಿಸಹತ್ತಿದರು.

ಟಿಳಕರಂತೆ 'ಕೇಸರಿ' ಯಂಥ ಒಂದು ಪ್ರಭಾವೀ ಪತ್ರಿಕೆಯನ್ನು ಕರ್ನಾಟಕದಲ್ಲಿ ಕನ್ನಡದಲ್ಲಿ ಪ್ರಕಟಿಸುವುದು, ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ಅಧ್ಯಾಪನ ಕಾರ್ಯ ಇತ್ಯಾದಿ

ಇನ್ನೂ ಹಲವಾರು ಯೋಚನೆ - ಯೋಜನೆಗಳೊಂದಿಗೆ ೧೯೦೩ರಲ್ಲಿ ಬಿ.ಎ. ಪದವಿ ಪಡೆದರು. ಮುಂದೆ ಎರಡು ವರುಷ ಮುಂಬಯಿಯಲ್ಲಿ ಕಾನೂನು ಪದವಿಗಾಗಿ ಅಭ್ಯಾಸ ಮಾಡುವಾಗ ಈ ಯೋಚನೆಗಳು ಇನ್ನಷ್ಟು ಬಲವಾದವು. ನಿಶ್ಚಿತ ದಾರಿ ಗೊತ್ತಾಗಲಿಲ್ಲ. ಗೋಖಲೆ ಅವರನ್ನೆ ಕೇಳಿದರಾಯಿತೆಂದು ಅವರನ್ನು ಕಂಡು ನೇರವಾಗಿ ಕೇಳಿದ್ದಾಯಿತು. ಅವರು ಎಲ್ಲ ವಿದ್ಯಾರ್ಥಿಗಳಿಗೆ ಅನ್ವಯಿಸುವಂತೆ ಹೇಳಿದ್ದರು.

ಮುಂದೆ ಏನು ಮಾಡಬೇಕು ? ದೇಶಸೇವೆ ಒಪ್ಪಿಕೊಂಡವರಿಗೆ ಅದನ್ನು ಸಾಧಿಸುವುದು ಹೇಗೆ ? ಶಿಕ್ಷಣ ಪ್ರಸಾರ, ಪತ್ರಿಕಾ ವೃತ್ತಿ ಸರಿ. ಆದರೆ ಅದನ್ನೇ ಎಲ್ಲರೂ ಕೈಕೊಂಡರೆ ಗತಿ ! ರಾಷ್ಟ್ರಕಾರ್ಯಕ್ಕೆ ಬೇರೆ ಮುಖಗಳೂ ಉಂಟು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಭಾರತೀಯ ಸಮಾಜವನ್ನು ಹೊಸದಾಗಿ ಕಟ್ಟಬೇಕಾಗಿದೆ. ಸಂಬಂಧಪಟ್ಟ ವಿಷಯಗಳ ಆಳ ಅಭ್ಯಾಸದ ಅಗತ್ಯವಿದೆ. ಓದಿರಿ, ಮನನ ಮಾಡಿಕೊಳ್ಳಿರಿ. ಗ್ರಂಥಗಳು ದೇಶದ ನಿಜವಾದ ಸಂಪತ್ತು. ಈ ಭಾವನೆ ಎಲ್ಲರಲ್ಲಿ ಬೆಳೆಯಬೇಕು. ನೀವು ಓದುವುದಲ್ಲದೆ ಜನತೆಗೆ ವಾಚನದ ಅಭಿರುಚಿಯನ್ನು ಹುಟ್ಟಿಸಬೇಕು... ಗ್ರಂಥ ಭಂಡಾರಗಳನ್ನು ವಾಚನಾಲಯಗಳನ್ನು ಎಲ್ಲ ಕಡೆಗೆ ಸ್ಥಾಪಿಸಬೇಕು... ಇತ್ಯಾದಿ.

ರಾಷ್ಟ್ರ ಕಟ್ಟುವ ಕೆಲಸಕ್ಕೆ ಮಿತಿ ಎಲ್ಲಿ ? ಕಾಲೇಜಿನಲ್ಲಿಯ ಖ್ಯಾತ ಪ್ರಾಧ್ಯಾಪಕರ ಮಾರ್ಗದರ್ಶನದೊಂದಿಗೆ ಜೊತೆ ಸಹಪಾಠಿಗಳಾದ ವೀರ ಸಾವರಕರ, ಸೇನಾಪತಿ ಬಾಪಟ ಮೊದಲಾದವರೊಂದಿಗಿನ ಚಿಂತನೆಗಳಿಂದ ಒಮ್ಮೊಮ್ಮೆ ಕ್ರಾಂತಿಕಾರಿ ವೀರಶ್ರೀ ಸ್ಫುರಿಸಿದ್ದು ಉಂಟು. ಅಂತು ೧೯೦೫ರಲ್ಲಿ ವೆಂಕಟರಾಯರು ಕಾನೂನು ಪದವೀಧರರಾಗಿ ವಕೀಲರಾಗಿ ಧಾರವಾಡಕ್ಕೆ ಬಂದರು. ಆದರೆ ವಕೀಲರಾದರೆ ? ಪರೀಕ್ಷೆ ಪರಿಣಾಮ ಬರುವ ಮುನ್ನ ಅವರ ಜೀವನದಲ್ಲೊಂದು ಕಿಡಿ ಹಾರಿತ್ತು . ಅವರ ಜೀವನದ ಗತಿಯೇ ಬೇರೆಯಾಯಿತು.

ಆನೆಗೊಂದಿ ಪ್ರವಾಸ, ಹಾಳು ಹಂಪೆಯ ದರ್ಶನ, ಅದು ಕ್ರಾಂತಿಯ ಕ್ಷಣ ಎಂದು ಆಲೂರು ವೆಂಕಟರಾಯರೇ ಹೇಳಿಕೊಂಡಿದ್ದಾರೆ. ಅಂತರಂಗದ ಕದವನ್ನು ತೆರೆಯಿಸಿದ ಈ ಘಟನೆಯ ಬೆನ್ನಲ್ಲೆ ನಡೆದ ಬಂಗಾಲದ ಇಬ್ಭಾಗ ರಾಷ್ಟ್ರಾದ್ಯಂತ 'ವಂಗಭಂಗ' ಚಳವಳಿಗೆ ಕಾರಣವಾಗಿತ್ತು. ಆ ಚಳವಳಿಯಲ್ಲೇ ಸ್ವದೇಶಿ ಆಂದೋಲನ ಅಡಕವಾಗಿತ್ತು. 'ಸ್ವದೇಶಿ ಚಳವಳಿಯ ಗಂಗೆಯಲ್ಲಿ ಸ್ನಾನ ಮಾಡಿ ಪವಿತ್ರವಾದ' ಎಂದು ಅವರು ಹೇಳಿಕೊಂಡಿದ್ದಾರೆ. ಪರದೇಶಿ ವಸ್ತುಗಳ ಬಹಿಷ್ಕಾರದ ಅಗ್ನಿಹೋಮವು ತಣ್ಣಗಾಗುತ್ತಿದ್ದಂತೆ ರಾಷ್ಟ್ರೀಯ ಶಿಕ್ಷಣದ ಎರಡನೆಯ ಹಂತವು ಪ್ರಾರಂಭವಾಯಿತು.

೨೬-೧--೧೯೦೬ರಿಂದ ಕರ್ನಾಟಕ ನೂತನ ವಿದ್ಯಾಲಯ ಎಂಬ ಹೆಸರಿನಲ್ಲಿ ರಾಷ್ಟ್ರೀಯ ವಿದ್ಯಾಲಯವನ್ನು ಪ್ರಾರಂಭಿಸಿದರು. ಆದರೆ, ಒಂದೆರಡು ತಿಂಗಳಲ್ಲಿ

ಅವರು ನಿರೀಕ್ಷಿಸಿದ ಮಟ್ಟದಲ್ಲಿ ಜನತೆಯಿಂದ್ದ ಉತ್ತೇಜನ ದೊರೆಯಲಿಲ್ಲ. ಜೊತೆಗೆ ಬ್ರಿಟಿಷ್ ಸರಕಾರದ ದಬ್ಬಾಳಿಕೆ, ಒಂದು ವರುಷದಲ್ಲಿ ಶಾಲೆ ನಿಂತು ಹೋಯಿತು. ಈ ದಿನಗಳಲ್ಲಿ ಅವರು ಕರ್ನಾಟಕ ಚರಿತ್ರೆಯ ಅನ್ವೇಷಣೆಗಳ ಶಿಲಾಲಿಪಿಗಳ ಅಭ್ಯಾಸದ ಪರಿಣಾಮವಾಗಿ ಕರ್ನಾಟಕ ಇತಿಹಾಸದ ಉಜ್ವಲವಾದ ಮುತ್ತಿನ ಹಾರವನ್ನೆ ಅವರು ಪವಣಿಸಿದರು. ಅದಕ್ಕಾಗಿ ಅವರು ಅಖಂಡ ಹನ್ನೆರಡು ವರುಷಗಳ ತಪಸ್ಸನ್ನು ಮಾಡಿದರು (೧೯-೫-೧೯೧೭)

ಇತಿಹಾಸ ಸಂಶೋಧನೆಯ ರಂಗದಲ್ಲಿ ತಮ್ಮೊಬ್ಬರ ಪ್ರಯತ್ನಗಳು ಸಾಲವು ಎಂದು ಅವರಿಗೆ ಅನಿಸಿತು. ಶಿಲಾಲಿಪಿಗಳನ್ನು ಗುರುತಿಸುವುದು, ಅವುಗಳ ನಕಲು ಮಾಡುವುದು, ಪ್ರವಾಸದಲ್ಲಿ ದೊರೆತ ಐತಿಹಾಸಿಕ ಅವಶೇಷಗಳನ್ನು ಸಂಗ್ರಹಿಸುವುದು ಇದೆಲ್ಲ ಒಬ್ಬರ ಕೆಲಸವಾಗಿರಲಿಲ್ಲ ೧೯೧೪ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನ ಕನ್ನಡ ವಿದ್ಯಾರ್ಥಿಗಳು ವೆಂಕಟರಾಯರನ್ನು ಅತಿಥಿಗಳನ್ನಾಗಿ ಬರಮಾಡಿಕೊಂಡಿದ್ದರು. ಅವರ ಇತಿಹಾಸದಲ್ಲಿಯ ಆಸಕ್ತಿ ಗೌರವಗಳನ್ನು ಗಮನಿಸಿ ವಿದ್ಯಾರ್ಥಿಗಳು ಅವರಿಗೆ ಒಂದು ನೂರು ರೂಪಾಯಿಗಳ ಕಾಣಿಕೆಯನ್ನು ಕೊಟ್ಟರು. ಅದರಿಂದ ಉತ್ತೇಜಿತರಾದ ವೆಂಕಟರಾಯರು ಅದೇ ವರುಷ ಧಾರವಾಡದಲ್ಲಿ 'ಕರ್ನಾಟಕ ಇತಿಹಾಸ ಸಂಶೋಧನ ಮಂಡಲ'ವನ್ನು ಸ್ಥಾಪಿಸಿದರು. ಅವರಿಗೆ ಆಗ ಹೆಗಲೆಣೆಯಾಗಿ ನಿಂತವರು ಸಂಶೋಧಕ ನಾರಾಯಣ ಶ್ರೀನಿವಾಸ ರಾಜಪುರೋಹಿತರು. ಅವರ ಕಣ್ಣರಿಕೆಯಲ್ಲಿ ಕರ್ನಾಟಕ ಇತಿಹಾಸವನ್ನು ಬೆಳಕಿಗೆ ತರುವಲ್ಲಿ ಬಹು ಅಮೂಲ್ಯ ಕೆಲಸವನ್ನು ಮಾಡಿದರು. 'ಪ್ರಾಚೀನ ಕರ್ನಾಟಕ' ಎಂಬ ಆಂಗ್ಲ- ಕನ್ನಡ ಷಾಣ್ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಹಲವಾರು ತರುಣ ಸಂಶೋಧಕರಿಗೆ ಮಂಡಲವು ಮಾರ್ಗದರ್ಶನ ಮಾಡಿತು.

ಈ ದಿನಗಳಲ್ಲಿಯೆ ಅವರು 'ಕರ್ನಾಟಕ ಗತ ವೈಭವ 'ವನ್ನು ಬರೆದು ಪ್ರಕಟಿಸಿದರು. ಈ ಪುಸ್ತಕವು ಕನ್ನಡಿಗರ ನವ ಜೀವನಕ್ಕೆ ಸ್ಫೂರ್ತಿಯನ್ನು ಚೈತನ್ಯ ಶಕ್ತಿಯನ್ನು ಒದಗಿಸಿತು. ಇದೊಂದು ಸಣ್ಣ ಪ್ರಮಾಣದಲ್ಲಿ ಯುಗ ಪ್ರವರ್ತಕವಾದ ಕೃತಿಯಾಗಿದೆ. ಕನ್ನಡ ಜನತೆಯ ಕಣ್ಣನ್ನು ತೆರೆಯಿಸಿತು. ಕನ್ನಡ ಹೃದಯವನ್ನು ಕೆರಳಿಸಿತು, ಅರಳಿಸಿತು. ಶತಶತಮಾನದಿಂದ ಹೆರವರ ತೊತ್ತಾಗಿ ಸ್ವಂತದ ಅರಿವನ್ನು ಕಳೆದುಕೊಂಡು ಸುಪ್ತವಾಗಿದ್ದ ಜಡವಾದ ಕಣ್ಣನ್ನು ಇದು ಅಗಲವಾಗಿ ತೆರೆಯಿಸಿತು. ವಿಶಾಲವಾದ ನೋಟವನ್ನು ಕೊಟ್ಟಿತು. ಭಾರತ ಮತ್ತು ಕರ್ನಾಟಕ ಇವುಗಳ ಸಮ್ಯಕ್ ದರ್ಶನವನ್ನು ಒದಗಿಸಿತು ಎಂದು ಕನ್ನಡ ಸಾಹಿತ್ಯ ಚರಿತ್ರಕಾರರಾದ ಡಾ. ರಂ ಶ್ರೀ ಮುಗಳಿ ಈ ಪುಸ್ತಕದ ಬಗ್ಗೆ ಹೇಳಿದ್ದಾರೆ. ಈ ದಿನಗಳಲ್ಲಿ ಮತ್ತು ಮುಂದೆ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ರಾಜಕಾರಣಿಯ, ಸಮಾಜಸೇವಕನ ಕೈಪಿಡಿಯಾಯಿತು! ಅಂತೆಯೇ ಅದು ಯುಗ ಪ್ರವರ್ತಕ ಕೃತಿ ಎನಿಸಿತು.

ಲೇಖಕ ಆಲೂರು ವೆಂಕಟರಾಯರು ತಮ್ಮ ರಾಷ್ಟ್ರೀಯತೆಯಲ್ಲಿ ಸ್ವದೇಶಿ ಚಳವಳಿಯಲ್ಲಿ ರಾಜಕೀಯದಲ್ಲಿ ಸ್ವತಂತ್ರ ಮಾರ್ಗವನ್ನು ಶೋಧಿಸಲಾರಂಭಿಸಿದರು. ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಕನ್ನಡ ಭಾಷೆಗೆ ಪಟ್ಟವಿಲ್ಲದಿದ್ದರೆ ಅದು ನಿರರ್ಥಕ ಎಂಬ ಸಿದ್ಧಾಂತಕ್ಕೆ ಬಂದರು.

೧೯೧೬ರಲ್ಲಿ ಪುಣೆಯಲ್ಲಿ ಹೋಮ್‌ರೂಲ್ ಲೀಗ ಸ್ಥಾನೆಯಾದಾಗ ಕರ್ನಾಟಕಕ್ಕೆ ಪ್ರತ್ಯೇಕ ಶಾಖೆ ಬೇಕು ಎಂದು ಒತ್ತಾಯಿಸಿ ಪಡೆದರು. ಬೆಳಗಾವಿಯ ಗಂಗಾಧರರಾವ ದೇಶಪಾಂಡೆ ಅವರು ಈ ಶಾಖೆಯ ಅಧ್ಯಕ್ಷರಾದರು. ಆಲೂರು ವೆಂಕಟರಾಯರು ಕಾರ್ಯದರ್ಶಿಗಳಾಗಿದ್ದರು. ಟಿಳಕರ ಮೂರು ಭಾಷಣಗಳನ್ನು ಮರಾಠಿಯಲ್ಲಿ ಮುದ್ರಿಸಿ ಅಧ್ಯಕ್ಷರು ಹಂಚಿದಾಗ ಅವನ್ನು ಕನ್ನಡದಲ್ಲಿ ಭಾಷಾಂತರಿಸಿ ಹಂಚಬೇಕೆಂದು ವೆಂಟಕರಾಯರು ಪಟ್ಟು ಹಿಡಿದರು. ಹಣದ ಅಭಾವದಿಂದ ಅದು ಸಾಧ್ಯವಾಗಲಿಲ್ಲವಾದರೂ ಅಂದಿನಿಂದ ಮುಂಬಯಿ ಕರ್ನಾಟಕದ ರಾಜಕಾರಣದಲ್ಲಿ ಕನ್ನಡ-ಮರಾಠಿ ಭಾಷಾವಾದ ಪ್ರಾರಂಭವಾಯಿತು. ಅಲ್ಲಿಯವರೆಗೆ ಕನ್ನಡಿಗರು ಮರಾಠಿಯನ್ನೇ ತೆಪ್ಪಗೆ ಸ್ವೀಕರಿಸಿದ್ದರು !

ಕರ್ನಾಟಕತ್ವದ ಈ ಕಿಡಿಯು ತರುಣರನ್ನು ಆಕರ್ಷಿಸಲು 'ಕರ್ನಾಟಕ ಸಭೆ'ಯ ಸ್ಥಾಪನೆಗೆ ಕಾರಣವಾಯಿತು. ಶಾಂತ ಕವಿಗಳಂಥ ವಯೋವೃದ್ಧರಿಗೆ ಸ್ಫೂರ್ತಿಯನ್ನು ಕೊಟ್ಟು 'ವಿದ್ಯಾರಣ್ಯ ವಿಜಯ' ದಂಥ ರಾಷ್ಟ್ರೀಯ ಕೀರ್ತನೆಗೆ ಕಾರಣವಾಯಿತು.

'ಕರ್ನಾಟಕ ಸಭೆ' ಎಂಬುದು ಕನ್ನಡಿಗರ ಹಿತರಕ್ಷಣೆಯ ಗುರಿಯನ್ನಿಟ್ಟು ಕೊಂಡ ತರುಣರ ಸಂಘಟನೆಯಾಗಿತ್ತು. ಅಖಂಡ ಕರ್ನಾಟಕ ನಿರ್ಮಾಣವೇ ಅದರ ಉದ್ದೇಶ. ಅದಕ್ಕೆ ಏನೆಲ್ಲ ಮಾಡುವುದು. ಕಡಪಾ ರಾಘವೇಂದ್ರ ರಾಯರು, ಆಲೂರು ವೆಂಕಟರಾಯರು ಕಾರ್ಯದರ್ಶಿಗಳು. ಮುದವೀಡು ಕೃಷ್ಣರಾಯರು ಗದಿಗೆಯ್ಯ ಹೊನ್ನಾಪುರ ಮಠ, ಸಂಗವ್ವ ಪಾಟೀಲ ಪ್ರಮುಖ ಕಾರ್ಯಕರ್ತರು. ಕರ್ನಾಟಕ ಏಕೀಕರಣದ ಬೇಡಿಕೆಯನ್ನು ಸರಕಾರದ ಮುಂದೆ ಮಂಡಿಸಲು ಕರ್ನಾಟಕ ಸಭೆಯು ಒಂದು ಮನವಿ ಪತ್ರವನ್ನು ಸಿದ್ಧಪಡಿಸಿ ಕರ್ನಾಟಕದಾದ್ಯಂತೆ ತಿರುಗಾಡಿ ಒಂದು ಲಕ್ಷ ಜನರ ಸಹಿಯನ್ನು ಸಂಗ್ರಹಿಸಿತು.

ಮದ್ರಾಸಿನಲ್ಲಿದ್ದ ದಕ್ಷಿಣ ಕನ್ನಡದ ಡಾ. ಯು.ರಾಮರಾಯರು ಕೇಂದ್ರ ಸರಕಾರದ ಕೌನ್ಸಿಲ್ ಆಫ್ ಸ್ಟೇಟ್‌ನ ಸದಸ್ಯರಾಗಿದ್ದರು. ಅವರ ಮುಖಾಂತರ ಕೇಂದ್ರ ಕೌನ್ಸಿಲ್ಲಿನಲ್ಲಿ ಕರ್ನಾಟಕ ಪ್ರಾಂತ ರಚನೆಯ ಕುರಿತು ಒಂದು ಗೊತ್ತುವಳಿಯನ್ನು ಮಂಡಿಸಲು ಒತ್ತಾಯಿಸಿದರು. ಆದರೆ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಆ ವರೆಗೆ ಯಾವ ಭಾಷಾ ಪ್ರಾಂತದ ವಿಷಯದಲ್ಲೂ ಚರ್ಚೆ ನಡೆದಿರಲಿಲ್ಲ. ಆಲೂರು ವೆಂಕಟರಾಯರ ಒತ್ತಾಯಕ್ಕೆ ಮಣಿದು ಡಾ. ಯು.ರಾಮರಾಯರು , ಆಲೂರರು ನೀಡಿದ

ವಿವರಣೆಗಳನ್ನು ಬಳಸಿ ಕೇಂದ್ರ ಸರಕಾರಕ್ಕೆ ಒಂದು ಮನವಿ ಪತ್ರವನ್ನು ಸಿದ್ಧಪಡಿಸಿದರು. ಅದಕ್ಕೆ ಅನುಗುಣವಾಗಿ ಹರಿದು ಹಂಚಿಹೋಗಿದ್ದ ಕರ್ನಾಟಕದ ಎಲ್ಲ ಭಾಗಗಳಿಂದಲೂ ಪ್ರಮುಖರ - ಜನಸಾಮಾನ್ಯರ ಸಹಿಯನ್ನು ಪಡೆಯಬೇಕಾಯಿತು. ಡಾ. ಯು. ರಾಮರಾಯರು ದಕ್ಷಿಣ ಕನ್ನಡ, ಕೊಡಗುಗಳಿಂದ, ಗೊರೂರು ರಾಮಸ್ವಾಮಿ ಅಯ್ಯಂಗಾರರು ಮೈಸೂರು ಸಂಸ್ಥಾನದ ಕನ್ನಡಿಗರಿಂದ, ಸ್ವತಃ ಆಲೂರರು, ಕಡಪಾ ರಾಘವೇಂದ್ರರಾಯರು ಅವರು ಮುಂಬಯಿ ಕರ್ನಾಟಕದಿಂದ ಹೀಗೆ ಅಡ್ಡಾಡಿ ಒಂದು ಲಕ್ಷ ಜನರ ಸಹಿ ಪಡೆದರು. ಜೊತೆಗೆ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ಬರೆಯಿಸಿದರು. ಅಂತು ಸಕಾಲದಲ್ಲಿ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಡಾ. ಯು. ರಾಮರಾಯರು ಗೊತ್ತುವಳಿಯನ್ನು ಮಂಡಿಸಿದರು. ಚರ್ಚೆಯೂ ನಡೆಯಿತು. ಆದರೆ 'ಇದಕ್ಕೆ ಕಾಲ ಪರಿಪಕ್ವವಾಗಿಲ್ಲ' ಎಂಬ ಟಿಪ್ಪಣಿಯೊಂದಿಗೆ ನಿರ್ಣಯಕ್ಕೆ ತಡೆಯನ್ನು ತಂದರು. ಭಾರತದ ಭಾಷಾವಾರು ಪ್ರಾಂತ ರಚನೆಗಳ ಬೇಡಿಕೆಯಲ್ಲಿ ಕೇಂದ್ರದ ಶಾಸನ ಸಭೆಯಲ್ಲಿ ಕನ್ನಡಿಗರಿಂದ ಮೊಟ್ಟ ಮೊದಲು ಗೊತ್ತುವಳಿ ಮಂಡನೆಯಾದದ್ದು ಇಲ್ಲಿಯ ವಿಶೇಷವಾಗಿದೆ. ಅದಕ್ಕೆ ಮೂಲ ಪ್ರೇರಣೆ ಆಲೂರು ವೆಂಕಟರಾಯರು.

ವೆಂಕಟರಾಯರು ಅಷ್ಟಕ್ಕೆ ಬಿಡಲಿಲ್ಲ. ಮುಂದೆ ಅನಿತರಲ್ಲಿ ೧೯೨೦ರಲ್ಲಿ ಕರ್ನಾಟಕ ರಾಷ್ಟ್ರೀಯ ಪರಿಷತ್ತನ್ನು ಸಂಘಟಿಸಿದರು. ಕೊಡಗಿನಿಂದ ಕಲಬುರ್ಗಿವರೆಗೆ, ಮಂಗಳೂರಿನಿಂದ ಕೊಳ್ಳೆಗಾಲದ ವರೆಗೆ - ಬಿಡುವಿಲ್ಲದೆ ತಿರುಗಾಡಿದರು. ನಾನಾ ಭಾಗಗಳಿಂದ ಸುಮಾರು ಎರಡು ಸಾವಿರ ಪ್ರತಿನಿಧಿಗಳನ್ನು ಸೇರಿಸಿದರು. ದಿವಾನ್ ವಿ.ಪಿ. ಮಾಧವರಾಯರು ಪರಿಷತ್ತಿನ ಅಧ್ಯಕ್ಷರು. ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯ ಕುರಿತು ಹಲವಾರು ಸಮಸ್ಯೆಗಳನ್ನು ಈ ವೇದಿಕೆಯಲ್ಲಿ ಚರ್ಚಿಸಲಾಯಿತು. ಅಖಂಡ ಕರ್ನಾಟಕದ ಕನ್ನಡಿಗರ ಭಾವೈಕ್ಯತೆಯ ಪ್ರಯತ್ನದಲ್ಲಿ ಈ ಪರಿಷತ್ತು ಕಳಸಪ್ರಾಯವಾಗಿತ್ತು. ಆದರೆ ರಾಷ್ಟ್ರೀಯ ಆಂದೋಲನದ ಅಸಹಕಾರ ಚಳುವಳಿಯಲ್ಲಿ ಪರಿಷತ್ತಿನ ಧ್ಯೇಯ ಹಿಂದೆ ಸರಿಯಿತು ! ಕರ್ನಾಟಕದ ರಾಜಕಾರಣದಲ್ಲಿ ಕನ್ನಡ - ಮರಾಠಿ ದ್ವಂದ್ವ ಮತ್ತೆ ಎದ್ದಿತು. ನಾಡಿನ ಸಾರ್ವಜನಿಕ ಜೀವನದಲ್ಲಿ ಕನ್ನಡವನ್ನು ಪ್ರತಿಷ್ಠಾಪಿಸುವುದರ ಅಗತ್ಯವನ್ನು ಆಲೂರರು ಹೇಳಿದರೆ ರಾಷ್ಟ್ರಕಾರ್ಯದಲ್ಲಿ ಭಾಷೆಯ ಸ್ಥಾನ ಗೌಣ ಎಂಬುದು ಗಂಗಾಧರ ರಾವ್ ದೇಶಪಾಂಡೆ ಮೊದಲಾದವರ ದೃಷ್ಟಿಯಾಗಿತ್ತು.

ಆಲೂರು ವೆಂಕಟರಾಯರು ಅದಕ್ಕೆ ಜಪ್ಪೆನ್ನಲಿಲ್ಲ. ತಮ್ಮ ಕಲ್ಪನೆಗೆ ಸಾಕಾರ ಸ್ವರೂಪವನ್ನು ಕೊಡಲು 'ಜಯ ಕರ್ನಾಟಕ' ಎಂಬ ಮಾಸ ಪತ್ರಿಕೆಯನ್ನು ೧೯೨೨ರ ನವೆಂಬರ್ ನಲ್ಲಿ ಆರಂಭಿಸಿದರು. ಮೊದಲ ಸಂಚಿಕೆಯಲ್ಲಿ ಅವರು ಹೀಗೆ ಹೇಳಿದ್ದಾರೆ. 'ಈಗ ನಾವು ಬಾಯಿಂದ ಮಾತ್ರ ಕರ್ನಾಟಕ ಎಂಬ ಅಭಿಮಾನವನ್ನು

ತಾಳುತ್ತೇವಲ್ಲದೆ ಅದು ನಮ್ಮ ಹೃದಯದಲ್ಲಿ ಇನ್ನೂ ಆಳವಾಗಿ ನೆಟ್ಟಿಲ್ಲ. ಅದು ನಮ್ಮ ರಕ್ತದಲ್ಲಿ ಬೆರೆತಿಲ್ಲ. ಆದ ಕಾರಣ ನಮ್ಮ ಕೃತಿಗಳು ಕರ್ನಾಟಕದ ಹಿತಕ್ಕೆ ವಿರೋಧವಾಗುತ್ತವೆ.'' ಕರ್ನಾಟಕ ನಿರ್ಮಾಣವಾಗಿ ೫೦ ವರ್ಷ ವರ್ಷಗಳಾದರೂ ೮೦ ವರುಷಗಳ ಹಿಂದೆ ಅವರು ಹೇಳಿದ ಮಾತು ಇಂದಿಗೂ ಮನನೀಯವಾಗಿದೆ! ಕರ್ನಾಟಕ ಎಂಬುದು ನಮ್ಮ ಹೃದಯದಲ್ಲಿ ನೆಟ್ಟಿದೆಯೇ? ರಕ್ತದಲ್ಲಿ ಬೆರೆತಿದೆಯೇ?

ಕರ್ನಾಟಕವು ಭಾರತ ಮಾತೆಯ ಸಜೀವ ಘಟಕದ ಅವಯವವಾಗಿರಬೇಕೆಂಬುದೇ ಜಯಕರ್ನಾಟಕದ ಸಂಕಲ್ಪವಾಗಿದೆ. ಏಕೀಕಿರಣವೇ ಇದಕ್ಕೆ ಸಿದ್ಧೌಷಧಿ. ಕನ್ನಡಿಗರಲ್ಲಿ ಸ್ವಾಭಿಮಾನವೇನೋ ಸ್ವಲ್ಪ-ಸ್ವಲ್ಪ ಜಾಗೃತವಾಗಿದೆ. ಆದರೆ ಅದು ಉತ್ಕಟವಾಗಿಲ್ಲ - ಪರಸ್ಪರ ಸ್ನೇಹ ಸೌಹಾರ್ದವನ್ನು ವೃದ್ಧಿಪಡಿಸುವುದು ರಾಜಕೀಯ ಒಕ್ಕೂಟದ ಮೊದಲ ಹೆಜ್ಜೆ....'' ಜಯ ಕರ್ನಾಟಕ ತಿಂಗಳು ಪತ್ರಿಕೆಯ ಮೊದಲ ಸಂಚಿಕೆಯ ಕೆಲವು ಮಾತುಗಳಿವು.

ಸಾಹಿತ್ಯ, ಕಲೆ, ತತ್ವಜ್ಞಾನ, ವಿಜ್ಞಾನ, ರಾಜಕಾರಣ ಹೊಸ ಜೀವನಕ್ಕೆ ಅತ್ಯವಾದ ಸಮಸ್ತ ವಿಷಯಗಳ ಬಗ್ಗೆ 'ಜಯಕರ್ನಾಟಕ'ದಲ್ಲಿ ಅವಕಾಶವಿತ್ತು. ಕನ್ನಡದ ಅಪಚಾರ ಎಲ್ಲಿಯೇ, ಯಾವ ರಂಗದಲ್ಲಿಯೇ ನಡೆಯಲಿ, 'ಜಯಕರ್ನಾಟಕವು ಅದನ್ನು ಖಂಡಿಸದೇ ಇರುತ್ತಿರಲಿಲ್ಲ.

ಆಲೂರು ವೆಂಕಟರಾಯರಿಗೆ ಪತ್ರಿಕೋದ್ಯಮಿಯಾಗುವ ಕನಸು ಅವರ ಕಾಲೇಜು ದಿನಗಳಿಂದಲೇ ಇತ್ತು. ಅದಕ್ಕೆ ಅಂದಿನ ಟಿಳಕರ 'ಕೇಸರಿ' ಪತ್ರಿಕೆ ಆದರ್ಶವಾಗಿದ್ದರೆ, ಕಾಲೇಜಿನಲ್ಲಿಯ ಗೋಖಲೆ ಅವರ ಉಪನ್ಯಾಸವೂ ಕಾರಣವಾಗಿತ್ತು. ಅಂತೆಯೇ ವೆಂಕಟರಾಯರು ಜೀವನದುದ್ದಕ್ಕೂ ಹಲವಾರು ಪತ್ರಿಕೆಗಳ ನಂಟು, ಸಂಪಾದಕೀಯ, ಲೇಖನಗಳ ಬರವಣಿಗೆ ಅವರಿಗೆ ಅಂಟಿಕೊಂಡಿತ್ತು.

೧೯೦೫ರಲ್ಲಿ ಧಾರವಾಡದಲ್ಲಿ ಅವರು ಹೆಸರಿಗೆ ವಕೀಲಿ ವೃತ್ತಿಯನ್ನು ಆರಂಭಿಸಿದೊಡನೆಯೇ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿಯ ಪುಸ್ತಕಗಳ ಧೂಳು ಝಾಡಿಸಿದ್ದಲ್ಲದೆ ಸಂಘದ ಮುಖಪತ್ರವಾದ 'ವಾಗ್ಭೂಷಣ'ದ ಸಂಪಾದಕತ್ವವನ್ನು ವಹಿಸಿದರು. ೧೯೦೭ರ ಫೆಬ್ರವರಿ ಸಂಚಿಕೆಯಲ್ಲಿ ತಮ್ಮ ಕಲ್ಪನೆಯ ಕರ್ನಾಟಕದ ರೂಪುರೇಷೆಗಳನ್ನು ನೀಡಿದ್ದರು. ಕರ್ನಾಟಕ ಏಕೀಕರಣದ ಅಗತ್ಯ ಮತ್ತು ಸಾಧ್ಯತೆಯನ್ನು ಸ್ಪಷ್ಟವಾಗಿ ನಿರ್ದಿಷ್ಟ ರೂಪದಲ್ಲಿ ಕನ್ನಡಿಗರ ಮುಂದೆ ಇರಿಸಿದ್ದು ಅದೇ ಮೊದಲ ಸಲ ಎನ್ನಬಹುದು. ಇಷ್ಟಾಗಿಯೂ ವಿದ್ಯಾವರ್ಧಕ ಸಂಘದ ಮುಖಪತ್ರವಾದದ್ದರಿಂದ ಅದಕ್ಕೆ ಒಂದು ಪರಿಮಿತಿ ಇತ್ತು. ಆದ್ದರಿಂದ ಈ ಪರಿಮಿತಿಯ ಚೌಕಟ್ಟಿನಿಂದ ಹೊರಬರಲು ಅವರು ಬೇರೆ ಪತ್ರಿಕೆಗಳತ್ತ ಮುಖ ಮಾಡಿದ್ದರು. ೧೯೦೭ ರಿಂದ ೧೯೧೭ರ ವರೆಗಿನ ಅವಧಿಯಲ್ಲಿ ವೆಂಕಟರಾಯರು

'ಕರ್ನಾಟಕ ಪತ್ರ', 'ಕರ್ನಾಟಕ ವೃತ್ತ' ಮತ್ತು 'ಕನ್ನಡ ಕೇಸರಿ' ಹೀಗೆ ಮೂರು ಪತ್ರಿಕೆಗಳ ಭಾರವನ್ನು ಹೊತ್ತರು. ಅದನ್ನು ಅವರು 'ನನ್ನ ಜೀವನ ಸ್ಮೃತಿಗಳು' ಎಂಬ ಆತ್ಮ ವೃತ್ತದಲ್ಲಿಹೇಳಿಕೊಂಡಿದ್ದಾರೆ.

೧೯೦೭ರಿಂದ ೧೯೧೧ರವರೆಗೆ ನಾನು 'ಕರ್ನಾಟಕ ಪತ್ರ', 'ಕರ್ನಾಟಕ ವೃತ್ತ' ಮತ್ತು 'ಕನ್ನಡ ಕೇಸರಿ' ಈ ಮೂರೂ ಪತ್ರಿಕೆಗಳಲ್ಲಿ ಸಂಪಾದಕೀಯ ಲೇಖನಗಳನ್ನು ಬರೆಯುತ್ತಿದ್ದೆನು. ಅವುಗಳಿಗೆ ಹೆಸರಿಗೆ ಸಂಪಾದಕರು ಬೇರೆಯವರಿದ್ದರು. ಮತ್ತು ಲೋಕಬಂಧು', 'ಚಂದ್ರೋದಯ' ಪತ್ರಿಕೆಗಳಲ್ಲಿ ಆಗಾಗ ಲೇಖನಗಳನ್ನು ಕೊಡುತ್ತಿದ್ದೆನು.

'ಕರ್ನಾಟಕ ಪತ್ರ' ವು ಅಂಕಲಗಿಯವರ ಹೆಸರಿಲ್ಲಿ ನೆಡಯುತ್ತಿತ್ತು. ಅದು ಮುಂಚೆ ವೆಂಕಟ ರಂಗೋ ಕಟ್ಟಿಯವರ ಪತ್ರ. ೧೯೦೭ರ ಫೆಬ್ರವರಿಯಲ್ಲಿ ಅದನ್ನು ಅಂಕಲಗಿರಿಯವರು ತೆಗೆದುಕೊಂಡರು. ಅದರೊಳಗಿನ 'ಅಥ' ದಿಂದ 'ಇತಿ' ವರೆಗಿನ ಯಾವತ್ತುಲೇಖನಗಳನ್ನು ನಾನು ಬರೆಯುತ್ತಿದ್ದೆನು. .. 'ಕರ್ನಾಟಕ ವೃತ್ತ' ವು ಮುದವೇಡಕರ ಕೃಷ್ಣರಾಯರದು. ಅದನ್ನು ಕೆಲವು ವರುಷ ನಾನೂ, ಕಟ್ಟಿ ಮಧ್ವಾಚಾರ್ಯರೂ ಕೂಡಿ ನಡೆಸಿದೆವು. 'ಕನ್ನಡ ಕೇಸರಿ' ಬಿಂದೂರಾವ್ ಮುತಾಲಿಕ ದೇಸಾಯಿಯವರದು. ಅದರಲ್ಲಿ ಮರಾಠಿ 'ಕೇಸರಿ' ಯ ಸಂಪಾದಕೀಯ ಲೇಖನಗಳ ಭಾಷಾಂತರವನ್ನು ನಾನು ಮಾಡಿಕೊಡುತ್ತಿದ್ದೆ.''

೧೯೧೧ರಿಂದ ೧೯೨೦ರವರೆಗಿನ ಮಧ್ಯದ ಕೆಲವು ಕಾಲ ಅವರು ಪತ್ರಿಕೆಗಳಿಂದ ದೂರ ಸರಿಯಲು, ಅದಾಗ ಬಂದ ಬ್ರಿಟಿಷರ ಪತ್ರಿಕಾ ಕಾಯಿದೆ ಕಾರಣವಾಯಿತು. ೧೯೨೦ರ ನಂತರ ಅಸಹಕಾರ ಚಳುವಳಿಯ ಕಾರಣದಿಂದಾಗಿ ತಮ್ಮ ವಕೀಲಿಗೆ ಪೂರ್ಣ ಶರಣು ಹೊಡೆದರು. ಮತ್ತೆ ಪತ್ರಿಕಾ ರಂಗದಲ್ಲಿ ಬಹು ಉತ್ಸಾಹದಿಂದ ಎರಡನೆಯ ಬಾರಿಗೆ ಧುಮುಕಿದರು. ಧಾರವಾಡದಿಂದ ಪ್ರಕಟವಾಗುತ್ತಿದ್ದ 'ರಾಜಹಂಸ', 'ವಿಜಯ' 'ಕರ್ನಾಟಕ ವೃತ್ತ' 'ಕರ್ಮವೀರ', ಮೊದಲಾದ ಪತ್ರಿಕೆಗಳ ಸಂಪಾದಕತ್ವವನ್ನು ವಹಿಸಿ ಕೆಲವು ತಿಂಗಳವರೆಗೆ ಏಕಾಕಿಯಾಗಿಯೇ ನಡೆದರು. ಈ ದಿನಗಳಲ್ಲಿಯೆ ಅಂದರೆ ೧೯೨೦ರಲ್ಲಿ ಬೆಳಗಾವಿ ವೆಂಕಟರಾಯರೊಡನೆ 'ಸಂಯುಕ್ತ ಕರ್ನಾಟಕ' ವೆಂಬ ದಿನ ಪತ್ರಿಕೆಯನ್ನು ಪ್ರಾರಂಭಿಸಲು ಪ್ರಯತ್ನಿಸಿದರು. ಇದು ಇಂದಿನ ಸಂಯುಕ್ತ ಕರ್ನಾಟಕಕ್ಕೂ ಅದಕ್ಕೂ ಯಾವುದೇ ಸಂಬಂಧವಿಲ್ಲ. ಆದರೆ ಅವರ ಪ್ರಯತ್ನ ಫಲಿಸಲಿಲ್ಲ ಎಂಬ ಮಾತು ಬೇರೆ. ಸಂಯುಕ್ತ ಕರ್ನಾಟಕ ಎಂಬ ಹೆಸರನ್ನು ಮೊದಲಿಗೆ ಉಪಯೋಗಿಸಿದ್ದು ಗಮನಾರ್ಹವಾಗಿದೆ.

೧೯೧೪ರಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವನ್ನು ಸ್ಥಾಪಿಸಿ ಮಂಡಲದ ಮುಖವಾಣಿಯಾಗಿ ಬರುತ್ತಿದ್ದ 'ಪ್ರಾಚೀನ ಕರ್ನಾಟಕ ' ಕನ್ನಡ - ಇಂಗ್ಲಿಷ್ ಷಾಣ್ಮಾಸಿಕ ಪತ್ರಿಕೆಗೂ ಅವರು ಸಂಪಾದಕರಾಗಿದ್ದರು.

ಜಯಕರ್ನಾಟಕ ಪತ್ರಿಕೆಯನ್ನು ೧೯೨೨ರಿಂದ ೧೯೨೯ರ ವಗೆಗೆ ಏಳು ವರುಷ ನಡೆಯಿಸಿ ಅದನ್ನು ಗೆಳೆಯರ ಗುಂಪಿಗೆ ವಹಿಸಿಕೊಟ್ಟರು.

೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ೧೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯ ಷಟ್‌ಸಾಂವರಿಕೋತ್ಸವ ವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ನೆಯ ಉತ್ಸವ ೧೯೩೬ರಲ್ಲಿ ಬರುವುದರಲ್ಲಿತ್ತು. ಏಳು ವರುಷಗಳ ಮೊದಲೆ ಅದರ ಹೊಳಹನ್ನು ಹಾಕಲಾಯಿತು. ಕೆಲಸಕ್ಕೆ ಮೂರ್ತಸ್ವರೂಪಕೊಡಲು ೧೯೩೨ರಲ್ಲಿ ವಿಜಯನಗರ ಸಾಮ್ರಾಜ್ಯ ಉತ್ಸವ ಸಮ್ಮೇಳನವು ಹುಬ್ಬಳ್ಳಿಯಲ್ಲಿ ನಡೆಯಿತು. ಅದರ ಅಧ್ಯಕ್ಷತೆಯನ್ನು ಡಿ.ವಿ. ಗುಂಡಪ್ಪನವರು ವಹಿಸಿದ್ದರು. ಆಲೂರು ವೆಂಕಟರಾಯರು ಉತ್ಸವದ ಯೋಜನೆಯನ್ನು ಸಿದ್ಧಪಡಿಸಿದರು. ಒಂದು ಲಕ್ಷ ರುಪಾಯಿಗಳ ವೆಚ್ಚದ ಅಂದಾಜಿಗೆ ಸಭೆಯು ಒಪ್ಪಿಗೆ ನೀಡಿತು. 'ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಸಮಿತಿ' ಇದಕ್ಕಾಗಿಯೇ ಸ್ಥಾಪಿತವಾಯಿತು. ಹೊಸಪೇಟೆಯಲ್ಲಿ ಸಮಿತಿಯ ಶಾಖಾ ಕಚೇರಿಯನ್ನು ತೆರೆಯಲಾಯಿತು.

ನಂತರ ಬೆಳಗಾವಿ, ಹುಬ್ಬಳ್ಳಿ, ಗದಗ, ಧಾರವಾಡ, ಬಾಗಲಕೋಟೆ, ಅಥಣಿ, ರಾಯಚೂರು ಮುಂಬಯಿ, ಸೊಲ್ಲಾಪುರ, ಅಕ್ಕಲಕೋಟೆ, ಬಿಜಾಪುರ, ಮೊದಲಾದ ಊರುಗಳಿಗೆ ಸ್ವತಃ ಹೋಗಿ ಪ್ರಚಾರ ಮಾಡಿ ಅಲ್ಲಿಯೂ ಶಾಖೆಗಳನ್ನು ತೆರೆದರು. ಉತ್ಸವದ ಕಾರ್ಯ ಭಲದಿಂದ ನಡೆಯಿತು.

ಉತ್ಸವವನ್ನು ಹಂಪಿಯಲ್ಲಿ ನಡೆಸುವುದೆಂದು ತೀರ್ಮಾನಿಸಲಾಗಿತ್ತು. ೧೯೩೬ರ ಡಿಸೆಂಬರ್ ೨೫ರಿಂದ ನಾಲ್ಕು ದಿನಗಳವರೆಗೆ ಅದ್ದೂರಿಯಾಗಿ ನಡೆಯಿತು. ಸುಮಾರು ೫೦ ಸಾವಿರ ಜನ ಸೇರಿದ್ದರು. ಅದು ಶತಮಾನಗಳ ಮೊದಲಿನ ಸಾಮ್ರಾಜ್ಯದ ವೈಭವವವ್ನು ನೆನಪಿಗೆ ತರುವಂತಿತ್ತು. ಹಂಪಿಯ ಉತ್ಸವದ ಅಧ್ಯಕ್ಷತೆಯನ್ನು ಸಂಕೇಶ್ವರದ ಜಗದ್ಗುರು ಶಂಕರಾಚಾರ್ಯರು ವಹಿಸಿದ್ದರು. ಸೊಂಡೂರು, ಆನೆಗುಂದಿ, ಸಂಸ್ಥಾನಗಳ ಅಧಿಪತಿಗಳೂ ಭಾಗವಹಿಸಿದ್ದರು. ಮೈಸೂರು ಮಹಾರಾಜರು ಒಂದು ಸಾವಿರ ರುಪಾಯಿ ಕಾಣಿಕೆ ಮತ್ತು ತಮ್ಮ ಪ್ರತಿನಿಧಿಯೊಬ್ಬರನ್ನು ಉತ್ಸವಕ್ಕೆ ಕಳಿಸಿದ್ದರು. ಜೊತೆಗೆ ಮೈಸೂರಿನಲ್ಲೂ ವಿಜಯನಗರ ಸಾಮ್ರಾಜ್ಯೋತ್ಸವದ ಸ್ಮಾರಕ ಸಮಾರಂಭವನ್ನು ಏರ್ಪಡಿಸಿದ್ದರು. ಅದರಲ್ಲಿ ಅಂದಿನ ಯುವರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರವರೂ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯೋದಯವಾಯಿತು. ೧೯೦೫ರಲ್ಲಿ ಹಂಪೆಯ ಪ್ರಥಮ ದರ್ಶನದಲ್ಲಿ ಪಡೆದ ಅದ್ಭುತ ಅನುಭವವನ್ನುಮುಂದೆ ೫೦ ವರುಷಗಳ ನಂತರ ರಾಜ್ಯೋದಯದ ದಿನದಂದು ಹಂಪಿಯಲ್ಲಿ ಅವರು ನೆನೆದುಕೊಂಡರು. ಅದು

ಅವರಿಗೆ ಜೀವನದಲ್ಲಿ ಮಹಾ ಕ್ಷಣವಾಗಿತ್ತು. ಅವರೆ ಹೇಳಿದಂತೆ, 'ನಾನು ಪೂಜಿಸಿದ್ದು ಕರ್ನಾಟಕ ದೇವಿಯ ಒಡಮೂಡಿದ ಸದ್ದಾ ಮುದ್ದಾ ಮೂರ್ತಿ. ನಾನು ಸ್ನಾನ ಮಾಡಿದ್ದು ಉಗಮದಲ್ಲಿ ಹರಿದ್ವಾರದ ಗಂಗೆಯಲ್ಲಿ , ಕರ್ನಾಟಕ ದೇವಿಯ ಮಂದಿರದ ಮಹಾದ್ವಾರದಲ್ಲಿ ಮಾತ್ರವೇ ನನ್ನ ಪ್ರವೇಶ ಆಗಿದೆ. ಅದರ ಪ್ರಾಕಾರವನ್ನು ದಾಟಿ, ಗರ್ಭಗುಡಿಯಲ್ಲಿ ಆವಳ ಸುಂದರ ಮೂರ್ತಿಯ ದರ್ಶನ ತಕ್ಕೊಳ್ಳುವ ಪುಣ್ಯ ಮುಂದಿನವರದು'' ಎಂದಿದ್ದಾರೆ.

ಈ ಐವತ್ತು ವರುಷಗಳಲ್ಲಿ ಗರ್ಭಗುಡಿಯಲ್ಲಿಯ ಕರ್ನಾಟಕ ಮಾತೆಯ ಸುಂದರ ಮೂರ್ತಿಯ ದರ್ಶನದ ಪುಣ್ಯವನ್ನು ಎಷ್ಟು ಜನರು ಪಡೆದಿದ್ದಾರೆ ಅವರ ಆ ಜೀವನದ ಉಪಾಸನೆಯ ಫಲ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಐದುಕೋಟಿಗೂ ಮೀರಿದ ಕನ್ನಡ ನಾಡವರೇ ಹೇಳಬೇಕು !

✤ ✤ ✤ ✤

ಅಧ್ಯಾಯ -೧೮

• ಮರಾಠಿಗರಿಗೆ ಕನ್ನಡದ ಚರಿತ್ರೆ

ಕಳೆದ ಶತಮಾನದ ಪ್ರಾರಂಭದಲ್ಲಿ ಕನ್ನಡದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಮತ್ತು ಧರ್ಮಗಳ ಕುರಿತು ಚಿಂತನೆ ಮಂಥನ ಮತ್ತು ಸಂಶೋಧನೆ ಮಾಡಿದ ವ್ಯಕ್ತಿಗಳಲ್ಲಿ ದಿವಂಗತ ನಾರಾಯಣ ಶ್ರೀನಿವಾಸ ರಾಜಪುರೋಹಿತರ ಹೆಸರು ಮೊದಲಿಗೆ ಬರುತ್ತದೆ. ಅವರು ಇಂದಿನ ಹಾವೇರಿ ಜಿಲ್ಲೆಯ ಅಗಡಿಯಲ್ಲಿ ದಿನಾಂಕ ೧-೭-೧೮೮೭ರಂದು ಹುಟ್ಟಿದರು. ದಿನಾಂಕ ೨೪-೮-೧೯೫೩ ರಂದು (ಶ್ರಾವಣ ಶುದ್ಧ ಪೌರ್ಣಿಮೆ) ಧಾರವಾಡದಲ್ಲಿ ತೀರಿಹೋದರು.

ಕಲಿತದ್ದು ಕೇವಲ ಮುಲ್ಕಿ ಪರೀಕ್ಷೆಯವರೆಗೆ ಮಾತ್ರ. ಅಂದರೆ ಇಂದಿನ ಕನ್ನಡ ಏಳನೆಯ ವರ್ಗದವರೆಗೆ ! ಆದರೆ ಸಾಧಿಸಿದ್ದು ಊಹೆಗೆ ನಿಲುಕದ್ದು. ಇಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತ ಬಂದ ಎರಡು ಸಾವಿರ ವರುಷಗಳಷ್ಟು ಹಳೆಯದಾದ ಕನ್ನಡ ನಾಡು, ನಾಡವರು, ಭಾಷೆ, ಸಂಸ್ಕೃತಿ ರಾಜಮನೆತನಗಳ ಪ್ರಾಚೀನತೆಯನ್ನು ಮೊಟ್ಟ ಮೊದಲಿಗೆ ಒಂದೆಡೆ ಸಂಕಲಿಸಿ ಕನ್ನಡ ನಾಡವರಿಗೆ ಕನ್ನಡ ಭಾಷೆಯಲ್ಲಿ ಮತ್ತು ಮರಾಠಿ ಜನರಿಗೆ ಅವರ ಭಾಷೆಯಲ್ಲೇ ಹೇಳಿದವರು ನಾ. ಶ್ರೀ ರಾಜಪುರೋಹಿತರು. ಕನ್ನಡಕ್ಕೆ ಇತಿಹಾಸವಿಲ್ಲ, ಸಾಹಿತ್ಯವಿಲ್ಲ ಅದು ಏನಿದ್ದರೂ ಮರಾಠಿಯ ನೆರಳಲ್ಲಿ ಬೆಳೆದ ಒಂದು ಜನಾಂಗ ಎಂದು ಮರಾಠಿಯ ಖ್ಯಾತನಾಮ ಸಾಹಿತಿಗಳು, ಇತಿಹಾಸಕಾರರು ಹೇಳುತ್ತಿದ್ದರು. ಅಂಥ ದಿನಗಳಲ್ಲಿ ೧೯೧೨ರಷ್ಟು ಹಿಂದೆ ಪುಣೆಯ ಕೇಸರಿ ಪತ್ರಿಕೆಯಲ್ಲಿ 'ಮಹಾರಾಷ್ಟ್ರ ವ ಕರ್ನಾಟಕ' ಎಂಬುದಾಗಿ ಆರು ಲೇಖನಗಳನ್ನು ಬರೆದರು. ಪಂಡರಪುರ ಮತ್ತು ಅಲ್ಲಿಯ ವಿಠಲನು ಕನ್ನಡಕ್ಕೆ ಸಂಬಂಧಿಸಿದವನು ಎಂದು ಸಾಧಾರಪೂರ್ವಕವಾಗಿ ಮರಾಠಿಗರಿಗೆ ಅವರ ಭಾಷೆಯಲ್ಲೇ ತಿಳಿಸಿ ಹೇಳಿದರು. ಮರಾಠಿಗರು ತಲೆ ತುರಿಸಿಕೊಳ್ಳುವಂತೆ ಮಾಡಿದರು. ಆನಂತರ ಅವರು ಜೀವಿಸಿರುವವರೆಗೆ ಸುಮಾರು ನಲ್ವತ್ತು ವರುಷಗಳವರೆಗೆ ಕನ್ನಡ ನಾಡು ನುಡಿಯ ಬಗೆಗೆ ಏನೆಲ್ಲ ಶೋಧಿಸಿದರು ಬರೆದರು.

ಅಂಥ ಸಾಧನೆಯನ್ನು ಮಾಡಲು ಪರಿಕರಗಳೂ ಇರಲಿಲ್ಲ. ಆದರೆ ಪರಿಸರ ಇತ್ತು. ಎಲ್ಲೆಡೆ ಕನ್ನಡದ ಬಗ್ಗೆ ಅಭಿಮಾನ, ಸಾಹಿತ್ಯ, ಇತಿಹಾಸಗಳ ಹುಡುಕಾಟ ನಡೆದಿತ್ತು. ಧಾರವಾಡ ಜಿಲ್ಲೆಗೆ ಪ್ರಥಮರಾಗಿ ಮುಲ್ಕಿ ಪರೀಕ್ಷೆಯನ್ನು ಪಾಸಾದ ಮೇಲೆ ಮೂರು ವರುಷ ಶಿಕ್ಷಕ ವೃತ್ತಿಯ ತರಬೇತಿಗೆ ಹೋದರು. ಅಂದಿನ ದಿನಗಳಲ್ಲಿ ಶಿಕ್ಷಕ ವೃತ್ತಿಗೆ ಹೋಗುವುದು ಒಂದು ಗೌರವದ ವೃತ್ತಿಯಾಗಿತ್ತು. ತರಬೇತಿ ಮುಗಿದ ನಂತರ ೧೯೦೫ರಲ್ಲಿ ಕನ್ನಡ ಶಾಲೆಯ ಶಿಕ್ಷಕರಾಗಿ ನೌಕರಿ ಪ್ರಾರಂಭಿಸಿದರು. ಅದನ್ನೇ

ಮುಂದುವರೆಸಿದ್ದರೆ ತುತ್ತುಅನ್ನಕ್ಕಾಗಿ ಜೀವನದುದ್ದಕ್ಕೂ ಪರಿತಪಿಸಬೇಕಾಗುತ್ತಿರಲಿಲ್ಲ. ಆದರೆ ಹಾಗೆ ಮುಂದುವರಿದಿದ್ದರೆ ಕನ್ನಡಕ್ಕೊಬ್ಬ ಶ್ರೇಷ್ಠ ಸಂಶೋಧಕ ಮತ್ತು ಕನ್ನಡ - ಕರ್ನಾಟಕದ ಬಗ್ಗೆ ಕಳಕಳಿಯಿಂದ ದುಡಿಯುವವರು ದೊರೆಯುತ್ತಿದ್ದರೋ ಇಲ್ಲವೋ ಎಂಬುದು ಬೇರೆ ಪ್ರಶ್ನೆ.

ಅದಾಗ ದೇಶದಲ್ಲಿ ರಾಜಕೀಯ ಜಾಗೃತಿಯ ದಿನಗಳು ಲೋಕಮಾನ್ಯ ಟಿಳಕರು ಮತ್ತು ಅವರ ಕೇಸರಿ ಪತ್ರಿಕೆ ಉತ್ತರ ಕರ್ನಾಟಕದಲ್ಲಿ ಬಹುತೇಕವಾಗಿ ಎಲ್ಲರಿಗೂ ಪರಿಚಿತ ಹೆಸರುಗಳು. ತರುಣ ವಯಸ್ಸಿನ ಪ್ರತಿಭಾವಂತ ರಾಜಪುರೋಹಿತರು, ಅವರ ಪ್ರಭಾವದಿಂದ ಹೊರಗೆ ಉಳಿಯುವುದು ಸಾಧ್ಯವೇ ಇರಲಿಲ್ಲ. ದೇಶದ ಪಾರತಂತ್ರ್ಯ ಬ್ರಿಟಿಷರ ದಬ್ಬಾಳಿಕೆ, ಟಿಳಕರ ನೇರ ನುಡಿಗಳು, ಕೇಸರಿ ಪತ್ರಿಕೆಯಲ್ಲಿ ಬರುವ ಸ್ಫುಟ ಲೇಖನಗಳು ರಾಜಪುರೋಹಿತರ ಮೇಲೆ ತುಂಬಾ ಪ್ರಭಾವವನ್ನು ಬೀರಿದವು. ಅಷ್ಟು ಹೊತ್ತಿಗೆ ವಂಗ ಭಂಗ ಚಳವಳಿ ಪ್ರಾರಂಭ ವಾಯಿತು. ರಾಜಪುರೋಹಿತರು ಪತ್ರಿಕೆಗಳಿಗೆ ತಮ್ಮ ಅನಿಸಿಕೆಗಳನ್ನು ಬರೆಯ ಹತ್ತಿದರು. ಅಂಥದ್ದೊಂದು ಅನಿಸಿಕೆ ಆಗಿನ ಸರಕಾರದ ದೃಷ್ಟಿಯಲ್ಲಿ ಅಪರಾಧವಾಯಿತು. ರಾಜಪುರೋಹಿತರಿಗೆ ಕ್ಷಮೆ ಕೇಳಲು ಅಧಿಕಾರಿಗಳು ಒತ್ತಡ ಹೇರಿದರು. ಸ್ವಾಭಿಮಾನಿ, ದೇಶಾಭಿಮಾನಿ ರಾಜಪುರೋಹಿತರು 'ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ' ಎಂದರು. ಸರಿ ನೌಕರಿಯಿಂದ ತೆಗೆದರು. ಮೂರು ವರುಷಗಳ ತರಬೇತಿಯ ಹಣವನ್ನು ಹಿಂತಿರುಗಿಸಲು ಸರ್ಕಾರಿ ಆದೇಶ ಬಂದಿತು. 'ಕೆಲಸವನ್ನು ಬಿಟ್ಟಿದ್ದು ನಾನಲ್ಲ, ಬಿಡಿಸಿದ್ದು ನೀವು, ಹಣವನ್ನು ಹಿಂತಿರುಗಿಸುವ ಪ್ರಶ್ನೆ ಇಲ್ಲ' ಎಂದರು. ಇದು ನಡೆದದ್ದು ೧೯೦೮-೦೯ರಲ್ಲಿ. ಆಗ ಅವರಿಗೆ ಇಪ್ಪತ್ತರ ಹರೆಯ. ಮತ್ತೆ ಅವರು ಜೀವಿಸುವವರೆಗೆ ಸರ್ಕಾರಿ ನೌಕರಿಯತ್ತ ಕಣ್ಣು ಹಾಯಿಸಲಿಲ್ಲ.

ಕರ್ನಾಟಕದ ಕುಲಪುರೋಹಿತರೆಂದು ಹೆಸರಾದ ಆಲೂರು ವೆಂಕಟರಾಯರು ಆ ದಿನಗಳಲ್ಲಿ ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಯೊಂದನ್ನು ನಡೆಸುತ್ತಿದ್ದರು. ಅಲ್ಲಿ ಶಿಕ್ಷಕರೆಂದು ಕೆಲಸ ಮಾಡಲು ಆಲೂರರನ್ನು ಕಂಡರು. ಅದುವೆ ಉಭಯತರ ಮೊದಲ ಭೆಟ್ಟಿಯಾಗಿತ್ತು. ಹುಡುಗನಂತಿದ್ದ ರಾಜಪುರೋಹಿತರನ್ನು ಕಂಡು ಆಲೂರರು ಕಲಿಯಬೇಕೆಂದು ಬಂದಿರಬೇಕು ಎಂದುಕೊಂಡರಂತೆ.

''ಕ್ಲಾಸಿಗೆ ಸೇರಬೇಕೆಂದಿರುವಿರಾ ''ಎಂದು ಕೇಳಿದರು.

''ಹೌದು, ಕಲಿಯಲಿಕ್ಕಲ್ಲ, ಕಲಿಸಲು!'' ಎಂದರಂತೆ ರಾಜಪುರೋಹಿತರು.

ಆ ದಿನದಿಂದ ಅವರು ಅಲ್ಲಿ ಶಿಕ್ಷಕರಾಗಿ ಸೇರಿಕೊಂಡರು. ಅವರಿಂದ ಕಲಿತವರಲ್ಲಿ ವರಕವಿ ಬೇಂದ್ರೆ ಅವರೂ ಒಬ್ಬರು. ಸರಕಾರದ ದಬ್ಬಾಳಿಕೆಯಿಂದ ಶಾಲೆ ಹಳ್ಳ ಕೂಡಿದಾಗ ರಾಜಪುರೋಹಿತರು ಮತ್ತೆ ಕೆಲಸವಿಲ್ಲದವರಾದರು. ಆದರೆ ಆಲೂರು ವೆಂಕಟರಾಯರ ಸಂಪರ್ಕದಿಂದ ಮತ್ತು ಅವರ ತಂದೆ

ಭೀಮರಾಯರೊಂದಿಗಿನ ಚರ್ಚೆಯಿಂದಾಗಿ ರಾಜಪುರೋಹಿತರಿಗೆ ಕರ್ನಾಟಕದ ಗತವೈಭವದ ಹುಚ್ಚು ಹಿಡಿಯಿತು. ಮಹಾರಾಷ್ಟ್ರದ ಇತಿಹಾಸದತ್ತ ಒಲವು ಬೆಳೆದಿತ್ತು. ಜ್ಞಾನಲಾಲಸೆಯಿಂದಾಗಿ ತಮ್ಮ ಬಹುತೇಕ ಸಮಯವನ್ನು ಓದುವುದರಲ್ಲಿಯೇ ಕಳೆಯಹತ್ತಿದರು. ಅದರ ಪ್ರತಿಫಲವಾಗಿ ಅವರ ಮೊದಲ ಕೃತಿ 'ಧಾನ ಧರ್ಮ ಪದ್ಧತಿ' ಹೊರಬಂದಿತು. ಆಲೂರು ವೆಂಕಟರಾಯರು ಅವರ ಬಗ್ಗೆ ಹೇಳುತ್ತ 'ನೌಕರಿಹೋದದ್ದರ ಬಗ್ಗೆ ಅವರು ಧೃತಿಗೆಡಲಿಲ್ಲ. ಅವರ ಲಗ್ನವಾಗಿದ್ದಿಲ್ಲ. ಬ್ರಹ್ಮಚರ್ಯೆಯಿಂದ ಇದ್ದರು. ಏನಾದರೂ ಧರ್ಮಸೇವೆ ಅಥವಾ ದೇಶಸೇವೆ ಮಾಡಬೇಕೆಂದು ಯೋಚಿಸಿದರು. ನಮ್ಮ ಮನೆಯೇ ಅವರ ಮನೆ, ಹೆಸರಿಗೆ ಮಾತ್ರ ಬೇರೆ ಕಡೆ ಊಟ ಮಾಡಿ ನಮ್ಮ ಮನೆಯಲ್ಲಿದ್ದ ನನ್ನ 'ಭಾರತ ಪುಸ್ತಕಾಲಯ'ವೆಂಬ ಗ್ರಂಥ ಭಂಡಾರದೊಳಗಿನ ಕನ್ನಡ ಮರಾಠಿ ಪುಸ್ತಕಗಳನ್ನೆಲ್ಲ ಓದಿಬಿಟ್ಟರು. ೧೯೦೭ನೆಯ ಇಸ್ವಿಯಲ್ಲಿ ನಾನು ವಿದ್ಯಾರಣ್ಯರ ಚರಿತ್ರೆಯನ್ನು ಬರೆದಿದ್ದೆ. ಅವರಿಗೂ ಇತಿಹಾಸದ ಕಡೆಗೆ ಒಲವು ಹುಟ್ಟಿತು. ಅದರಲ್ಲಿಯೂ ಸಂಶೋಧನೆ ಕಾರ್ಯವು ಅವರ ಮನಸ್ಸನ್ನು ಪೂರಾ ಸೆಳೆದುಬಿಟ್ಟಿತು.''

ಜ್ಞಾನದ ಹಸಿವು ಇದ್ದವನಿಗೆ ಹೊಟ್ಟೆಯ ಹಸಿವಿನ ಬಗ್ಗೆ ಲಕ್ಷ್ಯವಿರುವುದಿಲ್ಲ. ಈ ದಿನಗಳಲ್ಲಿ ರಾಜಪುರೋಹಿತರ ಓದು ಇಬ್ಬಗೆಯಾಗಿತ್ತು. ಒಂದು ಕಡೆಗೆ ಅಂದು ಪ್ರಚಲಿತದಲ್ಲಿದ್ದ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಆದಾಗ ಆಧ್ಯಾತ್ಮಿಕ ರಂಗದಲ್ಲಿ ಉದಯಿಸುತ್ತಿದ್ದ ಅರವಿಂದ ಘೋಷರ ವಿಚಾರಗಳ ಜೊತೆಗೆ ತಾವು ನಂಬಿಕೊಂಡು ಬಂದ ಕಾಣ್ವ ಮತಧರ್ಮ, ತತ್ವಜ್ಞಾನಗಳ ಅಭ್ಯಾಸ ನಡೆಯಿತು. ಇನ್ನೊಂದು ಕಡೆಗೆ ಕರ್ನಾಟಕವನ್ನು ಹುಡುಕುತ್ತಿದ್ದರು. ಅಂದಿನ ದಿನಗಳೆಂದರೆ ಇಡೀ ದೇಶದಲ್ಲಿಯೇ ಒಂದು ಬಗೆಯ ಮರಾಠಿ ಪ್ರಾಬಲ್ಯದ ದಿನಗಳು. ರಾಜಪುರೋಹಿತರು ಇದ್ದ ಮುಂಬಯಿ ಕರ್ನಾಟಕವು ದಕ್ಷಿಣ ಮಹಾರಾಷ್ಟ್ರ ಎಂದೇ ಹೆಸರಾಗಿತ್ತು. ಇಡೀ ಭರತಖಂಡದಲ್ಲಿ ಇತಿಹಾಸ / ಚರಿತ್ರೆ ಇದ್ದ ರಾಜ್ಯಗಳೆಂದರೆ ಪೂರ್ವದಲ್ಲಿ ಬಂಗಾಲ, ಉತ್ತರದಲ್ಲಿ ಪಂಜಾಬ ಮತ್ತು ಪಶ್ಚಿಮದಲ್ಲಿ ಮಹಾರಾಷ್ಟ್ರ ಮಾತ್ರ. ಉಳಿದವುಗಳಿಗೆ ಚರಿತ್ರೆಯೇ ಇಲ್ಲ ಎಂಬಂತಿದ್ದ ಲಾಲ, ಬಾಲ, ಪಾಲರ ದಿನಗಳು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿ ಇದ್ದವರೂ ಈ ರಾಜ್ಯದ ಜನಗಳೆ. ಕಾವ್ಯ, ಸಾಹಿತ್ಯ ಮತ್ತು ಸಂಗೀತಗಳಲ್ಲಿ ಬಂಗಾಳ, ಮಹಾರಾಷ್ಟ್ರಗಳೇ ಎರಡು ರಾಜ್ಯಗಳು ಎಂಬ ಅನಿಸಿಕೆ ರಾಜ್ಯಾದ್ಯಂತ ಇತ್ತು. ಮಹಾರಾಷ್ಟ್ರದ ಪುಣೆಯಲ್ಲಿ ಭಾರತ ಇತಿಹಾಸ ಸಂಶೋಧಕ ಮಂಡಳವು ಪ್ರಾರಂಭವಾಗಿತ್ತು. ಹಿಂದೂ ರಾಷ್ಟ್ರ ಪುನರುತ್ಥಾನದ ಅಧಿನಾಯಕ ಶಿವಾಜಿಯ ಅಭ್ಯಾಸ, ಆತನ ನಾಯಕತ್ವ ಭಾರತದಾದ್ಯಂತ ದುಮುದುಮಿಸುತ್ತಿತ್ತು. ಹೆಸರಿಗೆ ಭಾರತ ಇತಿಹಾಸ ಸಂಶೋಧಕ ಮಂಡಳ, ಅಭ್ಯಾಸ ಮಹಾರಾಷ್ಟ್ರ ಇತಿಹಾಸ ಸಂಶೋಧನಕ್ಕೆ ಬಹುತೇಕ ಮೀಸಲಾಗಿತ್ತು.

ಕರ್ನಾಟಕಕ್ಕೆ ಇತಿಹಾಸವೇ ಇಲ್ಲ, ಸಾಹಿತ್ಯವಿಲ್ಲ, ಸಂಗೀತವಿಲ್ಲ ಎಂಬಷ್ಟು ಕೀಳರಿಮೆ ಕನ್ನಡಿಗರಲ್ಲಿ ಮನೆ ಮಾಡಿತ್ತು. ಮರಾಠೀ ಪ್ರಭಾವದ ಮುಂಬಯಿ ಕರ್ನಾಟಕದ ಜಿಲ್ಲೆಗಳಲ್ಲಿ ಮರಾಠಿಗರ ಅಟ್ಟಹಾಸ ಎಲ್ಲೆ ಮೀರಿತ್ತು. ಧಾರವಾಡ ಬಿಜಾಪುರ ಜಿಲ್ಲೆಗಳಲ್ಲಿ ಪ್ರಾದೇಶಿಕ ಭಾಷೆಯ ಶಾಲೆಗಳನ್ನು ತೆರೆಯಬೇಕು ಎಂದು ಅಂದಿನ ಬ್ರಿಟಿಶ ಸರಕಾರ ಆದೇಶವನ್ನು ಹೊರಡಿಸಿದಾಗ ಇಲ್ಲಿ ಮರಾಠಿ ಶಾಲೆಯನ್ನು ಪ್ರಾರಂಭಿಸಬೇಕು ಎಂದು ಹುನ್ನಾರ ನಡೆಯಿತು. ಆ ದಿನಗಳಲ್ಲಿಯೇ ಮಹಾರಾಷ್ಟ್ರದ ಮರಾಠಿ ದಿನ ಪತ್ರಿಕೆಯ ಸಂಪಾದಕರಾದ ನ.ಚಿ. ಕೇಳಕರ ಅವರು ಮರಾಠಿ ಭಾಷೆಯ ಇತಿಹಾಸದ ಬಗ್ಗೆ ಲೇಖನಗಳನ್ನು ಆಮಂತ್ರಿಸಿದ್ದರು. ಆ ಹೊತ್ತಿಗಾಗಲೇ ಮಹಾರಾಷ್ಟ್ರ ಇತಿಹಾಸದಲ್ಲಿ ಕರ್ನಾಟಕದ ಇತಿಹಾಸದ ಬಗ್ಗೆ ಸಾಕಷ್ಟು ತಪ್ಪು ಅಭಿಪ್ರಾಯಗಳನ್ನು ಡಾ. ಭಾಂಡಾರಕರ ಅಂಥವರೇ ಮಾಡಿದ್ದನ್ನು ರಾಜಪುರೋಹಿತರು ಗಮನಿಸಿದ್ದರು. ಈಗ ಮರಾಠಿ ಭಾಷೆಯ ಇತಿಹಾಸದಲ್ಲಿ ಕನ್ನಡ ಭಾಷೆ ಕರಗುವುದು ನಿಶ್ಚಿತ ಎಂದು ತಿಳಿದರೋ ಏನೋ, ರಾಜಪುರೋಹಿತರು ಮರಾಠಿಯಲ್ಲೆ ವಾಚಕರ ಪತ್ರ ವಿಭಾಗದಲ್ಲಿ ಲೇಖನಗಳನ್ನು ಬರೆಯತೊಡಗಿದರು. ಸಂಪಾದಕರು ಈ ಲೇಖನಗಳಿಗೆ 'ಮಹಾರಾಷ್ಟ್ರ ವ ಕರ್ನಾಟಕ' ಎಂಬುದಾಗಿ ತಲೆಬರಹಕೊಟ್ಟು ಅವುಗಳನ್ನು ಪ್ರಕಟಿಸಿದರು. ೧೯೧೨ ಮತ್ತು ೧೯೧೪ರ ಮಧ್ಯೆ ರಾಜಪುರೋಹಿತರು ಒಟ್ಟು ಏಳು ಲೇಖನಗಳನ್ನು ಬರೆದರು.

ಈ ಲೇಖನಗಳಲ್ಲಿ ರಾಜಪುರೋಹಿತರು ಪ್ರಾಚೀನ ಕರ್ನಾಟಕದ ಗಡಿಗಳನ್ನು ದಕ್ಷಿಣ ಭಾರತದಲ್ಲಿ ಆಳಿದ ಸುಪ್ರಸಿದ್ಧ ಕನ್ನಡ ರಾಜಮನೆತನಗಳು, ಅವರ ಕನ್ನಡತನ, ಅಂದಿನ ಕಾಲದಲ್ಲಿ ನಿರ್ಮಿತಿಯಾದ ಕನ್ನಡ ಸಾಹಿತ್ಯ ಮತ್ತು ಮರಾಠಿ ಸಾಹಿತ್ಯದ ಮೇಲೆ ಆದ ಕನ್ನಡದ ಪ್ರಭಾವ ಇತ್ಯಾದಿಗಳನ್ನು ವಿವರಿಸಿದರು. ಮರಾಠಿಗರ ಬೈಬಲ್ ಎನಿಸಿದ ಜ್ಞಾನೇಶ್ವರಿಯಲ್ಲಿ ಬಂದ ಕನ್ನಡ ಶಬ್ದಗಳ ಪಟ್ಟಿಯನ್ನೇ ಕೊಟ್ಟರು. ಆನಂತರದ ಈ ನೂರು ವರುಷಗಳಲ್ಲಿ ಕನ್ನಡ ಮರಾಠಿಯ ಅನೇಕ ವಿದ್ವಾಂಸರು ಜ್ಞಾನೇಶ್ವರಿಯಲ್ಲಿ ಬಂದ ಕನ್ನಡ ಶಬ್ದಗಳ ಬಗ್ಗೆ ಹೊರೆಗಟ್ಟಲೆ ಬರೆದಿದ್ದಾರೆ. ಆದರೆ ಅದನ್ನು ಮೊದಲು ಕಂಡು ತೋರಿಸಿದವರು ರಾಜಪುರೋಹಿತರು ಎಂಬುದು ವಿಶೇಷವಾಗಿದೆ.

ಮಹಾರಾಷ್ಟ್ರದಿಂದ ಕರ್ನಾಟಕದ ಇತಿಹಾಸವನ್ನು ಬೇರ್ಪಡಿಸಿದುದೇ ಈ ಲೇಖನಗಳ ಮುಖ್ಯ ಸಾಧನೆಯಾಗಿದ್ದಿತು. ಮರಾಠಿಗರು ತಾವು 'ಮಹಾರಾಷ್ಟ್ರ' ದವರೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದರೂ, ಆ ಮಹಾರಾಷ್ಟ್ರವು ಕರ್ನಾಟಕವೇ ಆಗಿದ್ದಿತು. ಕರ್ನಾಟಕಕ್ಕೆ ಪರ್ಯಾಯವಾಗಿ ಮಹಾರಾಷ್ಟ್ರ ಎಂಬ ಹೆಸರು ಎಂಬ ಹೆಸರು ಇದ್ದಿತು ಎಂಬುದನ್ನು ಸಾಧಾರಪೂರ್ವಕವಾಗಿ ತೋರಿಸಿದರು. ರಾಷ್ಟ್ರ ಮಹಾರಾಷ್ಟ್ರ ಮತ್ತು ಮಹಾಲೋಕ ಎಂಬುದರ ವ್ಯಾಖ್ಯೆಯನ್ನು ಅಂಕಿ ಸಂಖ್ಯೆಗಳೊಂದಿಗೆ ನಮೂದಿಸಿದರು.

ಲೇಖನಗಳು ಪ್ರಕಟವಾಟದಂತೆಲ್ಲ ರಾಜಪುರೋಹಿತ್ತರಿಗೆ ಧೈರ್ಯ ಬಂದಿತ್ತು. ಇದೀಗ ಮಹಾರಾಷ್ಟ್ರದ ಕುಲದೈವವೆಂದೇ ತಿಳಿದ ಫಂಡರಪುರದ ವಿಠಲನು ಕರ್ನಾಟಕದವನು ಎಂದು ಹೇಳಿದರು.

ಮರಾಠಿ ಭಕ್ತ ಕವಿಗಳು ತಮ್ಮ ಅಭಂಗಗಳಲ್ಲಿ ಹೇಳಿದ್ದನ್ನು ಎತ್ತಿ ತೋರಿಸಿದರು. 'ಫಂಡರಪುರ ವ ವಿಠಳಭಕ್ತಿ' ಎಂಬ ತಮ್ಮ ಮರಾಠಿ ಲೇಖನದಲ್ಲಿ ಪಾಂಡುರಂಗ ಇದು ಗ್ರಾಮ್ಯ ಶಬ್ದ. 'ಪಂಡರಿಗೆ' ಎಂಬ ಕನ್ನಡ ಶಬ್ದದ ಮೇಲಿನಿಂದ ಅಲ್ಲಿಯ ದೇವರು ಪಾಂಡುರಂಗನಾದನು. ಕ್ರಿ.ಶ. ಸು. ೧೩೦೦ ನೆಯ ಶತಮಾನ್ನದ 'ಚೌಂಡರಸ' ಕವಿಯ ದಶಕುಮಾರ ಚರಿತ್ರೆಯಲ್ಲಿ ಬಂದ ಪಂಢರಪುರಕ್ಕೆ ಫಾಂಡುರಂಗಪುರ ಎಂಬ ಹೆಸರಿದ್ದದ್ದನ್ನು ಎತ್ತಿ ತೋರಿಸ್ಸಿದರು. ಫಂಢರಪುರ್ರ ಪಾಂಡುರಂಗ ಊರು ಊರಿನ ದೇವರು ಎಂಬುದಾಗಿ ಕವಿಯು ಕೊಟ್ಟಿದ್ದಾನೆಂದು ಹೇಳಿದರು.

ಹೀಗೆ ವಿಠಲನನ್ನು ಕರ್ನಾಟಕದ ಧಾರ್ಮಿಕ ಇತಿಹಾಸ ಪೀಠದ ಮೇಲೆ ಪುನಃ ಪ್ರತಿಷ್ಠಾಪಿಸಿದರು. ಅಂದಿನ ದಿನಗಳಲ್ಲಿ ಮಾರಾಟಿಗರಿಗೆ ರಾಜಪುರೋಹಿತರ ವಿಚಾರಗಳು ಅಚ್ಚ ಹೊಸದಾಗಿದ್ದವು. ಅವರ 'ಅಹಂ' ಗೆ ಪೆಟ್ಟು ಬಿದ್ದಿತು. ಕನ್ನಡಿಗರು ಕೆಲವು ಶತಮಾನಗಳ ಮೊದಲು ತಮ್ಮನ್ನು ಆಳಿದರು ಎಂಬ ವಿಚಾರ ಅವರಿಗೆ ರುಚಿಸಲಿಲ್ಲ. ಅವರೆಲ್ಲ ಆ ಮೊದಲು ಕನ್ನಡಿಗರೇ ಆಗಿದ್ದರೆಂಬುದನ್ನು ಅವರು ಒಪ್ಪಲು ಸಿದ್ಧರಿರಲಿಲ್ಲ. ಆದರೆ ರಾಜಪುರೋಹಿತರು ಈ ಶಸ್ತ್ರ ಕ್ರಿಯೆಯನ್ನು ತುಂಬ ಜಾಣತನದಿಂದ, ಮೊದಲು ಅರೆವಳಿಕೆ ಔಷಧವನ್ನು (ಕ್ಲೋರೋಫಾರ್ಮ) ಕೊಟ್ಟೇ ನಡೆಸಿದ್ದರು. ಅವರು ತಮ್ಮ ಮರಾಠಿ ಲೇಖನಗಳ ಪ್ರಾರಂಭದಲ್ಲಿ ಲೋಕಮಾನ್ಯ ಟಿಳಕರು ಗುರ್ಲಹೊಸೂರಿನಲ್ಲಿ ಭಾಷಣ ಮಾಡುತ್ತ ನಮ್ಮ ಪೂರ್ವಜರಿಗೆ ಕನ್ನಡ ಬರುತ್ತಿತ್ತು. ಸಂತ ಜ್ಞಾನೇಶ್ವರರಿಗೂ ಕನ್ನಡವು ಚೆನ್ನಾಗಿ ಬರುತ್ತಿತ್ತು ಎಂದು ಹೇಳಿದ್ದನ್ನು ಪುನರುಚ್ಚರಿಸಿ ತಮ್ಮ ವಿಚಾರಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೊರಗೆಡವಿದರು ಅದು ಮಹಾರಾಷ್ಟ್ರೀಯರಿಗೆ ನುಂಗಲಾರದ ತುತ್ತಾಯಿತು. ರಾಜಪುರೋಹಿತರ ಕ್ರಾಂತಿಕಾರಿ ಲೇಖನಗಳು ಮಹಾರಾಷ್ಟ್ರದಾದ್ಯಂತ ಕೋಲಾಹಲವನ್ನೆಬ್ಬಿಸಿದುವು. ಆದರೆ ಲೇಖಕರ ವಿರುದ್ಧ ಸಾಧಾರ, ಖಂಡನಾಪೂರ್ವಕವಾದ ಒಂದೇ ಒಂದು ಲೇಖನವೂ ಬರಲಿಲ್ಲ. ಪೂರಕವಾಗಿ ಮರಾಠಿ ಲೇಖಕರೆ ಬರೆಯಹತ್ತಿದರು.

ಅದು ಕನ್ನಡಿಗರಿಗೆ ತಮ್ಮ ಬಗ್ಗೆ ಕಿಂಚಿತ್ ಅರಿವನ್ನು ಮೂಡಿಸಿ ಜಾಗೃತರಾಗಲು ಸಹಾಯವಾಯಿತು.

ಆನಂತರದ ದಿನಗಳಲ್ಲಿ ರಾಜಪುರೋಹಿತರ ವಿಚಾರಗಳನ್ನು ಮರಾಠಿಯ ಅನೇಕ ವಿದ್ವಾಂಸರು ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ.

ಈ ಲೇಖನಗಳನ್ನು ಬರೆದ ಕಾಲದಲ್ಲಿ ಅವರಿಗೆ ಕೇವಲ ಇಪ್ಪತ್ತೆರಡು

ವರುಷಗಳಾಗಿದ್ದವು. ಅವಿವಾಹಿತರು. ಆಗಲೆ ಅವರು ಅಖಿಲ ಕರ್ನಾಟಕ ಮತ್ತು ಮಹಾರಾಷ್ಟ್ರದ ಮನೆಮಾತಾಗಿದ್ದರು.

ಇತಿಹಾಸದಲ್ಲಿ ಹೊಸದನ್ನು ಕಂಡು ಹಿಡಿಯುವುದರೊಂದಿಗೆ ನಾ. ಶ್ರೀ ರಾಜಪುರೋಹಿತರು ಧರ್ಮ ತತ್ವಜ್ಞಾನಗಳ ಅಭ್ಯಾಸದಲ್ಲೂ ಹಿಂದೆ ಬೀಳಲಿಲ್ಲ. ಭಾರತೀಯರ ತತ್ವಜ್ಞಾನ, ಧರ್ಮ ಸಂಸ್ಕೃತಿಗಳನ್ನು ಅರಿಯಲು ಸಂಸ್ಕೃತ ಭಾಷೆಯ ಜ್ಞಾನ ಅಗತ್ಯವಾಗಿತ್ತು. ಅಂದಿನ ದಿನಗಳಲ್ಲಿ ಸಂಸ್ಕೃತ ಅಭ್ಯಾಸಕ್ಕಾಗಿ ತಾವಾಗಿಯೇ ಕಾಶಿಗೆ ಹೋದರು. ಅಲ್ಲಿ ಒಂದೂವರೆ ವರುಷ ಕಾಲ ಇದ್ದು, ಧರ್ಮಶಾಸ್ತ್ರ ಮೀಮಾಂಸೆ, ವ್ಯಾಕರಣಗಳನ್ನು ಅಭ್ಯಸಿಸಿದರು. ತಿರುಗಿ ಬರುವಾಗ ಬರೋಡೆಯ ಗಾಯಕವಾಡ ಪ್ರಾಚ್ಯ ಗ್ರಂಥಾಲಯದಲ್ಲಿ ಎರಡು ಮೂರು ತಿಂಗಳುಗಳಷ್ಟು ಕಾಲ ಇದ್ದು ಅಲ್ಲಿಯ ಗ್ರಂಥಗಳ ಅಭ್ಯಾಸವನ್ನು ಮಾಡಿ ಟಿಪ್ಪಣಿಗಳನ್ನು ಮಾಡಿಕೊಂಡು ೧೯೧೪ರಲ್ಲಿ ತಿರುಗಿ ಧಾರವಾಡಕ್ಕೆ ಬಂದರು. ರಾಜಪುರೋಹಿತರು ಈಗ ಪುಟಕ್ಕಿಟ್ಟ ಚಿನ್ನದಂತಾಗಿದ್ದರು.

ರಾಜಪುರೋಹಿತರು ೧೯೧೪ರಿಂದ ದಿನಚರಿಯನ್ನು ಬರೆದಿಡಲು ಪ್ರಾರಂಭಿಸಿದರು. ಮುಂದೆ ಸುಮಾರು ೪೦ ವರುಷಗಳ ವರೆಗೆ ಅಂದರೆ ೧೯೫೩ ಆಗಸ್ಟ್ ೧೪ರಂದು ಅವರು ತೀರಿಕೊಳ್ಳುವ ೧೫ ದಿನಗಳ ಮೊದಲು, ೨-೮-೧೯೫೩ರ ವರೆಗೆ ದಿನಚರಿಯನ್ನು ಬರೆದಿಟ್ಟಿದ್ದಾರೆ.

ರಾಜಪುರೋಹಿತರ ಮನೆತನವು ಮೂಲತಃ ಮಾಧ್ವ ಸಂಪ್ರದಾಯದ, ಕಾಣ್ವ ಬ್ರಾಹ್ಮಣರ ಮನೆತನವು. ಬಾಲ್ಯದಲ್ಲಿ ತಂದೆ ತಾಯಿಗಳನ್ನು ಕಳೆದುಕೊಂಡ ಅವರು ಎಲ್ಲಿ, ಹೇಗೆ ಬೇಳೆದರು ಎಂಬುದಕ್ಕೆ ಖಚಿತ ದಾಖಲೆಗಳು ಇಲ್ಲ. ಅಗಡಿ, ಹಾವೇರಿಗಳಲ್ಲಿ ಕಲಿತು ಪ್ರೌಢ ಅವಸ್ಥೆಗೆ ಬರುವ ಹೊತ್ತಿಗೆ ಅವರಲ್ಲಿ ಸ್ವತಂತ್ರ ಪ್ರವೃತ್ತಿ ಬೆಳೆದು ಬಿಟ್ಟಿತ್ತು. ಅಂತೆಯೇ ನೌಕರಿಯನ್ನು ಕಳೆದುಕೊಂಡಾಗ ಸ್ವಯಂ ನಿರ್ಧಾರದಿಂದ ಸಂಸ್ಕೃತವನ್ನು ಕಲಿಯಲು ಕಾಶಿಗೆ ಹೋಗಿಬಿಟ್ಟರು. ಕಾಶಿಯಲ್ಲಿ ಅವರು ಯಾರಲ್ಲಿ ಕಲಿತು, ಎಲ್ಲಿ ಇರುತ್ತಿದ್ದರು ಎಂಬ ಬಗ್ಗೆಯೂ ವಿವರಗಳಿಲ್ಲ. ದಾರಿಯಲ್ಲಿ ಬರುವಾಗ ಬಡೋದೆಯ ಗ್ರಂಥಾಲಯದಲ್ಲಿ ಒಳ್ಳೆಯ ಪುಸ್ತಕಗಳಿವೆ ಎಂದು ಬಡೋದೆಗೆ ಹೋದರು.

೧೯೧೪ರಲ್ಲಿ ತಿರುಗಿ ಧಾರವಾಡಕ್ಕೆ ಬಂದರು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ನೆಗವಾಡಿಯ ನಾಗೂಬಾಯಿಯನ್ನು ಕೈ ಹಿಡಿದರು. ಮುಂದಿನ ಎರಡು ಮೂರು ವರುಷ ಮನೆಯ ಅಳಿಯನಾಗಿ ನೆಗವಾಡಿಯಲ್ಲೇ ನೆಲೆ ನಿಂತರು. ಅಲ್ಲಿದ್ದಾಗ ಅವರು ಕೆಲ ಕಾಲ ಮೈಸೂರು ಸಂಸ್ಥಾನದ 'ಸಂಚಾರೀ ಭಾಷಣಕಾರ' ಎಂಬ ನೌಕರಿಯನ್ನು ಮಾಡಿದರು. ಅವರು ನೆಗವಾಡಿಯಲ್ಲಿ ಇರುವವರೆಗೂ ಆ ಕೆಲಸವನ್ನು ಮಾಡಿದರು.

ಆದರೆ ನೆಗವಾಡಿಯ ಜೀವನ ಅವರಿಗೆ ಬಹಳ ದಿನ ಹಿಡಿಸಲಿಲ್ಲ. ನೆಗವಾಡಿ ಎಂದರೆ ಒಂದು ರೀತಿಯ ಪರಾಶ್ರಯದಲ್ಲಿದ್ದಂತೆ ಎಂದು ಅವರು ಭಾವಿಸಿದ್ದರು. ಆದಷ್ಟು ಬೇಗ ಮಾವನ ಮನೆಯಿಂದ ಹೊರಬೀಳಬೇಕೆಂದು ಯೋಚಿಸುತ್ತಿದ್ದರು. ಸುಮಾರು ಮೂರುವರೆವರುಷ ಅವರು ನೆಗವಾಡಿಯಲ್ಲಿದ್ದರು. ೧೯೧೮ರ ಜೂನ್ ತಿಂಗಳಲ್ಲಿ ಅವರು ಧಾರವಾಡಕ್ಕೆ ಬಂದು ನೆಲಸಿದರು. ಧಾರವಾಡದಲ್ಲಿ ಅವರು ಆಲೂರು ವೆಂಕಟರಾಯರ ಬಹುತೇಕ ಎಲ್ಲ ಕಾರ್ಯಗಳಲ್ಲಿ ಸಹಭಾಗಿತ್ವವನ್ನು ಹೊಂದಿದ್ದರು. ಒಂದು ರೀತಿಯಲ್ಲಿ ಅವರಿಗೆ ಬಲಗೈ ಆಗಿದ್ದರು. ಇದನ್ನು ಅಂದಿನ ಬಹುತೇಕ ಮುಖಂಡರು, ಲೇಖಕರು, ಕವಿಗಳು ಹೇಳಿದ್ದಾರೆ. ಈ ದಿನಗಳಲ್ಲಿ ಅವರು ಆಲೂರು ವೆಂಕಟರಾಯರೊಂದಿಗೆ ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿಯನ್ನು ಸ್ಥಾಪಿಸಿದರು. ಮಹಿಳಾ ವಿದ್ಯಾಲಯ, ಲೋಕಬಂಧು, ಜಯಕರ್ನಾಟಕ ಪತ್ರಿಕೆಗಳೊಂದಿಗೆ ವಿಶೇಷ ಸಂಬಂಧವನ್ನು ಇಟ್ಟುಕೊಂಡಿದ್ದರು.

ಮುಂದಿನ ವರುಷಗಳಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಳ ಅವರ ಜೀವನದಲ್ಲಿ ವೃತ್ತಿಯೂ ಆಯಿತು. ಇಷ್ಟು ದಿನಗಳವರೆಗೆ ಅವರು ತಮ್ಮ ಸಂಶೋಧನ ಕಾರ್ಯವನ್ನು ಧ್ಯೇಯವಾದಿಗಳಾಗಿ ನಡೆಸಿದ್ದರು. ಅನಂತರ ಅವರು ಅದನ್ನು ವೃತ್ತಿಯನ್ನಾಗಿ ಮಾಡಿಕೊಂಡರು. ಹಾಗೆ ವೃತ್ತಿಯನ್ನಾಗಿ ಮಾಡಿಕೊಳ್ಳಲು ಕಾರಣವೂ ಇದ್ದಿತು. ಸರಕಾರಿ ನೌಕರಿಯನ್ನು ಬಿಟ್ಟ ಮೇಲೆ ಅವರಿಗೆ ನಿಯಮಿತವಾದ ಆದಾಯವಿರಲಿಲ್ಲ. ಪ್ರಾರಂಭದಲ್ಲಿ ಒಂಟಿ ಜೀವನ ಹೇಗೋ ಸಾಗಿತು. ಅನಂತರ ಸ್ಥಿತಿವಂತರ ಮನೆತನದ ಕನ್ಯೆಯೊಂದಿಗೆ ಮದುವೆಯಾಗಿ ಮನೆಯ ಅಳಿಯನೆಂದು 'ನೆಗವಾಡಿ'ಗೆ ಹೋದರು. ಆದರೆ ಅವರ ಸ್ವಾಭಿಮಾನದಿಂದಾಗಿ ಅವರು ಅಲ್ಲಿ ಉಳಿಯದೆ ಧಾರವಾಡಕ್ಕೆ ಬಂದುಬಿಟ್ಟರು. ಅದಾಗ ಪ್ರಾರಂಭಿಸಿದ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕೆಲ ಕಾಲ ವೃತ್ತಿ ನಡೆಯಿತು. ಇತ್ತ ಸಂಸಾರ ಬೆಳೆಯಹತ್ತಿತು. ಪೂರ್ವಜರ ಮನೆ ಹೊಲಗಳಿಂದ ಬರುವ ತುಸುವೆ ಆದಾಯ ಹಾಗೂ ಪುಡಿಗಾಸಿನ ಆದಾಯದಿಂದ ಸಂಸಾರ ಹಾಗೂ ಹೀಗೂ ನಡೆಯುತ್ತಿತ್ತು. ೧೯೪೦ರ ಹೊತ್ತಿಗೆ ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಅವರ ವಿದ್ಯಭ್ಯಾಸ, ಮದುವೆಗಳಿಗಾಗಿ ನಿರಂತರ ಆದಾಯದ ಅಗತ್ಯ ಇತ್ತು. ಆದರೆ ನಿಶ್ಚಿತ ವರಮಾನವಿರಲಿಲ್ಲ. ಬಡತನದ ಮೂಲಕ ಹಿರಿಯ ಮಗ ಸುರೇಶನು ಹೆಚ್ಚಿನ ಶಿಕ್ಷಣವನ್ನು ಪಡೆಯಲಾರದೆ ಮಿಲಟರಿ ಸೇರಿದ್ದನು. ಆತನಿಂದ ಬರುತ್ತಿದ್ದ 'ಫ್ಯಾಮಿಲಿ ಅಲಾಟ್‌ಮೆಂಟ್'ದ ೪೦-೪೫ ರೂಪಾಯಿಗಳಿಗಾಗಿ ಚಾತಕ ಪಕ್ಷಿಯಂತೆ ಎದುರು ನೋಡಬೇಕಾಗುತ್ತಿತ್ತು.

ಈ ದಿನಗಳಲ್ಲಿಯೇ ಅವರ ಸಂಶೋಧನಾ ಕಾರ್ಯಕ್ಕೆ ವ್ಯವಸಾಯದ ಸ್ವರೂಪ ಬಂದಿತು. ಸಂಶೋಧನೆಗೆಂದು ಮುಂಬಯಿ ಸರಕಾರದಿಂದ ಗ್ರ್ಯಾಂಟು ಬರತೊಡಗಿತು. ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಪ್ರತಿ ತಿಂಗಳೂ

ಸಂಶೋಧನ ಕಾರ್ಯಕ್ಕಾಗಿ ಅಂದಿನ ಮುಂಬಯಿ ಕರ್ನಾಟಕದಲ್ಲಿಯ ಒಂದೊಂದು ಭಾಗದಲ್ಲಿ ಸಂಚಾರ ಮಾಡತೊಡಗಿದರು. ಮಂಡಲದ ಪ್ರಚಾರಕ್ಕಾಗಿ ಕಾರ್ಯಮಾಡುತ್ತ ಇತಿಹಾಸ ಸಂಶೋಧನೆಯಲ್ಲಿ ಆಸ್ಥೆ ಇದ್ದವರನ್ನು ಮಂಡಲದ ಸದಸ್ಯರನ್ನಾಗಿ ಮಾಡುವುದು, ಜೊತೆಗೆ ಪ್ರಾಚೀನ ಅವಶೇಷಗಳನ್ನು, ನಾಣ್ಯ, ತಾಡವಾಲೆ ಗ್ರಂಥಗಳು, ಶಾಸನದ ನಕಲುಗಳು ತಾಮ್ರ ಶಾಸನಗಳು ಇತ್ಯಾದಿಯಾಗಿ ಸಂಗ್ರಹಿಸಿ ಮಂಡಳಕ್ಕೆ ತಂದು ಕೊಟ್ಟರು. ಸಂಶೋಧನ ಮಂಡಳದಲ್ಲಿರುವ ಪ್ರತಿಶತ ೯೦ರಷ್ಟು ಸರಕುಗಳು ರಾಜಪುರೋಹಿತರಿಂದಲೇ ಸಂಗ್ರಹಿಸಿದವುಗಳಾಗಿವೆ. ಹೀಗೆ ಸಂಗ್ರಹಿಸಿ ಕೊಡುವಾಗ ಆಗಾಗ ಆಯಾ ಭಾಗಗಳ ಸಂಚಾರ, ಸಂಗ್ರಹಗಳ ವಿಸ್ತೃತ ವರದಿಗಳನ್ನು ಸಂಸ್ಥೆಗೆ ಒಪ್ಪಿಸಿದ್ದಾರೆ. ಅವರ ಈ ವರದಿಗಳು, ಟಿಪ್ಪಣಿಗಳು, ಇತಿಹಾಸ ಸಂಶೋಧನೆಗೆ ನೆರವಾಗುವ ಬೆಲೆಯುಳ್ಳ ಆಕರಗಳಾಗಿವೆ. ಅವುಗಳನ್ನು ಅಂದಿನ ದಿನಪತ್ರಿಕೆ, ವಾರಪತ್ರಿಕೆಗಳಲ್ಲೂ ಪ್ರಕಟಿಸಲಾಗಿದೆ.

ಕನ್ನಡ ಸಂಶೋಧನ ಸಂಸ್ಥೆಯಲ್ಲಿ 'ಟೂರಿಂಗ್ ಅಸಿಸ್ಟೆಂಟ' ಎಂಬುದು ಅವರ ಹುದ್ದೆ. ೧೯೪೦-೪೧ರಿಂದ ಮುಂದಿನ ಏಳೆಂಟು ವರುಷಗಳ ಕಾಲ ಅವರು ಸಂಸ್ಥೆಯ ಪರವಾಗಿ ಸಂಶೋಧನ ಸಾಮಗ್ರಿಗಳನ್ನು ಸಂಗ್ರಹಿಸಲು ಮತ್ತು ಸಂಶೋಧಿಸಲು ಅವರು ತಿರುಗಿದರು. ಅವರು ಆ ಅವಧಿಯಲ್ಲಿ ಮುದ್ದೇಬಿಹಾಳ, ಬಾಗೇವಾಡಿ, ಹಿರೇಕೇರೂರ, ರೋಣ, ಕಲಘಟಗಿ, ಸಿಗ್ಗಾಂವಿ, ಶಿರ್ಸಿ, ಸಿದ್ಧಾಪುರ, ಹೊನ್ನಾವರ, ಮುಂತಾದ ತಾಲ್ಲೂಕುಗಳಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ವ್ಯಾಪಕವಾಗಿ ಸಂಚರಿಸಿ ತಾಡವೋಲೆ ಮತ್ತು ಕಾಗದದ ಹಸ್ತಲಿಖಿತ ಗ್ರಂಥಗಳನ್ನು, ನಾಣ್ಯಗಳನ್ನು, ಶಿಲಾ ವಿಗ್ರಹಗಳನ್ನು ಇತ್ಯಾದಿಯಾಗಿ ಬೆಲೆಯುಳ್ಳ ಐತಿಹಾಸಿಕ ಸಾಮಗ್ರಿಗಳನ್ನು ದೊರಕಿಸಿ ತಂದರು. ಅಲ್ಲದೆ ತಾವು ಹೋದ ಊರುಗಳಲ್ಲಿ ಅಲ್ಲಿ. ಶಿಲಾಲೇಖನಗಳನ್ನು ಓದಿ, ನಕಲು ಮಾಡಿಕೊಂಡು ಓದಿ ಅವುಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಿಕೊಂಡು ಬಂದರು. ಅವರು ದೊರಕಿಸಿದ ಕೆಲವು ಮಹತ್ವದ ವಸ್ತುಗಳು - ವಿಷಯಗಳು ಇಂತಿವೆ.

೧. ಕದಂಬ ಎರಡನೆಯ ಕೃಷ್ಣ ವರ್ಮನ ಅಕ್ಕಿ ಆಲೂರು ತಾಮ್ರ ಶಾಸನ ಕ್ರಿ.ಶ. ೬ನೆಯ ಶತಮಾನದ್ದು. ಶ್ರೀ. ಆರ್.ಎಸ್. ಪಂಚಮುಖಿ ಅವರು ಅದನ್ನು ಅಭ್ಯಸಿಸಿ ಪ್ರಸಿದ್ಧಿಸುವಾಗ ಅದರ ಮಹತ್ವವನ್ನು ವಿವರಿಸಿದ್ದಾರೆ.

೨. ಹುಲಗೂರು ತಾಮ್ರ ಶಾಸನ, ಇದು ಯಾದವ ಸಿಂಘಣನ ಕಾಲದ್ದು. ಅವನ ಹೆಂಡತಿಯಾದ ಪದ್ಮಲದೇವಿಯ ದತ್ತಿ ಬಿಟ್ಟ ಉಲ್ಲೇಖ ಇದರಲ್ಲಿ ಬಂದಿದೆ.

೩. ಹಿರೇಕೆರೂರು ತಾಲುಕಿನ ಸಿರಗಂಬಿಯಿಂದ ತಂದ ಪ್ರಾಚೀನ ಕಾಲದ ಹಂಚಿನ ಚೂರುಗಳನ್ನು ಆ ಊರಿನ ಅವಶೇಷಗಳ ಬಗೆ ಹೆಚ್ಚಿನ ಕುತೂಹಲವನ್ನು ಹುಟ್ಟಿಸಿದವು.

೪. ನರ್ತಿಸುವ ಜೈನ ತೀರ್ಥಂಕರರ ಸ್ತ್ರೀ ಮೊದಲಾದ ಶಿಲಾ ವಿಗ್ರಹಗಳು

೫. ಶಿರಹಟ್ಟಿ ತಾಲೂಕಿನ ಇಟಗಿಯಿಂದ ತಂದ ಹಳ್ಳಿಚಿನ ಚೂರುಗಳು ಕ್ರಿ.ಶ. ೨ನೇ ಶತಮಾನದವೆಂದು, ಅಲ್ಲಿ ದೊರೆತ ಯಜ್ಞದಲ್ಲಿ ಉಪಯೋಗಿಸುವ 'ಉಖಾ ಪಾತ್ರೆ' ಮಹತ್ವದ್ದೆನಿಸಿದುವು.

೬. ಕೆಲವು ತಾಮ್ರದ ನಾಣ್ಯಗಳು

೭. ಹಸ್ತ ಲಿಖಿತ ಗ್ರಂಥಗಳು - ಪದ್ಮಾವತಿ ಚರಿತ್ರೆ, ವಿಷ್ಣು ಶರ್ಮನ ಪಂಚತಂತ್ರ ಕಥೆಗಳು, ಕೃಷ್ಣಾರ್ಜುನರ ಪ್ರಸಂಗ, ರಾಘವಾಂಕನ ಕಾವ್ಯಗಳು, ಜೈಮಿನಿ ಭಾರತ, ಕುಮಾರವ್ಯಾಸ ಹಾಗೂ ವ್ಯಾಸ ಭಾರತಗಳು. ಭಾಗವತ ಮತ್ತು ರಾಮಾಯಣಗಳು ಮುಂತಾದವುಗಳು.

ನಾರಾಯಣಾಚಾರ್ಯ ಶ್ರೀನಿವಾಸಾಚಾರ್ಯ ರಾಜಪುರೋಹಿತರು ಸಂಶೋಧನೆಗಾಗಿ ನಿರಂತರ ಪ್ರವಾಸದಲ್ಲಿ ಇರುತ್ತಿದ್ದರು. ಹಾಗೆ ಪ್ರವಾಸ ಮಾಡುವಾಗ ಅವರು ಹೋದ ಊರಿನಲ್ಲೆಲ್ಲ ಭಾಷಣ ಮಾಡುತ್ತಿದ್ದರು. ಭಾಷಣದ ವಿಷಯವೂ ಸಂಶೋಧನೆಯೇ ಆಗಿರುತ್ತಿತ್ತು. ನಾಡಿನ ಇತಿಹಾಸ, ವಿಶೇಷವಾಗಿ ಚಾಲುಕ್ಯ ವಿಜಯನಗರ, ಸಾಮ್ರಾಜ್ಯಗಳ ಚರಿತ್ರೆ ಅವರ ಮೆಚ್ಚುಗೆಯ ವಿಷಯಗಳಾಗಿದ್ದವು. ಈ ವಿಷಯಗಳ ಕುರಿತು ಮಾತನಾಡಿದ ಉಲ್ಲೇಖ, ನೂರಾರು ಗ್ರಾಮಗಳ ಹೆಸರುಗಳು, ಅವರ ದಿನಚರಿಯ ಪುಟಗಳಲ್ಲಿವೆ. ಇದಲ್ಲದೆ ಶಿಲಾ, ತಾಮ್ರ, ಶಾಸನಗಳ ಮಹತ್ವ, ಪ್ರಾಚೀನ ಮಹಿಳೆಯರು, ಸನಾತನ ಧರ್ಮ ಇತ್ಯಾದಿ ಹೋದಲೆಲ್ಲ 'ಇತಿಹಾಸವನ್ನು ಅರಿತುಕೊಳ್ಳುವುದರ ' ಬಗ್ಗೆ ಹೇಳುತ್ತಿದ್ದರು. ಹಾಗೆ ಹೇಳುವಾಗ, 'ನಮ್ಮ ಪೂರ್ವೇತಿಹಾಸ ನಮಗೆ ತಿಳಿದಿರದಿದ್ದರೆ ವೇಶ್ಯಾ ಪುತ್ರನಿಗೂ ನಮಗೂ ಏನೂ ಅಂತರವಿಲ್ಲ' ಎಂದು ನಿಷ್ಠುರವಾಗಿ ಹೇಳುತ್ತಿದ್ದರು. ಅವರು ಒಳ್ಳೆಯ ವಾಗ್ಮಿಗಳಾಗಿದ್ದರು ಎಂಬುದಕ್ಕಿಂತ ಅವರ ಭಾಷಣಗಳಲ್ಲಿ ವಿಷಯ ಇರುತ್ತಿತ್ತು. ಆ ವಿಷಯದಲ್ಲಿ ತಲ್ಲೀನತೆ ಹಾಗೂ ಶ್ರದ್ಧೆ ಇರುತ್ತಿದ್ದವು. ಅದನ್ನು ನಾಲ್ಕು ಜನರಿಗೆ ತಿಳಿಸಿಕೊಡಬೇಕೆಂಬ ಉತ್ಕಟ ಇಚ್ಛೆಯಿಂದಾಗಿ ಹಲವಾರು ಗಂಟೆಗಳ ಕಾಲ ಆವೇಶಯುಕ್ತರಾಗಿ ಭಾಷಣ ಮಾಡುತ್ತಿದ್ದರು.

ತಮ್ಮ ಸಂಶೋಧನ ಲೇಖನಗಳಿಂದ ಗ್ರಂಥಗಳಿಂದ ನಿರಂತರ ಸಂಚಾರದಲ್ಲಿಯ ಜನ ಸಂಪರ್ಕದಿಂದ ನಾ.ಶ್ರೀ ರಾಜಪುರೋಹಿತರು ಅಂದಿನ ದಿನಗಳಲ್ಲಿ ಹರಿದು ಹಂಚಿ ಹೋಗಿದ್ದ ಕರ್ನಾಟಕ ಮಹಾರಾಷ್ಟ್ರದಲ್ಲೂ ಪರಿಚಿತರಾಗಿದ್ದರು. ಅದರಿಂದಾಗಿ ಅವರ ಜೀವಿತ ಅವಧಿಯಲ್ಲಿ ದೊರೆಯಬಹುದಾಗಿದ್ದ ಗೌರವ ಸನ್ಮಾನಗಳು ದೊರೆಯಲಿಲ್ಲ ಎಂದು ಹೇಳುಂತಿಲ್ಲ. ಆ ದಿನಗಳಲ್ಲಿ ಜನರು ಸಾಧ್ಯವಿದ್ದಷ್ಟು ಅವರನ್ನು ಗುರುತಿಸಿ ಗೌರವಿಸಿದ್ದಾರೆ.

೧೯೧೦ರಲ್ಲಿ ಅವರ 'ಧಾನಧರ್ಮ ಪದ್ಧತಿ' ಪ್ರಕಟವಾಯಿತಷ್ಟೆ. ಅಂದಿನಿಂದ ಅವರು ಸಾಹಿತ್ಯ ಸಂಶೋಧನ ಮಾರ್ಗದಲ್ಲಿ ಮಾಡಿದ ಸಾಧನೆಯು ದ್ಯೋತಕವಾಗಿ

ಎಂಬಂತೆ ೧೯೩೫ರ ಡಿಸೆಂಬರರಿನಲ್ಲಿ ಮುಂಬಯಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಸಂಶೋಧನ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಸಾಹಿತ್ಯ ಸಮ್ಮೇಳನದಲ್ಲಿ ಸಂಶೋಧನ ವಿಷಯದಲ್ಲಿ ನಡೆಸಿದ ಮೊದಲ ಗೋಷ್ಠಿಯೂ ಅದಾಗಿತ್ತು. ಕಾಕತಾಳೀಯ ಎಂಬಂತೆ ಅದು ಅವರ ಬರವಣಿಗೆಯ ಬೆಳ್ಳಿ ಹಬ್ಬದ ವರುಷವೂ ಆಗಿತ್ತು. ಸಂಶೋಧನ ರಂಗದಲ್ಲಿ ಅಂದಿನ ದಿನಗಳಲ್ಲಿ ಅಷ್ಟು ದೀರ್ಘ ಕಾಲ ಸಾಧನೆಯನ್ನು ಮಾಡಿದವರು ಅವರೊಬ್ಬರೇ ಆಗಿದ್ದರು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ವಾಗ್ಭೂಷಣ, ಪ್ರಾಚೀನ ಕರ್ನಾಟಕ, ಜಯಕರ್ನಾಟಕ, ಕೇಸರಿ, ಧನಂಜಯ, ಕರ್ಮವೀರ ಮೊದಲಾದ ಕನ್ನಡ ಮರಾಠಿ ಜನಪ್ರಿಯ ಪತ್ರಿಕೆ ನಿಯತಕಾಲಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗಿ ಅವರ ಬಗ್ಗೆ ಎಲ್ಲೆಡೆ ಒಂದು ಬಗೆಯ ಗೌರವ ಭಾವನೆ ಉಂಟಾಗಿದ್ದಿತು.

ಅನಂತರ ೧೯೩೭ರಲ್ಲಿ ರಾಜಪುರೋಹಿತರನ್ನು ಬೆಂಗಳೂರಲ್ಲಿ ಸತ್ಕರಿಸಲಾಯಿತು. ಆ ಹೊತ್ತಿಗೆ ಬೆಂಗಳೂರು, ಮೈಸೂರು, ಮಂಗಳೂರಿನ ಅಂದಿನ ಖ್ಯಾತನಾಮ ಲೇಖಕರು, ವಿದ್ವಾಂಸರೊಂದಿಗೆ ಒಡನಾಟ ಇತ್ತು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸತ್ಕಾರ ಸಮಾರಂಭದ ಅಧ್ಯಕ್ಷತೆಯನ್ನು ಬೆಳ್ಳಾವೆ ವೆಂಕಟನಾರಾಯಣಪ್ಪನವರು ವಹಿಸಿದ್ದರು. ದಿನಾಂಕ ೧೫-೮-೧೯೩೭ ಭಾನುವಾರ ಸಾಯಂಕಾಲ ೫ ಗಂಟೆಗೆ ಶ್ರೀ ಕೃಷ್ಣ ರಾಜೇಂದ್ರ ಪರಿಷನ್ಮಂದಿರದಲ್ಲಿ ನಡೆದ ಸಭೆಯಲ್ಲಿ ಕನ್ನಡ ಕಣ್ವರೆಂದೆ ಹೆಸರಾದ ಬಿ. ಎಂ. ಶ್ರೀಕಂಠಯ್ಯ, ರಾವಬಹದ್ದೂರ, ಬಿ. ವೆಂಕಟೇಶಾಚಾರ್ಯ, ಎ. ಆರ್. ಕೃಷ್ಣಶಾಸ್ತ್ರಿಗಳು, ಬೆನಗಲ್ ರಾಮರಾಯರು, ಮಾಸ್ತಿ ವೆಂಕಟೇಶ ಐಯ್ಯಂಗಾರರು, ಡಿ.ಸಿ. ಸುಬ್ಬರಾಯಪ್ಪ, ಬಿ. ಪುಟ್ಟಯ್ಯನವರು, ಶ್ರೀಮತಿ ಆರ್. ಕಲ್ಯಾಣಮ್ಮನವರು ಮುಂತಾಗಿ ಅಂದಿನ ಖ್ಯಾತನಾಮರು ಬಂದು ಅವರ ಬಗ್ಗೆ ಮಾತನಾಡಿದರು. ಹಲವಾರು ಅಭಿಮಾನಿಗಳು ಸಭೆಗೆ ದಯಮಾಡಿಸಿದ್ದರು. ಎಂದು ೨೦-೮-೧೯೩೭ರ 'ತಾಯಿನಾಡು' ಪತ್ರಿಕೆ ವರದಿ ಮಾಡಿದೆ. ಅದು ಅವರ ಹುಟ್ಟಿದ ೫೦ನೆಯ ವರುಷವೂ ಆಗಿತ್ತು.

ಆಗಸ್ಟ್ ೧೦, ೧೯೪೭ರಂದು ಧಾರವಾಡದ ಜನತೆ ಅವರ ೬೦ನೆಯ ಹುಟ್ಟುಹಬ್ಬವನ್ನು ಆಚರಿಸಿದ್ದಾರೆ. ಷಷ್ಟಬ್ದಿಯ ಅಂಗವಾಗಿ ಅವರನ್ನು ಗೌರವಿಸಿ ೧೫೦೦ ರು. ಹಮ್ಮಿಣಿಯನ್ನು ಅರ್ಪಿಸಿದ್ದಾರೆ. ಸಮಾರಂಭವದ ಅಧ್ಯಕ್ಷತೆಯನ್ನು ಮುದವೀಡು ಕೃಷ್ಣರಾಯರು ವಹಿಸಿದ್ದರು. ಸಮಾರಂಭದಲ್ಲಿ ಅಂದಿನ ಗಣ್ಯ ಮಾನ್ಯರಾದ ಆಲೂರು ವೆಂಕಟರಾವ, ರಾಮರಾವ ಹುಕ್ಕೇರಿ, ಆರ್. ಎಸ್. ಪಂಚಮುಖೀ, ಪಂ. ಕೇಶವಶರ್ಮಾ ಗಲಗಲಿ, ಕೊರ್ಲಹಳ್ಳಿ, ವೆಂಕಟರಾವ ನಾಯಕ ಮೊದಲಾದವರು ರಾಜಪುರೋಹಿತರ ವ್ಯಕ್ತಿತ್ವ ಮತ್ತು ಕಾರ್ಯದ ಬಗ್ಗೆ ಮಾತನಾಡಿದ್ದಾರೆ. ನಾಡಿನ ಬಹುತೇಕ ಪತ್ರಿಕೆಗಳು ಸಮಾರಂಭದ ವರದಿಗಳನ್ನು ಪ್ರಕಟಿಸಿವೆ.

ರಾಜಪುರೋಹಿತರು ತಮ್ಮ ಜೀವಿತಾವಧಿಯಲ್ಲಿ ಒಟ್ಟು ಆರು ಪೂರ್ಣ ಪ್ರಮಾಣದ ಗ್ರಂಥಗಳನ್ನು, ಸುಮಾರು ಇನ್ನೂರು ಕನ್ನಡ ಮತ್ತು ಇಪ್ಪತ್ತೆರಡರಷ್ಟು ಮರಾಠಿ ಸಂಶೋಧನ ಲೇಖನಗಳನ್ನು ಬರೆದರೆಂದು ಹೇಳಲಾಗುತ್ತದೆ. ಅವರು ರಚಿಸಿದ ಆರು ಪುಸ್ತಕಗಳು ದೊರೆತಿವೆ. ಸಂಶೋಧನ ಲೇಖನಗಳಲ್ಲಿ ೫೭ ಕನ್ನಡ ಮತ್ತು ೧೦ ಮರಾಠಿ ಲೇಖನಗಳು ಮಾತ್ರ ದೊರೆತಿವೆ. ರಾಜಪುರೋಹಿತರ ಸಂಶೋಧನೆ ಮತ್ತು ಅಭ್ಯಾಸದಿಂದಾಗಿ ಕರ್ನಾಟಕದ ಬಗ್ಗೆ ಅನೇಕ ಐತಿಹಾಸಿಕ ಸಂಗತಿಗಳು ಅವರ ಲೇಖನಗಳ ಮೂಲಕ ಬೆಳಕಿಗೆ ಬಂದಿದ್ದವು. ಅವುಗಳ ಆಧಾರದಿಂದ ಬರೆದ 'ಕರ್ನಾಟಕ ಇತಿಹಾಸ' ಒಂದು ಪುಟ್ಟ ಪುಸ್ತಕ. ವಿಷಯದ ಪ್ರಾಮಾಣ್ಯವನ್ನು ಶಂಕಿಸುವ ಪ್ರಶ್ನೆಯೇ ಇರಲಿಲ್ಲ. ಕೂಡಲೇ ಅದು ಪಠ್ಯಪುಸ್ತಕವೆಂದು ಮಂಜೂರಾಯಿತು. ಸುಮಾರು ೧೩ ವರುಷ ಅದು ಪಠ್ಯವಾಗಿತ್ತು. ಅದರ ಏಳೆಂಟು ಆವೃತ್ತಿಗಳು ಪ್ರಕಟವಾದುವು. ಅದರ ಮರಾಠಿ ಅನುವಾದವನ್ನು ಹುಬ್ಬಳ್ಳಿಯ ಬೇಡೇಕರ ಮತ್ತು ಶಿಂಧೆ ಎಂಬ ಮಾಸ್ತರರು ಮಾಡಿದ್ದಾರೆ. ಕರ್ನಾಟಕದಲ್ಲಿಯ ಮರಾಠಿ ಮಕ್ಕಳಿಗೆ ಇತಿಹಾಸ ತಿಳಿಯಲು ಸಹಾಯವಾಯಿತು. ಕನ್ನಡದ ಆ ಕೃತಿ ಇಂದು ಸಿಗುತ್ತಿಲ್ಲ.

೧೯೧೭ರಷ್ಟು ಹಿಂದೆ 'ಮಹಾರಾಷ್ಟ್ರ ವ ಕರ್ನಾಟಕ' ಮರಾಠಿ ಲೇಖನ ಮಾಲೆ ಪ್ರಕಟವಾಗಿ ಅವರೊಬ್ಬ ಸಂಶೋಧಕರೆಂದು ಕನ್ನಡ - ಮರಾಠಿ ಬಲ್ಲ ಬಹುತೇಕ ವಿದ್ವಾಂಸರಲ್ಲಿ ಗುರುತಿಸಲಾಗಿತ್ತು. ಅವರೆ ಹೇಳಿದಂತೆ ಇತಿಹಾಸವೆಂದರೆ ಆಗಿ ಹೋದದ್ದು, ಅದು ಯಾವುದೇ ಇರಲಿ ಅದನ್ನು ಹುಡುಕಿ ತೆಗೆಯುವುದು. ಅದನ್ನು ಅವರು ಮಾಡುತ್ತಿದ್ದರು. ಹಳೆಯದನ್ನು ಹುಡುಕಿ ತೆಗೆಯುವುದನ್ನೆ ಮಾಡುತ್ತಿದ್ದರು ಎಂದರೆ ತಪ್ಪಾದೀತು. ಹಳೆಯದರಲ್ಲಿ ಹೊಸದನ್ನು ಹುಡುಕಿ ತೆಗೆಯುತ್ತಿದ್ದರು.

ರಾಜಪುರೋಹಿತರು ಇದ್ದ ಪ್ರದೇಶವು ಮರಾಠಿಮಯವಾಗಿತ್ತು. ಕನ್ನಡ ಭಾಷೆಗೆ ಅತ್ಯಂತ ಕಡಿಮೆ ಅವಕಾಶವಿದ್ದಿತು. ಆ ಹೊತ್ತಿಗೆ ಮರಾಠಿಯಿಂದ ಕನ್ನಡವನ್ನು ಮೇಲೆತ್ತುವ ನಾಡ ಚಳವಳಿ ಈ ಪ್ರದೇಶದಲ್ಲಿ ನಡೆದಿತ್ತು. ಉತ್ತರ ಕರ್ನಾಟಕದಲ್ಲಿ ರಾ.ಹ. ದೇಶಪಾಂಡೆ ಅವರ ಸಂಸ್ಥಾ ಕಾರ್ಯ, ಶಾಂತ ಕವಿಗಳ ಕೀರ್ತನೆಗಳು, ಆಲೂರು ವೆಂಕಟರಾಯರ ಮಾರ್ಗದರ್ಶನ, ಕಡಪಾ ರಾಘವೇಂದ್ರ ರಾಯರ ಕರ್ನಾಟಕ ಏಕೀಕರಣದ ಕಹಳೆ , ಮುದವೀಡು ಕೃಷ್ಣರಾಯರ ಸಿಂಹವಾಣಿ, ಇವುಗಳು ಯಾರನ್ನೂ ಬಡಿದೆಬ್ಬಿಸಿ ಉದಾತ್ತ ಕೆಲಸಕ್ಕೆ ಹಚ್ಚುವಂತಹವಾಗಿದ್ದವು.

ಸ್ವದೇಶೀ ಸ್ವಾತಂತ್ರ್ಯ ಮಂತ್ರಗಳು ಹೇಗೆ ರಾಷ್ಟ್ರೀಯ ರಚನೆಗಳಿಗೆ ಪ್ರಚೋದನೆ ನೀಡಿ ದೇಶಾದ್ಯಂತ ಜನರ ಭಾವನೋದ್ವೇಗದ ಬೆಂಬಲವು ಒದಗಿ ಬಂತೋ ಹಾಗೆಯೇ ಕನ್ನಡ ನಾಡು, ಕನ್ನಡ ಭಾಷೆ, ಕರ್ನಾಟಕದ ಗತವೈಭವಗಳು ಕನ್ನಡ ತಾಯಿಯ ಸೇವೆಗೆ ಕಟಿಬದ್ಧವಾಗಿಸಿದ್ದವು. ಆ ಪ್ರವಾಹದಲ್ಲಿ ರಾಜಪುರೋಹಿತರು ಈಜಿದರು. ಅವರಿದ್ದ ಕಾಲದಲ್ಲಿ ಕನ್ನಡನಾಡ ನುಡಿಯು ಇತಿಹಾಸದ ಸ್ಪರ್ಧೆಯಲ್ಲಿ

ಬಹುತೇಕ ಎಲ್ಲರನ್ನು ಹಿಂದೆ ಹಾಕಿ ಮುಂಚೂಣಿ ಯಲ್ಲಿದ್ದುದು ಅವರ ಸಂಶೋಧನೆಯ ವೈಶಿಷ್ಟ್ಯವಾಗಿದೆ.

ಮಹಾರಾಷ್ಟ್ರ ಮತ್ತು ಕರ್ನಾಟಕ, ವಿಠಲ ಭಕ್ತಿ ರಸವೇ ಸರಿ. ಅವುಗಳು ಮಹಾರಾಷ್ಟ್ರದ ಜನತೆಯ ಹಾಗೆಯೇ ಕನ್ನಡಿಗರ ಕಣ್ಣನ್ನೂ ತೆರೆಸಿದವು. ಅವುಗಳ ಜೊತೆಗೆ ಕನ್ನಡದಲ್ಲಿ ಬರೆದ ಎರಡು ನೂರರ ನಾಡು ಯಾವುದು ? ತಿರುಳ್ಗನ್ನಡ ನಾಡು ಯಾವುದು ? ತಾಳಗುಂದ ಚಿಪಳೂಣ ಅಗ್ರಹಾರಗಳು, ಅಪರಾದಿತ್ಯನು ಶಿಲಾಹಾರನೇ ಹೊರತು ಚೋಳ ರಾಜನಲ್ಲ, ಸತ್ಯಾಶ್ರಯ ಪುಲಕೇಶಿ ವಲ್ಲಭ ಮಹಾರಾಜ, ಆರವತ್ತೊಕ್ಕಲು ಬ್ರಾಹ್ಮಣರು ಇತ್ಯಾದಿ ಲೇಖನಗಳು ಕನ್ನಡಿಗರನ್ನು ಎಚ್ಚರಿಸಲು ಕಾರಣವಾದವು. ಅವುಗಳಲ್ಲಿಯ ಅವರ ತೀಕ್ಷ್ಣಶೋಧ ಬುದ್ಧಿ ವಿದ್ವಾಂಸರನ್ನು ಅಚ್ಚರಿಗೊಳಿಸಿದವು.

ಇನ್ನುಳಿದಂತೆ ನಾಡಿನ ಇತಿಹಾಸದಲ್ಲಿ ಹೊಸ ಬೆಳಕನ್ನು ಚೆಲ್ಲಿದ ಅವರ ಕೆಲವು ಲೇಖನಗಳ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕು. ಅವುಗಳಲ್ಲಿ ರಕ್ಕಸಗಿ ತಂಗಡಗಿ ರಣಭೂಮಿಯ ಸಂಶೋಧನಕ್ಕೆ ವಿಶೇಷ ಮಹತ್ವ ಇದೆ. ಈ ಕುರಿತು ಮರಾಠಿ ಕನ್ನಡ ಎರಡೂ ಭಾಷೆಗಳಲ್ಲಿ ದೀರ್ಘ ಲೇಖನಗಳನ್ನುಬರೆದಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಪತನವು ತಾಳಿಕೋಟೆಯ ಯುದ್ಧದಲ್ಲಾಯಿತೆಂದು ಈ ಮೊದಲು ಎಲ್ಲ ಇತಿಹಾಸಕಾರರು ಉಲ್ಲೇಖಿಸಿದ್ದರು. ವಿಜಯನಗರ ರಾಮರಾಯನ ಆಸ್ಥಾನದಲ್ಲಿದ್ದ ಹರಕಾರೆ ಎಂಬುವವನ ಬಖರನ್ನು ನೋಡಿದ ಮೇಲೆ ಈ ವಿಷಯದಲ್ಲಿ ಸಂಶಯ ಬಂದಿತ್ತು. ಅದನ್ನು ನೋಡಿದ ರಾಜಪುರೋಹಿತರು ಆತನ ಬಖರಿಯಲ್ಲಿ ಉಲ್ಲೇಖಿಸಿದ ಗ್ರಾಮಗಳಿಗೆ ಹೋಗಿ ಬಂದರು. ಹೀಗೆ ಸುತ್ತುತ್ತಿರುವಾಗ ತಂಗಡಗಿಯ ದಕ್ಷಿಣ ಭಾಗದಲ್ಲಿ ಮೂರು ಎಕರೆಯಷ್ಟು ವಿಶಾಲವಾದ ಸ್ಥಳದಲ್ಲಿ ಬೂದಿಯ ರಾಶಿಯು ಹರಡಿದ್ದನ್ನು ಕಂಡರು. ಈ ರಾಶಿಯು ಮೊದಲು ಒಂದೂವರೆ ಅಡಿಯಷ್ಟು ಎತ್ತರವಾಗಿತ್ತಂತೆ. ಹಲವಾರು ವರುಷಗಳಿಂದ ಜನರು ತಮ್ಮ ಕೆಲಸಗಳಿಗೆ ಅದನ್ನು ಉಪಯೋಗಿಸಿದ್ದಾಗಿ ಹಳ್ಳಿಯ ವೃದ್ಧ ಜನರಿಂದ ಅರಿತುಕೊಂಡರು. ಸತ್ತವರನ್ನು ದಹನ ಮಾಡಿದ್ದಿರಬೇಕೆಂದು ರಾಜಪುರೋಹಿತರಿಗೆ ಸಂಶಯ ಬಂದಿತು. ಗ್ರಾಮಸ್ಥರ ಸಹಾಯದಿಂದ ಕೆಲವು ಕೂಲಿ ಆಳುಗಳನ್ನು ಕೆಲಸಕ್ಕೆ ಹಿಡಿದು, ದೇವತೆಯ ಪ್ರಾರ್ಥನೆಯನ್ನು ಮಾಡಿ ಅಗೆಯಲು ಪ್ರಾರಂಭಿಸಿದರಂತೆ. ಅಗೆದಂತೆ ಎಲುಬುಗಳು, ಎಲುಬಿನ ಚೂರುಗಳು ದೊರೆತುವಂತೆ. ಜೊತೆಗಿದ್ದ ಸ್ಥಳಿಯ ಡಾ. ಬಕ್ಷಿ ಅವರು ಅವುಗಳು ಸೈನಿಕರ ಮತ್ತು ಕುದುರೆಗಳ ಎಲುಬುಗಳು ಎಂದು ದೃಢ ಪಡಿಸಿದಾಗ ರಾಜಪುರೋಹಿತರು ಆನಂದ ಪರವಶರಾದರೆಂದು ಒಂದೆಡೆ ಹೇಳಿದ್ದಾರೆ.

ಬಿಜಾಪುರದ ಆದಿಲಶಾಹನು ರಾಮರಾಯನಿಗೆ ಒಂದು ಮಹಲನ್ನು ಕಟ್ಟಿಸಿದನೆಂದೂ ಹರಕಾರೆಯು ತನ್ನ ಬಖರಿಯಲ್ಲಿ ಹೇಳಿದ್ದಾನೆ. ಅದನ್ನು

ರಾಜಪುರೋಹಿತರು ಹುಡುಕಿದರು. ತುಸು ದೂರದಲ್ಲಿ ವಿಸ್ತಾರವಾದ ದೊಡ್ಡ ಕಟ್ಟೆಯನ್ನು ಅದರ ಮೇಲಿನ ವೀರಗಲ್ಲನ್ನು ಕಂಡರು. ಇನ್ನೂ ಮುಂದೆ ನಾಲ್ವತ್ತವಾಡ ಗ್ರಾಮದತ್ತ ಹೋದಾಗ ರಣಸ್ತಂಭಗಳು ನೋಡಲು ದೊರೆತವು. ಈ ಎಲ್ಲ ಸಾಕ್ಷಿ ಪುರಾವೆಗಳನ್ನು ಗಮನಿಸಿ ಅವುಗಳನ್ನು ಪರಿಶೀಲಿಸಿದ ಮೇಲೆ, ರಕ್ಕಸತಂಗಡಿಗಿ ಮತ್ತು ನಾಲ್ವತ್ತವಾಡ ಊರುಗಳ ಮಧ್ಯೆ ಘನಘೋರ ಸಂಗ್ರಾಮವು ನಡೆಯಿತು. ಗ್ರಾಮದ ಇನ್ನೊಂದು ಬದಿಗೆ ವೀರರಿಗೆ ಉಚಿತವಾದ ದಹನ ಕ್ರಿಯೆಯು ನಡೆಯಿತು ಎಂಬ ನಿರ್ವಿವಾದ ಸತ್ಯವು ಹೊರಹೊಮ್ಮಿತು. ಕ್ರಿ.ಶ. ೧೯೨೯, ರಾಜಪುರೋಹಿತರ ಸಂಶೋಧನಾ ವರ್ಷಗಳಲ್ಲಿ ಅತಿ ಮಹತ್ವದ್ದೆಂದು ಹೇಳಬಹುದು. ಈ ವರುಷವೇ ಅವರು ರಕ್ಕಸತಂಗಡಗಿ ಕಾಳಗದ ಬಗ್ಗೆ ಶೋಧ ಮಾಡಿದರು. ಮುಂದಿನ ತಿಂಗಳುಗಳಲ್ಲಿ ಪುಣೆಯ ಭಾರತ ಇತಿಹಾಸ ಸಂಶೋಧನ ಮಂಡಳದ ಸಮ್ಮೇಳನದಲ್ಲಿ ಈ ವಿಷಯದಲ್ಲಿ ಪ್ರಬಂಧವನ್ನು ಮಂಡಿಸಿದರು. ಆನಂತರ ಕನ್ನಡ ಮರಾಠಿ ಎರಡು ಭಾಷೆಗಳಲ್ಲೂ ಪ್ರಬಂಧವನ್ನು ಬರೆದು ಪ್ರಕಟಿಸಿದರು.

ಪಟವರ್ಧನ, ಕೇಳಕರ ಮೊದಲಾದ ಇತಿಹಾಸ ಪ್ರಭೃತಿಗಳು ವಿವರವಾಗಿ ಈ ಯುದ್ಧದ ಬಗ್ಗೆ ಮರಾಠಿಯಲ್ಲಿ ಬರೆದಿದ್ದ ಅಭಿಪ್ರಾಯಗಳು ಈ ಶೋಧದಿಂದಾಗಿ ತಲೆಕೆಳಗಾದವು.

೧೯೧೨ರ ಆಗಸ್ಟ್ ೨೦ರಂದು ನಾ.ಶ್ರೀ ರಾಜಪುರೋಹಿತರ 'ಮಹಾರಾಷ್ಟ್ರ ಮತ್ತು ಕರ್ನಾಟಕ' ಲೇಖನಮಾಲೆಯ ಮೊದಲ ಲೇಖನವು ಮರಾಠಿ ಕೇಸರಿಯಲ್ಲಿ ಪ್ರಕಟವಾಯಿತು. ಅದರಲ್ಲಿ ಮರಾಠಿ ಬಾಷೆಯ ಇತಿಹಾಸವನ್ನು ಹೇಳುತ್ತ ಈಗಿನ ಮಹಾರಾಷ್ಟ್ರವು ಪೂರ್ವದಲ್ಲಿ ಕರ್ನಾಟಕದ ಒಂದು ಭಾಗವಾಗಿತ್ತು ಎಂದಿದ್ದಾರೆ. ವಿಶೇಷವಾಗಿ ಮಹಾರಾಷ್ಟ್ರವೆಂದರೆ ಅದು ಇಂದು ಗುರುತಿಸಲಾಗುತ್ತಿರುವ ಮರಾಠಿ ಭಾಷೆಯ ಪ್ರದೇಶವೆಂಬ ಹಾಗೆ ಅದರ ವಿಸ್ತೃತ ಮೇರೆ ಅಥವಾ ಗಡಿ ಎಂದರ್ಥವಲ್ಲ. ಮಹಾರಾಷ್ಟ್ರವೆಂದರೆ ದೊಡ್ಡ ರಾಷ್ಟ್ರವೆಂದೂ, ಅದು ಇಂದಿನ ಕರ್ನಾಟಕಕ್ಕೆ ಅನ್ವಯಿಸುತ್ತದೆಂದು ಪ್ರತಿಪಾದಿಸಿದರು. ನಂತರ ಭಾಷೆಯತ್ತ ತಿರುಗಿ ಅಂದಿನ ವ್ಯಾಕರಣಕಾರರಾದ ಗೋಡಬೋಲೆ, ರಾ. ಭೀ. ಜೋಶಿ ಮುಂತಾದವರು ಮರಾಠಿ ಭಾಷೆಯ ಬಳಕೆಯಲ್ಲಿ ಎಷ್ಟೋ ಕನ್ನಡ ಶಬ್ದಗಳು ಇರುವುದನ್ನು ಒಪ್ಪಿಕೊಂಡಿದ್ದನ್ನು ಎತ್ತಿತೋರಿಸಿದ್ದಾರೆ. ಅದರಂತೆ ಜ್ಞಾನೇಶ್ವರಿಯಲ್ಲಿ, ಅಮೃತಾನುಭವಿಯಲ್ಲಿ ಬಂದ ಕನ್ನಡ ಶಬ್ದಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಆನಂತರ ಊರುಗಳಿಗೆ ಹೆಸರು ಹಾಗೂ ಗೋವೆ, ಕೊಲ್ಹಾಪುರ, ಸಾತಾರಾ, ಸೊಲ್ಲಾಪುರ, ಪುಣೆ ಕೊಂಕಣ ಮೊದಲಾದವು ಗಳಲ್ಲಿಯ ಕನ್ನಡದ ಕುರುಹುಗಳನ್ನು ತಿಳಿಸಿದ್ದಾರೆ. ಅಲ್ಲಿಂದ ಕನ್ನಡ ರಾಜಮನೆತನಗಳಾದ ಸವದತ್ತಿ, ರಟ್ಟರು, ದೇವಗಿರಿ ಯಾದವರು, ಶಿಲಾಹಾರರು ಹೇಗೆ ಕನ್ನಡಿಗರೆಂಬುದನ್ನು ತಿಳಿಸುತ್ತ ಅವರಲ್ಲಿದ್ದ ಕನ್ನಡ ಕವಿಗಳ ಬಗ್ಗೆಯೂ ಬರೆದಿದ್ದಾರೆ. ಶ್ರೀ ಶಂಕರಾಚಾರ್ಯರು ಮಂಡನ ಮಿಶ್ರರನ್ನು ಸೋಲಿಸಿದರು ಎಂದು

ಹೇಳಿ ಅವರೆ ಮುಂದೆ ಶೃಂಗೇರಿ ಮಠದ ಮೊದಲ ಜಗದ್ಗುರುಗಳಾದ ಸುರೇಶ್ವರಾಚಾರ್ಯರು ಮತ್ತು ಅವರು ವಾಸ ಮಾಡುತ್ತಿದ್ದ ಸ್ಥಳವನ್ನು ಶೋಧಿಸುತ್ತ, ನರ್ಮದಾ ನದಿಯ ದಂಡೆಯವರೆಗೆ ಕನ್ನಡ ನಾಡು ಹಬ್ಬಿತ್ತು ಎಂಬುದನ್ನು ತೋರಿಸಿದ್ದಾರೆ.

ಪಂಢರಪುರ ವಿಠಲನನ್ನು ಕನ್ನಡಿಗನೆಂದು ಪ್ರತಿಪಾದಿಸಿದರು. ಭಾಂಡಾರಕರ, ಪಟವರ್ಧನ ಮೊದಲಾದವರ ಹೇಳಿಕೆಗಳನ್ನೆ ಅವರಿಗೆ ತಿರುಗಿಸಿದರು. ವಿಷ್ಣು ಭಕ್ತಿಯು ಕರ್ನಾಟಕದಲ್ಲಿ ರಾಮಾನುಜಾಚಾರ್ಯರ ಕಾಲದಲ್ಲಿ ಬಂದಿತು ಎಂದು ಸಾಧಾರವಾಗಿ ತೋರಿಸಿದರು. ರಾಜಪುರೋಹಿತರ ಸಂಶೋಧನೆ ಲೇಖನಗಲ್ಲಿ ಮತ್ತೊಂದು ಮಹತ್ವದ ಸಂಶೋಧನೆ ಎಂದರೆ ವಿಕ್ರಮ ಶಕದ ಪ್ರಾರಂಭದ ದಿನವನ್ನು ಕಂಡು ಹಿಡಿದದ್ದಾಗಿದೆ. ೯೯೭ನೆಯ ಶಕ ವರ್ಷದ ನಳ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿ ಗುರವಾರ ಶ್ರೀಮಚ್ಚಾಳುಕ್ಯ ವಿಕ್ರಮಾಂಕ ಚಕ್ರವರ್ತಿಯ ಪಟ್ಟಬಂಧ ಮಹೋತ್ಸವ ಜರುಗಿತು ಎಂಬುದನ್ನು ಖಚಿತವಾಗಿ ಹೇಳಿದರು. ಅದರಂತೆ ಭೂಲೋಕ ಮಲ್ಲ ಅಪರಾದಿತ್ಯ ಮುಂತಾದ ರಾಜರ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಕುಮಾರ ರಾಮನು ವಿಜಯನಗರದ ದೇವರಾಯನ ಕಾಲದವನು ಎಂದು ಸಿದ್ಧಮಾಡಿ ತೋರಿಸಿದ್ದಾರೆ.

'ಇತಿಹಾಸ ಸಂಶೋಧನೆ' ಎಂಬ ಲೇಖನ ಮತ್ತು ಇತಿಹಾಸ ಗೋಷ್ಠಿಯ ಅಧ್ಯಕ್ಷ ಭಾಷಣಗಳು ಇಂದಿಗೂ ಸಂಶೋಧಕರಿಗೆ ಪ್ರಸ್ತುತವಾಗಿವೆ. ಸಾಮಾನ್ಯವಾಗಿ ಇತಿಹಾಸದ ಅಭ್ಯಾಸಿಗಳಿಗೆ, ಸಂಶೋಧಕರಿಗೆ ಸಾಹಿತ್ಯ ಹಾಗೂ ಭಾಷೆಯ ವಿಷಯಳಿಗೆ ವಿಶೇಷ ಆಸ್ಥೆ ಇರುವುದಿಲ್ಲ. ಸಾಂದರ್ಭಿಕವಾಗಿ ಬಂದ ಕವಿಸಾಹಿತಿಗಳನ್ನೊ ಅವರ ಕಾಲ ವಿಚಾರವನ್ನೋ ಮಾಡಿಯಾರು. ಆದರೆ ರಾಜಪುರೋಹಿತರು ಮಾತನಾಡುವ ಭಾಷೆಯ ವ್ಯಾಕರಣವನ್ನು ಹೇಗೆ ರಚಿಸಬಹುದು ಎಂದು ತೋರಿಸಿಕೊಟ್ಟಿದ್ದಾರೆ. ಕನ್ನಡ ಲಾಕ್ಷಣಿಕರು ಮತ್ತು ಪ್ರಾಕೃತ ಭಾಷೆ ಮುಂತಾದ ಭಾಷೆಗೆ ಸಂಬಂಧಪಟ್ಟ ವಿಷಯಗಳಲ್ಲೂ ಸಂಶೋಧನೆ ಮಾಡಿದ್ದು ವಿಶೇಷವಾಗಿದೆ. ಜೊತೆಗೆ ನೃಪತುಂಗನಿಂದ ಹಿಡಿದು ಕನ್ನಡದ ಸುಮಾರು ಹತ್ತು ಕವಿಗಳ ಕಾಲ ಮತ ನಿರ್ಣಯಗಳನ್ನು ಮಾಡಿದ್ದಾರೆ. ಹಳಗನ್ನಡ ಸಾಹಿತ್ಯದಲ್ಲಿ ಅವರಿಗೆ ಆಳವಾದ ಜ್ಞಾನವಿತ್ತು. ಅದಕ್ಕೆ ಕಾರಣ, ಅವರು ಅಂದಿನ ಕಾಲದ ವಿಳನೆಯ ವರ್ಗದ ಪಬ್ಲಿಕ್ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮರಾಗಿ ಪಾಸಾದದ್ದು, ಆನಂತರ ಮೂರು ವರುಷ ಶಿಕ್ಷಣ ತರಬೇತಿ ಪಡೆದದ್ದೇ ಆಗಿರಬೇಕು. ಕನ್ನಡದ ಕಾವ್ಯ ಸಾಹಿತ್ಯವನ್ನು ಅವರು ಕರತಲಾಮಲಕ ಮಾಡಿ ಕೊಂಡಿದ್ದರು. ಅದಕ್ಕೆ ಸಮನಾದ ಸಂಸ್ಕೃತ ಅಭ್ಯಾಸವೂ ಆಗಿತ್ತು. ಕವಿರಾಜಮಾರ್ಗದ ಕರ್ತೃ ಯಾರು ? ರನ್ನ ಕಾಲ ನಿರ್ಣಯ, ನಾಗವರ್ಮನ ಕಾಲ ನಿರ್ಣಯ , ಹರಿಹರ, ಕುಮಾರವ್ಯಾಸ ಲಕ್ಷ್ಮೀಶ ಮೊದಲಾದವರ ಕಾಲ ನಿರ್ಣಯ ಮಾಡುವಾಗ ಪ್ರಸ್ತುತ ಪಡಿಸಿದ ರೀತಿಯಲ್ಲಿ ಅವರ ಕಾವ್ಯಗಳಲ್ಲಿಯ

ಅಭ್ಯಾಸದ ಆಳ ಗೊತ್ತಾಗುತ್ತದೆ. ಒಂದು ವಿಷಯದ ಮೂಲವೆಲ್ಲಿದೆ, ಅದರ ನಿಜ ಸಂಗತಿ ಏನು, ಅದು ಏನಿರಬೇಕಿತ್ತು ಇಂಥವರು ಈ ವಿಷಯದಲ್ಲಿ ಹೀಗೆ ಹೇಳಿದ್ದಾರೆ, ಇದು ಸರಿಯೇ, ಈ ಒಂದು ಪ್ರಮಾಣದಿಂದ ಹೊರಡುವ ಈ ಅಂತರ ಸತ್ಯತೆಯನ್ನು ಸ್ವೀಕರಿಸುವ ಬೇರೆ ಆಧಾರಗಳು ಮತ್ತೆಲ್ಲಿವೆ ಇತ್ಯಾದಿ ಯೋಚನೆ ನಿರಂತರವೂ ಅವರ ಚಿಂತನೆಯ ವಿಷಯವಾಗಿರುತ್ತಿದ್ದಿತು. ಚರಿತ್ರೆಯ ವಿಷಯದಲ್ಲಿ ಸತ್ಯವನ್ನು ಅರಸಬೇಕಾಗುತ್ತದೆ. ಪ್ರಮಾಣಿಸಿ ನೋಡಬೇಕಾಗುತ್ತದೆ. ಇದ್ದಂತೆ ತೆಗೆದು ಕೊಳ್ಳುವುದಿರುವುದಿಲ್ಲ. ಅದರಲ್ಲಿ ಸತ್ಯವಿದ್ದರೇನೆ ಅದು ಇತಿಹಾಸ ಎನಿಸಿಕೊಳ್ಳುತ್ತದೆ ಎಂಬ ಎಚ್ಚರವು ರಾಜಪುರೋಹಿತರಲ್ಲಿ ಸದಾ ಕಾಲ ಜಾಗೃತವಾಗಿರುತ್ತಿತ್ತು. ಮಧ್ವಾಚಾರ್ಯರ ಶಾಖಾ ನಿರ್ಣಯವನ್ನು ಒಂದಲ್ಲ ಎಂಟು ಪ್ರಮಾಣಗಳನ್ನು ಕೊಟ್ಟು ತಮ್ಮ ಗ್ರಂಥದಲ್ಲಿ ಹೇಳಿದ್ದರು. ಪುಸ್ತಕ ಪ್ರಕಟವಾದ ಮೇಲೆ ಒಂಬತ್ತನೆ. ಪ್ರಮಾಣವೊಂದು ಸಿಕ್ಕಿತು. ಆ ಕೂಡಲೇ 'ಜಯಕರ್ನಾಟಕ'ದಲ್ಲಿ ಒಂದೆ ಒಂದು ಪುಟದ ಲೇಖನಗಳನ್ನು ಪ್ರಕಟಿಸಿದರು. ಅದು ಅವರ ಸಂಶೋಧನೆಯ ಕಾರ್ಯತತ್ಪರತೆಯನ್ನು ತೋರಿಸುತ್ತದೆ. ಮಧ್ವಾಚಾರ್ಯರ ಚರಿತ್ರೆಯ ಬಗ್ಗೆ ಡಾ. ಡಿ..ವಿ. ಗುಂಡಪ್ಪನವರು ರಾಜಪುರೋಹಿತರಿಗೆ ಬರೆದ ಪತ್ರದಲ್ಲಿ 'ಶೋಧನೆ' ಬುದ್ಧಿಯ ತೀಕ್ಷ್ಣವ್ಯಾಪಾರದಲ್ಲಿ ನೀವು ಭಕ್ತಿ ಶ್ರದ್ಧೆಗಳನ್ನು ತೊರೆಯುವವರಲ್ಲ ಹಾಗೆಯೇ ಭಕ್ತಿ ಶ್ರದ್ಧೆಗಳ ಆವೇಶದಲ್ಲಿ ಶೋಧಕನಿಗಿರಬೇಕಾದ ಜಾಗರೂಕತೆಯನ್ನು ಬಿಡುವವರೂ ನೀವಲ್ಲ. ಹೀಗೆ ಆಪಾತತಃ ಸೇರಲಾಗದ ಎರಡು ಗುಣಗಳು ನಿಮ್ಮಲ್ಲಿ ಸೇರಿವೆ, ಎಂದಿದ್ದಾರೆ. ಅವರ ಸಂಶೋಧನಾ ಕಾರ್ಯಕ್ಕೊಂದು ಸುವರ್ಣದ ಚೌಕಟ್ಟನ್ನು ತೊಡಿಸಿದ್ದಾರೆ. ತೀರ ಇತ್ತೀಚೆಗೆ ಡಾ. ಎಂ. ಚಿದಾನಂದಮೂರ್ತಿ ಅವರು ತಮ್ಮ 'ಭಾಷಿಕ ಬೃಹತ್ ಕರ್ನಾಟಕ'ದಲ್ಲಿ ರಾಜಪುರೋಹಿತರ ಬಗ್ಗೆ ಹೇಳುತ್ತ 'ನನಗೆ ತಿಳಿದ ಮಟ್ಟಿಗೆ ಆರ್. ಬಿ. ಜೋಷಿ, ಆರ್.ವಿ. ಜಾಗೀರದಾರ, ಶಂ.ಭಾ. ಜೋಶಿ ಇವರಿಗಿಂತ ಮೊದಲೇ ಮೂಲ ಕನ್ನಡ ನಾಡಿನ ಗಡಿಗಳನ್ನು ಗುರುತಿಸಿದವರು ಇವರು, ಎನ್ನುತ್ತಾರೆ.

✤ ✤ ✤ ✤

ಅಧ್ಯಾಯ -೧೯

• ಉರ್ದು ಶಾಲೆಗಳಲ್ಲಿ ಕನ್ನಡ ಕಲಿಕೆ

ಒಂದು ಕಾಲವಿತ್ತು. ಅನ್ಯ ರಾಜ್ಯಗಳಿಂದ ಬಂದ ಶರಣರು ಇಲ್ಲಿ ಕನ್ನಡ ಭಾಷೆಯನ್ನು ಕಲಿತು ಕನ್ನಡದಲ್ಲಿಯೇ ವಚನಗಳನ್ನು ಬರೆದು ಪ್ರಸಿದ್ಧ ಶಿರವಶಣರೆಂದು ಗುರುತಿಸಿಕೊಂಡಿದ್ದಾರೆ. ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ ಅಣ್ಣ ಬಸವಣ್ಣ ಅನುಭವ ಮಂಟಪವನ್ನು ಹೊಂದಿದಾಗ ಅದರಲ್ಲಿ ಕಾಶ್ಮೀರದ ಮಹಾದೇವ ಭೂಪಾಲ ಅಪಘಾನಿಸ್ತಾನದ ಮರಳಾ ಶಂಕರದೇಷ, ತೆಲಂಗಾಣದ ಬೊಮ್ಮಯ್ಯ, ಸೌರಾಷ್ಟ್ರದ ಆದಯ್ಯ ಮೊದಲಾದವರು ಅನುಭವ ಮಂಟಪದಲ್ಲಿ ಶರಣರೊಂದಿಗೆ ಸೇರಿ ಕನ್ನಡದಲ್ಲಿ ವಚನಗಳನ್ನು ರಚಿಸಿದರು. ಅದೇ ಬಸವ ಕಲ್ಯಾಣದ ನಾಡಿನಲ್ಲಿ, ಆನಂತರದ ದಿನಗಳಲ್ಲಿ ಕನ್ನಡ ಕಲಿತರೆ ದಂಡ ಹಾಕುತ್ತೇವೆ ಎಂಬ ಆಡಳಿತಗಳು ಬಂದವು. ಮೊದಲು ಬಹಮನಿಗಳು ಬಂದಾಗ ಪರ್ಶಿಯನ್, ಅರೇಬಿಕ್, ಆನಂತರದ ದಖಣಿ ಉರ್ದು ಭಾಷೆಗಳ ಅಟ್ಟಹಾಸ ಮೆರೆದರೆ ನಂತರದ ದಿನಗಳಲ್ಲಿ ಮರಾಠಿ ಭಾಷೆ ಬಂದಿತು. ಉರ್ದು ಭಾಷೆ ಮನೆ ಮಾತಾಯಿತು. ಮರಾಠಿ, ಉರ್ದು ಭಾಷೆಗಳನ್ನು ಕಲಿಯುವುದೆಂದರೆ ಅದೊಂದು ಗೌರವದ ಸಂಕೇತ, ಸುಸಂಸ್ಕೃತರ ಭಾಷೆ ಎಂಬುದಾಗಿ ನಾಡವರಲ್ಲಿ ಬೆಳೆದು ಬಂದದ್ದು ಆಶ್ಚರ್ಯವೆನಿಸಿದರೂ ವಾಸ್ತವ ಸಂಗತಿಯಾಯಿತು. ಈ ಎಲ್ಲ ಭಾಷೆಗಳ ಮಿಶ್ರಣದಿಂದ ಒಂದು ವಿಕೃತ ಕನ್ನಡಭಾಷೆ ರೂಪುಗೊಂಡದ್ದು ಅಖಂಡ ಕರ್ನಾಟಕ ನಿರ್ಮಾಣವಾಗಿ ಐವತ್ತು ವರುಷಗಳಾದರೂ ಪೂರ್ತಿಯಾಗಿ ತಿದ್ದುವುದು ಸಾಧ್ಯವಾಗಿಲ್ಲ. ಆದರೆ ಪ್ರಯತ್ನ ಮಾತ್ರ ನಡೆದದ್ದು ನೂರು ವರುಷಗಳಷ್ಟು ಹಿಂದಿನಿಂದ ಎಂಬುದು ಚೋದ್ಯವೇ ಸ್ರೈ.

ಕಳೆದ ಶತಮಾನದ ಪ್ರಾರಂಭದಲ್ಲಿ ಇಂದು ಹೈದರಾಬಾದ ಕರ್ನಾಟಕ ಎಂದು ಕರೆಯಿಸಿಕೊಳ್ಳುವ ನಾಡಿನಲ್ಲಿ ಕನ್ನಡ ಕಲಿಯಲೇಬೇಕೆಂಬ ಛಲ ಹುಟ್ಟಿದ್ದು ಕುತೂಹಲಕರವಾಗಿದೆ. ಎಲ್ಲೆಡೆ ಉರ್ದು ಮರಾಠಿ ಭಾಷೆಗಳದ್ದೇ ಮೇಲುಗೈಯಾಗಿದ್ದಾಗ ಬಸವಾದಿ ಪ್ರಥಮರ ವಚನಗಳನ್ನು ನೆನಪಿಸಿಕೊಳ್ಳುವುದು, ಅವುಗಳನ್ನು ಪಾಠ ಮಾಡಿ ಓದುವುದೂ ಕಠಿಣವಾಯಿತು. ಒಂದು ಹಂತದಲ್ಲಿ ಕನ್ನಡ ಜನರ ಮನದಿಂದ ವಚನಗಳು ಮರೆಯಾಗುವ ಮಟ್ಟಕ್ಕೆ ಬಂದಿತು. ಆಗ ಎಚ್ಚೆತ್ತ ವೀರಶೈವ ಮಠ ಮಾನ್ಯಗಳು ಜಾಗೃತವಾಗಿ ಕನ್ನಡ ವರ್ಣಮಾಲೆ, ಕನ್ನಡ ಭಾಷೆಯನ್ನು ಕಲಿಸುವ ಪಣ ತೊಟ್ಟವು. ಆದರೆ ಅದನ್ನು ಬಹಿರಂಗವಾಗಿ ಮಾಡುವುದು ಸಾಧ್ಯವಿರಲಿಲ್ಲ. ಪ್ರಾಥಮಿಕ ಶಾಲೆ ಎಂದರೆ ಅಲ್ಲಿ ಉರ್ದುವನ್ನಾದರೂ ಕಲಿಸಬೇಕು ಇಲ್ಲವೆ ಮರಾಠಿಯನ್ನು ಕಲಿಸಬೇಕು. ಕನ್ನಡಕ್ಕೆ ಆ ಭಾಗ್ಯ ಇರಲಿಲ್ಲ. ಇಂಥದೊಂದು ಗಂಭೀರ

ಸಂದರ್ಭದಲ್ಲಿ ವೀರಶೈವ ಮಠದ ಒಬ್ಬ ಸ್ವಾಮಿ ಕನ್ನಡ ಭಾಷೆಯನ್ನು ಕಲಿಸಲು ಪ್ರಾರಂಭಿಸಿದರು. ಮಠದ ಹೊರಗೆ 'ಉರ್ದು ಶಾಲೆ' ಎಂಬ ಫಲಕ, ಒಳಗೆ ಕನ್ನಡ ಕಲಿಕೆ! ನಮ್ಮ ಜನರಿಗೆ ಕನ್ನಡವನ್ನು ಕಲಿಸಲೇಬೇಕೆಂಬ ಪಣವನ್ನು ತೊಟ್ಟ ಸ್ವಾಮೀಜಿ. ಬೀದರ ಜಿಲ್ಲೆಯ ಭಾಲ್ಕಿಯ ಹಿರೇಮಠದ ಡಾ. ಚೆನ್ನಬಸವ ಪಟ್ಟದೇವರು! ಹಾಗೆಂದ ಮಾತ್ರಕ್ಕೆ ಅವರು ಮೊದಲು ಡಾಕ್ಟರರಾದವರಲ್ಲ ಆನಂತರದ ವರುಷಗಳಲ್ಲಿ ಕರ್ನಾಟಕ ರಾಜ್ಯ ನಿರ್ಮಾಣವಾಗಿ ನಾಲ್ಕು ದಶಕಗಳಿಗೆ ಹತ್ತಿರದ ವರುಷಗಳಿಗೆ ಸ್ವಾಮಿಗಳ ೧೧೧ನೆಯ ಜನ್ಮದಿನದಂದು ಕಲಬುರ್ಗಿ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿಯನ್ನು ನೀಡಿತು. ಸ್ವಾಮೀಜಿ ಬದುಕಿ ಬಾಳಿದ್ದು ೧೧೯ ವರುಷ. ಅವರ ಬದುಕೇ ಒಂದು ಪವಾಡ. ಅವರು ಮಾಡಿದ ಕೆಲಸಗಳನ್ನು ನೆನೆಪಿಸಿಕೊಳ್ಳುವುದೇ ಒಂದು ರೋಮಾಂಚನ. ಧರ್ಮವು ಕೂಡ ಒಂದು ಭಾಷೆಯನ್ನು ಹೇಗೆ ಉಳಿಸಬಲ್ಲದು ಎಂಬುದಕ್ಕೆ ಸಾಕ್ಷಿಯಾದರು. ಬಸವನೆಂದರೆ ಕನ್ನಡ, ಕನ್ನಡವೆಂದರೆ ಬಸವ ಎಂಬ ಒಂದು ಹೊಸ ಘೋಷಣೆಯನ್ನು ಹುಟ್ಟುಹಾಕಿ ಕನ್ನಡ ಭಾಷೆಯನ್ನು ಕಲಿಸಲು ಮುಂದಾದರು. ಬೀದರ ಜಿಲ್ಲೆಯ ಒಂದು ತಾಲೂಕು ಔರಾದ. ಆ ತಾಲೂಕಿನ ಒಂದು ಗ್ರಾಮಕ್ಕೆ ಪ್ರಾಚೀನ ಹೆಸರು 'ಮುರುಗ' ಆನಂತರ ನಿಜಾಮನ ದರಬಾರದಲ್ಲಿ ಸರದಾರನಾಗಿದ್ದ 'ಕಮಾಲಪಾಶಾನಿಗೆ ಜಹಗೀರು ದೊರೆತಾಗ 'ಮುರುಗ' 'ಕಮಾಲನಗರ' ವಾಯಿತು. ಅಲ್ಲಿಯ ರಾಚಪ್ಪ ಮತ್ತು ಸಂಗಮ್ಮ ದಂಪತಿಗಳಿಗೆ ದಿನಾಂಕ ೨೨-೧೨-೧೮೯೦ರಲ್ಲಿ ಹುಟ್ಟಿದ ಮಗುವಿಗೆ ಮನೆಯಲ್ಲಿ ನಾಮಕರಣವಾಗಿದ್ದು 'ಮಹಾರುದ್ರ'. ಈ ಮಹಾರುದ್ರ ೫ ವರುಷದ ಮಗುವಾಗಿದ್ದಾಗ ತಾಯಿ-ತಂದೆಗಳಿಬ್ಬರನ್ನೂ ಕಳೆದುಕೊಂಡು ಅನಾಥ ಮಗುವಾಯಿತು.

ಗ್ರಾಮದ ಪ್ರಮುಖರಾದ ಮಲಶೆಟ್ಟಿ, ಬಿರಾದಾರ ಮೊದಲಾದ ಸಮಾಜ ಬಾಂಧವರು ಸೇರಿ ಮಗುವನ್ನು ಕಮಾಲನಗರದ ಹಿರೇಮಠದಲ್ಲಿ ದೇಶಿಕರಾಗಿದ್ದ ಶಾಂತಯ್ಯ ಸ್ವಾಮಿಗಳಿಗೆ ಒಪ್ಪಿಸಿದರು. ಪುಟ್ಟಬಾಲಕ ಮಹಾರುದ್ರ ಚಟುವಟಿಕೆಯ ಬುಗ್ಗೆಯಾಗಿದ್ದನಂತೆ. ಮಠದಲ್ಲಿಯ ದಿನನಿತ್ಯದ ಕಾಯಕವೆಂದರೆ, ಉದಯದಲ್ಲೆದ್ದು ಸ್ನಾನ ಮಾಡಿ, ಭಕ್ತರ ಮನೆಯಿಂದ ಹಿಟ್ಟು ತರುವುದು. ಶರಣ ಭಿಕ್ಷೆ ಎತ್ತುವುದು ಆನಂತರ ಮಠದ ದನಕರುಗಳನ್ನು ಕಾಡಿಗೆ ಅಟ್ಟಿಕೊಂಡು ಹೋಗಿ ಮೇಯಿಸುವುದು ಮಗುವಿನ ನಿತ್ಯ ಕಾಯಕವಾಗಿತ್ತು.

ಮಹಾರುದ್ರನಿಗೆ ಎಂಟು ವರುಷಗಳಾಗುತ್ತಲೆ ಭಾಲ್ಕಿಯ ಮಠಾಧ್ಯಕ್ಷರಾಗಿದ್ದ ಶ್ರೀ ಸಿದ್ಧ ಬಸವ ಸ್ವಾಮಿಗಳು ಲಿಂಗದೀಕ್ಷೆಯ ಸಂಸ್ಕಾರವನ್ನು ನೀಡಿ ಚೆನ್ನಬಸವ ಎಬುದಾಗಿ ಮರು ನಾಮಕರಣ ಮಾಡಿದರು. ಮಾತೃಭಾಷೆ ಕನ್ನಡವಾಗಿದ್ದರೂ, ಕಲಿಯುವ ಸಾಧನಗಳಿದ್ದಿಲ್ಲ. ಮಠದ ಹತ್ತಿರದಲ್ಲಿದ್ದ ಕಿರಾಣಿ ಅಂಗಡಿಯ ಶಿವಮೂರ್ತಪ್ಪ ವಡ್ಡೆ ಅವರ ಹತ್ತಿರ ಮರಾಠಿ ಕಲಿತರು, ಮೋಡಿ ಅಕ್ಷರಗಳನ್ನು

ತೀಡಲು ಚೆನ್ನಾಗಿ ಕಲಿತುಕೊಂಡರು. ಇಡೀ ಗ್ರಾಮದಲ್ಲಿ ಹುಡುಕಿದಾಗ ಕನ್ನಡ ಅಕ್ಷರಗಳನ್ನುಬಲ್ಲ ಒಬ್ಬನೇ ಒಬ್ಬ ವ್ಯಕ್ತಿ ದೊರಕಿದನಂತೆ. ಅವನ ಹೆಸರು 'ಸಿದ್ಧರಾಮಪ್ಪ ಸಾಳಿ' ಆತನ ಹತ್ತಿರ, ಆತನಿಗೆ ಎಷ್ಟು ಬರುತ್ತಿತ್ತೋ ಅಷ್ಟು ಕನ್ನಡ ಅಕ್ಷರಗಳನ್ನು ಕಲಿತರು. ಈ ದಿನಗಳಲ್ಲೆ ಒಂದು ದಿನ ಮುಧೋಳದ ಡಾ. ಶಿವಲಿಂಗಸ್ವಾಮಿಗಳು ಭಿನ್ನಹಕ್ಕೆಂದು ಬಾಲಕ ಚೆನ್ನಬಸಪ್ಪನನ್ನು ಮುಧೋಳದ ಚರಮೂರ್ತಿಗಳಗೆ ಭೆಟ್ಟಿ ಮಾಡಿಸಿದರು. ಅಲ್ಲಿಯೇ ಇದ್ದ ಭಾಲ್ಕಿ ಹಿರೇಮಠದ ಶ್ರೀ ಸಿದ್ಧ ಬಸವ ಸ್ವಾಮಿಗಳು ಬಾಲಕನ ಮುಂದಿನ ಶಿಕ್ಷಣಕ್ಕಾಗಿ ಮುಧೋಳಕ್ಕೆ ಕರೆದುಕೊಂಡು ಹೋಗಲು ಒಪ್ಪಿದರು.

ಚೆನ್ನಬಸವನು ಅಲ್ಲಿ ಮತ್ತು ಔರಾದದ ಗಣಂಗಳಪ್ಪನವರ ಹತ್ತಿರ ಕನ್ನಡವನ್ನು ಚೆನ್ನಾಗಿ ಓದಲು ಬರೆಯಲು ಕಲಿತರು. ಹಾಗೆ ಓದು ಕಲಿತಾಗಲೇ ಒಂದು ದಿನಪತ್ರಿಕೆಯಲ್ಲಿ ಬಂದ ಸುದ್ದಿಯ ಬೆನ್ನು ಹತ್ತಿ ಇಂದಿನ ಬಾಗಲಕೋಟೆ ಜಿಲ್ಲೆಯ ಬದಾಮಿಯ ಹತ್ತಿರದ ಶಿವಯೋಗ ಮಂದಿರದಲ್ಲಿ ಮುಂದಿನ ಶಿಕ್ಷಣಕ್ಕಾಗಿ ಹೋಗುವುದೆಂದು ನಿರ್ಧರಿಸಿದನು.

ಮತ, ಧರ್ಮ ಭಾಷೆಗಳಿಗೆ ರಾಜಕೀಯ ಕಟ್ಟಳೆಗಳಿರುವುದಿಲ್ಲ. ಕನ್ನಡ ನಾಡು ಇಪ್ಪತ್ತಕ್ಕಿಂತ ಅಧಿಕ ಭಾಗಗಳಲ್ಲಿ ಹಂಚಿ ಹೋಗಿದ್ದರೂ ಇಲ್ಲಿಯ ಧರ್ಮ - ಭಾಷೆಗಳು ಜೀವಂತವಾಗಿದ್ದುವು. ಆದರೆ ಬೇರೆ ಬೇರೆ ಭಾಷೆ, ಧರ್ಮ ಸಂಸ್ಕೃತಿಗಳನ್ನೊಳಗೊಂಡ ಆಳರಸರ ಅಧೀನದಲ್ಲಿದ್ದವು. ಹೀಗಾಗಿ ಅವುಗಳಿಗೆ ತಮ್ಮತನವನ್ನು ಉಳಿಸಿ ಬೆಳೆಸಿಕೊಳ್ಳುವುದು ಕಠಿಣವಾಗಿತ್ತು. ೨೦ನೆಯ ಶತಮಾನದ ಪ್ರಾರಂಭದಲ್ಲಿ ಕನ್ನಡ ನಾಡಿನ ವಿಶಿಷ್ಟ ಧರ್ಮವಾದ ವೀರಶೈವ ಧರ್ಮ ಮತ್ತು ಅದರ ಭಾಷೆಯಾಗಿದ್ದ ಕನ್ನಡ ಭಾಷೆ ಎರಡೂ ಅವಸಾನದ ಅಂಚಿನಲ್ಲಿದ್ದವು. ಇದನ್ನು ಮನಗಂಡ ಹಾನಗಲ್ಲಿನ ಶ್ರೀ ಕುಮಾರಸ್ವಾಮಿಗಳು ಇವುಗಳ ಪುನರುಜ್ಜೀವನಕ್ಕಾಗಿ ೧೯೦೪ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದರು. ಅದರ ಮುಖ್ಯ ಉದ್ದೇಶ ವೀರಶೈವ ಮಠಗಳ ಜೀರ್ಣೋದ್ಧಾರ, ಅವುಗಳ ಕುರಿತಾದ ಸಂಶೋಧನೆ ಮತ್ತು ಸಂಘಟನೆಯಾಗಿತ್ತು. ಗುರಿಯನ್ನು ಸಾಧಿಸಲು ಮೊಟ್ಟ ಮೊದಲಿನ ತೊಡಕು ಭಾಷೆಯದಾಗಿತ್ತು. ವೀರಶೈವ ಧರ್ಮದ ಸಾಹಿತ್ಯವೆಂದರೆ ಶರಣರ ವಚನಗಳು ಮತ್ತು ಧರ್ಮದಲ್ಲಿ ಬರುವ ಧಾರ್ಮಿಕ ವಿಧಿ ವಿಧಾನಗಳು. ಅದು ಇದ್ದದ್ದು ಕನ್ನಡ ಭಾಷೆಯಲ್ಲಿ. ವೈದಿಕ ಧರ್ಮವನ್ನು ತಿಳಿಯಲು ಹೇಗೆ ಸಂಸ್ಕೃತ ಭಾಷೆ ಅಗತ್ಯವೋ ಅದರಂತೆಯೇ ವೀರಶೈವ ಧರ್ಮವನ್ನು ತಿಳಿಯಲು ಕನ್ನಡ ಭಾಷೆಯನ್ನು ಕಲಿಯುವುದು ಅವಶ್ಯವಾಯಿತು.

ವೀರಶೈವ ಮಠಗಳ ಜೀರ್ಣೋದ್ಧಾರವೆಂದರೆ ಮೊದಲು ಆ ಮಠಗಳಿಗೆ ಒಬ್ಬೊಬ್ಬ ಮಠಾಧಿಪತಿಗಳು ಬೇಕು, ಆ ಮಠಾಧಿಪತಿಗಳು ವೀರಶೈವ ಧರ್ಮವನ್ನು

-ಆಚಾರ-ವಿಚಾರಗಳನ್ನು ತಿಳಿದವರಾಗಿರಬೇಕು. ಹಾಗೆ ಸಿದ್ಧರಾಗುವ ಮಠಾಧಿಪತಿಗಳು ಬೇಕೆಂದರೆ ಅವರಿಗಾಗಿಯೇ ಒಂದು ವಿದ್ಯಾಲಯ ಬೇಕು. ಅಂಥದೊಂದು ವಿದ್ಯಾಮಂದಿರವನ್ನು ತೆರೆಯಬೇಕೆಂದ ಹಾನಗಲ್ಲು ಶ್ರೀ ಕುಮಾರಸ್ವಾಮಿಗಳು ತಾವೆ ಸ್ಥಾಪಿಸಿದ್ದ ಅಖಿಲ ಭಾರತ ವೀರಶೈವ ಮಹಾಸಭೆಗೆ ಸಲಹೆಯನ್ನು ನೀಡಿದರು. ಪ್ರತಿಯಾಗಿ ಮಹಾಸಭೆಯು ಆ ಹೊಣೆಯನ್ನು ಕುಮಾರಸ್ವಾಮಿಗಳಿಗೇ ವಹಿಸಿತು. ಸಮಗ್ರ ವೀರಶೈವರ ಧರ್ಮರಕ್ಷಣೆ, ಮಠಗಳ ಜೀರ್ಣೋದ್ಧಾರ, ಸಮಾಜ ಸಂಘಟನೆ ಅದಕ್ಕಾಗಿಯೇ ತರಬೇತಿ ನೀಡುವ ಮಹದಾಶೆಯಿಂದ ೧೯೦೯ರಲ್ಲಿ ಇಂದಿನ ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಹತ್ತಿರ ಶಿವಯೋಗ ಮಂದಿರವನ್ನು ಶ್ರೀಗಳವರು ಸ್ಥಾಪಿಸಿದರು. ಮಲಾಪಹಾರಿ ನದಿಯ ಸುಂದರ ತಟದಲ್ಲಿರುವ ಶಿವಯೋಗ ಮಂದಿರ ವಿದ್ಯಾಸಂಸ್ಥೆಯು, ಸಾವಿರದ ಐನೂರು ವರುಷಗಳ ಹಿಂದೆ ಕನ್ನಡಿಗರ ಸಾಮ್ರಾಜ್ಯವನ್ನು ಕಟ್ಟಿದ ಚಾಲುಕ್ಯರ ರಾಜಧಾನಿಯಲ್ಲೆ ಪ್ರಾರಂಭವಾದದ್ದು ಒಂದು ಕಾಕತಾಲಿಯವಾಗಿದ್ದರೂ ಅರ್ಥಪೂರ್ಣವಾಗಿತ್ತು. ಉದ್ದೇಶವು ಮಠ, ಧರ್ಮ, ಮತ್ತು ಸಮಾಜ ಸಂಘಟನೆಯ ದಾಗಿದ್ದರೂ ನಾಡಿನ ಭಾಷೆಯ ಪುನರುಜ್ಜೀವನಕ್ಕೆ ಬಹುದೊಡ್ಡ ಕುಮ್ಮಕ್ಕು ದೊರೆಯಿತು.

ಭಾಲ್ಕಿಯ ಚೆನ್ನಬಸವರು 'ಶಿವಯೋಗ ಮಂದಿರಕ್ಕೆ ಬಂದು ಸೇರಿದರು. ಅಲ್ಲಿ ಚೆನ್ನಬಸವರು ಹಾನಗಲ್ಲು ಶ್ರೀಗಳ ಕಣ್ಣರಿಕೆಯಲ್ಲಿ ಸಾಧಕರಾಗಿ ಶಿಸ್ತುಬದ್ಧ ಜೀವನವನ್ನು ಮೈಗೂಡಿಸಕೊಂಡರು. ಹಾನಗಲ್ಲು ಕುಮಾರಸ್ವಾಮಿಗಳು ಚೆನ್ನಬಸವರನ್ನು ತಮ್ಮ ಜೊತೆಗೆ ಆರು ವರುಷಗಳ ಕಾಲ ಇಟ್ಟುಕೊಂಡರು. ಆ ದಿನಗಳಲ್ಲಿಯೇ ಅವರು ಚೆನ್ನಬಸವರಿಗೆ ಶರಣರ ವಚನಗಳನ್ನು ಕಲಿಸಿದರು. ಯೋಗಾಸನ ಕಲಿಸಿದರು. ೫೦ಕ್ಕೂ ಮೇಲ್ಪಟ್ಟು ಯೋಗಾಸನಗಳನ್ನು ಹಾಕ ಹತ್ತಿದರು. ನಾಗನೂರಿನ ಶಿವಬಸವಸ್ವಾಮಿಗಳು ಅಲ್ಲಿ ಅವರಿಗೆ ಸಹಪಾಠಿಗಳಾಗಿದ್ದರು.

ಶಿವಯೋಗ ಮಂದಿರದಿಂದ ಹೊರಬಂದ ಬಹುತೇಕ ಸ್ವಾಮಿಗಳು ಅಂದಿನ ದಿನಗಳಲ್ಲಿ ನಾಡಿನ ನಾಲ್ಕು ನಿಟ್ಟಿನಲ್ಲೂ ಕನ್ನಡಭಾಷೆಯನ್ನು ಕಲಿಸುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದು ನಾಡಿನ ಭಾಷೆಯನ್ನು ಉಳಿಸುವಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸಿದ್ದರೆ, ಆ ಮಠಗಳು ಒಂದೊಂದೂ ಇಂದು ನಾಡಿನಾದ್ಯಂತ ಹೆಸರು ಗಳಿಸಿವೆ.

ಶಿವಯೋಗ ಮಂದಿರದಿಂದ ಶಿಕ್ಷಣ ಪೂರೈಸಿ ಬಂದ ಯುವಕ ಚೆನ್ನಬಸವರು ಪುಟಕ್ಕಿಟ್ಟ ಚಿನ್ನದಂತಾದರು. ಕಟ್ಟು ಮಸ್ತಾದ ಶರೀರ, ಧೀರ ನಿಲುವು, ಎತ್ತರದ ದೇಹದಲ್ಲಿ ಎದ್ದುಕಾಣುವ ಮೂಗು, ಕೈ ಕಟ್ಟಿ ನಿಂತ ಸ್ವಾಮಿ ವಿವೇಕಾನಂದರಂತೆ ಕಾಣುತ್ತಿದ್ದರು. ಶಾಂತ ಮುಖ ಮುದ್ರೆಯಲ್ಲಿ ಏನೋ ಹುಡುಕುತ್ತಿರುವ ಕಣ್ಣುಗಳು,

ಸಮಾಜ ಪರಿವರ್ತನೆಯ ಹುಮ್ಮಸ್ಸು ಶರಣರ ತೇಜಸ್ಸು ಎದ್ದು ಕಾಣುತ್ತಿತ್ತು. ಭಾಲ್ಕಿ ಮಠದ ಹಿರಿಯರೆಲ್ಲ ಸೇರಿ ಅವನನ್ನೇ ಭಾಲ್ಕಿ ಹಿರೇಮಠದ ಪೀಠಕ್ಕೆ ತರಬೇಕೆಂದು ನಿರ್ಧರಿಸಿದರು ಗುರುಗಳು ಹೇಳಿ ಕಳಿಸಿದ ಗುರಿಯನ್ನು ಮುಟ್ಟಲು ಇದುವೆ ಅವಕಾಶವೆಂದು ಚೆನ್ನ ಬಸವ ಅದಕ್ಕೆ ಒಪ್ಪಿದರು. ಸಮಾರಂಭಕ್ಕೆ ಗುರುಗಳಾದ ಹಾನಗಲ್ಲು ಶ್ರೀಗಳವರನ್ನೆ ಕರೆಯಿಸಿದರು. ೧೯೨೪ರ ಫೆಬ್ರವರಿಯಲ್ಲಿ ಭಾಲ್ಕಿಯ ಹಿರೇಮಠದ ಪೀಠವನ್ನೇರಿ ಚೆನ್ನ ಬಸವರು ಬಾಲ್ಕಿಯ ಹಿರೇಮಠದ 'ಚೆನ್ನಬಸವ ಪಟ್ಟ ದೇವರು' ಆದರು.

ಭಾಲ್ಕಿ ಹಿರೇ ಮಠದ ನೂತನ ಪೀಠಾಧಿಪತಿಗಳಾದ ಶ್ರೀ ಚೆನ್ನಬಸವ ಪಟ್ಟಾಧ್ಯಕ್ಷರಿಗೆ ಗುರುಗಳಾದ ಹಾನಗಲ್ಲು ಶ್ರೀಗಳು ನೀಡಿದ ಮೊದಲ ಪಾಠಗಳೆಂದರೆ, ಈ ಭಾಗದಲ್ಲಿ ಕನ್ನಡದ ಪ್ರಚಾರವಾಗಬೇಕು, ಶಿಕ್ಷಣ ಬೆಳೆಯಬೇಕು. ಹಾಳಾಗುತ್ತಿರುವ ಲಿಂಗವಂತ ಧರ್ಮವನ್ನು ಪುನಶ್ಚೇತನಗೊಳಿಸಬೇಕೆಂದು ಉಪದೇಶಿಸಿದರು ! ಪಟ್ಟದ ದೇವರು ಅದಕ್ಕೆ ಕಂಕಣ ಬದ್ಧರಾದರು.

ಭಾಲ್ಕಿಯ ಹಿರೇಮಠಕ್ಕೆ ಸುತ್ತಲಿನ ಪರಿಸರದಲ್ಲಿ ೩೬ ಶಾಖಾ ಮಠಗಳಿದ್ದವು. ಅವುಗಳಲ್ಲಿ ಬಹುತೇಕ - ಮಠಗಳು ಹಾಳು ಬಿದ್ದಿದ್ದುವು. ಒಂದೊಂದಾಗಿ ಅವುಗಳ ಜೀರ್ಣೋದ್ಧಾರದ ಕಾರ್ಯವನ್ನು ಪ್ರಾರಂಭಿಸಿದರು. ಈ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ನಾರಾಯಣಖೇಡ ತಾಲೂಕಿನ ಮೋರಗಿಯಲ್ಲಿ ಶಾಂತಿವರ್ಧಕ ಗುರುಕುಲಾಶ್ರಮ ಶಾಲೆಯನ್ನು ಸ್ಥಾಪಿಸಿದರು. ಹೈದರಾಬಾದು ನಿಜಾಮ ಸರಕಾರದಲ್ಲಿ ಉರ್ದು ಭಾಷೆಯ ಹೊರತಾಗಿ ಬೇರಾವ ಭಾಷೆಗಳಲ್ಲೂ ಶಿಕ್ಷಣ ಪಡೆಯುವ ಅವಕಾಶವಿರಲಿಲ್ಲವಷ್ಟೆ - ಆದರೆ ಇಲ್ಲಿ ವೀರಶೈವ ಧರ್ಮವನ್ನು ತಿಳಿಸಲು ಶರಣರ ವಚನಗಳನ್ನು ಅಭ್ಯಸಿಸಬೇಕು. ಅದು ಇರುವುದು ಕನ್ನಡದಲ್ಲಿ, ಕನ್ನಡವನ್ನೇ ಕಲಿಯಬೇಕೆಂದು ಪಣತೊಟ್ಟರು. ಅದಕ್ಕಾಗಿ ಅನೇಕ ಕಷ್ಟ ನಷ್ಟಗಳನ್ನು ಅಪಮಾನವನ್ನೂ ಸಹಿಸಬೇಕಾಯಿತು.

ಅವುಗಳನ್ನು ಬಸವ ಪ್ರಸಾದವೆಂದು ಸ್ವೀಕರಿಸಿ ಎದೆಗುಂದದೆ ಮುನ್ನಡೆದರು.

ಮೋರಗಿಯಲ್ಲಿ ನಾಲ್ಕನೆಯ ವರ್ಗದವರೆಗೆ ಶಾಲೆಯನ್ನು ಪ್ರಾರಂಭಿಸಿದರು. ಶಾಲೆಯಲ್ಲಿ ಶರಣರ ವಚನಗಳ ಪಠಣ ಹಾಗೂ ಸಾಮೂಹಿಕ ಪ್ರಾರ್ಥನೆಗೆ ಆದ್ಯತೆ ಇರುತ್ತಿತ್ತು. ಸುಮಾರು ೧೦೦ ವಿದ್ಯಾರ್ಥಿಗಳು ಓದುತ್ತಿದ್ದರು ಶಾಲೆಯ ಹೊರಗಡೆ ಉರ್ದು ಪ್ರಾಥಮಿಕ ಶಾಲೆ' ಎಂಬ ಬೋರ್ಡನ್ನು ಹಾಕಿದರು. ಅದರಿಂದಾಗಿ ಉರ್ದು ಅಧಿಕಾರಿಗಳ ಕಿರುಕುಳ ತಪ್ಪಿತು. ತರಗತಿಗಳಲ್ಲಿ ಕನ್ನಡವನ್ನು ಕಲಿಸಲು ಅನುಕೂಲವಾಯಿತು.

ವಿದ್ಯಾರ್ಥಿಗಳು ಬಂದರು. ಶರಣರ ವಚನಗಳನ್ನು ಪಾಠ ಮಾಡಹತ್ತಿದರು. ಆದರೆ ಹೊಟ್ಟೆಗೆ ಏನು ? ಎಂಬ ಸಮಸ್ಯೆ ಎದುರಾಯಿತು. ಊರಲ್ಲಿಯ ಕನ್ನಡ

ಅಭಿಮಾನಿಗಳ ಮನೆಗಳನ್ನು ಪತ್ತೆ ಹಚ್ಚಿ ಅವರ ಮನೆಗೆ ಜೋಳಿಗೆಯನ್ನು ಕಳಿಸಿದರು. ಜೋಳಿಗೆಯ ಮೇಲೆ 'ಶಾಂತಿ ವರ್ಧಕ ಮುಷ್ಟಿ ಫಂಡ್' ಎಂದು ಬರೆಯಲಾಯಿತು. ಆಗೆಲ್ಲಾ ಹಿಟ್ಟಿನ ಗಿರಣಿಗಳಿರಲಿಲ್ಲ. ಪ್ರತಿಯೊಬ್ಬರ ಮನೆಯಲ್ಲಿ ದಿನ ಬೆಳಿಗ್ಗೆ ಬೀಸುವ ಕಲ್ಲಿನಲ್ಲಿ ಜೋಳ ಬೀಸಿ ಹಿಟ್ಟು ಮಾಡಿದ ಮೇಲೆ ರೊಟ್ಟಿ! ಹಾಗೆ ಬೀಸಿಯಾದ ಮೇಲೆ ರೊಟ್ಟಿಗೆ ಹೋಗುವ ಮುನ್ನ ಈ ಜೋಳಿಗೆಯಲ್ಲಿ ಒಂದು ಮುಷ್ಟಿ ಹಿಟ್ಟು ಹಾಕಿ ಹೋಗಬೇಕು. ಜೋಳಿಗೆಗಳನ್ನು ಜಾತಿ ಬೇಧವಿಲ್ಲದೆ ಎಲ್ಲರ ಮನೆಗಳಿಗೂ ಒದಗಿಸಲಾಗುತ್ತಿತ್ತು. ಆದರೆ ಆ ಮನೆಗಳು ಮಾತ್ರ ಕನ್ನಡದವರಾಗಿರಬೇಕು.

ಹೀಗೆ ಜೋಳಿಗೆಯಲ್ಲಿ ಸಂಗ್ರಹವಾದ ಹಿಟ್ಟು ಧಾನ್ಯಗಳನ್ನು ಹಳ್ಳಿ - ಹಳ್ಳಿಗಳಿಂದ ಕೂಡಿಸಿ ಕುದುರೆ, ಎತ್ತಿನ ಬಂಡಿಗಳ ಮೂಲಕ ಮೋರಗಿಗೆ ತರಬೇಕು. ಒಂದೊಂದು ಸಲ ಚೆನ್ನಬಸವ ಪಟ್ಟದ ದೇವರು ತಾವೆಯೇ ಹೆಗಲ ಮೇಲೆ ಹೊತ್ತು ತಂದು ಈ ಮಕ್ಕಳಿಗೆ ಅನ್ನ ಹಾಕಿ ಕನ್ನಡ ಕಲಿಸಿದರು.

ಮೋರಗಿಯಲ್ಲಿ ನೀರಿನ ಅಭಾವವಿತ್ತು ಹಾಗೂ ಹೀಗೂ ಎರಡು ವರುಷ ಶಾಲೆ ನಡೆಯಿತು. ನೀರಿನ ತೊಂದರೆ ಉಲ್ಬಣಿಸಿದಾಗ ಶಾಲೆಯನ್ನು ಸಂಗಮಕ್ಕೆ ಸ್ಥಳಾಂತರಿಸಿದರು. ಅಲ್ಲಿ ಪಟ್ಟದ ದೇವರೇ ಗುದ್ದಲಿ - ಸಲಿಕೆಗಳನ್ನು ಹಿಡಿದು ಊರವರ ನೆರವಿನಿಂದ ಶ್ರಮದಾನ ಮಾಡಿ ಆರು ಕೊಠಡಿಗಳ ಶಾಲೆಯನ್ನು ಕಟ್ಟಿದರು. ಶಾಲೆಯ ಬಯಲಿನಲ್ಲಿ ಮಾವಿನ ಸಸಿಗಳನ್ನು ನೆಟ್ಟರು. ಇಂದು ಅವು ದೊಡ್ಡವಾಗಿ ಉತ್ತಮ ಫಲಗಳನ್ನು ನೀಡುತ್ತಿವೆ.

ಅಂದಿನ ದಿನಗಳಲ್ಲಿ ಜನಸಾಮಾನ್ಯರಿಗೆ ಶಿಕ್ಷಣ ದೊರೆಯುತ್ತಿರಲಿಲ್ಲ. ಶಿಕ್ಷಣ ದೊರೆಯದ ಹೊರತು ಸಮಾಜದ ಉದ್ಧಾರ ಸಾಧ್ಯವಿಲ್ಲವೆಂದು ಮನಗಂಡ ಪಟ್ಟದ ದೇವರು ಈಗ ಬೇರೆ - ಬೇರೆ ಊರುಗಳಲ್ಲೂ ಶಾಲೆಗಳನ್ನು ತರೆಯಲು ಉದ್ಯುಕ್ತರಾದರು. ಹಾಗೆ ಜಹೀರಾಬಾದ, ಉದಗೀರ, ಹಣೇಗಾಂವ ಮತ್ತು ಭಾಲ್ಕಿಗಳಲ್ಲೂ ಒಂದೊಂದು ಕನ್ನಡ ಶಾಲೆಗಳನ್ನು ತೆರೆದರು. ಶಿಕ್ಷಕರ ಸಂಬಳವನ್ನು ಊರವರ ನೆರವಿನಿಂದ ವಂತಿಗೆಯ ಮೂಲಕ ಸಂಗ್ರಹಿಸಿ ಎರಡು, ನಾಲ್ಕು ಹೆಚ್ಚೆಂದರೆ ಎಂಟೂ ರೂಪಾಯಿಗಳ ಸಂಬಳವನ್ನು ಕೊಟ್ಟು ಶಾಲೆಗಳನ್ನು ನಡೆಸಿದರು.

ಮೋರಗಿ ಇಂದು ಆಂಧ್ರಪ್ರದೇಶದಲ್ಲಿದೆ. ಅಲ್ಲಿ ಒಂಭತ್ತು ದಶಕಗಳ ಹಿಂದೆ ಕನ್ನಡದ ಮೊದಲ ಶಾಲೆಯನ್ನು ಪ್ರಾರಂಭಿಸುವಾಗ ಚೆನ್ನಬಸವ ಪಟ್ಟದೇವರು ಪಟ್ಟ ಪಾಡು ಅಷ್ಟಿಷ್ಟಲ್ಲ. ಕನ್ನಡ ಶಾಲೆಯೊಂದನ್ನು ಆರಂಭಿಸಲು ಹೈದರಾಬಾದಿನ ನಿಜಾಮ್ ಸರಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾಯಿತು. ಅದು ವಿಚಾರಣೆಗೆ ಕಲುಬುರ್ಗಿಗೆ ಬಂದಿತು. ಸ್ವಾಮಿಗಳು ಹೀಗೆ ಕಲಬುರ್ಗಿ, ಹೈದರಾಬಾದ್ ನಗರಗಳಿಗೆ ನಾಲ್ಕು ವರುಷಗಳ ಕಾಲ ಓಡಾಡಿದರು. ಯಾವಾಗ ಹೋದರೂ ನಿಜಾಮ್ ಸರಕಾರದ ಗುಮಾಸ್ತರು ಈ ಮೋರಗಿ ಕನ್ನಡ ಶಾಲೆಗೆ ಸಂಬಂಧಪಟ್ಟ ಫೈಲನ್ನು ಕೆಳಗಡೆಯೇ ಇಟ್ಟಿರುತ್ತಿದ್ದರು.

ಕೊನೆಗೆ ಬೇಸತ್ತು ಹೋದ ಪಟ್ಟದೇವರು ಅಂದಿನ ಕಾಲದಲ್ಲಿ ಗುಮಾಸ್ತನಿಗೆ ಎಂಟಾಣೆ ಲಂಚವನ್ನು ಕೊಟ್ಟು ಫೈಲನ್ನು ಮೇಲೆ ತಂದರು. ಕನ್ನಡಕ್ಕೆ ಅನುಮತಿ ಸಿಗಲಿಲ್ಲವಾದ್ದರಿಂದ ಉರ್ದು ಶಾಲೆಗೆ ಅನುಮತಿ ಪಡೆದು ಶಾಲೆಯನ್ನು ಆರಂಭಿಸಿದರು. ಸರಕಾರಿ ಕಡತಗಳಲ್ಲಿ ಉರ್ದು ಶಾಲೆ ಆದರೆ, ಒಳಗೆ ಕಲಿಸುವುದು ಕನ್ನಡ. ಇದು ಕನ್ನಡದ ನೆಲದಲ್ಲಿ ಕನ್ನಡಿಗರು ಪಟ್ಟಬವಣೆ.

ಈಗ ಚೆನ್ನಬಸವ ಪಟ್ಟದೇವರಿಗೆ ಹಿಡಿತ ಬಂತು. ಸತತ ಪ್ರಯತ್ನದಿಂದ ಇಂದು ಮಹಾರಾಷ್ಟ್ರದಲ್ಲಿರುವ ಲಾತೂರ್, ಉದ್ಗೀರ್, ಆಂಧ್ರದಲ್ಲಿರುವ ಕಾರಾಮಂಗಲಗಿ, ಜಹೀರಾಬಾದ್‌ಗಳಲ್ಲಿ ಉರ್ದು ಶಾಲೆಗಳನ್ನು ತೆರೆದು ಕನ್ನಡ ಬೋಧನೆಯನ್ನು ಪ್ರಾರಂಭಿಸಿದರು. ಜೊತೆ ಜೊತೆಗೆ, ಸೊಲ್ಲಾಪುರ, ಬೀದರ್, ಭಾಲ್ಕಿ ಹಣೇಗಾಂವಗಳಲ್ಲೂ ಶಾಲೆಗಳು ಆರಂಭವಾದವು.

ಹಿಂದಿನ ದಿನಗಳಲ್ಲಿ ಬ್ರಿಟಿಷ್, ನಿಜಾಮ ಸರಕಾರಗಳಲ್ಲಿ ಮನೆಗೆ ಒಬ್ಬರನ್ನಾದರೂ ಸೈನ್ಯಕ್ಕೆ ಕಳಿಸಬೇಕೆಂಬ ಕಡ್ಡಾಯ ನಿಯಮವಿತ್ತು. ಆ ಮಾದರಿಯಲ್ಲಿ ಪಟ್ಟದೇವರು ಬೀದರ, ಲಾತೂರು, ಸೊಲ್ಲಾಪುರ ಭಾಗಗಳಲ್ಲಿಯ ಕನ್ನಡ ಮನೆಗಳನ್ನು ಹುಡುಕಿ ಮನೆಗೆ ಒಬ್ಬರನ್ನಾದರೂ ಕನ್ನಡ ಕಲಿಯಲು ಕಳಿಸಬೇಕೆಂದು ಮನೆ - ಮನೆಗೆ ಹೋಗಿ ಕೇಳಿಕೊಂಡರು. ಅವರ ಮೇಲೆ ನೈತಿಕ ಒತ್ತಡ ಹೇರಿದರು.

ಬೀದರ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ತೆಲುಗು, ಮರಾಠಿ, ಉರ್ದು, ಭಾಷೆಗಳ ಪ್ರಾಬಲ್ಯವಿದ್ದಾಗ ಕನ್ನಡದ ಸೊಲ್ಲನ್ನು ಎತ್ತಿ ಅದು ಕರ್ನಾಟಕದಲ್ಲಿಯೇ ಉಳಿಯುವಂತೆ ಮಾಡಿದ್ದು ಅವರ ದೊಡ್ಡ ಸಾಧನೆಯಾಗಿದೆ. ಅದೇ ತರದ ಪ್ರಯತ್ನವನ್ನು ಅವರು ಸೊಲ್ಲಾಪುರ, ಲಾತೂರ್, ಹಣೇಗಾಂವ ಜಹೀರವಾದ, ಕಾರಾಮಂಗಲಗಿಗಳಲ್ಲೂ ಮಾಡಿದರು. ಆದರೆ ಅವುಗಳು ಕರ್ನಾಟಕಕ್ಕೆ ದಕ್ಕದೇ ಹೋದವು ಎಂಬ ಬಗ್ಗೆ ಪಟ್ಟದೇವರು ತಮ್ಮ ಉಸಿರು ಇರವವರೆಗೂ ವ್ಯಥೆ ಪಡುತ್ತಿದ್ದರು.

'ಕನ್ನಡವೆಂದರೆ ಬಸವ, ಬಸವನೆಂದರೆ ಕನ್ನಡ, ಇದು ಅಪ್ಪಗಳ ಬಾಳಮಂತ್ರ' ಎಂಬುದಾಗಿ ಹೇಳಿದ್ದು ಉಚಿತವಾಗಿದೆ. ನಮ್ಮ ಜನಗಳ ಜೀವನಾಡಿ ಕನ್ನಡವಾಗಿತ್ತು. ಆದರೆ ಅಲ್ಲಿ ಒತ್ತಾಯ ಪೂರ್ವಕ ತೆಲಗು, ಮರಾಠಿ, ಉರ್ದು, ಭಾಷೆಗಳು ಹರಿವಂತೆ ಮಾಡಲಾಗಿತ್ತು. ಅಂತೆಯೇ ಚನ್ನಬಸವ ಪಟ್ಟದ ದೇವರು ಬೀದರ ಜಿಲ್ಲೆಯಲ್ಲಿ ಊರೂರು ತಿರುಗಿ ಜನರಿಗೆ ಕನ್ನಡ ಭಾಷೆಯ ಬಗ್ಗೆ ತಿಳಿ ಹೇಳಿ ಕನ್ನಡಿಗರ ಚಿತ್ತ ಕನ್ನಡದತ್ತ ತಿರುಗಲು ಕಿಂಚಿತ್ ಯಶಸ್ವಿಯಾದರು.

ಇಂದು ಮಹಾರಾಷ್ಟ್ರದ ಪ್ರಮುಖ ನಗರವಾದ ಲಾತೂರು ಒಂದು ಕಾಲದಲ್ಲಿ ಕನ್ನಡನಾಡಿನ ನಟ್ಟ ನಡುವಿನ ಊರು. ಶತಮಾನದ ಹಿಂದಷ್ಟೆ ಪಟ್ಟದ ದೇವರು ಲಾತೂರು ನಗರದ ಹೊರವಲಯದ ಸ್ಮಶಾನದಲ್ಲಿರುವ ಮಠದಲ್ಲಿ ಕನ್ನಡ ಶಾಲೆಯನ್ನು

ತೆರೆದು ವಿದ್ಯಾರ್ಥಿಗಳಿಗೆ ವಸತಿಯನ್ನೂ ಕಲ್ಪಿಸಿದ್ದರು. ಮಕ್ಕಳು ಸ್ಮಶಾನದ ವಾತಾವರಣದಿಂದ ಹೆದರಬಾರದೆಂದು ಸ್ವಾಮಿಗಳು ಮಕ್ಕಳ ಜೊತೆಯಲ್ಲಿಯೇ ಮಲಗುತ್ತಿದ್ದರು. ಇಲ್ಲಿ ಸುಮಾರು ೪೦ ವಿದ್ಯಾರ್ಥಿಗಳಿದ್ದರು. ಅವರುಗಳಲ್ಲಿ ಇಂದು ನಮ್ಮ ಮಧ್ಯೆ ಇರುವ, ಇತ್ತೀಚಿನ ಬೀದರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಸುಪ್ರಸಿದ್ಧ ಸಾಹಿತಿ ಶಾಂತರಸರೂ ಒಬ್ಬರಾಗಿದ್ದರು.

ಲಾತೂರಿನ ಶಾಲೆಗೂ ಗಂಡಾಂತರ ಬಂದಿತು. ಲಾತೂರಿನವನೇ ಆದ ವಕೀಲ ಕಾಶಿಂ ರಝ್ವೀ ಎಂಬ ನಿಜಾಮನ ಮತಾಂಧ ಸರದಾರನು ಮುಸ್ಲಿಂ ರಾಜ್ಯವನ್ನು ಸ್ಥಾಪಿಸುವ ಹುಚ್ಚಿನಲ್ಲಿ ನಿಜಾಮ್ ಪ್ರಾಂತವನ್ನೇ ಭಯೋತ್ಪಾದನೆಯ ಕೇಂದ್ರವನ್ನಾಗಿಸಿದನು. ಹಿಂದುಗಳ ಬದುಕು ದುಸ್ತರವಾಯಿತು. ಈ ಸಂದರ್ಭದಲ್ಲಿ ಪಟ್ಟದ ದೇವರು ವಿದ್ಯಾರ್ಥಿಗಳೊಂದಿಗೆ ಹತ್ತಿರದ ಸೊಲ್ಲಾಪುರಕ್ಕೆ ನಡೆದರು. ಅದು ಬ್ರಿಟಿಷರ ಆಡಳಿತದ ಮುಂಬಯಿ ರಾಜ್ಯದಲ್ಲಿ ಇತ್ತಾದ್ದರಿಂದ ಅಲ್ಲಿ ರಜಾಕಾರರ ಹಾವಳಿ ಇರಲಿಲ್ಲ. ಸೊಲ್ಲಾಪುರದಲ್ಲಿ ಕುಂಟೋಜಿ ಮಠದ ಸಿದ್ಧರಾಮ ಶ್ರೀಗಳವರು ಪಟ್ಟದ ದೇವರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಶ್ರಯ ಕೊಟ್ಟರು. ಜೊತೆಗೆ ಜಯದೇವಿ ತಾಯಿ ಲಿಗಾಡೆ, ಸಂಗಮ್ಮ ಮಡಕಿ, ಶಂಕರಮ್ಮ ಚಾಕೋತೆ, ನಾಗಪ್ಪಣ್ಣ ಕಾಡಾದಿ, ಬಾಬಾ ಸಾಹೇಬ ವಾರದ ಮೊದಲಾದ ಗಣ್ಯರು ಸಹಾಯ ಸಹಕಾರ ನೀಡಿದರು.

ನಿಜಾಮ ಸರಕಾರದ ಅಡೆತಡೆಗಳಲ್ಲಿ ಕನ್ನಡ ಶಾಲೆಗಳನ್ನು ನಡೆಸಿದ್ದು, ಊಟ ವಸತಿ ಕಲ್ಪಿಸಿ ಕನ್ನಡ ಕಲಿಸಿದ್ದು ಕನ್ನಡದ ಬಗ್ಗೆ ಪಟ್ಟದ ದೇವರಿಗೆ ಇದ್ದ ಶ್ರದ್ಧೆಯನ್ನು ಎತ್ತಿ ತೋರಿಸುತ್ತದೆ. 'ಕನ್ನಡ ಸೇವೆಯೇ ಧರ್ಮಸೇವೆ' ಎಂದರು. ಕನ್ನಡದ ಕುಲಗುರು ಅಣ್ಣ ಬಸವಣ್ಣನ ಸೇವೆಯೆಂದರೆ ಕನ್ನಡದ ಸೇವೆ ಎಂದು ಅವರು ನಂಬಿದ್ದರು. ಶರಣರ ವಚನಗಳೆಲ್ಲ ಕನ್ನಡದಲ್ಲಿರುವುದರಿಂದ ಧರ್ಮದ ಉಳಿವಿಗೆ ಕನ್ನಡದ ಉಳಿವು ಅವಶ್ಯ ಎಂದರು. ಅಂತೆಯೇ ಕನ್ನಡಕ್ಕೆ ಪ್ರಾಮುಖ್ಯತೆ ನೀಡಿ ಮಕ್ಕಳಿಗೆ ಕಷ್ಟಪಟ್ಟು ಕನ್ನಡವನ್ನು ಕಲಿಸಿದರು.

ಬಸವಾದಿ ಪ್ರಥಮರ ಕಾಲದಲ್ಲಿ ಇಲ್ಲಿ ಕನ್ನಡ ಕೃಷ್ಣೆ ತುಂಬಿ ಹರಿದಿದ್ದಳು. ಆನಂತರ ಬತ್ತಿಹೋಯಿತು. ಗೋದಾವರಿಯಲ್ಲಿ ಮರಾಠಿ, ಭೀಮೆಯಲ್ಲಿ ತೆಲುಗು ಭಾಷೆಗಳು ಹರಿದವು. ತಲೆ ಮೇಲೆ ರೂಮಿ ಟೊಪ್ಪಿಗೆ, ಮೈಮೇಲೆ ಶೇರವಾನಿ, ಫಾಯಜಮಾಗಳು ಕಡ್ಡಾಯವಾದವು. ಕನ್ನಡ ಮಾತೆತ್ತಿದರೆ ಕತ್ತು ಮುರಿಸಿಕೊಳ್ಳುವ ಕಾಲ ಬಂದಿತು. ಅಂಥ ಕನ್ನಡದ ಗಾಢ ಅಂಧಃಕಾರದಲ್ಲಿ ಭಾಲ್ಕಿಯ ಹಿರೇಮಠದ ಚೆನ್ನಬಸವ ಪಟ್ಟದ ದೇವರು ಕನ್ನಡದ ದೀಪವನ್ನು ಬೆಳಗಿಸಿದರು. ಎಷ್ಟೆಲ್ಲ ಗಾಳಿ, ಬಿರುಗಾಳಿ ಬಂದರೂ ತಮ್ಮ ಕಾವಿಯ ಬಟ್ಟೆಯಿಂದ ಅದು ಶಾಂತವಾಗದಂತೆ ನೋಡಿಕೊಂಡರು. ಎಂಥದೇ ಅಡೆತಡೆ ಬಂದರೂ ಹೋರಾಟ ಮಾಡಿದರು. ಬರಡಾಗಿದ್ದ ಬಸವ ನೆಲದಲ್ಲಿ ಮತ್ತೆ ಕನ್ನಡದ ಚೈತನ್ಯವನ್ನು ಉಕ್ಕಿ ಬರುವಂತೆ

ಹರಿಸಿದರು. ಕನ್ನಡದ ಅಂಗಳದಲ್ಲಿ ಪರಕೀಯರು ಚೆಲ್ಲಿದ ಅನ್ಯಭಾಷೆಯ ಕಸವನ್ನು ಗುಡಿಸಿ ಹಸನು ಗೊಳಿಸಿದರು. ಕನ್ನಡದ ಬಾವುಟವನ್ನು ಎತ್ತಿ ಹಿಡಿದರು. ಕನ್ನಡಿಗರನ್ನು ಜಾಗ್ರತಗೊಳಿಸಿದರು. ಕನ್ನಡವನ್ನು ತಮ್ಮ ಕಾವಿಯ ಬಟ್ಟೆಯಲ್ಲಿ ಪ್ರಾಣದಂತೆ ರಕ್ಷಿಸಿದರು. ಕನ್ನಡಿಗರಿಗೆ ಸ್ವಾಭಿಮಾನದ ದೀಕ್ಷೆಯನ್ನು ನೀಡಿದರು. ಹಾಗೆ ಅವರು ಕನ್ನಡದ ಕೆಲಸವನ್ನು ಬೀದರ್ ಜಿಲ್ಲೆಯಲ್ಲಿ ಮಾಡಿರದಿದ್ದರೆ, ಅಪ್ಪಟ ಕನ್ನಡ ನೆಲವಾಗಿದ್ದು ಶಿವಯೋಗಿ ಸಿದ್ಧರಾಮನ ಸೋಲಾಪುರವು ಮಹಾರಾಷ್ಟ್ರಕ್ಕೆ ಸೇರಿ ಹೋದಂತೆ ಬೀದರ್ ಜಿಲ್ಲೆಯೂ ಮಹಾರಾಷ್ಟ್ರದ ಪಾಲು ಆಗುತ್ತಿತ್ತು. ಹೈದರಾಬಾದ್ ಕರ್ನಾಟಕದ ಇಂದಿನ ಬಹುಭಾಗವು ಕರ್ನಾಟಕದಲ್ಲಿಯೇ ಉಳಿಯಲು ಪಟ್ಟದ ದೇವರ ಪರಿಶ್ರಮ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ಜೊತೆಗೆ ಕನ್ನಡ ನಾಡನ್ನು ಉಳಿಸುವ ಈ ಕಾರ್ಯದಲ್ಲಿ ದುಡಿದವರು ಅನೇಕರಿದ್ದಾರೆ. ಅವರಲ್ಲಿ ಈ ಹಿಂದೆ ನಮೂದಿಸಿದ ಜಯದೇವಿತಾಯಿ ಲಿಗಾಡೆ ಅಲ್ಲದೆ ಪ್ರಭು ರಾವ್ ಕಂಬಳೀವಾಲೆ ವಕೀಲರು, ರಾಜಮಾಸ್ತರರು ಪ್ರಮುಖರು. ಒಬ್ಬೊಬ್ಬರ ಬಗೆಗೂ ಪ್ರತ್ಯೇಕವಾಗಿ ಬರೆವಷ್ಟು ಕಥೆ ಇದೆ.

ಕನ್ನಡ ಶಿಕ್ಷಣ ಪ್ರಸಾರಕ್ಕಾಗಿಯೇ ಚೆನ್ನಬಸವ ಪಟ್ಟದೇವರು ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಸಂಸ್ಥೆಯ ಅಡಿಯಲ್ಲಿ ಅನೇಕ ಶಾಲಾ - ಕಾಲೇಜುಗಳನ್ನು ತೆರೆದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪ್ರಾರಂಭದಲ್ಲಿಯ ಕಮಲನಗರದಲ್ಲಿಯ 'ಶಾಂತಿ ವರ್ಧಕ ಪ್ರೌಢಶಾಲೆ' ಭಾಲ್ಕಿಯಲ್ಲಿಯ ಚೆನ್ನಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ವೃತ್ತಿ ಮಹಾವಿದ್ಯಾಲಯ, ಬೀದರದಲ್ಲಿಯ ಅಕ್ಕಮಹಾದೇವಿ ಪದವಿಪೂರ್ವ ಮಹಾವಿದ್ಯಾಲಯ, ಹಾನಗಲ್ಲ ಇಂಜಿನಿಯರಿಂಗ್ ಕಾಲೇಜು, ಹರಳಯ್ಯ ಪಾಲಿಟೆಕ್ನಿಕ್ ಐಟಿಐ ಮೊದಲಾದವುಗಳನ್ನು ಹೆಸರಿಸಬೇಕು.

೧೦೯ ವರುಷಗಳ ಪೂರ್ಣ ಬದುಕನ್ನು ಬಾಳಿದ ಚೆನ್ನಬಸವ ಪಟ್ಟದೇವರು ೧೯೯೯ರ ಏಪ್ರಿಲ್ ೨೪ರಂದು ಲಿಂಗೈಕ್ಯರಾದರು. ಅವರ ಸಮಾಧಿ ಭಾಲ್ಕಿಯಲ್ಲಿದೆ. ಕಲ್ಯಾಣ ನಾಡಿನ ಮರೆಯಲಾಗದ ಈ ಮಹಾನುಭಾವರನ್ನು ಕನ್ನಡ ಇರುವವರೆಗೂ ಮರೆಯಲಾಗದು.

✤ ✤ ✤ ✤

ಅಧ್ಯಾಯ - ೨೦

• ಹೈದರಾಬಾದಿನಲ್ಲಿ ಕನ್ನಡ ಪತಾಕೆ

ಬೀದರ್, ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳನ್ನೊಳಗೊಂಡಂತೆ ಹೈದರಾಬಾದ್ ಕರ್ನಾಟಕದ ಪೂರ್ವೇತಿಹಾಸದಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಹೇಳಿದ ನೃಪತುಂಗ, 'ಅರಂಕುಸ ವಿಟ್ಟೊಡೆ ನೆನೆವುದೆನ್ನ ಮನ' ಎಂದು ಹೇಳಿದ ಪಂಪನಂಥ ಮಹಾವಿಭೂತಿಗಳು ರಾರಾಜಿಸಿದ್ದರು. ವೀರಶೈವ ಕ್ರಾಂತಿಯ ತವರು ಮನೆಯಾಗಿದ್ದ ಕಲ್ಯಾಣವು ಇಲ್ಲಿಯದೇ . ಪ್ರಾರಂಭದ ವಚನಕಾರರಲ್ಲಿ ಬಹುಸಂಖ್ಯಾತರು ಇಲ್ಲಿಯವರೇ ಆಗಿದ್ದರು. ಹರಿದಾಸ ಸಾಹಿತ್ಯದ ಆನಂತರದ ದಿನಗಳಲ್ಲಿ ಎಂದರೆ ವಿಜಯ ದಾಸರಿಂದ ಮೊದಲ್ಗೊಂಡು ಆನಂತರದ ಪೀಳಿಗೆಯ ಅನೇಕ ಜನರು ರಾಯಚೂರು ಕಲಬುರ್ಗಿಗಳಿಂದಲೇ ಬಂದವರು. ಮುಂದೆ ಕರ್ನಾಟಕದಲ್ಲಿ ಉಳಿದೆಡೆ ಆದಂತೆ ೧೯ನೆಯ ಶತಮಾನದ ಮಧ್ಯಕಾಲದಲ್ಲಿ ಕನ್ನಡವು ಇಲ್ಲಿ ಗತ ಪ್ರಾಣವಾಯಿತು. ಆ ಮುಂದಿನ ಕಾಲದಲ್ಲಿ ಅಂದರೆ ೧೯೨೦ರ ವರೆಗೆ ಕರ್ನಾಟಕದ ಇತರ ಪ್ರದೇಶಗಳಲ್ಲಿ ವಿಶೇಷವಾಗಿ ಮುಂಬಯಿ ಕರ್ನಾಟಕದ ಪ್ರದೇಶಗಳಲ್ಲಿ ಕನ್ನಡಾಭಿಮಾನವು ತುಸುವಾದರೂ ತಲೆದೋರಿತ್ತು. ಆದರೆ ಇಲ್ಲಿ ಅಭಿಮಾನದ ಮಾತಿರಲಿ ಕನ್ನಡ ಅಸ್ತಿತ್ವವೇ ಇದ್ದಿಲ್ಲವೆನ್ನುವ ಸ್ಥಿತಿ ಇದ್ದಿತು.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕನ್ನಡಕ್ಕೆ ಒಂದಿಷ್ಟು ಅವಕಾಶವಿದ್ದಿದ್ದರೆ ಆಮೇಲಾದರೂ ಕನ್ನಡವು ತಲೆ ಎತ್ತಬಹುದಿತ್ತೇನೋ ಆದರೆ, ಶಾಲೆಗಳನ್ನು ಪ್ರಾರಂಭಿಸುವ ಸಂಪೂರ್ಣ ಅಧಿಕಾರಿವು ಸರಕಾರದ ಕೈಯಲ್ಲಿ ಇದ್ದುದರಿಂದ ಯಾರೂ ಖಾಸಗಿ ಶಾಲೆಗಳನ್ನು ತೆರೆಯುವಂತಿರಲಿಲ್ಲ. ರಾಯಚೂರು ಮತ್ತು ಕಲಬುರ್ಗಿ ಮುಂತಾದ ಕೆಲವೇ ಸ್ಥಳಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸರಕಾರವು ಸ್ಥಾಪಿಸಿದರೂ ಹೆಚ್ಚಿನ ಕನ್ನಡಿಗರು ಉರ್ದು ಇಲ್ಲವೆ, ಮರಾಠಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದರು. ಬೀದರ್ ಭಾಗದಲ್ಲಂತೂ ಕನ್ನಡವನ್ನು ಕೇಳುವವರೇ ಇರಲಿಲ್ಲ. ಕನ್ನಡಿಗರು ತಮ್ಮ ಮಕ್ಕಳನ್ನು ಮರಾಠಿ ಶಾಲೆಗೇ ಕಳಿಸುತ್ತಿದ್ದರು. ಅನೇಕಾನೇಕ ಕನ್ನಡಿಗ ವ್ಯಾಪಾರಸ್ಥರು ಖುಶಿಯಿಂದ ಮರಾಠಿಯಲ್ಲಿ ಲೆಕ್ಕಪತ್ರಗಳನ್ನು ಇಡುತ್ತಿದ್ದರು. ಸಾಮಾಜಿಕ ಅಂತಸ್ತು ಸಾರ್ವಜನಿಕ ಪ್ರಸಿದ್ಧಿ ಇರುವ ಕನ್ನಡಗರು ಸಾರ್ವಜನಿಕ ಸಭೆ ಇಲ್ಲವೆ ಕ್ಲಬ್ಬುಗಳಲ್ಲಿ ಕನ್ನಡವನ್ನು ಮಾತನಾಡುವುದು ಹೀನಾಯವೆಂದು ಬಗೆಯುತ್ತಿದ್ದರು. ಹೈಸ್ಕೂಲು ಕಾಲೇಜುಗಳ ಮೆಟ್ಟಿಲುಗಳನ್ನು ಹತ್ತಿದವರಿಗೆ, ಇಂಗ್ಲಿಷ್, ಉರ್ದು ಭಾಷೆಗಳೇ ವ್ಯಾವಹಾರಿಕ ಭಾಷೆಗಳಾಗಿದ್ದವು.

ಒಟ್ಟಾರೆಯಾಗಿ ನೋಡಿದಾಗ ಹೈದರಾಬಾದ್ ನಿಜಾಮನ ಸಂಸ್ಥಾನದಲ್ಲಿ ಸಾಕಷ್ಟು ಸಂಖ್ಯೆಯ ಕನ್ನಡಿಗರೇ ಇಲ್ಲ ಎನ್ನುವ ಪರಿಸ್ಥಿತಿಯನ್ನು ಅಲ್ಲಿಯ ಕನ್ನಡಿಗರು ರೂಪಿಸಿದ್ದರು. ಅಥವಾ ಕನ್ನಡಿಗರ ವರ್ತನೆ ಹಾಗಿದ್ದಿತು.

ಕನ್ನಡಿಗರು ಅಧಿಕ ಪ್ರಮಾಣದಲ್ಲಿ ಇರುವ ರಾಯಚೂರು, ಕಲಬುರ್ಗಿ, ಬಿದರ್ ಜಿಲ್ಲೆಗಳಲ್ಲೇ ಈ ಸ್ಥಿತಿ ಇರುವಾಗ ಹೈದರಾಬಾದ್ ನಗರದಲ್ಲಿ ಕನ್ನಡವನ್ನು ಕೇಳುವವರು ಯಾರು ? ಅಂದು ಮತ್ತು ಇಂದು ಬಹುಸಂಖ್ಯಾತ ಕನ್ನಡಿಗರು ಹೈದರಾಬಾದ್ ನಗರದಲ್ಲಿದ್ದರೂ ೧೯೨೦ರ ಹೊತ್ತಿಗೆ ಒಂದಾದರೂ ಕನ್ನಡ ಶಾಲೆ ಅಲ್ಲಿರಲಿಲ್ಲ. ರಾಜಧಾನಿಯಲ್ಲಿ ಕನ್ನಡದ ಕಂಪನ್ನು ಬಿತ್ತಿದ್ದರೆ ಉಳಿದೆಡೆ ವಿಶೇಷವಾಗಿ ಕನ್ನಡದ್ದೆ ಎಂಬುವ ಕಲಬುರ್ಗಿ, ರಾಯಚೂರು, ಬೀದರ್ ಜಿಲ್ಲೆಗಳಲ್ಲಾದರೂ ಕನ್ನಡಕ್ಕೆ ಚಾಲನೆ ದೊರತೀತು ಎಂಬ ಅನಿಸಿಕೆಯಿಂದ ಬಿಜಾಪುರ ಜಿಲ್ಲೆಯಿಂದ ವಲಸೆ ಹೋದ ಕನ್ನಡಿಗನೊಬ್ಬ ರಾಜಧಾನಿ ಹೈದರಾಬಾದ್‌ನಲ್ಲೇ ಕನ್ನಡದ ಸಸಿಯನ್ನು ನೆಟ್ಟರು. ಮತ್ತು ಮುಂದಿನ ಕೆಲವು ವರುಷಗಳವರೆಗೆ ಏಕೈಕವಾಗಿ ತಾವೇ ಅದನ್ನು ಪೋಷಿಸಿಕೊಂಡು ಬಂದರು. ಅದು ಇಂದು ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದ್‌ನಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿದೆ. ಅವರ ಅಂದಿನ ಪ್ರಯತ್ನದಿಂದ ಅಲ್ಲಿಯ ವಿಶ್ವವಿದ್ಯಾಲಯಗಳಲ್ಲೂ ಸ್ನಾತಕ ಸ್ನಾತಕೋತ್ತರ ಪದವಿಗೆ ಕನ್ನಡವನ್ನು ಅಭ್ಯಸಿಸುವ ಸ್ಥಿತಿಯನ್ನು ನಿರ್ಮಾಣ ಮಾಡಲು ಸಾಧ್ಯವಾಯಿತು. ಇಂಥ ಸ್ಥಿತಿಯನ್ನು ನಿರ್ಮಾಣ ಮಾಡಿದವರೇ ಹೈದರಾಬಾದಿನ ವೀರ ಕನ್ನಡಿಗ ಚಿಮ್ಮಲಗಿ ಭೀಮಾಚಾರ್ಯರು.

೧೯೨೦-೨೧ರ ಸಂದರ್ಭದಲ್ಲಿ ಚಿಮ್ಮಲಗಿಯವರ ಹಿರಿಯ ಮಗ ರಾಮನಿಗೆ ೧೦-೧೨ ವರುಷ ಇದ್ದೀತು. ಹೈದರಾಬಾದಿನಲ್ಲಿ ಸ್ಥಾಯಿಯಾಗಿದ್ದ ಚಿಮ್ಮಲಗಿ ಯವರು, ಗಾಂಧೀಜಿಯವರಿತ್ತ ಕರೆಯಿಂದಾಗಿ ಸ್ವದೇಶೀ ವ್ರತಕ್ಕೆ ಅಂಟಿಕೊಂಡಿದ್ದರು. ಧಾರವಾಡದ ರಾಷ್ಟ್ರೀಯ ವಿದ್ಯಾಲಯಕ್ಕೆ ತಮ್ಮ ಮಗ ರಾಮನನ್ನು ಕಳಿಸಿಕೊಟ್ಟಿದ್ದರು. ಆದರೆ ಅವನು ಹೋಗುವ ಹೊತ್ತಿಗೆ ಅಲ್ಲಿಯ ರಾಷ್ಟ್ರೀಯ ಶಾಲೆಯು ಮುಚ್ಚಿದ್ದುದರಿಂದ ಹೈದರಾಬಾದಿನಲ್ಲಿಯೆ ಅವನ ಶಿಕ್ಷಣಕ್ಕೆ ಮೊದಲಾಗ ಬೇಕಾಯಿತು. ವಿದೇಶೀ ಭಾಷೆ - ಶಿಕ್ಷಣ ಬೇಡ ಎಂಬ ಕಾರಣದಿಂದ ರಾಮನನ್ನು ಇಂಗ್ಲಿಷ್ ಶಾಲೆಗೆ ಹಾಕಲಾರದೆ, ಅನಿವಾರ್ಯವಾಗಿ ಮರಾಠಿ ಮಾಧ್ಯಮದ ಶಾಲೆಗೆ ಕಳಿಸಬೇಕಾಯಿತು. ಮರಾಠಿ ಆ ದಿನಗಳಲ್ಲಿ ರಾಜಧಾನಿ ಹೈದರಾಬಾದಿನಲ್ಲಿ ಸಾಕಷ್ಟು ಆಳವಾಗಿ ಬೇರೂರಿತ್ತು. ರಾಮ ಮರಾಠಿ ಶಾಲೆಗೆ ಹೋಗಹತ್ತಿದ. ಮನೆಯಲ್ಲಿ ಮಾತು ಕನ್ನಡ, ಶಾಲೆಯಲ್ಲಿ ಅಭ್ಯಾಸ ಮರಾಠಿ, ಮಗನ ಶಿಕ್ಷಣ ಹೇಗೆ ನಡೆಯುತ್ತಿದೆ ಎಂದುಕೇಳಲೂ ಪುರುಸೊತ್ತು ಇರಲಿಲ್ಲ. ಅವರು ವೃತ್ತಿಯಿಂದ ವ್ಯಾಪಾರಸ್ಥರು. ತಮ್ಮ ವ್ಯವಹಾರದಲ್ಲಿ ಮಗನ ಶಿಕ್ಷಣದ ಬಗ್ಗೆ ಗಮನ ಹರಿಸುವುದು ಆಗಿರಲಿಲ್ಲ. ರಾಮ ಶಾಲೆಗೆ ಹೋಗ ಹತ್ತಿ ಆರೋ ಎಂಟೋ ತಿಂಗಳಾಗಿರಬೇಕು. ದಿನವೂ ತಮ್ಮ

ವ್ಯವಹಾರ ತೀರಿಸಿ ಮನೆಗೆ ಬಂದ ಚಿಮ್ಮಲಗಿಯವರು ಪುಸ್ತಕ ಹಿಡಿದುಕೊಂಡು ಕುಳ್ಳಿರುತ್ತಿದ್ದ ಮಗನನ್ನು ನೋಡಿರುತ್ತಿದ್ದರು ಅಷ್ಟೆ. ಒಂದು ದಿನ ಸಹಜವಾಗಿ ಮಗನನ್ನು ಮುಂದೆ ಕರೆದು 'ಒಂದಿಷ್ಟು ಗಟ್ಟಿಯಾಗಿ ಓದು ನೋಡೋಣ, ನಮಗಷ್ಟು ಕೇಳಿಸಲಿ' ಎಂದರು. ಕೈಯಲ್ಲಿ ಪುಸ್ತಕವಿದ್ದರೂ ಹುಡುಗ ಮೌನಿ! ಕೆದರಿ ಕೇಳಿದಾಗ ತಾನು ಓದಲಾರನೆಂದೂ, ಮಾಸ್ತರರು ಶಾಲೆಯಲ್ಲಿ ಹೇಳಿದ್ದು ತನಗೆ ತಿಳಿದಿಲ್ಲವೆಂದೂ ಅಳುಮುಖದಿಂದ ಹೇಳಿದನು. ಚಿಮ್ಮಲಗಿಯವರು ಕ್ಷಣ ಮಾತ್ರ ದಿಗ್ಭ್ರಾಂತರಾದರು. ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಇರಬೇಕು ಎಂಬುದು ಅವರಿಗೆ ನಿಚ್ಚಳವಾಯಿತು. ಆದರೆ ಇಲ್ಲಿ ದಾರಿ ಇಲ್ಲ. ಏನೂ ತಿಳಿಯದ ಮರಾಠಿಗಿಂತ ಇಂಗ್ಲಿಷ್ ಭಾಷೆಯೇ ವಾಸಿ ಎಂದುಕೊಂಡರು. ವಿದೇಶೀ ಭಾಷೆ ಇಂಗ್ಲಿಷ್ ಬೇಡ, ಕನ್ನಡ ಸಾಧ್ಯವಿರದಿದ್ದರೆ ದೇಶೀಯ ಭಾಷೆಯನ್ನಾದರೂ ಕಲಿಯಲಿ ಎಂದು ಮರಾಠಿ ಶಾಲೆಗೆ ಕಳಿಸಿದರೆ ಮಗನ ಶಿಕ್ಷಣ ಹೀಗೆ ಎಡವಟ್ಟಾಯಿತು. ಆ ಶಾಲೆಯನ್ನು ಬಿಡಿಸಿ ತಕ್ಷಣ ಇಂಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸಿದರು. ಆದರೆ ಇದಕ್ಕೊಂದು ಪರಿಹಾರ ಕಂಡುಹಿಡಿಯಲು ಯೋಚಿಸತೊಡಗಿದರು. ನನ್ನ ಮಗನಿಗೆ ಒದಗಿದಂಥ ಸ್ಥಿತಿ ಇಲ್ಲಿ ಇನ್ನೂ ಅನೇಕ ಕನ್ನಡ ಹುಡುಗರಿಗೆ ಇದ್ದಿರಬೇಕಲ್ಲ ಎಂದು ಅವರ ಮನಸ್ಸು ಮಿಡಿಯಿತು. ಹೇಗಾದರೂ ಮಾಡಿ ಒಂದು ಕನ್ನಡ ಶಾಲೆಯನ್ನು ಪ್ರಾರಂಭಿಸಬೇಕು ಎಂದು ಅವರು ನಿರ್ಧರಿಸಿದರು. ೧೯೨೮ರಲ್ಲಿ ರಥ ಸಪ್ತಮಿಯ ದಿನ ಐದು ಬಾಲಕರನ್ನು ಕರೆತಂದು ಕನ್ನಡ ಶಾಲೆಯನ್ನು ಆರಂಭ ಮಾಡಿಯೇ ಬಿಟ್ಟರು. ಸರಿ, ಶಾಲೆಯನ್ನು ತೆರೆದಾಯಿತು. ಅದಕ್ಕೆ ಏನೆಂದು ಹೆಸರು ಕೊಡಬೇಕು! ಅಂಗಡಿಯಲ್ಲಿ ಸ್ನೇಹಿತರೊಡನೆ ಕುಳಿತಾಗ ಚಿಮ್ಮಲಗಿಯವರು ಅದರ ಪ್ರಸ್ತಾಪ ಮಾಡಿದರು. ಅವರಲ್ಲೊಬ್ಬ ಸ್ನೇಹಿತ ಲಕ್ಷ್ಮಣರಾವ್ ಚಳಗೇರಿ ಎಂಬುವರು ನೃಪತುಂಗನ ಹೆಸರನ್ನು ಸೂಚಿಸಿದರು. ಸರಿ ಎನಿಸಿತು. ಶಾಲೆಯ ಹೆಸರು 'ನೃಪತುಂಗ ವಿದ್ಯಾಲಯ' ಎಂದಾಯಿತು. ಐದು ಬಾಲಕರಿಂದ ಪ್ರಾರಂಭವಾದ ನೃಪತುಂಗ ವಿದ್ಯಾಲಯ ಇಂದು ಹೆಮ್ಮರವಾಗಿ ನೃಪತುಂಗ ಮಹಾವಿದ್ಯಾಲಯವಾಗಿದೆ. ಅಷ್ಟೇ ಅಲ್ಲ, ರಾಯಚೂರು - ಕಲಬುರ್ಗಿ ಜಿಲ್ಲೆಗಳಲ್ಲಿ ಕನ್ನಡ ವಾತಾವರಣ ಬೆಳೆಯಲು ಸ್ಫೂರ್ತಿ ನೀಡಿತು. ಆ ಕಥೆ ಬೇರೆ.

ನೃಪತುಂಗ ವಿದ್ಯಾಲಯದಲ್ಲಿ ಐದು ಹುಡುಗರಿದ್ದರು. ಅವರಿಗೊಬ್ಬ ಶಿಕ್ಷಕ ಬೇಕಲ್ಲ? ಸರಿ ಹಂಜಕ್ಕಿ ಗುಂಡಾಚಾರ್ಯರನ್ನು ನೇಮಿಸಲಾಯಿತು. ಶಾಲೆಯು ಚಿಮ್ಮಲಗಿಯವರ ಮನೆಯ ಒಂದು ಕೋಣೆಯಲ್ಲಿ ನಡೆಯಿತು. ಬೆರಳೆಣಿಕೆ ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತು ಅ, ಆ, ಇ, ಈ ತೀಡುತ್ತಿದ್ದುದನ್ನು, ಮನೆಯಲ್ಲಿಯೇ ನಡೆಯುವ ಶಾಲೆಯನ್ನು ನೋಡಿದ ಜನರಿಗೆಲ್ಲ ನಗೆ ಚಾಟಿಗೆಯ ವಿಷಯವಾಯಿತು. ಚಿಮ್ಮಲಗಿಯವರು ಅದರತ್ತ ಲಕ್ಷ್ಯ ಕೊಡಲಿಲ್ಲ. ಪ್ರತಿಯಾಗಿ ತಾವು ಭೇಟಿಯಾದ ಕನ್ನಡಿಗರಿಗೆ ತಮ್ಮ ಮಕ್ಕಳನ್ನು ಈ ಶಾಲೆಗೆ ಕಳಿಸಲು

ವಿನಂತಿಸಿಕೊಳ್ಳುತ್ತಿದ್ದರು. ಶಿಕ್ಷಕನ ಸಂಬಳವನ್ನು ತಮ್ಮ ಕೈಯಿಂದ ಕೊಡುತ್ತಿದ್ದರು. ಶಿಕ್ಷಣ ಉಚಿತವಾಗಿತ್ತು.

ಮರುವರುಷ ಶಾಲಾ ಮಕ್ಕಳ ಸಂಖ್ಯೆ ೨೫ಕ್ಕೆ ಏರಿತು. ನರಸಿಂಹಭಟ್ಟ ಎಂಬ ಇನ್ನೊಬ್ಬ ಶಿಕ್ಷಕನನ್ನು ನೇಮಿಸಿಕೊಂಡರು. ಬೆಂಚು, ಮೇಜುಗಳಿಲ್ಲದಿದ್ದರೆ ಶಾಲೆಗೆ ಮರ್ಯಾದೆ ಬಾರದೆಂದು ಅವುಗಳನ್ನು ತಾವೇ ಮಾಡಿಸಿದರು. ಇಷ್ಟೆಲ್ಲ ಆದರೂ ಮಕ್ಕಳನ್ನು ಈ ಶಾಲೆಗೆ ಕಳಿಸಬೇಕಾದರೆ ಅದಕ್ಕೆ ಸರಕಾದರ ಮನ್ನಣೆ ಬೇಕಲ್ಲ? ಅದಕ್ಕೆ ಎಜುಕೇಷನಲ್ ಇನ್‌ಸ್ಪೆಕ್ಟರ್‌ಗೆ ಅರ್ಜಿ ಸಲ್ಲಿಸಿದರು. ಅಂದಿನ ದಿನಗಳಲ್ಲಿ ಇಪ್ಪತ್ತು ಸಾವಿರ ಕನ್ನಡಿಗರು ಇರುವ ಹೈದರಾಬಾದ್ ನಗರದಲ್ಲಿ ಒಂದಾದರೂ ಕನ್ನಡ ಶಾಲೆ ಇಲ್ಲದ್ದನ್ನು ಅರ್ಜಿಯಲ್ಲಿ ವಿವರಿಸಿದ್ದರು. ಆದರೆ, ಇವರ ಅರ್ಜಿಯ ವಿಚಾರಣೆ ನಡೆಸಿ, ಅದನ್ನು ಪುರಸ್ಕರಿಸಲು ಅಲ್ಲಿ ಯಾರೂ ಇರಲಿಲ್ಲ. ಅವರ ಅರ್ಜಿ ಕಚೇರಿಯಲ್ಲಿಯೇ ಕೊಳೆಯುತ್ತ ಬಿದ್ದಿತು. ಚಿಮ್ಮಲಗಿಯವರು ಮುಂದಿನ ಹೆಜ್ಜೆಗಾಗಿ ಚಿಂತಿಸುತ್ತಿರುವಾಗ ಒಂದು ವಿಚಿತ್ರ ಘಟನೆ ನಡೆಯಿತು. ಕನ್ನಡ ಭುವನೇಶ್ವರಿಗೂ ಇನ್ನು ಸಾಕು, ತಾನು ಇಲ್ಲಿ ಬರಬೇಕು, ಈ ಭಾಗದಲ್ಲಿ ಕಣ್ಮರೆಯಾಗಿದ್ದ ತನ್ನ ಭಾಷೆಯನ್ನು ಮತ್ತೆ ಚಾಲನೆಗೆ ತರಬೇಕು' ಎಂದು ಎನಿಸಿರಬೇಕು.

ಒಂದು ದಿನ ಚಿಮ್ಮಲಗಿಯವರು ತಮ್ಮ ಅಂಗಡಿಯ ಕಟ್ಟೆ ಮೇಲೆ ಕುಳಿತಿದ್ದರು. ಅವರ ನಾಲ್ಕು ವರುಷದ ಮತ್ತೊಬ್ಬ ಮಗ ರಾಘವೇಂದ್ರ ಆಡುತ್ತ ರಸ್ತೆಗೆ ಇಳಿದಿದ್ದ. ಅಷ್ಟರಲ್ಲಿಒಂದು ಕಾರು ಬಂದು ಮಗುವಿಗೆ ತಾಕಿ ಮುಂದೆ ಹೋಯಿತು. ಕಾರನ್ನು ನಡೆಸುವವನಿಗೆ ಮಗು ಕಾರಿಗೆ ಸಿಕ್ಕಿದೆ ಎಂಬ ಅರಿವು ಆಗಿ ಗಕ್ಕನೆ ಕಾರನ್ನು ನಿಲ್ಲಿಸಿದ. ಆಗ ಚಿಮ್ಮಲಗಿ ಅವರಿಗೆ ಅಪಘಾತವಾಗಿದೆ ಎಂದು ತಿಳಿಯಿತು. ಕಾರಿನ ಚಾಲಕ ಇಳಿದು ಬರುತ್ತಿದ್ದಂತೆ ಚಿಮ್ಮಲಗಿ ಅವರೂ ಕಾರಿನ ಹತ್ತಿರ ಹೋದರು. ಗಾಲಿಯ ಕೆಳಗೆ ಸಿಕ್ಕಿ ಬಿದ್ದ ಮಗುವನ್ನು ಎತ್ತಿಕೊಂಡರು. ಮಗುವಿನ ಮೈಮೇಲೆ ಎಚ್ಚರವಿರಲಿಲ್ಲ. ಚಾಲಕನು ಚಿಮ್ಮಲಗಿ ಅವರೊಂದಿಗೆ ಮಗುವನ್ನು ತನ್ನ ಕಾರಿನಲ್ಲಿಯೇ ಕರೆದುಕೊಂಡು ರೆಸಿಡೆನ್ಸಿ ಹಾಸ್ಪಿಟಲಿಗೆ ಹೋದರು. ಮಗುವನ್ನು ಪರೀಕ್ಷಿಸಿದ ವೈದ್ಯರು 'ಗಾಯವೇನೂ ಆಗಿಲ್ಲ. ಗಾಬರಿಯಿಂದ ಮಗುವಿಗ ಎಚ್ಚರ ತಪ್ಪಿದೆ' ಎಂದರು. ಇಲ್ಲಿಯ ವರೆಗೂ ಚಿಮ್ಮಲಗಿ ಅವರು ಕಾರಿನ ಚಾಲಕನೊಂದಿಗೆ ಒಂದು ಶಬ್ದವನ್ನು ಆಡಿರಲಿಲ್ಲ. ಮಗುವಿನ ಸುರಕ್ಷತೆಯ ಬಗ್ಗೆ ಕಾತರವನ್ನು ವ್ಯಕ್ತಪಡಿಸುತ್ತಿದ್ದರೇ ಹೊರತು ಕಾರಿನ ಚಾಲಕನ ಅಲಕ್ಷ್ಯದ ಬಗ್ಗೆ ಒಂದು ಬಿರುನುಡಿಯನ್ನೂ ಆಡಲಿಲ್ಲ. ವೈದ್ಯರು ಮಗುವಿನ ಸುರಕ್ಷಿತೆಯ ಬಗ್ಗೆ ಹೇಳಿದಾಗ ಉಭಯತ್ರರಿಗೂ ಸಂತೋಷವಾಯಿತು. ಪರಸ್ಪರ ಪರಿಚಯ ಮಾಡಿಕೊಂಡರು.

ಕಾರಿನ ಚಾಲಕನ ಹೆಸರು ಆಲಿ ಅಕಬರ್. ಅವರು ನಗರ ಎಜುಕೇಷನಲ್ ಇನ್‌ಸ್ಪೆಕ್ಟರ್‌ರಾಗಿದ್ದರು. ತಮ್ಮ ಕಾರನ್ನು ತಾವೇ ನಡೆಸಿಕೊಂಡು ಹೋಗುತ್ತಿದ್ದರು. ವಿಷಯ ತಿಳಿದಾಗ ಚಿಮ್ಮಲಗಿಯವರು 'ಇದೆಂಥ ಸುಯೋಗ' ಎಂದರು 'ಯಾಕೆ?

ಏನದು '? ಎಂದರು ಅಲಿ ಅಬಕರ್.

'ತಮ್ಮನ್ನು ಕಾಣಲು ಬರಬೇಕೆಂದು ತಮ್ಮ ಅನುಕೂಲದ ಸಮಯವನ್ನು ಕೇಳಿ ತಿಳಿಯಲು ಮಿತ್ರರೊಬ್ಬರಿಗೆ ಹೇಳಿದ್ದೆ' ಎಂದರು ಚಿಮ್ಮಲಗಿಯವರು. ಅಲ್ಲದೆ, ತಾವು ನಡೆಸುತ್ತಿದ್ದ ನೃಪತುಂಗ ಶಾಲೆಗೆ ಮನ್ನಣೆ ಕೋರಿ ಸಲ್ಲಿಸಿಡ ಅರ್ಜಿ ಇತ್ಯಾದಿಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದರು.

ಮರುವಾರ ಎಜುಕೇಶನ್ ಆಫೀಸಿನಿಂದ ಪತ್ರ ಬಂದಿತು. 'ಇಂಥ ದಿನ ಸಾಹೇಬರು ಶಾಲೆಗೆ ಸಂದರ್ಶನಕ್ಕೆ ಬರುತ್ತಾರೆ' ಎಂದು ಆ ಪತ್ರದಲ್ಲಿ ತಿಳಿಸಲಾಗಿತ್ತು. ಸಂದರ್ಶನದ ಸಮಯದಲ್ಲಿ ಕನ್ನಡಿಗರಾದ ಇನ್ನೊಬ್ಬ ಸರಕಾರಿ ಅಧಿಕಾರಿ ಇದ್ದರೆ ಒಳ್ಳೆಯದೆಂದು ಯೋಚಿಸಿದ ಚಿಮ್ಮಲಗಿ ಅವರು ಸಂಸ್ಥಾನದ ವೆಟರ್ನರಿ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಡಾ. ಬಿ.ಕೆ. ಬಾದಾಮಿ ಎಂಬ ಕನ್ನಡಿಗರನ್ನು ಬರಮಾಡಿಕೊಂಡಿದ್ದರು. ಅಲಿ ಅಕಬರ್ ಸಾಹೇಬರು ಶಾಲೆಯ ಸಂದರ್ಶನವನ್ನು ಮಾಡಿ ಹೋದ ಮರುವಾರವೇ ಶಾಲೆಗೆ ಸರಕಾರದ ಮಂಜೂರಾತಿ ಸಿಕ್ಕಿತಲ್ಲದೆ ಸರಕಾರದಿಂದ ೨೦ ರುಪಾಯಿಗಳ ಗ್ರ್ಯಾಂಟ್ ಕೂಡ ಸಿಕ್ಕಿತು.

ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡು ಬಂದಿತು. ಮೂರನೆಯ ಶಿಕ್ಷಕನನ್ನೂ ನೇಮಿಸಲಾಯಿತು. ಅಂದಿನ ದಿನಗಳಲ್ಲಿ ೨೦ ರುಪಾಯಿಗಳ ಗ್ಯಾಂಟ್ ದೊಡ್ಡ ಮೊತ್ತವೇ ಆಗಿದ್ದರೂ ಮೂರು ಜನ ಶಿಕ್ಷಕರ ಸಂಬಳ, ಸಾದಿಲ್ವಾರು ವೆಚ್ಚ ಇತ್ಯಾದಿಗಳಿಗೆ ಅಧಿಕ ಹಣದ ಅಗತ್ಯವಿತ್ತು. ಅದನ್ನು ಚಿಮ್ಮಲಗಿಯವರೇ ಭರಿಸುತ್ತಿದ್ದರು, ೪ನೆಯ ವರ್ಗದವರೆಗೂ ನೃಪತುಂಗ ವಿದ್ಯಾಲಯ ಚಿಮ್ಮಲಗಿ ಅವರ ಮನೆಯಲ್ಲಿ ನಡೆಯಿತು.

ಆನಂತರದ ದಿನಗಳಲ್ಲಿ ದೊಡ್ಡ ಸ್ಥಳದ ಅಗತ್ಯ ಕಂಡು ಬಂದಿತು. ಬಾಡಿಗೆಯ ಮನೆಯನ್ನು ಹಿಡಿದರು. ಬಿಂದಾಚಾರ ಪುರೋಹಿತ ಎಂಬುವರು ಹೆಡ್ ಮಾಸ್ಟರ್ ಆಗಿ ಬಂದರು. ಆಗಲೂ ಶಾಲೆಯ ಆರ್ಥಿಕ ನಿರ್ವಹಣೆ ಚಿಮ್ಮಲಗಿ ಅವರದೇ ಆಗಿತ್ತು. ಕೇಳಿದ್ದರೆ ಬೇರೆ - ಕನ್ನಡಿಗರಿಂದ, ಉದಾರಿಗಳಿಂದ ಧನಸಹಾಯ ಸಿಗಬಹುದಾಗಿತ್ತು. ಆದರೆ ತಮ್ಮ ಬೆಳೆಯುತ್ತಿದ್ದ ವ್ಯಾಪರ - ವ್ಯವಹಾರದಲ್ಲಿ ಇನ್ನೊಬ್ಬರನ್ನು ಕಂಡು ಕೇಳಲು ಅವರಿಗೆ ಸಮಯವೇ ಸಿಗುತ್ತಿದ್ದಿಲ್ಲ. ವೆಚ್ಚ ಅವರ ಎಣಿಕೆಯನ್ನು ಮೀರಿ ಪ್ರತಿ ತಿಂಗಳೂ ಅಧಿಕವಾಗುತ್ತಲೇ ನಡೆದಿತ್ತು. ಆಗ ನೂರಕ್ಕೂ ಮೇಲ್ಪಟ್ಟ ಕನ್ನಡದ ಮಕ್ಕಳು ನೃಪತುಂಗ ವಿದ್ಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದುತ್ತಿರುವುದು ಅವರಿಗೆ ತುಂಬ ಸಂತೋಷವಾದ ವಿಷಯವಾಗಿತ್ತು. ತಾವು ದುಡಿದ ಹಣ ಎಣಿಕೆ ಮೀರಿ ಹೋಗುತ್ತಿದೆ ಎಂಬ ಅರಿವು ಇದ್ದರೂ ಆ ಹೊರೆಯನ್ನು ಅವರು ಸಂತೋಷದಿಂದಲೇ ಹೊತ್ತರು. ಇನ್ನಷ್ಟು ಕನ್ನಡ ಹುಡುಗರು ಬರಬೇಕು ಎಂದರು.

ಆ ದಿನಗಳಲ್ಲಿ ಹೈದರಾಬಾದಿನಲ್ಲಿ ವಿವೇಕವರ್ಧಿನಿ ವಿದ್ಯಾಲಯ ಎಂಬ ಮರಾಠಿ ಶಾಲೆ ಪ್ರಸಿದ್ಧಿಯಲ್ಲಿತ್ತು. ಅದರಲ್ಲಿ ಓದುವ ಬಹುತೇಕ ವಿದ್ಯಾರ್ಥಿಗಳು ಕನ್ನಡದ ಹುಡುಗರೇ. ಆದರೆ, ಅವರೆಲ್ಲ ಅಲ್ಲಿ ಮರಾಠಿ ಮಾಧ್ಯಮದಲ್ಲಿ ಕಲಿಯಬೇಕಾಗಿತ್ತು. ಆದರೂ ಕನ್ನಡವನ್ನು ಒಂದು ವಿಷಯವನ್ನಾಗಿ ಕಲಿಸಲು ಒಬ್ಬ ಕನ್ನಡ ಶಿಕ್ಷಕನನ್ನೂ ನೇಮಿಸಲಾಗಿತ್ತು. ಅದು ಕನ್ನಡ ಹುಡುಗರ ಆಕರ್ಷಣೆ ಗೆಂದೇನೂ ಅಲ್ಲ ಬೇಕಿದ್ದವರು ಅದೊಂದು ಭಾಷೆ ಎಂದು ಕಲಿಯ ಬಹುದಾಗಿತ್ತು. ಶಾಲೆಯ ಮುಖ್ಯಸ್ಥರ ಹೆಸರು 'ವಾಮನ ನಾಯಕ' ಎಂಬುದಾಗಿತ್ತು. ಅವರು ನಗರದ ಒಬ್ಬ ಗಣ್ಯ ವ್ಯಕ್ತಿ ಎನಿಸಿಕೊಂಡಿದ್ದರು. 'ದೇಶಭಕ್ತ' 'ಧರ್ಮವೀರ' ಇತ್ಯಾದಿ ಬಿರುದುಗಳೂ ಅವರಿಗಿದ್ದವು. ಅವರು ಮೂಲತಃ ಕನ್ನಡಿಗರೇ. ಆದರೆ, ಮರಾಠಿಗೆ ಸಂಪೂರ್ಣ ಮಾರುಹೋಗಿದ್ದರು. ಅವರ ಪರಿಚಯ ಚಿಮ್ಮಲಗಿ ಅವರಿಗೆ ಇರಲಿಲ್ಲ. ಆದರೆ ಅಲ್ಲಿ ಹೋಗುವ ಕನ್ನಡ ಹುಡುಗರನ್ನು ನೃಪತುಂಗ ವಿದ್ಯಾಲಯಕ್ಕೆ ಕರೆತರಬೇಕೆಂಬ ವಿಚಾರ ಚಿಮ್ಮಲಗಿ ಅವರ ತಲೆಯಲ್ಲಿ ಹೊಕ್ಕಿತು.

'ವಿವೇಕ ವರ್ಧಿನಿ' ಮರಾಠಿ ವಿದ್ಯಾಲಯದ ಎದುರಿಗೆ ಬಂದಾಗಲೆಲ್ಲ ಅಂಥದೊಂದು ಕನ್ನಡ ಪ್ರೌಢಶಾಲೆಯನ್ನು ತೆರೆಯಬೇಕೆಂಬ ಕನಸನ್ನು ಭೀಮಾಚಾರ್ಯ ಚಿಮ್ಮಲಗಿ ಅವರು ಕಾಣಹತ್ತಿದರು. ಆದರೆ, ಕನ್ನಡ ಹುಡುಗರನ್ನು ಕರೆ ತರುವುದು ಹೇಗೆ ? ವಿವೇಕ ವರ್ಧಿನಿ ವಿದ್ಯಾಲಯದಲ್ಲಿ ಕನ್ನಡ ಮಕ್ಕಳ ಅಂದಾಜು ದೊರೆತರೆ ಕನ್ನಡ ಪ್ರೌಢಶಾಲೆಯನ್ನು ತೆರೆಯಲು ಅನುಕೂಲ ವಾಗುತ್ತದೆ ಎಂಬುದು ಚಿಮ್ಮಲಗಿಯವರ ಚಿಂತನೆ. ಹೇಗೂ ಕನ್ನಡ ಮೂಲದ ವಾಮನ ನಾಯಕರೇ ವಿವೇಕ ವರ್ಧಿನಿಯ ಮುಖ್ಯಸ್ಥರು. ಅವರನ್ನು ಕೇಳಿದರೆ ಉತ್ತೇಜನ ದೊರತೀತು ಎಂದು ಚಿಮ್ಮಲಗಿ ಅವರು ವಾಮನ ನಾಯಕರನ್ನು ಭೇಟಿಯಾದರು. ಕನ್ನಡ ಮಾಧ್ಯಮದ ಪ್ರತ್ಯೇಕ ಪ್ರೌಢಶಾಲೆಯ ವಿಚಾರವನ್ನು ನಾಯಕರ ಎದುರಿಗೆ ಇಟ್ಟರು. ಸ್ವಾಭಾವಿಕವಾಗಿ ಅದು ಅವರಿಗೆ ಬೇಡವಾದ ವಿಷಯವಾಗಿತ್ತು. ತಮ್ಮ ಶಾಲೆಯಲ್ಲಿ ಬಹುಸಂಖ್ಯಾತ ಕನ್ನಡ ಹುಡುಗರೇ ಇದ್ದುದು ಅವರಿಗೆ ಗೊತ್ತು. ಚಿಮ್ಮಲಗಿಯವರು ಕನ್ನಡ ಪ್ರೌಢಶಾಲೆಯನ್ನು ತೆರೆದರೆ ವಿವೇಕ ವರ್ಧಿನಿಯ ಶಾಲೆಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತದೆ ಎಂಬುದನ್ನು ಮನಗಂಡ ನಾಯಕರು ಚಿಮ್ಮಲಗಿಯವರ ಪ್ರಸ್ತಾಪಕ್ಕೆ ತೀವ್ರ ಆಕ್ಷೇಪಿಸಿದರು. ಅಷ್ಟೇ ಅಲ್ಲ, ಒಂದು ಹಂತದಲ್ಲಿ 'ಕನ್ನಡಿಗ ವಿದ್ಯಾರ್ಥಿಗಳ ಸಂಖ್ಯೆ ಬೇಕಾಗಿದ್ದರೆ ಅವರ ಮನೆ ಮನೆಗೆ ಖಾನೇಸುಮಾರಿ (ಗಣತಿ) ಮಾಡಿಕೊಳ್ಳಿರಿ' ಎಂದು ಮುಖಕ್ಕೆ ಹೊಡೆದಂತೆ ಹೇಳಿಬಿಟ್ಟರು.

ಚಿಮ್ಮಲಗಿ ಅವರ ಸಾತ್ವಿಕ ಸಂತಾಪ ಉಕ್ಕೇರಿತು. ಕನ್ನಡ ಹುಡುಗರ ಮಾಹಿತಿಯನ್ನು ದೊರಕಿಸಲೇಬೇಕೆಂದು ಹಟ ತೊಟ್ಟರು. ಮರುವಾರ ತಮ್ಮ ವ್ಯವಹಾರದ ನಿಮಿತ್ತ ಮದ್ರಾಸಿಗೆ (ಚೆನ್ನೈ) ಹೋದಾಗ ಎರಡು ಸಾವಿರದಷ್ಟು ನೋಟ್

ಬುಕ್ಕುಗಳನ್ನು ತಂದರು. ಊರಲ್ಲಿಯ ಬೆಲೆಗಿಂತ ತುಸು ಕಡಿಮೆ ಬೆಲೆಗೆ ಮಾರಾಟಕ್ಕಿಟ್ಟರು. ಅದರಲ್ಲಿ ಹೀಗೆ ಬರೆದರು. 'ಕನ್ನಡ ಮಾತನಾಡುವ ಹುಡಗರಿದ್ದರೆ ಅವರಿಗೆ ಪುಕ್ಕಟೆ' ಎಂದು ಜಾಹೀರು ಪಡಿಸಿದರು.

ಶಾಲೆಯು ಪ್ರಾರಂಭವಾಗುತ್ತಿದ್ದಂತೆ, ವಿವೇಕ ವರ್ಧಿನಿ ಶಾಲೆಯ ಹತ್ತಿರವೇ ಇದ್ದ ಇವರ ಅಂಗಡಿಗೆ ವಿದ್ಯಾರ್ಥಿಗಳು ಮುಕುರಿದರು. ಕಡಿಮೆ ಬೆಲೆಗೆ ಇದ್ದ ನೋಟ್ ಬುಕ್ಕುಗಳ ಮಾರಾಟ ಭರದಿಂದ ನಡೆಯಿತು. ಜೊತೆಗೆ ''ನನಗೆ ಕನ್ನಡ ಬರುತ್ತದೆ'' ಎಂದು ಹೇಳುವ ಕನ್ನಡ ವಿದ್ಯಾರ್ಥಿಗಳ ಸಾಲು ಪ್ರತ್ಯೇಕವಾಗಿ ಅಂಗಡಿಯ ಮುಂದೆ ನಿಲ್ಲಹತ್ತಿತು. ಹಾಗೆ ಹೇಳುವ ಮಕ್ಕಳು ಒಂದು ರಿಜಿಸ್ಟರ್‌ನಲ್ಲಿ ತಮ್ಮ ಹೆಸರು, ವಿಳಾಸ ಮತ್ತು ತಾವು ಕಲಿಯುತ್ತಿದ್ದ ವರ್ಗ ಇಷ್ಟನ್ನು ಬರೆಯಬೇಕಾಗುತ್ತಿತ್ತು. ಹಾಗೆ ವಿದ್ಯಾರ್ಥಿಗಳು ತಮ್ಮ ಸ್ವಖುಶಿಯಿಂದ ಬರೆದು ನೋಟ್‌ಬುಕ್ಕುಗಳನ್ನು ಪುಕ್ಕಟೆಯಾಗಿ ಒಯ್ಯುತ್ತಿದ್ದರು. ತಿಂಗಳಾಂತ್ಯದಲ್ಲಿ ಚಿಮ್ಮಲಗಿ ಅವರು ಹತ್ತಿಪ್ಪತ್ತು ಅಲ್ಲ, ಸುಮಾರು ೧೫೦ರಷ್ಟು ಕನ್ನಡ ಬಲ್ಲ ವಿದ್ಯಾರ್ಥಿಗಳ ಪಟ್ಟಿಯನ್ನು ಅವರವರ ತರಗತಿಯ ಉಲ್ಲೇಖದೊಂದಿಗೆ ಶಾಲೆಯ ಮುಖ್ಯಸ್ಥ ವಾಮನರಾವ್ ನಾಯಕರ ಮುಖಕ್ಕೆ ಹಿಡಿದರು ! ನಾಯಕರ ಮುಖ ಕಪ್ಪಿಟ್ಟಿತು. ಬೇರೇನೂ ಮಾಡಲು ಸಾಧ್ಯವಿರಲಿಲ್ಲ. ಅಸಹಾಯಕತೆ, ಬೇಸರ ಅವರ ಮುಖದ ಮೇಲೆ ಎದ್ದು ಕಾಣುತ್ತಿತ್ತು. ಚಿಮ್ಮಲಗಿಯವರಿಗೆ ಈ ವಿಷಯವನ್ನು ತಮ್ಮ ಶಾಲೆಯಲ್ಲಿದ್ದ ಕನ್ನಡ ಶಿಕ್ಷಕನೇ ಹೇಳಿರಬೇಕೆಂದು ಅವನ ಮೇಲೆ ಹರಿಹಾಯ ತೊಡಗಿದರು. ಪೀಡಿಸ ಹತ್ತಿದರು. ಈ ವಿಷಯ ಚಿಮ್ಮಲಗಿ ಅವರ ಕಿವಿಗೆ ಬೀಳುತ್ತಿದ್ದಂತೆ ಚಿಮ್ಮಲಗಿ ಅವರು ಮತ್ತೊಮ್ಮೆ ನಾಯಕರನ್ನು ಕಂಡು, ಆ ಶಿಕ್ಷಕನ ತಪ್ಪಿಲ್ಲ. ಕನ್ನಡ ಹುಡುಗರ ಮಾಹಿತಿಯನ್ನು ಪಡೆಯಲು ತಾವು ಅನುಸರಿಸದ ತಂತ್ರವನ್ನು ಹೇಳಿದರು. ಆಗ ನಾಯಕರಿಗೆ ಚಿಮ್ಮಲಗಿ ಅವರ ಮೇಲೆ ಕೋಪ ಬರಲಿಲ್ಲ. ಪ್ರತಿಯಾಗಿ ಗೌರವ - ಆದರ ಭಾವನೆಗಳು ಬೆಳೆದವು.

ಒಂದು ಮಾತು ನಿಜ, ೧೫೦ ರಷ್ಟು ಹುಡುಗರ ಪಟ್ಟಿಯಿಂದ ಚಿಮ್ಮಲಗಿ ಅವರಿಗೆ ಹೈದರಾಬಾದ್‌ನಲ್ಲಿ ಕನ್ನಡ ಮಾಧ್ಯಮದ ಮಿಡ್ಲಸ್ಕೂಲನ್ನು ತೆರೆಯಲು ಪುಟಕೊಟ್ಟಿತು ಆ ವರುಷ ಇಂಗ್ಲಿಷ್ ಮೂರನೆಯ ವರ್ಗದವರೆಗೆ ನೃಪತುಂಗ ವಿದ್ಯಾಲಯ ಮುಂದುವರೆಯಿತು. ಇದೀಗ ಅದನ್ನು ಮಿಡ್ಲಸ್ಕೂಲ ಎಂದು ಸರಕಾರದಿಂದ ಮನ್ನಣೆ ದೊರಕಿಸಲು ಶಾಲೆಗೆ ಒಬ್ಬ ಗ್ರಾಜುಯೇಟ್ ಹೆಡ್ ಮಾಸ್ತರನ ಅವಶ್ಯಕತೆ ಉಂಟಾಯಿತು. ಬಿಜಾಪುರದಿಂದ ವೆಂಕಟರಾವ್ ನಾಯಕ ಎಂಬ ಪದವೀಧರರನ್ನು ಕರೆಯಿಸಿಕೊಂಡರು. ಮಂಜೂರಾತಿ ದೊರೆಯಲು ಶಾಲೆಯಲ್ಲಿ ಒಬ್ಬ ಉರ್ದು ಶಿಕ್ಷಕನೂ ಬೇಕು ಎಂದು ಎಜ್ಯುಕೇಷನ್ ಕಚೇರಿಯಲ್ಲಿಯ ಹಿತಚಿಂತಕರು ಹೇಳಿದರು. ಅದನ್ನೂ ಮಾಡಬೇಕಾಯಿತು . ಅದಕ್ಕೆ ತಮ್ಮ ಊರು

ಗುಳೇದಗುಡ್ಡದ ಶಾಲೆಯಲ್ಲಿ ಉರ್ದು ಕಲಿಸಿ ನಿವೃತ್ತರಾಗಿದ್ದ ಸೈಪುದ್ಧೀನರನ್ನು ಕರೆಯಿಸಿಕೊಂಡರು.

ವೆಂಕಟರಾವ್ ನಾಯಕರ ದಕ್ಷ ಆಡಳಿತದಿಂದಾಗಿ ಶಾಲೆಯಲ್ಲಿ ಶಿಸ್ತು, ವ್ಯವಸ್ಥಿವಾಗಿ ಪಾಠಗಳು ನಡೆಯ ಹತ್ತಿದವು. ಹುಡುಗರು ಉತ್ತಮ ದರ್ಜೆಯಲ್ಲಿ ಪಾಸಾಗುತ್ತಿದ್ದರು. ನೃಪತುಂಗ ವಿದ್ಯಾಲಯದ ಕೀರ್ತಿ ನಗರದಲ್ಲೆಲ್ಲ ಪಸರಿಸಿತು. ಹೈಸ್ಕೂಲು ಪ್ರವೇಶಕ್ಕೆ ನೃಪತುಂಗ ವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರಾಶಸ್ತ್ಯ ದೊರೆಯಿತು.

ಮಿಡ್ಲ ಸ್ಕೂಲಿಗೆ ಮಂಜೂರಾತಿಯೂ ದೊರಕಿತು. ಜೊತೆಗೆ ಗ್ರ್ಯಾಂಟ್‌ನಲ್ಲಿ ತುಸು ಹೆಚ್ಚಳವೂ ಆಯಿತು. ೨೫೦ಕ್ಕಿಂತ ಅಧಿಕ ಮಕ್ಕಳು ಕಲಿಯುತ್ತಿದ್ದ ನೃಪತುಂಗ ವಿದ್ಯಾಲಯದ ಖರ್ಚಿಗೆ ಬರುವ ಗ್ರ್ಯಾಂಟು ರಾವಣನ ಹೊಟ್ಟೆಗೆ ಕಾಸಿನ ಶುಂಠಿಯಾಯಿತು. ಉಳಿದೆಲ್ಲ ಭಾರ ಚಿಮ್ಮಲಗಿ ಅವರ ಮೇಲೆಯೇ ಬೀಳುತ್ತಿತ್ತು. ಅದರಿಂದ ಮುಕ್ತರಾಗುವ ದಾರಿಯನ್ನು ಹುಡುಕ ಹತ್ತಿದರು. ಇನ್ನು ತನ್ನೊಬ್ಬನಿಂದ ಇಡೀ ಶಾಲೆಯನ್ನು ನಿರ್ವಹಿಸುವುದು ಅಸಾಧ್ಯವೆನಿಸಿತು. ಅದು ಸಹಜವೂ ಆಗಿತ್ತು. ಅದಕ್ಕಾಗಿ ಶಾಲೆಯ ನಿರ್ವಹಣೆಗೆ ಮತ್ತು ಅದರ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳಲು ಒಂದು ಸಮಿತಿಯನ್ನು ರಚಿಸಿದರು. ಅದಕ್ಕೆ ಜನಾರ್ದನ ದೇಸಾಯಿ ಅವರನ್ನು ಅಧ್ಯಕ್ಷರನ್ನಾಗಿಸಿದರು. ಕಲಬುರ್ಗಿಯ ಜನಾರ್ಧನ ದೇಸಾಯಿ ಅವರು ನಿಷ್ಠಾವಂತ ಸಮಾಜಸೇವಕರೆಂದು ಹೆಸರು ಪಡೆದಿದ್ದರು. ಸುಪ್ರಸಿದ್ಧ ವಕೀಲರೂ ಆಗಿದ್ದರು. ಆ ವೇಳೆಗೆ ಅವರು ಕಲಬುರ್ಗಿಯನ್ನು ಬಿಟ್ಟು ಹೈದರಾಬಾದ್‌ಗೆ ಬಂದು ನೆಲೆಸಿದ್ದರು. ಅವರಿಗೆ ಶಾಲೆಯ ಆಡಳಿತದ ಹೊಣೆಯನ್ನು ಒಪ್ಪಿಸುವಾಗ ಬೆಳೆದ ಮಗಳನ್ನು ಬೀಳ್ಕೊಟ್ಟ ಭಾವನೆ ಚಿಮ್ಮಲಗಿ ಅವರಲ್ಲಿ ಮೂಡಿ ಕಣ್ಣಾಲಿಗಳು ತುಂಬಿ ಬಂದಿದ್ದವು ಎಂದು ಒಂದೆಡೆ ನಮೂದಿಸಲಾಗಿದೆ.

ನೃಪತುಂಗ ವಿದ್ಯಾಲಯವು ತನ್ನ ವ್ಯವಸ್ಥಿತ ಪಾಠಗಳಿಂದ ಇನ್ನಿತರ ಚಟುವಟಿಕೆಗಳಿಂದ ಹೆಸರನ್ನು ಗಳಿಸಿತು. ಅದರ ಯಶಸ್ಸಿನಿಂದ ಪ್ರೇರಿತರಾಗಿ ಚಿಂಚೊಳ್ಳಿಯ ಕೃಷ್ಣಾಚಾರ ಜೋಶಿ ಎಂಬುವರು 'ಕರ್ನಾಟಕ ಶಾರದಾ ಕನ್ಯಾ ಪಾಠಶಾಲೆ'ಯನ್ನು ಆರಂಭಿಸಿದರು. ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕ ಕನ್ನಡ ಶಾಲೆಯೊಂದು ಹುಟ್ಟಿಕೊಂಡಿತು. ಎರಡೂ ಶಾಲೆಗಳನ್ನು ಒಂದೇ ಆಡಳಿತ ಸುಪರ್ದಿಯಲ್ಲಿ ತರಲು 'ಕರ್ನಾಟಕ ಶಿಕ್ಷಣ ಸಮಿತಿ' ಎಂಬ ಸಂಸ್ಥೆಯೊಂದು ನಿಜಾಮ ಸಂಸ್ಥಾನದ ರಾಜಧಾನಿ ಹೈದರಾಬಾದಿನಲ್ಲಿ ಉದಯಿಸಿತು. ಅದು ಈಗಲೂ ತನ್ನ ಹೆಸರಿನೊಂದಿಗೆ ನಗರದಲ್ಲಿ ಉನ್ನತ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಯಾಗಿದೆ.

ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ಮತ್ತು ಸಾಮಾಜಿಕ ಸಂಘಟನೆಗಾಗಿ ಲೋಕಮಾನ್ಯ ಟಿಳಕರು ಗಣೇಶೋತ್ಸವವನ್ನು

ಸಾರ್ವಜನಿಕವಾಗಿ ಮಹಾರಾಷ್ಟ್ರದಲ್ಲಿ ಸಂಘಟಿಸಿದ್ದರು. ಅದು ನೆರೆಯ ರಾಜ್ಯಗಳಿಗೂ ಹಬ್ಬಿದಾಗ ನಿಜಾಮರ ರಾಜ್ಯದಲ್ಲೂ ಹಬ್ಬಿತು. ಬಹು ಸಂಖ್ಯಾತ ಮರಾಠಿಗರಿದ್ದ ಹೈದರಾಬಾದ ನಗರದಲ್ಲೂ ಇಂಥ ಉತ್ಸವಗಳು ಪ್ರಾರಂಭವಾಗುವುದು ಸಹಜವಾಗಿತ್ತು. ಮೊದಲ ದಿನಗಳಲ್ಲಿ ಕನ್ನಡಿಗರೂ ಅದರಲ್ಲಿ ಪಾಲುಗೊಂಡು ಗುಂಪಿನಲ್ಲಿ ಗೋವಿಂದ ಎನ್ನುತ್ತಿದ್ದರು. ಅವರುಗಳಲ್ಲಿ ಕೆಲವು ಕನ್ನಡಿಗರು 'ಕರ್ನಾಟಕ ಸಮಾಜ ಗಣಪತಿ ಉತ್ಸವ' ಆರಂಭಿಸಿದ್ದರು. ಆದರೆ ಅದು ನಾಮ ಮಾತ್ರ ಮಂಡಳಿಯಾಗಿದ್ದಿತು. ಆದರಲ್ಲಿ ವಿಶೇಷ ಕಾರ್ಯಕ್ರಮಗಳೇ ಇರದಿದ್ದರಿಂದ ಕನ್ನಡಿಗರು ಮರಾಠಿ ಜನರೊಂದಿಗೆಯೇ ಕೈ ಜೋಡಿಸಿದ್ದರು.

ಚಿಮ್ಮಲಗಿ ಭೀಮಾಚಾರ್ಯರು ಅದನ್ನು ಕಂಡದ್ದು 'ಕರ್ನಾಟಕ ಸಮಾಜ ಗಣಪತಿ ಉತ್ಸವ' ದಲ್ಲಿ . ತಾವೆ ಸಕ್ರಿಯವಾಗಿ ಭಾಗವಹಿಸಿ ಅದಕ್ಕೆ ಒಂದು ವ್ಯಾಪಕವಾದ, ವ್ಯವಸ್ಥಿತವಾದ ರೂಪವನ್ನು ಕೊಟ್ಟರು. ಮೊದಲನೆಯ ವರ್ಷದ ಅಂದರೆ ೧೯೩೩ರಲ್ಲಿ ಉತ್ಸವಕ್ಕೆ ಪ್ರೊ. ಡಿ.ಕೆ. ಭೀಮಸೇನರಾಯರನ್ನು ಮುಖ್ಯ ಅತಿಥಿಯನ್ನಾಗಿ ಬರಮಾಡಿಕೊಂಡರು. ಭೀಮಸೇನರಾಯರು ಮೈಸೂರಿನಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದು ಅದೇ ಆಗ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದರು. ಜತೆಗೆ ಈ ಸಲದ ಉತ್ಸವದ ವಿಶೇಷ ಆಕರ್ಷಣೆಯಾಗಿ 'ಕನ್ನಡ ಸಂಗೀತ ಮೇಳ' ಏರ್ಪಟ್ಟಿತ್ತು. ಜೀವಣರಾವ ಮಾಸ್ತರರು ಹಾರ್ಮೋನಿಯಮ್ ಶಿಕ್ಷಕರಾಗಿ ದೊರೆತರು. ೩/೪ ದಿನಗಳ ಕಾರ್ಯಕ್ರಮವು ಅಧಿಕ ಸಂಖ್ಯೆಯ ಕನ್ನಡಿಗರನ್ನು ಆಕರ್ಷಿಸಿತು.

ಎರಡನೆಯ ವರುಷ ಬೆಂಗಳೂರಿನಿಂದ ತಿ.ತಾ. ಶರ್ಮರು ಮುಖ್ಯ ಅತಿಥಿಗಳಾಗಿ ಬಂದರು. ಆನಂತರದ ವರುಷದಲ್ಲಿ ಕೆ. ಸಂಪದ್ಗಿರಿರಾಯರು ಬಂದಿದ್ದರು. ಪ್ರಾರಂಭದಲ್ಲಿ ಉತ್ಸವವು ಇಸಾಮಿಯಾ ಬಜಾರಿನ ಒಂದು ಕೊಠಡಿಯಲ್ಲಿ ನಡೆಯುತ್ತಿದ್ದಿತು. ವರುಷ - ವರುಷಕ್ಕೂ ಕಾರ್ಯಕ್ರಮಗಳ ಆಕರ್ಷಣೆಯಿಂದ ಕೊಠಡಿ ಸಾಲದಾಯಿತು. ಸಂಪದ್ಗಿರಿರಾಯರು ಬಂದ ವರುಷ ಒಂದು ವಿಶಾಲ ಮೈದಾನದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕಾಯಿತು. ಸಂಪದ್ಗಿರಿರಾಯರ ವಾಗ್ವೈಖರಿ ಅಸದೃಶವಾಗಿತ್ತು. ಮರುದಿನ ವಾಮನ ನಾಯಕರು ತಮ್ಮ ವಿವೇಕ ವರ್ಧಿನಿ ಶಾಲೆಯಲ್ಲಿ ಭಾಷಣ ಮಾಡಲು ಆಮಂತ್ರಿಸಿದರು. ಅವರ ಅಸ್ಖಲಿತ ವಾಣಿಯಿಂದ ಬೆಚ್ಚಿ ಬಿದ್ದ ಮರಾಠಿಗರು 'ಅರೆ ಕಾನಡಿ ಲೋಕಾಮಧೆ ಇತಕೆ ಚಾಂಗಲೆ ಬೋಲಣಾರೆ ವಕ್ತಾ ಆಹೇತ್ ಕಾಯ್' (ಅರೆ ಕನ್ನಡಿಗರಲ್ಲೂ ಇಂಥ ಒಳ್ಳೆಯ ವಾಗ್ಮಿಗಳಿದ್ದಾರೆಯೇ,' ಎಂದು ಉದ್ಗಾರ ತೆಗೆದರಂತೆ ! ಈ ಎಲ್ಲ ಕಾರ್ಯಕ್ರಮಗಳ ಹಿಂದಿನ ಸೂತ್ರಧಾರರು ಚಿಮ್ಮಲಗಿ ಭೀಮಾಚಾರ್ಯರು ಎಂದು ಬೇರೆ ಹೇಳಬೇಕಾಗಿಲ್ಲ. ಈ ಕಾರ್ಯಕ್ರಮಗಳಿಗೆ ಅಧಿಕ ಸಂಖ್ಯೆಯ ಕನ್ನಡಿಗರು ಬರುವುದನ್ನು ಕಂಡು ಅವರಿಗೆ ತುಂಬ ಸಂತೋಷವಾಯಿತು. ನಾಲ್ಕನೆಯ ವರುಷದ

ಗಣೇಶೋತ್ಸವವನ್ನು ಅವರು ಗೌಳಿಗುಡಾ ಉಪನಗರದಲ್ಲಿ ಹಮ್ಮಿಕೊಳ್ಳಬೇಕೆಂದು ಯೋಚಿಸಿದಾಗ ವಾಮನ ನಾಯಕರು ಬಂದು ಚಿಮ್ಮಲಗಿಯವರನ್ನು ಕಂಡು ಹೇಳಿದರಂತೆ.

''ನಾವು ಈಗಾಗಲೇ ಇಲ್ಲಿ ಗಣೇಶೋತ್ಸವವನ್ನು ಆಚರಿಸುತ್ತಿದ್ದೇವೆ. ನಮ್ಮೊಂದಿಗೆ 'ಕಾನಡಿ' ಬಂಧುಗಳೂ ಇದ್ದಾರೆ. ನೀವೂ ಬೇಕಾದರೆ ಬಂದು ಸೇರಿಕೊಳ್ಳಿ. ಗಣೇಶನು ಎಲ್ಲರಿಗೂ ದೇವರು. ನೀವು ಪ್ರತ್ಯೇಕವಾಗಿ ಆಚರಿಸುವುದಾದರೆ, ಕನ್ನಡ - ಮರಾಠಿ ಭೇದದ ಬೀಜವನ್ನು ಬಿತ್ತಿದಂತಾಗುವುದು. ಇದನ್ನು ನಡೆಯಗೊಡುವುದಿಲ್ಲ. ಪರಸ್ಪರ ಜಗಳಗಳಾಗಿ ಏನಾದರೂ ಏಕೋಪಕ್ಕೆ ಹೋದರೆ ಅದಕ್ಕೆ ನೀನೇ ಜವಾಬುದಾರರು'' ಎಂದು ಮುಂತಾಗಿ ಬೆದರಿಕೆ ಹಾಕುವ ರೀತಿಯಲ್ಲಿ ಹೇಳಿದರು.

ಚಿಮ್ಮಲಗಿಯವರು ಶಾಂತವಾಗಿಯೇ ಅದನ್ನು ಆಲಿಸಿದರು. ಕ್ಷಣ ಹೊತ್ತು ವಿಚಾರಿಸಿದರು. ಗಣೇಶನೇನೋ ಎಲ್ಲರ ಪಾಲಿನ ಸಮಾನ ದೇವರು ನಿಜ. ಆದರೆ ಕನ್ನಡವನ್ನು ಬಿಂಬಿಸಿ, ಕನ್ನಡಿಗರಲ್ಲಿ ಜಾಗೃತಿಯನ್ನು ಉಂಟು ಮಾಡಲು ಅವರನ್ನು ಒಂದೆಡೆ ಸೇರಿಸಲು ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವಷ್ಟೆ. ಗಣಪನೊಬ್ಬನೇ ಬೇಕಾಗಿದ್ದರೆ ಎಲ್ಲಿಯೂ ಹೋಗಿ ನಮಸ್ಕಾರ ಮಾಡಬಹುದಿತ್ತು. ಎಂದು ಮುಂತಾಗಿ ಯೋಚಿಸಿದರು. ವಾಮನ ನಾಯಕರ ಬೆದರಿಕೆಗೆ ಜಗ್ಗಲಿಲ್ಲ. ಅವರ ವಿರೋಧವನ್ನು ಗಣಿಸದೆ ತಾವು ಪ್ರತ್ಯೇಕವಾಗಿ ಗಣೇಶೋತ್ಸವವನ್ನು ಏರ್ಪಡಿಸಿದರು. ಈ ಬಾರಿಗೆ ಸುಪ್ರಸಿದ್ಧ ಕೀರ್ತನಕಾರರಾದ ಕೊಪ್ಪಳ ಜಯರಾಮಾಚಾರ್ಯರನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಲಾಗಿತ್ತು. ಹೈದರಾಬಾದ ಕರ್ನಾಟಕದಲ್ಲಿ ಕನ್ನಡವನ್ನು ಪ್ರಚಾರಗೊಳಿಸುವಲ್ಲಿ ದೇಶಭಕ್ತಿಯನ್ನು ಬೆಳೆಸುವಲ್ಲಿ ಕೊಪ್ಪಳ ಜಯರಾಮಚಾರ್ಯರ ಮೂರು - ನಾಲ್ಕು ದಶಕಗಳ ಕಾರ್ಯ ಅವಿಸ್ಮರಣೀಯವಾಗಿದೆ. ಅದುವೆ ಒಂದು ಪ್ರತ್ಯೇಕ ಉಲ್ಲೇಖನಕ್ಕೆ ಕಾರಣವಾದೀತು. ಕೊಪ್ಪಳ ಜಯರಾಮಾಚಾರ್ಯರು ಹೈದರಾಬಾದಿಗೆ ಬರುವ ಮುನ್ನ ಮುಳಗುಂದ ರಾಮಶಾಸ್ತ್ರಿಗಳು ಎಂಬುವರು ಹೈದರಾಬಾದಿನಲ್ಲಿ ಕನ್ನಡ ಹರಿಕೀರ್ತನೆಗಳಿಗೆ ಪ್ರಸಿದ್ಧರಾಗಿದ್ದರು. ಅವರದು ಹೆಸರಿಗೆ ಕನ್ನಡ ಹರಿಕರ್ತನ, ಆದರೆ ಮಾತು ಮಾತಿಗೆ ಮಹಾರಾಷ್ಟ್ರದ ಸಂತರ ಅಭಂಗಗಳನ್ನು ಉದ್ಧರಿಸಬೇಕು. ಅದು ಚಿಮ್ಮಲಗಿಯವರಿಗೆ ಮೊಸರಿನಲ್ಲಿ ಕಲ್ಲಿನಂತೆ ಕಂಡಿತು. ಒಂದು ಸಲ ಅವರು ಕೇಳಿಯೂ ಬಿಟ್ಟರು. ಪ್ರತಿಯಾಗಿ ರಾಮಾಶಾಸ್ತ್ರಿಗಳು ಕರ್ನಾಟಕದಲ್ಲಿ ಅಂಥ ಮಹಾನುಭಾವರು ಎಲ್ಲಿದ್ದಾರೆ? ಏನು ಬರೆದಿದ್ದಾರೆ ಎಂದು ಕೇಳಿದ್ದರಂತೆ. ಅದಕ್ಕೆ ಉತ್ತರವೆಂಬಂತೆ ಜಯರಾಮಾಚಾರ್ಯರು ಕೀರ್ತನೆಯುದ್ದಕ್ಕೂ ಹರಿದಾಸರ ಕನ್ನಡ ಕೀರ್ತನೆಗಳನ್ನು ಸುಮಧುರವಾಗಿ ಹಾಡುತ್ತ ಹೋದಂತೆ ಕನ್ನಡ, ಮರಾಠಿ ಶ್ರೋತೃಗಳೆಲ್ಲ ಚಕಿತರಾದರು.

ಜಯರಾಮಾಚಾರ್ಯರ ಕೀರ್ತನೆಯಿಂದ ಸ್ಫೂರ್ತಿಗೊಂಡ ಹೈದರಾಬಾದಿನ ಕನ್ನಡಿಗರು ನಗರದಲ್ಲಿ ಕರ್ನಾಟಕ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಿದರು. ಅದುವೆ ೧೯೨೫ರಲ್ಲಿ ಸ್ಥಾಪಿತವಾದ 'ಕರ್ನಾಟಕ ಸಾಹಿತ್ಯ ಮಂದಿರ'. ಚಿಮ್ಮಲಗಿ ಅವರ ಮನೆಯೇ ಕರ್ನಾಟಕ ಸಾಹಿತ್ಯ ಮಂದಿರದ ಸ್ಥಳವಾಯಿತು. ಅದರ ಸ್ಥಾಪನೆಗೆ ಆ ಹೊತ್ತಿಗೆ ಹೈದರಾಬಾದಿಗೆ ಬಂದು ನೆಲೆಸಿದ್ದ ಸಿದ್ದವನಹಳ್ಳಿ ಕೃಷ್ಣಶರ್ಮರು ವಿಶೇಷವಾಗಿ ಶ್ರಮಿಸಿದ್ದರು. ಸಾಹಿತ್ಯ ಮಂದಿರದ ಬೆಳವಣಿಗೆಗೆ ಚಿಮ್ಮಲಗಿಯವರು ಅನನ್ವಿತವಾಗಿ ಸಹಾಯ ಸಲ್ಲಿಸಿದರು. ಅದು ಬೆಳೆದು ದೊಡ್ಡದಾದ ಮೇಲೆ ಬೇರೆಡೆ ಸ್ಥಳಾಂತರಗೊಂಡಿತು. ಸಾಹಿತ್ಯ ಮಂದಿರದ ಅನಂತರ ಕನ್ನಡ ಬುಕ್ ಡಿಪೋ, ಕನ್ನಡ ಮುದ್ರಣಾಲಯಗಳ ಅವಶ್ಯಕತೆ ಕಂಡು ಬಂದಿತು. ಅದಕ್ಕೂ ಚಿಮ್ಮಲಗಿ ಅವರು ಮುಂದಾದರು. ಬುಕ್ ಡಿಪೋ ಕೆಲವು ವರುಷ ನಡೆಯಿತು. ಮುದ್ರಣಾಲಯವು ಅನದ್ನು ನಡೆಸಿಕೊಂಡು ಹೋಗುವವರಿಲ್ಲದೆ ನಿಂತು ಹೋಯಿತು.

ನಿಜವಾಗಿ ನಮ್ಮಲ್ಲಿ ಕನ್ನಡದ ಅಭಿಮಾನವಿದ್ದರೆ, ಅದು ಸಣ್ಣ -ಪುಟ್ಟ ಸಂಗತಿಗಳಲ್ಲೂ ಎದ್ದು ಕಾಣಬೇಕು. ಅದಕ್ಕೆ ಚಿಮ್ಮಲಗಿ ಅವರು ಮಾದರಿಯಾಗಿದ್ದಾರೆ. ಒಂದು ಸಲ ಕನ್ನಡ ಕೈಂಕರ್ಯವನ್ನು ಕೈಗೊಂಡಮೇಲೆ ಅದರಲ್ಲಿ ಎಳ್ಳು ಕಾಳಿನಷ್ಟೂ ಅಂತರ ಬೀಳಬಾರದು. ಚಿಮ್ಮಲಗಿ ಅವರ ಬಾಳಿನಲ್ಲಿ ಇಥ ಹತ್ತಾರು ಸಂಗತಿಗಳು ಜರುಗಿದವು. ಪ್ರಾರಂಭದಲ್ಲಿ ಅವರ ಅಂಗಡಿಯ ಹೆಸರು 'ಚಿಮ್ಮಲಗಿಕರ ಬ್ರದರ್ಸ್' ಎಂದು ಇದ್ದಿತು. ಚಿಮ್ಮಲಗಿಯ ಮುಂದೆ ಬಂದ 'ಕರ' ಇದು ಮರಾಠಿ ಸಂಕೇತ ಎಂದು ತಿಳಿದೊಡನೆ 'ಕರ್' ಎಂಬುದನ್ನು ಹೊಡೆದು ಹಾಕಿದರು. ಅದರಿಂದ ಅವರ ವ್ಯವಹಾರಕ್ಕೆ ಧಕ್ಕೆ ಬರುವಂತೆ ಮರಾಠಿಗರು ಅಪಪ್ರಚಾರವನ್ನು ಮಾಡಿದರು. ಆದರೆ ಅವರು ಅದಕ್ಕೆ ಬಗ್ಗಲಿಲ್ಲ. ಮರಾಠಿಗರ ಅಪಪ್ರಚಾರದಿಂದ ಯಾವ ದುಷ್ಪರಿಣಾಮವೂ ಆಗಲಿಲ್ಲ.

ಪ್ರಾಥಮಿಕ ಶಾಲೆಗಳಲ್ಲಿ ಆಯಾ ರಾಜ್ಯಗಳ ಭೂಗೋಳವನ್ನು ಕಲಿಸುತ್ತಾರೆ. ಅದರಂತೆ ನಿಜಾಮನ ರಾಜ್ಯದಲ್ಲಿ ನಿಜಾಮ ರಾಜ್ಯದ ಭೂಗೋಲವನ್ನು ಕಲಿಸಲು ನಿಜಾಮು ರಾಜ್ಯದ ನಕಾಶೆ ಇತ್ತು. ಅದರಲ್ಲಿ ತೆಲಂಗಾಣ ಮತ್ತು ಮಹಾರಾಷ್ಟ್ರ ಎಂಬುದಾಗಿ ಎರಡೇ ಭಾಗಗಳನ್ನು ತೋರಿಸಲಾಗಿತ್ತು. ಅದರಂತೆಯೇ ಪಾಠ ಹೇಳುವ ಪರಿಪಾಠವೂ ಇದ್ದಿತು. ಆದರೆ ನಿಜಾಮನ ರಾಜ್ಯದಲ್ಲಿ ಒಂದಲ್ಲ ಮೂರು ಜಿಲ್ಲೆಗಳು ಕನ್ನಡವಾಗಿದ್ದುವು. ಬೀದರ, ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳು ಅಪ್ಪಟ ಕನ್ನಡವಾಗಿದ್ದರೂ ಅವುಗಳನ್ನು ಪ್ರತ್ಯೇಕವಾಗಿ ತೋರಿಸಿರಲಿಲ್ಲ. ಈ ಲೋಪವನ್ನು ಶಿಕ್ಷಣ ಇಲಾಖೆಯ ಗಮನಕ್ಕೆ ತಂದರು. ಆದರೆ ಅದರಿಂದ ನಿರೀಕ್ಷಿತ ಫಲ ದೊರೆಯಲಿಲ್ಲ. ಆಗ ಚಿಮ್ಮಲಗಿ ಅವರು ತಾವೇ ನಿಜಾಮು ರಾಜ್ಯದ ಬೇರೊಂದು ನಕಾಶೆಯನ್ನು ಬರೆಯಿಸಿ ಅದರಲ್ಲಿ ತೆಲಂಗಾಣ ಮಹಾರಾಷ್ಟ್ರಗಳ ಜೊತೆಗೆ ಈ

ಮೂರು ಜಿಲ್ಲೆಗಳಿಗೆ ಕರ್ನಾಟಕ ಎಂಬುದಾಗಿ ತೋರಿಸಿ ವಿವಿಧ ಇಲಾಖೆಗಳಿಗೆ ತಿಳಿಸಿದರು. ಶಾಲೆಗಳಿಗೂ ಪ್ರಮುಖ ಮರಾಠಿ ಬಾಂಧವರಿಗೂ ಕಳಿಸಿದರು. ಅದರಂತೆ ಕರ್ನಾಟಕದ ಒಳನಾಡಿನಲ್ಲಿಯೂ ಹಂಚಿದರು. ಆದರಿಂದಾಗಿ ನಿಜಾಮ ರಾಜ್ಯದಲ್ಲಿಯ ಕನ್ನಡಿಗರ ಅಸ್ತಿತ್ವವು ಕನ್ನಡಿಗರಿಗೂ, ಒಳನಾಡಿನ ಕನ್ನಡಿಗರಿಗೂ ಸ್ಪಷ್ಟವಾಗಿ ಗೋಚರಿಸುವಂತಾಯಿತು.

ಆ ದಿನಗಳಲ್ಲಿ ಚಲನಚಿತ್ರಗಳು ಕೂಡ ಹೆಚ್ಚಾಗಿ ಬಳಕೆಯಲ್ಲಿ ಇರಲಿಲ್ಲ. ನಾಟಕಗಳೇ ಪ್ರಮುಖ ಮನರಂಜನೆಯ ಸಾಧನಗಳಾಗಿದ್ದುವು. ಕನ್ನಡದಿಂದಲೇ ಪ್ರಭಾವಿತಗೊಂಡು ಮರಾಠಿಯ ನಾಟಕಗಳು ಪ್ರಾರಂಭವಾದರೂ ಅವುಗಳು ಮಹಾರಾಷ್ಟ್ರ, ಕರ್ನಾಟಕ, ನಿಜಾಮನ ರಾಜ್ಯಗಳಲ್ಲಿ ತುಂಬ ಪ್ರಚಲಿತದಲ್ಲಿದ್ದುವು. ಕಿರ್ಲೋಸ್ಕರ್, ಗಡಕರಿ ಇತ್ಯಾದಿ ಪ್ರಭೃತಿಗಳ ಸಂಗೀತ ನಾಟಕಗಳು ಸುಪ್ರಸಿದ್ಧಿವಾಗಿದ್ದವು. ಹೈದರಾಬಾದಿಗೂ ಬರುತ್ತಿದ್ದವು. ಗಡಕರಿ ಅವರ ಮರಾಠಿ ನಾಟಕ 'ಭಾವಬಂಧನ' ಹೈದರಾಬಾದಿನಲ್ಲಿ ಪ್ರದರ್ಶಿತವಾಗುತ್ತಿತ್ತು. ನಾಟಕದಲ್ಲಿಯ ಒಂದು ಪಾತ್ರವು ಕನ್ನಡ ಭಾಷೆಯನ್ನು ಅವಹೇಳನ ಮಾಡುತ್ತ 'ಕನ್ನಡ ಭಾಷೆಯೆಂದರೆ ಮಣ್ಣಿನ ಕುಡಿಕೆಯಲ್ಲಿ (ಗಡಗಿ) ಹರಳು ಕಲ್ಲುಗಳನ್ನು ಒಗೆದು ಅಲುಗಾಡಿಸಿದಂತೆ' ಎಂಬ ರೀತಿಯಲ್ಲಿ ಹೇಳುತ್ತದೆ.

ರಂಗ ಪ್ರಯೋಗದಲ್ಲಿ ಆ ಮಾತನ್ನು ಒಂದು ಪಾತ್ರ ಹಾವಭಾವದೊಂದಿಗೆ ಹೇಳಿದಾಗ ಪ್ರೇಕ್ಷಕರು ಹೋ ಎಂದು ನಗುತ್ತಿದ್ದರು. ಅದು ಚಿಮ್ಮಲಗಿ ಮತ್ತು ಸ್ನೇಹಿತರಿಗೆ ಸರಿ ಎನಿಸಲಿಲ್ಲ. ಮರುದಿನ ಇನ್ನಷ್ಟು ಕನ್ನಡಿಗರನ್ನು ಸೇರಿಸಿಕೊಂಡು ಪ್ರತಿಭಟಿಸಿದರು. ಪ್ರತಿಭಟನಾಕಾರರಲ್ಲಿ ಜಯತೀರ್ಥ ರಾಜಪುರೋಹಿತ, ನ.ನಾ. ಕಠಾವಿ, ಕಾಗಲ್ ವೆಂಕಟೇಶ್, ವಿ.ಎಚ್. ದೇಸಾಯಿ, ಎಸ್. ವೆಂಕಟೇಶ್ ಮೊದಲಾದ ತರುಣ ಮಂಡಳಿ ಇದ್ದಿತು.

ರಾತ್ರೋ ರಾತ್ರಿ ಪ್ರತಿಭಟನೆಯ ಕರೆಯನ್ನು ನೀಡುವ ಹಸ್ತಪ್ರತಿಗಳನ್ನು ಬರೆದು ಬೆಳಗಾಗುವುದರಲ್ಲಿ ಕನ್ನಡಿಗರ ಮನೆಗಳ ಬಾಗಿಲು ಸಂದಿನಲ್ಲಿ ಹಾಕಿ ಬಂದರು. ಮರುದಿನ ಸಂಜೆ ನಾಟಕ ಪ್ರಾರಂಭವಾಗುವ ಹೊತ್ತಿಗೆ ನಾಟಕ ರಂಗಮಂದಿರದ ಹತ್ತಿರ ಸುಮಾರು ಸಾವಿರ ವಿದ್ಯಾರ್ಥಿಗಳು ಕೆಲವು ಜನ ಹಿರಿಯರು ಸೇರಿದ್ದರು. ಚಿಮ್ಮಲಗಿಯವರಿಗೆ ಸ್ವಾಭಾವಿಕವಾಗಿಯೇ ಸಂತೋಷವಾಗಿತ್ತು. ಗಾಬರಿಗೊಂಡ ಮರಾಠಿಗರು ಅದನ್ನು ತೋರಗೊಡನೆ ಮಂಚೂಣಿಯಲ್ಲಿದ್ದ ಜಯತೀರ್ಥ ರಾಜಪುರೋಹಿತರೇ ಮೊದಲಾದ ತರುಣರಿಗೆ ಶಕ್ತಿ ಪ್ರದರ್ಶನದ ಬೆದರಿಕೆಯನ್ನು ಹಾಕುತ್ತ ವಾದ ಮಾಡಿದರು. ಅಷ್ಟರಲ್ಲಿ ಹಿಂದೆ ನಿಂತಿದ್ದ ಕನ್ನಡ ತರುಣರು ಕೈಯಲ್ಲಿ ಕಲ್ಲುಗಳನ್ನು ಹಿಡಿದರು. ಅದನ್ನು ಕಂಡ ಹಿರಿಯರು ಉಭಯತರನ್ನು ಸಮಾಧಾನಗೊಳಿಸುತ್ತ ನಾಟಕದಲ್ಲಿ ಬರುವ ಆ ಮಾತನ್ನು

ಬಿಡುವುದಾಗಿ ಹೇಳಿದರು. ಮತ್ತು ಬಿಟ್ಟದ್ದನ್ನು ಕಾಣಲು ಈ ಕೆಲವು ತರುಣರನ್ನು ರಂಗಮಂದಿರದೊಳಗೆ ಪುಕ್ಕಟೆಯಾಗಿ ಬಿಟ್ಟರು. 'ಆಗ ಚಿಮ್ಮಲಗಿ ಭೀಮಾಚಾರ್ಯರಿಗೆ ಆದ ಸಮಾಧಾನ ಅಷ್ಟಿಷ್ಟಲ್ಲ' ಎಂದು ಜಯತೀರ್ಥ ರಾಜಪುರೋಹಿತರು ಒಂದೆಡೆ ದಾಖಲಿಸಿದ್ದಾರೆ.

'ಇದೇನಾ ಮಹಾಸಾಧನೆ' ಎಂದು ಕೆಲವರಿಗೆ ಅಂದು ಅನಿಸಿರಬೇಕು. ಇಂದೂ ಅನಿಸುತ್ತಿರಬೇಕು. ಆದರೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಎಂಬುದು ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿಯೂ ಕಾಣಬಹುದು. ಕರ್ನಾಟಕ ನಿರ್ಮಾಣವಾಗಿ ೫೦ ವರುಷಗಳಾದ ಮೇಲಂತೂ ಪ್ರಜಾಪ್ರಭುತ್ವದಲ್ಲಿಯ ನಮ್ಮ ಮುಖಂಡರಿಗೆ ಇದು ಒಂದು ರೀತಿಯ 'ಹುಚ್ಚು' ಎಂದೂ ಕಾಣಬಹುದು.

ಆದರೆ ಚಿಮ್ಮಲಗಿ ಅಂಥವರು ಹುಟ್ಟಿರದಿದ್ದರೆ ಈ ರೀತಿಯ ಪ್ರತಿಭಟನೆಗಳು ಇರದಿದ್ದರೆ ಎಂದು ಒಂದು ಕ್ಷಣ ಯೋಚಿಸಿದರೆ ಅರ್ಥವಾದೀತು.

ಚಿಮ್ಮಲಗಿ ಭೀಮಾಚಾರ್ಯರು ಇಂಗ್ಲೀಷ್ ಓದಿದವರಾಗಿರಲಿಲ್ಲ. ಹಾಗೆ ನೋಡಿದರೆ ಯಾವ ಭಾಷೆಗಳಲ್ಲೂ ಅವರು ಅಭ್ಯಾಸ ಮಾಡಿ ಪದವಿ ಗಿದವಿಗಳನ್ನು ಪಡೆದವರಲ್ಲ. ಇಂದಿನ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ ಹುಟ್ಟಿ ಬೆಳೆದು ಎಲ್ಲಿಯೂ ನೆಲೆ ಕಾಣದೆ ಸುತ್ತಾಡಿ ಪೊಲೀಸ್ ಪೇದೆಯಾಗಿ, ಫೋಟೋಗ್ರಾಫರ್ ಆಗಲು ಹೋಗಿ ಅದರ ಸಾಮಗ್ರಿಗಳ ವ್ಯಾಪಾರಿಯಾದರು. ಅನಾಮಧೇಯರಾಗಿ ಹೈದರಾಬಾದಿಗೆ ಬಂದರು. ಪುಸ್ತಕ ವ್ಯಾಪಾರವನ್ನೂ ಮಾಡಿದರು. ಜೀವನದಲ್ಲಿ ಪ್ರತಿಹೆಜ್ಜೆಗೂ ಸಾಹಸ ಪೂರ್ಣ ಪ್ರಯತ್ನದಿಂದ ಯಾವ ಸುಶಿಕ್ಷಿತರೂ, ಪದವೀಧರರೂ, ಇಂದಿನ ಮ್ಯಾನೇಜ್‌ಮೆಂಟ್ ತಜ್ಞರೂ ತಲೆದೂಗಿಸುವಂಥ ವ್ಯವಹಾರ ಕೌಶಲ್ಯ, ಆರ್ಥಿಕ ಯಶಸ್ಸು ಸಮಾಜ ಸೇವೆ, ಭಾಷಾ ಸೇವೆಗಳನ್ನು ಸಾಧಿಸಿ ತೋರಿಸಿದರು ಮತ್ತು ಖ್ಯಾತನಾಮರಾದರು.

ಹೈದರಾಬಾದಿನಲ್ಲಿ ಕನ್ನಡದ ಹೆಸರೇ ಇಲ್ಲದಿದ್ದಾಗ ನೃಪತುಂಗ ಶಾಲೆ, ಕರ್ನಾಟಕ ಸಾಹಿತ್ಯ ಮಂದಿರ, ಗಣೇಶೋತ್ಸವ, ನಾಡಹಬ್ಬಗಳ ಏರ್ಪಾಡು ಮಾಡಿದರು. ಇಂಥವನ್ನೆಲ್ಲ ಆರಂಭಿಸಿ, ಬೆಳೆಸಿ ಕನ್ನಡಕ್ಕೆ ನೆಲೆ ಕಟ್ಟಿದಲ್ಲದೆ ಕನ್ನಡಿಗರಲ್ಲಿ ಜಾಗೃತಿಯುಂಟಾಗುವಂತೆ ಮಾಡಿದ ಕೀರ್ತಿ ಚಿಮ್ಮಲಗಿಯವರದು. ರಾಜಧಾನಿಯಲ್ಲಿಯ ಈ ಜಾಗೃತಿಯಿಂದ ಕಲಬುರ್ಗಿ, ರಾಯಚೂರು ಬೀದರಗಳಲ್ಲಿ ಇನ್ನಷ್ಟು ಜಾಗೃತಿಯಾಗಲು ಕಾರಣವಾಯಿತು. ಅಲ್ಲಿ ಕನ್ನಡ ಸಂಘಗಳು ಹುಟ್ಟಿಕೊಂಡವು. ಮರಾಠಿ ಶಾಲೆಯೆಂದು ಪಾರಂಭವಾದವುಗಳಲ್ಲಿ ಕನ್ನಡ ಕಲಿಸಲು ಮುಂದಾದರು.

ಕ್ರಿ.ಶ. ೧೯೪೧ರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವು ಹೈದರಾಬಾದಿನಲ್ಲಿ ನಡೆಯಿತು. ಎ.ಆರ್. ಕೃಷ್ಣಶಾಸ್ತ್ರಿಗಳು ಸಮ್ಮೇಳನದ

ಅಧ್ಯಕ್ಷತೆಯನ್ನು ವಹಿಸಿದ್ದರು. ಸಮ್ಮೇಳನದ ಸ್ವಾಗತ ಸಮಿತಿಯನ್ನು ರಚಿಸುವ ಸಂದರ್ಭದಲ್ಲಿ ಸ್ವಾಗತಾಧ್ಯಕ್ಷರು ಯಾರಾಗಬೇಕು ಎಂಬ ಚರ್ಚೆ ನಡೆದಾಗ ಒಬ್ಬರು ಚಿಮ್ಮಲಗಿ ಅವರ ಹೆಸರನ್ನು ಸೂಚಿಸಿದರಂತೆ. ಅದಕ್ಕೆ ಮುಂದಾಳುಗಳೊಬ್ಬರು 'ಛೇ, ಅವರು ವ್ಯಾಪಾರಿಗಳು, ನಮಗೆ ವಿದ್ಯಾವಂತ ಮುಂದಾಳು ಬೇಕು' ಎಂದರಂತೆ !

ಭಾಷೆ ಮತ್ತು ಭಾಷಾ ಸಂಸ್ಥೆಗಳ ಮೂಲಕ ರಾಜಕೀಯ ವೇದಿಕೆಯ ಲಾಭ ದೊರೆಯುವುದೆಂಬ ಖಾತ್ರಿ ಅದಾಗಾಲೇ ರಾಜಕಾರಣಿಗಳಿಗೆ ಆಗಿತ್ತು. ಹಾಗೆ ಒಳನಾಡು ಹೊರನಾಡುಗಳಲ್ಲೆಲ್ಲ ಸಾವಕಾಶವಾಗಿ ರಾಜಕಾರಣಿಗಳಲ್ಲಿ ಕನ್ನಡದ ಕಾವು ಏರತೊಡಗಿತ್ತು. ಇಂಥ ಸಂಘ ಸಂಸ್ಥೆಗಳನ್ನು ತಮ್ಮ ಪಾದ ಧೂಳಿಯಿಂದ ಪುನೀತ ಮಾಡತೊಡಗಿದ್ದರು.

ಚಿಮ್ಮಲಗಿಯವರು ಸ್ವಾಗತಾಧ್ಯಕ್ಷರೇನೂ ಆಗಲಿಲ್ಲ. ಆದರೆ ಜನರು ಅವರನ್ನು ಮರೆಯಲಿಲ್ಲ. ಸಮ್ಮೇಳನದ ಸ್ಮರಣ ಸಂಚಿಕೆ 'ಹೈದರಾಬಾದ ಕರ್ನಾಟಕ' ವನ್ನು ಚಿಮ್ಮಲಗಿಯವರಿಗೆಯೇ ಅರ್ಪಿಸಿದ್ದಾರೆ. ಅದರ ಒಕ್ಕಣಿಕೆ ಹೀಗಿದೆ.

''ಬತ್ತಿ ಹೋಗುತ್ತಿದ್ದ ಕನ್ನಡದ ಶೆಲೆಯನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ, ಅಭಿಮಾನದ ಕಿಚ್ಚನ್ನೂ , ಆಶ್ರಯವನ್ನೂ ನೀಡಿ ರಾಜಧಾನಿಯಾದ ಹೈದರಾಬಾದ ನಗರಲ್ಲಿ ಕನ್ನಡದ ಮುನ್ನಡೆಗೆ ಪ್ರಯತ್ನಿಸುತ್ತಿರುವ ಕನ್ನಡ ಭಕ್ತ ಶ್ರೀ ಭೀಮಾಚಾರ್ಯ ಗೋವಿಂದಾಚಾರ್ಯ ಚಿಮ್ಮಲಗಿ ಅವರಿಗೆ''

ಅವರು ಆಗಸ್ಟ್ ೧೭, ೧೯೭೩ರಂದು ಇಹಲೋಕವನ್ನು ತ್ಯಜಿಸಿದರು.

✤ ✤ ✤ ✤

ಅಧ್ಯಾಯ -೨೧

• ಸಂಘ ಸಂಸ್ಥೆಗಳಿಂದ ಕನ್ನಡ ಸಂಘಟನೆ

''ಯಾವ ಜನಾಂಗವೂ 'ಪರವಶ' ವಾದದ್ದಕ್ಕಾಗಲೀ, ಬಡತನಕ್ಕಾಗಲೀ ನಾಮಾವಶೇಷವಾಗಬಾರದು. ಆದರೆ ತಾನು ಯಾರು ಎಂಬ ಅರಿವು ಇಲ್ಲದೆ ಹೋದರೆ ಮಾತ್ರ ನಿಜವಾಗಿಯೂ ಆ ಜನಾಂಗವು ಅಸ್ತಿತ್ವದಲ್ಲಿ ಇಲ್ಲದಂತಾಗುತ್ತದೆ. ನಿಜಾಮ ಕರ್ನಾಟಕವು ಹಿಂದುಳಿದದ್ದೇನೋ ನಿಜ. ಆದರೆ ಇನ್ನೂ ಬದುಕಿ ಬಾಳಿದೆ. ಹಿಂದುಳಿದದ್ದು ಹಿಂದೇ ಉಳಿಯಬೇಕೆಂಬ ನೈಸರ್ಗಿಕ ನಿಯಮ ಈ ಪ್ರಪಂಚದಲ್ಲಿ ಇಲ್ಲ. ಎಂಥಾ ಗಾಢರಾತ್ರಿ ಕೂಡ ಬೆಳಗಲೇ ಬೇಕಾಗುತ್ತದೆ'' ೧೯೩೦ರಷ್ಟು ಹಿಂದೆ ರಾಯಚೂರಿನ ಡಾ. ಭಗೀರಥರಾವ ದೇಶಪಾಂಡೆ ಅವರು, ಅಲ್ಲಿಯವರೇ ಆದ ರಾ.ಗು. ಜೋಶಿ ಅವರ ಪುಸ್ತಕಕ್ಕೆ ಬರೆದ ಸಾಲುಗಳಿವು.

ನಿಜಾಮ ಕರ್ನಾಟಕದ ಕಲಬುರ್ಗಿ, ರಾಯಚೂರು ಮತ್ತು ಬೀದರ ಜಿಲ್ಲೆಗಳು ತೇಜೋಹೀನವಾಗಿ ಮುಸ್ಲಿಮ ಮತ್ತು ಮಹಾರಾಷ್ಟ್ರ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿ 'ಅತೋಭ್ರಷ್ಟ - ತತೋಭ್ರಷ್ಟ' ಸ್ಥಿತಿಗೆ ಇಳಿದಿದ್ದವು. ಇಂಥ ಸಂದರ್ಭದಲ್ಲಿ ರಾಜಧಾನಿಯಲ್ಲಿ ಕನ್ನಡ ಕಹಳೆಯನ್ನು ಊದಿದರೆ ಮಾತ್ರ ಈ ಜಿಲ್ಲೆಗಳು ಎಚ್ಚೆತ್ತುಗೊಳ್ಳಲು ಸಾಧ್ಯವಿತ್ತು. ಅಂತೆಯೇ ಭೀಮಾಚಾರ್ಯ ಚಿಮ್ಮಲಗಿ ಅವರಂಥವರು ಹೈದರಾಬಾದಿನಲ್ಲಿ ಕನ್ನಡ ಶಾಲೆಗಳು, ಕನ್ನಡ ಸಾಹಿತ್ಯ ಮಂದಿರ, ವಾಚನಾಲಯ ಇತ್ಯಾದಿಗಳನ್ನು ಸ್ಥಾಪಿಸಿ, ಕನ್ನಡಿಗರಲ್ಲಿ ತಮ್ಮ ಭಾಷೆ - ಸಂಸ್ಕೃತಿಗಳ ಕುರಿತು ಜಾಗೃತಿ ಉಂಟು ಮಾಡಿದರು. 'ಸಿರಿಗನ್ನಡಂ ಗೆಲ್ಗೆ', 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಮೊದಲಾದ ಸಾಲುಗಳು ಹೈದರಾಬಾದ್ ಕರ್ನಾಟಕದ ಕನ್ನಡಿಗರ ತುಟಿಗಳಲ್ಲಿ ಉಲಿಯ ತೊಡಗಿದವು.

ಈ ಕಾಲದಲ್ಲಿ ಇಲ್ಲಿಯವರೇ ಆದ ಡಿ. ಕೆ. ಭೀಮಸೇನರಾಯರು, ಮಾನ್ವಿ ನರಸಿಂಗರಾಯರಂಥವರು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ ಪಡೆದು ಹೈದರಾಬಾದಿಗೆ ಬಂದದ್ದು ನಿಜಾಮ ಕರ್ನಾಟಕದ ಜನತೆಗೆ ಒಂದು ಮಹಾರಾತ್ರಿಯ ಮುಂಬೆಳಗಿನ ಸೂಚನೆಯಾಗಿತ್ತು. ಡಿ.ಕೆ. ಭೀಮಸೇನರಾಯರೇ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಬಂದಂದಿನಿಂದ ನಿಜಾಮ ಕರ್ನಾಟಕದಲ್ಲಿಯ ಕನ್ನಡ ಕಲಿಯುವ ವಿದ್ಯಾರ್ಥಿಗಳನ್ನು ಆಕರ್ಷಿಸಲು ಸಾಧ್ಯವಾಯಿತು. ಕನ್ನಡದಲ್ಲೇ ಸ್ನಾತಕೋತ್ತರ ಪದವಿ ಪಡೆಯಲು ಇಚ್ಛಿಸಿದ ಬೀದರ, ಕಲಬುರ್ಗಿ, ರಾಯಚೂರು ಜಿಲ್ಲೆಗಳ ವಿದ್ಯಾರ್ಥಿಗಳು ಹೈದರಾಬಾದಿನತ್ತ ಮುಖ ಮಾಡಿದರು. ನೂರಾರು ಕನ್ನಡ ವಿದ್ಯಾರ್ಥಿ- ವಿದ್ಯಾರ್ಥಿನಿಯರು ಪದವಿ

ಪರೀಕ್ಷೆಗಳಲ್ಲಿ ಕನ್ನಡವನ್ನೆ ಪ್ರಧಾನ ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಅಭ್ಯಾಸವನ್ನು ಪ್ರಾರಂಭಿಸಿದರು.

ಹಾಗೆ, ಕನ್ನಡ ಅಭ್ಯಾಸವನ್ನು ಪ್ರಾರಂಭಿಸಿದ ಕನ್ನಡ ವಿದ್ಯಾರ್ಥಿಗಳು ತಮ್ಮ ತವರೂರುಗಳಿಗೆ ಬಂದಾಗ ಅಲ್ಲಿ ಕನ್ನಡ ಪರ ಜಾಗೃತಿಯ ಕೆಲಸಗಳನ್ನು ಕೈಕೊಳ್ಳುವುದು ಸಹಜವಾಗಿತ್ತು. ಪರಿಣಾಮವಾಗಿ ರಾಯಚೂರು, ಕಲಬುರ್ಗಿ, ಬೀದರ, ಜಿಲ್ಲೆಗಳೂ ಕಣ್ತೊರೆಸಿಕೊಂಡು ಎದ್ದವು. ಆಗಲೇ ಪ್ರಚಲಿತದಲ್ಲಿದ್ದ ಕನ್ನಡ ಕವಿಗಳ

'ಏಳ್ ಕನ್ನಡ ತಾಯ್, ಬಾಳ್ ಕನ್ನಡ ತಾಯ್, ಆಳ್
ಕನ್ನಡ ತಾಯ್ ಕನ್ನಡಿಗರೊಡತಿ ಓ ರಾಜೇಶ್ವರಿ'
'ಎನಿತು ಇನಿದು ಈ ಕನ್ನಡ ನುಡಿಯು !
ಮನವನು ತಣಿಸುವ ಮೋಹನ ಸುಧೆಯು '
'ಏರಿಸಿ ಹಾರಿಸಿ , ಕನ್ನಡದ ಬಾವುಟ '
ಮೊದಲಾದ ಸಾಲುಗಳು ಅನುರಣಿಸಿದವು.
'ಮಡದಿ ಮಕ್ಕಳ ಬಿಟ್ಟು ಬರಲು ಪೇಳ್ದರೆ, - ಬರುವೆ
ಹಡೆದ ತಾಯ್ತಂದೆಗಳನಗಲಿ ಬರುವೆ
ಅಡಿಗಡಿಗೆ ನಿನ್ನಯ ಪಾದಸೇವೆಯ ಲೆನ್ನ
ಜಡದೇಹ ಸವೆಸುವೆನು ಪುಸಿಯಲ್ಲ ತಾಯೆ !

ಎಂದು ಪಣ ತೊಟ್ಟರು. 'ನಿಜಾಮ ಕರ್ನಾಟಕ ಪರಿಷತ್ತು', 'ಹೈದರಾಬಾದ್ ಕರ್ನಾಟಕ ಸಾಹಿತ್ಯ ಪರಿಷತ್ತು' ಮೊದಲಾದ ಪ್ರಾತಿನಿಧಿಕ ಸಂಸ್ಥೆಗಳು ರಾಜಧಾನಿ ಹೈದರಾಬಾದಿನಲ್ಲೇ ಹುಟ್ಟಿಕೊಂಡರೆ, ಹೈದರಾಬಾದ್ ಕರ್ನಾಟಕದ ಮೂಲೆ - ಮೂಲೆಗಳಲ್ಲಿ ಇಂಥ ಹಲವಾರು ಸಂಘ ಸಂಸ್ಥೆಗಳು ಹುಟ್ಟಲು ಕಾರಣಗಳಾದವು.

ಕನ್ನಡದ ಬೆಳವಣಿಗೆಯ ಮೊಲ ಹೆಜ್ಜೆ ಎಂದರೆ, ಕನ್ನಡ ಗ್ರಂಥಗಳನ್ನಳಗೊಂಡ ವಾಚನಾಲಯಗಳು. ಕನ್ನಡಿಗರಲ್ಲಿ ಕನ್ನಡದ ಬಗ್ಗೆ ಮಮತೆ ಹುಟ್ಟಲು, ಕನ್ನಡದಲ್ಲಿಯೇ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಹೈದರಾಬಾದ್ ಕರ್ನಾಟಕದ ತುಂಬೆಲ್ಲ 'ಕನ್ನಡ ಸಾರ್ವಜನಿಕ ವಾಚಲನಾಯಗಳು' ಹುಟ್ಟಿಕೊಂಡವು. ಅದಕ್ಕಾಗಿ ಗ್ರಂಥ ಭಂಡಾರಗಳನ್ನು ನಿರ್ಮಿಸಿದರು. ಜೊತೆಗೆ ವ್ಯಕ್ತಿತ್ವ ಸ್ಪರ್ಧೆ, ಭಾಷಣ ಕಲಾಭ್ಯಾಸ ಗಾಯನ ಸ್ಪರ್ಧೆ, ಕವಿತಾ ವಾಚನ, ನಾಟಕ ಪ್ರದರ್ಶನ ಮುಂತಾದವುಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ತಮ್ಮ ಮಾತೃಭಾಷೆಯಲ್ಲಿ ಮನರಂಜನೆಯನ್ನು ಒದಗಿಸುವುದಲ್ಲದೆ, ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಹಿರಿಯರು ತರಬೇತಿ ನೀಡಿದರು. ಆಗಲೇ ಮುಂಬಯಿ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ, ಜನಾಕರ್ಷಣೆಗಳಾಗಿದ್ದ ನಾಡಹಬ್ಬ, ಗಣೇಶೋತ್ಸವ, ವಸಂತ ಸಾಹಿತ್ಯೋತ್ಸವ ಮುಂತಾದವುಗಳನ್ನು ಹೈದರಾಬಾದ್ ಕರ್ನಾಟಕದ ತುಂಬೆಲ್ಲ ಆಚರಿಸಲು

ಪ್ರಾರಂಭಿಸಿದರು. ಆ ಮೂಲಕ ಕನ್ನಡ ನಾಡಿನ ಗತ ವೈಭವ, ಸಾಹಿತ್ಯ ಸಂಪತ್ತು, ಇತಿಹಾಸ, ಅದರ ಘನತೆ, ಭೌಗೋಳಿಕ ಹಿನ್ನೆಲೆ, ಧಾರ್ಮಿಕ ವೈಶಿಷ್ಟ್ಯ, ಇವುಗಳ ಪರಿಚಯವನ್ನು ಜನತೆಗೆ ಮೂಡಿಸಿ ಮೊದಲು ಕನ್ನಡ ನಾಡಿನ ಬಗ್ಗೆ ಭಾಷೆಯ ಬಗ್ಗೆ ಅಭಿಮಾನವನ್ನು ಸೃಷ್ಟಿಸಲು ಕಾರಣವಾದವು.

ಇಂಥವುಗಳಲ್ಲಿ ಹೈದರಾಬಾದಿನ ಸಂಗ್ರಾಮ ವಾಚನಾಲಯ, ರಾಯಚೂರಿನ ಭಾರತ ರೀಡಿಂಗ್ ರೂಮ್, ರಾಯಚೂರು ಜಿಲ್ಲೆಯ ಸಿಂಧನೂರಿನ ಶಾರದಾ ವಾಚನಾಲಯ, ಗಂಗಾವತಿಯ ಕರ್ನಾಟಕ ವಾಚನಾಲಯ, ಲಿಂಗಸುಗೂರಿನ ಉಸ್ಮಾನಿಯಾ ಕನ್ನಡ ವಾಚನಾಲಯ, ಹಣಮಸಾಗರದ ಕರವೀರ ವಾಚನಾಲಯ, ಶ್ರೀ ಏಠಲ ವಾಚನಾಲಯ, ಕುಷ್ಟಗಿಯ ಸಾರ್ವಜನಿಕ ವಾಚನಾಲಯ, ಕೊಪ್ಪಳದ ಗಜಾನನ ವಾಚನಾಲಯ, ಕಿನ್ಹಾಳದ ವಾಚನಾಲಯ, ಇಟಗಿ, ಯೆಲಬುರ್ಗಿ, ಆಡುರಿನ ವಾಚನಾಲಯಗಳನ್ನು ಹೆಸರಿಬೇಕು.

ಕಲಬುರ್ಗಿಯ ವೀರಶೈವ ಬಂಧು ಸಮಾಜ ವಾಚನಾಲಯ, ಚಿಂಚೋಳ್ಳಿಯ ಭಾರತ ವಾಚನಾಲಯ, ಸುಲಹಾಪೇಟದ ಕರ್ನಾಟಕ ವಾಚನಾಲಯ, ಶಹಾಪೂರದ ಶ್ರೀ ವೇಣುಗೋಪಾಲ ವಾಚನಾಲಯ, ಬೀದರಿನ ವಿದ್ಯಾರ್ಥಿ ವಾಚನಾಲಯ, ನ್ನಾರ್ಥಾಯಣಖೇಡದ ಶ್ರೀ ರಾಮ ವಾಚನಾಲಯ, ಭಾಲ್ಕಿಯ ಸಾರ್ವಜನಿಕ ವಾಜನಾಲಯ, ಮೊದಲಾದ ವಾಚನಾಲಯಗಳು ಆ ಭಾಗದಲ್ಲಿ ಕನ್ನಡ ಜಾಗೃತಿಗೆ ಕಾರಣವಾದವು.

ಇವುಗಳಲ್ಲಿಯ ಬಹುತೇಕ ವಾಚನಾಲಯಗಳು ಅಂದಿನ ತರುಣರು, ವಿದ್ಯಾರ್ಥಿಗಳಿಂದಲೇ ಸಂಘಟಿತವಾಗಿ ಹಿರಿಯರ ಉದಾರ ಆಶ್ರಯವನ್ನು ಪಡೆಯುವಲ್ಲಿ ಸಫಲವಾಗಿದ್ದುವು. ಕಾಲಕಾಲಕ್ಕೆ ಈ ಸಂಘಟನೆಗಳು ನಾಡಿನ ಹಾಗೂ ನಾಡ ಹೊರಗಿನ ಹಿರಿಯ ಸಾಹಿತಿಗಳನ್ನೂ, ಕವಿಗಳನ್ನೂ, ಸಾರ್ವಜನಿಕ ಕಾರ್ಯಕರ್ತರನ್ನೂ ಆಮಂತ್ರಿಸಿ ವೈಭವೋಪೇತವಾದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಉತ್ಸವಗಳನ್ನು ನಡೆಸುತ್ತಿದ್ದುವು. ಕನ್ನಡಿಗರಲ್ಲಿ ಕನ್ನಡತನವನ್ನು ಜಾಗೃತಗೊಳಿಸುವಲ್ಲಿ ತರುಣರ -ವಿದ್ಯಾರ್ಥಿಗಳ ಪಾತ್ರ ಅತ್ಯಂತ ಹಿರಿದಾಗಿತ್ತು. ಇಂದು ಕೂಡ ತರುಣರು - ವಿದ್ಯಾರ್ಥಿಗಳು ಅಖಂಡ ಕರ್ನಾಟಕದ ಕನ್ನಡಿಗರಲ್ಲಿ ಕನ್ನಡತನವನ್ನು ಜಾಗೃತಗೊಳಿಸುವ ಕಾರ್ಯದಲ್ಲಿ ಪ್ರವೃತ್ತರಾಗಿರುವ ಅಗತ್ಯ ಇದೆ. ಇಲ್ಲವಾದಲ್ಲಿ ಮಹಾರಾತ್ರಿಯ ನಂತರ ಬಂದ ಬೆಳಗು, ನಡು ನೆತ್ತಿಯ ಸೂರ್ಯ ಇಳಿಮುಖವಾಗಿ ಇನ್ನೊಂದು ಮಹಾರಾತ್ರಿಗೆ ಅನುವು ಮಾಡಿಕೊಟ್ಟಂತಾಗುತ್ತದೆ.

ಸಾರ್ವಜನಿಕ ಅಭಿಪ್ರಾಯವನ್ನು ನಿರೂಪಿಸಲು ಸಂಘಟಿತ ಸಂಘಗಳ ಅಗತ್ಯವಿರುತ್ತದೆ. ಹರಿದು ಹಂಚಿಹೋದ ಕನ್ನಡಿಗರ ಅಭಿಪ್ರಾಯ ನಿರೂಪಿಸಲು ಮುಂಬಯಿ ಕರ್ನಾಟಕದಲ್ಲಿ ೧೮೯೦ರಷ್ಟು ಹಿಂದೆ ಕರ್ನಾಟಕ ವಿದ್ಯಾವರ್ಧಕ ಸಂಘ

ಆನಂತರ ಕಾಲು ಶತಮಾನದ ಅಂತರದಲ್ಲಿ ೧೯೧೫ರಲ್ಲಿ ಹಿಂದಿನ ಮೈಸೂರು ಸಂಸ್ಥಾನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ಹುಟ್ಟಲು ಕಾರಣವಾದರೆ ಹೈದರಾಬಾದ್ ಕರ್ನಾಟಕದಲ್ಲಿ ಅಂಥ ಸಂಘಟನೆಗೆ ಮತ್ತೆ ೧೩ ವರುಷಗಳು ಬೇಕಾದವು.

೧೯೨೮ರ ಚೈತ್ರ ಶುದ್ಧ ರಾಮನವಮಿಯಂದು ಕೋಟೆಯ ಪ್ರಸಿದ್ಧ ಕಸ್ತೆ ಪಾಂಡುರಂಗರಾಯರ ಮನೆಯ ಎದುರಿನ ಹಳೆಯ ಮಹಡಿಯ ಮೇಲೆ 'ರಾಯಚೂರು ಕರ್ನಾಟಕ ತರುಣ ಸಂಘ' ಹುಟ್ಟಿತು. ಅದುವೆ ಹೈದರಾಬಾದ್ ಕರ್ನಾಟಕದಲ್ಲಿಯ ಮೊದಲ ಕನ್ನಡ ಸಂಘ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜೊತೆಗೆ ಇಂದಿನ ಕರ್ನಾಟಕ ರಾಜ್ಯದಲ್ಲಿಯ ಮೂರನೆಯ ಅತಿ ಹಳೆಯ ಸಂಘವೂ ಹೌದು. ಶಿವಮೊಗ್ಗ (೧೯೩೦) ಕಲಬುರ್ಗಿ (೧೯೪೦) ಕರ್ನಾಟಕ ಸಂಘಗಳು ಆನಂತರ ಹುಟ್ಟಿದವುಗಳು.

ಅಂದು ಉತ್ಸಾಹೀ ತರುಣರಾಗಿದ್ದ ಸಾಹಿತ್ಯಾಭಿಮಾನಿಗಳಾಗಿದ್ದ ಡಿ. ಮಾಣಿಕ ರಾವ ವಕೀಲ , ವೀರಣ್ಣ ಮಾಸ್ತರ, ಜಗನ್ನಾಥರಾವ, ಪಡ್ನವೀಸ, ರಾ.ಗು. ಜೋಶಿ ಮೊದಲಾದವರು 'ಕರ್ನಾಟಕ ತರುಣ ಸಂಘ' ಎಬ ಹೆಸರಿನಿಂದ ಒಂದು ಸಂಘವನ್ನು ಹುಟ್ಟು ಹಾಕಿದರು. ಆನಂತರ ಅವರೇ ಸಂಘದ ಹೆಸರಿನಲ್ಲಿಯ 'ತರುಣ' ಶಬ್ದವನ್ನು ತೆಗೆದು ಎಲ್ಲ ಕನ್ನಡಿಗರಿಗೆ ಅನುಕೂಲವಾಗುವಂತೆ 'ಕರ್ನಾಟಕ ಸಂಘ' ಎಂಬುದ್ದಾಗಿ ಮಾರ್ಪಡಿಸಿದರು.

ಮರುವರುಷ ಸಂಘದ ಪರವಾಗಿ 'ಕನ್ನಡ ಕುಸುಮ ಮಾಲೆ' ಎಂಬ ಗ್ರಂಥಮಾಲೆಯನ್ನು ಪ್ರಾರಂಭಿಸುತ್ತ ಅದರ ಮೊದಲ ಕುಸುಮವಾದ 'ಸುಶೀಲೆ' ಅಥವಾ 'ಸಂಸ್ಕೃತಿಯ ಫಲ' ವನ್ನು ಪ್ರಕಟಿಸುವಾಗ ಪ್ರಾರಂಭದಲ್ಲಿ ತಮ್ಮ ಉದ್ದೇಶವನ್ನು ಹೀಗೆ ಹೇಳಿಕೊಂಡಿದ್ದಾರೆ.

೧. ಕನ್ನಡ ಪ್ರಜ್ಞೆಯನ್ನು ಬೆಳೆಸುವುದಕ್ಕಾಗಿ ಪುಟ್ಟ ಪುಸ್ತಕಗಳನ್ನು ಪ್ರಕಟಿಸುವುದು.

೨. ಹಿಂದುಳಿದ ನಿಜಾಮ ಕರ್ನಾಟಕವನ್ನು ವಾಙ್ಮಯ ಪ್ರಪಂಚದಲ್ಲಿ ಮುಂದೆ ತರುವುದು.

೩. ಕನ್ನಡದಲ್ಲಿ ವಿವಿಧ ವಿಷಯಗಳ ಗ್ರಂಥ ಸಂಪತ್ತಿಯನ್ನು ಬೆಳೆಸಲು ಆರಂಭಿಸಿ ಗ್ರಂಥಕಾರರಿಗೆ ಉತ್ತೇಜನ ಕೊಡುವುದು.

೪. ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿ ಸ್ವಧರ್ಮ ಸ್ವಾಭಿಮಾನಾದಿ ಗುಣಗಳನ್ನು ವೃದ್ಧಿಗೊಳಿಸುವುದು.

ಈ ಉದ್ದೇಶಗಳನ್ನು ಈಡೇರಿಸಲು 'ಕನ್ನಡಿಗರಲ್ಲೊಂದು ಬಿನ್ನಹ' ಎಂದು ಕನ್ನಡಿಗರನ್ನು ಉದ್ದೇಶಿಸಿ ಬಿನ್ನಹ ಮಾಡಿಕೊಂಡಿದ್ದಾರೆ. ಅದು ಕನ್ನಡ ಸಂಘದ ಉದ್ದೇಶವನ್ನು ಸ್ಪಷ್ಟ ಪಡಿಸುತ್ತದೆ ಅದರ ಪಾಠ ಇಂತಿದೆ.

''ದೇಶ ಬಾಂಧವರೇ, ತಾಯ್ನುಡಿಯ ಪ್ರಸಾರವೇ ತಾಯ್ನಾಡಿನ ಏಳ್ಗೆಯಲ್ಲವೆ? ತಾಯ್ನಾಡಿನ ಏಳ್ಗೆ ಬಯಸುವುದೂ ಅದಕ್ಕಾಗಿ ಹೆಣಗುವುದೂ ಪ್ರತಿಯೊಬ್ಬನ ಕರ್ತವ್ಯವಲ್ಲವೆ ? ಅಂದ ಮೇಲೆ ತಾಯ್ನುಡಿಯನ್ನು ಹಬ್ಬಿಸಲು ಯತ್ನಿಸುವುದೇ ನಮ್ಮ ಕರ್ತವ್ಯವೆಂದು ಬೇರೆ ಹೇಳಬೇಕೆ ? ಇದಕ್ಕಾಗಿ ಅಲ್ಲಲ್ಲಿ ಸಂಘ ಸಂಸ್ಥೆಗಳೂ, ವಾಚನಾಲಯಗಳೂ ವರ್ತಮಾನ ಪತ್ರಗಳೂ,. ಮಾಸ ಪತ್ರಿಕೆಗಳೂ ಬೇಕಲ್ಲವೆ ? ನಿಜಾಮ ಕರ್ನಾಟಕವನ್ನುಳಿದು ಇತರ ಕನ್ನಡ ನಾಡಿನವರು ಈ ಕೆಲಸವನ್ನು ಈಗಾಗಲೇ ಕೈಗೊಂಡಿದ್ದಾರೆ... ಆದರೆ 'ಕವಿರಾಜಮಾರ್ಗ' ವೆಂಬ ಕನ್ನಡದ ಮೊದಲನೆಯ ಗ್ರಂಥ (ಈಗ) ದೊರಕಿದೆ (ಕವಿ) ನೃಪತುಂಗನ ನೆಲೆವೀಡೆನಿಸಿದ, ಬಸವ, ಮಡಿವಾಳ ಮಾಚಯ್ಯ ಮುಂತಾದ ವಚನಕಾರರ ಬೀಡೆನಿಸಿದ, ತಾಯ್ನುಡಿಯ ಸೇವೆಯಲ್ಲಿಯೇ ದೇಹವನ್ನು ಸವೆಸಿದ ದಾಸರ ಗೂಡಾದ ಈ ನಮ್ಮ ನಿಜಾಂ ಕರ್ನಾಟಕದಲ್ಲಿ ವರ್ತಮಾನ ಪತ್ರಿಕೆಗಳಾಗಲೀ, ಗ್ರಂಥಗಳಾಗಲೀ, ಪುಸ್ತಕ ಮಾಲೆಯಾಗಲೀ ಇಲ್ಲದೆ ಇರುವುದು ನಮಗೊಂದು ಕುಂದಲ್ಲವೇ ? - ಈ ಕುಂದನ್ನು ಕಳೆಯಲೆಣಿಸಿ ಮಾತೆಯ ಸೇವೆಗೋಸ್ಕರ ನುಡಿವೆಣ್ಣಿನ ಕೊರಳಿಗೊಂದು ಅಲರ ಮಾಲೆಯನ್ನು ಅರ್ಪಿಸಲೆಣಿಸಿ (ರಾಯಚೂರು ಕರ್ನಾಟಕ ಸಂಘದಿಂದ) 'ಕನ್ನಡ ಕುಸುಮ ಮಾಲೆ' ಯನ್ನು ಮೊದಲು ಮಾಡಿದ್ದೇವೆ.''

ಈ ತರುಣರ ಏಕೈಕ ಗುರಿ ಎಂದರೆ ನಿಜಾಂ ಕರ್ನಾಟಕದಲ್ಲಿ ಕನ್ನಡ ಪುನರುತ್ಥಾನಗೊಳಿಸಿ, ಜನತೆಯಲ್ಲಿ ಕನ್ನಡದ ಬಗೆಗೆ ಆಸಕ್ತಿಯನ್ನು ಹುಟ್ಟಿಸುವುದೇ ಆಗಿತ್ತು. ಈ ಒಂದೇ ಒಂದು ಉದ್ದೇಶದಿಂದ ಆ ತರುಣರು ಅಂದಿನ ದಿನಗಳಲ್ಲಿ ಬಾಗಲಕೋಟೆಯಿಂದ ಹೊರಡುತ್ತಿದ್ದ 'ಕನ್ನಡಿಗ' ಪತ್ರಿಕೆಯನ್ನು ಮನೆ - ಮನೆಗೂ ಹೋಗಿ ಮಾರಾಟ ಮಾಡುತ್ತಿದ್ದರು.

ಅದಾಗ ಧಾರವಾಡದಲ್ಲಿ ನಾಡಹಬ್ಬ ಮತ್ತು ಗಣೇಶ ಉತ್ಸವಗಳನ್ನು ರಾಷ್ಟ್ರೀಯ ಹಬ್ಬಗಳೆಂದೇ ಆಚರಿಸುತ್ತಿದ್ದರಷ್ಟೆ. ಅವುಗಳನ್ನು ನಾವೂ ಏಕೆ ಆಚರಿಸಬಾರದು ? ಎಂದು ಅದನ್ನು ನೋಡಿ ಬರಲು ಈ ತರುಣರು ಧಾರವಾಡಕ್ಕೆ ೧೯೩೦ರಲ್ಲಿ ಹೋಗಿ ಬಂದರು.

ಕರ್ನಾಟಕ ಸಂಘ ಈಗ ಅಟ್ಟದ ಮನೆಯಿಂದ ನಗರೇಶ್ವರ ದೇವಾಲಯಕ್ಕೆ ಬಂದಿತು. ಒಂಭತ್ತು ದಿನಗಳ ಅದ್ದೂರಿಯ ನಾಡಹಬ್ಬವನ್ನು ಆಚರಿಸಲು ಪ್ರಾರಂಭಿಸಿತು. ಪ್ರತಿದಿನ ಬೆಳಿಗ್ಗೆ ನಾಡದೇವತೆಯ ಚಿತ್ರವನ್ನು ತೆಗೆದುಕೊಂಡು ನಾಡು - ನುಡಿಗಳಿಗೆ ಸಂಬಂಧಿಸಿದ ಉಜ್ವಲ ಗೀತೆಗಳನ್ನು ತಾವೂ ಹಾಡುತ್ತ, ಮಕ್ಕಳಿಂದ ಹಾಡಿಸುತ್ತ ವಿವಿಧ ಬಡಾಣೆಗಳಲ್ಲಿಯ ಪ್ರಮುಖರ ಮನೆಗಳಿಗೆ 'ಪ್ರಭಾತ ಪೇರಿ' ಯನ್ನು ಕರೆದೊಯ್ಯುತ್ತಿದ್ದರು.

ರಾಯಚೂರಿನ ನಾಡಹಬ್ಬವೆಂದರೆ ಊರಿಗೇ ಹಬ್ಬ, ಊರಿನ ಜನರಿಗೆ ಆಕರ್ಷಣೀಯ ಕಾರ್ಯಕ್ರಮಗಳು. ಇದರಿಂದ ಮಕ್ಕಳಿಗೆ ಊರಿನ ವಿವಿಧ

ಪ್ರದೇಶಗಳ ಹಾಗೂ ಪ್ರಮುಖರ ಪರಿಚಯ , ಮನಸ್ಸಿಗೆ ಮುದ, ನಾಡು - ನುಡಿಗಳ ಗೀತ ಪಠಣ. ಆ ಮೂಲಕ ಮಕ್ಕಳಾದಿಯಾಗಿ ಎಲ್ಲರಲ್ಲಿ ತಾಯ್ನಾಡಿನ, ತಾಯ್ನುಡಿಯ ಪ್ರೇಮಾಭಿವೃದ್ಧಿ. ಕೆಲವು ವರುಷಗಳ ಆನಂತರ ಮಕ್ಕಳಿಗಾಗಿಯೇ 'ಬಾಲಕರ ಬಿಡಾರ' ಸ್ಥಾಪನೆಯಾಯಿತು. ಅದರ ಅಡಿಯಲ್ಲಿ ಮಕ್ಕಳ ಸಮ್ಮೇಳನಗಳನ್ನೂ ಜರುಗಿಸಿದರು. ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನವನ್ನು ಸಂಘಟಿಸಿದರು. ಅದರ ಅಧ್ಯಕ್ಷತೆಯನ್ನು ರಾಯಚೂರಿನ ಕೊಳ್ಳಿ ಭೀಮನೆಂಬ ಬಾಲಕ ವಹಿಸಿದ್ದು ಕರ್ನಾಟಕ ಸಂಘದ ಕಾರ್ಯದಕ್ಷತೆಯನ್ನು ತೋರಿಸತ್ತದೆ.

ಆ ದಿನಗಳಲ್ಲಿ ಅಂದಿನ ನಿಜಾಮ ಸರಕಾರದ ವತಿಯಿಂದ ಕರ್ನಾಟಕ ಸಂಘಕ್ಕೆ ಒಂದು ಸ್ವಂತ ಕಟ್ಟಡಕ್ಕಾಗಿ ನಿವೇಶನವನ್ನೂ ಪಡೆಯಲು ಸಾಧ್ಯವಾಯಿತು. ೧೯೪೭ರಲ್ಲಿ ಅಂದಿನ ಹೈದರಾಬಾದ್ ಸಂಸ್ಥಾನದ ಮುಖ್ಯ ಮಂತ್ರಿಗಳಾಗಿದ್ದ ಸರ್. ಮಿರ್ಜಾ ಎಂ. ಇಸ್ಮಾಯಿಲ್ ಅವರಿಂದ ಕಟ್ಟಡದ ಶಂಕು ಸ್ಥಾಪನೆಯನ್ನೂ ಮಾಡಿಸಲಾಯಿತು.

ಹಿರಿಯರಾದ ಡಾ. ಭಗೀರಥರಾವ ದೇಶಪಾಂಡೆ, ರಂಗರಾವ ದೇಸಾಯಿ, ಕಾಡ್ಲೂರು, ಜಿ. ಮಧ್ವರಾವ ವಕೀಲರ ನಿಸ್ಪೃಹ ಸೇವೆ ಹಾಗೂ ಆರ್ಥಿಕ ನೆರವಿನಿಂದ ಕರ್ನಾಟಕ ಸಂಘದ ಭವ್ಯ ಕಟ್ಟಡವೂ ತಲೆ ಎತ್ತಿತು. ೧೯೫೭ರಲ್ಲಿ ಕೇಂದ್ರ ಸರ್ಕಾರದ ಗೃಹ ಶಾಖೆಯ ಅಂದಿನ ಉಪ ಮಂತ್ರಿಗಳಾಗಿದ್ದ ಬಲವಂತರಾವ ದಾತಾರ ಅವರಿಂದ ಹೊಸ ಕಟ್ಟಡದ ಪ್ರಾರಂಭೋತ್ಸವ ಸಮಾರಂಭ ನೆರವೇರಿತು. ಇಂದು ನಾಡಿನಲ್ಲಿ ಕನ್ನಡದ ಸಂಘಗಳಿಗೆ ಸ್ವಂತ ಭವ್ಯ ಕಟ್ಟಡಗಳು ಕೈಬೆರಳ ಮೇಲೆ ಎಣಿಸುವಷ್ಟು , ಅವುಗಳಲ್ಲಿ ರಾಯಚೂರಿನ ಕರ್ನಾಟಕ ಸಂಘವೂ ಒಂದು.

ರಾಯಚೂರಿನ ಕರ್ನಾಟಕ ಸಂಘವು ಸಾಂಸ್ಕೃತಿಕ ಕಾರ್ಯಕ್ರಮಗಳು, ವಾಚನಾಲಯ, ಗ್ರಂಥಾಲಯಗಳೊಂದಿಗೆ ಮೊದಲಿನ ಹಲವಾರು ವರುಷ ಅನೇಕ ಗ್ರಂಥಗಳನ್ನೂ ಪ್ರಕಟಿಸಿತು. ಈ ದಿನಗಳಲ್ಲಿ ರಾ.ಗು. ಜೋಷಿ ಅವರು ಕರ್ನಾಟಕ ಸಂಘದ ಕರ್ಣಧಾರರಾಗಿದ್ದರು. ಅವರದು ಅಪರೂಪದ ವ್ಯಕ್ತಿತ್ವ. ಮಹಾತ್ಮಾ ಗಾಂಧೀಜಿ ಅವರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು. ಬ್ರಿಟಿಷರ ವಿರುದ್ಧ ಹೋರಾಟದ ಜೊತೆಗೆ ನಿಜಾಂನ ವಿರುದ್ಧವೂ ಸೆಡ್ಡು ಹೊಡೆದು ನಿಂತವರು. ಕನ್ನಡ ನುಡಿಯ ಬಗೆಗಿನ ಅವರ ಕಳಕಳಿ ಕರ್ನಾಟಕ ಸಂಘ ಹುಟ್ಟುವ ಮೊದಲೂ ಇತ್ತು. ಅವರು ಉಚಿತ ವಾಚನಾಲಯವನ್ನು ಸ್ಥಾಪಿಸಿದ್ದರು. ಸ್ವಾತಂತ್ರ್ಯ ಚಳವಳಿ, ಕನ್ನಡ ಚಳವಳಿ, ಜೊತೆಗೆ ಅಪರೂಪದ ಪತ್ರಕರ್ತರಾಗಿದ್ದರು. ವರದಿಗಾರರಾಗಿದ್ದರಲ್ಲದೆ ಸ್ವತಃ 'ಜ್ಞಾನವಾಹಿನಿ' , 'ವಾರ್ತೆ ವಾಹಿನಿ' ಅಲ್ಲದೆ 'ಕಾಂತಿ' ಎಂಬ ಪಾಕ್ಷಿಕ 'ವಿಜಯ' ಎಂಬ ತ್ರೈಮಾಸಿಕ ಪತ್ರಿಕೆಗಳನ್ನುಸಂಪಾದಿಸಿ ಪ್ರಕಟಿಸುತ್ತಿದ್ದರು. ಲೇಖಕರೂ ಆಗಿದ್ದರು.

ರಾ. ಗು. ಜೋಷಿ ಅವರು ಬರೆದ 'ಹಾಳು ಕಾಗದ', 'ಮೆಚ್ಚುಗೆಯ ಮದ್ದು' ಕಥಾಸಂಕಲನಗಳು, 'ನಾಡಹಬ್ಬ', ಕಿರುನಾಟಕ, 'ನಗರ ಸಂಕೀರ್ತನೆಯ ಕವನಗಳು'

ಕರ್ನಾಟಕ ಸಂಘದಿಂದಲೇ ಪ್ರಕಟವಾಗಿವೆ. ಪ್ರೊ.ತ. ಶ್ರೀಕಂಠಯ್ಯನವರ 'ಹರಿಹರನು ಚಿತ್ರಿಸಿದ ಕೆಲವು ಶರಣರು' ಹಾಗೂ 'ಶಬರಶಂಕರ ವಿಳಾಸ ಸಂಗ್ರಹ' ಹೊತ್ತಿಗೆಗಳೂ ಸಂಘದಿಂದ ಪ್ರಕಟವಾದವು. ರಾಜ್ಯೋದಯ ಪೂರ್ವದ ದಿನಗಳಲ್ಲಿ ದೂರದಲ್ಲಿದ್ದ ರಂ.ಶ್ರೀ ಮುಗಳಿ ಅವರ 'ರನ್ನನ ಕೃತಿರತ್ನ' ವನ್ನು ಪ್ರಕಟಿಸಿ ಸಂಘವು ಅಂದಿನ ಕನ್ನಡ ಬಲ್ಲ ಎಲ್ಲೆಡೆ ಗುರುತಿಸಿಕೊಂಡಿತ್ತು. ರಾಜ್ಯೋದಯದ ನಂತರವೂ ಅನೇಕ ಪುಸ್ತಕಗಳನ್ನು ಪ್ರಕಟಿಸಿದೆ. 'ಪುರಂದರ ಸ್ಮರಣೆ' 'ಬಸವ ಸ್ಮರಣೆ' ಸಾಹಿತ್ಯವಾದರೆ 'ರಾಯಚೂರು ಜಿಲ್ಲೆಯ ಸ್ವಾತಂತ್ರ್ಯಾಂದೋಲನ' ಪ್ರೊ. ಎಂ. ಧ್ರುವನಾರಾಯಣರ ಸಂಪಾದಕತ್ವದಲ್ಲಿ ಬೆಳಕು ಕಂಡ ಮಹತ್ವದ ಕೃತಿ ಎನಿಸಿದೆ.

೧೯೫೨ರಲ್ಲಿಯೇ ಶ್ರೀನಿವಾಸಾಚಾರ್ಯ ಹುಣಸಗಿ ಮತ್ತು ಸುಂದರಾಬಾಯಿ ಯವರ ಸಂಪಾದಕತ್ವದಲ್ಲಿ ಸಂಘವು 'ವಿಜಯ' ಎಂಬ ಮಾಸ ಪತ್ರಿಕೆಯನ್ನೂ ಕೆಲವು ವರುಷಗಳವರೆಗೆ ಪ್ರಕಟಿಸಿತು. ಇವೆಲ್ಲವುಗಳಿಗೆ ಕಳಸ ಎಂಬಂತೆ ಸಂಘ ಹುಟ್ಟಿದ ಕೇವಲ ಆರು ವರುಷಗಳಲ್ಲಿ ೧೯೩೪ರಲ್ಲಿ ೨೪ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ವಿಜೃಂಭಣೆಯಿಂದ ಜರುಗಿಸಿತು. ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡದ ಪಂಜೇ ಮಂಗೇಶರಾಯರು ವಹಿಸಿದ್ದರು. ೧೯೪೫ರಲ್ಲಿ ಡಿ.ಕೆ. ಭೀಮಸೇನ ರಾಯರ ಅಧ್ಯಕ್ಷತೆಯಲ್ಲಿ ಹೈದರಾಬಾದ್ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸಿ ಯಶಸ್ವಿಯಾಯಿತು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇದ್ದಂತೆ ಹೈದರಾಬಾದಿನಲ್ಲೂ ಒಂದು 'ನಿಜಾಂ ಸಾಹಿತ್ಯ ಪರಿಷತ್ತು' ಇತ್ತು. ಅದು ತನ್ನದೇ ಆದ ಸಮ್ಮೇಳನವನ್ನೂ ಇತರ ಚಟುವಟಿಕೆಗಳನ್ನೂ ಕೈಗೊಳ್ಳುತ್ತಿತ್ತು. ೧೯೫೫ರಲ್ಲಿ ಮತ್ತೆ ತನ್ನ ಭವ್ಯವಾದ ಹೊಸ ಕಟ್ಟಡದಲ್ಲಿ ೩೮ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಖ್ಯಾತ ನಾಟಕಕಾರ ಕನ್ನಡ ಚಳುವಳಿಯ ಮುಂದಾಳುಗಳಾಗಿದ್ದ ಶ್ರೀರಂಗರು ವಹಿಸಿದ್ದರು. ರಾಜ್ಯೋದಯದ ನಂತರವೂ ರಾಯಚೂರಿನ ಕರ್ನಾಟಕ ಸಂಘವು ಮೂರು ದಶಕಗಳ ಕಾಲ ನಾಡಿನಲ್ಲೆಲ್ಲ ಗುರುತಿಸುವಂಥ ಚಟುವಟಿಕೆಗಳಲ್ಲಿ ತೊಡಗಿಕೊಂಡಿತ್ತು.

ಈ ಸಂಘ ಪ್ರಾರಂಭದಿಂದಲೇ ಹೃದಯ ಶ್ರೀಮಂತಿಕೆಯ ಅನೇಕ ಕೊಡುಗೈ ದೊರೆಗಳ ಸಹಾಯದಿಂದ 'ಸ್ಮಾರಕೋಪನ್ಯಾಸ ಮಾಲೆ' ಗಳನ್ನು ನಡೆಸಿಕೊಂಡು ಬಂದಿದೆ. ಸಾಹಿತ್ಯ ವಿಷಯದಲ್ಲಿ ೧೯೪೧ರಿಂದಲೇ ಜಿ. ಕೃಷ್ಣರಾಯರ ಸ್ಮಾರಕೋಪನ್ಯಾಸ ಮಾಲೆಯನ್ನು ಪ್ರಾರಂಭಿಸಿದರೆ, ೧೯೪೫ರಿಂದ ಶೈಕ್ಷಣಿಕ ವಿಷಯದಲ್ಲಿ ಗೋವಿಂದರಾಯರ ಸ್ಮಾರಕೋಪನ್ಯಾಸ ಮಾಲೆ, ೧೯೫೨ರಿಂದ ರಾಜಕೀಯ ವಿಷಯದಲ್ಲಿ ಪಿ. ಕೃಷ್ಣರಾಯರ ಉಪನ್ಯಾಸ ಮಾಲೆಯು ಸಾರ್ವಜನಿಕರನ್ನು ಬಹುವಾಗಿ ಆಕರ್ಷಿಸಿತ್ತು. ರಾಜ್ಯೋದಯದ ನಂತರ ೧೯೬೬ರಿಂದ ಮಹಿಳೆಯರ ಸಾಧನೆ ಮತ್ತು ಸಮಸ್ಯೆಗಳ ಕುರಿತು ರತ್ನಮ್ಮ ಸ್ಮಾರಕೋಪನ್ಯಾಸ ಮಾಲೆಯನ್ನು ಶ್ರೀನಿವಾಸ ಶೆಟ್ಟರು ಪ್ರಾರಂಭಿಸಿದ್ದರು.

ನಾಡಿನ ಹೆಮ್ಮೆಯ ಸಂಸ್ಥೆ ರಾಯಚೂರ ಕರ್ನಾಟಕದ ಸಂಘದ ಅಧ್ಯಕ್ಷನಾಗುವ ಸೌಭಾಗ್ಯ ಒಂದು ಬಾರಿ ಈ ಲೇಖಕನಿಗೂ ದೊರಕಿತ್ತು. (೧೯೭೮-೧೯೮೦) ಅದ್ದೂರಿಯ ನವರಾತ್ರಿ - ನಾಡಹಬ್ಬ ಮತ್ತು ಸ್ಮಾರಕ ಉಪನ್ಯಾಸ ಮಾಲೆಗಳಿಗೆ ನಾಡಿನ ಹೆಸರಾಂತ ಸಾಹಿತಿಗಳನ್ನು ಆಮಂತ್ರಿಸಿ - ಒಡನಾಡುವ ಅವಕಾಶ ದೊರೆತಿತ್ತು. ಖ್ಯಾತ ಕಾದಂಬರಿಗಾರ್ತಿ ಎಂ.ಕೆ. ಇಂದಿರಾ, ಶ್ರೀ ಕೃಷ್ಣ ಆಲನಹಳ್ಳಿ, ಕೀರ್ತಿನಾಥ ಕುರ್ತಕೋಟಿ, ಚೆನ್ನವೀರ ಕಣವಿ, ದೇವೇಂದ್ರ ಕುಮಾರ ಹಕಾರಿ, ಪ್ರೊ. ಚಂದ್ರಶೇಖರ ಪಾಟೀಲ ಮೊದಲಾದವರೆಲ್ಲ ಈ ಅವಧಿಯಲ್ಲಿ ಕರ್ನಾಟಕ ಸಂಘಕ್ಕೆ ಬಂದು ಉಪನ್ಯಾಸ ನೀಡಿದ್ದರು.

ರಾಯಚೂರು ಜಿಲ್ಲೆಯ ಉಳಿದೆಡೆ ಹೇಳಿಕೊಳ್ಳುವಂತೆ ಕೆಲಸ ಮಾಡಿದ ಸಂಘಗಳಲ್ಲಿ ಕೊಪ್ಪಳದ (ಈಗ ಪ್ರತ್ಯೇಕ ಜಿಲ್ಲೆ) ವೀರಶೈವ, ಕರ್ನಾಟಕ ಸಂಘ, ಆಡೂರಿನ ಹರಿಜನ ಸೇವಾ ಸಂಘ, ..ಚಿಕೇನಕೊಪ್ಪದ ವೀರಶೈವ ತರುಣ ಸಂಘ ಮೊದಲಾದವುಗಳನ್ನು ಹೆಸರಿಸಬೇಕು.

ಸಂಘ ಸಂಸ್ಥೆಗಳ ವ್ಯತಿರಿಕ್ತವಾಗಿ ಕನ್ನಡದ ಸೇವೆಯನ್ನು ಶಿಕ್ಷಣ ಸಂಸ್ಥೆಗಳ ಮುಖಾಂತರವೂ ಮಾಡಿದವರಿದ್ದಾರೆ. ರಾಷ್ಟ್ರೀಯ ಮನೋವೃತ್ತಿಯುಳ್ಳ ಅನೇಕರು ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ನಡೆಯಬೇಕು. ಅದನ್ನು ಪ್ರೌಢಶಾಲೆಯವರೆಗೂ ವಿಸ್ತರಿಸಬೇಕು ಎಂಬ ಪ್ರಯತ್ನ ೧೯೨೦ಕ್ಕಿಂತ ಮೊದಲೇ ಹೈದರಾಬಾದ್ ಕರ್ನಾಟಕದಲ್ಲಿ ನಡೆಯಿತು. ಈ ಉದ್ದೇಶದಿಂದಲೇ ಪ್ರೇರಿತವಾಗಿ ಅನೇಕ ಕಡೆಗಳಲ್ಲಿ ವಿವಿಧ ಹಂತದಲ್ಲಿ ಶಾಲೆಗಳನ್ನು ಸ್ಥಾಪಿಸಿ, ಕನ್ನಡದಲ್ಲಿಯೇ ಅಭ್ಯಾಸ ನಡೆಯುವಂತೆ ನೋಡಿಕೊಂಡವರಿದ್ದಾರೆ.

ಅಂಥ ಶಾಲೆಗಳ ಪೈಕಿ ರಾಯಚೂರಿನ ಹಮದರ್ದ ಶಾಲೆ (೧೯೨೦) ಶಾರದಾ ಕನ್ಯಾಶಾಲೆ, ಕವಿತಾಳಗಳಲ್ಲಿಯ ಕ್ರಿಶ್ಚಿಯನ್ ಶಾಲೆಗಳು, ಕುಕನೂರಿನ ವಿದ್ಯಾನಂದ ಗುರುಕುಲ ಕೆಲವನ್ನು ಹೆಸರಿಸಬಹುದು.

✤ ✤ ✤ ✤

ಅಧ್ಯಾಯ -೨೨

• ನಿಜಾಮನ ರಾಜ್ಯದಲ್ಲಿ ಕನ್ನಡ ಜಾಗೃತಿ

''ಕರ್ನಾಟಕದ ಗಡಿಭಾಗಗಳು, ಬಹುಮಟ್ಟಿಗೆ ಕನ್ನಡಿಗರಿಗೆ ಉಳಿಯುವಲ್ಲಿ ಬಹುಜನರ ಮೌನಸೇವೆ ಮತ್ತು ಪರಿಶ್ರಮಗಳು ಸಂದಿವೆ. ಆದರೆ ಇಂಥವರನ್ನು ಮರೆತು ಅನೇಕ ಮಹತ್ತರ ಸಂದರ್ಭಗಳಲ್ಲಿ ಕ್ಷಣಿಕ ಅಥವಾ ಕ್ಷುಲ್ಲಕ ಕಾರಣಗಳಿಗಾಗಿ ಇಂಥ ಸೇವೆ, ಪರಿಶ್ರಮಗಳ ಪರಿಚಯವೇ ಇಲ್ಲದಂಥ ರಾಜಕೀಯ ಮುಖಂಡರ ಅಥವಾ ಸ್ವಪ್ರಚಾರ ಪ್ರಿಯ ವಾಚಾಳಿಗಳ ತಲೆಗೆ ಕಿರೀಟ ಇಡುವ ಪ್ರಯತ್ನಗಳೇ ನಡೆಯುತ್ತಿವೆ. ೧೯೪೨ರಲ್ಲಿ ಇನ್ನೂ ಹುಟ್ಟಿರದಿದ್ದ ಒಬ್ಬ ಇಂದಿನ ಮುಖಂಡ ತನ್ನಂಥ ಇನ್ನೊಬ್ಬನಿಗೆ ಸ್ವಾತಂತ್ರ್ಯ ಯೋಧ ಎಂಬ ಪ್ರಶಸ್ತಿ ಪತ್ರವನ್ನು ಕೊಡುವಂತಹ ರೀತಿ ಇದು. ಇದು ಇತಿಹಾಸಕ್ಕೆ ಅಪಚಾರ'' ಎನ್ನುತ್ತಾರೆ ದಿವಂಗತ ಜಯತೀರ್ಥ ರಾಜಪುರೋಹಿತರು ತಮ್ಮ ಒಂದು ಲೇಖನದಲ್ಲಿ.

ಹೈದರಾಬಾದ್ ಕರ್ನಾಟಕದ ರಾಯಚೂರು, ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳು ಕರ್ನಾಟಕದಲ್ಲಿಯೇ ಉಳಿಯಬೇಕಾದರೆ ಹಲವಾರು ಜನರ ಮೌನಸೇವೆ ಮತ್ತು ಪರಿಶ್ರಮಗಳೇ ಕಾರಣ. ಅವರು ಎಂದೂ ಪರದೆ ಮುಂದೆ ಬರದೆ, ಹಿಂದೆಯೇ ನಿರಂತರ ಶ್ರಮ ಪಟ್ಟರು. ಅವರುಗಳಲ್ಲಿ ಕಪಟರಾಳ ಕೃಷ್ಣರಾಯರು, ತವಗ ಭೀಮಸೇನರಾಯರು ಮುಖ್ಯರು. ೧೯೨೮ರಲ್ಲಿ ರಾಯಚೂರಿನಲ್ಲಿ ಕರ್ನಾಟಕ ತರುಣ ಸಂಘ ಹುಟ್ಟಿದರೆ ಅದೇ ವರುಷ ಕಲಬುರ್ಗಿಯಲ್ಲಿ ಕನ್ನಡದ ಗಾಳಿ ಬೀಸಿತು. ಆ ವರುಷ ಕಲಬುರ್ಗಿಯಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ನಡೆಯಿತು. ಕನ್ನಡದ ಕಣ್ವರೆಂದೇ ಹೆಸರಾದ ಬಿ.ಎಂ. ಶ್ರೀಕಂಠಯ್ಯನವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕಲಬುರ್ಗಿಯ ಶರಣರೆಂದೇ ಹೆಸರಾದ ಪೂಜ್ಯ ದೊಡ್ಡಪ್ಪ ಅಪ್ಪ ಅವರು ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದರು. ಕಪಟರಾಳ ಕೃಷ್ಣರಾಯರು ಕಾರ್ಯದರ್ಶಿಗಳಾಗಿದ್ದರು. ಈ ಉಭಯತರು ಆಗಲೇ ದಶಕಗಳಿಂದ ಕಲಬುರ್ಗಿಯಲ್ಲಿ ಕನ್ನಡದ ಬೀಜ ಬಿತ್ತಿದ್ದರು. ಪೂಜ್ಯ ಅಪ್ಪಾ ಅವರ ಕನ್ಯಾ ಶಾಲೆ, ಅವರ ದಾಸೋಹ, ಕನ್ನಡ ಬೆಳೆಸುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಕಪಟರಾಳರು ಕನ್ನಡದ ನೆಲೆಯನ್ನು ಕಂಡು ಹಿಡಿದವರು. ಕಲಬುರ್ಗಿ ಕನ್ನಡ ಶರಣರ ನಾಡು, ರಾಷ್ಟ್ರಕೂಟ - ಚಾಲುಕ್ಯರ ಬೀಡು ಎಂದು ಸಾಧಾರ ಪೂರ್ವಕವಾಗಿ ತೋರಿಸಿ ಅಂಥ ತಿರುಳ್ಗನ್ನಡ ನಾಡು, ಹೀನ ಸ್ಥಿತಿಯನ್ನು ಮುಟ್ಟಿದ ಪರಿಯನ್ನು ಪದರು - ಪದರಾಗಿ ಬಿಡಿಸಿ ತೋರಿಸಿದ್ದರು.

ಇಲ್ಲಿಯ ಕನ್ನಡದ ಸ್ಥಿತಿಯನ್ನು ಉತ್ತಮಗೊಳಿಸಬೇಕು, ಕನ್ನಡ ಭಾಷೆ ಸಾಹಿತ್ಯಗಳನ್ನು ಅಭಿವೃದ್ಧಿ ಪಡಿಸಬೇಕು ಎಂಬ ದೃಷ್ಟಿಯಿಂದ ಒಂದು ಸಂಸ್ಥೆಯನ್ನು ಕಟ್ಟಲು ಕಲಬುರ್ಗಿಯ ಹಿರಿಯರು ಕಾರ್ಯ ಪ್ರವೃತ್ತರಾದದ್ದು ೧೯೪೦ರಲ್ಲಿ. ಅಲ್ಲಿಯ 'ಜಗತ್' ಓಣಿಯಲ್ಲಿ ಎರಡು ಕೋಣೆಗಳನ್ನು ಬಾಡಿಗೆಗೆ ಪಡೆದು ಒಂದು ಸಾರ್ವಜನಿಕ ವಾಚನಾಲಯವನ್ನು ಪ್ರಾರಂಭಿಸಿದರು. ಅಲ್ಲಿ ಕನ್ನಡಿಗರೊಂದಿಗೆ ಉಳಿದ ಭಾಷೆಯ ದಿನಪತ್ರಿಕೆಗಳನ್ನು ತರಿಸಿದರು. ಹಿರಿಯರು, ವಿದ್ಯಾರ್ಥಿಗಳು ಅದರ ಲಾಭವನ್ನು ಪಡೆಯ ಹತ್ತಿದರು. ಅವರುಗಳಲ್ಲಿಯ ಕನ್ನಡ ಜನರನ್ನು ಗುರುತಿಸಲು ಸಾಧ್ಯವಾಯಿತು. ಇದಕ್ಕೆಲ್ಲ ಒತ್ತಾಸೆಯಾಗಿ ನಿಂತವರು ಪ್ರೊ. ತವಗ ಭೀಮಸೇನರಾಯರು. ಕನ್ನಡದ ಕಣ್ವ ಬಿಎಂಶ್ರೀ ಆದರೆ, ಅನಂತರದ ದಿನಗಳಲ್ಲಿ ಕಲಬುರ್ಗಿಯ ಋಷಿಗಳೆಂದೇ ಗುರುತಿಸಿದ್ದು ಪ್ರೊ ತವಗರನ್ನು.

ಪ್ರೊ. ತವಗ ಭೀಮಸೇನರಾಯರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳ ಅಭ್ಯಾಸ ಕೂಟವೂ ಪ್ರಾರಂಭವಾಯಿತು. ಅದುವೆ ಮುಂದೆ ಕನ್ನಡ ಸಾಹಿತ್ಯದ ಸೊಬಗು ಎಲ್ಲರಿಗೂ ತಿಳಿಯಲಿ ಎಂಬ ಉದ್ದೇಶದಿಂದ ಒಂದು ಕನ್ನಡ ಸಾಹಿತ್ಯ ಸಂಘವನ್ನು ಏಕೆ ಕಟ್ಟಬಾರದು ? ಎಂದರು ಈ ಹಿರಿಯರು. ಇಷ್ಟೆಲ್ಲಾ ಸಾಧನೆ ಒಂದೇ ವರುಷದಲ್ಲಿ ! ೧೯೪೧ರಲ್ಲಿ 'ಕನ್ನಡ ಸಾಹಿತ್ಯ ಸಂಘ'ವನ್ನು ಕಟ್ಟಿ ರಜಿಸ್ಟರ್ ಮಾಡಿಸಿದರು. ಸಂಸ್ಥೆಯನ್ನು ಕಟ್ಟಿದರು. ಆದರೆ ಅದಕ್ಕೊಂದು ಕಟ್ಟಡ ಬೇಕಲ್ಲ . ವಾಚನಾಲಯದ ಚಿಕ್ಕ ಎರಡು ಕೋಣೆಗಳು ಏತಕ್ಕೂ ಸಾಲದಾದವು. ಆದರೆ ಅಲ್ಲಿ ಬಂದ ಹಿರಿಯ ಕನ್ನಡಿಗರೆಲ್ಲ ಇಲ್ಲಿಯ ಚಟುವಟಿಕೆಗಳನ್ನು ಕಂಡು ಸಂತೋಷ ಪಡುತ್ತಿದ್ದರು.

ಬಂದು , ನೋಡಿದವರಲ್ಲಿ. ಶ್ರೀಮಂತರು, ದಾನಿಗಳೂ ಆದ ಬನ್ನಿಕೊಪ್ಪದ ಭೂಮರೆಡ್ಡಿ ಬಸಪ್ಪನವರು. ಇವರ ಪರಿಪಾಟಲನ್ನು ನೋಡಿ ಅಂದಿನ ದಿನಗಳಲ್ಲಿ ಒಂದು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದರು. ಅದುವೆ ಸ್ವಂತ ಕಟ್ಟಡದ ಬಗ್ಗೆ ವಿಚಾರಿಸಲು ದಾರಿಯಾಯಿತು. ಪೂಜ್ಯ ದೊಡ್ಡಪ್ಪ ಅಪ್ಪ ಅವರು ೫೦೦ ರೂಪಾಯಿಗಳನ್ನು ನೀಡಿದರು. ಆಶೀರ್ವದಿಸಿ ಮುಂದೆ ಸಾಗಲು ಹುರಿದುಂಬಿಸಿ ದರು. ಕಟ್ಟಡಕ್ಕಾಗಿ ನಿವೇಶನ ಹುಡುಕಲು ಪ್ರಾರಂಭಿಸಿದರು. ಜಿಲ್ಲಾಧಿಕಾರಿಗಳ ಕಛೇರಿಗೆ ಹತ್ತಿರವಿರುವ ಅಜೀಜಖಾನರ ಮನೆಯನ್ನು ಮಾರಲಿದ್ದಾರೆ ಎಂಬ ವಿಷಯ ತಿಳಿದು ಅವರಲ್ಲಿಗೆ ಹೋದರು. ಅಂದಿನ ದಿನಗಳಲ್ಲಿ ಹನ್ನೊಂದು ಸಾವಿರ ರುಪಾಯಿಯೆಂದು ನಿಗದಿಯಾಯಿತು. ಆದರೆ ಸಂಘದವರ ಹತ್ತಿರ ಸಂಗ್ರಹವಾದದ್ದು ಆರು ಸಾವಿರ ರುಪಾಯಿಗಳು ಮಾತ್ರ. ಇನ್ನು ಆರು ಸಾವಿರ ರುಪಾಯಿಗಳು ಬೇಕು ! ಯಾರು ಕೊಡಬೇಕು ? ಆ ದಿನಗಳಲ್ಲಿ ಅಷ್ಟೊಂದು ಹಣವನ್ನು ತಕ್ಷಣ ಕೊಡುವುದೂ ಅಸಾಧ್ಯವಾಗಿತ್ತು. ಆದರೆ ಛಲ ಬಿಡಲಿಲ್ಲ.

ಕಪಟರಾಳ ಕೃಷ್ಣರಾಯರು, ತವಗ ಭೀಮಸೇನರಾಯರು , ಅಶ್ವತ್ಥ ರಾವ್ ವಕಿಲರು, ಎಸ್. ಹನುಮಂತರಾಯರು, ಮಲ್ಲಾಪುರ ಶ್ರೀನಿವಾಸರಾಯರು ಅವರಾದಿ ದತ್ತಾತ್ರೇಯ ರಾಯರು ಮತ್ತು ಹಲವರು ಜತೆ ಸೇರಿ, ಹನುಮಂತರಾವ ಕಕ್ಕೇರಿ ವಕೀಲರ ಹತ್ತಿರ ಹೋಗಿ ವಿಷಯ ತಿಳಿಸಿದರು. ಅವರಿಂದ ಆರು ಸಾವಿರ ರುಪಾಯಿಗಳನ್ನು ಕೈಗಡ ಪಡೆದುಕೊಂಡು ಕಟ್ಟಡವನ್ನು ಖರೀದಿಸಿದರು. ಅದುವೆ ಇಂದಿನ 'ಕಲಬುರ್ಗಿ ಕನ್ನಡ ಸಾಹಿತ್ಯ ಸಂಘ!' ಆನಂತರದ ದಿನಗಳಲ್ಲಿ ಕರಪತ್ರಗಳನ್ನು ಹಂಚಿ, ಕನ್ನಡಿಗರಿಂದ ಹಣ ಶೇಖರಿಸಿ ಕೈಗಡ ಹಣವನ್ನೂ ಮುಟ್ಟಿಸಿದರು. ಉತ್ಸಾಹಿ ಕನ್ನಡ ಅಭಿಮಾನಿಗಳಲ್ಲಿ ಕೆಲವರು ಒಂದು ತಿಂಗಳ ವೇತನವನ್ನು ಕೊಟ್ಟರು. ಆ ದಿನಗಳಲ್ಲಿಅಂದರೆ ೧೯೪೧ರಲ್ಲಿ ಹರಿದು ಹಂಚಿ ಹೋದ ಕನ್ನಡ ನಾಡಿನಲ್ಲಿ ಕನ್ನಡಕ್ಕಾಗಿ ದುಡಿಯುವ ಸಂಘಗಳಲ್ಲಿ ಕೇವಲ ಮೂರಕ್ಕೆ ಮಾತ್ರ ಸ್ವಂತದ ಕಟ್ಟಡಗಳಿದ್ದವು. ಅತಿ ಹಳೆಯದು ಎಂದರೆ ಧಾರಾಡದ ಕರ್ನಾಟಕ ವಿಧ್ಯಾವರ್ಧಕ ಸಂಘ, ಆನಂತರ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಮೂರನೆಯದು ಶಿವಮೊಗ್ಗದ ಕರ್ನಾಟಕ ಸಂಘ ಮಾತ್ರ. ನಾಲ್ಕನೆಯದು ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘ. ರಾಯಚೂರಿನ ಕರ್ನಾಟಕ ಸಂಘ ಹಳೆಯದಾದರೂ ಅದಕ್ಕೆ ಸ್ವಂತ ನಿವೇಶನ ಸಿಕ್ಕಿದ್ದು ೧೯೪೭೦ರಲ್ಲಿ, ಕಟ್ಟಡ ಆದದ್ದು ೧೯೫೭೦ರಲ್ಲಿ. ಕನ್ನಡದ ಜಾಗೃತಿಗಾಗಿ ಕನ್ನಡ ಸಾಹಿತ್ಯ ಸಂಘವು ಪ್ರತಿವರುಷವೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು. ಅವುಗಳಲ್ಲಿ ನಾಡಹಬ್ಬದ ಕಾರ್ಯಕ್ರಮ ವಿಶಿಷ್ಟವಾಗಿರುತ್ತಿತ್ತು. ನಾಡಹಬ್ಬದ ಸಂದರ್ಭದಲ್ಲಿ ಕನ್ನಡ ನಾಡಿನ ಬೇರೆ -ಬೇರೆ ಭಾಗಗಳಿಂದ ಗಣ್ಯ ಮಾನ್ಯ ಸಾಹಿತಿಗಳನ್ನು ಆಮಂತ್ರಿಸುತ್ತಿದ್ದರು. ಉತ್ಸವದ ದಿನಗಳಲ್ಲಿ ಅವರ ಉಪನ್ಯಾಸಗಳು ಸಹಸ್ರಾರು ಜನರನ್ನು ಆಕರ್ಷಿಸುತ್ತಿದ್ದವು. ಅವರನ್ನು ಕಣ್ಣಾರೆ ಕಾಣಬೇಕೆಂಬ ಹಂಬಲದಿಂದ ಸುತ್ತ ಮುತ್ತಲಿನ ಊರವರೂ ಬರುತ್ತಿದ್ದರು. ಬಿ.ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಐಯ್ಯಂಗಾರ, ತಿರುಮಲೆ ತಾತಾಚಾರ್ಯ ಶರ್ಮ, ಜಿ.ಪಿ. ರಾಜರತ್ನಂ, ಪ್ರೊ. ವಿನಾಯಕ , ಕೆ. ಗೋಕಾಕ, ಡಾ. ರಂ.ಶ್ರೀ ಮುಗಳಿ, ವಿ. ಸೀತಾರಾಮಯ್ಯ, ತಿ.ನಂ. ಶ್ರೀಕಂಠಯ್ಯ, ಅ.ನ.ಕೃಷ್ಣರಾಯರು, ಶ್ರೀರಂಗರೇ ಮೊದಲಾದ ಗಣ್ಯಾತಿಗಣ್ಯರು ಬಂದು ಸಂಘದ ಕಾರ್ಯಕಲಾಪಗಳನ್ನು ಕಂಡು ಹಿಗ್ಗಿದ್ದಾರೆ

ಉಪನ್ಯಾಸಗಳ ಜೊತೆಗೆ ನಾಟಕ, ಪ್ರಹಸನ, ನೃತ್ಯ, ಭಾವಗೀತೆ, ಆಶುಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಕನ್ನಡಿಗರು ಅದರಲ್ಲಿ ಭಾಗವಹಿಸುವಂತೆ ಪ್ರಚೋದಿಸುತ್ತಿದ್ದರು. ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗಾಗಿ ಸಾಹಿತ್ಯ ಪರಿಷತ್ತು ನಡೆಸುವ ಕಾವ, ಜಾಣ, ಪರೀಕ್ಷೆಗಳನ್ನು ಸಂಘವು ನಡೆಸಿತು. ಅದಕ್ಕಾಗಿಯೇ ಪ್ರೊ. ತವಗ ಭೀಮಸೇನರಾಯರು ಉಚಿತವಾಗಿ ಪಾಠ ಹೇಳುತ್ತಿದ್ದರು.

ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘಕ್ಕೆ ಬದಿದ್ದ ಗಣ್ಯಾತಿ ಗಣ್ಯರು ಅಂದು ಬರೆದಿಟ್ಟುಹೋದ ಸಂದರ್ಶನದ ಟಿಪ್ಪಣಿಗಳು ಕಲಬುರ್ಗಿಯಲ್ಲಿ ಕನ್ನಡವನ್ನು

ಕಟ್ಟಿದ ಕಥೆಯನ್ನು ಹೇಳುತ್ತವೆ. ಮಾದರಿಗಾಗಿ ೧೯೪೧ರಿಂದ ರಾಜ್ಯೋದಯ ವಾಗುವವರೆಗಿನ ಕೆಲವು ಟಿಪ್ಪಣಿಗಳನ್ನು ನೋಡಬಹುದು.

ದಿನಾಂಕ ೨೬-೧೨-೧೯೪೧ರಂದು ಖ್ಯಾತ ಕವಿ ಸಾಲಿ ರಾಮಚಂದ್ರರಾಯರು 'ಕನ್ನಡಸಾಹಿತ್ಯ ಸಂಘದ ವೃತ್ತಾಂತವನ್ನು ಕೇಳಿದೆನು. ಸಂಘಕ್ಕೆ ಉಜ್ವಲ ಭವಿಷ್ಯವಿದೆಯೆಂದು ಶ್ರದ್ಧೆಯನ್ನು ತಳೆದೆನು' ಎಂದು ಸಂಘದ ಪ್ರಾರಂಭದ ದಿನಗಳಲ್ಲೆ ಭವಿಷ್ಯವನ್ನು ನುಡಿದಿದ್ದಾರೆ. ಎರಡು ತಿಂಗಳುಗಳ ನಂತರ ೨೬-೨-೧೯೪೨ರಂದು ಬಂದ ಬಿ.ಎಂ. ಶ್ರಿಕಂಠಯ್ಯನವರು ''ಈ ಸಂಘದ ಸರ್ವತೋಮುಖವಾದ ಚಟುವಟಿಕೆಗಳನ್ನು ಉತ್ಸಾಹಗಳನ್ನು ಕಾರ್ಯದಕ್ಷತೆಯನ್ನು ಕಂಡು ಆನಂದಪಟ್ಟೆ'' ಎಂದಿದ್ದಾರೆ.

'ಸಂಘದ ಶಿಸ್ತಾದ ವ್ಯವಸ್ಥೆ, ಅಚ್ಚುಕಟ್ಟುತನ, ಗೆಳೆಯರಲ್ಲಿ ಮೂಡಿದ್ದ ಸ್ನೇಹ, ಸೌಹಾರ್ದತೆಗಳನ್ನು ಕಂಡು ನನಗೆ ಅತ್ಯಾನಂದವಾಯಿತು ಎಂದಿದ್ದಾರೆ. ದಿನಾಂಕ ೮-೫-೧೯೪೩ರಂದು ಸಂಘಕ್ಕೆ ಬೆಟ್ಟಿ ಕೊಟ್ಟ ಅ. ನ. ಕೃಷ್ಣರಾಯರು ಅದೇ ವರುಷ ೨೫-೭-೧೯೪೫ರಂದು ಬಂದ ಮಾಸ್ತಿಯವರು ಗೋಕಾಕರು 'ಸಂಘದ ಕೆಲಸ ಚೆನ್ನಾಗಿ ನಡೆಯುತ್ತಿದೆ, ಹೀಗೆಯೇ ಮುಂದುವರಿಯಲಿ' ಎಂದುಪ್ರಾರ್ಥಿಸಿದ್ದಾರೆ. ಈ ಪ್ರಾಂತದ ಕನ್ನಡ ಜನತೆಯ ಜೀವನದಲ್ಲಿ ಒಂದು ಪ್ರಧಾನ ಸ್ಥಾನವನ್ನು ಗಳಿಸಿಕೊಂಡು ನಾಡ - ನುಡಿ ಜನಗಳ ಸೇವೆಯನ್ನು ಸಲ್ಲಿಸಲಿ ಎಂದಿದ್ದಾರೆ ಕ. ವೆಂ. ರಾಘವಾಚಾರರು.

'ಸಂಘದ ಕಾರ್ಯ ಕಲಾಪಗಳನ್ನು ಕಂಡು ಕೇಳಿ ಆನಂದ ಪಟ್ಟವರಲ್ಲಿ ೧೯೪೩/೪೪ರಲ್ಲಿ ಬಂದ ಸಿ.ಕೆ. ವೆಂಕಟರಾಮಯ್ಯ, ತೀ.ನಂ. ಶ್ರೀಕಂಠಯ್ಯನವರೂ ಸೇರಿದ್ದಾರೆ. 'ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘವು ಕಳೆದ ಮೂರುವರುಷಗಳಿಂದ ಕನ್ನಡಿಗರು ಒಂದುಗೂಡಲು ಒಂದು ಕಛೇರಿಯನ್ನು ನಡೆಸುತ್ತಿದೆ. ಸಂಘವು ಬೇಗ ತನ್ನ ಕಾರ್ಯಕ್ಷೇತ್ರವನ್ನು ಇಡೀ ಜಿಲ್ಲೆಯಲ್ಲಿ ಬೆಳೆಸಿಕೊಂಡು ಹಳ್ಳಿ ಹಳ್ಳಿಗೂ ಕನ್ನಡಿಗರಿಗೆ ಕನ್ನಡದಲ್ಲಿ ಜ್ಞಾನ ಪ್ರಸಾರ ಮಾಡಲು ಶಕ್ತಿ ಪಡೆಯಲಿ, ಚಿರಕಾಲ ಬಾಳಲಿ' ಎಂದು ಹಾರೈಸಿದ್ದಾರೆ. ದಿನಾಂಕ ೧೨-೭-೪೪ರಂದು ಸಂಘಕ್ಕೆ ಭೆಟ್ಟಿ ನೀಡಿದ ಎಸ್. ವಿ. ಕೃಷ್ಣಮೂರ್ತಿರಾಯರು.

'ನಮ್ಮ ನಾಡಿನ ಇತರ ಸಂಘಗಳಿಗೆ ಮಾರ್ಗದರ್ಶಕವಾಗಲಿ' ಎಂದು ಹಾರೈಸಿದವರು ದಿನಾಂಕ ೨೨-೯-೧೯೪೪ರಂದು ಬಂದ ಕೆ ಸಂಪದ್ಗಿರಿರಾಯರು. ದಿನಾಂಕಗಳನ್ನು ನಮೂದಿಸಿದ ಉದ್ದೇಶವೆಂದರೆ ವರುಷದಲ್ಲಿ ಪ್ರತಿ ಎರಡು - ಮೂರು ತಿಂಗಳುಗಳಿಗೊಮ್ಮೆ ಖ್ಯಾತ ಸಾಹಿತಿಗಳನ್ನು ಆಮಂತ್ರಿಸಿ ಉಪನ್ಯಾಸಗಳನ್ನು ಏರ್ಪಡಿಸಿದ್ದು ವಿಶೇಷವಾಗಿದೆ. ವರುಷಕ್ಕೊಮ್ಮೆ ನಾಡಹಬ್ಬಕ್ಕೆ ಕರೆಯಿಸಿ ಕೈತೊಳೆದುಕೊಂಡಿಲ್ಲ. ಮೇಲಿಂದ ಮೇಲೆ ಕನ್ನಡದ ಸೊಲ್ಲು ಕನ್ನಡಿಗರಿಗೆ ದೊರೆಯಲಿ

ಎಂಬುದೇ ಆಶಯವಾಗಿತ್ತು. ಹಾಗೆ ಮುಂದಿನ ೧೫-೨೦ ವರುಷಗಳ ವರೆಗೆ ನಡೆದು ಬಂದದ್ದನ್ನು ಸಂಘದ ಸಂದರ್ಶಕರ ಅನಿಸಿಕೆಗಳು ಸಾರಿ ಹೇಳುತ್ತವೆ.

ಮಾದರಿಗಾಗಿ ಇನ್ನೂ ಕೆಲವು ಹೇಳುವುದಾದರೆ 'ಕನ್ನಡ ಸಾಹಿತ್ಯ ಸಂಘಗಳಲ್ಲಿ ಇದು ಒಂದು ಗಣ್ಯವಾದ ಸಂಸ್ಥೆ' ಎಂದಿದ್ದಾರೆ. ಶಿ.ಶಿ. ಬುವನಾಳರು. 'ತೀರ ಸ್ವಲ್ಪ ಸಮಯದಲ್ಲಿ ಕನ್ನಡದ ಬಗ್ಗೆ ಮಾಡಿದ ಜಾಗೃತಿಯನ್ನು ನೋಡಿದರೆ ಕನ್ನಡ ನಾಡಿನ ಜೀವನದಲ್ಲಿ ಹೊಸ ಪ್ರಕರಣವನ್ನೇ ಪ್ರಾರಂಭಿಸಿದೆ. ನವ ಕರ್ನಾಟಕವನ್ನು ನಿರ್ಮಿಸಲಿ' ಎಂದು ಹಾರೈಸಿದ್ದಾರೆ. ಬುರ್ಲಿ ಬಿಂದು ಮಾಧವರು. ಈ ಸಂಘವು ಕಲಬುರ್ಗಿಗೆ ಮಾತ್ರವಲ್ಲ, ಕನ್ನಡ ನಾಡಿಗೇ ವಿಶಿಷ್ಟ' ಎಂದಿದ್ದಾರೆ ತಿರುಮಲೆ ತಾತಾಚಾರ ಶರ್ಮರು. 'ಕರ್ನಾಟಕದಲ್ಲಿಯೆ ಇದೊಂದು ಅತ್ಯುತ್ಕೃಷ್ಟ ಸಂಘವಾಗಿದೆ' ಎಂದು ಆಲೂರು ವೆಂಕಟರಾಯರು ಹೇಳಿದ್ದರೆ ಸಂಘದ ಕಟ್ಟಡ, ಕಲಬುರ್ಗಿಯ ನಾಡಿನಲ್ಲಿ ಕನ್ನಡವು ನೆಲೆಯಾಗಿ ನಿಂತಿತು ಎಂಬ ಧೈರ್ಯ ಕೊಡುತ್ತಿದೆ' ಎಂದು ವರಕವಿ ದ.ರಾ. ಬೇಂದ್ರೆ ಬರೆದಿದ್ದಾರೆ.

ಕಲಬುರ್ಗಿ ಕನ್ನಡ ಸಾಹಿತ್ಯ ಸಂಘವು ತಾನು ಬೆಳೆಯುವುದಲ್ಲದೆ ಜಿಲ್ಲೆಯ ಇತರ ತಾಲೂಕು ಸ್ಥಳಗಳಲ್ಲಿಯೂ ಇಂಥ ಸಂಘಗಳನ್ನು ಕಟ್ಟಲು ಪ್ರೇರಣೆ ನೀಡಿದೆ. ಅವುಗಳಲ್ಲಿ ಸುರಪುರದ ಕರ್ನಾಟಕ ಸಂಘ, ಶಹಾಪುರದ ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘಗಳು ಉಲ್ಲೇಖನೀಯವಾಗಿದೆ. ರಂಗಂಪೇಟೆ ಎಂಬುದು ಸುರಪುರದ ಹತ್ತಿರದ ಒಂದು ಹಳ್ಳಿ. ಆದರೆ ೧೯೪೫ರಲ್ಲಿಯೆ ಯುಗಾದಿಯಂದು ಅಲ್ಲಿ ಕನ್ನಡ ಸಾಹಿತ್ಯ ಸಂಘವನ್ನು ಪ್ರಾರಂಭಿಸಿದವರು ಅಲ್ಲಿಯ ತರುಣ ವ್ಯಾಪಾರಿಯಾಗಿದ್ದ ಮಿರಿಯಾಲ ಬುದ್ಧಿವಂತ ಶೆಟ್ಟರು. ಅವರಿಗೆ ಒತ್ತಾಸೆಯಾಗಿ ನಿಂತವರು ಸಗರ ಕೃಷ್ಣಾಚಾರರು.

ತಾನು ಓದಲು ತಂದ ಪುಸ್ತಕಗಳೇ ನೂರಾರು ಆದಾಗ ತನ್ನ ಅಂಗಡಿಗೆ ಬಂದ ಗಿರಾಕಿಗಳಿಗೆ ಬಿಟ್ಟಿಯಾಗಿ ಓದಲು ಕೊಟ್ಟು ಅವರಲ್ಲಿ ಕನ್ನಡದ ಅಭಿರುಚಿಯನ್ನು ಬೆಳೆಸಿದವರು ಬುದ್ಧಿವಂತ ಶೆಟ್ಟರು. ಅದು ಮುಂದೆ ಕನ್ನಡ ಸಾಹಿತ್ಯ ಸಂಘವಾಯಿತು. ಇಂಥ ಕುಗ್ರಾಮ ರಸ್ತೆ ಇರದಿದ್ದ ಹಳ್ಳಿಯಲ್ಲಿ ಒಂಭತ್ತು ದಿನಗಳ ಭರ್ಜರಿ ನಾಡಹಬ್ಬವನ್ನು ಆಚರಿಸಿದರು. ಕಲಬುರ್ಗಿಗೆ ಬಂದ ಗಣ್ಯ ಸಾಹಿತಿಗಳಿಗೆಲ್ಲ ರಂಗಂಪೇಟೆಯಲ್ಲಿ ಆತಿಥ್ಯ ನೀಡಿ ಅವರ ಉಪನ್ಯಾಸಗಳನ್ನು ಊರವರು ಕೇಳುವಂತೆ ಮಾಡಿದ್ದಾರೆ.

ನಾಡಹಬ್ಬ, ವಾರ್ಷಿಕೋತ್ಸವ, ವಸಂತ ಸಾಹಿತ್ಯೋತ್ಸವ ಸ್ಮಾರಕ ಉಪನ್ಯಾಸಗಳಿಗೆ ನಾಡಿನ ಹಿರಿಯ ಸಾಹಿತಿಗಳನ್ನೆಲ್ಲ ಬರಮಾಡಿಕೊಂಡಿದ್ದಾರೆ. ಇಂದು ಅವರೆಲ್ಲ ಬಂದಿದ್ದರು ಎಂದು ಹೇಳುವುದು ಸುಲಭ. ಆದರೆ ಅಂದು ಇವರನ್ನೆಲ್ಲ ಆಮಂತ್ರಿಸಿ ಕಾರ್ಯಕ್ರಮ ಮಾಡುವುದೂ ರಾಜ್ಯದ್ರೋಹದ ಕೆಲಸವಾಗಿತ್ತು.

ಸರಕಾರದಿಂದ, ಪೋಲೀಸರಿಂದ ಈ ಸಂಘಗಳು ನಿರಂತರ ಕಿರುಕುಳವನ್ನು ಅನುಭವಿಸಬೇಕಾಗುತ್ತಿತ್ತು. ಮಾಸ್ತಿ ವೆಂಕಟೇಶ ಐಯ್ಯಂಗಾರರನ್ನು ರಂಗಂಪೇಟೆಗೆ ಆಮಂತ್ರಿಸಿದಾಗ ಅವರ ಭಾಷಣಕ್ಕೆ ತಡೆಯುಂಟು ಮಾಡಿದ ಆದೇಶವನ್ನು ಕೈಗಿತ್ತರು. ಆದೇಶವನ್ನು ಉಲ್ಲಂಘಿಸಿದರೆ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಬೆದರಿಕೆಯನ್ನು ಹಾಕಲಾಯಿತು. ಕನ್ನಡ ನಾಟಕಗಳನ್ನು ರಂಗದ ಮೇಲೆ ತಂದು ಅಭಿನಯಿಸಬೇಕಾದರೆ ಕೆಲವು ಸಲ ಅವುಗಳ ಉರ್ದು ಭಾಷಾಂತರವನ್ನು ಸರಕಾರಕ್ಕೆ ಸಲ್ಲಿಸಿ ಅನುಮತಿಯನ್ನು ಪಡೆಯಬೇಕಾಗುತ್ತಿತ್ತು. ಬ್ರಿಟಿಷರ ಆಡಳಿತದ ಕನ್ನಡ ಪ್ರದೇಶಗಳಾಗಿದ್ದ ಮುಂಬಯಿ ಕರ್ನಾಟಕ, ಮದ್ರಾಸ ಕರ್ನಾಟಕಗಳಲ್ಲಿ ಈ ಅವಾಂತರ ಇರಲಿಲ್ಲ. ಆದರೆ ಹೈದರಾಬಾದ್ ಕರ್ನಾಟಕದಲ್ಲಿ ಇಂಥ ಕಿರುಕುಳಗಳು ಎಲ್ಲ ಕಡೆಗೂ ಎಲ್ಲ ಕನ್ನಡ ಚಳುವಳಿಗಾರರಿಗೂ ಆ ಕಾಲದಲ್ಲಿ ಇದ್ದುವು. ಅವುಗಳನ್ನು ಎದುರಿಸಿ ಕನ್ನಡವನ್ನು ಬೆಳೆಸಬೇಕಾಗಿತ್ತು.

ಇಂಥ ವಿಷಮ ಕಾಲದಲ್ಲಿಯೇ ಪೂಜ್ಯ ದೊಡ್ಡಪ್ಪ ಅಪ್ಪ ಅವರು ಪ್ರತ್ಯಕ್ಷ - ಅಪ್ರತ್ಯಕ್ಷವಾಗಿ ಎರಡೂ ರೀತಿಯಿಂದ ಕನ್ನಡಕ್ಕಾಗಿ ಸಹಾಯ ಸಲ್ಲಿಸಿದರು. ತಮ್ಮ ದಾಸೋಹದಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಪ್ರಸಾದವನ್ನಿತ್ತು ಪೋಷಿಸಿದರು. ಜಾತ್ರೆಯ ಸಮಯದಲ್ಲಿ ತಮ್ಮ ಸಂಸ್ಥಾನದಲ್ಲಿ ಕನ್ನಡ ಉಪನ್ಯಾಸ, ಪ್ರವಚನ, ಪುರಾಣ, ಕೀರ್ತನೆ, ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡದ ಆಂದೋಲನದಲ್ಲಿ ಪಾಲ್ಗೊಂಡರು. ಪೂಜ್ಯ ದೊಡ್ಡಪ್ಪ ಅಪ್ಪ ಅವರು ಕುಳಿತಲ್ಲೆ ಕನ್ನಡ ಜನ ಜಾಗೃತಿಯನ್ನು ಮಾಡಿದ್ದರೆ, ಕೀರ್ತನ ಕೇಸರಿ ಕೊಪ್ಪಳ ಜಯರಾಮಾಚಾರ್ಯರು ಹೈದರಾಬಾದ್ ಕರ್ನಾಟಕವನ್ನೆಲ್ಲ ಸುತ್ತಿ ನಾಡ ಪ್ರೇಮವನ್ನು ಹುಟ್ಟಿಸಿದರು. ಅವರ ಕೀರ್ತನೆಗಳು ಷಂಡನನ್ನು ಬಂಟನನ್ನಾಗಿ ಮಾಡುತ್ತಿದ್ದವಂತೆ. ಬಳೆ ತೊಟ್ಟ ಕೈ ಕೂಡಾ ಇಳೆಯನ್ನು ಆಳಲು ಕೈಯಲ್ಲಿ ಖಡ್ಗ ಹಿಡಿಯುವಷ್ಟು ಉತ್ಸಾಹವನ್ನು ಚಿಮ್ಮಿಸುತ್ತಿದ್ದವು. ಪೌರಾಣಿಕ ಐತಿಹಾಸಿಕ ಕೀರ್ತನೆಗಳಲ್ಲಿ ಜನತೆಯನ್ನು ಬಡಿದೆಬ್ಬಿಸುವ ಕಲೆ ಅವರಿಗೆ ಕರಗತವಾಗಿತ್ತು.

ಸಂಸ್ಕೃತ ಪಂಡಿತರಾದ ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಯಾದಗಿರಿಯ ಶಂಕರ ಸಂಸ್ಕೃತ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಕನ್ನಡ ಸೇವೆಯನ್ನು ಮಾಡಿದರು. ಕನ್ನಡದಲ್ಲಿ ಕೀರ್ತನೆಗಳಿಲ್ಲವೆ ? ಎಂದು ಕೇಳಿದಾಗ ಲಿಂಗಸುಗೂರಿನ ಗೋರಾಬಾಳ ಹಣಮಂತರಾಯರು ದಾಸ ಸಾಹಿತ್ಯ ಕಾರ್ಯದಲ್ಲಿ ಅಮೋಘ ಸಂಶೋಧನೆಯನ್ನು ಮಾಡಿ ನೂರಾರು ದಾಸರನ್ನು, ಸಹಸ್ರಾರು ಕೀರ್ತನೆಗಳನ್ನು ತಮ್ಮ ಮನೆ - ಮಾರು ಕಳೆದುಕೊಂಡು ಹೊರತಂದರು.

ಹೇರೂರು ದತ್ತಾತ್ರೇಯರಾಯರು ಕಲುಬುರ್ಗಿ ನೂತನ ವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದರು. ಕನ್ನಡದ ಆಂದೋಲನದಲ್ಲಿ ಕೆಲವು ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಮನೆ ಮನೆಗೆ ಪಾಟಿ ಬಳಪ

ತೆಗೆದುಕೊಂಡು ಹೋಗಿ ಕನ್ನಡ ಬಾರದ ಕನ್ನಡಿಗರಿಗೆ ಅವರ ಮನೆಯಲ್ಲಿ ಕಲಿಸಿ ಬರುವುದು ಒಂದಾಗಿತ್ತು.

ಕಪಟರಾಳ ಕೃಷ್ಣರಾಯರು, ಕಲಬುರ್ಗಿಯಲ್ಲಿ ವಕೀಲಿ ಮಾಡುತ್ತಿದ್ದಾಗ ಕನ್ನಡಕ್ಕೆ ಹೀನಾಯದ ದಿನಗಳು. ಕನ್ನಡದ ವಿರುದ್ಧ ಕೂಗಾಟ, ಬೈಗುಳಗಳ ಸುರಿಮಳೆ, ಕಪಟರಾಳರು ಕನ್ನಡಿಗರು, ಕನ್ನಡದ ಅಭಿಮಾನಿ. ಆದರೆ ವಾತಾವರಣವನ್ನು ಎದುರಿಸುವುದು ಹೇಗೆ ? ಅವರಲ್ಲಿ ಸುಪ್ತವಾಗಿದ್ದ ಭಾಷಾಭಿಮಾನ ಜಾಗೃತವಾಯಿತು. ಕೂಡಲೇ ಕೇಶಿ ರಾಜನ ಶಬ್ದಮಣಿ ದರ್ಪಣ ವನ್ನು ಖರೀದಿಸಿ ಅಭ್ಯಾಸಕ್ಕೆ ಮೊದಲು ಮಾಡಿದರು. ಇದು ೧೯೧೦-೧೫ರ ಸಮಯ. ಚೆನ್ನಾಗಿ ಅಭ್ಯಾಸ ಮಾಡಿದರು. ಹಳ್ಳಿಗಳಲ್ಲಿ ಆಡುತ್ತಿದ್ದ ಜನಪದ ಭಾಷೆಯನ್ನು ಚಿಕಿತ್ಸಕ ಬುದ್ಧಿಯಿಂದ ಕೇಳಿದರು.

ಒಮ್ಮೆ ಸಾಹಿತಿಗಳೊಬ್ಬರು ಸಾಹಿತ್ಯ ಸಮ್ಮೇಳನದಲ್ಲಿ ಸೇರಿದಾಗ ಕಪಟರಾಳರು ಇದ್ದಾರೆಯೇ ಎಂದು ಅವರನ್ನೇ ಕೇಳಿದರಂತೆ. ಅದಕ್ಕೆ ಕಪಟರಾಳರು 'ಹೀನಿ ಏನು ಬೇಕು ' ಎಂದು ಉತ್ತರಿಸಿದರು. ಸಾಹಿತಿಗಳು ಮುಖ ಕಿವಿಚಿದರು. ಎಂಥ ಅಪದ್ಧ. 'ಹೀನಿ' ಹಳ್ಳಿಯ ಭಾಷೆ ಎಂದು ಸಾಹಿತಿಗಳು ಒಂದಿಷ್ಟು ಹೀನಾಯಿಸಿ ಮಾತನಾಡಿ ಗೇಲಿ ಮಾಡಿದರು. ಕಪಟರಾಳರು ಸುಮ್ಮನಾಗಲಿಲ್ಲ. 'ಹೀನಿ' ಎಂಬುದೇ ಸರಿಯಾದ ಶಬ್ದ, ಅದಕ್ಕೆ ವ್ಯಾಕರಣ ಸಮರ್ಥನೆಯೂ ಇದೆ ಎಂದು ಕೇಶಿರಾಜನ ಶಬ್ದಮಣಿ ದರ್ಪಣದ ಆಧಾರವನ್ನೇ ತೋರಿಸಿದರು.

'ಹೀನಿ' ಎಂಬುದು 'ಇಹೆನು' ಎಂಬ ಮಾತಿನ ರೂಪಾಂತರವಾಗಿದೆ. ವ್ಯಾಕರಣದ ಪ್ರಕಾರ ಒಂದು ಶಬ್ದ ಆದಿಯಲ್ಲಿ ಸ್ವರವಿದ್ದರೆ ಆ ಸ್ವರವು ಮುಂದಿನ ಅಕ್ಷರದ ಕೊನೆಯಲ್ಲಿ ಬಂದು ಸೇರುತ್ತದೆ. 'ಇಹೆನು'ದಲ್ಲಿ 'ಇ' ಸ್ವರವು 'ಹ' ದಲ್ಲಿ ಸೇರಿ 'ಹೀ' ಆಯಿತು. ಹೀಗಾಗಿ 'ಹೀನಿ' ಆಗಿದೆ. ಮುಂದೆ ಸ್ವರ ಸಾಮಾನ್ಯ 'ಇದ್ದೇನೆ' ಎಂಬುದರಲ್ಲಿಯ 'ನೆ' 'ಹಿ' ಎಂಬ ವರ್ಣಕ್ಕೆ ಸಮವಾಯಿತು. ಇದನ್ನು ಕೇಳಿದ ವಿದ್ವಾಂಸರು ಅವಾಕ್ಕಾದರಂತೆ.

✤ ✤ ✤ ✤

ಅಧ್ಯಾಯ -೨೩

• ಬಳ್ಳಾರಿಯಲ್ಲಿ ಕನ್ನಡ ಪರ ಹೋರಾಟ

ಬಳ್ಳಾರಿಯಲ್ಲಿ ಕನ್ನಡ ಕಳೆದು ಹೋಗಿರಲಿಲ್ಲ. ಆದ್ದರಿಂದ ಅಲ್ಲಿ ಅದನ್ನು ಹುಡುಕುವ ಪ್ರಮೇಯವಿರಲಿಲ್ಲ. ಆದರೆ ಕನ್ನಡ ಭಾಷೆ ಮತ್ತು ಕನ್ನಡಿಗರು ತೆಲುಗು ಭಾಷೆಯಲ್ಲಿ ಸೇರಿಕೊಂಡು ಬಿಟ್ಟಿದ್ದರು. ಅವರಿಗೆ ಅದೊಂದು ವಿಶೇಷವೆಂದಾಗಲೀ, ಸಮಸ್ಯೆ ಎಂದಾಗಲೀ ಅನಿಸಿರಲಿಲ್ಲ. ಅದರ ಅರ್ಥ ಅವರಿಗೆ ಕನ್ನಡದ ಬಗ್ಗೆ ಅಭಿಮಾನವಿರಲಿಲ್ಲ ಎಂದೇನೂ ಅಲ್ಲ. ಕನ್ನಡದ ಮೊದಲ ಪತ್ರಿಕೆ ಮಂಗಳೂರಿನಲ್ಲಿ ಪ್ರಕಟವಾಗಿದ್ದರೂ ಅದು ಮುಂದೆ ಒಂದೇ ವರುಷದಲ್ಲಿ ಬಳ್ಳಾರಿಗೆ ಸ್ಥಳಾಂತರಗೊಂಡದ್ದು ೧೯ನೆಯ ಶತಮಾನದ ಉತ್ತರಾರ್ಧದಷ್ಟು ಹಳೆಯದು. ಭಾಷೆ ಒಂದು ಮಾಧ್ಯಮ, ಸರಳ ಭಾಷೆಯಲ್ಲಿ ತನ್ನ ಸಂದೇಶವನ್ನು ಇನ್ನೊಬ್ಬರಿಗೆ ಮುಟ್ಟಿಸುವುದು ಭಾಷೆ. ಹೀಗಾಗಿ ತೆಲುಗರೊಂದಿಗೆ ತೆಲುಗು, ಕನ್ನಡಿಗರೊಂದಿಗೆ ಕನ್ನಡ ಭಾಷೆ ಬಳಸಿ ನಿತ್ಯ ಜೀವನ ನಡೆಯುತ್ತಿತ್ತು.

ಬಳ್ಳಾರಿ ಜಿಲ್ಲೆ ಬ್ರಿಟಿಷ್ ಆಡಳಿತದ ಮದ್ರಾಸ ಪ್ರಾಂತಕ್ಕೆ ಸೇರಿತ್ತಷ್ಟೆ. ಮದ್ರಾಸಿನಲ್ಲಿ ತಮಿಳು, ಅದರ ವ್ಯಾಪ್ತಿಯಲ್ಲಿ ತೆಲುಗು ಭಾಷಾ ಪ್ರದೇಶಗಳು ಜೊತೆಗೆ ಕನ್ನಡ ಭಾಷೆಯ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು. ಆದರೆ ಬ್ರಿಟಿಷರು ದಕ್ಷಿಣ ಕನ್ನಡವನ್ನಷ್ಟೇ ಕನ್ನಡ ಪ್ರದೇಶವೆಂದೂ ಬಳ್ಳಾರಿ ತೆಲುಗು ಪ್ರದೇಶವೆಂದೂ ಭಾವಿಸಿದ್ದಿರಬೇಕು. ಅಂತೆಯೇ ೧೯೨೬ರಲ್ಲಿ ಆಂಧ್ರ ವಿಶ್ವ ವಿದ್ಯಾಲಯ ನಿರ್ಮಾಣ ವಾದಾಗ ಮದ್ರಾಸ ವಿಶ್ವವಿದ್ಯಾಲಯಕ್ಕೆ ಸೇರಿದ ಬಳ್ಳಾರಿ ಕಾಲೇಜುಗಳನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಲಾಯಿತು. ಆಗ ಇಲ್ಲಿಯ ಕನ್ನಡ ಜನ ಎಚ್ಚೆತ್ತರು. ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯನ್ನು ಪ್ರತಿಭಟಿಸಿ ಕನ್ನಡಿಗರು ಹೋರಾಟ ನಡೆಸಿದರು. ಅದು ಕನ್ನಡ - ಕರ್ನಾಟಕ ಪರ ಹೋರಾಟ ಎನಿಸಿತು.

ಆಂಧ್ರರಿಗೆ ಬಳ್ಳಾರಿ ಸಹಿತ ಹಂಪಿಯವರೆಗೂ ಕಣ್ಣಿತ್ತು. ಯಾಕೆಂದರೆ ವಿಜಯನಗರ ಸಾಮ್ರಾಜ್ಯ ಪ್ರಾರಂಭವಾದದ್ದೆ ಆಂಧ್ರರಿಂದ ಎಂಬುದು ಅವರ ಕಲ್ಪನೆಯಾಗಿತ್ತು. ಕೆಲವರಲ್ಲಿ ಅದು ಈಗಲೂ ಇದೆ. ಬಳ್ಳಾರಿ ಹೊಸಪೇಟೆ ಮತ್ತು ಹಂಪಿಗಳು ಆಂಧ್ರದ ಪ್ರದೇಶಗಳೆಂದೇ ಅವರು ಭಾವಿಸಿದ್ದರು. ಅದು ನಿಚ್ಚಳವಾಗಿ ಕಂಡದ್ದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಚಳುವಳಿ ತಾರಕಕ್ಕೆ ಏರಿದಾಗ.

ಬಳ್ಳಾರಿ ಜಿಲ್ಲೆಯಲ್ಲಿ ಸಭಾಪತಿ ಮುದಲಿಯಾರರು ಮತ್ತು ಕೋಲಾಚಲಂ ವೆಂಟಕಟರಾಯರು ಕಾಂಗ್ರೆಸ್ಸಿನ ಪ್ರಾರಂಭ ಕಾಲದಿಂದಲೂ ಅದರ ಜೊತೆಗೆ ಸಂಬಂಧವಿಟ್ಟುಕೊಂಡವರಾಗಿದ್ದರು. ಬಳ್ಳಾರಿ ಜಿಲ್ಲೆ ಕರ್ನಾಟಕದ ಒಂದು ಭಾಗವೆಂಬ

ಅರಿವು ಕೂಡ ಇದ್ದಿರಲಿಲ್ಲ. ಆದ್ದರಿಂದ ಅಲ್ಲಿನ ಚಟುವಟಿಕೆಗಳೆಲ್ಲ ಆಂಧ್ರ ಪ್ರಾಂತದ ಚಟುವಟಿಕೆಗಳಲ್ಲೇ ಸಮಾವೇಶವಾಗಿ ಬಿಡುತ್ತಿದ್ದುವು.

ಆದರೆ, ಕರ್ನಾಟಕವೂ ಒಂದು ಸ್ವತಂತ್ರ ಪ್ರಾಂತವಾಗಿರಬೇಕೆಂದು ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ಮುದುವೇಡಕರ ಕೃಷ್ಣರಾಯರೇ ಮೊದಲಾದವರು ಮೊದಲಿನಿಂದಲೂ ಬಡಿದಾಡುತ್ತಿದ್ದರು. ಒಂದು ರೀತಿಯಲ್ಲಿ ಹೋರಾಟವನ್ನೆ ಮಾಡಿದರು. ೧೯೨೦ರಲ್ಲಿ ಆದಕ್ಕೊಂದು ಮೂರ್ತ ಸ್ವರೂಪ ದೊರೆಯಿತು.

ದಿವಾನ ಬಹದ್ದೂರ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜಕೀಯ ಪರಿಷತ್ತಿನ ಮೊದಲನೆಯ ಅಧಿವೇಶನವು ಧಾರವಾಡದಲ್ಲಿ ಸೇರಿತ್ತು. ಕರ್ನಾಟಕದ ವಿವಿಧ ಸಮಸ್ಯೆಗಳನ್ನು ಅಧ್ಯಕ್ಷರು ಕೂಲಂಕಷವಾಗಿ ವಿವೇಚಿಸಿದರು. ಹುಬ್ಬಳ್ಳಿಯ ಬ್ಯಾಹಟ್ಟಿ ಸುಬ್ಬರಾಯರು ಅಧಿವೇಶನದ ಸ್ವಾಗತಾಧ್ಯಕ್ಷರಾಗಿದ್ದರು. ಕರ್ನಾಟಕದ ಬೇಡಿಕೆಯನ್ನು ಪ್ರತಿಪಾದಿಸಿದ ಮೊದಲ ಅಧಿವೇಶನ ಇದಾಗಿತ್ತು. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಾಗುವುದು ಅವಶ್ಯವೆಂದು ನಿರ್ಣಯಿಸಲಾಯಿತು. ಮರುವರುಷವೇ ಕಾಂಗ್ರೆಸ್ಸಿನ ಆಡಳಿತದಲ್ಲಿ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತದ ಮುದ್ರೆ ದೊರೆಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಯಾವ ಯಾವ ಪ್ರದೇಶಗಳು ಸೇರಬೇಕೆಂಬ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಸಮಸ್ಯೆಯನ್ನು ಬಗೆಹರಿಸಲು ಎನ್.ಸಿ. ಕೇಳಕರ ಅವರು ನೇಮಕಗೊಂಡರು. ಅವರು ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಿದರು. ಇಷ್ಟಕ್ಕೆ ಸಮಸ್ಯೆ ಬಗೆಹರಿದಿರಲಿಲ್ಲ. ಆಂಧ್ರರು ಅಷ್ಟು ಸಲೀಸಾಗಿ ಬಳ್ಳಾರಿಯನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಮದ್ರಾಸ ರಾಜ್ಯದಲ್ಲಿ ಬಳ್ಳಾರಿಗೆ ಬರುವವರು ತಮಿಳು ಮತ್ತು ತೆಲಗು ಅಧಿಕಾರಿಗಳು ಮಾತ್ರ. ೧೯೨೦ರವರೆಗೆ ಬಳ್ಳಾರಿಯಲ್ಲಿ ಕನ್ನಡ ಶಾಲೆಗಳೂ ಇರಲಿಲ್ಲ. ಬಳ್ಳಾರಿಯಲ್ಲಿ ಕನ್ನಡಿಗರು ತೆಲಗು ನಾಟಕಗಳನ್ನಾಡುತ್ತಿದ್ದರೆ, ಅನಂತಪುರದಲ್ಲಿ (ಇಂದು ಆಂಧ್ರಪ್ರದೇಶದಲ್ಲಿದೆ) ತೆಲುಗರು ಕನ್ನಡ ಬಯಲಾಟಗಳನ್ನು ಆಡುತ್ತಿದ್ದರು' ೧೯೪೪-೪೫ರಲ್ಲಿ ಬಳ್ಳಾರಿಯಲ್ಲಿ ಆಂಧ್ರ ಮಹಾಸಭೆಯನ್ನು ನಡೆಸಲು ಉದ್ದೇಶಿಸಲಾಗಿತ್ತು. ಅದನ್ನು ಬಳ್ಳಾರಿಯ ಕನ್ನಡಿಗರು ವಿರೋಧಿಸಿದರು. ಆ ಮೊದಲು ಅಧಿಕಾರಿಗಳಲ್ಲಾಗಲೀ, ಜನರಲ್ಲಾಗಲೀ ತೆಲುಗು - ಕನ್ನಡ ಸಂಘರ್ಷದ ಮನೋಭಾವ ಅಷ್ಟಾಗಿ ಇರಲಿಲ್ಲ. ಬಳ್ಳಾರಿಯನ್ನು ಆಂಧ್ರ ಅಥವಾ ಮೈಸೂರಿಗೆ ಸೇರಿಸುವ ಬದಲು ಬಳ್ಳಾರಿ, ಅನಂತಪುರ, ಕಡಪಾ, ಕರ್ನೂಲು ಮತ್ತು ಚಿತ್ತೂರು ಐದು ಜಿಲ್ಲೆಗಳನ್ನು ಸೇರಿಸಿ 'ರಾಯಲ ಸೀಮಾ' ಎಂಬ ಪ್ರತ್ಯೇಕ ರಾಜ್ಯವನ್ನು ನಿರ್ಮಿಸುವ ಹುನ್ನಾರವೂ ಇತ್ತು. ಯಾಕೆಂದರೆ ಸ್ವಾತಂತ್ರ್ಯಾನಂತರ ಬಳ್ಳಾರಿಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದರೆ ಮೈಸೂರಿನ ಕನ್ನಡಿಗರೇ ಅದನ್ನು ವಿರೋಧಿಸಿದರು. ಹೀಗಾಗಿ ಕರ್ನಾಟಕ ಪ್ರಾಂತ ರಚನೆಯಾಗುವ ಬಗ್ಗೆ ತೀರ್ಮಾನ

ಆಗುವವರೆಗೆ ಬಳ್ಳಾರಿಯು ಆಂಧ್ರದಲ್ಲಿಯೇ ಇರಬೇಕಾಗಿತ್ತು. ಆಂಧ್ರರು ಬಳ್ಳಾರಿಯನ್ನು ಬಿಡಬಾರದು ಎನ್ನಲು ಅವರಿಗಿರುವ ವಿಜಯನಗರ ಸಾಮ್ರಾಜ್ಯದ ಭಾವನಾತ್ಮಕ ಸಂಬಂಧವು ಭೂತಕಾಲವಾಗಿದ್ದರೆ, ವರ್ತಮಾನ ಮತ್ತು ಭವಿಷ್ಯಗಳಲ್ಲಿ ತುಂಗಭದ್ರೆಯ ನೀರು ಬಹುಮುಖ್ಯ ಕಾರಣವಾಗಿತ್ತು. ಬಳ್ಳಾರಿಗರು ಆಂಧ್ರದ ಜೊತೆಗೆ ಸೇರಲು ಇಚ್ಛಿಸಿರಲಿಲ್ಲ. ಸೇರಿದರೆ ಕರ್ನಾಟಕ ಇಲ್ಲವಾದಲ್ಲಿ ಮದ್ರಾಸ ರಾಜ್ಯದಲ್ಲೆ ಉಳಿಯುವುದು ಅವರ ನಿಲುವಾಗಿತ್ತು. ಬಳ್ಳಾರಿಯನ್ನು ಕರ್ನಾಟಕದಲ್ಲಿಯೇ ಉಳಿಸಿಕೊಳ್ಳಲು 'ತುಂಗಭದ್ರಾ ಹೋರಾಟ ಸಮಿತಿ' ರಚನೆಯಾಯಿತು. ಸಮಿತಿಯ ಕಾರ್ಯವೆಂದರೆ ಪ್ರತಿದಿನ ನೂರಾ ಒಂದು ಜನ ಸತ್ಯಾಗ್ರಹ ಮಾಡುವುದು. ಪ್ರತಿಯೊಬ್ಬರೂ ತುಂಗಭದ್ರಾ ಕಾಲುವೆಯಿಂದ ಒಂದೊಂದು ಬಿಂದಿಗೆ ನೀರನ್ನು ತುಂಬಿಕೊಂಡು ಕರ್ನಾಟಕದ ಭೂಮಿಗೆ ಹನಿಸುವುದು. ಪ್ರತಿದಿನ ಸತ್ಯಾಗ್ರಹದಲ್ಲಿ ಪಾಲುಗೊಳ್ಳಲು ೧೦೧ ಜನರ ಹೆಸರನ್ನು ಹಿಂದಿನ ದಿನ ಕಲೆಕ್ಟರನಿಗೆ ಒದಗಿಸಲಾಗುತ್ತಿತ್ತು. ೩೦ ದಿನಗಳ ಪರ್ಯಂತ ನಡೆದ ಸತ್ಯಾಗ್ರಹದಲ್ಲಿ ಸುಮಾರು ೩೦೦೦ದಿಂದ ೩೧೦೦ ಜನರು ಬಂಧಿತರಾದರು. ೩೦ನೆಯ ದಿನ ಸತ್ಯಾಗ್ರಹ ನಿಲ್ಲಿಸಲು ಕೇಂದ್ರ ಸರಕಾರದಿಂದ ತಂತಿ ಸಮಚಾರ ಬಂದಿತು. ಅದರಲ್ಲಿ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸುವುದಾಗಿ ಹೇಳಿದ್ದರು. ಪರಿಣಾಮವಾಗಿ ೧೯೫೩ರಲ್ಲಿ ಬಳ್ಳಾರಿ ಜಿಲ್ಲೆಯು ಮೈಸೂರು ಸಂಸ್ಥಾನಕ್ಕೆ ಸೇರಿತು.

'ಬಳ್ಳಾರಿಯು ಕರ್ನಾಟಕದಲ್ಲಿ ಸೇರಲು ಕೆಂಗಲ್ ಹನುಮಂತಯ್ಯನವರು ಬಹಳ ಜಾಣತನದಿಂದ ಸಹಾಯ ಮಾಡಿದರು' ಎಂದು ಕೋ. ಚೆನ್ನಬಸಪ್ಪನವರು ಒಂದೆಡೆ ಹೇಳಿದ್ದಾರೆ. ಬಳ್ಳಾರಿ ಕರ್ನಾಟಕದಲ್ಲಿ ಉಳಿಯಲು ಕೋ. ಚೆನ್ನಬಸಪ್ಪ ಮತ್ತು ಸಂಗಡಿಗರ ಹೋರಾಟ ಉಲ್ಲೇಖನೀಯವಾಗಿದೆ. ಅವರು ರಚಿಸಿಕೊಂಡಿದ್ದ 'ಪೂರ್ವ ಕರ್ನಾಟಕ ಏಕೀಕರಣ ಸಂಘ'ದ ಮೂಲಕ ಅದವಾನಿ, ಆಲೂರು, ರಾಯದುರ್ಗ, ಮಡಕಶಿರಾ, ಹಿಂದುಪುರ , ಕಲ್ಯಾಣ ದುರ್ಗದ ಕನ್ನಡ ಭಾಗಗಳು ಕರ್ನಾಟಕಕ್ಕೆ ಸೇರಬೇಕೆಂದು ತೀವ್ರ ಹೋರಾಟ ಮಾಡಿದರು. ವಾಸ್ತವದಲ್ಲಿ ಇವುಗಳೆಲ್ಲ ಇಂದಿಗೂ ಪ್ರತಿಶತ ೩೫ ರಿಂದ ೮೦ರಷ್ಟು ಜನ ಕನ್ನಡಿಗರೇ ಇರುವ ಪ್ರದೇಶಗಳು.

ಅದಕ್ಕಾಗಿ ನಿರ್ಮಿಸಿದ ಆಯೋಗವು ಇಲ್ಲಿಯ ಬಹುಸಂಖ್ಯಾತ ಕನ್ನಡಿಗರಿರುವ ಪ್ರದೇಶವನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಆದರಲ್ಲಿ ಪಾವಗಡವನ್ನು ಮಾತ್ರ ಆಂಧ್ರಕ್ಕೆ ಕೊಡಬೇಕೆಂದು ಹೇಳಲಾಗಿತ್ತು. ಈ ಪಾವಗಡ ತಾಲ್ಲೂಕು ಹಳೆಯ ಮೈಸೂರು ಸಂಸ್ಥಾನಕ್ಕೆ ಸೇರಿದ್ದಾಗಿತ್ತು. ಅದನ್ನು ಆಂಧ್ರಕ್ಕೆ ಬಿಟ್ಟುಕೊಡಲು ಮೈಸೂರಿನ ಜನ ಒಪ್ಪಲಿಲ್ಲ. ಅಂತೂ ಮಂತ್ರಾಲಯದಿಂದ ಹಿಡಿದು ಆದವಾನಿ, ಎಮ್ಮಿಗನೂರು, ರಾಯದುರ್ಗಗಳೂ ಸೇರಿದಂತೆ ವಿಶಾಲವಾದ ಕನ್ನಡ ಪ್ರದೇಶವನ್ನು ಕರ್ನಾಟಕವು ಕಳೆದುಕೊಂಡಿತು !

✤ ✤ ✤ ✤

ಅಧ್ಯಾಯ -೨೪

• ಏಕೀಕರಣಕ್ಕೆ ತುಳು - ಕೊಂಕಣಿಗಳ ಉತ್ಸಾಹ

ದಕ್ಷಿಣ ಕನ್ನಡ ಎಂದೇ ಹೆಸರಾದ ಇಂದಿನ ಮಂಗಳೂರು, ಉಡುಪಿ, ಜಿಲ್ಲೆಗಳು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಆಡಳಿತದ ಮದ್ರಾಸು ಪ್ರಾಂತ್ಯಕ್ಕೆ ಸೇರಿದ್ದುವು. ಆದರೆ ಇಲ್ಲಿಯವರು ತಮ್ಮ ಜಿಲ್ಲೆಯ ಹೆಸರಿನಲ್ಲಿಯೇ 'ಕನ್ನಡ' ಶಬ್ದ ಸೇರಿದ್ದರೂ ತಾವು ಕನ್ನಡಿಗರು ಎಂಬುದಕ್ಕಿಂತ ತುಳುವರು ಎಂದುಕೊಳ್ಳಲು ಇಚ್ಛಿಸುತ್ತಿದ್ದರು.

ಭಾಷಾವಾರು ಪ್ರಾಂತಗಳ ರಚನೆಯ ಕಲ್ಪನೆ ಬಂದದ್ದು ಕಾಂಗ್ರೆಸ್ಸಿನ ಮೋತಿಲಾಲ ನೆಹರು ಅವರ ವರದಿ ಬಂದಾಗ. ಅದು ಕಳೆದ ಶತಮಾನದ ಮೊದಲ ದಶಕಗಳಲ್ಲಿ, ದೇಶಕ್ಕೆ ಸ್ವಾತಂತ್ರ್ಯ ದೊರತಾದ ಮೇಲೆ ಆಯಾ ಭಾಗಗಳ ಅಥವಾ ಪ್ರದೇಶಗಳ ಮಾತೃಭಾಷೆಯಲ್ಲಿ ಆಡಳಿತ ನಡೆಯಬೇಕು ಎಂಬುದು ಆ ವರದಿಯ ತಿರುಳಾಗಿತ್ತು. ಇದುವೆ ಭಾಷಾವಾರು ಪ್ರಾಂತ ರಚನೆಯ ತಳಹದಿಯಾಗಿತ್ತು. ಅಂದಿನಿಂದ ದೇಶದಲ್ಲೆಲ್ಲ ತಂತಮ್ಮ ಭಾಷೆಗಳ ಮೇಲಿನ ಅಭಿಮಾನ, ತಮ್ಮ ಭಾಷೆ ಚಾಲತಿಯಲ್ಲಿದ್ದ ಪ್ರದೇಶಗಳನ್ನು ಒಗ್ಗೂಡಿಸುವ ಪ್ರಯತ್ನ ಪ್ರಾರಂಭವಾಯಿತು.

ಈ ದಿನಗಳಲ್ಲಿ ದಕ್ಷಿಣ ಕನ್ನಡದಲ್ಲಿ ಕನ್ನಡ ಭಾಷೆಗಿಂತ 'ತುಳು ನಮಗೆ ಕನ್ನಡಕ್ಕಿಂತ ಆತ್ಮೀಯವಾದದ್ದು. ತುಳು ಸಂಸ್ಕೃತಿ ಮನುಷ್ಯನ ಮೂಲ ಸಂಸ್ಕೃತಿಗೆ ಹತ್ತಿರವಾದದ್ದು, ಇಲ್ಲಿರುವುದು ಮಾತೃಪ್ರಧಾನ ಕುಟುಂಬ ಪದ್ಧತಿ. ಇಲ್ಲಿನ ಜನರಿಗೆ ಸುಲಭವಾಗಿ ತಿಳಿಯುವುದು ತುಳು ಭಾಷೆ. ಕನ್ನಡ ಏನಿದ್ದರೂ ಕಲಿತ ಭಾಷೆ. ಇಲ್ಲಿನ ಜನರ ಸಂಪರ್ಕ ಪಡೆಯಲು ತುಳು ಭಾಷೆಯೇ ಉತ್ತಮ ಸಾಧನ' ಎಂಬ ಭಾವನೆ ಇತ್ತು. ಅದಕ್ಕಾಗಿ ಭಾಷಾವಾರು ಪ್ರಾಂತಗಳ ಕಲ್ಪನೆ ಬಂದಾಗ ಇಲ್ಲಿ ಮೊದಲು ನಡೆದದ್ದು 'ತುಳುವಿನ ಸಲುವಾಗಿ ಹೋರಾಟ' ಎಂದು ಕರ್ನಾಟಕ ಏಕೀಕರಣಕ್ಕಾಗಿಯೇ ಅಹರ್ನಿಶಿ ದುಡಿದ ಖ್ಯಾತ ಸಾಹಿತಿಗಳಾದ ಕಯ್ಯಾರ ಕಿಞ್ಞಣ್ಣರೈ ಒಂದೆಡೆ ಹೇಳಿದ್ದಾರೆ.

ನೆಹರು ವರದಿಯ ಕುರಿತು ಸಭೆ ನಡೆದಾಗ ಹೋಗಿದ್ದ ಇಲ್ಲಿಯ ಕೆ.ಬಿ. ಜಿನರಾಜ ಹೆಗಡೆಯವರು ಕರ್ನಾಟಕಕ್ಕಿಂತ ಯು.ಎಸ್. ಪಣಿಯಾಡಿ ಮೊದಲಾದವರು ಪ್ರಾರಂಭಸಿದ್ದ ತುಳು ಚಳುವಳಿಗೆಯೇ ಬೆಂಬಲ ನೀಡಿದರು. ರಾಷ್ಟ್ರಕವಿ ಎನಿಸಿದ ಗೋವಿಂದ ಪೈ ಅಂಥವರೂ ಕೂಡ ತುಳು ಇತಿಹಾಸದ ಬಗ್ಗೆಯೇ ಹೆಚ್ಚು ಬರೆದರು. ಪಂಜೆ ಮಂಗೇಶರಾಯರು, ಎಂ.ಎನ್. ಕಾಮತರಿಗೂ ತುಳು ಬಗ್ಗೆ ವಿಶೇಷ ಅಭಿಮಾನವಿತ್ತು. ಆದ್ದರಿಂದಾಗಿ ತುಳು ಚಳುವಳಿಗೆ ಇಲ್ಲಿ ಅಧಿಕ ಒತ್ತು

ಬಂದಿತು. ಆದರೆ ಅದರ ಆದಾರ ಸ್ಥಂಭವಾಗಿದ್ದ ಪಣಿಯಾಡಿ ಅವರೇ ಉಡುಪಿಯನ್ನು ಬಿಟ್ಟು ಹೋದ ಮೇಲೆ ತುಳು ಚಳುವಳಿಗೆ ಹಿನ್ನಡೆ ಉಂಟಾಯಿತು. ಈ ಪಣಿಯಾಡಿ ಬೇರೆ ಯಾರೂ ಅಲ್ಲ. ಕನ್ನಡ ಚಲನಚಿತ್ರ ನಿರ್ಮಾಪಕ ವಾದಿರಾಜ್ ಮತ್ತು ಖ್ಯಾತ ಅಭಿನೇತ್ರಿ ಹರಿಣಿ ಅವರ ತಂದೆ. ಆ ಕಾಲಕ್ಕೆ ಉಡುಪಿಯಲ್ಲಿ ದೊಡ್ಡ ವೇದಾಂತ ವಿದ್ವಾಂಸರು. ಜೊತೆಗೆ ಉದ್ಯಮಿಗಳೂ ಆಗಿದ್ದರು. ಅವರ ಒಂದು ಟೈಲ್ಸ್ ಫ್ಯಾಕ್ಟರಿ, ತುಳುನಾಡು ಪ್ರೆಸ್ ಇತ್ತು. ತುಳು ನಾಡು ಬ್ಯಾಂಕ್, ಸಾಹಿತ್ಯ ಮಾಲೆ ಇತ್ಯಾದಿಗಳನ್ನು ನಡೆಸುತ್ತಿದ್ದರು.

ತುಳು ಚಳುವಳಿ ಹಿಂದೆ ಬಿದ್ದಾಗ ಕರ್ನಾಟಕ ಏಕೀಕರಣದ ಚಳುವಳಿಗೆ ಕಾವು ಬಂದಿತು. ಅದಕ್ಕೊಂದು ವಿಶೇಷ ಕಾರಣವೂ ಇತ್ತು. ಕೇರಳದ ಮಲೆಯಾಳಿಗಳು ತಮ್ಮ ಭಾಷೆಯ ಪ್ರಾಂತವನ್ನು ನಿರ್ಮಿಸುವ ಎತ್ತುಗಡೆಯಲ್ಲಿ ದಕ್ಷಿಣ ಕನ್ನಡ ಇಡೀ ಜಿಲ್ಲೆಯನ್ನು ಸೇರಿಸಿಕೊಂಡಿದ್ದರು. ಕೇರಳೈಕ್ಯ ಪರಿಷತ್ತು ರೂಪುಗೊಂಡಿತ್ತು. ಅದರ ಅಧ್ಯಕ್ಷರಾಗಿದ್ದ ಕೇಳಪ್ಪನವರು ಕೇರಳದ ಸಂಘಟನೆಯ ಸೃಷ್ಟಿಯಿಂದ ಕೇರಳಧ ಸ್ವಾರ್ಥ ದೃಷ್ಟಿಯಿಂದ ವಿಶಾಲ ಕೇರಳದ ಸೂಚನೆಯನ್ನು ತಂದದ್ದು ಮಲೆಯಾಳಿಗಳ ದೃಷ್ಟಿಯಿಂದ ಯೋಗ್ಯವೇ ಆಗಿತ್ತು. ಆದರೆ ಅದರ ಸೂಚನೆಗಳು ಕನ್ನಡ ನಾಡಿಗೆ ಘೋರ ಅನ್ಯಾಯವನ್ನು ಮಾಡುವಂಥವಾಗಿದ್ದವು.

ಭಾಷಾವಾರು ಪ್ರಾಂತಗಳ ನಿರ್ಮಾಣದ ಮೂಲತತ್ವವಾದ ಭಾಷಾಭೇದವನ್ನು ಕಡೆಗಣಿಸಿ, ದಕ್ಷಿಣ ಕನ್ನಡ, ಕೊಡಗು ಮೊದಲಾದ ಜಿಲ್ಲೆಗಳನ್ನು ಕೇರಳದೊಡನೆ ಒಂದುಗೂಡಿಸಿ ಭಿನ್ನ ಪ್ರಾಂತವನ್ನು ನಿರ್ಮಿಸಬೇಕೆಂಬುದು ಅವರ ಕಲ್ಪನೆಯಾಗಿತ್ತು. ಕೇಳಪ್ಪನವರ ಕಲ್ಪನೆ ಅಷ್ಟೇ ಆಗಿರಲಿಲ್ಲ. ಅವರ ದೂರದೃಷ್ಟಿ ಗೋಕರ್ಣದಿಂದ ಕನ್ಯಾಕುಮಾರಿಯವರೆಗೆ ಹಬ್ಬಿರುವ ಪಶ್ಚಿಮ ಕರಾವಳಿಗೆ ಒಂದು ಕಾಲದಲ್ಲಿ ಕೇರಳವೆಂಬ ಹೆಸರು ಇದ್ದಿತೆಂದು ಪ್ರತಿಪಾದಿಸಿದರು. ಆಗ ಮಧ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಏಕೀಕರಣದ ಚಳುವಳಿಗೆ ಕುಮ್ಮಕ್ಕು ಸಿಕ್ಕಿತು. ಬೆನಗಲ್ ರಾಮರಾಯರು, ಕೆ. ಆರ್. ಕಾರಂತರು, ಕರ್ನಾಟಕ ಏಕೀಕರಣ ಚಳುವಳಿಗೆ ಮುಂದಾಳುಗಳಾಗಿ ನಿಂತರು. ಕೆ.ಬಿ. ಜಿನರಾಜ ಹೆಗ್ಗಡೆ ಅವರೂ ಅವರನ್ನು ಕೂಡಿಕೊಂಡರು.

"ದಕ್ಷಿಣ ಕನ್ನಡದಲ್ಲಿ ಸಕಲರಿಗೂ ಕನ್ನಡವು ಮನೆಮಾತಲ್ಲ. ಇಲ್ಲಿಯ ಜನರಲ್ಲಿ ಬಹು ಜನರು ತುಳುವರು. ಅವರು ಕನ್ನಡದ ವಿರೋಧಿಗಳಲ್ಲ. ಕೊಂಕಣಿ ಮಾತನಾಡುವವರ ಅಲ್ಪ ಸಂಖ್ಯೆ ಇದೆ. ಅವರಲ್ಲಿಯೂ ಕೆಲವರು ಕನ್ನಡದ ವಿಷಯದಲ್ಲಿ ಉತ್ಸಾಹ ತೋರಿಸುವವರಿದ್ದಾರೆ. ಅಲಕ್ಷ್ಯವನ್ನು ತೋರಿಸುವವರೂ ಇದ್ದಾರೆ. ವಿರೋಧವನ್ನು ಒಡ್ಡುವವರಿದ್ದಾರೆ. ಹೀಗಿದ್ದರೂ ವ್ಯವಹಾರ ಭಾಷೆಯೂ ಸ್ಥಳೀಯಭಾಷೆಯು ಕನ್ನಡವಾಗಿರುವುದರಿಂದ ದೇಶಭಾಷೆಗಳಲ್ಲಿಯೇ ಶಿಕ್ಷಣವಾಗಬೇಕೆಂಬ ಸರಕಾರದ ನಿಯಮವನ್ನೆಲ್ಲ ಸಮನ್ವಯಿಸುವುದಿದ್ದರೆ ಕನ್ನಡವೇ

ದೇಶಭಾಷೆ ನೆಲೆಯಲ್ಲಿ ಬೇಕಾಗುವುದೆಂಬುದನ್ನು ಅಲ್ಲಗಳೆಯಲು ಯಾರಿಗೂ ಸಾಧ್ಯವಿಲ್ಲ'' ಎಂದರು ಖ್ಯಾತ ವಿದ್ವಾಂಸರೂ ಪತ್ರಕರ್ತರೂ ಆಗಿದ್ದ ದಿ. ಕಡೆಂಗೋಡ್ಲು ಶಂಕರಭಟ್ಟರು ೧೭-೪-೧೯೩೮ರ ತಮ್ಮದೊಂದು ಅಗ್ರ ಲೇಖನದಲ್ಲಿ.

ಹೀಗೆ ಪ್ರಾರಂಭವಾದ ಕನ್ನಡ ಚಳುವಳಿಯ ಮೇಲೆ ಕೇರಳದ ಆಕ್ರಮಣವಾದಾಗ 'ಕೇರಳವು ನಮ್ಮದಲ್ಲ! ನಾವು ಕೇರಳಕ್ಕಲ್ಲ. ಕನ್ನಡ ನಾಡೇ ನಮ್ಮ ನಾಡು, ಕನ್ನಡ ಪ್ರಾಂತವೇ ನಮ್ಮ ಪ್ರಾಂತ, ಕೇರಳೀಯರು ತಮ್ಮ ನಾಡನ್ನು ಮಾತ್ರ ಲಕ್ಷಿಸುವಷ್ಟು ಕಾಲ, ಅವರ ಪ್ರಾಂತ ರಚನೆಯ ಚಳುವಳಿಯಲ್ಲಿ ನಮ್ಮ ಸಂಪೂರ್ಣ ಸಹಾನುಭೂತಿ ಇದೆ. ಕೇರಳದ ಐಕ್ಯದಲ್ಲಿ ಕನ್ನಡ ನಾಡಿನ ಕೊಲೆಯ ಉದ್ದೇಶವಿದ್ದರೆ ಅದನ್ನು ನಾವು ಪ್ರತಿಭಟಿಸಬೇಕಾಗಿದೆ' ಎಂದು ಸಾರುವವರೆಗೂ ಸಾಗಿತು ಕನ್ನಡದ ಚಳುವಳಿಯು. ಆದರೆ ಕೇರಳೀಯರಿಂದ ಕನ್ನಡದ ಕೊಲೆಯಾಗುವುದು ತಪ್ಪಲೇ ಇಲ್ಲ.

ಇಡೀ ದಕ್ಷಿಣ ಕನ್ನಡ ಜಿಲ್ಲೆಯತ್ತಲೇ ಲಕ್ಷ್ಯವಿಟ್ಟ ಕೇರಳೀಯರು ಕೊನೆಗೆ ಇಲ್ಲಿಯ ಅಚ್ಚ ಕನ್ನಡದ ಪ್ರದೇಶವಾದ ಕಾಸರಗೋಡು ತಾಲೂಕನ್ನು ಪಡೆಯುವಲ್ಲಿ ಯಶಸ್ವಿಯಾದರು. ಅದೊಂದು ದುರಂತ ಕಥೆ. ಇಚ್ಛಾ ಶಕ್ತಿಯ ಕೊರತೆಯಿಂದ ನೋಡ-ನೋಡುತ್ತಿದ್ದಂತೆ ಏಕೀಕೃತ ಕರ್ನಾಟಕದ ಸಂದರ್ಭದಲ್ಲಿ ಕಾಸರಗೋಡಿನ ಕನ್ನಡಿಗರನ್ನು ಬಲಿಕೊಡಬೇಕಾಯಿತು.

ಆನಂತರ ಮಹಾಜನ ವರದಿಯಲ್ಲಿ ಕಾಸರಗೋಡು ಕನ್ನಡದ್ದು ಎಂದು ನಿರ್ವಿವಾದವಾಗಿ ಹೇಳಿದರೂ ಆ ವರದಿ ಬಂದು ನಾಲ್ಕು ದಶಕಗಳೇ ಉರುಳಿದವು. ಕಾಸರಗೋಡು ಕರ್ನಾಟಕಕ್ಕೆ ಇನ್ನೂ ಸೇರಿಲ್ಲ.

✤ ✤ ✤ ✤

ಅಧ್ಯಾಯ - ೨೫

● ಕನ್ನಡದ ಸಪ್ತರ್ಷಿಗಳು

''ಇದುವರೆಗೆ ಧಾರ್ಮಿಕ ಕ್ಷೇತ್ರದಲ್ಲಿ ಹೆಸರಾದವರ ಪುಣ್ಯ ದಿನ, ಜಯಂತಿಗಳನ್ನಾಚರಿಸುವ ವಾಡಿಕೆಯಿತ್ತು. ಆದರಿಂದು **ಕಡಪಾ ರಾಘವೇಂದ್ರ ರಾಯರ**ರಂಥ ಮಹಾಪುರುಷರ ಪುಣ್ಯ ದಿನವನ್ನು ಕರ್ನಾಟಕದ ಅನೇಕ ಮಹಾ ಪಟ್ಟಣಗಳಲ್ಲಿ ಆಚರಿಸತ್ತಿರುವುದು ತುಂಬ ಅಭಿನಂದನಾಸ್ಪದವಾಗಿದೆ. ಬಂಗಾಳ, ಮಹಾರಾಷ್ಟ್ರ, ತೆಲುಗು ದೇಶಗಳಲ್ಲಿ ಈಗಾಗಲೇ ರಾಜಾರಾಮ ಮೋಹನರಾಯ್ , ಲೋಕಮಾನ್ಯ ತಿಲಕ, ವಿರೇಶಲಿಂಗಂ ಪಂತುಲು, ಮೊದಲಾದ ಸಮಾಜ ಧುರೀಣರ ಜಯಂತ್ಯೋತ್ಸವಗಳನ್ನು ಆಚರಿಸುವ ಪರಿಪಾಠ ಬಂದಿದೆ. ಕರ್ನಾಟಕವು ಹಿಂದೆ ಬೀಳದೆ ಕಡಪಾರಾಯರ ಜಯಂತಿಯಿಂದ ಈ ಪದ್ಧತಿಯನ್ನು ಆರಂಭಿಸುವುದು ಯುಕ್ತವಾಗಿದೆ.''

ಹೀಗೆಂದು ಬರೆದವರು ಬೇರೆ ಯಾರೂ ಅಲ್ಲ, ಕರ್ನಾಟಕದ ಖ್ಯಾತ ಕಾದಂಬರಿಕಾರ ಅ.ನ. ಕೃಷ್ಣರಾಯರು. ದಿನಾಂಕ ೧೦-೨-೧೯೪೦ರ 'ಕನ್ನಡ ನುಡಿ' ಪತ್ರಿಕೆಯಲ್ಲಿ ಬರೆದ ಅಗ್ರಲೇಖನದ ಮೊದಲ ಪರಿಚ್ಛೇದವಿದು. ಆಗಿನ್ನೂ ಕರ್ನಾಟಕ ನಿರ್ಮಾಣವಾಗಿರಲಿಲ್ಲ. ಮುಂದೆ ೧೭ ವರುಷಗಳಾದ ಮೇಲೆ ಕರ್ನಾಟಕ ರಾಜ್ಯೋದಯವಾಗಿದೆ. ಆಗಲೆ ಕಡಪಾ ರಾಘವೇಂದ್ರರಾಯರ ಪುಣ್ಯ ದಿನವನ್ನು ಕರ್ನಾಟಕದ ಅನೇಕ ಮಹಾ ಪಟ್ಟಣಗಳಲ್ಲಿ ಆಚರಿಸುತ್ತಿದ್ದರಂತೆ. ಆದರೆ ಇಂದು ಕರ್ನಾಟಕ ನಿರ್ಮಾಣವಾಗಿ ಅದು ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವಾಗ ಯಾರಿಗಾದರೂ ಆ ಮಹಾತ್ಮನ ನೆನಪಾದರೂ ಇದೆಯೇ ? ಕರ್ನಾಟಕಕ್ಕೆ ಕೊಟ್ಟ ಅವರ ಕೊಡುಗೆಯಾದರೂ ಏನಿರಬಹುದು ? ಇಂದಿನ - ಹಿಂದಿನ ತಲೆಮಾರಿನ ಜನರಿಗೆ ಗೊತ್ತಿದೆಯೆ ?

ಕಡಪಾ ರಾಘವೇಂದ್ರರಾಯರದು ಅಪರೂಪದ ವ್ಯಕ್ತಿತ್ವ. ವಿರೋಧಿಗಳ ಮನವನ್ನು ತಿಳಿದು ಅವರನ್ನು ತಮ್ಮತ್ತ - ತಮ್ಮ ಉದ್ದೇಶವನ್ನು ಸಾಧಿಸುವಲ್ಲಿ ಬೇಕಾದ ಸಂಭಾಷಣಾ ಚಾತುರ್ಯ ಅವರಲ್ಲಿತ್ತು. ಮೊದಮೊದಲು ಕರ್ನಾಟಕದ ಏಕೀಕರಣವೇ ಬೇಡ ಎಂದು ಮೊಂಡುವಾದ ಹೂಡಿದವರನ್ನು ಇವರು 'ಮೂಗೂದಾಣ' ಹಾಕಿ ಕರೆತಂದುದರಿಂದಲೇ ಬೆಳಗಾವಿಯಲ್ಲಿ ಸೇರಿದ ಪ್ರಥಮ ಕರ್ನಾಟಕ ಏಕೀಕರಣ ಸಮ್ಮೇಳನ ನಿರ್ವಿಘ್ನವಾಗಿ ಜರುಗಿತು ಎಂದು ಹಲವಾರು ಕಡೆಗೆ ಉಲ್ಲೇಖವಾಗಿದೆ.

ಆ ದಿನಗಳು ಎಂದರೆ ಮೈಸೂರು ರಾಜ್ಯ ಒಂದನ್ನು ಬಿಟ್ಟು ಉಳಿದೆಡೆ ಕನ್ನಡದ ಪ್ರದೇಶಗಳು ಇವೆಯೆಂಬ ಕಲ್ಪನೆಯೂ ಕನ್ನಡಿಗರಲ್ಲಿ ಇರಲಿಲ್ಲ. ಬಳ್ಳಾರಿ ಎಂದರೆ ಆಂಧ್ರ, ಮಂಗಳೂರು ಎಂದರೆ ಮದ್ರಾಸೀ (ತಮಿಳು) ಕಲಬುರ್ಗಿ ನಾಡೆಂದರೆ ನಿಜಾಮರ ಉರ್ದು ಪ್ರದೇಶ, ಬಿಜಾಪುರ ಬೆಳಗಾವಿ ಧಾರವಾಡ, ಕಾರವಾರಗಳೆಂದರೆ ಅಚ್ಚ ಮರಾಠಿಯ ಪ್ರದೇಶಗಳು. ಅದಕ್ಕೆ ದಕ್ಷಿಣ ಮಹಾರಾಷ್ಟ್ರ ಎಂಬ ಹೆಸರು.

ಕ್ರಿ.ಶ. ೧೯೧೫ರಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್ಸಿನ ಪ್ರಾಂತಿಕ ಪರಿಷತ್ತು ಸೇರಿದಾಗ 'ಹೋಮರೂಲ ಲೀಗು' ಸ್ಥಾಪಿತವಾಯಿತು. ಉಳಿದೆಲ್ಲ ಪ್ರಾಂತಗಳಲ್ಲೂ ಹೋಮರೂಲ ಚಳುವಳಿ ನಡೆವಂತೆ ಅನಿಬೆಂಸೆಟಮ್ಮನವರು ದೇಶಾದ್ಯಂತ ಪ್ರಚಾರ ಮಾಡಿದರು. ಅದರ ಮುಂದಿನ ವರುಷ ಪುಣೆಯಲ್ಲಿ ತಿಲಕರು ಸ್ವರಾಜ್ಯ ಚಳುವಳಿಯನ್ನು ಹೂಡಿದರು. ಆ ದಿನಗಳಲ್ಲಿ ಮೊಟ್ಟ ಮೊದಲು ಕರ್ನಾಟಕಕ್ಕೂ ಒಂದು ಸ್ವತಂತ್ರ ಶಾಖೆಯು ದೊರೆಯಬೇಕೆಂದು ಆಲೂರು ವೆಂಕಟರಾಯರು ಪ್ರಯತ್ನಿಸಿದರು. ಅದಕ್ಕೆ ಯಶ ದೊರೆಯಿತು. ಕರ್ನಾಟಕದ ಸಿಂಹ ಎಂದು ಹೆಸರಾದ ದೇಶಪಾಂಡೆ ಗಾಂಗಾಧರರಾಯರು ಅದರ ಅಧ್ಯಕ್ಷರಾದರು. ಪ್ರದೇಶ ಭಾಷೆಯಾದ ಕನ್ನಡದಲ್ಲೆ ಪ್ರಚಾರ ಕಾರ್ಯ ನಡೆಯಿತು. ಅದು ಈವರೆಗೆ ಹದ ಮಾಡಿದ ಅಖಂಡ ಕರ್ನಾಟಕದ ಮೊದಲ ಹೆಜ್ಜೆಯಾಗಿತ್ತು.

ಕರ್ನಾಟಕದ ಕಾಂಗ್ರೆಸ್ ಶಾಖೆ ಸ್ವತಂತ್ರ ಶಾಖೆಯಾಗಿದೆ. ಆದರೆ, ಸ್ವತಂತ್ರ ಕರ್ನಾಟಕ ರಾಜ್ಯವೇ ಬೇಕು ಎಂದು ಕೇಳಲು ಮತ್ತೆ ನಾಲ್ಕು ವರುಷಗಳು ಹಿಡಿದುವು. ಆಲೂರು ವೆಂಕಟರಾಯರಂತೂ ಸರಿಯೆ ಅವರ ಜೊತೆಗೆ ಕಡಪಾ ರಾಘವೇಂದ್ರ ರಾಯರು, ಮುದವೀಡು ಕೃಷ್ಣ ರಾಯರು ವಿಶೇಷ ಶ್ರಮ ವಹಿಸಿ ೧೯೨೦ರಲ್ಲಿ ಇದಕ್ಕೊಂದು ಮೂರ್ತ ಸ್ವರೂಪವನ್ನು ತಂದುಕೊಟ್ಟರು. ಆ ವರುಷ ಧಾರವಾಡದಲ್ಲಿ ದಿವಾನ್ ಬಹದ್ದೂರ್ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜಕೀಯ ಪರಿಷತ್ತಿನ ಮೊದಲ ಅಧಿವೇಶನ ನಡೆಯಿತು. ಹುಬ್ಬಳ್ಳಿಯ ಬ್ಯಾಹಟ್ಟಿ ಸುಬ್ಬರಾಯರು ಸ್ವಾಗತಾಧ್ಯಕ್ಷರಾಗಿದ್ದರು. ಕರ್ನಾಟಕದ ವಿವಿಧ ಭಾಗಗಳಿಂದ ನೂರಾರು ಜನರು ಪ್ರತಿನಿಧಿಗಳು ಬಂದಿದ್ದರು. ಕರ್ನಾಟಕದ ಬೇಡಿಕೆಯನ್ನು ಪ್ರತಿಪಾದಿಸಿದ ಮೊದಲನೆಯ ಪರಿಷತ್ತು ಇದಾಗಿತ್ತು. ಕಾಂಗ್ರೆಸ್ಸು ಸ್ಥಾಪಿತವಾಗಿ ೩೫ ವರುಷಗಳ ನಂತರ ಅದರ ಆಡಳಿತದಲ್ಲಿ ಕರ್ನಾಟಕಕ್ಕೆ ಸ್ವತಂತ್ರ ಅಸ್ತಿತ್ವ ಬಂದಿತಾದರೂ ಮುಂದೆ ಕರ್ನಾಟಕ ರಾಜ್ಯ ಉದಯವಾಗಲು ಮತ್ತು ೩೫ ವರುಷಗಳೇ ಹಿಡಿದವು !

೧೯೨೦ರ ಡಿಸೆಂಬರಿನಲ್ಲಿ ನಾಗಪುರದಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನಕ್ಕೆ ಕರ್ನಾಟಕದಿಂದ ೮೦೦ಕ್ಕಿಂತ ಅಧಿಕ ಜನರು ಪ್ರತಿನಿಧಿಗಳಾಗಿ ಹೋಗಿದ್ದರು. ಅಂದಿನ ಹಿಂದುಸ್ತಾನದ ರಾಜ್ಯಗಳನ್ನು ಭಾಷೆಗಳಿಗೆ ಅನುಗುಣವಾಗಿ ವಿಭಾಗಿಸಬೇಕೆಂದು ಅಧಿವೇಶನದಲ್ಲಿ ಪ್ರತಿಪಾದಿಸಲಾಗಿದ್ದು. ಈ ಹಂತದಲ್ಲಿ ಕರ್ನಾಟಕಕ್ಕೂ ಸ್ವತಂತ್ರ ರಾಜ್ಯ

ದೊರೆಯಬೇಕೆಂದು ಪ್ರತಿಪಾದಿಸಿದಾಗ ಮಹಾತ್ಮಾ ಗಾಂಧೀಜಿ ಅವರೆ ಕನ್ನಡಿಗರ ಹಕ್ಕನ್ನು ಬೆಂಬಲಿಸಿದರು. ಈ ದಿನಗಳಲ್ಲಿಯೇ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಗೀತೆಗೆ ಹಿನ್ನೆಲೆ ದೊರೆಯಿತು. ಮತ್ತೆ ನಾಲ್ಕು ವರುಷಗಳ ಅನಂತರ ೧೯೨೪ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣರಾಯರು ಅದನ್ನು ಹಾಡಿ ತೋರಿಸಿದರು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಹಲವಾರು ದೃಷ್ಟಿಗಳಿಂದ ಇಂದಿಗೂ ಕರ್ನಾಟಕಕ್ಕೆ ಮರೆಯಲಾರದ ಅಧಿವೇಶನವಾಗಿ ಉಳಿದಿದೆ.

ರಾಷ್ಟ್ರಪಿತ ಎಂದು ಕರೆಯಿಸಿಕೊಳ್ಳುವ ಮಹಾತ್ಮಾ ಗಾಂಧೀಜಿ ಅವರು ಈ ಅದಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದಂತೂ ಸರಿಯೆ. ಅದುವೆ ಅವರ ಪ್ರಥಮ ಹಾಗೂ ಕೊನೆಯ ಅಧ್ಯಕ್ಷ ಪದವಿಯಾಯಿತು. ಅದು ಇಡೀ ರಾಷ್ಟ್ರದಲ್ಲಿ ಕರ್ನಾಟಕಕ್ಕೆ ದೊರೆತ ಅಭಿಮಾನದ ವಿಷಯವಾಗಿ ಚಿರಕಾಲ ಉಳಿಯಿತು.

ಇದಕ್ಕೆ ಮಿಗಿಲಾಗಿ ಅಧಿವೇಶನದ ಆಮಂತ್ರಣವನ್ನು ನೀಡಿದವರು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ಎಂಬುದು ಗಮನಾರ್ಹವಾದ ವಿಷಯವಾಗಿದೆ. ನಾಲ್ಕು ವರುಷಗಳ ಹಿಂದೆ ಕರ್ನಾಟಕಕ್ಕೆ ಕಾಂಗ್ರೆಸ್ಸಿನಲ್ಲಿ ಸ್ವತಂತ್ರ ಶಾಖೆ ದೊರೆತ ಮೇಲೆ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ತಮ್ಮ ರಾಜ್ಯ ಪ್ರದೇಶದಲ್ಲಿ ಮಹಾ ಅಧಿವೇಶನದ ಸ್ಥಳವನ್ನು ಆಯ್ಕೆಮಾಡುವಾಗ ಕಡಪಾ ರಾಘವೇಂದ್ರ ರಾಯರ ಮುಂದಾಲೋಚನೆಯಿಂದ ಬೆಳಗಾವಿಯಲ್ಲಿ ಮಹಾ ಅಧಿವೇಶನ ಮಾಡುವುದೆಂದು ತೀರ್ಮಾನಿಸಿದರು. ಆದಾಗಲೇ ಬೆಳಗಾವಿ ಕರ್ನಾಟಕದ ಒಂದು ಭಾಗವಾಗಿ ಕರ್ನಾಟಕ ಕಾಂಗ್ರೆಸ್‌ದಲ್ಲಿ ಸೇರಿಯಾಗಿತ್ತು. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವುದು 'ಕರ್ನಾಟಕ ಪ್ರಾಂತದಲ್ಲಿ' ಎಂಬುದು ರಾಷ್ಟ್ರಾದ್ಯಂತ ಪ್ರಚಲಿತವಾಗಿದ್ದುದು ಸಾಮಾನ್ಯ ವಿಷಯವಾಗಿರಲಿಲ್ಲ. ಬೆಳಗಾವಿ ಕರ್ನಾಟಕದ ಒಂದು ಅವಿಭಾಜ್ಯ ಅಂಗ ಎಂಬುದಾಗಿ ಅಂದೆಯೇ ಅಖಿಲ ಭಾರತದ ಮುದ್ರೆ ಬಿದ್ದಿತು.

ಬೆಳಗಾವಿ ಅಧಿವೇಶನದ ಸ್ವಾಗತಾಧ್ಯಕ್ಷರಾಗಿದ್ದವರು ದೇಶಪಾಂಡೆ ಗಂಗಾಧರರಾಯರಾಗಿದ್ದರೂ, ಉಸ್ತುವಾರಿ ಕಡಪಾ ರಾಘವೇಂದ್ರ ರಾಯರದಾಗಿತ್ತು. ಬೆಳಗಾವಿ ಟಿಳಕವಾಡಿಯ ವಿಶಾಲ ಬಯಲಿನಲ್ಲಿ ಅಧಿವೇಶನದ ಮಂಟಪದ ಮಹಾದ್ವಾರವನ್ನು ಹಂಪೆಯ ವಿರೂಪಾಕ್ಷ ದೇವಾಲಯದ ಗೋಪುರದ ಪ್ರತಿರೂಪವನ್ನಾಗಿ ನಿರ್ಮಿಸಿದರೆ, ಅಧಿವೇಶನ ನಡೆಯುವ ಸ್ಥಳವೆಲ್ಲ ವಿಜಯನಗರವಾಯಿತು. ನೀರಿನ ಅನುಕೂಲತೆಗಾಗಿ ಅಗೆದ ಭಾವಿ ಅಂದು 'ಪಂಪಾ

ಸರೋವರ'ವಾಗಿತ್ತು. ಇಲ್ಲೆಲ್ಲ ಬೆಳಗಾವಿಯ ಆಯ್ಕೆಯಿಂದ ಹಿಡಿದು ವಿಜಯನಗರ ಸಾಮ್ರಾಜ್ಯವನ್ನು ಅಧಿವೇಶನದಲ್ಲಿ ಪ್ರತಿಷ್ಠಾಪಿಸುವವರೆಗೂ ಪ್ರತಿ ಹಂತದಲ್ಲಿ ಕಡಪಾ ರಾಘವೇಂದ್ರರಾಯರು ವಾಗ್ಯುದ್ಧವನ್ನು ಮಾಡಬೇಕಾಯಿತೆಂದು ಹೇಳಲಾಗಿದೆ.

ಕಡಪಾ ರಾಘವೇಂದ್ರರಾಯರು ವೃತ್ತಿಯಿಂದ ವಕೀಲರು. ಆದರೆ ಮೊದಲಿನಿಂದಲೂ ಕರ್ನಾಟಕ, ಕನ್ನಡ ಚಳುವಳಿಯಲ್ಲಿ ಇಡಿಯಾಗಿ ಅಥವಾ 'ಇಳೀ' ಯಾಗಿ ಮುಳುಗಿದವರು. ತಾವು ಜೀವಿಸುವವರೆಗೆ ಕರ್ನಾಟಕವೆಂಬ 'ಇಳಿವದ್ದೆ' ಯಲ್ಲಿ ಇದ್ದವರು. ಅವರಿಗೆ 'ಚಳಿ' ಯ ಅಂಜಿಕೆಯೇ ಇರಲಿಲ್ಲ.

ರಾಘವೇಂದ್ರ ರಾಯರು ಮೂಲತಃ ರಾಯಲ ಸೀಮೆಯ ಕಡಪಾದವರು. ರಸಿಕರು - ಗುಣಗ್ರಾಹಿಗಳು. ಕರ್ನಾಟಕದ ಸಿಹಿ ತಿಂಡಿಗಳೊಡನೆ ರಾಯಲ ಸೀಮೆಯ ಮೆಣಸಿನಕಾಯಿಯ ಖಾರದ ರುಚಿಯನ್ನೂ ಸವಿದವರು. ಸರಸವಿದ್ದಾಗ ಅವರಷ್ಟು ಸರಸ - ಹಾಸ್ಯದ ಮಾತು ಉಳಿದವರಲ್ಲಿ ಇರಲಿಲ್ಲ. ಸಂದರ್ಭ ಬಂದಾಗ ಅವರ ನಾಲಿಗೆ ಬೇಕಾದಷ್ಟು ಖಾರವಾಗುತ್ತಿತ್ತು. ಆಗ ಅವರು ತಮ್ಮ ಎದುರಾಳಿಯ ಸ್ಥಾನಮಾನಗಳನ್ನೂ ಲೆಕ್ಕಿಸುತ್ತಿರಲಿಲ್ಲ. ಧಾರವಾಡದಲ್ಲೊಮ್ಮೆ ಕರ್ನಾಟಕದ ಸಿಂಹ ದೇಶಪಾಂಡೆ ಗಂಗಾಧರರಾಯರು ಮರಾಠಿಯಲ್ಲೆ ಭಾಷಣ ಮಾಡುವೆ ಎಂದಾಗ ಸಾರ್ವಜನಿಕರ ಎದುರೇ ಅವರ ಬಾಯಿ ಮುಚ್ಚಿಸಿ ಕನ್ನಡದಲ್ಲೆ ಮಾತನಾಡಲು ಹಚ್ಚಿದರು. ಮರಾಠಿಯ ದಬ್ಬಾಳಿಕೆಯನ್ನು ಹೊಡೆದು ಮಾತನಾಡಲು ಹಚ್ಚಿದರು. ಮರಾಠಿಯ ದಬ್ಬಾಳಿಕೆಯನ್ನು ಹೊಡೆದು ಹಾಕಲು ಕಡಪರಾಯರು ಒಂದು ತರುಣರ ತಂಡವನ್ನು ಕಟ್ಟಿದ್ದರಂತೆ !

೧೯೧೬ರಲ್ಲಿ 'ಕರ್ನಾಟಕ ಸಭೆ' ಸ್ಥಾಪನೆಯಾದಾಗ ಅದರ ಪ್ರಾಣವಾದವರು ಕಡಪಾ ರಾಘವೇಂದ್ರ ರಾಯರು' ಎಂದಿದ್ದಾರೆ. ಆಲೂರು ವೆಂಕಟರಾಯರು ಅಷ್ಟೇ ಅಲ್ಲ 'ಕರ್ನಾಟಕವನ್ನು ಜಾಗೃತಗೊಳಿಸುವ ಕಾರ್ಯದಲ್ಲಿ ಅವರು ಮಾಡಿದ ಹತ್ತರಲ್ಲಿಯ ಒಂದು ಭಾಗದಷ್ಟು ಕೆಲಸವೂ ನನ್ನಿಂದ ಆಗಿಲ್ಲವೆಂಬುದು ಸರ್ವರಿಗೂ ತಿಳಿದ ಮಾತೇ ಆಗಿದೆ'' ಎಂದು ಹೇಳಿದ್ದು ಆಲೂರು ವೆಂಕಟರಾಯರ ಸೌಜನ್ಯವನ್ನು ಎತ್ತಿ ತೋರಿಸುತ್ತದಾದರೂ ಕಡಪಾ ರಾಘವೇಂದ್ರರಾಯರ ಭವ್ಯ ವ್ಯಕ್ತಿತ್ವದ ಅರಿವೂ ಆಗದೆ ಇರಲಾರದು.

ಇನ್ನೊಂದು ಸಂದರ್ಭದಲ್ಲಿ ಆಲೂರ ವೆಂಕಟರಾಯರು ಕಡಪಾ ರಾಘವೇಂದ್ರರಾಯರ ಬಗ್ಗೆ ಹೇಳುತ್ತ ಅವರು ಕನ್ನಡ - ಕರ್ನಾಟಕದ ಬಗ್ಗೆ ವ್ರತವನ್ನು ಕೈಗೊಂಡುದರ ಬಗ್ಗೆ ಹೀಗೆ ಹೇಳುತ್ತಾರೆ.

''...... ನನ್ನ 'ಗತ ವೈಭವ'ವು ಪ್ರಕಟವಾಯಿತು. ಅದನ್ನು ಅವರು ಓದಿದರು. ಇದೇ ಸುಮಾರಕ್ಕೆ ಆಂಧ್ರ ಚಳುವಳಿ ಪುಸ್ತಕವೂ ಅವರ ಕೈಗೆ ಬಿದ್ದಿತು. ಇವೆರಡೂ ಕೂಡಿ ಅವರ ಜೀವನದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿದುವು. ಅವರಲ್ಲಿ ದೈವೀ

ಪ್ರೇರಣೆಯುಂಟಾಯಿತು. .... ಆಗ ಅವರ ಮೋರೆಯ ಮೇಲೆ ವಿಲಕ್ಷಣ ತೇಜಸ್ಸು ಉಕ್ಕುತ್ತಿತ್ತು..... ಅವರ ಒಳಮನಸ್ಸಿನಲ್ಲಿ ಕುದಿಯುತ್ತಿದ್ದ ಕರ್ನಾಟಕದ ಅಭಿಮಾನವು ಉಕ್ಕಿ ಬಂದು ಭೋರ್ಗರೆದು ಹರಿದು ಅವರ ಮುಖದಿಂದ ಹೊರಬಿತ್ತು..... ಆ ಸಭೆಯಲ್ಲಿ ನನಗೆ ಉದ್ದಕ್ಕೆ ಸಾಷ್ಟಾಂಗ ಹಾಕಿ ಬಿಟ್ಟು ಇಂದಿನಿಂದ ನಿಮ್ಮ ಶಿಷ್ಯನಾದೆ ಎಂದು ಬಿಟ್ಟರು.''

ಇಂಥ ಪ್ರೌಢಶಿಷ್ಯರು ದೊರೆತಾಗ ವೆಂಕಟರಾಯರ ಕೆಲಸ ಹಗುರವಾಯಿತು. ಅವರು ಕೇವಲ ಮುಂಬಯಿ ಕರ್ನಾಟಕದಲ್ಲಿ ಮಾತ್ರ ಕೆಲಸ ಮಾಡಲಿಲ್ಲ. ಕನ್ನಡ ಬಲ್ಲ ಎಲ್ಲ ಪ್ರದೇಶಗಳಲ್ಲೂ ಆ ದಿನಗಳಲ್ಲಿ ಕೆಲಸ ಮಾಡಿದ್ದಾರೆ. ಅ. ನ. ಕೃಷ್ಣರಾಯರು ಆ ಬಗ್ಗೆ ಹೇಳುತ್ತಾರೆ.

'' ಕರ್ನಾಟಕ ಪ್ರಾಂತ್ಯ , ಕರ್ನಾಟಕ ವಿಶ್ವವಿದ್ಯಾನಿಲಯಗಳ ಪ್ರಶ್ನೆಗಳ ಬಗ್ಗೆ ಇಂದಿರುವಷ್ಟಾದರೂ ಸಹೃದಯತೆ ಬರಬೇಕಾದರೆ ಶ್ರೀ ಕಡಪಾ ಅವರ ಪ್ರಯತ್ನವೇ ಮೂಲ ಕಾರಣ'' ಎನ್ನುತ್ತಾರೆ. ಅವರು ಮುಂದುವರೆದು ''ನನಗೆ ತಿಳಿದಂತೆ ಈ ೧೦-೧೨ ವರ್ಷಗಳ ಹಿಂದೆ ಶ್ರೀಯುತರು ಮೈಸೂರಿಗೆ ಬಂದು, ಇಲ್ಲಿನ ರಾಜಕೀಯ ಮುಂದಾಳುಗಳನ್ನು ಕಂಡು ಕರ್ನಾಟಕದ ಭವಿಷ್ಯದ ಬೆನ್ನು ಮೂಳೆಯಂತಿರುವ ಈ ವಿಷಯವನ್ನು ಪ್ರಸ್ತಾಪಿಸಿದರು. (ಇದು ನಡೆದದ್ದು ೧೯೨೫-೨೭ರ ಸುಮಾರಿಗೆ) ಆದರೆ ಅಂದಿನ ಮುಂದಾಳುಗಳಲ್ಲಿ ಒಬ್ಬರಾಗಿದ್ದ ಕೀರ್ತಿಶೇಷ ಅತ್ತಿಗುಪ್ಪೆ ಕೃಷ್ಣ ಶಾಸ್ತ್ರಿಗಳನ್ನುಳಿದು ಬೇರೆ ಯಾರೂ ಇದರ ಮಹತ್ವವನ್ನು ಗ್ರಹಿಸಲಿಲ್ಲ. (ಇಂದಾದರೂ ಗ್ರಹಿಸಿದ್ದಾರೆಯೋ ? ಎಂದು ಕೇಳಿದ್ದಾರೆ ಅನಕೃ !)''

ತಮ್ಮ ಅಮೋಘವಾದ ಪಾಂಡಿತ್ಯ ನಿರರ್ಗಳವಾದ ವಾಗ್ಝರಿ, ಬಹು ಭಾಷಾ ನಿಪುಣತೆ, ಸಾಂತಃಕರಣ, ಉಜ್ವಲವಾದ ಕನ್ನಡ ಅಭಿಮಾನಗಳಿಂದ ರಾಯರು ಕನ್ನಡ ನಾಡಿನಲ್ಲಿ ಕ್ರಾಂತಿ ಬೀಜವನ್ನು ಬಿತ್ತಿದರು. ಭೀಮಕಾಯ, ಕೃಷ್ಣವರ್ಣ, ಬೃಹಸ್ಪತಿಯ ಮೇಧಾಶಕ್ತಿಯುಳ್ಳ ರಾಯರು ಮೇಜಿನ ಮೇಲೆ ಪದ್ಮಾಸನ ಹಾಕಿ ಕುಳಿತು ''ಭಗವಾನ್ ಉವಾಚವನ್ನು ಅಂದಿನ ಭಾರಿತೀಯ ರಾಜಕೀಯ, ಸಾಮಾಜಿಕ, ನೈತಿಕ ಪರಿಸ್ಥಿತಿಗಳಿಗೆ ಹೋಲಿಸಿ ಹೇಳುತ್ತಿದ್ದ ರೀತಿ ಇಂದಿಗೂ ನಮ್ಮ ಕಿವಿಯಲ್ಲಿ ಧ್ವನಿತವಾಗುತ್ತದೆ'' ಎಂದು ನೆನಪಿಸಿಕೊಂಡಿದ್ದಾರೆ ಅನಕೃ.

ಬೆಂಗಳೂರಿನಲ್ಲಿ ರಾಯರ ಕರ್ಮಭೂಮಿಯಾಗಿದ್ದ ಅದೇ ಗಾಂಧೀ ಮೈದಾನವು ಈಗ ಕನ್ನಡ ಸಾಹಿತ್ಯ ಪರಿಷನ್ಮಂದಿರವಾಗಿದೆ. ಅಲ್ಲಿ ಅದೇ 'ಅಭೀಃ' ಮಂತ್ರದ ಧ್ವನಿ , ಆದರೆ ಆ ಪಾಂಚಜನ್ಯದ ಪ್ರಭುವು ನಮ್ಮಿಂದ ಮಾಯವಾಗಿ ಬಿಟ್ಟಿದ್ದಾನೆ. 'ಕನ್ನಡಿಗರು ಅತಿ ಭಯಂಕರವಾಗಬೇಕೆಂದು ಸಾರಿದ ಕಡಪಾ ರಾಘವೇಂದ್ರ ರಾಯರ ಪುಣ್ಯ ಸ್ಮೃತಿಯೊಂದೇ ಇಂದು ನಮ್ಮ ಸೊತ್ತು ಎಂದಿದ್ದರು ಅನಕೃ.

ಅದೇ ಪರಿಸ್ಥಿತಿ ಧಾರವಾಡದಲ್ಲಿಯದು. ಧಾರವಾಡ ನಗರ ಸಭೆಯ

ಬಯಲಿನಲ್ಲಿ ನಿತ್ಯವೂ ಅವರ ವೀರಕಂಠದ ಪ್ರತಿಧ್ವನಿ ಕೇಳಬರುತ್ತಿತ್ತು. ಜನರು ಆ ಬಯಲನ್ನು 'ಕಡಪಾ ಬಯಲು' ಎಂದೇ ನಾಮಕರಣ ಮಾಡಿದ್ದರು.

ಅಸಹಕಾರ ಚಳುವಳಿಯಲ್ಲಿ ರಾಘವೇಂದ್ರ ರಾಯರು ವಕೀಲಿ ತ್ಯಜಿಸಿ ಪೂರ್ಣಾವಧಿ ದೇಶಸೇವಕರಾದರು. ಅಲ್ಪಾವಧಿಯಲ್ಲಿಯೇ ಬರಿಗೈಯಾದರು. ಹತಾಶರಾಗಲಿಲ್ಲ. ದೀರ್ಘಕಾಲ ಬೇನೆಯಿಂದ ಬಳಲಿ ೧೯೨೭ರ ಫೆಬ್ರವರಿಯಲ್ಲಿ ಅವರು ಅಕಾಲ ಮೃತ್ಯುವಿಗೆ ತುತ್ತಾದರು. ಅನಂತರದ ಹತ್ತೆಂಟು ವರುಷಗಳ ವರೆಗೆ ಅವರ ಪುಣ್ಯತಿಥಿಯನ್ನು 'ಏಕೀಕರಣದಿನ 'ಎಂದು ಆಚರಿಸಲಾಗುತ್ತಿತ್ತು.

ಕನ್ನಡ ನಾಡು ಮತ್ತು ನುಡಿಯನ್ನು ತಮ್ಮ ದೇಹ ಹಾಗೂ ಪ್ರಾಣವೆಂದು ಬಗೆದು ಅಹರ್ನಿಶಿ ದುಡಿದವರೆಂದು ಮುಂಬಯಿ ಕರ್ನಾಟಕ ವಿಶೇಷವಾಗಿ ಧಾರವಾಡ ಭಾಗದಲ್ಲಿ 'ಕನ್ನಡ ಸಪ್ತರ್ಷಿಗಳು' ಎದು ಕರೆಯಲಾಗುತ್ತದೆ. ಕನ್ನಡ ನಾಡಿನ ಗತವೈಭವವನ್ನು ನೆನಪಿಸಿ ಕನ್ನಡಿಗರಲ್ಲಿ ತಾಯಿ ಭುವನೇಶ್ವರಿ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡಿದ ಆಲೂರು ವೆಂಕಟರಾಯರು ಕನ್ನಡ ಕುಲಪುರೋಹಿತರೆನಿಸಿ. ಸಪ್ತರ್ಷಿಗಳಲ್ಲಿಯ ಜ್ಯೇಷ್ಠ ಋಷಿಗಳು, ಸಪ್ತರ್ಷಿ ಮಂಡಳದ ಕೇಂದ್ರ ಬಿಂದು ಎನಿಸಿದವರು. ಉಳಿದ ಆರು ಜನ ಋಷಿಗಳೆಂದರೆ, ಮುದವೀಡು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಕಡಪಾ ರಾಘವೇಂದ್ರರಾಯರು, ನಾರಾಯಣ ಶ್ರೀನಿವಾಸ ರಾಜಪುರೋಹಿತರು, ನಗಗುಂದಕರ ರಾಮರಾಯರು ಮತ್ತು ದೇಶಪಾಂಡೆ ನಾರಾಯಣರಾಯರು.

ಗುಡುಗು ಅಬ್ಬರ, ಮಹಾಪೂರಗಳಂತೆ ಕಡಪಾ ರಾಘವೇಂದ್ರರಾಯರಾದರೆ, ನರಗುಂದ ರಾಮರಾಯರದ್ದು ಅತ್ಯಂತ ಸಾತ್ವಿಕ ಪ್ರವೃತ್ತಿ, ಶಾಂತ, ಮೆದು, ನಡೆ-ನುಡಿಯಲ್ಲಿ ನಯ-ವಿನಯ. ರಾಮರಾಯರು ಪ್ರಾಥಮಿಕ ಶಿಕ್ಷಣ ಪಡೆದದ್ದು ಮಹಾರಾಷ್ಟ್ರದಲ್ಲಿ. ಆದ್ದರಿಂದ ೧೯೦೪ರಲ್ಲಿ ಅವರು ಧಾರವಾಡಕ್ಕೆ ಬಂದಾಗ ಅವರಿಗೆ ಕನ್ನಡ ಓದು - ಬರಹ ಬರುತ್ತಿರಲಿಲ್ಲ. ಆದರೆ ಕಲಿತರು. ಅಷ್ಟೇ ಅಲ್ಲ ಅಂದಿನ ಕಾಲದಲ್ಲಿ ಆಳವಾದ ಅಭ್ಯಾಸ ಮಾಡಿದ ಕನ್ನಡದ ಉತ್ತಮ ಲೇಖಕರೆನಿಸಿದರು. ಅದಕ್ಕೆ ಇಂಬಾದವರು ಖ್ಯಾತ ಕೀರ್ತನಕಾರ, ನಾಟಕಕಾರ, 'ಶಾಂತಕವಿ' ಎಂದು ಸುಪ್ರಸಿದ್ಧರಾದ ಬಾಳಾಚಾರ ಸಕ್ಕರಿ ಅವರು. ಆಲೂರು ವೆಂಚಕಟಾಯರ 'ಕರ್ನಾಟಕ ಗತವೈಭವ'ದ ಅಚ್ಚಿನ ಕರಡು ತಿದ್ದಿ ಕೊಡುತ್ತ ವಿಜಯನಗರದ ಇತಿಹಾಸದ ಬಗ್ಗೆ ಒಲವನ್ನು ಬೆಳೆಸಿಕೊಂಡವರು. ಆನಂತರ ತಾವೆ ಅಭ್ಯಾಸ ಮಾಡಿ ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಬರೆದರು. ಅವರು ಸುಧಾರಣಾವಾದಿಗಳಾಗಿದ್ದರು. ವೈಭವ ಪೂರ್ಣವಾಗಿ ನಡೆಯುತ್ತಿದ್ದ ನಾಡಹಬ್ಬಗಳು ಜಾತ್ಯಾತೀತವಾಗಿರಬೇಕೆಂದು ೧೯೨೭-೩೦ರ ಅವಧಿಯಲ್ಲೇ ಅವರು ಪ್ರತಿಪಾದಿಸುತ್ತಿದ್ದರು.

ಕನ್ನಡ ನಾಡು-ನುಡಿಗಾಗಿ ಜೀವಮಾನ ಪರ್ಯಂತ ದುಡಿದ ಕನ್ನಡದ

ಸಪ್ತರ್ಷಿಗಳಲ್ಲಿ ಮುದವೀಡು ವೆಂಕಟರಾಯರು ಮತ್ತು ಮುದವೀಡು ಕೃಷ್ಣರಾಯರ ಹೆಸರುಗಳು ಅಗ್ರಪಂಕ್ತಿಯಲ್ಲಿ ಬರುತ್ತವೆ.

ವೃತ್ತಿ - ಪ್ರವೃತ್ತಿಗಳೆರಡರಲ್ಲೂ ಆಲೂರು ವೆಂಕಟರಾಯರಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದವರು ಮುದವೀಡು ವೆಂಕಟರಾಯರು. ಯಾವುದೇ ಕೆಲಸದಲ್ಲಿ ಮುದವೀಡು ವೆಂಕಟರಾಯರು, ಆಲೂರರ ಜೊತೆ ಇದ್ದಾರೆಂದರೆ, ಹತ್ತು ಆನೆಯ ಬಲ ಇದ್ದಂತೆ ಎಂದು ಅವರೂ ಹೇಳುತ್ತಿದ್ದರು. ಅವರನ್ನು ತಾರುಣ್ಯದಲ್ಲಿ ಕಂಡ ಜನರೂ ಹೇಳುತ್ತಿದ್ದರು.

ಮುದವೀಡು ವೆಂಕಟರಾಯರು ಶಕ್ತಿ, ಯುಕ್ತಿ ಮತ್ತು ಪ್ರಸಂಗಾವಧಾನಗಳಿಗೆ ಹೆಸರಾದವರು. ಅಷ್ಟೇ ಧೈರ್ಯ ಮತ್ತು ಸಾಹಸಗಳಿಗೆ ಕೂಡ. ೧೯೨೦ರಲ್ಲಿ ಧಾರವಾಡದಲ್ಲಿ ಪ್ರಥಮ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಲವನ್ನು ಕೂಡಿಸಬೇಕೆಂದು ನಿರ್ಧರಿಸಿತ್ತಷ್ಟೆ. ಹಾಗೆ ಒಂದು ಸಮ್ಮೇಲನವನ್ನು ಕೂಡಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅಂದಿನ ಸಂದರ್ಭದಲ್ಲಿ ಪ್ರವಾಹದ ವಿರುದ್ಧ ತೇಲುವ ಕೆಲಸವಾಗಿತ್ತು. ಕನ್ನಡ ಬಲ್ಲ ಎಲ್ಲ ಪ್ರದೇಶಗಳಿಂದ ಜನರನ್ನು ಸೇರಿಸಬೇಕು. ಬಂದ ಜನರಿಗೆ ಊಟ, ಉಪಚಾರ, ವಸತಿಗಳ ವ್ಯವಸ್ಥೆಯಾಗಬೇಕು. ಅದಕ್ಕೆಲ್ಲ ದುಡ್ಡು ಬೇಕು. ಅದಕ್ಕೆಂದೇ ಭಿಕ್ಷಾಪಾತ್ರೆಯನ್ನು ಹಿಡಿದು ಊರೂರು ತಿರುಗಿದರು ಈ ಜನ. ಗೆಜ್ಜೆ ಕಟ್ಟಿಕೊಂಡು ಶಾಂತಕವಿಗಳು ಕೀರ್ತನೆ ಮಾಡಿ ದುಡ್ಡು ಕೂಡಿಸಿದರೆ ಮುದವೀಡು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು ವೇಷಹಾಕಿ ಅಖಿಲ ಕರ್ನಾಟಕ ರಾಜಕೀಯ ಸಮ್ಮೇಲನಕ್ಕೆ ಹಣ ಸಂಗ್ರಹಿಸಿದರು. ಒಂದು ಕ್ಷಣ ಮೋಜು ಎನಿಸಿದರೂ, ಧಾರವಾಡದಲ್ಲಿಯ ಅಂದಿನ ಹೆಸರಾಂತ ವಕೀಲನೊಬ್ಬ ವೇಷ ತೊಟ್ಟಿದ್ದು ವಿಶಿಷ್ಟವಾಗಿದೆ.

ಮುದವೀಡು ವೆಂಕಟರಾಯರು, ಕಡಪಾ ರಾಘವೇಂದ್ರ ರಾಯರು ಸಮ್ಮೇಲನಕ್ಕಾಗಿ ಹಣ ಸಂಗ್ರಹಿಸಲು ಸಂಚಾರಕ್ಕೆ ಹೊರಟರು. ಅಂದಿನ ಎಂಎಸ್ಎಮ್ ರೈಲುಗಾಡಿಯಲ್ಲಿ ಬೆಂಗಳೂರು ಕಡೆಗೆ ಮುಖ ಮಾಡಿ ಹೊರಟಾಗ ದಾರಿಯಲ್ಲಿ ದಾವಣಗೇರಿಯಲ್ಲಿಒಂದು ನಾಟಕ ಕಂಪನಿಯು ಪ್ರತಿನಿತ್ಯ ಸಕತ್ತಾಗಿ ದುಡ್ಡನ್ನು ಸಂಗ್ರಹಿಸುತ್ತಿದೆ ಎಂದು ತಿಳಿಯಿತು. ಮಂಡಳಿಯ ಒಡೆಯ ಕುಸ್ತಿ ಪ್ರೇಮಿಯಾಗಿದ್ದು ಪೈಲವಾನರಿಗೆ ಧಾರಾಳವಾಗಿ ದುಡ್ಡು ಕೊಡುತ್ತಾನೆ ಎಂದು ಇವರಿಗೆ ತಿಳಿಯಿತು.

ಮುದವೀಡು ಮತ್ತು ಕಡಪಾ ಇಬ್ಬರದು ಭವ್ಯ ಆಕೃತಿಗಳು. ಗರಡಿ ಸಾಧಕರ ಮೈಕಟ್ಟು, ಗಂಭೀರ ಮುಖಮುದ್ರೆ, ಅದಕ್ಕೊಪ್ಪುವ ಮುಖದಲ್ಲಿಯ ಮೀಸೆ, ಸಾಮಾನ್ಯ ನೋಟಕ್ಕೆ ಅವರಿಬ್ಬರೂ ಕುಸ್ತಿ ಪೈಲವಾನರಂತೆಯೇ ಕಾಣುತಿದ್ದರು. ವಿಷಯ ತಿಳಿದೊಡನೆ ದಾವಣಗೆರೆಯಲ್ಲಿಯೇ ಇಳಿದರು. ಪೈಲವಾನರ ವೇಷ ಧರಿಸಿ ನಾಟಕ ನೋಡಲು ಹೊರಟರು. ಟಿಕೆಟ್ಟಿಗಾಗಿ ಸಾಲಿನಲ್ಲಿ ನಿಲ್ಲುವ ಮೊದಲು ಮಂಡಳಿಯ ಮಾಲೀಕನ ಎದುರು ಒಂದೆರಡು ಸಲ ಮೀಸೆ ತಿರುವುತ್ತ ಸುಳಿದರು. ಒಳ್ಳೆಯ

ಠೀವಿಯಲ್ಲಿ ಓಡಾಡುತ್ತಿರುವ ಪೈಲವಾನರನ್ನು ಕಂಡು ಸ್ವಾಭಾವಿಕವಾಗಿಯೇ ಕಂಪನಿಯ ಒಡೆಯನು ಇವರನ್ನು ಕರೆಯಿಸಿಕೊಂಡನು. ಉಭಯ ಕುಶಲೋಪರಿ ಮಾತುಕಥೆಗಳು ನಡೆಯುತ್ತಿದ್ದಂತೆ ಕಂಪನಿಯ ಮಾಲೀಕನು ಇವರಿಗೆ 'ನೀವು ಎಲ್ಲಿಂದ ಬಂದಿರಿ ? ಎಲ್ಲೆಲ್ಲಿ ಕುಸ್ತಿಗಳನ್ನಾಡಿದಿರಿ ?' ಇತ್ಯಾದಿ ಪ್ರಶ್ನೆಗಳನ್ನು ಕೇಳಿದಾಗ ಮುದವೀಡು ವೆಂಕಟರಾಯರು ಹೇಳಿದರಂತೆ. 'ನಮ್ಮದು ಕನ್ನಡದ ಗರಡಿ, ಕರ್ನಾಟಕ ನಮ್ಮ ತಾಲೀಮ ಖಾನೆ' ಎಂದರಂತೆ. ಎಷ್ಟೇ ಕಷ್ಟಪಟ್ಟು ಗಂಭೀರರಾಗಿ ಹೇಳಬೇಕೆಂದರೂ ಹೇಳುವಾಗ ನಗೆ ತಡೆಯಲಾಗಲಿಲ್ಲ. ಆಗ ಉಭಯತರು ಕಂಪನಿ ಮಾಲೀಕನಿಗೆ ಪರಿಷತ್ತಿನ ಉದ್ದೇಶವನ್ನು ವಿವರಿಸಿ ನಿಧಿ ಸಂಗ್ರಹಕ್ಕಾಗಿ ಬಂದವರು ಎಂದು ಹೇಳಿದರಂತೆ.

ಮಂಡಳಿಯ ಒಡೆಯನಿಗೆ ಇನ್ನಿಲ್ಲದ ಸಂತೋಷವಾಯಿತು. ಕಾಲು ಮುಟ್ಟಿ ನಮಸ್ಕರಿಸಿ 'ನಿಮ್ಮಂಥವರು ನಮ್ಮ ನಾಟಕ ನೋಡಲು ಬಂದದ್ದೇ ನಮ್ಮ ಭಾಗ್ಯ' ಎಂದು ಮುಂತಾಗಿ ಹೇಳಿ ನಾಟಕವನ್ನು ನೋಡಲು ರಂಗಮಂದಿರದೊಳಕ್ಕೆ ಕರೆದುಕೊಂಡು ಹೋದನಂತೆ. ನಾಟಕ ಮುಗಿದ ಮೇಲೆ ಇಬ್ಬರಿಗೂ ಪ್ರತ್ಯೇಕವಾಗಿ ಮರ್ಯಾದೆಯನ್ನು ಮಾಡಿ ಪರಿಷತ್ತಿಗಾಗಿ ಸಹಾಯವನ್ನು ಮಾಡಿದನಂತೆ !

ಕನ್ನಡ - ಕರ್ನಾಟಕದ ಬಗ್ಗೆ ಒಲವಿದ್ದಷ್ಟೇ ಮುದವೀಡು ವೆಂಕಟರಾಯರು ರಾಷ್ಟ್ರೀಯ ಚಳುವಳಿಯಲ್ಲೂ ಮುಂಚೂಣಿಯಲ್ಲಿದ್ದರು. ೧೯೨೧ರಲ್ಲಿಯ ಧಾರವಾಡದ ಗೋಳೀಬಾರಿನ ಖಟ್ಲೆಯಲ್ಲಿ ಆರೋಪಿಯಾಗಿ ಮೂರು ವರುಷ ಕಠಿಣ ಶಿಕ್ಷೆಯನ್ನು ಅನುಭವಿಸಿದ್ದು ದೊಡ್ಡ ವಿಷಯವಲ್ಲ. ಆದರೆ ವಿಚಾರಣೆ ನಡೆದಾಗ ದುರಂತಕ್ಕೆ ಮೂಲಕಾರಣವಾದವರನ್ನು ಗುರುತಿಸಲು ಪೋಲೀಸ ಸಬ್ ಇನ್ಸ್‌ಪೆಕ್ಟರನು ಅಪರಾಧಿ ಸ್ಥಾನದಲ್ಲಿ ನಿಂತಿದ್ದ ಮುದವೀಡು ವೆಂಕಟರಾಯರ ಹತ್ತಿರ ಬರತೊಡಗಲು 'ಆ ಕೊಲೆಗಡುಕ ನಮ್ಮ ಸಮೀಪಕ್ಕೆ ಬರುವುದೇ ಬೇಡ ' ಎಂದು (Let not the murderer come near us) ತುಂಬಿದ ಕೋರ್ಟಿನಲ್ಲಿ ದೊಡ್ಡ ದನಿಯಿಂದ ಘರ್ಜಿಸಿದರು. ಕೋರ್ಟಿನಲ್ಲಿ ಇದ್ದವರೆಲ್ಲರೂ ದಂಗು ಬಡಿದರು. ಯುರೋಪಿಯನ್ ಶೆಸೆನ್ಸ ಜಜ್ಜರ್ ಕುರ್ಚಿ ಹೊಯ್ದಾಡಿತು' ಎಂದು ಇವರ ಜೊತೆಯಲ್ಲಿ ಸಹ ಆರೋಪಿಯಾಗಿದ್ದ ದಿವಾಕರ ರಂಗರಾಯರು ಒಂದೆಡೆ ದಾಖಲಿಸಿದ್ದಾರೆ.

''ವೆಂಕಣ್ಣ (ಆಲೂರ) ಹೇಳ್ಯಾನಂದಮ್ಯಾಲ ನಾ ಇಷ್ಟು ಮಾಡದಿದ್ರ ಹ್ಯಾಂಗ'' ಎಂದು ಮುದವೀಡು ವೆಂಕಟರಾಯರು ಹೇಳುತ್ತಿದ್ದುದು ಆಲೂರು ವೆಂಕಟರಾಯರ ಬಗ್ಗೆ ಅವರಿಗಿದ್ದ ಭಕ್ತಿಯ ದ್ಯೋತಕವೇ ಆಗಿದೆ. ೧೯೭೩ರಲ್ಲಿ ನಿಧನರಾದರು. ಮೈಸೂರು ಹೆಸರಿನಲ್ಲಿ ಹೊಸ ರಾಜ್ಯ ರಚನೆಯಾದಾಗ ವೆಂಕಟರಾಯರ ಅಧ್ಯಕ್ಷತೆಯಲ್ಲಿಯೇ ರಾಜ್ಯೋದಯದ ಉತ್ಸವವನ್ನು ಜರುಗಿಸಲಾಯಿತು. ನಿಧನ

ಪೂರ್ವ ರಾಜ್ಯಕ್ಕೆ 'ಕರ್ನಾಟಕ' ಹೆಸರಿಟ್ಟದ್ದನ್ನು ಕೇಳಿದ ಸಪ್ತರ್ಷಿಗಳಲ್ಲಿ ಇವರೊಬ್ಬರೇ!

'ಕನ್ನಡ ನಾಡು - ನುಡಿಯ ಬಗ್ಗೆ ಕಹಳೆ, ನಗಾರಿ, ನೌಬತ್ತು, ರಣಭೇರಿ, ಜಯಭೇರಿ ಎಲ್ಲವನ್ನೂ ಮೊಳಗಿಸಿದ ಧೀರ-ವೀರ ದಿಗ್ಗಜರೆಂದರೆ ಮುದವೀಡು ಕೃಷ್ಣರಾಯರು. '. ಭೀಮಕಾಯ, ಭೀಮ ಶಕ್ತಿ, ಆಕರ್ಷಕ ಮೀಸೆ ಹೊತ್ತ ಮುಖಮುದ್ರೆ ಹೊಂದಿದ ಕೃಷ್ಣರಾಯರು ದಿಗ್ಗಜ ಠೀವಿಗಳಲ್ಲಿಯೇ ನಡೆವವರಾಗಿದ್ದರು. ಆನೆ ನಡೆದದ್ದೇ ದಾರಿ.

ಅವರು ಸಿಂಹಗರ್ಜನೆಗೆ ತೊಡಗಿದರೆಂದರೆ ಸಹಸ್ರಾವಧಿ ಜನರು ಸೂಜಿ ಬಿದ್ದರೂ ಸಪ್ಪಳವಾಗುವಂತೆ ಕುಳಿತು ಕೇಳುತ್ತಿದ್ದರು. ಸಪ್ತರ್ಷಿಗಳಲ್ಲಿ ಕಡಪಾ ಮತ್ತು ಮುದವೀಡು ಕೃಷ್ಣರಾಯರು ಹೆಸರಾಂತ ವಾಗ್ಮಿಗಳಾಗಿದ್ದರು. ಆಲೂರು ವೆಂಕಟರಾಯರ ಮಾತಿನಲ್ಲಿಯೇ ಹೇಳಬೇಕೆಂದರೆ,

''....... ಅವರದು ಅತ್ಯಂತ ತೇಜಸ್ವಿ ಲೆಕ್ಕಣಿಕೆಯು, ಅವರು ಸವ್ಯಸಾಚಿಗಳು ಭಾಷಣದಲ್ಲಿಯೂ ಗಟ್ಟಿಗರು. ಅವರ ಗುಡುಗಿನ ಧ್ವನಿಯು ಅವರು ಸಾಯುವವರೆಗೆ ಉತ್ತರ ಕರ್ನಾಟಕದವರನ್ನಷ್ಟೇ ಅಲ್ಲ ಮೈಸೂರಿನವರನ್ನು ಕೂಡ ಹೊಡೆದೆಬ್ಬಿಸಿತು. ಅವರಂಥ ವಕ್ತಾರರು ಇನ್ನುವರೆಗೆ ಹುಟ್ಟಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು.... ಕರ್ನಾಟಕವನ್ನು ಜಾಗೃತ ಗೊಳಿಸುವವರಲ್ಲಿ ಅವರ ಪಾತ್ರವು ಅದ್ವಿತೀಯವಾಗಿದೆ' ಎಂದಿದ್ದಾರೆ.

ಆಲೂರು ವೆಂಕಟರಾಯರು ಎಳೆಯನ್ನು ಕೊಟ್ಟರೆ ಮುದವೀಡು ಕೃಷ್ಣರಾಯರು ಹಚ್ಚಡವನ್ನು ನೇಯುತ್ತಿದ್ದರು. ಈ ಇಬ್ಬರ ಜೋಡಿ ಕರ್ನಾಟಕದ ಮತ್ತು ಕನ್ನಡದ ಅನೇಕ ಜಟಿಲ ಸಮಸ್ಯೆಗಳನ್ನು ಬಿಡಿಸಲು ಅವಿರತವಾಗಿ ಹೋರಾಡಿತು.

ಸಪ್ತರ್ಷಿಗಳಲ್ಲಿ ಏಳನೆಯವರು ದೇಶಪಾಂಡೆ ನಾರಾಯಣರಾಯರು. ವೃತ್ತಿಯಿಂದ ವಕೀಲರು. ಅಮ್ಮಿನಭಾವಿ ದೇಶಪಾಂಡೆ ಮನೆತನದವರು. ಇದ್ದುಳ್ಳವರು. ವಕೀಲರಾದರೂ ಸುಖವಸ್ತು. ಆಲೂರರ ಪ್ರಭಾವಕ್ಕೆ ಒಳಗಾಗಿ ಇತಿಹಾಸ ಸಂಶೋಧನ ಮಂಡಳದ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರಾಗಿದ್ದರು. ಶಿಲಾಲಿಪಿ ಇದ್ದಲ್ಲಿ ಹೋಗಿ ಮುದ್ರಿಸಿಕೊಂಡು ಬಂದು ಅದನ್ನು ಓದಿ ಹೊಸಗನ್ನಡದಲ್ಲಿ ವಿವರಣೆ ಬರೆಯಲು ನಾ.ಶ್ರೀ. ರಾಜಪುರೋಹಿತರಿಗೆ ತನು, ಮನ ಧನದಿಂದ ನೆರವಾಗುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ವಾಗ್ಭೂಷಣ ಪತ್ರಿಕೆಗಳಲ್ಲಿ ಕನ್ನಡ ಪರ ಲೇಖನಗಳು ಪ್ರಕಟವಾಗಿವೆ.

✤ ✤ ✤ ✤

ಅಧ್ಯಾಯ -೨೬

• ಬಾಗಲಕೋಟೆಯ ಜಯ ವಿಜಯರು

ಬಾಗಲಕೋಟೆಯ ಕನ್ನಡಿಗ ಶ್ರೀನಿವಾಸರಾವ ರಾಜೇರಾವ ಮಂಗಳವೇಢೆ ಮತ್ತು ಜಂಗಿನ ಮುಂಗಯ್ಯನವರನ್ನು ನೆನೆಯದಿದ್ದರೆ ಅಖಂಡ ಕರ್ನಾಟಕದ ಹೆಜ್ಜೆಗಳು ಪೂರ್ಣಗೊಳ್ಳುವುದಿಲ್ಲ. ಇಬ್ಬರೂ ಸರಿಸುಮಾರಾಗಿ ಸಮವಯಸ್ಕರು. ಮುರಗಯ್ಯನವರು ೧೮೮೪ರಲ್ಲಿ ಜನಿಸಿದ್ದರೆ ಶ್ರೀನಿವಾಸರಾಯರು ೧೮೯೭ರಲ್ಲಿ ಹುಟ್ಟಿದ್ದಾರೆ. ಇಬ್ಬರ ದಾರಿಯೂ ಒಂದೇ. ಜೊತೆ - ಜೊತೆಯಾಗಿಯೇ ಕನ್ನಡವನ್ನು ಬೆಳೆಸುತ್ತ, ಕರ್ನಾಟಕವನ್ನು ಕಟ್ಟಲು ಪ್ರಯತ್ನಿಸಿದರು. ವಿಶೇಷವೆಂದರೆ ಇಬ್ಬರೂ 'ಕನ್ನಡ ಭಾಷೆ', ಕರ್ನಾಟಕದ ಏಕೀಕರಣದ ಜೊತೆಗೆ ಉದಯವಾಗುವ ಅಖಂಡ ಕರ್ನಾಟಕದ ವಾಣಿಜ್ಯ ವ್ಯವಹಾರಗಳು, ರೈಲು ಮಾರ್ಗ ಬಂದರುಗಳು ಇತ್ಯಾದಿಯಾಗಿ ಎಲ್ಲೆಡೆ ನಾಡು ಸಂಪೂರ್ಣವಾಗಿ ಅಭಿವೃದ್ಧಿ ಹೊಂದುವ ಕನಸನ್ನು ಕಟ್ಟಿ, ಆ ಕನಸುಗಳು ಸಾಕಾರಗೊಳ್ಳುವಂತೆ ಬಾಗಲಕೋಟೆಯಂಥ ಹಳ್ಳಿಯೂ ಅಲ್ಲದ, ಮಹಾನಗರವೂ ಅಲ್ಲದ ಸ್ಥಳದಲ್ಲಿ ಯೋಜನೆಗಳನ್ನು ರೂಪಿಸಿದರು. ಮತ್ತು ಆ ಯೋಜನೆಗಳು ಕಾರ್ಯಗತವಾಗುವಂತೆ ತಾವೇ ಪ್ರಾರಂಭಿಸಿದರು.

ಮಂಗಳವೇಡು ಶ್ರೀನಿವಾಸರಾಯರು ದೊಡ್ಡಮನೆತನದಿಂದ ಬಂದವರು. ಅವರ ತಂದೆ ಸವಣೂರು ನವಾಬರ ದಿವಾನರಾಗಿದ್ದರು ಎಂದರೆ, ಬಾಯಲ್ಲಿ ಬೆಳ್ಳಿ ಚಮಚೆಯನ್ನೆ ಇಟ್ಟುಕೊಂಡು ಜನಿಸಿದವರು ಶ್ರೀನಿವಾಸರಾಯರು. ಮನಸ್ಸು ಮಾಡಿದ್ದರೆ ಸುಖದ ಸುಪ್ಪತ್ತಿಗೆಯಲ್ಲಿಯೇ ಬೆಳೆದು ಬಾಳಬಹುದಾಗಿತ್ತು. ಅವರ ಅಣ್ಣ ವಿಠಲರಾಯರು ಅಂದಿನ ಬ್ರಿಟಿಷ್ ಸರಕಾರದಲ್ಲಿ ಮಹಾರಾಷ್ಟ್ರದಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಅಣ್ಣ-ತಮ್ಮಂದಿರು ಸವಣೂರಲ್ಲೆ ಬಾಲ್ಯ ಕಳೆದು, ಮುಂದಿನ ವಿದ್ಯಾಭ್ಯಾಸಕ್ಕೆ ಧಾರವಾಡಕ್ಕೆ ಬಂದಾಗ ಅಣ್ಣ ಸುಮ್ಮನೆ ಅಭ್ಯಾಸ ಮಾಡಿ ಪರೀಕ್ಷೆ ಕಟ್ಟಿದರು. ತಮ್ಮ ಶ್ರೀನಿವಾಸ, ಆಲೂರ ವಂಕಟರಾಯರ 'ಸಪ್ತರ್ಷಿ' ಗಳಿಂದ ಪ್ರಭಾವಿತರಾಗಿ ರಾಷ್ಟ್ರೀಯತ್ವ, ಕರ್ನಾಟಕತ್ವಗಳ ಕಡೆಗೆ ವಾಲಿದರು. ೧೯೧೬ರಲ್ಲಿ ಕರ್ನಾಟಕ ಕಾಲೇಜಿನಲ್ಲಿ 'ಕರ್ನಾಟಕ ವಿದ್ಯಾರ್ಥಿ ಬಂಧು ಮಂಡಲ'ವನ್ನು ಸ್ಥಾಪಿಸಿದರು. ಅನಂತರ ಆಲೂರು ವೆಂಕಟರಾಯರಿಂದ ಸ್ಥಾಪಿತವಾದ ಕರ್ನಾಟಕ ಇತಿಹಾಸ ಮಂಡಳದ ಕಾರ್ಯದರ್ಶಿಗಳಾದರು. ಸಾಂಗಲಿಯ ವಿಲ್ಲಿಂಗಡನ್ ಕಾಲೇಜಿಗೆ ಸೇರಿ ಅಲ್ಲಿಂದಲೇ ೧೯೨೦ರ ನಾಗಪುರ ಕಾಂಗ್ರಸ್ ಅಧಿವೇಶನಕ್ಕೆ ಹೋಗಿ ಬಂದರು. ಅಲ್ಲಿ ಗಾಂಧೀಜಿ ಅವರ ಕರೆಯಂತೆ ಕಾಲೇಜು ಬಹಿಷ್ಕಾರಕ್ಕೆ ಕರೆ ಕೊಡುವುದರೊಂದಿಗೆ 'ಸ್ವತಂತ್ರ ಕರ್ನಾಟಕ ಪ್ರಾಂತ'ದ ಕಲ್ಪನೆಯನ್ನು ತಲೆಯಲ್ಲಿ ಹಾಕಿಕೊಂಡು ಬಂದರು. ಕಾಲೇಜು ಬಹಿಷ್ಕಾರದ ಪ್ರಚಾರ

ಮಾಡಿದ್ದಕ್ಕಾಗಿ ಕಾಲೇಜಿನಿಂದ ಹೊರಹಾಕಿಸಿಕೊಂಡರು. ಅಲ್ಲಿಂದ ನೇರವಾಗಿ ಬಾಗಲಕೋಟೆಗೆ ಬಂದರು. ಮುಂದಿನ ದಿನಗಳಲ್ಲಿ ಬಾಗಲಕೋಟೆ ಅವರ ಕಾರ್ಯಕ್ಷೇತ್ರವಾಯಿತು.

೧೯೨೧ರಲ್ಲಿ ಬಾಗಲಕೋಟೆಯಲ್ಲಿ ವಿದ್ಯಾರಣ್ಯ ಮುದ್ರಣಾಲಯವನ್ನು ಸ್ಥಾಪಿಸಿ 'ಕನ್ನಡ ನವಜೀವನ' ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಒಂದು ವರುಷ ನಡೆಯಿತು. ಪತ್ರಿಕೆಯಲ್ಲಿಯ ಬರಹಗಳಿಂದ ಬಿಜಾಪುರ ಜಿಲ್ಲಾಧಿಕಾರಿಯು ಕೆರಳಿ ಪತ್ರಿಕೆಯನ್ನು ಸ್ಥಗಿತಗೊಳಿಸಿದನು. ಅದೇ ಸಂದರ್ಭದಲ್ಲಿಯೇ ಗಾಂಧೀಜಿಯವರ ಗುಜರಾತಿ 'ನವಜೀವನ' ಪತ್ರಿಕೆಯೂ ಸ್ಥಗಿತಗೊಂಡಿತು. ಅದು ನಡೆದದ್ದು ೧೯೨೨ರ ನವೆಂಬರಿನಲ್ಲಿ.

ಆಗಲೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಪಕ್ಷದ ಕೆಲಸಗಳು ಚುರುಕುಗೊಂಡಿದ್ದವು. ಒಂದು ವರುಷದ ಅಂತರದಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಆಮಂತ್ರಣವನ್ನು ಕೊಡಲಾಗಿತ್ತು. ಆ ಸಂದರ್ಭದಲ್ಲೆ ಕರ್ನಾಟಕ ಏಕೀಕರಣದ ಪ್ರಥಮ ಪರಿಷತ್ತನ್ನು ನಡೆಸಬೇಕೆಂಬ ಸಂಕಲ್ಪದಲ್ಲಿ ಶಂ ಬಾ ಜೋಶಿ, ಕಡಪಾ ರಾಘವೇಂದ್ರ ರಾಯರ ಜೊತೆಯಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನದೊಂದಿಗೆ ಕರ್ನಾಟಕ ಏಕೀರಣ ಮೊದಲ ಪರಿಷತ್ತನ್ನು ಕಟ್ಟಿ ಅದರೊಂದಿಗೆಯೇ ಯಶಸ್ವಿಯಾಗಿ ಜರುಗಿಸಿದರು. ಆ ದಿನಗಳಲ್ಲೆ ಶಂಬಾ ಜೋಶಿ ಅವರೊಂದಿಗೆ ಮಂಗಳವೇಡು ಶ್ರೀನಿವಾಸರಾಯರು ಕರ್ನಾಟಕ ಏಕೀಕರಣ ಸಭೆಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಏಕೀಕರಣದ ಮುಖಪತ್ರವೆಂದು, ಬಾಗಲಕೋಟೆಯಲ್ಲಿ ದಿನಾಂಕ ೨೫-೩-೧೯೨೫ರಿಂದ 'ಕನ್ನಡಿಗ' ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಐದು ವರುಷಗಳ ನಂತರ ೨-೧-೧೯೩೦ರಿಂದ ಅದನ್ನು ವಾರಕ್ಕೆ ಎರಡು ಬಾರಿ ಹೊರಡುವ ಪತ್ರಿಕೆಯನ್ನಾಗಿ ಮಾಡಿದರು.

'ಕನ್ನಡಿಗ' ಪತ್ರಿಕೆಯನ್ನು ಪ್ರಾರಂಭಿಸಲು ಕಾರಣಗಳನ್ನು ಅವರೆ ಒಂದೆಡೆ ಹೀಗೆ ಹೇಳಿದ್ದಾರೆ.

''ಕರ್ನಾಟಕತ್ವ'' ರಾಷ್ಟ್ರೀಯತ್ವಕ್ಕೆ ವಿರುದ್ಧ ಎಂಬ ಕೆಲವರ ಅಭಿಪ್ರಾಯಕ್ಕೆ ಉತ್ತರ ನೀಡಲೆಂದು 'ಕನ್ನಡಿಗ' ವಾರ ಪತ್ರಿಕೆಯನ್ನು ೧೯೨೫ರಿಂದ ಆರಂಭಿಸಿ 'ಎಲ್ಲಿ ನೋಡಿದರಲ್ಲಿ ಮಹಾರಾಷ್ಟ್ರದ ಕೀರ್ತಿ, ಎಲ್ಲಿ ನೋಡಿದರಲ್ಲಿ ಮಹಾರಾಷ್ಟ್ರದ ಧರ್ತಿ'' ಎಂಬ ಶಾಂತಕವಿಗಳ ವೇದನೆಗೆ ಉತ್ತರವಾಗಿ,

'ಎದ್ದರೆ ಕನ್ನಡ, ಕುಳಿತರೆ ಕನ್ನಡ, ನುಡಿದರೆ ಕನ್ನಡವು ।
ಹೃದ್ಯವು ಕನ್ನಡ, ಉದ್ಯಮ ಕನ್ನಡ, ಕನ್ನಡ ಕನ್ನಡವು ॥
ಕನಸು ಮನಸಿನೊಳು ಕನ್ನಡ, ಕನ್ನಡ, ನಿದ್ದೆಯು ಕನ್ನಡವು ॥
ತಿನಿಸು ಕನ್ನಡವು ಜೀವಿತ ಕನ್ನಡ - ಎಲ್ಲವೂ ಕನ್ನಡವು ॥

ಎಂ೬. ಸಗರ ಕವಿಯ ನುಡಿಯೊಂದನ್ನು ಎತ್ತಿಕೊಂಡು ಪತ್ರಿಕೆಯ ಶಿರೋಲೇಖವಾಗಿ ಮಾಡಲು ಪತ್ರಿಕೆ ಆರಂಭವಾದ ಒಂದು ತಿಂಗಳಲ್ಲೇ ಈ ಹಾಡು ಮನೆ - ಮನೆಗಳಲ್ಲಿ ಪ್ರತಿಧ್ವನಿಸಿತು. 'ಕನ್ನಡಿಗ' ಎಂಬ ಹೆಸರಿನಿಂದಲೇ ನನ್ನನ್ನು ಕರೆಯಲು ಪ್ರಾರಂಭಿಸಿದರು'' ಎಂದು ಹೇಳಿದ್ದಾರೆ.

ಡಾ. ರಂ.ಶ್ರೀ ಮುಗಳಿ, ಸ.ಸ. ಮಾಳವಾಡ, ಕೃಷ್ಣಮೂರ್ತಿ ಪುರಾಣಿಕ, ಸಿಂಪಿ ಲಿಂಗಣ್ಣ ಮೊದಲಾದ ಅಂದಿನ ಅನೇಕ ಲೇಖಕರು 'ಕನ್ನಡಿಗ' ವೇ ತಮ್ಮ ಸಾಹಿತ್ಯ ಸೇವೆಗೆ ಅನುವು ಮಾಡಿಕೊಟ್ಟ ಪತ್ರಿಕೆ ಯೆಂದು ಸಾರ್ವಜನಿಕವಾಗಿಯೆ ಹೇಳಿ ಕೊಂಡಿದ್ದಾರೆ. ಅನಕೃ, ಹೊಯ್ಸಳ , ಬೇಲೂರು ಕೇಶವದಾಸ, ಸಿದ್ದವನಹಳ್ಳಿ ಕೃಷ್ಣಶರ್ಮ, ಟಿ.ಟಿ. ಶರ್ಮ ಮೊದಲಾದ ಬೆಂಗಳೂರು ಕಡೆಯ ಲೇಖಕರೂ ಕನ್ನಡಿಗದಲ್ಲಿ ಬರೆಯುತ್ತಿದ್ದರು. ಹೈದರಾಬಾದಿನ ಚಿಮ್ಮಲಗಿ, ಮದ್ರಾಸಿನ ಬೆನಗಲ್ ರಾಮರಾವ್, ಮಂಗಳೂರಿನ ಜಿನರಾಜ ಹೆಗಡೆ, ಉಡುಪಿಯ ಫಣಿಯಾಡಿ ಇವರೆಲ್ಲ ಪತ್ರಿಕೆಗೆ ಆತ್ಮೀಯ ಬೆಂಬಲ ನೀಡಿದವರು. ಕನ್ನಡ, ಕರ್ನಾಟಕ ಇವುಗಳ ಬಗ್ಗೆ ಅಂದಿನ ಧಿನಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳೆಂದರೆ , ಬಿಜಾಪುರದಿಂದ 'ಕರ್ನಾಟಕ ವೈಭವ' ಬಾಗಲಕೋಟೆಯಿಂದ 'ಕನ್ನಡಿಗ' ಇವೆರಡೇ ಪತ್ರಿಕೆಗಳಾಗಿದ್ದವು.

ಆಲೂರು ವೆಂಕಟರಾಯರು, ಬೇಂದ್ರೆ ದತ್ತರಾಯರು ಮುದವೀಡು ಕೃಷ್ಣರಾಯರು, ಮಧುರಚೆನ್ನ, ಕೊಣ್ಣೂರ ಹಣಮಂತರಾವ್ ಮೊದಲಾದವರೂ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು.

ಕಾಯಿದೆ ಭಂಗ ಚಳುವಳಿಯ ತಾಜಾ ಸುದ್ದಿಗಳನ್ನು ಪ್ರಕಟಿಸಲು ಅಸೋಸಿಯೇಟ್ ಪ್ರೆಸ್(AP)ನ ಸಂಕ್ಷಿಪ್ತ ತಂತಿಗಳು (Vernacular Summery Service) 'ಕನ್ನಡಿಗ' ಪತ್ರಿಕೆಗೆ ದೊರೆವಂತೆ ದಿನಾಂಕ ೨೨-೩-೧೯೩೦ರಿಂದ ವ್ಯವಸ್ಥೆ ಮಾಡಿದಾಗ ಕರ್ನಾಟಕದಲ್ಲಿ ಆ ರೀತಿಯ ವ್ಯವಸ್ಥೆಯನ್ನು ಹೊಂದಿದ ಏಕೈಕ ಪತ್ರಿಕೆ ಎನಿಸಿತು. ಮುಂದೆ ನಾಲ್ಕು ದಿನಗಳಲ್ಲಿ ೨೭-೩-೧೯೩೦ರಿಂದ ಸರಕಾರಿ ಆದೇಶದಂತೆ ಪತ್ರಿಕೆಯನ್ನು ನಿಲ್ಲಿಸಿ ಜೇಲಿಗೆ ಹೋದರು. ಜೇಲಿನಿಂದ ಬಿಡುಗಡೆಯಾಗಿ ತಿರುಗಿ ಬಂದು ೨೧-೩-೧೯೩೧ರಿಂದ ದೈನಿಕವಾಗಿ ಕನ್ನಡಿಗ ಪುನರುಜ್ಜೀವನ . ಎರಡು ವರುಷಗಳ ನಂತರ ಧಾರವಾಡಕ್ಕೆ ಸ್ಥಳಾಂತರ. ೨೪-೮-೧೯೩೩ರಿಂದ ಆಲೂರು ವೆಂಕಟರಾಯರ ಸಂಪಾದಕತ್ವದಲ್ಲಿ ಪ್ರಕಟವಾಗತೊಡಗಿತು. ಮುಂದೆ ಮೂರು ತಿಂಗಳಲ್ಲಿ ೨೫-೧೧-೧೯೩೩ರಂದು ಸಂಯುಕ್ತ-ಕರ್ನಾಟಕ ದಿನಪತ್ರಿಕೆ ಆರಂಭವಾದಾಗ ಅದರಲ್ಲಿ 'ಕನ್ನಡಿಗ' ಲೀನವಾಯಿತು. ಎಷ್ಟೋ ವರುಷ ಸಂಯುಕ್ತ -ಕರ್ನಾಟಕ ಪತ್ರಿಕೆಯು 'ಕನ್ನಡಿಗ'ದೊಂದಿಗೆ ಎಂದೇ ಪ್ರಕಟವಾಗುತ್ತಿತ್ತು.

''...... ಕರ್ನಾಟಕ ರಾಜ್ಯ ಅಸ್ತಿತ್ವದಲ್ಲಿ ಬಂದ ಮೇಲೆ ಅದರ ಬಗ್ಗೆ ಶ್ರೇಯಸ್ಸಿಗೆ ಪಾತ್ರರು 'ಕರ್ನಾಟಕದ ಶಿಲ್ಪಿಗಳು' ಎಂದು ಎಷ್ಟು ಜನ ಮಂತ್ರಿಗಳು ಹೇಳಿಸಿಕೊಂಡಿಲ್ಲ ? ಆದರೆ ಇಂದಿಗೆ ಐವತ್ತು ವರುಷಗಳಿಂದ ಆ ಕನಸನ್ನು ಕಟ್ಟಿಕೊಂಡು ಸತತವಾಗಿ

ಅದೇ ವಿಚಾರದಿಂದ, ಎಲ್ಲ ವಿಧಗಳಿಂದ ಪ್ರಯತ್ನ ಮಾಡುತ್ತಿದ್ದವರು ಶ್ರೀನಿವಾಸರಾಯರು (ಮಂಗಳವೇಢೆ) ಎಂದು ಎಷ್ಟು ಜನರಿಗೆ ಗೊತ್ತಿದೆ? ಆ ಪ್ರಯತ್ನಕ್ಕಾಗಿ ಎಂತಹ ತರದಿಂದ ಬಡತನ ಕಷ್ಟಗಳನ್ನು ಅವರು ಸಹಿಸಿದರೋ ಅದನ್ನೇ ಕರ್ನಾಟಕ ರಾಜ್ಯವಾದ ೨೪ ವರುಷಗಳ ನಂತರವೂ (ಅವರು ೪-೧೨-೮೦ರಂದು ನಿಧನರಾಗುವವರೆಗೂ) ಅವರು ಸಹಿಸಬೇಕಾಯಿತು'' ಎಂದಿದ್ದಾರೆ ಖ್ಯಾತ ನಾಟಕಕಾರ ವೈಚಾರಿಕ ಬರಹಗಾರ ಶ್ರೀರಂಗ ಅರ್ಥಾತ್ ಪ್ರೊ. ಆರ್.ವಿ. ಜಹಗೀರದಾರರು.

ಮಂಗಳವೇಢೆ ಶ್ರೀನಿವಾಸರಾಯರ ವ್ಯಕ್ತಿತ್ವ ಅಂಥದ್ದಿತ್ತು. ಕನ್ನಡ, ಕರ್ನಾಟಕ ಇವುಗಳ ಬಗ್ಗೆ ಶ್ರೀರಂಗರಂಥವರಲ್ಲಿ ಆಸಕ್ತಿಯನ್ನು ಹುಟ್ಟಿಸಿ ಅದಕ್ಕಾಗಿ ದುಡಿಯಲು ಹಚ್ಚಿದರು. ಅದಕ್ಕೆಂದೇ ಶ್ರೀರಂಗರು 'ಮಂಗಳವೇಢೆ' ಶ್ರೀನಿವಾಸರಾಯರು (ಈ ವಿಷಯದಲ್ಲಿ) ನನ್ನ ಗುರುಗಳು ಎಂದಿದ್ದಾರೆ. ಮಹಾರಾಷ್ಟ್ರದಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಇಂಗ್ಲೆಂಡಿನಲ್ಲಿ ಮೂರು ವರುಷ ಕಳೆದು ಧಾರವಾಡದ ಕಾಲೇಜಿನಲ್ಲಿ ಸಂಸ್ಕೃತವನ್ನು ಕಲಿಸುತ್ತಿದ್ದ ಶ್ರೀರಂಗರಿಗೆ ಕನ್ನಡದಲ್ಲಿ ಆಸಕ್ತಿಯೇ ಇರಲಿಲ್ಲ. 'ಕರ್ನಾಟಕತ್ವದ ಕಲ್ಪನೆಯೇ ಇದ್ದಿರಲಿಲ್ಲ' ಎಂದು ಅವರೆ ಹೇಳಿಕೊಂಡಿದ್ದಾರೆ. ಅವರೆ ಮುಂದೆ ಕರ್ನಾಟಕ ಏಕೀಕರಣದ ವಿಷಯದಲ್ಲಿ ಮುಂಚೂಣಿಯಲ್ಲಿದ್ದು ದೆಹಲಿವರೆಗೂ ಹೋಗಿ ಹೋರಾಡಿದರು. ಅವರಿಗೆ ಪ್ರೇರಕ ಶಕ್ತಿಯಾಗಿದ್ದವರು ಮಂಗಳವೀಡು ಶ್ರೀನಿವಾಸರಾಯರು.

ಕರ್ನಾಟಕ ಪ್ರಾಂತ ನಿರ್ಮಾಣ, ಕನ್ನಡದ ಬೆಳವಣಿಗೆ ಇವೆರಡರ ಹೊರತು ಅವರಿಗೆ ಬೇರೆ ವಿಷಯಗಳೇ ಇದ್ದಿರಲಿಲ್ಲ. ಅಂದಿನ ಕಾಲದಲ್ಲಿ 'ಇವೆರಡೂ ಶುದ್ಧ ಕನಸುಗಳು' ಎಂದು ಹಿರಿತನದ ನಗೆಯಿಂದಲೇ ಎಲ್ಲರೂ ಅವರ ಮಾತುಗಳನ್ನು ಕೇಳುತ್ತಿದ್ದರು. ಅವರ ವ್ಯಂಗ್ಯಗಳಿಂದಾಗಲಿ, ಇಂತಹ ಪ್ರತಿಕ್ರಿಯೆಗಳಿಂದಾಗಲೀ ಅವರಿಗೆ ಎಂದೂ ನಿರಾಶಾಭಾವ ಬರಲಿಲ್ಲ. 'ಇಂದಲ್ಲ ನಾಳೆ ಇದು ಶಕ್ಯ' ಎಂಬ ಆತ್ಮ ವಿಶ್ವಾಸ ಅವರಲ್ಲಿತ್ತು. ಆದರೆ ಅದಕ್ಕಾಗಿ ಒಂದು ಕ್ರಮಬದ್ಧ ಯೋಜನೆಯಿಂದ ದುಡಿಯಬೇಕು ಎಂದು ನಿರ್ಧರಿಸಿಕೊಂಡಿದ್ದರು. ಅಂತೆಯೇ ಅವರು ಕೂಸು ಹುಟ್ಟುವುದಕ್ಕಿಂತ ಮೊದಲು ಕುಲಾವಿ ಹೊಲಿಸಿದಂತೆ ಅಂದಿನಿಂದಲೇ ಕರ್ನಾಟಕದ ರೇಲ್ವೆ, ಕರ್ನಾಟಕದ ನೈಸರ್ಗಿಕ ಸಂಪತ್ತು, ಕರ್ನಾಟಕದ ಕರಾವಳಿ, ಕರ್ನಾಟಕದ ಪ್ರಾಚೀನ ವೈಭವ ಇವುಗಳ ಬಗ್ಗೆ ಆಯಾ ವಿಷಯಗಳನ್ನು ಬಲ್ಲವರಿಂದ ಅಭ್ಯಾಸಯುಕ್ತವಾದ ಲೇಖನಗಳನ್ನು ಬರೆಯಿಸುತ್ತಿದ್ದರು. ತಮ್ಮ ಖರ್ಚಿನಿಂದ ಪ್ರವಾಸ ಮಾಡಿ ಸಾಹಿತಿಗಳನ್ನು, ಇತಿಹಾಸ ಸಂಶೋಧಕರನ್ನು, ಅರ್ಥಶಾಸ್ತ್ರಜ್ಞರನ್ನು ಕಂಡು ಅವರಿಂದ ಕರ್ನಾಟಕದ ಕುರಿತಾದ ಲೇಖನಗಳನ್ನು ಬರೆಯಿಸುವಲ್ಲಿ ಹುರಿದುಂಬಿಸು ತ್ತಿದ್ದರು. ಅಂಥವರಲ್ಲಿ ಕೃಷ್ಣ ಕುಮಾರ ಕಲ್ಲೂರರ ಹೆಸರನ್ನು ಹೇಳಬೇಕು. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗಾಗಿ ಅಂಕಿ - ಸಂಖ್ಯೆಗಳೊಂದಿಗೆ ರಾಜ್ಯ ಉದಯವಾಗುವ

ಮೊದಲೆ ಮತ್ತು ಆನಂತರ ಹಲವಾರು ಲೇಖನಗಳನ್ನು ಬರೆದರು. ಅದಕ್ಕೆ ಪ್ರಾರಂಭದಲ್ಲಿ ಮಂಗಳವೇಢೆ ಅವರೆ ಪ್ರೇರಕ ಶಕ್ತಿಯಾಗಿದ್ದರು.

ಕನ್ನಡಿಗರ ಮತ್ತು ಕರ್ನಾಟಕತ್ವದ ಹಿತಾಸಕ್ತಿಗಳನ್ನು ಕಾಪಾಡಲು ಮಂಗಳವೇಢು ಶ್ರೀನಿವಾಸರಾಯರು ಮತ್ತು ಜಂಗಿನ ಮುರಗಯ್ಯನವರು ಜೊತೆಯಾಗಿ ಜಯ - ವಿಜಯರಂತೆ ದ್ವಾರಕಾಪಾಲರಾಗಿ ಹಲವಾರು ದಶಕಗಳ ಕಾಲ ಕಾರ್ಯ ಮಾಡಿದ್ದು ಇಂದಿನ ದಿನಗಳಲ್ಲಿ ಅಚ್ಚರಿಯಾಗಿ ಕಾಣುತ್ತದೆ. ಆದರೆ ಅಂದು ಅವರು ಹಾಗೆ ಕರ್ನಾಟಕ, ಕರ್ನಾಟಕತ್ವ, ಕನ್ನಡ ಭಾಷೆ ಇತ್ಯಾದಿಗಳನ್ನು ಜಂಗಿನ ಮುರಗಯ್ಯನವರೊಡನೆ ಮಾಡುತ್ತಿದ್ದುದು ಅರ್ಥವತ್ತಾಗಿತ್ತು. ಯಾಕೆಂದರೆ ಅಂದಿನ ದಿನಗಳಲ್ಲಿ ಬ್ರಾಹ್ಮಣ - ವೀರಶೈವ ಎಂಬ ಭೇದವು ಅದೇ ಆಗ ತಲೆ ಎತ್ತ ಹತ್ತಿತ್ತು.

ಡೆಪ್ಯೂಟಿ ಚೆನ್ನಬಸಪ್ಪ, ಗಂಗಾಧರ ಮಡಿವಾಳೇಶ್ವರ ತುರಮರಿ ಮೊದಲಾದ ಅನೇಕ ಬ್ರಾಹ್ಮಣೇತರರು ಬಹು ಮೊದಲಿನಿಂದಲೇ ಕನ್ನಡ ಭಾಷೆ, ಸ್ವತಂತ್ರ ಕರ್ನಾಟಕ ರಾಜ್ಯ ಇತ್ಯಾದಿಗಳ ಅಗತ್ಯವನ್ನು ಒತ್ತಿ ಹೇಳುತ್ತಿದ್ದರು. ನಾಡು-ನುಡಿಗಳ ಬಗ್ಗೆ ಈ ಜನರು ಅವಿರತ ಶ್ರಮ ಪಟ್ಟರು ಎಂದು ಜನಮಾನಸದಲ್ಲಿ ಬೆರೆಯುತ್ತಿದ್ದರು. ಆದರೆ ರಾಜಕೀಯವಾಗಿ ಭಾರತದ ಸ್ವಾತಂತ್ರ್ಯ ಸಮರವನ್ನು ನಡೆಸಿದ ಕಾಂಗ್ರೆಸ್ ಪಕ್ಷದಲ್ಲಿ ಬ್ರಾಹ್ಮಣೇತರರು ಸೇರಲು ಇನ್ನೂ ಮನಸ್ಸು ಮಾಡಿರಲಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ಸಿನ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದ್ದರೂ ೧೯೩೦ರ ವರೆಗೂ ಬ್ರಾಹ್ಮಣೇತರರಲ್ಲಿಯ ಅನೇಕರ ಬೆಂಬಲ ಅದಕ್ಕೆ ಸಿಕ್ಕಿರಲಿಲ್ಲ.

ಭಾರತದ ಸ್ವಾತಂತ್ರ್ಯ ಚಳುವಳಿಗೆ ವೇದಿಕೆಯಾಗಿದ್ದಂತೆ ಕನ್ನಡ ಮತ್ತು ಕರ್ನಾಟಕಕ್ಕೂ ಕಾಂಗ್ರೆಸ್ ವೇದಿಕೆಯಾಗಿತ್ತು. ಆಳುವ ಅರಸರ ಎದುರು ನಮ್ಮ ಬೇಡಿಕೆಗಳನ್ನು ಇಡುವಲ್ಲಿ ಕಾಂಗ್ರೆಸ್ಸಿನ ಮುಖಾಂತರವೇ ಅದು ಸಾಧ್ಯವಾಗುತ್ತಿತ್ತು. ರಾಷ್ಟ್ರ ರಾಜಕೀಯದ ಮುಖ್ಯ ವಾಹಿನಿಯಲ್ಲಿ ಬ್ರಾಹ್ಮಣೇತರರು ಸೇರುವುದು ಅನಿವಾರ್ಯವಾಗಿತ್ತು.

ಅಂತೆಯೇ ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಜೊತೆಗೆಯೇ ಕರ್ನಾಟಕ ಏಕೀಕರಣ ಪರಿಷತ್ತು ನಿರ್ಮಾಣವಾಗಿ ಅದರ ಅಧ್ಯಕ್ಷತೆಯನ್ನು ಕಂಬಳಿ ಸಿದ್ಧಪ್ಪನವರು ವಹಿಸುವಂತೆ ನೋಡಿಕೊಂಡವರು ಮಂಗಳವೇಢು ಶ್ರೀನಿವಾಸರಾಯರು. ಅದರ ಕಾರ್ಯದರ್ಶಿಗಳಾಗಿ ತಾವು ಮತ್ತು ಶಂಬಾ ಜೋಷಿ ಮುಂದುವರಿದರು.

೧೯೩೦ರ ಮೇ ತಿಂಗಳಲ್ಲಿ ಬೆಳಗಾವಿಯಲ್ಲಿ ಬ್ರಾಹ್ಮಣೇತರ ಪರಿಷತ್ತು ಸೇರಿತ್ತು. ಅದರ ಅಧ್ಯಕ್ಷತೆಯನ್ನು ಹೊಸಮನಿ ಸಿದ್ಧಪ್ಪನವರು ವಹಿಸಿದ್ದರು. ಆ ಪರಿಷತ್ತಿನಲ್ಲಿ ಇಡೀ ಸಮಾಜದ ಬೆಂಬಲವನ್ನು ಪಡೆದು ಕಾಂಗ್ರೆಸ್ಸಿನಲ್ಲಿ ಸೇರಿಬಿಡುವುದೆಂದು ನಿರ್ಧರಿಸಿದರು. ೧೯೩೦ರ ಚಳುವಳಿಯಲ್ಲಿ ಬ್ರಾಹ್ಮಣೇತರರ ಅನೇಕ ತರುಣರು ಮತ್ತು ಪದವೀಧರರು ಸತ್ಯಾಗ್ರಹ ಮಾಡಿ ಸೆರೆಮನೆಯನ್ನು ಸೇರಿದರು.

ಶ್ರೀನಿವಾಸರಾಯರು ತಮ್ಮ ಜೀವನದುದ್ದಕ್ಕೂ ಈ ದಿಶೆಯಲ್ಲಿ ತುಂಬ ಮಾದರಿಯಾಗಿ ಕೆಲಸ ಮಾಡಿದರು. ಬ್ರಾಹ್ಮಣ ಮತ್ತು ವೀರಶೈವ ವರ್ಗಗಳ ಶ್ರೀನಿವಾಸರಾಯರು ಮತ್ತು ಮುರಗಯ್ಯನವರು ಒಂದು ಉದ್ದೇಶಕ್ಕೆ ಒಂದೆಡೆ ಸೇರಿ ಜೀವಮಾನವಿಡೀ ಶ್ರಮಿಸಿದರು. ಅದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಅದು ಭವಿಷ್ಯದ ಕರ್ನಾಟಕದ ಹಿತಕ್ಕಾಗಿ ಅವರಿಬ್ಬರೂ ತೋರಿಸಿಕೊಟ್ಟ ದಾರಿಯಾಗಿತ್ತು. ಅದು ಯಾವುದೊಂದು ವಿಶಿಷ್ಟ ವರ್ಗದ ಅನುಕೂಲಕ್ಕಾಗಿ ಇರಲಿಲ್ಲ. ಮುಂದಿನ ದಿನಗಳಲ್ಲಿ ೧೯೪೪ರಲ್ಲಿ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತಿನ ಜೀರ್ಣೋದ್ಧಾರವಾಗಿ ಶ್ರೀರಂಗರು ಉಪಾಧ್ಯಕ್ಷರಾಗಿದ್ದಾಗ ಕಾರ್ಯಕಾರಿ ಮಂಡಳಿಯಲ್ಲಿ ಬ್ರಾಹ್ಮಣ, ವೀರಶೈವ, ಮುಸಲ್ಮಾನ, ಜೈನ, ಕಾಂಗ್ರೆಸ್ಸಿಗ, ಕಾಂಗ್ರೆಸ್ಸೇತರ ಎಲ್ಲರನ್ನೂ ಸೇರಿಸುವಲ್ಲಿ ಶ್ರೀನಿವಾಸರಾಯರ ಪಾತ್ರ ಹಿರಿದಾಗಿತ್ತು.

ಕರ್ನಾಟಕ ಏಕೀಕರಣದ ಹುಚ್ಚು ಅವರ ತಲೆಗೆ ಎಷ್ಟೊಂದು ಹತ್ತಿತ್ತೆಂದರೆ, ಅವರು ಯಾರ ಮನೆಗಾದರೂ ಹೋದರೆ ಆ ದಿನಗಳಲ್ಲಿ ಮನೆಯ ಮಕ್ಕಳು 'ಏಕೀಕರಣ ಬಂತು' ಎನ್ನುತ್ತಿದ್ದರೆ, ಮನಯಣ್ಣ ಹಿರಿಯಣ್ಣ ಮೊದಲಾದವರು 'ಏಕೀಕರಣ ಎಲ್ಲಿ ? ಎಂದು ಇವರ ಬಗ್ಗೆ ಕೇಳುತ್ತಿದ್ದರು.

ಶ್ರೀನಿವಾಸರಾಯರ ಒಂದು ದೊಡ್ಡ ಗುಣವೆಂದರೆ, ನಿಸ್ವಾರ್ಥ ಸೇವಾಸಕ್ತಿಯೇ ಆಗಿತ್ತು. ಪ್ರತಿಫಲದ ಅಪೇಕ್ಷೆ ಎಳ್ಳಷ್ಟೂ ಇರಲಿಲ್ಲ. ಜೊತೆಗಾರರ ಕೆಲಸಗಳನ್ನು ಮೆಚ್ಚಿ ಅವರು ತಮಗಿಂತ ಒಳ್ಳೆಯವರೇನೋ ಎನಿಸುವಂತೆ ನಡೆದು ಕೊಳ್ಳುತ್ತಿದ್ದರು.

ಇರುವಾಗ ಅವರ ಕೆಲಸದ ಮಹತ್ವವನ್ನು ಅರಿಯಲಿಲ್ಲ. ''ಅವರ ಪ್ರಾರಂಭಿಕ ಕೆಲಸವನ್ನು ಮನ್ನಿಸಿ ಅವರ ಹೆಸರನ್ನು ಉಳಿಯುವಂತೆ ಯೋಗ್ಯ ಸ್ಮಾರಕವನ್ನು ಕಟ್ಟಲಿಲ್ಲ. ಕರ್ನಾಟಕದ ಜನರಲ್ಲಿ ಒಬ್ಬರಾದ ಅವರು ತೀರಾ ಸಾಮಾನ್ಯ ಸ್ಥಿತಿಯಲ್ಲಿ, ಯಾವ ಅಧಿಕಾರ, ಪಟ್ಟಗಳನ್ನೂ ಪಡೆಯದೆ ತೀರಿ ಹೋದರು. ಅದೆಲ್ಲ ಬಿಡಿ. ಆದರೆ ಅವರ ಆತ್ಮಕ್ಕೆ ಶಾಂತಿ ದೊರೆಯಬೇಕಾದರೆ ಕಾಸರಗೋಡು, ಆದವಾನಿ, ಆಲೂರು, ರಾಯದುರ್ಗ, ಅಕ್ಕಲಕೋಟೆ, ಜತ್ತಿ ಮೊದಲಾದ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕು. ಕರ್ನಾಟಕದ ಉದ್ದಿಮೆ ಕನ್ನಡಿಗರ ಕೈಯಲ್ಲಿ ಬರಬೇಕು. ಕನ್ನಡವು ನಖ-ಶಿಖಾಂತ ಆಡಳಿತ ಭಾಷೆಯಾಗಬೇಕು. ಕರ್ನಾಟಕದ ಬಂದರುಗಳು ಮತ್ತು ರೇಲ್ವೆಗಳ ವಿಸ್ತಾರವಾಗಬೇಕು. 'ಅಲ್ಲಿಯ ವರೆಗೂ ಅವರ ಆತ್ಮಕ್ಕೆ ತಾಳ್ಮೆಯನ್ನು ಕೋರಬೇಕಾಗಿದೆ.'

''ಸಮಾಜ ಅಂದರೆ, ಬಿತ್ತಲಾರದ ಹೊಲಾ ಇದ್ದಾಂಗ ; ಅದನ್ನ ಸೇವಾ ಭಾವದಿಂದ ಬಿತ್ತಿದ್ರ ಬೆಳೆಯೂ ಚಲೋ ತಕ್ಕೋಳಾಕ ಬರ್ತದ. ಇಲ್ಲದಿದ್ದರ ಅದು ಬಂಜರ ಬಿದ್ದು ಬರ ಭೂಮಿ ಆಗ್ತದ. ಅದಕ್ಕ ವಯಸ್ಸಿನ ಮಿತಿ ಇಲ್ಲ. ಗಳೇ

ಹೂಡೋದು ಬೆಳಿ ತಕ್ಕೋಳ್ಳೋದು''

ಅವಿಭಜಿತ ಬಿಜಾಪುರ ಜಿಲ್ಲೆಯ ಬೀಳಗಿ ತಾಲೂಕಿನ ಕುಗ್ರಾಮ ಹಳ್ಳಿ, ಘಟಪ್ರಭೆಯ ದಂಡೆಯ ಅನಗವಾಡಿಯಲ್ಲಿ ಹುಟ್ಟಿದ ಮುರಗಯ್ಯ ಆ ದಿನಗಳಲ್ಲಿ ದೆಹಲಿಯವರೆಗೂ ಹೆಸರು ಮಾಡಿದ. ತನ್ನ ಹೆಸರಿನ ಸುತ್ತ ಹೆಣೆದದ್ದು ಕನ್ನಡ ಭಾಷೆ, ಕರ್ನಾಟಕ ರಾಜ್ಯ ಮಾತ್ರ. ಅದು ಬಿಟ್ಟು ಬೇರೆ ವಿಷಯಗಳೇ ಅವರ ತಲೆಯಲ್ಲಿ ಇರುತ್ತಿರಲಿಲ್ಲ.

೧೮೮೮ರ ಅಕ್ಟೋಬರ ೧೧ರಂದು ಅನಗವಾಡಿ ಹಿರೇಮಠದ ಸೋಮಯ್ಯನವರ ಮಗನಾಗಿ ಹುಟ್ಟಿದ ಮುರಗಯ್ಯ 'ಜಂಗಿನ' ನವನಾಗಿದ್ದುದು ಒಂದು ಕಥೆಯೇ ಆಗಿದೆ.

ಅನಗವಾಡಿಯಿಂದ ಬಾಗಲಕೋಟೆ ೨೦ ಕಿಲೋಮೀಟರ್ ಅಂತರ. ಬ್ರಿಟಿಷ್ ಕಾಲದಿಂದಲೂ ವ್ಯಾಪಾರ ವಹಿವಾಟಿಗೆ ಹೆಸರಾದ ಸ್ಥಳ. ಹೀರೇಮಠದ ಸೋಮಯ್ಯನವರು ಉದರ ಚರಿತಾರ್ಥವಾಗಿ ಬಾಗಲಕೋಟೆಗೆ ಬಂದಾಗ ಆಗಲೇ ಅಲ್ಲೊಂದು 'ಹಿರೇಮಠ' ಇತ್ತು. ಎರಡು ಹಿರೇಮಠಗಳು ಒಂದೇ ಊರಿನಲ್ಲಿ ಇರುವುದು ಹೇಗೆ ಸಾಧ್ಯ ? ಅದಕ್ಕಾಗಿ ಸಮಾಜದವರೆಲ್ಲ ಸೇರಿ, ಊರಿಗೆ ಒಂದೇ ಹಿರೇಮಠ ಇರಲಿ ಅದು ಮೊದಲು ಇದ್ದಲ್ಲೆ ಇರಲಿ. ಈಗ ಹೊಸದಾಗಿ ಬಂದವರು ಅವರ ಕುರುಹುಗಳಾದ ಜಂಗು (ಕಾಲಿಗೆ ಕಟ್ಟುವ ಗೆಜ್ಜೆ), ಜೋಳಿಗೆ ಬೆತ್ತಗಳನ್ನ ಪಡೆಯಲಿ. ಕೋರು ಧಾನ್ಯ ಭಿಕ್ಷೆ ಬೇಡುವ ಹಕ್ಕು ಇವರದಾಗಲಿ ಎಂದು ಪಂಚರು ನಿರ್ಧರಿಸಿದರು. ಅಂದಿನಿಂದ ಅನಗವಾಡಿ ಹಿರೇಮಠರು ಬಾಗಲಕೋಟೆಯಲ್ಲಿ 'ಜಂಗಿನ'ವರಾದರು.

ಬಾಗಲಕೋಟೆಗೆ ಬಂದ ಸೋಮಯ್ಯನವರು, ಕೋರು ಧಾನ್ಯ ಭಿಕ್ಷೆಯೊಂದಿಗೆ ಜವಳಿ ವ್ಯಾಪಾರವನ್ನು ಪ್ರಾರಂಭಿಸಿದರು. ವ್ಯಾಪಾರ ಕುದುರಿ ಶ್ರೀಮಂತರೂ ಆದರು. ಅನಗವಾಡಿಯಲ್ಲಿಯ ಮಠ, ಅದಕ್ಕೆ ಸೇರಿದ ಸಾಕಷ್ಟು ಹೊಲಮನೆಗಳ ಜೊತೆಗೆ ಬಾಗಲಕೋಟೆಯಲ್ಲೂ ನಾಲ್ಕೈದು ಮನೆಗಳು, ಒಂದು ಜವಳಿ ಅಗಡಿ ಹೀಗಾಗಿ ಅವರು ಬಾಗಲಕೋಟೆಯಲ್ಲಿ ವಾಸಿಸುವ ಓಣಿಗೆ 'ಜಂಗಿನವರ ಓಣಿ' ಎಂದು ಕರೆಯುವಷ್ಟರ ಮಟ್ಟಿಗೆ ಪ್ರಸಿದ್ಧಿ ಬೆಳೆಯಿತು. ಜೊತೆಗೆ ಅವರ ಸುಸಂಸ್ಕೃತ ವ್ಯಕ್ತಿತ್ವ, ವೈದ್ಯಕೀಯ (ನಾಟಿ ವೈದ್ಯ) ಜ್ಯೋತಿಷ್ಯಗಳಲ್ಲಿಯ ಪರಿಣತಿ ಸಾರ್ವಜನಿಕರಲ್ಲಿ ಹೆಸರನ್ನು ಗಳಿಸಿಕೊಟ್ಟಿತ್ತು.

ಅಂದಿನ ಕಾಲದಲ್ಲಿ ರೂಢಿಯಲ್ಲಿದ್ದ 'ಮರಾಠಿ ಪ್ರಾಥಮಿಕ ಶಿಕ್ಷಣವನ್ನು ಮುರಗಯ್ಯನವರು ಬಾಗಲಕೋಟೆಯಲ್ಲೆ ಪಡೆದರು. ಮನೆಯಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನೂ ಕಲಿತರು. ಅವರ ಶಿಕ್ಷಣ ಪ್ರೌಢಶಾಲೆಗೆ ನಿಂತಿತು. ಮನೆತನದ ವ್ಯಾಪಾರವನ್ನು ಮುಂದುವರಿಸಿಕೊಂಡು ಹೋದರು. ವ್ಯಾಪಾರಿಗಳಾಗಿದ್ದರೂ

ಮೋಸ ವಂಚನೆಗಳಿಂದ ದೂರ ಇದ್ದರು. ಅದರಿಂದಾಗಿ ಎಲ್ಲ ವರ್ಗದ ಜನರಿಗೂ ಬೇಕಾದವರಾಗಿದ್ದರು. ಅವರಂಥವರು ಸಾರ್ವಜನಿಕ ಕ್ಷೇತ್ರದಲ್ಲಿ ಇರಬೇಕು ಎಂಬುದು ಸಮಾಜದ ಆಶಯವಾಗಿತ್ತು. ಕಳೆದ ಶತಮಾನದ ಪ್ರಾರಂಭದ ದಿನಗಳಲ್ಲೆ ಅವರು ಬಾಗಲಕೋಟೆಯ ಪುರಸಭೆಯ ಸದಸ್ಯರಾದರು. ಅಂದಿನಕಾಲದಲ್ಲಿ ಅದೊಂದು ಮಹಾಗೌರವದ ವಿಷಯವಾಗಿತ್ತು. ಪುರಸಭೆಯ ಸದಸ್ಯರಾಗಿ ನಗರದ ಸ್ವಚ್ಛತೆಗೆ ಗಮನಕೊಟ್ಟರು. ನೀರಿನ ಅಭಾವ ನೀಗಿಸಲು ಅಲ್ಲಲ್ಲಿ ಬಾವಿಗಳನ್ನು ಕಟ್ಟಿಸಿದರು.

ಅಷ್ಟಕ್ಕೆ ಮುಗಿಯಲಿಲ್ಲ. ದೇಶದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಚಳುವಳಿಗಳು, ಟಿಳಕ - ಗಾಂಧೀಜಿ ಅವರ ಪ್ರಭಾವ ತರುಣ ಮುರಗಯ್ಯನವರ ಮೇಲೂ ಆಯಿತು. ಜೊತೆಗೆ ಬಾಗಲಕೋಟೆಯಲ್ಲೆ ನಖಶಿಖಾಂತ ರಾಷ್ಟ್ರೀಯ ಭಾವನೆಗಳನ್ನು ತುಂಬಿಕೊಂಡಿದ್ದ ಸುಶಿಕ್ಷಿತ ಮಂಗಳವೇಡು ಶ್ರೀನಿವಾಸರಾಯರ ಸಖ್ಯದಿಂದ ಬಾಗಲಕೋಟೆಯನ್ನು ಎಲ್ಲ ರಂಗಗಳಲ್ಲಿ ರಾಷ್ಟ್ರೀಯ ನೆಲೆಯಲ್ಲಿ ಹೆಸರು ಮಾಡುವಲ್ಲಿ ಯಶಸ್ವಿಯಾಗಿದ್ದರು.

'ರಾಷ್ಟ್ರೀಯ ಸೇವಾ ದಳ ತರಬೇತಿ'ಯನ್ನು ಹರ್ಡೇಕರರ ಸಹಕಾರದಿಂದ ಬಾಗಲಕೋಟೆಗೆ ತಂದರು. ಅದಾಗ ಜನಪ್ರಿಯಗೊಳ್ಳುತ್ತಿದ್ದ ನಾಡಹಬ್ಬವನ್ನು ಬಾಗಲಕೋಟೆಯಲ್ಲಿ ಬಹು ವಿಜೃಂಭಣೆಯಿಂದ ಮಾಡುವಲ್ಲಿ ಯಶಸ್ವಿಯಾದರು. ಬಾಗಲಕೋಟೆ ಜನತೆಗೆ ಸಾಹಿತ್ಯ, ಸಮಾಜ, ಸಂಘಶಕ್ತಿ ಎಂದರೆ ಏನು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಬ್ರಾಹ್ಮಣೇತರರೂ, ಸ್ವತಂತ್ರ ರಾಜಕೀಯ ಮುಖ್ಯವಾಹಿನಿಯಲ್ಲಿ ಸೇರ ಬೇಕೆಂದು ಪ್ರತಿಪಾದಿಸುತ್ತ, 'ಅಖಿಲ ಭಾರತ ಬ್ರಾಹ್ಮಣೇತರರ ರಾಜಕೀಯ ಸಂಘ' ವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸಿದರು. ಅದರ ಜೊತೆಗೆಯೇ ಎಲ್ಲ ವರ್ಗಗಳಿಗೂ - ಸಾಧಕವಾಗುವಂತೆ 'ಅಖಿಲ ಭಾರತ ಪ್ರಜಾಸಂಘ' ವನ್ನೂ ಕಟ್ಟಿದರು. ಬಾಗಲಕೋಟೆಯಂಥ ಒಂದು ತಾಲೂಕು ಸ್ಥಳದಲ್ಲಿ ಭಾರತ ಮಟ್ಟದ ಸಂಘ - ಸಂಸ್ಥೆಗಳನ್ನ ತೆರೆಯುವುದು ಎಂದರೆ ಸಾಮಾನ್ಯ ಮಾತು ಆಗಿರಲಿಲ್ಲ.

ಹೀಗೆ ರಾಜಕೀಯ ಸಂಘ - ಸಂಸ್ಥೆಗಳನ್ನು ಕಟ್ಟುವುದರ ಜೊತೆಗೆ ತಮ್ಮ ಧರ್ಮವನ್ನು ನಿರ್ಲಕ್ಷಿಸಲಿಲ್ಲ. ಅವರದು ಜಂಗಮರ ಮನೆತನ. ಶಿಷ್ಯರನ್ನು ಉದ್ಧರಿಸುವ ಕಾಯಕ ಅವರದು. ಅದನ್ನು ಅವರು ಪ್ರಾಮಾಣಿಕವಾಗಿ ಮಾಡಿದರು. ಬಾಗಿಲಕೋಟೆಯ ತೆಂಗಿನ ಮಠದ ರೇವಣಸಿದ್ಧ ಸ್ವಾಮಿಗಳು ಅವರ ಮೇಲೆ ತುಂಬ ಪ್ರಭಾವ ಬೀರಿದ್ದರು. ಅವರಲ್ಲಿಯೆ ಕ್ರಿಯಾದೀಕ್ಷೆಯನ್ನು ಪಡೆದರು. ಅವರೊಂದಿಗೆ ಆತ್ಮೀಯ ಸಂಬಂಧವನ್ನೂ ಇಟ್ಟುಕೊಂಡಿದ್ದರು. ಅದು ಕಾರಣ. ೧೯೦೭ರಷ್ಟು ಹಿಂದೆ, ತೆಂಗಿನ ಮಠಕ್ಕೆ ಒಂದು ಸಮಿತಿಯನ್ನು ರಚಿಸಿ ಅದರ ಕಾರ್ಯದರ್ಶಿ

ಗಳಾಗಿದ್ದರು. ಮಠಕ್ಕಾಗಿ ಒಂದು ಸ್ಥಾಯೀ ನಿಧಿಯನ್ನು ಸಂಗ್ರಹಿಸಿ ಅದರ ಬೆಂಬಲದಿಂದ 'ಗುರು ಬಸವ ವಾಚನಾಲಯ' ಮತ್ತು 'ರಾ.ಬ. ವಾರದ ಪ್ರಸಾದ ನಿಲಯ' ಗಳನ್ನು ಪ್ರಾರಂಭಿಸಿದರು.

೧೯೦೮ರಲ್ಲಿ ಬಾಗಲಕೋಟೆಯಲ್ಲಿ ನಡೆದ ೪ನೆಯ ಶ್ರೀಮದ್ ವೀರಶೈವ ಮಹಾಸಭೆ ಹಲವಾರು ರೀತಿಯಲ್ಲಿ ಇಂದಿಗೂ ಸ್ಮರಣೀಯವಾಗಿ ಉಳಿಯಬೇಕು ಅದರ ಬಹು ಮುಖ್ಯ ಸಾಧನೆಯೆಂದರೆ ''ಭಕ್ತ ಸಮೂಹಕ್ಕೆ ಧರ್ಮ ಶಿಕ್ಷಣವನ್ನು ಕೊಡುವಂಥ ಮತ್ತು ಭಕ್ತರಿಗೆ ' ಆಗತಕ್ಕ ಸಂಸ್ಕಾರಗಳನ್ನೆಲ್ಲ ವಿಧಿ ಪೂರ್ವಕವಾಗಿ ಮಾಡಿಸುವ ಗುರುಗಳನ್ನು ಸಿದ್ಧಪಡಿಸುವಂಥ, ಜೊತೆಗೆ ನಶಿಸಿ ಹೋಗುತ್ತಿರುವ ವೀರಶೈವರ ಮೂಲ ಆಸ್ತಿಯಾದ ವಚನಸಾಹಿತ್ಯವನ್ನು ಸಂಗ್ರಹಿಸಿ, ಅಭ್ಯಾಸ ಮಾಡುವಂತೆ ಕನ್ನಡ ಭಾಷೆಯನ್ನು ಕಲಿಸುವಂತೆ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕು ಮತ್ತು ಅದಕ್ಕೆ 'ಶಿವಯೋಗ ಮಂದಿರ' ಎಂದು ಹೆಸರಿಡಬೇಕು ಎಂದು ಜಂಗಿನ ಮುರಗಯ್ಯನವರು ಮಹಾಧಿವೇಶನದಲ್ಲಿ ಒಂದು ಗೊತ್ತುವಳಿಯನ್ನು ಮಂಡಿಸಿದರು. ಅದನ್ನು ಶ್ರೀ ಗುರುಬಸಪ್ಪ ಫಕೀರಪ್ಪ ಹಳಕಟ್ಟಿ (ಡಾ. ಫ. ಗು ಹಳಕಟ್ಟಿ ಅವರ ತಂದೆ) ಕ್ಲಾರ್ಕ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಆಫೀಸ್, ಧಾರವಾಡ ಇವರು ಅನುಮೋದಿಸಿದರು. ಶಿವಯೋಗ ಮಂದಿರ ಸ್ಥಾಪನೆ ವೀರಶೈವ ಮಠಗಳ ಅಭ್ಯುದಯಕ್ಕೆ ಕ್ರಾಂತಿಯಾದಂತೆ ಕನ್ನಡ ಕಲಿಕೆಗೂ ಕ್ರಾಂತಿಯಾಯಿತು !

ನಾಡನ್ನು ಕಟ್ಟುವ ಕಾರ್ಯದಲ್ಲಿ ಬಾದಾಮಿಯ ಹತ್ತಿರದ ಶಿವಯೋಗ ಮಂದಿರದ ಪಾತ್ರ ಹಿರಿದಾಗಿದೆ. ಅದು ಬರೀ ಲಿಂಗವಂತ ಸ್ವಾಮಿಗಳನ್ನು ಸೃಷ್ಟಿಸಲಿಲ್ಲ. ಹಿಂದುಳಿದ. ಅಕ್ಷರ ಜ್ಞಾನದಿಂದ ವಂಚಿತರಾದ ಕನ್ನಡಿಗರಿಗೆ ಶಿಕ್ಷಣ ಪಡೆಯಲು ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ, ಇಲ್ಲಿ ಶಿಕ್ಷಣ ಪಡೆಯಲು ಬರುವವರ ಹೊಟ್ಟೆಯ ಚಿಂತೆಗೆ 'ಉಚಿತ ಪ್ರಸಾದ ನಿಲಯ' ಗಳನ್ನು ತೆರೆಯುವ, ವಚನ ಸಾಹಿತ್ಯದ ಅಭ್ಯಾಸದ ಅಗತ್ಯತೆಯನ್ನು ಅರಿತು ಪ್ರತಿಯೊಬ್ಬರೂ ಕನ್ನಡ ಕಲಿಯಬೇಕು ಕಲಿಸಬೇಕು ಎಂಬ ಪ್ರತಿಜ್ಞೆಗಳೊಂದಿಗೆ ಸ್ವಾಮಿಗಳನ್ನು ಸಿದ್ಧಪಡಿಸಿ ಶಿವಯೋಗ ಮಂದಿರದಿಂದ ಹೊರಗೆ ಕಳಿಸಲಾಗುತ್ತಿತ್ತು. ಇಂದು ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕಗಳಲ್ಲಿಯ ಬಹುತೇಕ ವೀರಶೈವ ಮುಖಂಡರಿಂದ ಸ್ಥಾಪಿತವಾದ ಶಿಕ್ಷಣ ಸಂಸ್ಥೆಗಳಿಗೆ ಇಲ್ಲಿಂದ ಹೊರಬಂದ ಲಿಂಗಾಯತ ಸ್ವಾಮಿಗಳೇ ಪ್ರಭಾವ ಬೀರಿದರು ಎಂಬುದು ಸ್ಪಷ್ಟವಾಗಿದೆ. ಈ ಕಾಯಕದ ಹಿಂದೆ, ಸುಮಾರು ೨೪ ವರುಷಗಳ ಕಾಲ ಶಿವಯೋಗ ಮಂದಿರದ ಕಾರ್ಯದರ್ಶಿಗಳಾಗಿ ಕಾರ್ಯ ಮಾಡಿದ ಜಂಗಿನ ಮುರಗಯ್ಯನವರನ್ನು ಮರೆಯುವಂತಿಲ್ಲ.

ಹಾನಗಲ್ಲ ಶ್ರೀ ಕುಮಾರಸ್ವಾಮಿಗಳ ಅಧ್ಯಕ್ಷತೆ ಮುರಗಯ್ಯನವರ ಕಾರ್ಯದರ್ಶಿತ್ವ, ನಿರ್ಜನವಾದ ಪ್ರದೇಶದಲ್ಲಿ ಸ್ಥಾಪಿತವಾದ ಶಿವಯೋಗಿ ಮಂದಿರ ಇವರಿಬ್ಬರ ಅಹೋರಾತ್ರಿ ಪರಿಶ್ರಮದಿಂದ ನಾಡನ್ನು ಕಟ್ಟುವ ಕೆಲಸದಲ್ಲಿ ಏನೆಲ್ಲ

ಮಾಡಿತು. ಇಂದು ವಚನಶಾಸ್ತ್ರ ಪಿತಾಮಹ ಎಂದು ಹೆಸರಾಗಿದ್ದ ರಾ.ಬ. ಡಾ. ಫ.ಗು ಹಳಕಟ್ಟಿ ಅವರಿಗೆ ವಚನಗಳನ್ನು ಸಂಗ್ರಹಿಸುವಲ್ಲಿ ಮುರಗಯ್ಯನವರ ಪಾಲು ದೊಡ್ಡದು. ಹಲವಾರು ಸಲ ಅದನ್ನು ಡಾ. ಹಳಕಟ್ಟಿ ಅವರೆ,ಮುರಗಯ್ಯನವರಿಗೆ ಬರೆದ ಪತ್ರಗಳಲ್ಲಿ ಉಲ್ಲೇಖಿಸಿದ್ದಾರೆ.

ಸ್ವತಃ ಅನಿವಾರ್ಯವಾಗಿ ಮರಾಠಿಯನ್ನು ಕಲಿತವರಾಗಿದ್ದರೂ ಅವರಿಗೆ ಕನ್ನಡದ ಬಗ್ಗೆ ಎಲ್ಲಿಲ್ಲದ ಅಭಿಮಾನ. ಪರದೇಶಿಯಾಗಿದ್ದ ಕನ್ನಡ ಭಾಷೆಯನ್ನು ಕಲಿಯಲು ಬಾಗಲಕೋಟೆಯಲ್ಲಿ ಅಲ್ಲಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ತೆರೆದರು. ತೆರೆದರು ಎಂದು ಹೇಳಿದಷ್ಟು ಸುಲಭವಾಗಿರಲಿಲ್ಲ. ಕನ್ನಡ ಶಾಲೆಯನ್ನು ತೆರೆದರೆ ಅಲ್ಲಿ ಕಲಿಯುವ ಮಕ್ಕಳು ಬರಲಿಲ್ಲ. ಮನೆ -ಮನೆಗಳಿಗೆ ಹೋಗಿ ಒತ್ತಾಯದಿಂದ ಮಕ್ಕಳನ್ನು ಕರೆದುಕೊಂಡು ಬಂದು ಶಾಲೆಯಲ್ಲಿ ಕೂಡಿಸಿದರೆ ಅವರಿಗ ಓದಲು ಕನ್ನಡದ ಪುಸ್ತಕಗಳನ್ನು ಕೊಡಬೇಕಲ್ಲ ? ಅದು ಇನ್ನೂ ಕಷ್ಟ.

ಅಂತು ಪರಿಶ್ರಮಪಟ್ಟು ಅಲ್ಲೊಂದು - ಇಲ್ಲೊಂದು ಕನ್ನಡ ಶಾಲೆಗಳನ್ನು ಬಾಗಲಕೋಟೆಯಲ್ಲಿ ಪ್ರಾರಂಭ ಮಾಡಿದರು. ತಾವೆ ಹೋಗಿ ಮಕ್ಕಳಿಗೆ ಕುಳಿತಲ್ಲಿ, ನಿಂತಲ್ಲಿ, ಮನೆಯಲ್ಲಿ ಮಠದಲ್ಲಿ ಎಲ್ಲಿಗೇ ಹೋಗಲಿ ಮಕ್ಕಳಿಗೆ ಕನ್ನಡದಲ್ಲಿ ಅಂಕಿ-ಮಗ್ಗಿಗಳನ್ನು ಹೇಳುವುದು, ಕನ್ನಡ ಅಕ್ಷರ ಮಾಲೆ ಬರೆಸುವುದು, ಕನ್ನಡದಲ್ಲೆ ಸಹಿ ಮಾಡಿಸುವುದು, ಕನ್ನಡದಲ್ಲಿ ಮಾತನಾಡುವುದು ಇವೇ ಅವರ ಕೆಲಸವಾಯಿತು. ಕನ್ನಡದ ಅಭಿಮಾನ ಅವರಲ್ಲಿ ಎಷ್ಟಿತ್ತೆಂದರೆ, ತಮ್ಮ ಬಟ್ಟೆ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುವಾಗ ಯಾರಾದರೂ ಬಂದು 'ತೀನ ಕಟಗಿ ಅರಿವಿ ಕೊಡ್ರಿ' ಎಂದು ಹೇಳಿದರೆ, ಅವರಿಗೆ ಮೂರು ಕಟಗಿ ಅರಿವಿ ಅನ್ರಿ' ಎಂದು ಹೇಳಿ, ಹಾಗೆ ಹೇಳಿದ ಮೇಲೆಯೇ ವ್ಯಾಪಾರ ಪ್ರಾರಂಭ. ಜೊತೆಗೆ ಕನ್ನಡದ ಬಗ್ಗೆ ಒಂದು ಚಿಕ್ಕ ಉಪನ್ಯಾಸ. 'ತೀನ' ಅಂದರೆ ಅದು ಮರಾಠಿ ಆಗ್ತದ, ಕನ್ನಡದ ಉಪ್ಪು ಉಂಡು ಮರಾಠಿ ಮಾತನಾಡಿದ್ರ ಅದು ತಾಯಿಗೆ ಎರಡು ಬಗೆದಂಗ ಆಗ್ತದಿಲ್ಲೊ' ಎಂದು ಪಾಠ ಹೇಳಿ ಕಳಿಸುತ್ತಿದ್ದರು. ಇಂದು ಎಲ್ಲೆಲ್ಲೂ ಕನ್ನಡ ತಾಯಿಗೆ ಎರಡು ಬಗೆಯುತ್ತಿದ್ದುದನ್ನು ಕಂಡು ಅವರ ಮನಸ್ಸು / ಆತ್ಮ ಎಷ್ಟು ಕೊರಗುತ್ತಿದೆಯೋ ಏನೋ ? ಕನ್ನಡಿಗರಿಗೆ ಅನ್ಯಾಯವಾದರೆ ಅವರು ಸಹಿಸುತ್ತಿರಲಿಲ್ಲ. ಅಗಡಿಗಳ ಲೆಕ್ಕವನ್ನು ಕನ್ನಡದಲ್ಲೆ ಬರೆದಿಡಲು ಒತ್ತಾಯಿಸುತ್ತಿದ್ದರು.

ಉತ್ತರ ಕರ್ನಾಟಕದಲ್ಲಿ ಇಂದು ಬೃಹದಾಕಾರವಾಗಿ ಬೆಳೆದು, ಶತಮಾನೋತ್ಸವವನ್ನು ಆಚರಿಸುತ್ತಿರುವ ಬಾಗಲಕೋಟೆ ಬಸವೇಶ್ವರ ವಿದ್ಯಾವರ್ಧಕ ಸಂಘದ ಪ್ರಾರಂಭ ಜಂಗಿನ ಮುರಗಯ್ಯನವರಿಂದ ಆದದ್ದು. ತೆಂಗಿನ ಮಠದಲ್ಲೆ ಒಂದು ಕನ್ನಡ ಪ್ರಾಥಮಿಕ ಶಾಲೆಯನ್ನು ತೆರೆದರು. ಅನಂತರ ತೇರು ಬೀದಿಯ ಹುಂಡೇಕಾರ ಮಠದಲ್ಲಿ ಒಂದು ಕನ್ನಡ ಪ್ರಾಥಮಿಕ ಶಾಲೆ ಅದಕ್ಕೆ 'ಬಸವೇಶ್ವರ ಕನ್ನಡ ಪ್ರಾಥಮಿಕ ಶಾಲೆ' ಎಂಬ ಹೆಸರು. ಸರಕಾರದ ನೆರವೂ ಇಲ್ಲ. ಜನತೆಯ ಸಹಕಾರವೂ

ಇಲ್ಲ. ಮತ್ತೆ ಕೆಲವು ದಿನಗಳಲ್ಲಿ ಪ್ರೌಢಶಾಲೆಯ ಅಗತ್ಯ ಕಂಡು ಬಂದಾಗ 'ಬಸವೇಶ್ವರ ಪ್ರೌಢಶಾಲೆ' ಬಂದಿತು. ಈಗ 'ಬಸವೇಶ್ವರ ವಿದ್ಯಾವರ್ಧಕ ಸಂಘ' ತಲೆ ಎತ್ತಿ ನಿಂತಿತು.

ತಮ್ಮ ಚರಿತಾರ್ಥಕ್ಕೆ ಬಟ್ಟೆ ಅಂಗಡಿ ಇದ್ದಿತು. ಅಲ್ಲಿ ಕುಳಿತಾಗಲೇ ಅವರಿಗೆ ವ್ಯಾಪಾರಿಗಳ ಸಂಘಟನೆಯ ಅಗತ್ಯ ಕಂಡು ಬಂದಿತು. ಇಂಥದಕ್ಕೆಲ್ಲ ಮಂಗಳವೇಡು ಶ್ರೀನಿವಾಸರಾಯರ ಆಸರೆ ಇದ್ದೇ ಇತ್ತು. ವಾಣಿಜ್ಯ - ಉದ್ಯಮಗಳ ಸಂಘಟನೆಗೆಂದು ಸುತ್ತೆಲ್ಲ ನಾಲ್ಕು ಕಡೆಗೆ ತಿರುಗಾಡಿ ಬಂದರು. ಉದ್ದೇಶವನ್ನು ವಿವರಿಸಿದಾಗ ನಾಲ್ದೆಸೆಯ ವ್ಯಾಪಾರಿಗಳು - ಉದ್ಯಮಿಗಳು ಸಂಘಟಿತರಾಗಲು ಸಿದ್ಧರಾದರು. ಅದರ ಪರಿಣಾಮ, ೧-೮-೧೯೨೮ ರಂದು ಬಾಗಲಕೋಟೆಯಲ್ಲಿ 'ಕರ್ನಾಟಕ ವ್ಯಾಪಾರ ಸಂಘ' ಎಂಬ ಸಂಸ್ಥೆಯು ಉದಯವಾಯಿತು. ಮಂಗಳವೇಡು ಶ್ರೀನಿವಾಸರಾಯರು ಗೌರವ ಕಾರ್ಯದರ್ಶಿಗಳಾದರು. ಒಂದು ವರುಷದಲ್ಲಿ ೧-೩-೧೯೨೯ರಂದು ಬಾಗಲಕೋಟೆಯಲ್ಲಿ ಪ್ರಾಂತೀಕ ಔದ್ಯಮಿಕ ಸಮ್ಮೇಳನವನ್ನು ಭರ್ಜರಿಯಾಗಿ ನಡೆಸಿದರು.

ಕೆಲವು ದಿನಗಳ ನಂತರ ಶ್ರೀನಿವಾಸರಾಯರು ಜೇಲಿಗೆ ಹೋದರು. ಸಂಘವು ಆರ್ಥಿಕ ತೊಂದರೆಯಿಂದ ಮುಂದುವರಿಯದಾದಾಗ ಅದನ್ನು ಗದಗಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ಸಂಘವು ನವಚೇತನ ಪಡೆದು ಪುನಃ ಬಾಗಲಕೋಟೆಗೆ ಬಂದಿತು. ಮುರಗಯ್ಯನವರೆ ಅದರ ಕಾರ್ಯದರ್ಶಿಗಳು. ಆನಂತರ ಅಂಥದೊಂದು ಸಂಘದ ಅವಶ್ಯಕತೆ ಉತ್ತರ ಕರ್ನಾಟಕದ ಪ್ರಮುಖ ವ್ಯಾಪಾರಿ ಸ್ಥಳವಾದ ಹುಬ್ಬಳ್ಳಿಯಲ್ಲಿ ಕಂಡು ಬಂದಾಗ ಈ ಸಂಘವನ್ನು ೧೯೪೨ರಲ್ಲಿ ಹುಬ್ಬಳ್ಳಿಗೆ ಸ್ಥಳಾಂತರಿಸಲಾಯಿತು. ಅದುವೆ ಇಂದಿನ ಹುಬ್ಬಳ್ಳಿ ಚೇಂಬರ್ ಆಫ್ ಕಾಮರ್ಸ್- ದೇಶಾದ್ಯಂತ ಹೆಸರು ವಾಸಿಯಾದ ಸಂಘವಾಗಿದೆ ; ಕರ್ನಾಟಕ ವ್ಯಾಪಾರ ಸಂಘ ಹೋಗಿ ಕರ್ನಾಟಕ ವಾಣಿಜ್ಯೋದ್ಯಮ ಸಂಘ ' ಎಂಬ ನಾಮದಿಂದ ಪರಿವರ್ತನೆ ಹೊಂದಿತು. ಅಲ್ಲಿಯೂ ಮುರಗಯ್ಯನವರೆ ಕಾರ್ಯದರ್ಶಿಗಳು. ಮಂಗಳವೇಡು ಶ್ರೀನಿವಾಸರಾಯರು ಕೆಲಕಾಲ ಈ ಸಂಘದ ಅಧ್ಯಕ್ಷರಾಗಿದ್ದರು. ಮುರಗಯ್ಯನವರ ಪರಿಶ್ರಮದಿಂದ ಮುಂಬಯಿ, ಬೆಂಗಳೂರು, ಗೋವಾ, ಕಾರವಾರ, ಬಳ್ಳಾರಿ, ಹೈದರಾಬಾದ ಮುಂತಾದ ಊರುಗಳಿಂದ ಸಾವಿರಾರು ಗಡಿನಾಡ ವ್ಯಾಪಾರಸ್ಥರು ಸದಸ್ಯರಾದರು. ಅವರ ನೆನಪಿಗೆಂದು ಹುಬ್ಬಳ್ಳಿಯ ಕಾರ್ಯಾಲಯದಲ್ಲಿ ಜಂಗಿನ ಮರಗಯ್ಯನವರ ಪ್ರತಿಮೆಯನ್ನು ನಿಲ್ಲಿಸಲಾಗಿದೆ.

೧೯೩೧-೩೨ರಲ್ಲಿ ಬೆಳಗಾವಿಯಲ್ಲಿ ಲಿಂಗರಾಜ ಆರ್ಟ್ಸ್ ಕಾಲೇಜು ಸ್ಥಾಪಿತವಾಗುವಲ್ಲೂ, ೧೯೩೩-೩೪ರಲ್ಲಿ ಹೊಸಪೇಟೆಯಲ್ಲಿ ಅಳಿದುಹೋಗುತ್ತಿದ್ದ ಕನ್ನಡ ಟ್ರೇನಿಂಗ್ ಕಾಲೇಜನ್ನು ಪುನಃ ಪ್ರತಿಷ್ಠಾಪಿಸುವಲ್ಲಿ ಮುರಗಯ್ಯನವರ ಪಾತ್ರ ಇದೆ. ೧೯೩೬-೩೭ರಲ್ಲಿ ಮದ್ರಾಸಿನ ಕ್ವೀನ ಮೇರಿ ಕಾಲೇಜಿನಲ್ಲಿ ಕನ್ನಡ ಟ್ರೇನಿಂಗ್

ಕಾಲೇಜನ್ನು ನಿಲ್ಲಿಸಿದ್ದರು. ಸರಿ ಮುರಗಯ್ಯನವರು ಸಿದ್ಧರಾದರು. ಬಾಗಲಕೋಟೆಯಿಂದ ಬಳ್ಳಾರಿ - ಮದ್ರಾಸು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಪ್ರಶ್ನಿಸಿದರು. ಅವರ ಮುಂದೆಯೇ ಕುಳಿತರು. ಪಟ್ಟು ಬಿಡಲಿಲ್ಲ. ಮತ್ತೆ ಮೊದಲಿನಂತೆ ಕನ್ನಡ ಕಲಿಕೆ ನಡೆಯುವಂತೆ ಮಾಡಿಬಂದರು !

೧೯೩೦-೫೦ರ ದಶಕಗಳಲ್ಲಿ ಮುರಗಯ್ಯನವರ ಹೆಸರು ರೈಲು ಮತ್ತು ಅಂಚೆ ತಂತಿ ಇಲಾಖೆಯಲ್ಲಿ ಸುಪ್ರಸಿದ್ಧವಾಗಿತ್ತು. ಪಟ್ಟು ಬಿಡದೆ ಕನ್ನಡದಲ್ಲಿ ರೈಲು ವೇಳಾಪತ್ರಿಕೆ, ಕನ್ನಡದಲ್ಲಿ ಮನಿಯಾರ್ಡರ್ ಫಾರ್ಮ ಮುದ್ರಿಸುವಂತೆ ಇಲಾಖೆಗಳ ಮೇಲೆ ಒತ್ತಡ ತಂದು ಅವರು ಕನ್ನಡದಲ್ಲಿ ಪ್ರಕಟಿಸವಲ್ಲಿ ಯಶಸ್ವಿಯಾದರು.

ಕರ್ನಾಟಕ ಏಕೀಕರಣ ಆದದ್ದನ್ನು ಕೇಳಿ ಎರಡು ವರುಷಗಳ ನಂತರ ದಿನಾಂಕ ೪-೯-೧೯೫೮ರಂದು ಅವರು ಲಿಂಗೈಕ್ಯರಾದರು.

✤ ✤ ✤ ✤

ಅಧ್ಯಾಯ - ೨೭

• ನಾಡು ಕಟ್ಟಿದ ಕವಿಗಳು

ಅಖಂಡ ಕರ್ನಾಟಕದ ವೇದಿಕೆಯನ್ನು ಸಜ್ಜುಗೊಳಿಸುವಲ್ಲಿ ಈ ಮೊದಲಿನ ಹಿರಿಯರ ಪಾತ್ರದಷ್ಟೇ ಕಳೆದ ಶತಮಾನದ ಮೊದಲರ್ಧ ಶತಕದಲ್ಲಿಯ ಕವಿಗಳ ಪಾತ್ರವೂ ಅಷ್ಟೇ ಮಹತ್ವದ್ದಾಗಿದೆ. ಡೆಪ್ಯೂಟಿ ಚೆನ್ನಬಸಪ್ಪನವರಿಂದ ಹಿಡಿದು ಜಂಗಿನ ಮುರಗಯ್ಯನವರ ವರೆಗೆ ಕೆಲವರ ಪರಿಚಯ ಮಾಡಿ ಕೊಟ್ಟೆವಷ್ಟೆ. ಅದರೊಂದಿಗೆ ಇನ್ನೂ ಹಲವಾರು ಜನ ಕರ್ನಾಟಕದ ಅಭಿಮಾನದಿಂದ ಕನ್ನಡ ಭಾಷೆಯ ಮಮತೆಯಿಂದ ಮರೆಯಲಾರದ ಕೆಲಸವನ್ನು ಮಾಡಿದ್ದಾರೆ. ಅವರೊಂದಿಗೆ ನಾಡಿನ ನಾಲ್ಕು ನಿಟ್ಟಿನ ಕವಿಗಳು ತಮ್ಮ ಕವನಗಳ ಮೂಲಕ ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸುಲ್ಲಿ ಸಂಪೂರ್ಣ ಯಶಸ್ಸನ್ನು ಪಡೆದಿದ್ದಾರೆ. ರಾಷ್ಟ್ರೀಯ ಭಾವನೆ ಆಗಲೆ ಜಾಗೃತಿಗೊಂಡಿತ್ತು. ಟಿಳಕ್- ಗಾಂಧೀಜಿ ಅವರುಗಳು ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶಗಳ ವರೆಗೂ ಮುಟ್ಟಿದ್ದರು. 'ವಂದೇ ಮಾತರಂ' ದುಮುದುಮಿಸುತ್ತಿದ್ದಂತೆ ಶಾಂತಕವಿಗಳ 'ರಕ್ಷಿಸು ಕರ್ನಾಟಕ ದೇವಿ ಸಂ । ರಕ್ಷಿಸು ಕರ್ನಾಟಕ ದೇವಿ ॥ ಗೀತೆಯು ಕರ್ನಾಟಕದ ಪೂರ್ವೇತಿಹಾಸವನ್ನು ಹೇಳುತ್ತಿದ್ದಂತೆ ನಾಡ ದೇವಿಯ ಕುರಿತು ಅಭಿಮಾನ ಹುಟ್ಟಲು ಕಾರಣವಾಯಿತು.

ತೀರ ಪಶ್ಚಿಮದ ಅಂಚಿನಲ್ಲಿದ್ದ ಮಂಜೇಶ್ವರ ಗೋವಿಂದ ಪೈಗಳ ''ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ ! ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ ॥ ಎಂಬ ಕವಿತೆ ಕನ್ನಡ ಬಲ್ಲ ಎಲ್ಲ ಕಡೆಗೆ ನಿನದಿಸಿತು. ಕೊನೆಯ ನುಡಿಯ

'ನಮ್ಮೆದೆಯಂ ತಾಯೆ ಒಲಿಸು ।
ಎಲ್ಲರ ಬಾಯಲ್ಲಿ ನೆಲಸು ।
ನಮ್ಮ ಮನ ಮನೊಂದೆ ಕಲಿಸು ।
ಇದನೊಂದನೆ ಕೋರುವೆ -
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ ?

ಎಂಬ ಸಾಲುಗಳು ಯಾರಲ್ಲೂ ಎದೆಯುಬ್ಬುವಂತೆ ಮಾಡಿದುವು.

ಮೈಸೂರಿನಲ್ಲಿ ಮಹಾಕವಿ ಕುವೆಂಪು ಅವರ 'ಎಲ್ಲಾದರು ಇರು ; ಎಂತಾದರು ಇರು ; ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಕವಿತ ಇಂದಿಗೂ ಕನ್ನಡ ಬಲ್ಲ ಮನೆ - ಮನೆಗೂ - ಮನ-ಮನಗಳಲ್ಲಿ ತುಂಬಿಕೊಂಡಿದೆ. 'ಕನ್ನಡವೆ ಸತ್ಯ । ಕನ್ನಡವೇ

ನಿತ್ಯ । ಅನ್ಯವೆನಲದೆ ಮಿಥ್ಯಾ' ಎಂಬುದೆಲ್ಲರ ಬಾಯಲ್ಲೂ ನಲಿಯುತ್ತಿದೆ.

ಆ ದಿನಗಳಲ್ಲಿಯೆ ಉತ್ತರ ಕರ್ನಾಟಕದಲ್ಲಿಯ ಇನ್ನೊಬ್ಬ ಮಹಾಕವಿ ದ.ರಾ. ಬೇಂದ್ರೆ ಅವರು

ಒಂದೇ ; ಒಂದೇ ಒಂದೇ ಕರ್ನಾಟಕ ಒಂದೇ ।
ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆ ಯಾಗುವದಿದೆ ಕರ್ನಾಟಕದಿಂದೇ ॥

ಎಂಬ ಕವಿತೆ ಹರಿದು ಹಂಚಿ ಹೋಗಿದ್ದ ಕನ್ನಡಿಗರೆಲ್ಲರು ಒಂದೇ ಎಂಬ ಭಾವನೆ ಮೂಡಲು ಸಹಾಯವಾಯಿತು.

ಕನ್ನಡದ ಕಣ್ವರೆನಿಸಿದ ಬಿ.ಎಂ.ಶ್ರೀಕಂಠಯ್ಯನವರು ಕನ್ನಡ - ಕರುನಾಡಿನ ಬಗ್ಗೆ ಬರೆದ ಕವಿತೆಗಳು ನಾಡಿನಲ್ಲೆಲ್ಲ ಪ್ರಚಾರಗೊಂಡವು.

'ಓ ತಾಯೆ, ಕರ್ನಾಟಕಾಂಬೆ ಜಯಹೇ
ಮಾತಾಯಿ ಮಾಡುವೆನು ನಮನ, ನಿನಗೇ ॥

ಎಂಬ ಕವಿತೆಗಳಲ್ಲಿ ಕರ್ನಾಟಕದ ಖನಿಜ ಸಂಪತ್ತು, ಜಲ ಸಂಪತ್ತು, ಭವ್ಯವಾದ ಇತಿಹಾಸ, ಹಿಂದಿನವರ ಸಂದೇಶಗಳು ಕಣ್ಣಮುಂದೆ ಬರುವಂತಾದುವು.

'ಓ ತಾಯಿ ಕನ್ನಡದ ಹಿರಿತಾಯಿ ನಮ್ಮವ್ವ ಸಾಮ್ರಾಜ್ಞಿಯಾಗಿ ಬಾಳೆ ।
ಕರ್ನಾಟಕದ ರತ್ನ ಸಿಂಹಾಸನದಿ ಮೆರೆದು ಕನ್ನಡಿಗರೆದೆಯನಾಳ್ ॥

ಎಂದು ಹಾರೈಸಿದರು.

ಹುಯಿಲಗೋಳ ನಾರಾಯಣರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕರ್ನಾಟಕದ ರಾಜ್ಯೋದಯಕ್ಕೆ ನಾಡ ಗೀತೆಯೇ ಆಯಿತು. ಕೊಡಗಿನಿಂದ - ಕಲ್ಯಾಣದವರೆಗೆ, ಕೆಜಿಎಫ್‌ನಿಂದ ಬೆಳಗಾವಿವರೆಗೆ ಕನ್ನಡದ ಸಮಾರಂಭಗಳು ಈ ನಾಡಗೀತೆಯಿಂದಲೇ ಪ್ರಾರಂಭವಾಗುತ್ತಿದ್ದವು.

ಮುಳಿಯ ಶಂಕರ ಭಟ್ಟರ
'ಕರ್ನಾಟಕೀ ! ಮಾತೆ ಧನ್ಯೆ - ಧನ್ಯೆ ।
ಕರ್ಣಕಾನಂದಕಾರಿಣಿ ಲೋಕಮಾನ್ಯೆ ॥

ಎಂಬುದಾಗಿ ಲೋಕಮಾನ್ಯೆಯಾಗಿ ಅವಳ ಎಡಬಲದಿ ಮಲೆಯಾಳ ಮಹಾರಾಷ್ಟ್ರ ಕೆಳದಿಯರು ಹಿಡಿದಿಗಲು ಚಾಮರವ, ಜಲಧಿ ಮುಂದೆ, ಬಿಡದಿ ಘೋಷಿಸೆ ತೆಲುಗು ಬೆಳ್ಗೊಡೆಯ ಹಿಡಿಯೆ ಕನ್ನಡ ದೇವಿ ನಿನಗೆ ಸರಿಯಾರು ? ಜಗದಿ' ಎಂದು ಭಟ್ಟರು ಕೇಳಿದರು. ಇಲ್ಲಿಯ ರಾಜ -ಮಹಾರಾಜರು, ಕವಿ ಸಾಹಿತಿಗಳು, ಧರ್ಮ-ಸಿದ್ಧಾಂತಗಳೆಲ್ಲವನ್ನು ನಾಡವರ ಮನದಲ್ಲಿ ಇಳಿಸಿದರು.

ಸಾಲಿ ರಾಮಚಂದ್ರರಾಯರಿಗಂತೂ 'ಕನ್ನಡದ ನೆಲದ ಪುಲ್ಲೆನೆಗೆ ಪಾವನ ತುಲಸಿ । ಕನ್ನಡ ನೆಲದ ನಿರ್ಝರೀನಲೆನಗೆ ದೇವನದಿ । ಕನ್ನಡದ ನೆಲದ ಕಲ್ಲೆನಗೆ ಶಾಲಿಗ್ರಾಮ ಶಿಲೆ ಕನ್ನಡಂ ದೇವ ಮೈ ॥ ಎಂದು ಇಲ್ಲಿಯ ಕಲ್ಲು ಕೂಡ ಶಾಲಿಗ್ರಾಮ ಶಿಲೆ ಎನಿಸಿತು.

ಕೊಪ್ಪಳದ ಅನ್ನದಾನಿ ಅವರು 'ಬರುತಿದೆ ತಾಯಿಯ ಬಂಧ ವಿಮೋಚನ ದಿನವಿದು ಬರುತಿದೆ । ಕನ್ನಡ ವೀರರ, ಕಡುಕಲಿ ಹೃದಯದ ಕನ್ನಡತನವದು ಕೆರಳುತಿದೆ॥ ಎಂಬುದಾಗಿ ವಿಮೋಚನಕ್ಕಾಗಿ ಕಾಯ್ದು ಕನ್ನಡತನವನ್ನು ಕೆರಳಿಸಿದರು.

ನವೋದಯ ಕಾಲದ ಕವಿ ವಿನಾಯಕರು
'ತಾರೆಗಳು ಮೇಳವಿಸಿ ಬಂದು ಬಿಟ್ಟಿಹ ನಾಡು ನಮ್ಮ ಕನ್ನಡದ ನಾಡು ।
ತಾರೆಗಳ ಒಡಹುಟ್ಟು, ತಾರೆಗಳ ಒಡನಾಡಿ ನಮ್ಮ ಕನ್ನಡದ ನಾಡು ॥
ಎಂದರೆ - ರಸಿಕರಂಗರಾದ ಡಾ. ರಂ.ಶ್ರೀ ಮುಗಳಿ ಅವರು
' ಎಂಥ ನಾಡಿದು ಎಂಥ ಕಾಡಾಯಿತೋ ।
ಹುಲುಸಾದ ಬೆಳೆ ಹೋಗಿ ಹುಲ್ಲು ಕೊಳೆ ತುಂಬಿಹುದೋ ॥
ಎಂದು ವ್ಯಥೆ ಪಟ್ಟರು. ಆದರೆ ಕೊನೆಯಲ್ಲಿ
'ಕಾಲ ಭೂತದ ಕಠಿಣ ಕತ್ತಲೆಯ ಸೆರೆಯಲ್ಲಿ ।
ಸಿಲುಕಿರುವ ಪುಲಕೇಶಿ ನೃಪತುಂಗ ಬಲ್ಲಾಳ ಹರಿಹರರೆ ।
ಇಲ್ಲಿಯೇ ಉಸಿರಾಡಿ ಈ ನಾಡು ಕಟ್ಟಿದಾ
ಎಲ್ಲರೇ ಮರಳುವರು ನಿಮ್ಮ ಸಿರಿ ಸೂರೆಗೊಡಲು ॥
ಎಂಬುದಾಗಿ ಧೈರ್ಯ ತಂದುಕೊಟ್ಟರು.
ಮಂಗಳೂರಿನ ಎಸ್. ರಮಾನಂದರು,
'ಎಂಥ ಚಲುವಿನ ನಾಡು ನಮ್ಮದು ನಿತ್ಯ ನೂತನ ನಾಡಿದು ।
ಮಿಂಚಿನೊಲು ಹರಿ - ಹರಿವ ಕಾವೇರಿಯರ ತುಂಗೆಯ ಬೀಡಿದು ॥

ಎಂಬುದಾಗಿ ಇಲ್ಲಿಯ ಜಲಸಂಪತ್ತು, ಸಸ್ಯ ಸಂಪತ್ತು, ಇತಿಹಾಸ, ಧರ್ಮ, ಸಾಹಿತ್ಯ ಎಲ್ಲವನ್ನು ಸೂರೆಗೊಂಡಿದ್ದಾರೆ.

ಬೆನಗಲ್ಲ ರಾಮರಾಯರು

'ಕನ್ನಡಿವನುಳಿದೆನಗೆ । ಅನ್ಯ ಜೀವನವಿಲ್ಲ । ಕನ್ನಡವೆ ಎನ್ನುಸಿರು । ಪೆತ್ತೆನ್ನ ತಾಯಿ । ಕನ್ನಡವೆ ಧನಧಾನ್ಯ ಕನ್ನಡವೆ ಮನೆ ಮಾನ್ಯ । ಕನ್ನಡವೆ ಯೆನಗಾಯ್ತು । ಕಣ್ಣು ಕಿವಿ ಬಾಯಿ ॥ ಎನ್ನುತ್ತ ಅಂದಿನ ದಿನಗಳಲ್ಲಿ ತನು ಮನ ಧನಗಳಿಂದ ಕರ್ನಾಟಕದ ಏಕೀಕರಣಕ್ಕಾಗಿ ಅವಿಶ್ರಾಂತ ದುಡಿದರು.

ಕನ್ನಡದ ಆಸ್ತಿ, ಹಿರಿಯಣ್ಣ ಮಾಸ್ತಿಯವರು ಕನ್ನಡ ನಾಡಿನ ಸ್ಥಿತಿಯನ್ನು ನೆನೆದು ' ಹರಿದು ತುಂಡಾಗಿಹುದು ಇಂದು ಕನ್ನಡ ನಾಡು ; ಅಣ್ಣ ತಮ್ಮಂದಿರು

ತಾವಣ್ಣ - ತಮ್ಮಂದಿರೆಂದು, ತಿಳಿಯಲಾರರು, ನಡೆಯಲಾರರು ; ಬಾ ಬಂಧು ಎಂದು ಕರೆಯಲು ಸ್ವಾಮಿ ನನ್ನೂರು ಧಾರ್ವಾಡ , ಮೈಸೂರು, ಎರಕಾಡು ಇತ್ಯಾದಿಯಾಗಿ ಮರ್ಯಾದೆಯಿಂದ ಕರೆಯಿರಿ ಎಂದಾಗ 'ಕನ್ನಡದ ನಾಡ ಜನವೆಲ್ಲವೂ ನನ್ನವರು ' ಎಂದರು.

ಈ ಸ್ಥಿತಿಯನ್ನು ನೋಡಿದ ತೀ.ನಂ. ಶ್ರೀಕಂಠಯ್ಯನವರು 'ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ । ನಾವು ಸಮನಿಮಗೆಂದು ನುಡಿವ ಬಲವಿಲ್ಲ' ಎಂದು ಮರುಗಿದ್ದಾರೆ.

ನಾಡಿನ ನಾಲ್ಕು ನಿಟ್ಟಿನ ಕವಿಗಳೂ ಕರ್ನಾಟಕದ ಏಕೀಕರಣಕ್ಕೆ ಸ್ಪಂದಿಸಿದ್ದಾರೆ ಎಂದು ಸಾಂಕೇತಿಕವಾಗಿ ತೋರಿಸಲಾಗಿದೆ. ಇವರನ್ನು ಬಿಟ್ಟು ಇನ್ನು ನೂರಾರು ಕವಿಗಳು ಅಂದಿನ ದಿನಗಳಲ್ಲಿ ಕನ್ನಡ ಭಾಷೆ, ನಾಡು, ನಾಡವರ ಕುರಿತು ಸಂಖ್ಯೆ ಇಲ್ಲದ ಕವಿತೆಗಳನ್ನು ರಚಿಸಿ ಕನ್ನಡಿಗರನ್ನು ಜಾಗೃತಗೊಳಿಸಿದ್ದರೆ. ಆನಂದಕಂದ ಕಾವ್ಯನಾಮದ ಬೆಟಗೇರಿ ಕೃಷ್ಣಶರ್ಮರ 'ಎನಿತು - ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು' ಎಂದು ಹಾಡಿದ್ದಾರೆ. ಆ ದಿನಗಳಲ್ಲಿ ಬಾಲಕರಾದಿಯಾಗಿ ಎಲ್ಲರ ಬಾಯೊಳ್ಳ ಈ ಕವಿತೆ ರಾಗ ಬದ್ಧವಾಗಿ ನಲಿಯುತ್ತಿತ್ತು.

✤ ✤ ✤ ✤

ಅಧ್ಯಾಯ -೨೮

• ಕನಸಿನ ಭವ್ಯ ಕರ್ನಾಟಕ

'ನಾನೊಬ್ಬ ಹಿರಿಹುಚ್ಚ ಕರ್ನಾಟಕಸ್ಥಾ
ನನಗೆ ನೀನೊಬ್ಬಳೇ ಕರ್ನಾಟಕಾಂಬೆ ।
ಹಲವು ರೂಪಗಳಲ್ಲಿ ಪೂಜಿಸಿದರೂ ಮತ್ತೆ
ಎಲ್ಲೆಲ್ಲು ನೀ ಕಾಂಬೆ ಕರ್ನಾಟಕಾಂಬೆ ॥

ಎಂದವರು ಕನ್ನಡ ನವೋದಯ ಕಾಲದ ಶ್ರೇಷ್ಠ ಕತೆಗಾರ, ನಾಟಕಗಾರ, ಕವಿಯೆಂದು ಪ್ರಸಿದ್ಧಿ ಪಡೆದ, ವಿಶೇಷವಾಗಿ ಕನ್ನಡ ನಾಡು-ನುಡಿಯ ಗಂಭೀರ ಚಿಂತಕರೆಂದು ಪರಿಚಿತರಾದ ಕೃಷ್ಣಕುಮಾರ ಕಲ್ಲೂರ. ಅವರು ಗದಗ ಜಿಲ್ಲೆಯ ಕಲ್ಲೂರ ಕುಲಕರ್ಣಿಗಳ ಮನೆತನದವರು. ಹುಟ್ಟಿದ್ದು ೨೧-೧೨-೧೯೦೯ರಂದು.

ಕೃಷ್ಣಕುಮಾರ ಹುಟ್ಟಿ ಬೆಳೆದದ್ದು ಭಾರತದ ಅಸಹಕಾರ ಚಳುವಳಿಯ ಯುಗದಲ್ಲಿ. ಟಿಳಕ - ಗಾಂಧೀಜಿ ಅವರ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿಯ ದಿನಗಳಲ್ಲಿ. ಕರ್ನಾಟಕ ಏಕೀಕರಣ ಚಳುವಳಿಯ ಕಾಲದಲ್ಲಿ. ೧೯೨೪ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ. ೧೫ ವರುಷದ ಆದೇ ಆಗ ಮಕ ಮೀಸೆ ಮೂಡುತ್ತಿದ್ದ ಬಾಲಕ ಕೃಷ್ಣ ಕುಮಾರ ಸ್ವಯಂಸೇವಕನಾಗಿ ಹೋಗಿದ್ದ. ಅಂದಿನಿಂದಲೇ ಬಾಲಕನ ಮನದಲ್ಲಿ ಗಾಂಧೀಜಿ ನಾಯಕರಾಗಿ ಉಳಿದರು. ಅಲ್ಲಿ ಮೊಳಗಿದ ಹುಯಿಲಗೋಳ ನಾರಾಯಣರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಧ್ಯೇಯವಾಯಿತು.

ಕವಿ, ಕತೆಗಾರ, ನಾಟಕಗಾರ, ಕಲ್ಲೂರರಿಗಿಂತ , ಕೃಷ್ಣ ಕುಮಾರರು ಕನ್ನಡಿಗರಿಗೆ ಬಹುಕಾಲ ನೆನಪಿನಲ್ಲಿ ಉಳಿಯುವುದು ಒಬ್ಬ ನಾಡು- ನುಡಿಯ ಅಪ್ಪಟ ಹಿತ ಚಿಂತಕರಾಗಿ. ಕರ್ನಾಟಕ ಏಕೀಕರಣ ಚಳುವಳಿಯ ಮೊದಲ ದಿನಗಳಿಂದಲೇ ಅವರಿಗೆ ಕನ್ನಡ ನಾಡಿನ ಬಗ್ಗೆ ಕಳಕಳಿ ಇತ್ತು. ಅದು ಒಬ್ಬ ರಾಜಕೀಯ ಧುರೀಣನಾಗಿಯೋ ಇಲ್ಲ ಸಂಘಟಕನಾಗಿಯೋ ಅಲ್ಲ. ಭಾವನಾವೇಶರಾಗಿಯಂತೂ ಮೊದಲೇ ಅಲ್ಲ. ಸಾವಿರಾರು ವರುಷಗಳ ಕರ್ನಾಟಕದ ಅದ್ಭುತ ಇತಿಹಾಸವನ್ನು ತಿಳಿದುಕೊಂಡ ಅವರಿಗೆ ಅಂದಿನ ಹರಿದು ಹಂಚಿ ಹೋದ ಕರ್ನಾಟಕ ತಮ್ಮ ಕೈ -ಕಾಲು , ಕಣ್ಣು-ಮೂಗುಗಳನ್ನು ಕಳೆದುಕೊಂಡ ದೇಹದಂತೆ ಅನಿಸಿತ್ತು. ಅಂತಲೇ ಅವರು ಬರೀ ಈ ಅವಯವಗಳನ್ನು ಹಚ್ಚಿ ಆಕೃತಿಯನ್ನು ಮಾಡುವುದಷ್ಟೇ ಕರ್ನಾಟಕ ಏಕೀರಣದ ಗುರಿಯಲ್ಲ, ಎಂಬುದನ್ನು ಅವರು ನಾಲ್ವತ್ತರ ದಶಕದಲ್ಲಿಯೇ ತಮ್ಮ ಲೇಖನಗಳಲ್ಲಿ ಸ್ಪಷ್ಟ ಪಡಿಸುತ್ತ ಹೋದರು. ನಾಡನ್ನು ಇನ್ನೂ ಕಟ್ಟದೆ ಇದ್ದಾಗ ಆ

ನಾಡಿನ ಸರ್ವಾಂಗೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಒಂದು ವ್ಯವಸ್ಥಿತ ರೂಪದಲ್ಲಿ ಮೆಟ್ಟಿಲುಗಳನ್ನು ಹತ್ತುವಂತೆ ಕರ್ನಾಟಕದ ಕುರಿತು ಹಲವಾರು ಲೇಖನಗಳನ್ನು ಬರೆದರು. ಅವುಗಳನ್ನೆಲ್ಲ ಒಟ್ಟುಗೂಡಿಸಿ ಓದಿದಾಗ ಇಂದು ಒಂದು ಯೋಜನಾ ಆಯೋಗ ಮಾಡುವಷ್ಟು ಕೆಲಸವನ್ನು ಅವರು ಒಬ್ಬರೇ ಅಂದಿನ ದಿನಗಳಲ್ಲಿ ಮಾಡಿದ್ದರು.

ಅವರ ಸಾಹಿತ್ಯ ಸೃಷ್ಟಿಗೆ ಮಾಹಾಕವಿ ರವೀಂದ್ರನಾಥ ಟಾಗೋರ ಹಾಗೂ ವರಕವಿ ಬೇಂದ್ರೆ ಮೂಲ ಸ್ಫೂರ್ತಿ ಎಂದು ಅವರೇ ಒಂದು ಕಡೆಗೆ ಹೇಳಿಕೊಂಡಿದ್ದಾರೆ. ಅದಕ್ಕೆ ಮುಂಚೆ ಕರ್ನಾಟಕದ ದೀಕ್ಷೆಯನ್ನು ಪಡೆದದ್ದು ಕರ್ನಾಟಕದ ಕುಲಪುರೋಹಿತರಾದ ಆಲೂರು ವೆಂಕಟರಾಯರಿಂದ ಹಾಗೂ ಶಾಂತಕವಿ ಎಂದೇ ಹೆಸರಾದ ಸಕ್ಕರಿ ಬಾಳಾಚಾರ್ಯರಿಂದ. ಅವರಿಗೆ ಕರ್ನಾಟಕದ ಕುರಿತಾದ ಒಂದು ವಿಚಿತ್ರ ವ್ಯಾಮೋಹವಿತ್ತು. ಆಗಿನ್ನೂ ಭಾರತ ಸ್ವಾತಂತ್ರ್ಯವನ್ನು ಪಡೆದಿರಲಿಲ್ಲ. ಕರ್ನಾಟಕದ ಏಕೀಕರಣದ ಕೂಗು ಇತ್ತಾದರೂ ರಾಜ್ಯ ರಚನೆಯೂ ಆಗಿರಲಿಲ್ಲ. ಅರಸರ ಮೈಸೂರು, ನಿಜಾಮನ ಹೈದರಾಬಾದ ಕರ್ನಾಟಕ, ಬ್ರಿಟಿಷರ ಮುಂಬಯಿ - ಮದ್ರಾಸ ಕರ್ನಾಟಕಗಳಲ್ಲದೆ ಹತ್ತಾರು ಚಿಕ್ಕ ಪುಟ್ಟ ಮರಾಠಿ, ಮುಸಲ್ಮಾನೀ ಸಂಸ್ಥಾನಗಳಲ್ಲಿ ಕನ್ನಡ ಜನರು ಹಂಚಿ ಹೋಗದ್ದರು. ಆ ದಿನಗಳಲ್ಲಿ ಕಲ್ಲೂರರು ಏಕೀಕೃತ ಕರ್ನಾಟಕದ ರೂಪುರೇಷೆಗಳನ್ನು ಗುರುತಿಸಿ ಭವ್ಯ ಕರ್ನಾಟಕದ ಕನಸನ್ನು ಕಂಡಿದ್ದರು. 'ಕೂಸು ಹುಟ್ಟುವ ಮೊದಲೆ ಕುಲಾವಿ' ಎಂಬಂತೆ ! ಅಂದು ಉಪಲಬ್ಧವಿದ್ದ ಸುಮಾರು ಇಪ್ಪತ್ತು ಗಡಿ- ಮೇರೆಗಳನ್ನು ಆಧರಿಸಿ ೧೯೪೭೦ರಲ್ಲಿ ಅಖಂಡ ಕರ್ನಾಟಕದ ನಕ್ಷೆಯನ್ನು ಅವರು ಬಿಡಿಸಿದ್ದರು. ಹಾಗೆ ಒಂದು ಗೂಡುವ ಕರ್ನಾಟಕದ ಗಡಿ ಮೇರೆಗಳನ್ನು ಗುರುತಿಸಿದ್ದು. ತಾಲೂಕು - ಜಿಲ್ಲೆ ವಿಭಾಗಗಳನ್ನು ವಿಂಗಡಿಸಿ ರಸ್ತೆ - ರೈಲು- ವಿಮಾನ ದಾರಿಗಳ ರೇಖೆಗಳನ್ನು ಎಳೆದಿದ್ದರು. ನಗರ - ಪಟ್ಟಣಗಳ ಬೆಳವಣಿಗೆಗಳನ್ನು ಟಿಪ್ಪಣಿಸಿದ್ದರು. ರಾಜ್ಯ ಪುನರಚನೆಯಾಗುವ ಮೊದಲೆ ಈ ಕುರಿತಾದ ಖಚಿತ ಅಂಕಿ - ಸಖ್ಯೆಗಳನ್ನು ಒದಗಿಸಿ ಹಲವಾರು ನಕ್ಷೆಗಳನ್ನು ಬಿಡಿಸಿ, ಬೆಂಗಳೂರು, ಮುಂಬಯಿ, ಕಲಬುರ್ಗಿ ಮೊದಲಾದ ನಗರಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿದ್ದರು. ಅಂದಿನ ರಾಷ್ಟ್ರೀಯ ನಾಯಕರ ಲಕ್ಷ್ಯವನ್ನು ಸೆಳೆದಿದ್ದರು. ಅಂಥದೊಂದು ಪ್ರದರ್ಶನವನ್ನು ನೋಡಿದ ಪಂಡಿತ ಜವಾಹರಲಾಲ ನೆಹರು ಅವರು ಕಲ್ಲೂರರ ಸಾಹಸಕ್ಕೆ ಬೊಟ್ಟು ಕಚ್ಚಿದ್ದರು.

''ರಾಜ್ಯ ರಚನೆಯ ಮೊದಲೇ ಇಷ್ಟೊಂದು ಸಿದ್ಧತೆಯಾಗಿದ್ದರೆ ನಂತರದ ಕರ್ನಾಟಕವು ಖಂಡಿತವಾಗಿಯೂ ಮಾದರಿಯಾಗುತ್ತದೆ'' ಎಂದು ಭವಿಷ್ಯ ನುಡಿದಿದ್ದರು. ಅವರು ಭವಿಷ್ಯ ನುಡಿದದ್ದಷ್ಟೇ ಆಯಿತು ! ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ ಅವರುಗಳು ಕೂಡ ಕಲ್ಲೂರರ ಪ್ರದರ್ಶನ ಕಂಡು ಮೂಕ ವಿಸ್ಮಿತರಾಗಿದ್ದರು. ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್.ಆರ್.

ಕಂಠಿ ಅವರುಗಳು ಅನಂತರದ ದಿನಗಳಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ ಕಲ್ಲೂರ ಅವರಿಂದ ಹಲವಾರು ನಕ್ಷೆಗಳನ್ನು, ಯೋಜನೆಗಳ ವಿವರಗಳನ್ನು, ಟಿಪ್ಪಣಿಗಳನ್ನು ಕೇಳಿ ಪಡೆದಿದ್ದರು. ಆದರೆ ಆ ನಕ್ಷೆಗಳ, ಯೋಜನೆಗಳ ಉಪಯೋಗವನ್ನು ಅಧಿಕಾರದಲ್ಲಿದ್ದವರು ಮಾಡಲೇ ಇಲ್ಲ. ಇಂದು ಆ ನಕ್ಷೆಗಳೂ ಇಲ್ಲ. ಯೋಜನೆಗಳ ವಿವರಗಳು ಅಲ್ಲಲ್ಲಿ ಬಿದ್ದು ಚಲ್ಲಾಪಿಲ್ಲಿಯಾಗಿವೆ. ಅವರು ಕನಸು ಕಂಡ ಭವ್ಯ ಕರ್ನಾಟಕದ ನಾಡಿನ ರೂಪವೂ ಇಲ್ಲ. ಇದ್ದ ಕರ್ನಾಟಕದ ಅಭಿವೃದ್ಧಿಯೂ ಅವರ ಯೋಜನೆಗಳ ಸಹಾಯವನ್ನು ಪಡೆಯಲಿಲ್ಲ . ವಿಸ್ಮಯದ ವಿಷಯವೆಂದರೆ, ಹೊಸ ತಲೆಮಾರಿನ ಜನರಿಗೆ ಕಲ್ಲೂರರ ಹೆಸರೂ ಗೊತ್ತಿಲ್ಲ.

ಇಂದು ಕರ್ನಾಟಕ ನಿರ್ಮಾಣವಾಗಿ ೫೦ ವರುಷಗಳಾಗಿವೆ. ಅದು ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ರಾಜ್ಯದಲ್ಲಿಯ ತಾಲ್ಲುಕು, ಜಿಲ್ಲೆ ವಿಭಾಗಗಳನ್ನು ಪುನರ್ನಿರ್ಮಿಸಲು ಮೂರು ಆಯೋಗಗಳನ್ನು ರಾಜ್ಯ ಸರಕಾರವು ನಿಯಮಿಸಿತು. ಮೂರು ಆಯೋಗಗಳ ವರದಿಗಳೂ ಬಂದುವು. ಆದರೂ ರಾಜ್ಯ ನಿರ್ಮಾಣ ಪೂರ್ವದ ಅಷ್ಟೇ ಏಕೆ ಸ್ವಾತಂತ್ರ್ಯ ಪೂರ್ವ ಭಾರತದಲ್ಲಿದ್ದ ನಮ್ಮ ತಾಲೂಕು, ಜಿಲ್ಲೆ, ವಿಭಾಗಗಳಲ್ಲಿ ಯಾವ ಬದಲಾವಣೆಯೂ ಇಲ್ಲ !

ಇಂದು ನಮ್ಮ ರಾಜ್ಯದಲ್ಲಿದ್ದ ತಾಲೂಕುಗಳು, ಜಿಲ್ಲೆಗಳು ವಿಭಾಗಗಳು ಅಂದಿನ ಆಳರಸರ ಆಡಳಿತಕ್ಕೆ ಅನುಕೂಲವಾಗಲಿ ಎಂದು ರೂಪಿಸಿಕೊಂಡಿದ್ದವುಗಳು. ಹಿಂದಿನ ರಾಜ, ಮಹಾರಾಜರುಗಳು, ನೆಲವನ್ನು ಗೆದ್ದಂತೆ ಸುಭೆಗಳನ್ನೂ, ಇಲಾಖೆಗಳನ್ನೂ ನಿರ್ಮಿಸಿದಂತೆ, ಬ್ರಿಟಿಷರು, ನಿಜಾಮರು , ಮೈಸೂರು ಅರಸರು ರೂಪಿಸಿದ್ದ ತಾಲೂಕು - ಜಿಲ್ಲೆಗಳೇ ಇಂದಿಗೂ ಮುಂದುವರಿದುಕೊಂಡು ಬಂದಿವೆ. ಅವುಗಳಿಗೆ ಯಾವುದೊಂದು ವ್ಯವಸ್ಥಿತವಾದ ನೆಲೆಗಟ್ಟು ಏಕರೂಪತೆ ಇರಲಿಲ್ಲ - ಇಲ್ಲ. ಅಂಥ ವ್ಯವಸ್ಥೆಯಿಂದ ಅಭಿವೃದ್ಧಿಯು ಕುಂಠಿತವಾಗುತ್ತದೆ. 'ಕರ್ನಾಟಕಕ್ಕೆ ಇನ್ನು ನಾಲ್ಕು ಬೆಂಗಳೂರುಗಳು ಬೇಕು' ಎಂಬ ಒಂದು ಲೇಖನದಲ್ಲಿ ಕೃಷ್ಣಕುಮಾರರು ಏಕರೂಪದ ಆಡಳಿತಕ್ಕೆ ಅಭಿವೃದ್ಧಿಗೆ ಜಿಲ್ಲೆಗಳು, ವಿಭಾಗಗಳು, ಮಂಡಲಗಳು ನೈಜ - ನೈಸರ್ಗಿಕವಾದವುಗಳಾಗಿರಬೇಕು ಎಂದು ಹೇಳುತ್ತಾರೆ. ಉದಾಹರಣೆಗೆ ಇಂದಿನ / ಹಿಂದಿನ ಬೆಳಗಾವಿ ವಿಭಾಗದಲ್ಲಿ ಬರುವ ಕಾರವಾರ, ಬೆಳಗಾವಿ, ಧಾರವಾಡ ಹಾಗೂ ವಿಜಾಪುರ ಜಿಲ್ಲೆಗಳು - ನೈಸರ್ಗಿಕವಾಗಿ ಒಂದಕ್ಕೊಂದು ಸಂಬಂಧವಿಲ್ಲದವುಗಳು. ಕಾರವಾರ ಜಿಲ್ಲೆ ಕರಾವಳಿ, ಬೆಟ್ಟಗುಡ್ಡಗಳಿಂದ - ಅರಣ್ಯಗಳಿಂದಾಗಿದ್ದರೆ ವಿಜಾಪುರ ಜಿಲ್ಲೆ ಪೂರ್ತಿ ಬೆಳವಲ ನಾಡು, ಕರಾವಳಿ ಇಲ್ಲ. ಬೆಟ್ಟಗುಡ್ಡಗಳಿಲ್ಲ, ಅರಣ್ಯವಿಲ್ಲ. ಉಭಯ ಜಿಲ್ಲೆಗಳಲ್ಲಿಯ ಆಹಾರ, ವೇಷಭೂಷಣ, ಆಚಾರ - ವಿಚಾರಗಳಲ್ಲೂ ಅಂತರವಿದೆ. ಮಧ್ಯದ ಧಾರವಾಡ, ಬೆಳಗಾವಿ ಜಿಲ್ಲೆಗಳು ಮಲೆನಾಡು ಹಾಗೂ ಮಲೆನಾಡ ಸೇರಗಿನಲ್ಲಿ ಬರುವವು. ಹೀಗೆ ಒಂದಕ್ಕೊಂದು ವಿರುದ್ಧವಾದ ಜಿಲ್ಲೆಗಳನ್ನು ಒಂದುಗೂಡಿಸಿ ಒಬ್ಬ ವಿಭಾಗಾಧಿಕಾರಿಯನ್ನು ನಿಯಮಿಸಿದರೆ, ಆತ ಆಡಳಿತಕ್ಕೆ ,

ಅಭಿವೃದ್ಧಿಗೆ ಎಷ್ಟು ತರದ ಯೋಜನೆಗಳನ್ನು ಹಾಕಿಕೊಳ್ಳಬೇಕು ? ಎಂದು ಕೇಳಿದ್ದಾರೆ. ಬದಲಾಗಿ ಏಕರೂಪದ ನೈಸರ್ಗಿಕ ಜಿಲ್ಲೆಗಳನ್ನು ನಿರ್ಮಿಸಿದರೆ ಎಷ್ಟು ಉಪಯುಕ್ತ ! ಉತ್ತರ - ದಕ್ಷಿಣ ಕನ್ನಡ ಜಿಲ್ಲೆಗಳನ್ನು (ಇಂದಿನ ಮಂಗಳೂರು, ಉಡುಪಿ ಮತ್ತು ಕಾರವಾರ ಜಿಲ್ಲೆಗಳು) ಒಂದು ವಿಭಾಗವನ್ನು ಮಾಡಿ 'ಕರಾವಳಿ ಮಂಡಲ' ಎಂದು ಕರೆಯಬಹುದಾಗಿದೆ. ಒಣಹವೆಯ ರೊಟ್ಟಿ ನಾಡಿನ ಜಿಲ್ಲೆಗಳ ಒಂದು ಅಥವಾ ಎರಡು ಮಂಡಲಗಳನ್ನು, ಅಕ್ಕಿಯ ನಾಡಿನ ಮತ್ತೆ ಎರಡು ಮಂಡಲಗಳು ಹೀಗೆ ರಾಜ್ಯದಲ್ಲಿ ಮಂಡಲಗಳನ್ನು ನಿರ್ಮಿಸಿ ಅವುಗಳಿಗೆ ಒಂದು ಪಟ್ಟಣದ ಹೆಸರಿನಿಂದ ವಿಭಾಗಗಳನ್ನು ಕರೆಯುವ ಬದಲು ಕರಾವಳಿ, ಕೃಷ್ಣಾ, ಭೀಮಾ, ತುಂಗಭದ್ರಾ ಮತ್ತು ಕಾವೇರಿ ಮಂಡಲಗಳೆಂದು ಕರೆಯಬಹುದಲ್ಲ ಎಂದು ಕೇಳಿದ್ದಾರೆ.

''ಇಕೋ ಈ ಕರಾವಳಿಯ ಮೈಯೊಡ್ಡಿ
ಹಬ್ಬಿರುವ ನೃತ್ಯ ಭಂಗಿಯ ಅಂಗರೇಖೆಯಲ್ಲಿ !
ಸಾಗರದನಂತತೆಯ ಅಭಿಸಾರ ತೋರುತ್ತ
ಅಭಿಲಾಷೆ ಕೈಚಾಚಿ ಕರೆವುದಿಲ್ಲಿ''

೧೯೬೩ರ ಸಪ್ಟೆಂಬರ್‌ನಲ್ಲಿ ಕಾರವಾರದ ಕಡಲುಂಚನ್ನು ಕಂಡ ಕೃಷ್ಣ ಕುಮಾರ ಕಲ್ಲೂರರ ಕವಿ ಹೃದಯ ಹಾಡಿದ ಗೀತೆಯೊಂದರ ಮೊದಲ ನಾಲ್ಕು ಸಾಲುಗಳಿವು. ಕಲ್ಲೂರರಿಗೆ ಕರ್ನಾಟಕದ ನಗರಗಳ ಕುರಿತು ಎಲ್ಲಿಲ್ಲದ ಅಭಿಮಾನ. ಬಂದರುಗಳಾಗಲಿ, ಒಳನಾಡಿನ ಪಟ್ಟಣಗಳೇ ಆಗಲಿ, ಅವುಗಳ ಬೆಳವಣಿಗೆ, ಔದ್ಯೋಗಿಕ ಕೇಂದ್ರಗಳ ವಿಕೇಂದ್ರೀಕರಣ, ಆಡಳಿತ ಕಾರ್ಯಾಲಯಗಳ ವಿಕೇಂದ್ರೀಕರಣ ಇತ್ಯಾದಿ ವಿಷಯಗಳ ಕುರಿತು ಅವರು ಚಿಂತಿಸಿದ ರೀತಿ ಅನನ್ಯವಾಗಿದೆ. ರಾಜ್ಯದ ಎಲ್ಲಾ ಜಿಲ್ಲಾ ಸ್ಥಳಗಳೂ ಸಮಾನ ರೀತಿಯಾಗಿ ಬೆಳೆಯುವಂತೆ ಅವರು ಯೋಜನೆಗಳನ್ನು ರೂಪಿಸಿದ್ದರು.

ಪಶ್ಚಿಮ ಘಟ್ಟಗಳ ಅಭಿವೃದ್ಧಿ, ಕರ್ನಾಟಕದ ಬಂದರುಗಳ ಅಭಿವೃದ್ಧಿ, ರೈಲು ಮಾರ್ಗ ಇತ್ಯಾದಿಯಾಗಿ ಅವರು ಎಲ್ಲದರ ಕುರಿತು ಖಚಿತ ಅಂಕಿ ಸಂಖ್ಯೆಗಳೊಂದಿಗೆ ಬರೆದದ್ದು ಇಂದಿಗೂ ಅಧಿಕಾರದಲ್ಲಿದ್ದವರಿಗೆ ಮಾರ್ಗದರ್ಶಕವಾಗಿವೆ. 'ನಾಲ್ವತ್ತು ವರುಷಗಳ ಕರ್ನಾಟಕದ ರೈಲು ಯೋಜನೆ' ಲೇಖನದಲ್ಲಿಯ ವಿವರಗಳನ್ನು ರೇಲ್ವೆ ಇಲಾಖೆಯೂ ಅಷ್ಟು ವ್ಯವಸ್ಥಿತವಾಗಿ ಮಂಡಿಸಲು ಸಾಧ್ಯವಿಲ್ಲವೇನೋ ಎಂಬಂತಿವೆ. ರಾಜ್ಯ ಉದಯದ ಸಂದರ್ಭದಲ್ಲಿಯೇ ಬರೆದ ಲೇಖನದಲ್ಲಿ ಪ್ರತಿವರುಷ ೫೦ ಮೈಲಿಗಳಂತೆ ನಾಲ್ವತ್ತು ವರುಷಗಳಲ್ಲಿ ಕರ್ನಾಟಕದಲ್ಲಿ ೨೦೦೦ ಮೈಲು ಎಂದರೆ ಇಂದಿನ ಸುಮಾರು ಮೂರು ಸಾವಿರ ಕಿಲೋಮೀಟರು ರೈಲು ಮಾರ್ಗವನ್ನು ರಾಜ್ಯದವರೇ ಮಾಡಬಹುದಾಗಿತ್ತು. ಯೋಜನೆಯನ್ನು ಮಾಡಿ ನಾಲ್ಕು ದಶಕಗಳೇ ಕಳೆದವು. ಕಿತ್ತಿದ ಹುಟಗಿ- ಗದಗ ರೈಲು ಮಾರ್ಗವನ್ನು ಇಂದಿಗೂ ಜೋಡಿಸಲಾಗಿಲ್ಲ.

ಹಂತ ಹಂತವಾಗಿ ಕೈಕೊಳ್ಳುವ ಹೊಸ ರೈಲು ಮಾರ್ಗಗಳ ಖಚಿತ ನಿರ್ದೇಶನ ಅದರಿಂದ ಯೋಜನೆ ಪೂರ್ತಿಗೊಂಡಾಗ ನಮ್ಮ ರಾಜ್ಯದಲ್ಲಿಯ ಪ್ರತಿಯೊಬ್ಬನೂ ರೈಲು ನಿಲ್ದಾಣದಿಂದ ಗರಿಷ್ಠ ೧೫ ಕಿ.ಮೀ. ಅಂತರದಲ್ಲಿರುತ್ತಿದ್ದ ! ಇಂದು ಕೇಳಿ ಬರುವ ಮಿರಜ - ಜಮಖಂಡಿ, ಕಡೂರ- ಸಕಲೇಶಪುರ, ಹುಬ್ಬಳ್ಳಿ , ಯಲ್ಲಾಪುರ-ಕಾರವಾರ ಇತ್ಯಾದಿ ರೈಲು ಮಾರ್ಗಗಳ ಯೋಜನೆಯನ್ನು ಅವರು ಅಂದೆಯೇ ಹೇಳಿದ್ದರು.

'ಕರ್ನಾಟಕದ ಆರ್ಥಿಕ ಅಸ್ತಿವಾರ' ಎಂಬ ಒಂದು ಸುದೀರ್ಘ ಲೇಖನದಲ್ಲಿ ಅವರು ಕರ್ನಾಟಕವು ಒಂದು ಸ್ವತಂತ್ರ ರಾಷ್ಟ್ರ ಆಗಿರಲು ಬೇಕಾದ ಅನುಕೂಲತೆಗಳು ಇವೆ ಎಂದು ಪ್ರತಿಪಾದಿಸಿದ್ದಾರೆ. ಒಂದು ಸ್ವತಂತ್ರ ಸ್ವಾಯತ್ತ ರಾಷ್ಟ್ರಕ್ಕೆ ಇರಬೇಕಾದ ಸದೃಢತೆ - ಸಂಪನ್ನತೆಗಳು ಕರ್ನಾಟಕ ರಾಜ್ಯಕ್ಕೆ ಇವೆಯೆಂದು ಸಾಧಾರಪೂರ್ವಕವಾಗಿ ಹೇಳಿದ್ದಾರೆ. ಅಮೇರಿಕೆಯ ಸಂಯುಕ್ತ ಸಂಸ್ಥಾನದ ಡಾ. ರಿಚರ್ಡ್ ಎಂ. ಫೀಲ್ಡ ಎಂಬುವರು ಯಾವುದೊಂದು ರಾಷ್ಟ್ರೀಯ ಆರ್ಥಿಕ ಅಸ್ತಿವಾರಕ್ಕೆ ಮೂಲಭೂತವಾದ ಎಂಟು ಲಕ್ಷಣಗಳನ್ನು ಹೇಳಿದ್ದಾರೆ. ಅವು ೧. Physiography (ಸುಸಂಬದ್ಧ ಸದೃಢ ಭೂ ರಚನೆ - ಭೂಪ್ರದೇಶ) ೨. Climate and Weather (ಅನುಕೂಲವಾದ ಹವಾಮಾನ) ೩. Water Resources (ಯಥೇಚ್ಛವಾದ ಜಲ ಸಂಪತ್ತು, ಮಳೆ ಹಾಗೂ ನದಿ, ಸರೋವರಗಳು ಜಲಪಾತಗಳು) ೪.Soil Resources (ಸಮೃದ್ಧವಾದ ಫಲವತ್ತಾದ ಭೂಮಿ)೫. Forests (ಸದೃಢವಾದ ಅರಣ್ಯ ಸಂಪತ್ತು, ಪರ್ವತಾವಳಿಗಳು, ಕೊಳ್ಳಗಳು, ಬಯಲುಗಳು)೬. Mines or Minaral Resources (ಖನಿಜ ಸಂಪತ್ತು) ೭. Raw materials - Organic and in organic (ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತು. ಮತ್ತು ೮. Stimulus (ಕಾರ್ಯಶಕ್ತಿ) ಹೀಗೆ ಎಂಟು ಪ್ರಕಾರದ ಆರ್ಥಿಕ ಸಂಪತ್ತುಗಳನ್ನು ಹೇಳಿದ ಡಾ. ಫೀಲ್ಡರು ತಮ್ಮ ರಾಷ್ಟ್ರ ಅಮೇರಿಕದಲ್ಲಿ ಈ ಎಂಟೂ ಪ್ರಕಾರದ ಆರ್ಥಿಕ ಸಂಪತ್ತುಗಳ ಸಮೃದ್ಧಿ ಇದೆ ಎಂದು ತಮ್ಮ ಉದ್ಗ್ರಂಥ 'ದಿ ನ್ಯಾಚುರಲ್ ರಿಸೋರ್ಸ್ ಆಫ್ ದಿ ಯುನೈಟೆಡ್ ಸ್ಟೇಟ್ಸ್' ದಲ್ಲಿ ಪ್ರತಿಪಾದಿಸಿದ್ದಾರೆ. ಅವುಗಳನ್ನು ಕಲ್ಲೂರರು ಕರ್ನಾಟಕ ರಾಜ್ಯಕ್ಕೆ ಅನ್ವಯಿಸಿ ಇನ್ನೆರಡು ಪ್ರಕಾರಗಳಾದ ಜನ ನಿಬಿಡತೆ ಮತ್ತು ಆಹಾರ ಸಮೃದ್ಧಿಯ ಸಂಭಾವ್ಯತೆಯನ್ನೂ ಗಮನದಲ್ಲಿಟ್ಟುಕೊಂಡು, ಕರ್ನಾಟಕ ರಾಜ್ಯದಲ್ಲಿ ಈ ಹತ್ತು ಪ್ರಕಾರಗಳ ಆರ್ಥಿಕ ಸಂಪತ್ತನ್ನು ಚರ್ಚಿಸಿದ್ದಾರೆ. ಒಂಭತ್ತು ಪ್ರಕಾರಗಳ ಸಂಪತ್ತು ಕರ್ನಾಟಕ ರಾಜ್ಯದಲ್ಲಿ ಯಥೇಚ್ಛವಾಗಿ ಇದ್ದು ಹತ್ತನೆಯದಾದ ಕಾರ್ಯಶಕ್ತಿಯ ಕೊರತೆಗಾಗಿ ಮರುಕ ಪಟ್ಟಿದ್ದಾರೆ. ಯಾವುದೊಂದು ದೇಶವು ಜನ - ಧನ ಬಲದಿಂದ ಎಷ್ಟೇ ಸಮೃದ್ಧವಾಗಿರಲಿ 'ಮನ' ಬಲವಿಲ್ಲದಿದ್ದರೆ, ಮುಂದೆ ಬರುವುದು ಸಾಧ್ಯವೇ ಇಲ್ಲ ಎಂದಿದ್ದಾರೆ. ಇದು ಕರ್ನಾಟಕವು ಒಂದು ಸ್ವತಂತ್ರ ರಾಷ್ಟ್ರ

ಆಗಬೇಕು ಎಂದೇನೂ ಅಲ್ಲ. ಆ ದೃಷ್ಟಿಯಿಂದ ಅವರು ಲೇಖನವನ್ನು ಬರೆಯಲಿಲ್ಲ. ರಾಷ್ಟ್ರವಾಗಿ ಇರಬೇಕಾದ ಅವಕಾಶಗಳು ಇದ್ದೂ ಒಂದು ರಾಜ್ಯವಾಗಿ ಅಭಿವೃದ್ಧಿ ಪಡೆಯಲು ಸಾಧ್ಯವಾಗಿಲ್ಲವಲ್ಲ ಎಂಬ ಕಳಕಳಿಯಿಂದ ಬರೆದ ಲೇಖನವಿದು. ಕರ್ನಾಟಕ ರಾಜ್ಯೋದಯದ ಆಸು-ಪಾಸಿನಲ್ಲಿ ಬರೆದ ಈ ಲೇಖನ ಇಂದಿಗೂ ಪ್ರಸ್ತುತವಾಗಿದೆ ಅದರಂತೆ ಅವರ ಇನ್ನೊಂದುಲೇಖನ 'ಕಾಯುತಿದೆ ಕರ್ನಾಟಕ ವಿಶ್ವೇಶ್ವರಯ್ಯನವರಿಗಾಗಿ' ಎಂಬುದೂ ಅಪರೂಪದ್ದಾಗಿದೆ. ಇಂದು ವಿಶ್ವೇಶ್ವರಯ್ಯನವರೊಂದಿಗೆ ಕಲ್ಲೂರರರ್ರೂ ಕಾಯಬೇಕಾಗಿದೆ !

ಪತ್ರಿಕಾ ವ್ಯವಸಾಯದಲ್ಲೂ ಅವರದು ಎತ್ತಿದ ಕೈಯಾಗಿತ್ತು. ಪ್ರಾರಂಭದಲ್ಲಿಯ 'ಜಯ ಕರ್ನಾಟಕ' ಮಾಸಪತ್ರಿಕೆಯೊಂದಿಗಿದ್ದ ಅವರ ನಿಕಟ ಸಂಪರ್ಕ - ಸಂಬಂಧಗಳಿಂದ ದೊರೆತ ಅನುಭವ ಕೊನೆಗಾಲದವರೆಗೂ ಅವರು ಒಂದಿಲ್ಲೊಂದು ಪತ್ರಿಕೆಯೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳುವಂತಾಯಿತು. ಅಂದಿನ ದಿನಗಳಲ್ಲಿ ರಾಷ್ಟ್ರೀಯ ಪ್ರಮುಖ ಕನ್ನಡ ವಾರಪತ್ರಿಕೆಯಾದ 'ಕರ್ಮವೀರ' ದ ಸಂಕಷ್ಟದ ದಿನಗಳಲ್ಲಿ ಅದರ ಸಂಪಾಕದಕರಲ್ಲಿ ಒಬ್ಬೊಬ್ಬರಾಗಿ ಸೆರೆಮನೆ ಸೇರಿದಾಗ ಕಲ್ಲೂರರು ತೆರೆಯ ಮರೆಯಲ್ಲಿ ನಿಂತು ಕೆಲಸ ಮಾಡಿದರು. ಕೆಲ - ಕಾಲ 'ಕರ್ಮವೀರ' ವನ್ನು ಸಂಪಾದಿಸಿದರು. ಮುಂಬಯಿಗೆ ಬಂದ ಅನಂತರ ೪೦ರ ದಶಕದಲ್ಲಿ ಮುಂಬಯಿಯಿಂದ ಹೊರಡುತ್ತಿದ್ದ 'ನುಡಿ'ವಾರಪತ್ರಿಕೆಯ ಸಂಪರ್ಕ ಅವರಿಗೆ ಬಂದಿತು. ಅಂದಿನ ದಿನಗಳಲ್ಲಿ 'ನುಡಿ' ಪತ್ರಿಕೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಶ್ರಮಿಸಿದರಲ್ಲದೆ, 'ಕರ್ನಾಟಕದ ಕೂಟ ಪ್ರಶ್ನೆಗಳು' ಎಂಬ ಸ್ಥಿರ ಶೀರ್ಷಿಕೆಯನ್ನು ಪ್ರಾರಂಭಿಸಿದರು. ಅದರ ಅಡಿಯಲ್ಲಿ ವಾರ - ವಾರವೂ ಕನ್ನಡ ನಾಡು, ನುಡಿ ಮತ್ತು ಜನರ ಬಗ್ಗೆ ಬರೆದರು. ಇದು ಅಂಕಿ -ಸಂಖ್ಯೆಗಳ ಆಧಾರದಿಂದ ನಾಡು ನುಡಿಯ ಯೋಜನೆ - ವಿವರಗಳ ಲೇಖನ ಮಾಲೆಯೇ ಆಗಿತ್ತು. ಇದರಂತೆ ಇನ್ನೊಂದು ಅಂಕಣ 'ರಾಜ್ಯದ ರಾಜಧಾನಿಯಿಂದ' ಎಂಬ ಕಾಲ್ಪನಿಕ ಅಂಕಣವನ್ನು 'ವೈತಾಲಿಕ' ಎಂಬ ಹೆಸರಿನಿಂದ ಬರೆಯುತ್ತಿದ್ದರು. ಆಗಿನ್ನೂ ರಾಜ್ಯ ಉದಯವಾಗಿರಲಿಲ್ಲ. ಹರಿದು ಹಂಚಿ ಹೋಗಿದ್ದ ಕರ್ನಾಟಕ ರಾಜ್ಯವು ಒಂದಾಗಿ ರೂಪುಗೊಂಡಂತೆ ಭಾವಿಸಿ ಅದರ ರಾಜಧಾನಿ 'ವೈಜಯಂತಿ' ಎಂಬ ಪಟ್ಟಣವನ್ನು ಕಲ್ಪಿಸಿದರು. ಅಲ್ಲಿಂದ ಈ ಸುದ್ದಿಗಾರ ತನ್ನ ಪತ್ರಿಕೆಗೆ ಸುದ್ಧಿಗಳನ್ನು ನೀಡುತ್ತಿದ್ದಂತೆ ಕಲ್ಪಿಸಿ ಅಂಕಣಗಳನ್ನು ಬರೆದರು. ಅಂದು ಆ ಸುದ್ಧಿಗಳು ಅಂದಿನವರಿಗೆ ರಂಜನೀಯ ಎನಿಸಿರಬಹುದು. ಅವುಗಳೇ ಇಂದು ಗಂಭೀರವಾಗಿಯೂ ರಾಜ್ಯದ ಅಭಿವೃದ್ಧಿಯಲ್ಲಿ ಮಾರ್ಗದರ್ಶಿಯಾಗಿಯೂ ಆಗಬಲ್ಲುದು. ಉದಾಹರಣೆಗೆ, ಆಗಸ್ಟ್ ೨೪, ೧೯೪೭ರ ಸಂಚಿಕೆಯಲ್ಲಿ ಪ್ರಕಟವಾದ 'ರಾಜ್ಯದ ರಾಜಧಾನಿಯಿಂದ' ಎಂಬ ಕಲ್ಪನೆ ಬೆರೆತ ಅಂಕಣದ ಸಾರ ಹೀಗಿದೆ. ''ಕರ್ನಾಟಕದ ಬಂದರುಗಳ ವಿಚಾರ ಮತ್ತೂ ಮತ್ತೂ ನೆನೆಗುದಿಗೆ ಬಿದ್ದರೂ ಹುಬ್ಬಳ್ಳಿ - ಕಾರವಾರ ಹಳಿದಾರಿಯ ಜೋಡಣೆ ಕೇಂದ್ರ ಸರ್ಕಾರದಿಂದ

ಮಂಜೂರಾಗಿದೆ.... ಅದರಲ್ಲಿ ಹುಬ್ಬಳ್ಳಿ - ಯಲ್ಲಾಪುರ ಭಾಗವನ್ನು ಕೂಡಲೇ ನಿರ್ಮಿಸುವುದು ಎಂದು ಗೊತ್ತಾಗಿದೆ. ಈ ಪ್ರಯತ್ನಕ್ಕೆ ಬೆಂಬಲ ಸಿಕ್ಕಿದ್ದು, ಲಾಲಗುಳಿ ತಡಸಲದ ವಿದ್ಯುತ್ ಯೋಜನೆಯ ಮೂಲಕ ಮೆಟ್ಟೂರಿನಲ್ಲಿರುವಂತೆ ಇಲ್ಲಿಯೂ ಒಂದು ಹೈಡ್ರೋ ಕೆಮಿಕಲ್ ವರ್ಕ್‌ಶಾಪ್ ಸ್ಥಾಪಿಸುವುದನ್ನು ಕರ್ನಾಟಕ ಕೈಗೊಂಡಿದೆ. ಈ ವಿದ್ಯುತ್ ಯೋಜನೆ ಹಾಗೂ ಔದ್ಯೋಗಿಕ ಯೋಜನೆಗಳು ಬೇಗನೆ ಮುಂದುವರಿಸುವುದಕ್ಕಾಗಿ ಹುಬ್ಬಳ್ಳಿ - ಯಲ್ಲಾಪುರ ರೈಲು ಅತ್ಯವಶ್ಯವಾಗಿ ಕುಳಿತಿದೆ'' ಎಂದು ಬರೆಯುತ್ತ,ಅದನ್ನು ಮುಂದವರೆಸಿ ''ಹುಬ್ಬಳ್ಳಿಯಲ್ಲಿರುವ ವರ್ಕ್‌ಶಾಪ್‌ನ್ನು ಯಲ್ಲಾಪುರಕ್ಕೇ ಒಯ್ಯಬೇಕೆಂಬ ಒಂದು ವಿಚಾರವಂತೆ, ಅಲ್ಲಿ ವಿದ್ಯುತ್ ಶಕ್ತಿ ಹಾಗೂ ಕಟ್ಟಿಗೆಯ ಪೂರೈಕೆ ಸಾಕಾಗುವಷ್ಟು ಇರುವುದರಿಂದ ವರ್ಕಶಾಪಿಗೆ ಅದು ಯೋಗ್ಯವೆನಿಸಿದರೂ ಯಲ್ಲಾಪುರವು ಮಲೆನಾಡು ಆದದ್ದರಿಂದ ಅಲ್ಲಿ ಕೂಲಿ - ಕುಂಬಳಿಯ ಪೂರೈಕೆ ಇಲ್ಲದ್ದರಿಂದ ಈ ಮಾತು ಹಿಂದೆ ಬಿದ್ದಿದೆ. ಕೇಂದ್ರ ಸರಕಾರವು ಈ ವಿಷಯದಲ್ಲಿ ಅನುಕೂಲ ನಿಶ್ಚಯಕ್ಕೆ ಬಂದರೆ, ಹೊಸದಾಗಿ ಇದೇ ವರುಷ ಸ್ಥಾಪಿಸಲಿರುವ ಕರ್ನಾಟಕ ಇಂಜಿನಿಯರಿಂಗ್ ಕಾಲೇಜಿಗೆ ಈಗಿನ ರೇಲ್ವೆ ವರ್ಕ್‌ಶಾಪನ್ನೇ ಮಾರ್ಪಡಿಸಬಹುದೆಂದು ಕರ್ನಾಟಕ ಯೋಚಿಸಿದೆ.'' ಇದು ಪ್ರಕಟವಾದಾಗ ಭಾರತಕ್ಕೆ ಸ್ವಾತಂತ್ರ್ಯ ದೊರೆತು ಕೇವಲ ಒಂಭತ್ತು ದಿನಗಳಾಗಿದ್ದುವು. ಕರ್ನಾಟಕ ರಾಜ್ಯ ಮುಂದೆ ಒಂಭತ್ತು ವರುಷಗಳ ನಂತರ ರೂಪುಗೊಂಡಿತು.

ಶಾಂತಕವಿಗಳು ಆಲೂರುವೆಂಕಟರಾಯರು, ದ.ರಾ. ಬೇಂದ್ರೆ ಅವರ ವಿಚಾರ ಸರಣಿಗಳು ಕಲ್ಲೂರರಿಗೆ ಕರ್ನಾಟಕದ ನಾಡು ನುಡಿಗಳ ಹುಚ್ಚನ್ನು ಹಿಡಿಸಿದ್ದವು. ಶಾಂತಿನಿಕೇತನದಲ್ಲಿ ಓದುವಾಗ ರವೀಂದ್ರನಾಥ ಟಾಗೋರರ 'ಕಾರವಾರ'ದ ವರ್ಣನೆ ಅವರಿಗೆ ಕಾರವಾರದ ಹುಚ್ಚನ್ನು ಹಿಡಿಸಿತು. ಆ ಮಹಾಕವಿಗೆ ಕಾರವಾರದ ಕಡಲಂಚು, ಸೃಷ್ಟಿಯ ಸೊಬಗನ್ನು ಸೂರೆಗೊಂಡರೆ ಈ ಕವಿಗೆ ಆ ಸೃಷ್ಟಿಯ ಸೊಬಗಿನಲ್ಲಿ ಕರ್ನಾಟಕದ ಅಪೂರ್ವ ನೈಸರ್ಗಿಕ ಬಂದರವು ಕಂಡಿತು. ಕಾರವಾರ ಬಂದರು ಕುರಿತು ಅವರು ಕನ್ನಡ -ಇಂಗ್ಲಿಷ್ ಭಾಷೆಗಳಲ್ಲಿ ಹಲವು - ಹತ್ತು ಬಾರಿ ಬರೆದರು. ಕೊನೆಗೆ 'ಕಾರವಾರ ಆಂಡ್ ಕೆನರಾ ಪೋರ್ಟ್ಸ್' ಎಂಬ ಕರಾವಳಿ ಅರ್ಥಶಾಸ್ತ್ರದ ಸಂಶೋಧನ ಗ್ರಂಥವನ್ನೇ ಬರೆದರು. ಅದು ದೇಶ ವಿದೇಶಗಳಲ್ಲೆಲ್ಲ ಪ್ರಸಿದ್ಧವಾಯಿತು. ಕಾರವಾರದ ಹುಚ್ಚಿನಂತೆ ಅವರು ಪ್ರಾರಂಭಿಸಿದ ಬಂದರುಗಳ ಅಭ್ಯಾಸ ಅವರನ್ನು ಕೆಲವು ಕಾಲ ಮುಂಬಯಿ ರಾಜ್ಯ ಬಂದರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ಮಾಡಲಾಯಿತು. ಆ ಮೊದಲೆ ಅವರು 'ನುಡಿ' ವಾರ ಪತ್ರಿಕೆಯಲ್ಲಿ 'ನಮ್ಮ ಬಂದರುಗಳ ಸಮಸ್ಯೆ' ಎಂಬ ಲೇಖನ ಮಾಲೆಯನ್ನೆ ಬರೆದಿದ್ದರು. ಅದು ಸ್ವಾತಂತ್ರ್ಯ ಪೂರ್ವದಲ್ಲಿ.

ಕನ್ನಡ ನುಡಿ - ಲಿಪಿ ಸುಧಾರಣೆಯಲ್ಲೂ ಅವರಿಗೆ ಅಪಾರವಾದ ಆಸಕ್ತಿ ಇತ್ತು. ಕನ್ನಡದ ಲಿಪಿಯನ್ನು ಮುಖ್ಯವಾಗಿ ಕೆಲ ಅಕ್ಷರಗಳ ಸಂಖ್ಯೆಯನ್ನು ಕಡಿಮೆ

ಮಾಡುವುದು ಬಹಳ ಸುಲಭ ಎಂದು ಅವರು ಪ್ರತಿಪಾದಿಸುತ್ತಿದ್ದರು. ಉದಾಹರಣೆಗೆ ಈ,ಏ, ಓ,ಗಳು ಇೞ, ಎೞ,ಒೞ ಎಂದು ಬರೆಯಬಹುದು ಎಂದು ಹೇಳಿ ಅವರು ಹಾಗೆಯೇ ಬರೆಯುತ್ತಿದ್ದರು. ಈ ಕುರಿತು 'ಕನ್ನಡ ಲಿಪಿ ಸುಧಾರಣೆ' ಎಂಬ ಅವರ ಪುಸ್ತಕ ೧೯೭೫ರಲ್ಲಿ ಪ್ರಕಟವಾಗಿದೆ.

ಕರ್ನಾಟಕ ರಾಜ್ಯ ರಚನೆಯ ಮೊದಲೆ ಅಷ್ಟೊಂದು ಅಭ್ಯಾಸ ಮಾಡಿದ ಅವರು ರಾಜ್ಯಕ್ಕೆ 'ಕರ್ನಾಟಕ'ದ ಬದಲು 'ಮೈಸೂರು ರಾಜ್ಯ' ಎಂದು ಹೆಸರನ್ನು ಇಟ್ಟದ್ದನ್ನು ಕೇಳಿ ಒಮ್ಮೆಲೆ ನೊಂದುಕೊಂಡರು. ಕರ್ನಾಟಕದ ಕುರಿತಾದ ಲೇಖನಿಯ ಸಂನ್ಯಾಸವನ್ನೇ ಕೈಗೊಂಡರು.

'ಬದುಕಿನಲ್ಲಿಯ ಸಾರವೇ ಹೋಯಿತು' ಎಂದುಕೊಂಡರು. ಭಾಷಾವಾರು ಪ್ರಾಂತರಚನೆಯ ತೀರ್ಮಾನ ಕೈಗೊಂಡು ಇನ್ನೇನು 'ವಿಶಾಲ ಮೈಸೂರುರಾಜ್ಯ' ಉದಯವಾಗುವುದರಲ್ಲಿತ್ತು. ೧೯೫೬ರ ಅಕ್ಟೋಬರ್‌ದಲ್ಲಿ ಮುಂಬಯಿ ಕನ್ನಡಿಗರು ರಾಜ್ಯೋದಯದ ವಿಜಯೋತ್ಸಾಹವನ್ನು ಆಚರಿಸಲು ಸಭೆ ಸೇರಿದ್ದರು. ಅಂದಿನ ಸಭೆಯಲ್ಲಿ ಕೃಷ್ಣ ಕುಮಾರರು ತಮ್ಮ ಭಾಷಣವನ್ನು ಪ್ರಾರಂಭಿಸಿ, 'ಕರ್ನಾಟಕ' ಎಂಬ ನಾಮಕರಣವಲ್ಲದ ಏಕೀಕರಣ ಅದೆಂಥದ್ದು ?' ಎಂದು ಪ್ರಶ್ನಿಸಿದರು. ರಾಜ್ಯದ ಹೆಸರು 'ಕರ್ನಾಟಕ' ಎಂದೇ ಇರಬೇಕು ಎಂದು ಯುಕ್ತ - ಯುಕ್ತವಾಗಿ ಪ್ರತಿಪಾದಿಸಿದರು. ಆಗ ಹಂಪಿಯು ಇನ್ನೂ ಆಂಧ್ರದಲ್ಲಿಯೇ ಇರಬೇಕೆಂದು ಗೊತ್ತಾಗಿದ್ದಿತು ! ಹಂಪಿಯಿಲ್ಲದ ನಾಡು, ರುಂಡವಲ್ಲದ ದೇಹದಂತೆ ಎಂದು ಹೇಳಿ ಅಂಥ ರಾಜ್ಯ ನಮಗೆ ಬೇಕೆ ? ಎಂದು ಕೇಳಿದರು. ಹೀಗಾಗಿ ಅಂದಿನ ವಿಜಯೋತ್ಸವದ ಸಭೆಯು 'ಶೋಕಸಭೆ' ಯಾಗಿ ಮಾರ್ಪಟ್ಟು ನವಂಬರ ೧, ೧೯೫೬ ಕನ್ನಡಿಗರಿಗೆ ಒಂದು ಕರಾಳ ದಿನವೆಂದು ಘೋಷಿಸುವಂತಾಯಿತು ! ಮುಂದಿನ ದಿನಗಳಲ್ಲಿ ಕೃಷ್ಣಕುಮಾರ ಕಲ್ಲೂರ ಮತ್ತು ಇತರರ ಪ್ರಯತ್ನಗಳಿಂದಾಗಿ ಹಂಪಿಯು ಕರ್ನಾಟಕದಲ್ಲಿಯೇ ಉಳಿದುಕೊಂಡಿತು. ಕೃಷ್ಣ ಕುಮಾರ, ಅಂದಾನಪ್ಪ ದೊಡ್ಡಮೇಟಿ, ಮೊದಲಾದವರು ಸೇರಿ ಹಂಪಿಯಲ್ಲಿಯೇ ಏಕೀಕರಣ ದಿನವನ್ನೂ ಆಚರಿಸಿದರು. ಆದರೆ ರಾಜ್ಯದ ಹೆಸರು 'ಕರ್ನಾಟಕ' ಎಂದು ಆಗದೇ ಇದ್ದ ಕೊರಗು ಮಾತ್ರ ಇನ್ನೂ ಉಳಿಯಿತು. ಇದು ನಾಡಿನ ಕುರಿತಾದ ಅಚಲವಾದ - ಗಟ್ಟಿಯಾದ ಅಭಿಮಾನ ಅವರದಾಗಿತ್ತು.

ಇಂಥದೇ ಒಂದು ಪ್ರಸಂಗ, ಭಾರತ ಸ್ವಾತಂತ್ರ್ಯ ಪಡೆದ ಹೊಸದರಲ್ಲಿಯೂ ನಡೆದಿತ್ತು. ಸ್ವತಂತ್ರ ಭಾರತದ ಕುರಿತು ಮುಂಬಯಿ ಆಕಾಶವಾಣಿ ನಿಲಯದವರು ಕೃಷ್ಣ ಕುಮಾರರಿಂದ ಒಂದು ಭಾಷಣವನ್ನು ಕೇಳಿದ್ದರು. ಮೊದಲೆ ಬರೆದು ಕಳಿಸಿದ ಭಾಷಣದಲ್ಲಿ ಒಂದು ವಾಕ್ಯ ಹೀಗಿತ್ತು 'ಭಾರತವು ಸ್ವತಂತ್ರವಾಗಿದ್ದರೂ ಕರ್ನಾಟಕವು ಇನ್ನು ಅತಂತ್ರವಾಗಿಯೇ ಉಳಿದಿದೆ' ಎಂದು ಬರೆದಿದ್ದರು. ಆಕಾಶವಾಣಿ ಅಧಿಕಾರಿಗಳು ವಾಕ್ಯವನ್ನು ತೆಗೆದು ಹಾಕಲು ಹೇಳಿದರು. ಅದಕ್ಕೆ ಕಾರಣವನ್ನು ಕೊಡುತ್ತ ಆ ವಾಕ್ಯದಲ್ಲಿ ರಾಜಕೀಯ ಇದೆ. ಸರಕಾರೀ ಸಂಸ್ಥೆಯಾದ

ಆಕಾಶವಾಣಿಯಲ್ಲಿ ಅಂಥ ರಾಜಕೀಯಕ್ಕೆ ಆಸ್ಪದವಿಲ್ಲ ಎಂಬುದು ಆಕಾಶವಾಣಿಯವರ ಅಭಿಪ್ರಾಯವಾಗಿತ್ತು. ಆದರೆ ಕಲ್ಲೂರರು ವಾಕ್ಯವನ್ನು ತೆಗೆಯಲು ಒಪ್ಪಲಿಲ್ಲ. ಇದರಲ್ಲಿ ರಾಜಕೀಯ ಇಲ್ಲವೆಂದೂ ಕರ್ನಾಟಕವು ಹರಿದು ಹಂಚಿ ಹೋಗಿದ್ದು ಇನ್ನೂ ಅತಂತ್ರವಾಗಿರುವುದು, ವಾಸ್ತವ ಸಂಗತಿಯಾಗಿದೆಯೆಂದು ಪ್ರತಿಪಾದಿಸಿದರು. ವಿಷಯ ಉನ್ನತ ಅಧಿಕಾರಿಗಳ ವರೆಗೆ ಹೋಯಿತು. ಅವರು ಕೂಡ ಆ ವಾಕ್ಯವನ್ನು ಕತ್ತರಿಸಬೇಕೆಂದೇ ಅಭಿಪ್ರಾಯ ಪಟ್ಟರು. ಕೊನೆಗೆ ಆ ಒಂದು ವಾಕ್ಯದಿಂದಾಗಿ ಇಡೀ ಭಾಷಣ ಕಾರ್ಯಕ್ರಮವನ್ನೆ ರದ್ದುಗೊಳಿಸಲಾಯಿತು! ಹೀಗಿತ್ತು ಅವರ ಕನ್ನಡ - ಕರ್ನಾಟಕದ ಅಭಿಮಾನ.

ದೇವರಾಜ ಅರಸು ಅವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕಾಲ. ದಿನಾಂಕ ೨೭-೭-೧೯೭೨ರಂದು ವಿಧಾನ ಸಭೆಯಲ್ಲಿ ರಾಜ್ಯದ ಹೆಸರನ್ನು 'ಮೈಸೂರು ರಾಜ್ಯ' ಬದಲು 'ಕರ್ನಾಟಕ' ಎಂಬುದಾಗಿ ಕರೆಯುವ ಗೊತ್ತುವಳಿಯು ತ್ರಿವಾರ ಜಯಕಾರದೊಂದಿಗೆ ಸ್ವೀಕೃತವಾಯಿತು. ಅದನ್ನು ಕೇಳಿದ ಕೃಷ್ಣಕುಮಾರ ಕಲ್ಲೂರ ಅವರು ಅಂದೇ ೧೬ ವರುಷಗಳ ಅನಂತರ ತಮ್ಮ ಕನ್ನಡ ಸನ್ಯಾಸವನ್ನು ತ್ಯಜಿಸಿ 'ಜಯ ಕರ್ನಾಟಕ! ಜಯ ಕರ್ನಾಟಕ! ಜಯ ಕರ್ನಾಟಕ ಹಾಡುವಾ ೯' ಎಂದು ದೂರದ ಮುಂಬಯಿಯಲ್ಲಿದ್ದುಕೊಂಡೇ ಕವಿತೆಯನ್ನು ರಚಿಸಿ ಹಾಡಿದರು. ಮುಂದಿನ ಒಂದು ವರುಷದಲ್ಲಿ ಕರ್ನಾಟಕದ ಕುರಿತು ಸುಮಾರು ೫೦ ಕವಿತೆಗಳನ್ನು ಬರೆದರು. ೧೯೭೩ರ ರಾಜ್ಯೋತ್ಸವವನ್ನು ವಿಜಯ ನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ಅದ್ದೂರಿಯಾಗಿ ಆಚರಿಸಲು ದೊಡ್ಡ ಸಂಘಟನೆಯನ್ನೆ ಮಾಡಿದರು. ಕರ್ನಾಟಕದ ಎಲ್ಲ ನದಿಗಳ ನೀರನ್ನು ತಂದು ತುಂಗಭದ್ರೆಗೆ ಸೇರಿಸಿದರು. ರಾಜ್ಯದ ಎಲ್ಲ ಭಾಗಗಳ ಹಿಡಿ ಮಣ್ಣನ್ನು ತಂದು ವೃಕ್ಷಾರೋಪಣ ಮಾಡಿದರು. ಆ ಹೊತ್ತಿಗೆ ಸರಿಯಾಗಿ ತಾವು ಬರೆದ ಕವಿತೆಗಳ ಸಂಗ್ರಹ 'ಜಯ ಕರ್ನಾಟಕ ಸಮರ್ಪಣ ಗೀತೆಗಳು' ಎಂದು ಪ್ರಕಟಿಸಿ ಅದನ್ನು 'ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟಕಕ್ಕೆ, ಸತ್ಯವೇ ನಮ್ಮ ತಾಯಿ, ತಂದೆ, ಸತ್ಯವೇ ನಮ್ಮ ಸರ್ವ ಬಳಗ ಎಂದ ಗೋವಿಗೆ, ಆ ಕನ್ನಡ ಗೋವಿನ ಮುದ್ದಿನ ಕರುಗಳಾದ ಕನ್ನಡಿಗರಿಗೆ ಪ್ರೀತಿಪೂರ್ವಕ'' ಎಂದು ಸಮರ್ಪಿಸಿದ್ದಾರೆ! ಒಂದು ನಾಡಿನ ಕುರಿತು ಅಧಿಕ ಸಂಖ್ಯೆಯಲ್ಲಿ ಕವನಗಳನ್ನು ರಚಿಸಿದ ಕವಿ ಬಹುಶಃ ಇವರೊಬ್ಬರೆ, ಕರ್ನಾಟಕದ ಬಗ್ಗೆ ಮಾತ್ರ ಇವರೊಬ್ಬರೆ!

ಕನ್ನಡ, ಮರಾಠಿ ಮತ್ತು ಗುಜರಾತಿಯ ಬಹುತೇಕ ಸಾಹಿತಿಗಳೊಂದಿಗೆ ಅವರಿಗೆ ನಿಕಟ ಸ್ನೇಹವಿತ್ತು. ರಾಜಕೀಯದ ಅತಿ ಗಣ್ಯ ವ್ಯಕ್ತಿಗಳ ಗೆಳತನವೂ ಇತ್ತು. ಆದರೆ ಅದನ್ನು ಅವರು ಎಂದೂ ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಳ್ಳಲಿಲ್ಲ. ಅವರ ಕನ್ನಡ - ಕರ್ನಾಟಕದ ಅಭಿಮಾನ ಎಷ್ಟು ಬಲವತ್ತರವಾಗಿತ್ತೋ ಅಷ್ಟೇ ಅದಕ್ಕಿಂತ ಗುಂಜಿ ತೂಕ ಅಧಿಕವಾಗಿ ಅವರು ಸ್ವಾಭಿಮಾನಿಗಳಾಗಿದ್ದರು. ಅವರ ಕರ್ನಾಟಕದ

ಅಭಿಮಾನ ನವಂಬರ ಒಂದರ ರಾಜ್ಯೋತ್ಸವದ ಅಭಿಮಾನವಾಗಿರಲಿಲ್ಲ. ಅದು ಭಾವನಾತ್ಮಕವಾಗಿಯೂ ಇರಲಿಲ್ಲ. ಅವರದು ರಕ್ತಗತವಾದ, ಆತ್ಮಸಾತ್ ಮಾಡಿಕೊಂಡಂಥ ಕರ್ನಾಟಕದ ಅಭಿಮಾನವಾಗಿತ್ತು. ಅವರಲ್ಲಿ ಕರ್ನಾಟಕಾಭಿಮಾನ ಮತ್ತು ಸ್ವಾಭಿಮಾನಗಳ ನಡುವೆ ಅಂತರವೇ ಇರಲಿಲ್ಲ. ಅವರ ಈ ಉಭಯ ಅಭಿಮಾನಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದವು.

ಮೈಸೂರು ರಾಜ್ಯದಿಂದ ರಾಜ್ಯದ ಹೆಸರು 'ಕರ್ನಾಟಕ' ಆಗುವ ವರೆಗೆ ೧೯೫೬ರಿಂದ ೧೯೭೩ರವರೆಗೆ ಅವರು ಅಕ್ಷರಶಃ ಲೇಖನಿ ಸನ್ಯಾಸ ವ್ರತವನ್ನು ಹಿಡಿದಿದ್ದರು. ಆ ದಿನಗಳಲ್ಲಿಯೇ ಬಹುಶಃ ೧೯೬೪ ಇದ್ದೀತು. ಪ್ರಪಂಚ ಪತ್ರಿಕೆಯ ಪಾಟೀಲ ಪುಟ್ಟಪ್ಪನವರು ತಮ್ಮ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ಕಲ್ಲೂರರಿಂದ ಒಂದು ಲೇಖನವನ್ನುಕೇಳಿದ್ದರೆಂದು ಕಾಣುತ್ತದೆ. ಅದಕ್ಕೆ ಪ್ರತಿಯಾಗಿ ಪಾಟೀಲ ಪುಟ್ಟಪ್ಪನವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದರ ಒಕ್ಕಣಿಕೆ ಹೀಗಿದೆ

''ಪ್ರಿಯ ಪುಟ್ಟಪ್ಪನವರೆ,

'ರಾಜ್ಯ ಕಟ್ಟಿಯೂ ಕಟ್ಟಲಿಲ್ಲವೇನೋ ಎಂಬಂತೆ ನಾವು ನಡೆದಿದ್ದೇವೆ. ಕಟ್ಟಬೇಕಾದ ರೀತಿಯಲ್ಲಿ ರಾಜ್ಯವನ್ನು ಕಟ್ಟಲಿಲ್ಲ ಎನ್ನುವ ಕೊರಗು ಕೆಲವರಲ್ಲಿಯಂತೂ ಇದೆ' ಎಂಬ ನಿಮ್ಮ ನಿವೇದನದ ಮಾತು ನನ್ನ ಹೃದಯದಲ್ಲಿಯ ಮಾಯುತ್ತಿರುವ ಹುಣ್ಣಿನ ಹಕ್ಕಳಿಯನ್ನು ಕೀಳುವಂತೆ ಮಾಡಿದೆ. ನಿಮಗಾದರೂ ಇಷ್ಟೊಂದು ಕೊರಗು ಇರಲಿಕ್ಕಿಲ್ಲ ಎಂದು ಭಾವಿಸಿದ್ದೆ. ನನ್ನ ಮಟ್ಟಿಗಂತೂ ನಮ್ಮ ನಾಡು ಎಂದೋ ಸತ್ತು ಹೋಗಿದೆ. ಮೈಸೂರು ಹೆಸರಿನಲ್ಲಿರುವುದು ಅದರ ಹೆಣ ಮಾತ್ರ ! ಪುಂಡರೀಕನ ಹೆಣವನ್ನು ಕಾಯುತ್ತ ಕುಳಿತ ಮಹಾಶ್ವೇತೆಯಂತೆ ನೀವು ಕೆಲವರು ಕಾಯುತ್ತಿರುವಿರಿ. ಆದರೆ ದೂರವಿರುವುದರಿಂದಲೋ ಏನೋ ಅಥವಾ ನಿಜವನ್ನು ಮನಗಂಡುದರಿಂದಲೋ ನಮ್ಮ ತಾಯಿ ಸತ್ತು ೮ ವರುಷಗಳಾದುವು, ಎಂದು ನಿಚ್ಚ ನೆಚ್ಚಕಿಯಾಗಿದೆ. ಅವಳು ತಿರಗಿ ಏಳಲಾರಳೂ ಎಂದು ನಂಬಿಕೆ ನೆಲೆಸಿದೆ.

ಕರ್ನಾಟಕ ಎಂಬ ಹೆಸರಿಲ್ಲದ, ವಿಜಯನಗರ ಅಥವಾ ತುಂಗಾ ಪರಿಸರದಲ್ಲಿ ರಾಜಧಾನಿಯಿಲ್ಲದ ನಾಡಿಗೆ ನನ್ನ ನಾಡು ಎನ್ನಲು ನಾನು ಸಿದ್ಧನಿಲ್ಲ. ಆದುದರಿಂದ ಕಳೆದ ಕೆಲ ಕಾಲದಿಂದ ನಾನು ಆ ಬಗೆಯ ವಿಚಾರಗಳಿಗೂ ಬರವಣಿಗೆಗಳಿಗೂ ಬಹಿಷ್ಕಾರ ಹಾಕಿದ್ದೇನೆ. ಕರ್ನಾಟಕವನ್ನು ನಾನು ಅಷ್ಟಾಗಿ ಪ್ರೀತಿಸಿಕೊಂಡದ್ದೂ, ಕರ್ನಾಟಕದ ಕಲ್ಪನೆಗೆ ಕಟ್ಟು ಬಿದ್ದದ್ದೂ ನನ್ನದೇ ಮೂರ್ಖತನ ಎಂಬರಿವು ಈಗಾಗಿದೆ. ಕಾರಣ ತಾವು ನನ್ನನ್ನು ಬರಹ ಕಳಿಸದಿದ್ದಕ್ಕೆ ಕ್ಷಮಿಸುವಿರಾಗಿ ನಂಬುತ್ತೇನೆ.

ನಿಮ್ಮವನೇ

ಕೃಷ್ಣ ಕುಮಾರ

ಹೀಗೆ ಪತ್ರ ಬರೆದರು. ಬರೆದಂತೆ ನಡೆದೂ ತೋರಿಸಿದರು. ಕರ್ನಾಟಕ ಎಂಬ ಹೆಸರು ಇಟ್ಟಾಗ ಕುಣಿದು ಕುಪ್ಪಳಿಸಿ ಕರ್ನಾಟಕ ಮಾತೆಯನ್ನು ಹಾಡಿ ಹೊಗಳಿದರು.

ಮುಂಬಯಿ ಕನ್ನಡಿಗರು ಒಂದು ಬೃಹತ್ ಡಿರೆಕ್ಟರಿಯನ್ನು ಪ್ರಕಟಿಸಿದರು. ಅದರಲ್ಲಿ 'ಕರ್ನಾಟಕ ಕಾಲಿಂಗ' ಎಂಬ ಒಂದು ಸುಧೀರ್ಘ ಲೇಖನ ಸುಮಾರು ೧೨೦ ಪುಟಗಳಷ್ಟು, ಕರ್ನಾಟಕದ ಕುರಿತು ಅಪರೂಪವಾಗಿ ಬರೆದಿದ್ದಾರೆ. ಬಹುಶಃ ಈವರೆಗೂ ಅಂಥ ಯಾವ ಒಂದು ಕರ್ನಾಟಕ ಮಾರ್ಗದರ್ಶಿಯೂ ಬಂದಿರಲಿಕ್ಕಿಲ್ಲ. ಹೀಗಾಗಿ ವ್ಯಾವಹಾರಿಕವಾಗಿ ಆಗಬೇಕಿದ್ದ ಒಂದು ಡಿರೆಕ್ಟರಿ ಮೌಲಿಕ ಕೃತಿಯಾಯಿತು.

ಬಹಳ ದಿನಗಳ ಅನಂತರ ಮುಂಬಯಿ ಕನ್ನಡಿಗರು ಒತ್ತಾಯದಿಂದ ಅವರನ್ನು ಸನ್ಮಾನಕ್ಕೆ ಒಪ್ಪಿಸಿದರು. ಅದೂ ಒಂದು ಕರಾರಿನೊಂದಿಗೆ ಬಂದರು. ಅವರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು. ಅವರು ಮೊದಲೇ ಕರಾರು ಮಾಡಿದಂತೆ ಅಂದೇ ಆ ಶಾಲನ್ನು ಮುಂಬಯಿ ಆಸ್ಪತ್ರೆಯೊಂದರಲ್ಲಿ ಮಲಗಿದ್ದ ಮಹಾಕವಿ ಬೇಂದ್ರೆ ಅವರ ಪಾದಗಳ ಅಡಿಯಲ್ಲಿ ಅದನ್ನು ಇಟ್ಟು ನಮಸ್ಕರಿಸಿ ಬಂದರು.

ಇನ್ನೊಮ್ಮೆ ಬಹುಶಃ ಅವರ ಬಾಳಿನ ಕೊನೆಯ ದಿನಗಳಿರಬಹುದು. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅವರಿಗೆ ಶುಶ್ರೂಷೆಗೆಂದು ಆರ್ಥಿಕ ಸಹಾಯ ನೀಡಲು ಬಯಸಿ ಅಂದಿನ ಅಕಾಡೆಮಿ ಸದಸ್ಯ ಡಾ|| ಶ್ರೀನಿವಾಸ ಹಾವನೂರ ಅವರನ್ನು ಕಲ್ಲೂರರ ಹತ್ತಿರ ಕಳಿಸಿತು. ಅವರು ಮುಂಬಯಿಗೆ ಬಂದು ನಾನಾವಟಿ ಆಸ್ಪತ್ರೆಯಲ್ಲಿ ಶುಶ್ರೂಷೆಯನ್ನು ಹೊಂದುತ್ತಿದ್ದ ಕೃಷ್ಣ ಕುಮಾರರನ್ನು ಕಂಡು ಅಕಾಡೆಮಿಯ ಇಚ್ಛೆಯನ್ನು ತಿಳಿಸಿದರು.

''ನಿಮಗೆ ಹಣದ ಅಗತ್ಯವಿದೆಯೆಂದಾಗಲೀ, ನಿಮ್ಮನ್ನು ಉಪಕೃತರನ್ನಾಗಿ ಮಾಡುವುದಕ್ಕೆ ಆಗಲೀ ಈ ಹಣವನ್ನು ಕೊಡಮಾಡಿಲ್ಲ. ಸರಕಾರದ ಧನ - ದಾನ ಇದು ಎಂದೂ ತಿಳಿಯಬೇಡಿರಿ. ಇದು ಕನ್ನಡ ಜನತೆಯ ಹಣ. ಸರಕಾರ ಮತ್ತು ಅಕಾಡೆಮಿ ಹಂಚುವ ಕೆಲಸ ಮಾತ್ರ ಮಾಡುತ್ತದೆ. ಈ ಅನುದಾನದ ಹಿಂದೆ ಸಹ ಲೇಖಕರಾದವರು ನಿಮ್ಮ ಬಗ್ಗೆ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆಂದು ಭಾವಿಸಿರಿ. ನೀವು ಒಪ್ಪಿದರೆ, ಅವರಿಗೆ ತಮ್ಮ ಕರ್ತವ್ಯವನ್ನು ಕಿಂಚಿತ್ತಾದರೂ ನೆರವೇರಿಸಿದ ಸಮಾಧಾನವಾಗುತ್ತದೆ'' ಎಂದೆಲ್ಲಾ ಹೇಳಿದರು. ಅದಕ್ಕೆ ಕೃಷ್ಣಕುಮಾರ ಕಲ್ಲೂರರು ಸದಸ್ಯರ ಸಹೃದಯತೆಗೆ ಕೃತಜ್ಞತೆಗಳನ್ನು ಹೇಳಿ , ಈ ವಿಷಯವಾಗಿ ವಿಚಾರಿಸಲು ಅವಕಾಶ ಕೇಳಿದರು. ಒಂದು ವಾರದ ಅನಂತರ ಅವರು ಅಕಾಡೆಮಿಯ ಸಹಾಯ ಧನವವನ್ನು ಸ್ವೀಕರಿಸಲು ಒಪ್ಪಿದರು ಮತ್ತು ಹೇಳಿದರು ; ಸಾಹಿತ್ಯ ಅಕಾಡೆಮಿ ಕೊಡುವ ಮೂರು ಸಾವಿರ ರೂಪಾಯಿಗಳು, ತಮ್ಮದೊಂದು ಕಥೆ ಪಠ್ಯ ಪುಸ್ತಕದಲ್ಲಿ ಸೇರಿ ಬಂದ ಒಂದು ಸಾವಿರ ರೂಪಾಯಿ ಹಾಗೂ ಇದೇ ರೀತಿಯಾಗಿ ಬಂದ ಇನ್ನಷ್ಟು ಹಣ ಸೇರಿಸಿ ಕನ್ನಡದ ಏನಾದರೊಂದು ಕಾರ್ಯಕ್ಕೆ ವಿನಿಯೋಗಿಸಬೇಕು !

ರಕ್ತಗತವಾಗಿ ಬಂದ ಆತ್ಮ ಗೌರವವನ್ನು ,ಸ್ವಾಭಿಮಾನವನ್ನು ಮತ್ತು ಕರ್ನಾಟಕಾಭಿಮಾನವನ್ನು ಕೃಷ್ಣಕುಮಾರ ಕಲ್ಲೂರ ಅವರು ಯಾವ ಕಾಲಕ್ಕೂ ಬಿಟ್ಟುಕೊಡಲಿಲ್ಲ. ೧೯೮೨ರ ಮೇ ೧೪ರಂದು ಮುಂಬಯಿಯಲ್ಲಿ ಅವರು ಕೊನೆಯ ಉಸಿರನ್ನು ಎಳೆದಾಗ ಅವುಗಳನ್ನು ತಮ್ಮೊಟ್ಟಿಗೆ ಒಯ್ದರು.

ಈ ಕೃತಿಯಲ್ಲಿ ಮೂಡಿಬಂದ ವ್ಯಕ್ತಿಗಳೆಲ್ಲರೂ ಅಂಥವರೇ ಆಗಿದ್ದಾರೆ. ಕನ್ನಡ ಭಾಷೆಯ ಬಗ್ಗೆ, ಕರ್ನಾಟಕದ ಬಗ್ಗೆ - ನಖಶಿಖಾಂತ ಕಳಕಳಿಯನ್ನು ಹೊಂದಿದವರಾಗಿದ್ದರು. ಇಲ್ಲಿ ಮೂಡಿ ಬಂದುದು ಒಂದು ಹಿಡಿಯಷ್ಟು ಮಾತ್ರ! ಅಂಥ ಸಾವಿರಾರು - ಲಕ್ಷಾವಧಿ ಜನ - ಕರ್ನಾಟಕದ ಹಳ್ಳಿ - ಹಳ್ಳಿಗಳಲ್ಲೂ ಕರ್ನಾಟಕದ ಹೊರಗೂ ಇರುವ ಹಳ್ಳಿ ಪಟ್ಟಣಗಳಲ್ಲಿ ಇದ್ದರೆಂದೇ ಕನಾಟಕದ ಏಕೀಕರಣಕ್ಕೆ ಒಂದು ವೇದಿಕೆ ಸಜ್ಜಾಯಿತು. ಅಖಂಡ ಕರ್ನಾಟಕ ಸೌಧದ ಇಟ್ಟಿಗೆಗಳು, ಈ ಇಟ್ಟಿಗೆಗಳಿಂದ ಸೌಧವನ್ನು ಕಟ್ಟಲಾಯಿತೇನೋ ನಿಜ. ಆದರೆ ಈ ಸಾವಿರಾರು ನಿಸ್ವಾರ್ಥ, ಪ್ರಸಿದ್ಧಿ ಪರಾಙ್ಮುಖರ ಉದ್ದೇಶ ಈಡೇರಿದೆಯೇ ಎಂದು ೫೦ ವರುಷಗಳ ಉತ್ಸವದ ಈ ಸಂದರ್ಭದಲ್ಲಿ ಒಂದು ಕ್ಷಣ ಯೋಚಿಸಿದರೆ ಉತ್ತರದಲ್ಲಿ ನಿರಾಶೆ ಕಾದಿದ್ದು ದೌರ್ಭಾಗ್ಯ. ಇಲ್ಲಿ ಮೂಡಿ ಬಂದ ಮತ್ತು ಮೂಡಿ ಬರದ ಇಂಥ ವ್ಯಕ್ತಿಗಳು ಇಂದು ದೊರೆಯುವುದೂ ಕಠಿಣವಾಗಿದೆ.

ನಾಲ್ವತ್ತು ವರುಷಗಳ ಹಿಂದೆ ಕೃಷ್ಣ ಕುಮಾರ ಕಲ್ಲೂರರು ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗಾಗಿ 'ಕಾಯುತಿದೆ ಕರ್ನಾಟಕ ವಿಶ್ವೇಶ್ವರಯ್ಯನವರಿಗಾಗಿ' ಎಂಬ ಒಂದು ಅಪರೂಪದ ಲೇಖನವನ್ನು ಬರೆದಿದ್ದಾರೆ. ಇಂದು ಅದೇ ತಲೆ ಬರಹವನ್ನು ತುಸು ತಿದ್ದಿ, ಕನ್ನಡಿಗರಲ್ಲಿ ಆತ್ಮ ಗೌರವ, ಸ್ವಾಭಿಮಾನ, ಕನ್ನಡಾಭಿಮಾನ, ಕರ್ನಾಟಕಾಭಿಮಾನಗಳನ್ನು ತುಂಬಲು 'ಕಾಯುತಿದೆ ಕರ್ನಾಟಕ ಡೆ. ಚನ್ನಬಸಪ್ಪ, ರಾ. ಹ. ದೇಶಪಾಂಡೆ, ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರ ರಾಯರು, ಮಂಗಳವೇಡು ಶ್ರೀನಿವಾಸರಾಯರು, ನಾ ಶ್ರೀ ರಾಜಪುರೋಹಿತರು, ಜಂಗಿನ ಮುರಗಯ್ಯನವರು, ಕೃಷ್ಣ ಕುಮಾರ ಕಲ್ಲೂರರಿಗಾಗಿ ' ಎಂದು ಹೇಳಬೇಕಾಗಿದೆ. ಜೊತೆಗೆ ಅವರ ಲೇಖನದ ಕೊನೆಯ ವಾಕ್ಯವನ್ನೂ ತುಸು ತಿದ್ದಿ ಯಥಾವತ್ತಾಗಿ ಉದ್ಧರಿಸಬೇಕು.

'' ಈ ಎಲ್ಲ ಜನ ಎಲ್ಲೋ ಹುಟ್ಟಿರಬೇಕು. ಆದರೆ ಇಂದಿನ ಭ್ರಷ್ಟ ವ್ಯವಸ್ಥೆಯಲ್ಲಿ, ಜಾತಿಯ ರಾಜಕಾರಣದಲ್ಲಿ ತಾನು ನುಗ್ಗಾದೇನೆಂದು ಹೆದರಿ ಅವರು ಎಲ್ಲೋ ಮರೆಯಲ್ಲಿ ನಿಂತು ತಾವು ಬಯಸಿದ ಕರ್ನಾಟಕವನ್ನು ನೋಡುತ್ತ ಮರುಕ ಪಡುತ್ತಿರಬೇಕು !''

✣ ✣ ✣ ✣

ಆಕರ ಗ್ರಂಥಗಳು / ಲೇಖನಗಳು

೧. ಕಡೆಂಗೋಡ್ಲು ಅಗ್ರಲೇಖನಗಳು - ಮುಳಿಯ ಮಹಾಬಲ ಭಟ್ಟ ೧೯೯೬

೨. ಕನ್ನಡ ಕುಲರಸಿಕರು - ಅ.ನ. ಕೃಷ್ಣರಾಯ ೧೯೫೧

೩. ಕನ್ನಡದ ಗುಡಿ, ಕರ್ನಾಟಕ ವಿದ್ಯಾವರ್ಧಕ ಸಂಘ - ಕೃಷ್ಣ ಶ್ರೀಪಾದ ದೇಶಪಾಂಡೆ ೧೯೯೪

೪. ಕನ್ನಡದ ಸಪ್ತರ್ಷಿಗಳು - ನಾ. ಅ. ಹೊಸಕೇರಿ, ಸಂಯುಕ್ತ ಕರ್ನಾಟಕ ೧೨-೭-೧೯೮೦

೫. ಕನ್ನಡ ದಾರಿ - ಅ.ನ.ಕೃಷ್ಣರಾಯ ೧೯೪೬

೬. ಕನ್ನಡಿಗ ಮಂಗಳವೇಢೆ ಶ್ರೀನಿವಾಸರಾಯರು - ಡಾ. ಸೂರ್ಯನಾಥ ಕಾಮತ (ಸಂ) ೧೯೯೫

೭. ಕನ್ನಡಿಗನ ಸರ್ವಸ್ವ - ಆರ್.ಬಿ. ಕುಲಕರ್ಣಿ ೧೯೨೪

೮. ಕರ್ನಾಟಕ ಏಕೀಕರಣ ಇತಿಹಾಸ - ಡಾ. ಎಚ್.ಎಸ್. ಗೋಪಾಲರಾವ ೧೯೯೬

೯. ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು - ಸಿ.ಆರ್. ಗೋವಿಂದರಾಜು ೧೯೯೫

೧೦. ಕರ್ನಾಟಕ ಕುಲಪುರೋಹಿತರು - ಪ್ರೊ. ಸ.ಸ. ಮಾಳವಾಡ (ಸಂ) ೧೯೮೧

೧೧. ಕರ್ನಾಟಕ ಗಡಿ ಗೆರೆಗಳು-ತಲ್ಲೂರು ರಾಯನಗೌಡ ಪಾಟೀಲ (ಸಂ) ೧೯೪೯

೧೨. ಕರ್ನಾಟಕ ವೈಭವ ನಡೆದು ಬಂದ ದಾರಿ - ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ೧೯೮೯

೧೩. ಕಾಂಗ್ರೆಸ್ ರನ್ನ ಮಹೋತ್ಸವ - ರಂಗನಾಥ ದಿವಾಕರ (ಸಂ) ೧೯೪೭

೧೪. ಕೃಷ್ಣ ಕುಮಾರ ಕಲ್ಲೂರ (ಸಾಹಿತ್ಯ ವಾಚಿಕೆ) - ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ೧೯೯೪

೧೫. ಗಳಗನಾಥರು ಮತ್ತು ಅವರ ಕಾದಂಬರಿಗಳು - ಡಾ. ಕೃಷ್ಣಮೂರ್ತಿ ಕಿತ್ತೂರ

೧೬. ಜಯತೀರ್ಥ - ಜಿ. ನಾರಾಯಣ

೧೭. ಜೀವನ ಪ್ರಕಾಶ - ಪಾಟೀಲ ಪುಟ್ಟಪ್ಪ ೧೯೭೯

೧೮. ಜಂಗಿನ ಮುರುಗಯ್ಯನವರು - ಸುಲೋಚನಾ ಆರಾಧ್ಯ ೧೯೮೫

೧೯. ತವಗಶ್ರೀ - ಜಯತೀರ್ಥ ರಾಜಪುರೋಹಿತ / ವಂಸತ ಕುಷ್ಟಗಿ (ಸಂ) ೧೯೮೫

೨೦. ನನ್ನ ಬೆಳಗಾವಿ - ಪ್ರೊ. ಪ್ರಲ್ಹಾದ ಕುಮಾರ ಭಾಗೋಜಿ ೧೯೯೬

೨೧. ನಮ್ಮ ನಾಡ ನುಡಿಯ ಇತಿಹಾಸವು - ಕಪಟರಾಳ ಕೃಷ್ಣರಾಯರು - ೧೯೪೨

೨೨. ನಾಡಗೀತೆ ನೀಡಿದ ಶ್ರೀ ಹುಯಿಲಗೊಳ ನಾರಾಯಣರಾಯರು - ಗು.ಹ. ಬಾಳೀಹಳ್ಳಿ ೧೯೮೪

೨೩. ನಾ.ಶ್ರೀ. ರಾಜಪುರೋಹಿತ - ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ೨೦೦೩

೨೪. ಡಾ. ಚೆನ್ನಬಸವ ಪಟ್ಟದ್ದೇವರು - ಸಿದ್ರಾಮಪ್ಪ ಬಾಲಪ್ಪಗೋಳ

೨೫. ಬೆಳಗಾವಿ ಸಾಹಿತ್ಯ ಸಮ್ಮೇಳನ - ಕನ್ನಡ ಸಾಹಿತ್ಯ ಪರಿಷತ್ತು ೧೯೮೦

೨೬. ಭಾಷಿಕ ಬೃಹತ್ ಕರ್ನಾಟಕ - ಡಾ. ಎಂ. ಚಿದಾನಂದಮೂರ್ತಿ ೨೦೦೫

೨೭. ರಸಿಕರಂಗ ರಂ.ಶ್ರೀ ಮುಗಳಿ - ಮಿರ್ಜಾ ಅಣ್ಣಾರಾಯ / ಶ್ರೀನಿವಾಸ ಹಾವನೂರ ೧೯೬೩

೨೮. ರಾ.ಗು. ಜೋಶಿ - ಧ್ರುವನಾರಾಯಣ

೨೯. ರಾ.ಹ. ದೇಶಪಾಂಡೆ (ವ್ಯಕ್ತಿಚಿತ್ರ) - ಕೆ.ಎಸ್. ದೇಶಪಾಂಡೆ

೩೦. ರೊದ್ದ ಶ್ರೀನಿವಾಸರಾಯರ ಚರಿತ್ರೆ - ಹಣಮಂತರಾವ ದೇಶಪಾಂಡೆ ೧೯೩೦

೩೧. ರಂಗಭೂಮಿಯ ಕನ್ನಡ ಸಂವೇದನೆ - ಡಾ. ರಾಮಕೃಷ್ಣ ಮರಾಠೆ ೨೦೦೩

೩೨. ವಾಗ್ಭೂಷಣ (ವಿಶೇಷ ಸಂಚಿಕೆ ೧೯೭೩) - ಕರ್ನಾಟಕ ವಿದ್ಯಾವರ್ಧಕ ಸಂಘ

೩೩. ಸಾಹಿತಿಯ ಆತ್ಮ ಜಿಜ್ಞಾಸೆ ಭಾಗ - ೧ - ಶ್ರೀರಂಗ ೧೯೭೩

೩೪. ಸ್ವಾತಂತ್ರ್ಯಾಂದೋಲನ ರಾಯಚೂರು ಜಿಲ್ಲೆ - ಧ್ರುವನಾರಾಯಣ ೧೯೭೧

೩೫. ಸಿದ್ಧವನಹಳ್ಳಿ ಕೃಷ್ಣಶರ್ಮರ ಸಮಗ್ರ ಸಾಹಿತ್ಯ

೩೬. ಸಿರಿಗನ್ನಡ ಗ್ರಂಥ ಕರ್ತರ ಚರಿತ್ರಕೋಶ - ವೆಂಕಟೇಶ ಸಾಂಗಲಿ ೧೯೯೯

೩೭. ಹೈದರಾಬಾದ ಕರ್ನಾಟಕ ಹಾಡು ಪಾಡು - ಅಮರೇಶ ನುಗಡೋಣಿ ೨೦೦೩

೩೮. ಹೈದರಾಬಾದಿನ ವೀರಕನ್ನಡಿಗ ಬಿ.ಜಿ. ಚಿಮ್ಮಲಗಿ - ಡಾ. ಶ್ರೀನಿವಾಸ ಹಾವನೂರ - ೧೯೮೦

೩೯. ಹೊಸಗನ್ನಡದ ಅರುಣೋದಯ - ಡಾ. ಶ್ರೀನಿವಾಸ ಹಾವನೂರ -೧೯೭೪

೪೦. ಹೊಸಗನ್ನಡದ ಪುಣ್ಯ ಪುರುಷರು - ವೆಂಕಟೇಶ ಸಾಂಗಲಿ - ೧೯೭೨

೪೧. ಹೊಸಮನಿ ಸಿದ್ದಪ್ಪನವರು - ಪಾಟೀಲ ಪುಟ್ಟಪ್ಪ - ೧೯೮೪

ಅಖಂಡ ಕರ್ನಾಟಕದ ಹೆಜ್ಜೆಗಳು

"ಕಾವೇರಿಯಿಂದಮಾ ಗೋದಾವರಿವರೆಗಮಿರ್ದ
ಎಂದು ಕವಿ ಹೇಳುವ ರೀತಿಯಲ್ಲಿ ಕನ್ನಡ ಭಾಷಿಕರ ನಾಡು
ಒಂದು ಕಾಲಕ್ಕೆ ಏಕಭಾಷಾ ಭೌಗೋಲಿಕ ಪ್ರದೇಶವಾಗಿ
ಇತ್ತೋ ಏನೋ. ಆದರೆ ಇತಿಹಾಸದ ಬೇರೆ ಬೇರೆ ಕಾಲಘಟ್ಟಗಳಲ್ಲಿ
ರಾಜಕೀಯ ಕಾರಣಗಳಿಂದಾಗಿ ನಮ್ಮ ನಾಡು ಬೇರೆ ಬೇರೆ
ಆಡಳಿತಗಳಲ್ಲಿ ಹರಿದು ಹಂಚಿ ಹೋಗಿದ್ದಂತೂ ವಾಸ್ತವ.
ವರ್ತಮಾನದಲ್ಲಿ ಒಂದು ನೆಲೆ ಇಲ್ಲದ ಭಾಷಿಕರಿಗೆ
ಅಸ್ಮಿತೆಯ ಹುಡುಕಾಟ ಅನಿವಾರ್ಯವಾಗುತ್ತದೆ.
ಈ ಹುಡುಕಾಟದ ಫಲಿತಾಂಶವೇ ಕರ್ನಾಟಕ ಏಕೀಕರಣ ಚಳುವಳಿ.
ಈ ಚಳುವಳಿ ನಡೆದು ಬಂದ ಹಾದಿಯ ಹೆಜ್ಜೆ
ಗುರುತುಗಳನ್ನು ಬಿಡಿ ಬಿಡಿ ಲೇಖನಗಳ ಮೂಲಕ
ದಾಖಲಿಸುವ ಪ್ರಯತ್ನ ಮಾಡಿದ್ದಾರೆ ಈ ಕೃತಿಯ ಲೇಖಕರು.